CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು
ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ
ಉಪದೇಶಾಮೃತ

ಉಪದೇಶ ಸುಧಾ

(ಭಾಗ-೩)

ಅನುವಾದ:

ಶ್ರೀ ಬಿ. ಆರ್. ವೆಂಕಟರಮಣನ್
ಮತ್ತು
ಪ್ರೊ. ಎಸ್. ರಾಮಚಂದ್ರ ಶಾಸ್ತ್ರಿ

ಪ್ರಕಾಶಕರು:

ಶ್ರೀ ಶಾರದಾ ಟ್ರಸ್ಟ್
4581, 'ಗೋಮತಿ' ನರಸಿಂಹರಾಜ ಮೊಹಲ್ಲಾ
ಮೈಸೂರು-570 007

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು

ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ

ಉಪದೇಶಾಮೃತ

ಉಪದೇಶ ಸುಧಾ

(ಭಾಗ ೩)

ಅನುವಾದ :

ಶ್ರೀ ಬಿ. ಆರ್. ವೆಂಕಟರಮಣನ್

ಮತ್ತು

ಪ್ರೊ. ಎಸ್. ರಾಮಚಂದ್ರ ಶಾಸ್ತ್ರಿ

ಪ್ರಕಾಶಕರು :

ಶ್ರೀ ಶಾರದಾ ಟ್ರಸ್ಟ್

4581, 'ಗೋಮತಿ' ನರಸಿಂಹರಾಜ ಮೊಹಲ್ಲಾ

ಮೈಸೂರು–570 007

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪದೇಶ ಸುಧಾ (ಭಾಗ ೩) : ಶ್ರೀ ಶೃಂಗೇರಿ ಜಗದ್ಗುರು
ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸ್ವಾಮಿಗಳವರ ಉಪದೇಶಾಮೃತ
ಡೆಮಿ ಅಷ್ಟದಳ, 240+8 ಪುಟಗಳು, 1000 ಪ್ರತಿಗಳು

© ಎಲ್ಲಾ ಹಕ್ಕುಗಳೂ ಪ್ರಕಾಶಕರದು

ಬೆಲೆ : ಇಪ್ಪತ್ತೈದು ರೂಪಾಯಿಗಳು

ಮುದ್ರಕರು :
ಶ್ರೀ ಶಾರದ ಮುದ್ರಣ ಪ್ರಕಾಶನಾಲಯ (ಪ್ರೈ.,) ಲಿ, ಮೈಸೂರು-4

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶೃಂಗೇರಿ ಜಗದ್ಗುರು
ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನಂಗಳವರು

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

श्री श्री जगद्गुरु शङ्कराचार्य महासंस्थानम् दक्षिणाम्नाय श्री शारदापीठम्
शृङ्गेरी

V. R. GOWRI SHANKAR, B.E., D.I.I.Sc., AMIMA.
Administrator

SRI SRINGERI MATH &
ITS PROPERTIES
SRINGERI–577 139
(Karnataka)

Phone : Office : 23
Res. : 92

REF. No, 2195

Camp

Date 10–12–87

ಗುರುಭಕ್ತಾಲಂಕಾರ ಶ್ರೀ ಪಿ. ಆರ್. ಹರಿಹರನ್‌ರವರಿಗೆ ನಮಸ್ಕಾರಗಳು

ತಾವು ಕಳುಹಿಸಿದ ಪುಸ್ತಕಗಳನ್ನು ಶ್ರೀ ಶ್ರೀಗಳವರು ವೀಕ್ಷಿಸಿದರು. ಜಗದ್ಗುರು ಮಹಾಸ್ವಾಮಿಗಳವರು ಮಾಡಿರುವ ಉಪನ್ಯಾಸಗಳನ್ನು ಪುಸ್ತಕರೂಪವಾಗಿ ಹೊರತರಬೇಕೆಂಬ ತಮ್ಮ ಸಂಕಲ್ಪವು ತುಂಬಾ ಶ್ಲಾಘನೀಯವಾಗಿದೆ. ಈ ಗ್ರಂಥಗಳು ಭಕ್ತ ಜನರಿಗೆ ವಿಶೇಷವಾಗಿ ಉಪಕಾರಂಗಳಾಗಲೆಂದು ಶ್ರೀ ಶ್ರೀಗಳವರು ಆಶೀರ್ವದಿಸಿರುತ್ತಾರೆ.

ಇಂತು ನಮಸ್ಕಾರಗಳು

(ಸಹಿ) V. R. Gowri Shankar

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

ಅರಿಕೆ

ದಕ್ಷಿಣಾಮ್ನಾಯ ಶ್ರೀ ಶೃಂಗೇರಿ ಶ್ರೀ ಶಾರದಾಪೀಠದ 35ನೇ ಪೀಠಾಧಿಪತಿಗಳಾದ ಜಗದ್ಗುರು ಶ್ರೀ ಶ್ರೀ ಅಭಿನವ ವಿದ್ಯಾತೀರ್ಥ ಮಹಾಸನ್ನಿಧಾನದವರು ತಮಿಳುನಾಡಿನಲ್ಲಿ ಪ್ರವಾಸ ಮಾಡುತ್ತಲಿದ್ದಾಗ, ಭಕ್ತರ ನಿವೇದನೆಯಂತೆ, ತಾವು ತಂಗಿದ್ದ ಸ್ಥಳಗಳಲ್ಲಿ ಸಾಯಂಕಾಲ ಅನುಗ್ರಹ ರೂಪವಾದ ಉಪದೇಶಾತ್ಮಕ ಉಪನ್ಯಾಸಗಳನ್ನು ಮಾಡುತ್ತಲಿದ್ದರು. ಉಪನ್ಯಾಸಗಳ ವಿಷಯಗಳಾದರೂ ನಮ್ಮ ಸನಾತನ ಧರ್ಮ ಹಾಗೂ ವೇದಾಂತಕ್ಕೆ ಸಂಬಂಧಿಸಿದವು. ಸರಳವಾದ ಭಾಷೆಯಲ್ಲಿ ಅಖ್ಯಾಯಿಕೆಗಳ ಮೂಲಕ ಗಹನವಾದ ತತ್ತ್ವಗಳನ್ನು ಜನರಿಗೆ ಮನದಟ್ಟಾಗುವಂತೆ ಪ್ರತಿಪಾದನೆ ಮಾಡುವುದು ಶ್ರೀ ಶ್ರೀ ಜಗದ್ಗುರುಗಳವರ ವೈಶಿಷ್ಟ್ಯ. ಈ ಉಪನ್ಯಾಸಗಳೆಲ್ಲವೂ ತಮಿಳುಭಾಷೆಯಲ್ಲಿ ಗ್ರಂಥರೂಪದಲ್ಲಿ ಪ್ರಕಟವಾಗಿರುತ್ತವೆ. ಆ ಪೈಕಿ ಡಾ ಎನ್. ಎಸ್. ದಕ್ಷಿಣಮೂರ್ತಿಯವರು ಕನ್ನಡ ಭಾಷೆಗೆ ತರ್ಜಿಮೆ ಮಾಡಿ ಕೊಟ್ಟದ್ದ ಉಪನ್ಯಾಸಗಳನ್ನು ಶಂಕರಕೃಪಾ ಮಾಸ ಪತ್ರಿಕೆಯಲ್ಲಿ ಪ್ರಕಟ ಮಾಡುತ್ತಾ ಬಂದು ಒಂದು ಗ್ರಂಥ ರೂಪದಲ್ಲಿ ಈಗಾಗಲೇ ಉಪದೇಶ ಸುಧಾ ಭಾಗ 1 ಮತ್ತು 2ನ್ನು ಈ ಹಿಂದೆಯೇ ಪ್ರಕಟಿಸಲಾಗಿತ್ತು. ಅದರಿಂದ ಮುಂದೆ ಉಪದೇಶಗಳನ್ನು ಶ್ರೀ ಬಿ. ಆರ್. ವೆಂಕಟರಮಣನ್‌ರವರು ಜೂನ್ 94ರವರೆಗೆ ಅಲ್ಲಿಂದ ಮುಂದಕ್ಕೆ ಶ್ರೀ ಶಂಕರ ಕೃಪಾ ಮಾಸ ಪತ್ರಿಕೆಯ ಸಂಪಾದಕರಾದ ಪ್ರೊ. ಎಸ್. ರಾಮಚಂದ್ರಶಾಸ್ತ್ರಿಯವರು ಫೆಬ್ರವರಿ 95ರವರೆಗೆ ಕನ್ನಡಕ್ಕೆ ತರ್ಜುಮೆ ಮಾಡಿ ಕೊಟ್ಟಿದ್ದು ಶಂಕರ ಕೃಪಾ ಮಾಸ ಪತ್ರಿಕೆಯಲ್ಲಿ ಕ್ರಮವಾಗಿ ಬಂದು ಈಗ ಉಪದೇಶ ಸುಧಾ ಭಾಗ 3ನ್ನು ಪ್ರಕಟಿಸಲಾಗಿದೆ.

ಈ ಬಗ್ಗೆ ಶ್ರೀ ಮಠದಿಂದ 1987ರಲ್ಲಿ ಪಡೆದ ಅನುಮತಿ ಪತ್ರವನ್ನು ಪ್ರಕಟಿಸಲಾಗಿದೆ. ಭಾಷಾಂತರ ಮಾಡಿ ಕೊಟ್ಟ ಶ್ರೀ ಬಿ. ಆರ್. ವೆಂಕಟರಮಣನ್‌ರವರಿಗೂ ಮತ್ತು ಶಂಕರಕೃಪಾ ಪತ್ರಿಕೆಯ ಸಂಪಾದಕರಾದ ಪ್ರೊ. ಎಸ್. ರಾಮಚಂದ್ರಶಾಸ್ತ್ರಿಯವರಿಗೂ ಕೃತಜ್ಞತೆಗಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶಂಕರಕೃಪಾ ಮಾಸ ಪತ್ರಿಕೆಯಲ್ಲಿ ಈ ಉಪನ್ಯಾಸಗಳು ಪ್ರಕಟವಾಗಿದ್ದು ಪಡೆದಿದ್ದ ಪ್ರತ್ಯೇಕ ಪ್ರತಿಗಳನ್ನು ಒಟ್ಟುಗೂಡಿಸಿ ಶ್ರೀ ಶಾರದಾ ಟ್ರಸ್ಟ್‌ಗೆ ವಹಿಸಲ್ಪಟ್ಟು ಶ್ರೀ ಶಾರದಾ ಟ್ರಸ್ಟ್ ಮೂಲಕ ಭಕ್ತ ಜನರಿಗೆ ತಲುಪುವಂತೆ ಏರ್ಪಾಡು ಮಾಡಲಾಗಿರುತ್ತದೆ. ಆಸ್ತಿಕರು ಈ ಗ್ರಂಥದ ಸಂಪೂರ್ಣ ಪ್ರಯೋಜನವನ್ನು ಪಡೆಯಬೇಕೆಂದು ಆಶಿಸಲಾಗಿದೆ.

ಪಿ. ಆರ್. ಹರಿಹರನ್

8-12-1995 ಪ್ರಕಾಶಕರು ಶ್ರೀ ಶಂಕರ ಕೃಪಾ ಮತ್ತು

ಮೈಸೂರು ಟ್ರಸ್ಟಿ, ಶ್ರೀ ಶಾರದಾ ಟ್ರಸ್ಟ್

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳ ಉಪದೇಶಾಮೃತ

ಗೀತೆಯು ತೋರಿಸುವ ದಾರಿ

ವಿಶುದ್ಧ ಜ್ಞಾನದೇಹಾಯ ತ್ರಿವೇದೀ ಜ್ಞಾನ ಚಕ್ಷುಷೇ ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥ ಲೇಖಾಲಂಕೃತ ಕುಂತಲಾಮ್ ।
ಭವಾನೀಂ ಭವಸಂತಾಪ ನಿರ್ವಾಪಣ ಸುಧಾನದೀಮ್ ॥

ಭಗವದ್ಗೀತೆಯೆಂಬುದು ಭಗವಂತನು ಅನುಗ್ರಹಿಸಿ ಕೊಟ್ಟಿರುವ ಒಂದು ಗ್ರಂಥ. "ಗೀತೆಯಿಂದ ನಮಗೇನು ಪ್ರಯೋಜನ ? ನಾವು ಅದನ್ನು ಏತಕ್ಕಾಗಿ ಓದಬೇಕು ? ಎಷ್ಟರ ಮಟ್ಟಿನ ಶ್ರದ್ಧೆಯಿಂದ ಓದಬೇಕು ? " ಎಂಬ ಪ್ರಶ್ನೆಗಳಿಗೆ ನಮಗೆ ಉತ್ತರ ದೊರೆತರೆ ನಾವೆಲ್ಲರೂ ಭಗವದ್ಗೀತೆಯನ್ನು ಓದುತ್ತೇವೆ.

ವಿಸೃಜ್ಯ ಸಶರಂ ಚಾಪಂ ಶೋಕ ಸಂವಿಗ್ನಮಾನಸಃ ।

(ಬಿಲ್ಲು ಬಾಣಗಳನ್ನು ಎಸೆದು ಶೋಕದಲ್ಲಿ ಮುಳುಗಿದ ಮನಸ್ಸಿನಿಂದ)—

ಅರ್ಜುನನು ಒಂದು ಮಹಾಯುದ್ಧವನ್ನು ಮಾಡುವುದಕ್ಕಾಗಿ ತಯಾರಾಗಿ ಬಂದನು. ಆ ಯುದ್ಧಕ್ಕೆ ಒಂದು ವೈಶಿಷ್ಟ್ಯವಿದೆ. ಆ ಕಾಲದಲ್ಲಿ ಸಿಕ್ಕಿದವನು ಸಿಕ್ಕಿದವನ ಮೇಲೆ ಸಿಕ್ಕಿದ ಕಡೆಯಲ್ಲಿ ಬಾಣವನ್ನು ಬಿಡುತ್ತಿರಲಿಲ್ಲ. ಯಾರು ಯುದ್ಧ ಮಾಡುವುದಕ್ಕಾಗಿಯೇ ತನ್ನ ಮುಂದೆ ನಿಂತಿರುತ್ತಾನೋ ಅವನನ್ನು ಸೋಲಿಸಬೇಕು ಎಂಬ ಉದ್ದೇಶದಿಂದ ಬಾಣ ಪ್ರಯೋಗ ಮಾಡುತ್ತಿದ್ದನು. ಅಂತಹ ಕಾಲ ಅದು. ಈಗಿನ ಕಾಲದಲ್ಲಿರುವಂತೆ ದಿಢೀರೆಂದು ರಾತ್ರಿಯ ಕಾಲದಲ್ಲಿ ಜನಗಳ ಮೇಲೆ ಅಣು ಬಾಂಬನ್ನು ಹಾಕಿ ಯುದ್ಧದಲ್ಲಿ ಜಯಗಳಿಸಬೇಕೆಂಬ ಭಾವನೆ ಆಗಿನವರಿಗೆ ಇರಲಿಲ್ಲ. ಆದ್ದರಿಂದಲೇ, ಚೆನ್ನಾಗಿ ಯೋಚನೆಮಾಡಿ ತಯಾರಿಮಾಡಿಕೊಂಡು ಯುದ್ಧಕ್ಕಾಗಿ ಅರ್ಜುನನು ರಣರಂಗಕ್ಕೆ ಬಂದನು.

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।

(ಧೃತರಾಷ್ಟ್ರನೇ, ಹೃಷೀಕೇಶನು ಮಂದಹಾಸದಿಂದ ಎರಡು ಸೇನೆಗಳ ನಡುವೆ ಇರುವಂತೆಯೇ ಅರ್ಜುನನಿಗೆ ಹೇಳಿದನು).

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಜುನನು ಶೋಕದಿಂದ ಕಳವಳಗೊಂಡು ಭ್ರಾಂತಿಗೊಂಡವನಾಗುತ್ತಾನೆ. ಮೋಹಗೊಂಡವನಾಗಿ "ಯಾವುದನ್ನು ಮಾಡಬೇಕು, ಯಾವುದನ್ನು ಮಾಡಬಾರದು" –ಎಂಬುದನ್ನು ತಿಳಿಯದವನಾಗಿ ಅರ್ಜುನನು ದಿಗ್ಭ್ರಮೆಗೊಂಡು ನಿಂತ ಸಮಯದಲ್ಲಿ ಭಗವಂತನು ಉಪದೇಶ ಮಾಡಲು ತೊಡಗುತ್ತಾನೆ.

ನಮಗೆ ನಮ್ಮ ಕರ್ತವ್ಯದ ವಿಷಯದಲ್ಲಿ ಏನಾದರೂ ಸಂದೇಹ ಬಂದರೆ, ಆಗ ಸಂಬಂಧಿಸಿದ ಗ್ರಂಥವನ್ನು ತೆಗೆದು ನೋಡುತ್ತೇವೆ. ನಿದ್ದೆಮಾಡುವುದು, ತಿನ್ನುವುದು, ಸಿನಿಮಾಕ್ಕೆ ಹೋಗುವುದು ಮುಂತಾದ ಕೆಲಸಗಳು ಸರಿಯಾದವು ಎಂಬ ನಿಶ್ಚಯ ನಮಗಿದ್ದರೆ, ಆಗ ನಾವು ಭಗವದ್ಗೀತೆಯ ದಾರಿಯಲ್ಲಿ ಹೋಗಬೇಕಾಗಿಲ್ಲ. "ನಾವು ಮಾಡುತ್ತಿರುವುದು ಸರಿಯೋ, ತಪ್ಪೋ ಎಂಬ ಸಂದೇಹವುಂಟಾದರೆ, ಆಗ ಅದನ್ನು ಹೋಗಲಾಡಿಸುವುದಕ್ಕಾಗಿ "ಗೀತೆಯನ್ನು ಎಲ್ಲರೂ ಓದಿ" – ಎಂದು ನಾನು ಹೇಳುತ್ತೇನೆ. ಇದನ್ನು ಕೇಳುವವನ ಮನಸ್ಸಿನಲ್ಲಿ ಕಳವಳವಿದೆ. ಉಪದೇಶ ಕೊಡುವವನು ಹೇಗಿದ್ದಾನೆ—

ತಮುವಾಚ ಹೃಷೀಕೇಶಃ ಪ್ರಹಸನ್ನಿವ ಭಾರತ ।

–ಎಂದು ಹೇಳಲಾಗಿರುವಂತೆ, ಮಂದಹಾಸದಿಂದ ಅಲಂಕೃತನಾಗಿದ್ದಾನೆ, ಭಗವಂತ. ಒಬ್ಬನು ತುಂಬ ವ್ಯಸನದಿಂದ ವ್ಯಾಮೋಹಗೊಂಡವನಾಗಿದ್ದರೆ, ಅಂತಹವನಿಗೆ ಉಪದೇಶ ಕೊಡುವವನೂ– "ಅಯ್ಯೋ, ನನ್ನ ಪರಿಸ್ಥಿತಿಯೂ ಹಾಗೆಯೇ ಇದೆ. ನನಗೂ ಏನೂ ತೋರುವುದಿಲ್ಲ "–ಎಂದು ಕೂತುಬಿಟ್ಟರೆ, ಅಂಥವನಿಂದ ಏನು ಪ್ರಯೋಜನ ? ಆದರೆ, ಯಾವುದರ ಲೇಪವೂ ಇಲ್ಲದ ಭಗವಂತ ಅರ್ಜುನನನ್ನು ನೋಡಿ–"ಅಯ್ಯೋ ಹುಚ್ಚಪ್ಪ, ನೀನು ಎಷ್ಟು ಚೆನ್ನಾಗಿ ಆಲೋಚನೆ ಮಾಡಿ, ಸರಿಯಾಗಿ ತೀರ್ಮಾನವನ್ನು ತೆಗೆದು ಕೊಂಡು, ರಣರಂಗಕ್ಕೆ ಬಂದು, "ನನ್ನ ಕರ್ತವ್ಯವೇನು ?" ಎಂಬ ವಿಷಯದಲ್ಲಿ ಸಂದೇಹ ಹೊಂದುತ್ತಿದ್ದೀಯಲ್ಲಾ! ಇದು ಹುಚ್ಚುತನವಲ್ಲದೇ ಮತ್ತೇನು?" ಎಂದು ಹೇಳಿ, ಚಿಕ್ಕಮಕ್ಕಳು ಜಗಳವಾಡುವುದನ್ನು ಕಂಡು, ನಾವು ನಕ್ಕು ಅದು ಹುಚ್ಚಾಟ ಎಂದು ಹೇಳುವಂತೆ, ಭಗವಂತನೂ ಅರ್ಜುನನನ್ನು ಕಂಡು ನಕ್ಕು, ಉಪದೇಶ ಮಾಡಿದ್ದಾನೆ. ನಾವು ಗುರುವೆಂದು ಯಾರನ್ನಾದರೂ ಹುಡುಕಬೇಕಾದರೆ ಕೃಷ್ಣನಂತಹ ಗುರುವನ್ನೇ ಹುಡುಕಬೇಕು.

ಮನುಷ್ಯರು ತಮಗಿರುವ ಪ್ರಭಾವಗಳನ್ನು ಉಪಯೋಗಿಸಿಕೊಂಡು, ಹಲವಾರು ಪಾಪಗಳನ್ನು ಮಾಡುತ್ತಾರೆ. ಶರೀರ ಪೋಷಣೆಗಾಗಿಯೇ ಮೂಢರು ಪಾಪವನ್ನು ಮಾಡುತ್ತಾರೆ–ಎಂದಿದ್ದಾನೆ ಭಗವಂತ. ನಮ್ಮ ಶರೀರವೆಂಬುದು ನಾಶವಾಗಿ ಹೋಗುವಂತಹುದು. ನಾಶವಾಗಿ ಹೋಗುವ ಈ ಶರೀರವನ್ನು ಯಾವಾಗಲೂ ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ನಾವು ಬಹು ಕಷ್ಟಪಟ್ಟು ಸಾಕುತ್ತೇವೆ. ಯಾವ ವಸ್ತುವಿ

Sri Vidyabharathi Book Centre, Sringeri

CC-O. In Public Domain. Digitized by eGangotri

ನಲ್ಲಿ ನಾಶವಾಗುವ ಸ್ವಭಾವವಿರುವುದೋ ಅದು ಯಾವಾಗಲೂ ಇರುವಂತೆ ಮಾಡಲಾಗದು. ಅದರಂತೆಯೇ ಯಾವ ವಸ್ತುವು ಯಾವಾಗಲೂ ಇರಬಲ್ಲುದೋ? ಅದನ್ನು ನಾಶಮಾಡುವುದೂ ಸಾಧ್ಯವಲ್ಲದ ಕೆಲಸ. ಹೀಗಿರುವಾಗ, ಈ ಶರೀರವು ನಾಶವಾಗತಕ್ಕದ್ದು ಎಂದು ತಿಳಿದೂ, ಅದನ್ನು ಯಾವಾಗಲೂ ಇರುವಂತೆ ಮಾಡುವುದಕ್ಕಾಗಿ ನಾವು ಎಷ್ಟೆಷ್ಟೋ ಶ್ರಮ ಪಡುತ್ತೇವೆ. ಇದಕ್ಕೆ ಕಾರಣವೇನೆಂದರೆ, "ನಾಶವಾಗುವ ಈ ದೇಹ ನಮ್ಮದು" – ಎಂಬ ನಮ್ಮ ತಿಳುವಳಿಕೆ. "ನಾನು ಯಾರು ? ನನ್ನ ಶರೀರ ಯಾವುದು ?" –ಎಂಬ ವಿಚಾರದಲ್ಲಿ ನಮಗೆ ಸರಿಯಾದ ತಿಳುವಳಿಕೆ ಇಲ್ಲ.

ಅಂತವಂತ ಇಮೇ ದೇಹಾಃ ನಿತ್ಯಸ್ಯೋಕ್ತಾ ಶರೀರಿಣಃ |
ಅನಾಶಿನೋऽಪ್ರಮೇಯಸ್ಯ ತಸ್ಮಾದ್ಯುಧ್ಯಸ್ವ ಭಾರತ ||

(ನಮ್ಮ ದೇಹಗಳು ಹೇಗಿದ್ದರೂ ನಾಶವಾಗತಕ್ಕವೇ. ಅವುಗಳೊಳಗೆ ಅವನ್ನು ಧರಿಸಿಕೊಂಡಿರುವ ಚೈತನ್ಯ ಶಕ್ತಿಯಾದರೋ ನಿತ್ಯವಾದದ್ದು, ನಾಶವಿಲ್ಲದ್ದು, ಅಳತೆಗೂ ತೂಕಕ್ಕೂ ಪರೀಕ್ಷೆಗೂ ಸಿಕ್ಕತಕ್ಕದ್ದಲ್ಲ. ನಿನ್ನ ಬಾಣದಿಂದಲೂ, ಕತ್ತಿಯಿಂದಲೂ ಅದಕ್ಕೇನೂ ಬಾಧೆಯಾಗದು. ಆದ್ದರಿಂದ, ಏಳು, ಯುದ್ಧ ಮಾಡು).

ಇದನ್ನು ಕುರಿತು ಭಗವಂತನು "ಈ ಶರೀರವೆಂಬುದು ನಶಿಸಿ ಹೋಗತಕ್ಕದ್ದು, ಆದರೆ ಆತ್ಮಾ ಎಂಬುದು ಹಾಗೆ ನಾಶಹೊಂದುವುದಿಲ್ಲ. ನೀನು ನಾಶರಹಿತನಾದ ಆತ್ಮಾ. ನಿನ್ನ ಹಿಂದಿನ ಕರ್ಮಗಳ ಕಾರಣದಿಂದ ಈ ಶರೀರವನ್ನು ಪಡೆದಿದ್ದೀಯೆ. ಹಾಗೆ ನಿನಗೆ ಈ ಬಂದಿರುವ ದೇಹ ನಾಶವಾಗುತ್ತದೆಯೋ ಅಥವಾ ಇಲ್ಲವೇ ಎಂದು ನೀನು ಚಿಂತಿಸಬೇಕಾದ ಅಗತ್ಯವೇ ಇಲ್ಲ. ನೀನು ಕ್ಷತ್ರಿಯ ಕುಲದಲ್ಲಿ ಹುಟ್ಟಿ ಯುದ್ಧರಂಗಕ್ಕೆ ಬಂದಿರುವಾಗ ನಿನಗೆ ವಿಧಿಸಲಾಗಿರುವ ಕರ್ತವ್ಯಗಳನ್ನು ಮಾಡಿದರೆ ಮಾತ್ರ ನಿನಗೆ ಶ್ರೇಯಸ್ಸು ಉಂಟಾಗುತ್ತದೆ"– ಎಂದು ಹೇಳುತ್ತಾನೆ. ಹೀಗಿರುವಾಗ ಭಗವಂತನು ಅನುಗ್ರಹಿಸಿರುವ ಗೀತೆಯನ್ನು ನೋಡಿದರೆ, ನಾವು ಎಂತಹ ಕಷ್ಟದಲ್ಲಿ ಸಿಲುಕಿದ್ದರೂ ಸುಖದಲ್ಲೇ ಇದ್ದರೂ ಭಗವತ್ಸ್ವರೂಪವನ್ನು ತಿಳಿಯಲು ಅದು ಸಹಾಯವಾಗುವುದು.

"ಭಗವಂತನೇ ಈ ಲೋಕವನ್ನು ಸೃಷ್ಟಿಸಿದವನು" ಎಂದು ಹೇಳುತ್ತಾರೆ. ಈ ಲೋಕವನ್ನು ಭಗವಂತನು ಸೃಷ್ಟಿಸಿದನು ಎಂಬುದು ನಿಜವೇ, ಸುಳ್ಳೇ, ಎಂಬುದನ್ನು ವಿಚಾರಿಸಿದಾಗ, ಭಗವಂತನೇ ಗೀತೆಯಲ್ಲಿ—

ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ||

(ಈ ಲೋಕಗಳನ್ನು ನಾನು ಸೃಷ್ಟಿಸಿದ್ದೇನೆ ; ಎಂದು ಬದಲಾಗದವನೆಂದೂ, ಯಾವ ಕ್ರಿಯೆ ಇಲ್ಲದವನೆಂದೂ ತಿಳಿ).

Sri Vidyabharathi Book Centre, Sringeri

CC-O. In Public Domain. Digitized by eGangotri

-ಎಂದು ಹೇಳಿದ್ದಾನೆ. "ಇವೆಲ್ಲವನ್ನೂ ಸೃಷ್ಟಿಸಿರುವವನೂ ನಾನೇ. ಇವನ್ನು ಕುರಿತು ಉದಾಸೀನದಿಂದಿರುವವನೂ ನಾನೇ." "ಇವೆರಡೂ ಒನ್ಮೆಲೇ ಸಾಧ್ಯವೇ"-ಎಂದು ಕೇಳಿದರೆ, ಇವೆರಡೂ ಒಂದೇ ಸ್ಥಳದಲ್ಲಿ ಇರುವುದೆಂದು ತೋರುವು ದಾದರೆ, ನಿಜವಾಗಿಯೇ ಹಾಗಿರಬೇಕು; ಅಥವಾ ವ್ಯವಹಾರಕ್ಕಾಗಿ ನಾವು ಹಾಗೆ ಕಲ್ಪಿಸಿ ಕೊಂಡಿರಬೇಕು. ಭಗವಂತನ ಕರ್ತೃತ್ವ ನಿಜವಾಗಿರುವ ಪಕ್ಷಕ್ಕೆ ಅವನ ಉದಾಸೀನತೆಯನ್ನು ನಾವು ಕಾಣಲಾಗುವುದಿಲ್ಲ.

ತಸ್ಯ ಕರ್ತಾರಮಪಿ ಮಾಂ ವಿದ್ಧ್ಯಕರ್ತಾರಮವ್ಯಯಮ್ ।

ಎಂದು ಭಗವಂತನೇ-"ನಿಜವಾಗಿಯೂ ನಾನು ಕ್ರಿಯಾರಹಿತನು; ಆದರೆ ವ್ಯಾವಹಾರಿಕ ದೃಷ್ಟಿಯಲ್ಲಿ ನಾನು ಕೆಲಸ ಮಾಡುತ್ತಿರುವಂತೆ ತೋರುತ್ತದೆ" ಎಂದು ಹೇಳಿದ್ದಾನೆ.

ಅರ್ಜುನನು ಕಳವಳಗೊಂಡು ದಿಙ್ಮೂಢನಾಗಿರುವಾಗ ಭಗವಂತನು—

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ ॥

(ಹುಟ್ಟಿದವನು ಸಾಯುವುದೂ, ಸತ್ತವನು ಹುಟ್ಟುವುದೂ ನಿಶ್ಚಯ; ನಮ್ಮಿಂದ ಪರಿಹರಿಸಲಾಗದ ಸಂದರ್ಭಕ್ಕಾಗಿ ನೀನು ಗೋಳಾಡಬೇಡ)

ಎಂದು ಹೇಳುತ್ತಾನೆ. ನೀನು ಏತಕ್ಕಾಗಿ ದುಃಖಿಸುತ್ತೀಯೆ– ಎಂದರೆ, ನೀನು ಅವನನ್ನು ಕೊಂದೆ ಎಂದು ತಿಳಿದು ಅಳುತ್ತೀಯೆ. ಅದೇ ಸಮಯದಲ್ಲಿ ನೀನು ಸತ್ತಿದ್ದರೆ, ನಿನ್ನ ವೈರಿ ತನ್ನ ಕೈಯಿಂದ ನೀನು ಹತನಾದೆ ಎಂದು ತಿಳಿಯುತ್ತಾನೆ. ನಿಮ್ಮಿಬ್ಬರ ಕೈಗಳಿಂದ ಪರಸ್ಪರವಾಗಿ ನೀವಿಬ್ಬರೂ ಸಾಯಬಾರದು ಎಂಬುದಾದರೆ, ಭಗವಂತನು ಏನು ತಾನೆ ಮಾಡಬೇಕು. ಆದ್ದರಿಂದ, ನಾವು ನಮ್ಮ ಕರ್ತವ್ಯವನ್ನು ಮರೆಯದೇ ಇರಬೇಕು.

ಈ ರೀತಿಯಲ್ಲಿ ಅನೇಕ ಸೂಕ್ಷ್ಮ ವಿಷಯಗಳನ್ನು ಭಗವಂತನು ಬಹು ವಿವರವಾಗಿ ತಿಳಿಸಿದ್ದಾನೆ. ಇದಕ್ಕಾಗಿ ನಾವೇನೂ ಕಷ್ಟಪಡಬೇಕಾಗಿಲ್ಲ. ನಾವು ಧರ್ಮವನ್ನು ಅನುಷ್ಠಾನ ಮಾಡುತ್ತಿದ್ದರೆ ಸಾಕು. ಎಲ್ಲಿಯವರೆಗೆ ಧರ್ಮದ ಅನುಷ್ಠಾನ?

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

(ಇದರಲ್ಲಿ ತೊಡಗಿಸುವ ಪ್ರಯತ್ನ ವ್ಯರ್ಥವಾಗುವುದಿಲ್ಲ; ಕೇಡೂ ಉಂಟಾಗು ವುದಿಲ್ಲ. ಸ್ವಲ್ಪ ಧರ್ಮವನ್ನು ಮಾಡಿದರೂ ಮಹತ್ತರವಾದ ಭಯದಿಂದ ಕಾಪಾಡುತ್ತದೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಯತ್ನ ಮಾಡಿದ್ದು ಎಂದಿಗೂ ಫಲವನ್ನು ಕೊಡದೇ ಹೋಗುವುದಿಲ್ಲ. ಮತ್ತು ಸಾಧ್ಯವಾದಷ್ಟು ಪ್ರಯತ್ನಪಟ್ಟರೆ, ಪಾಪವೂ ಇಲ್ಲ. ಯಥಾಶಕ್ತಿ ಧರ್ಮವನ್ನು ಅನುಷ್ಠಾನ ಮಾಡಿದರೆ, ನಾವು ಒಳಿತನ್ನು ಪಡೆಯಬಹುದು. ಭಗವಂತನು ಗೀತೆಯಲ್ಲಿ ಇಂತಹ ಅಮೂಲ್ಯವಾದ ಉಪದೇಶಗಳನ್ನು ಮಾಡಿದ್ದಾನೆ. ಪರಮಾರ್ಥ ವಸ್ತುವನ್ನು ಕುರಿತಿರುವ ಗ್ರಂಥಗಳಲ್ಲಿ ಗೀತೆಗೆ ಪ್ರಥಮ ಸ್ಥಾನ. ಹಲವು ಆಚಾರ್ಯ ಪುರುಷರು ಗೀತೆಗೆ ಭಾಷ್ಯಗಳನ್ನು ಬರೆದಿರುತ್ತಾರೆ. ತಮ್ಮ ತಮ್ಮ ದೃಷ್ಟಿಕೋನಗಳಿಂದ ಅವರುಗಳು ವ್ಯಾಖ್ಯಾನ ಮಾಡಿದ್ದಾರೆ. ಆದರೆ, ಆಳವಾಗಿ ಅಭ್ಯಾಸ ಮಾಡದೆ ಕೇವಲ ಆಪಾತತಃ ಓದಿದರೆ, ಅಂಥವನಿಗೆ ವಿಪರೀತವಾದ ಫಲವೇ ದೊರಕುತ್ತದೆ. ಆದ್ದರಿಂದ ಭಗವದ್ಗೀತೆಯೆಂಬ ಉತ್ಕೃಷ್ಟವಾದ ಈ ಗ್ರಂಥವನ್ನು- "ಇದು ನಮ್ಮದು. ಇದು ನಮ್ಮ ಹಿತವನ್ನು ಕುರಿತಾಗಿಯೇ ಹೇಳಲಾಗಿದೆ"-ಎಂಬ ಭಾವನೆಯಿಂದ ನೋಡಬೇಕು.

ಗೀತೆಯಲ್ಲಿ ಪ್ರತಿಪಾದಿತವಾಗಿರುವ ತತ್ತ್ವ ಅದ್ವೈತತತ್ತ್ವ. ಅದನ್ನು ಈಗ ಸ್ವಲ್ಪ ನೋಡೋಣ.

ಈ ಲೋಕವನ್ನು ಮರೆಯುವುದೇ ಅದ್ವೈತತತ್ತ್ವ. ಆದ್ದರಿಂದ ನಾವು ಈ ಲೋಕವನ್ನು ಮರೆಯುತ್ತಾ ಬರಬೇಕು. ದೊಂಬರವನೊಬ್ಬನು ನೀರು ತುಂಬಿದ ಕೊಡವೊಂದನ್ನು ತಲೆಯ ಮೇಲಿಟ್ಟುಕೊಂಡು ಆಡುತ್ತಲೇ ಇರುತ್ತಾನೆ. ಹಾಗೆ ಆಡುತ್ತಿರುವಾಗ ನಮ್ಮನ್ನು ನೋಡುತ್ತಲೇ ಇರುತ್ತಾನೆ. ಕೈಕಾಲುಗಳನ್ನು ಆಡಿಸುತ್ತಾ ಕುಣಿಯುತ್ತಲೂ ಇರುತ್ತಾನೆ. ಆದರೆ, ಅವನ ಯೋಚನೆಯೆಲ್ಲ "ಕೊಡ ಎಲ್ಲಿ ಬಿದ್ದುಬಿಡುವುದೋ ? ಅದರಲ್ಲಿರುವ ನೀರು ಎಲ್ಲಿ ಚೆಲ್ಲಿಹೋಗುವುದೋ ?" ಎಂದೇ ಇರುತ್ತದೆ. ಅದರಂತೆಯೇ ನಮ್ಮ ಚಿಂತನೆಯನ್ನೆಲ್ಲ ಪರವಸ್ತುವಿನಲ್ಲಿಟ್ಟು, ಲೋಕದ ಕಾರ್ಯವನ್ನು ಮಾಡುವಾಗ ಉದಾಸೀನವಾಗಿದ್ದು ಅದನ್ನು ಹಚ್ಚಿಕೊಳ್ಳದೆ ಇರಬೇಕು. ನಾವು ಮಾತನಾಡುತ್ತಿರುವಾಗ ಕೈಯನ್ನು ಆಡಿಸುವುದಂಟಲ್ಲವೇ? ಕೈಆಡಿಸಬೇಕಾದುದಕ್ಕೆ ನಾವು ಬೇರೆ ಯೋಚನೆ ಮಾಡಬೇಕಾಗಿಲ್ಲ. ಕೈಗೆ ಅದು ಸಹಜವಾಗಿ ಬರುತ್ತದೆ. ಅದರಂತೆಯೇ, ಈ ಲೋಕ ವ್ಯವಹಾರ ನಡೆಸುವುದು ನಮ್ಮ ಸ್ವಭಾವ. ಅದಕ್ಕಾಗಿ ಬುದ್ಧಿಯನ್ನು, ಹೆಚ್ಚು ಖರ್ಚುಮಾಡಬೇಕಾಗಿಲ್ಲ. ಲೋಕ ವಿಚಾರದಲ್ಲಿ ನಾವು ಉದಾಸೀನವಾದ ಒಂದು ಭಾವನೆಯನ್ನು ಉಂಟುಮಾಡಿಕೊಂಡು ಅದನ್ನು ಹೆಚ್ಚು ಹೆಚ್ಚು ಮಾಡಿಕೊಂಡರೆ, ಅಧ್ಯಾತ್ಮಾನುಭವವು ತಾನಾಗಿಯೇ ಬರುತ್ತದೆ. ಆತ್ಮವು ಸ್ವಯಂ ಪ್ರಕಾಶವಾದದ್ದು. ಅದನ್ನು ಬೆಳಗಿಸಲು ಬೇರೆ ಯಾವ ವಸ್ತುವೂ ಬೇಕಾಗಿಲ್ಲ. ಆದರೆ, ಈಗ ಆಗಿರುವುದೇನು ? ಬೇರೆ ಯಾವುದೋ ವಸ್ತು ಸೇರಿರುವುದರಿಂದ ಆತ್ಮನ ನಿಜಸ್ವರೂಪ ಮರೆಯಾಗಿಹೋಗಿದೆ. ಆತ್ಮನ ವಿಷಯದಲ್ಲಿ ಜ್ಞಾನವಿರಬೇಕು. ಹಾಗೆಯೇ ಲೋಕದ ವಿಷಯದಲ್ಲಿ ಮರೆವೂ ಇರಬೇಕು. ಆಗ ಅದ್ವೈತಾನುಭವವು ತಾನಾಗಿ ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ವೈತವೆಂಬುದು ಎಲ್ಲರಿಗೂ ತಿಳಿದದ್ದೇ. "ನಾನು ಬೇರೆ, ಈ ಪ್ರಪಂಚ ಬೇರೆ, ಭಗವಂತನು ಬೇರೆ" ಎಂಬುದು ಎಲ್ಲರಿಗೂ ತಿಳಿದದ್ದೇ. "ಏನೋ ನಮಗೆ ತಿಳಿಯದೇ ಇದ್ದುದನ್ನು ಹೇಳಿಕೊಟ್ಟರೆ ಪರವಾಗಿಲ್ಲ" ಎಂದು ನಮಗೆ ಆಶೆಯಾಗುತ್ತದೆ. ಇದನ್ನು ಕಂಡ ಶಂಕರರು "ನೀನೇ ಪರವಸ್ತು ಎಂಬುದನ್ನು ತಿಳಿದುಕೊಂಡು ಬಿಡು" ಎಂದು ಹೇಳಿದರು. "ತಿಳಿದು ಕೊಂಡು ಬಿಡು" ಎಂದು ಹೇಳಿರುವುದನ್ನು ಕೇಳಿದಾಗ ತಿಳಿದು ಕೊಂಡು ಬಿಟ್ಟಂತೆಯೇ ಆಗುತ್ತದೆ. ಆದರೆ, ನಮ್ಮ ನಡವಳಿಕೆಯಲ್ಲಿ ಅದು ಬೇರೆ ಎಂದೇ ತೋರುತ್ತದೆಯಲ್ಲಾ ಎಂಬುದು ಕೆಲವರ ಸಂದೇಹ. ಹೌದು. ಹಾಗೆಯೇ ತೋರುತ್ತದೆ. "ಕಾಣುವುದೆಲ್ಲಾ ನಾನೇ" ಎಂದು ತಿಳಿದುಕೊಂಡು ಬಿಡು. ಇದರಿಂದ ಲೋಕಕ್ಕೆ ಯಾವ ವಿಧವಾದ ಕಷ್ಟವೂ ಇಲ್ಲ. ನಮಗೂ ಲೋಕದಿಂದ ಕಷ್ಟವಿಲ್ಲ. ಭಗವಂತನು—

ಹರ್ಷಾಮರ್ಷಭಯೋದ್ವೇಗೈರ್ಮುಕ್ತೋ ಯಃ ಸಚಮೇ ಪ್ರಿಯಃ।

(ಯಾರು ಸಂತೋಷ, ಕೋಪ, ಭಯ, ಉದ್ವೇಗ, ಮುಂತಾದ ಮನೋ ವಿಕಾರಗಳು ಇಲ್ಲದಿರುವನೋ ಅವನು ನನಗೆ ಪ್ರಿಯನಾದವನು)

—ಎಂದು ಹೇಳಿದ್ದಾನೆ. ಯಾರಿಂದ ಲೋಕ ಉದ್ವೇಗ ಹೊಂದುವುದಿಲ್ಲವೋ, ಮತ್ತು ಯಾರು ಲೋಕದಿಂದ ಉದ್ವೇಗ ಹೊಂದುವುದಿಲ್ಲವೋ ಅವನೇ ಭಗವದ್ಭಕ್ತನು ಎಂದು ಆ ಶ್ಲೋಕದ ಮೊದಲನೆಯ ಪಂಕ್ತಿಯಲ್ಲಿ ಹೇಳಲಾಗಿದೆ. ಯಾರಾದರೊಬ್ಬನು ಒಂದು ಚಿಕ್ಕ ತಪ್ಪನ್ನು ಮಾಡಿದಾಗ, ಅದನ್ನು ಕಂಡು ಉದ್ವೇಗಕ್ಕೆ ಒಳಗಾಗುವುದು. ಅಥವಾ ಲೋಕಕ್ಕೆ ಉದ್ವೇಗ ತರುವಂತಹ ಕೆಲಸಗಳಲ್ಲಿ ತೊಡಗುವುದು—ಹೀಗೆ ಮಾಡು ವವರು ಭಕ್ತರಲ್ಲ.

ನಾವು ಭಗವದ್ಗೀತೆಯಿಂದ ಪಡೆಯುವ ಜ್ಞಾನ, ಮೇಲೆ ಹೇಳಿದ ಶ್ಲೋಕದಲ್ಲಿದೆ. ಬೇರೇನನ್ನೂ ನಾವು ತಿಳಿದುಕೊಳ್ಳುಬೇಕಾಗಿಲ್ಲ. ನಮ್ಮಿಂದ ಯಾರಿಗೂ ಯಾವ ವಿಧವಾದ ತೊಂದರೆಯೂ ಆಗಬಾರದು. ಯಾರಿಂದ ಏನು ನಡೆದರೂ ನಾವು ಉದ್ವೇಗ ಪಡಬಾರದು. ಮತ್ತು ಸಂತೋಷ, ದ್ವೇಷ, ಭಯ, ದುಃಖ, ಇವನ್ನು ನಾವು ಬಿಟ್ಟುಬಿಡಬೇಕು. ಇವೆಲ್ಲ ಲೋಕದಲ್ಲಿ ವ್ಯವಹರಿಸುವವನಿಗೆ ಬೇಕಾದದ್ದೇ ಅಥವಾ ಬ್ರಹ್ಮಜ್ಞಾನಿಗೆ ಬೇಕಾದದ್ದೇ—ಎಂದು ಕೇಳಿದರೆ, ಲೋಕ ವ್ಯವಹಾರ ಮಾಡು ವವನಿಗೆ ಇವು ಮೊದಲು ಬೇಕಾದವು—ಎಂದು ಹೇಳಬೇಕು. ಏಕೆಂದರೆ, ಬ್ರಹ್ಮಜ್ಞಾನಿಗೆ ಇದು ತಾನಾಗಿಯೇ ಬರುತ್ತದೆ. ನಾವು ಹಾಗಿರಲು ಕಲಿತುಕೊಳ್ಳಬೇಕು. ಬ್ರಹ್ಮ ಜ್ಞಾನಿಯ ಗುಣಗಳಾವುವೆಂದರೆ—

ಅದ್ವೇಷ್ಟಾ ಸರ್ವಭೂತಾನಾಂ ಮೈತ್ರಃ ಕರುಣ ಏವ ಚ।

(ಯಾವ ಪ್ರಾಣಿಯನ್ನೂ ದ್ವೇಷಮಾಡದವನು, ಎಲ್ಲರಿಗೂ ಸ್ನೇಹಿತ, ದಯಾಶಾಲಿ)

Sri Vidyabharathi Book Centre, Sringeri

CC-O. In Public Domain. Digitized by eGangotri

–ಎಂಬ ಭಗವದ್ವಾಕ್ಯವನ್ನೇ ನಾವು ತೆಗೆದುಕೊಳ್ಳಬೇಕು. "ಯಾರನ್ನೂ ದ್ವೇಷಿಸ ಬೇಡ, ಎಲ್ಲರಲ್ಲಿಯೂ ಪ್ರೀತಿಯಿಂದ, ಕರುಣೆಯಿಂದ ಇರು" ಎಂಬುದೇ ಭಗವಂತನ ಉಪದೇಶ. ರಾಮಾಶಾಸ್ತ್ರಿಗಳು ನಮಗೆ ಬೇಕಾದವರೆಂದರೆ, ಕೃಷ್ಣ ಶಾಸ್ತ್ರಿಗಳಿಗೆ ಕೋಪ ಬರುತ್ತದೆ. ಆದ್ದರಿಂದ –"ಬೇಡದವರು ಯಾರೂ ಇಲ್ಲ" ಎಂದು ಹೇಳಿಬಿಟ್ಟರೆ, ಯಾರಿಗೂ ಕೋಪವಿಲ್ಲ.

ಕೋಪ ಬರಬೇಕಾದರೆ ಮೊದಲು ಶರೀರದಲ್ಲಿ 'ಅಹಂಕಾರ' ಇರಬೇಕು. ಜ್ಞಾನಿಗೆ ಅದೂ ಅಲ್ಲ. ಏಕೆಂದರೆ –"ಏನೋ ನಡೆಯುತ್ತಿದೆ. ಅದನ್ನು ನಾನು ನೋಡು ತ್ತಿದ್ದೇನೆ. ಅದಕ್ಕೆ ನಾನು ಸಾಕ್ಷಿಯಾಗಿದ್ದೇನೆ" ಎಂದೇ ಅವನು ಭಾವಿಸುತ್ತಾನೆ. ಇಂತಹ ಭಾವನೆಯನ್ನೇ ನಾವೂ ಬೆಳಸಿಕೊಳ್ಳಬೇಕು. ಆಗಲೇ ನಾವೂ ಭಗವಂತನ ಪ್ರೀತಿಗೆ ಪಾತ್ರರಾಗುತ್ತೇವೆ. ಇಂತಹ ಸ್ಥಿತಿ ಯಾರಿಗೆ ಬೇಡ ? ಮಂತ್ರಿಗಳಿಗೂ ಬೇಕು ; ಲೋಕ ವ್ಯವಹಾರದಲ್ಲಿ ಬಾಳನ್ನು ನಡೆಸುವವರಿಗೂ ಬೇಕು. ಬ್ರಹ್ಮಜ್ಞಾನಿಗಾದರೊ ಇದು ಸಹಜವಾಗಿ ಇರುವ ಸ್ಥಿತಿ. ಬ್ರಹ್ಮಜ್ಞಾನಿಗಳಿಗೆ ಸಹಜವಾಗಿ ಯಾವ ಸ್ಥಿತಿ ಯಿರುವುದೋ ಅದು ಲೋಕವ್ಯವಹಾರದಲ್ಲಿ ಮುಳುಗಿರುವವರಿಗೆ ಅವಶ್ಯವಾಗಿ ಬೇಕು. ಇಂತಹ ಉಪದೇಶಗಳನ್ನೇ ಭಗವಂತನು ಗೀತೆಯಲ್ಲಿ ಮಾಡಿರುತ್ತಾನೆ.

ಇದರಿಂದ ಗೀತೆಯುನ್ನು ಓದುವುದು ತಪ್ಪೋ ಸರಿಯೋ ಎಂಬುದನ್ನು ನಾವು ನಿರ್ಣಯಿಸಿಕೊಳ್ಳಬಹುದು. ಕೆಲವರು ಇದನ್ನು ಓದದೆಯೇ ಬ್ರಹ್ಮಜ್ಞಾನಿಗಳಾಗಿರ ಬಹುದು; ಅಥವಾ ಬೇರೆ ಮಾರ್ಗದಿಂದ ಬ್ರಹ್ಮಜ್ಞಾನಿಗಳಾಗಿ ಇಂತಹ ಸದ್ಗುಣ ಗಳನ್ನೆಲ್ಲಾ ಪಡೆದಿರಬಹುದು. ಆದರೆ ನಾವು ಗೀತೆಯನ್ನು ಓದಿಯೇ ಇದನ್ನು ತಿಳಿದುಕೊಳ್ಳಬೇಕು. ಆದ್ದರಿಂದ "ಇವನು, ಅವನು," ಎಂಬ ಭೇದವಿಲ್ಲದೆ ಎಲ್ಲರೂ ಇದನ್ನು ಓದಿ ಶ್ರೇಯಸ್ಸನ್ನು ಪಡೆಯಲಿ.

ಆತ್ಮಜ್ಞಾನ :

ಇತರ ಚೇತನ ಪ್ರಾಣಿಗಳಲ್ಲಿ ಕಂಡು ಬರದ ಕೆಲವು ಶಕ್ತಿಗಳನ್ನು ನಾವು ಹೊಂದಿರು ತ್ತೇವೆ. ಅಂತಹ ಶಕ್ತಿಗಳಲ್ಲಿ ವಿಚಾರಶಕ್ತಿ ಒಂದು. ಈ ಶಕ್ತಿಯು ಪ್ರಾಣಿಗಳಲ್ಲಿ ಕಂಡು ಬಂದರೂ, ಅದು ಅಧಿಕವಾಗಿ ಕಂಡು ಬರುವುದಿಲ್ಲ. ಈ ವಿಚಾರ ಶಕ್ತಿಯ ಕಾರಣದಿಂದಲೇ ನಾವು ಪ್ರಾಣಿಗಳಿಗಿಂತ ಶ್ರೇಷ್ಠರು. ಈ ವಿಚಾರಶಕ್ತಿಯನ್ನು ಸರಿ ಯಾದ ರೀತಿಯಲ್ಲಿ ಉಪಯೋಗಿಸುವ ಸಾಮರ್ಥ್ಯವನ್ನೂ ನಾವು ಹೊಂದಿದ್ದೇವೆ. ನಿದ್ರಾಸ್ಥಿತಿಯನ್ನು ಬಿಟ್ಟು, ಈ ವಿಚಾರ ಶಕ್ತಿಯನ್ನು ಒಂದಲ್ಲ ಒಂದು ರೀತಿಯಲ್ಲಿ ಎಲ್ಲ ಸಮಯದಲ್ಲಿಯೂ ಉಪಯೋಗಿಸುತ್ತೇವೆ. ಈ ವಿಚಾರವೇ ಮನನ. ಇದು ಮಾನವನಿಗೆ ಸ್ವಾಭಾವಿಕ. ವಿವೇಕದ ಸರಿಯಾದ ಮಾರ್ಗವನ್ನು ನಾವು ನಿರ್ಧರಿಸ

Sri Vidyabharathi Book Centre, Sringeri

CC-O. In Public Domain. Digitized by eGangotri

ಬೇಕು. ಒಂದು ಕೆಲಸವನ್ನು ಮಾಡಲು ನಾವು ಯಾವಾಗಲೂ ಅವಶ್ಯವಾದ ಹಾಗೂ ಅನವಶ್ಯವಾದ ವಸ್ತುಗಳ ವಿಷಯದಲ್ಲಿ ವಿಚಾರ ಮಾಡುತ್ತೇವೆ. ಮನೆಯೆ ಮುಂತಾದ ವಸ್ತುಗಳಿಗೆ ನಾವು ಆಸಕ್ತರಾಗಿರುತ್ತೇವೆ. ಯಾರಿಗೂ ಯಾವಾಗಲೂ ಪ್ರೀತಿಪಾತ್ರವಾಗುವ ವಸ್ತುವಿಲ್ಲ. ನಮ್ಮನ್ನು ಬಿಟ್ಟು ಇತರ ವಸ್ತುಗಳು ಕೆಲವು ವೇಳೆ ಪ್ರಿಯವಾದರೂ, ಇತರ ಸಮಯಗಳಲ್ಲಿ ಅದನ್ನು ನಾವು ದ್ವೇಷಿಸುತ್ತೇವೆ; ಮತ್ತೆ ಇದಕ್ಕೆ, ವಿರುದ್ಧವೂ ಸತ್ಯವಾಗಿರುತ್ತದೆ. ಎಲ್ಲ ಕಾಲಗಳಲ್ಲಿಯೂ ಆತ್ಮನೇ ನಮಗೆ ಪ್ರಿಯವಾದುದು. ಸಿಹಿಯಾದ ಭೋಜನವು ಮೊದಲು ನಮಗೆ ಪ್ರಿಯವಾಗಿದ್ದರೂ ಕೊನೆಗೆ ಅದು ದ್ವೇಷಕ್ಕೆ ಕಾರಣವಾಗಬಹುದು. ನಮ್ಮ ನೈಜಸ್ಥಿತಿಯನ್ನೇ "ಆತ್ಮ" ಎಂದು ಕರೆಯಲಾಗಿದೆ. ಸಾಮಾನ್ಯವಾಗಿ ನಾವು ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿ ಎಂದು ಮೂರು ಅವಸ್ಥೆಗಳನ್ನು ಅನುಭವಿಸುತ್ತೇವೆ. ಈ ಮೂರು ಅವಸ್ಥೆಗಳಲ್ಲಿಯೂ ಸಾಕ್ಷಿಯೇ ತನಗೆ ಅತ್ಯಂತ ಪ್ರಿಯನಾದವನು. ವಿಚಾರಶಕ್ತಿಯನ್ನು ನಮ್ಮ ನೈಜ ಸ್ಥಿತಿಯ ವಿಮರ್ಶೆಗೆ ಉಪಯೋಗಿಸದೆ, ಕೇವಲ ಬಾಹ್ಯವಸ್ತುಗಳ ವಿಮರ್ಶೆಗೆ ಉಪಯೋಗಿಸಿದರೆ ನಮಗಿಂತ ಮೂರ್ಖರು ಇರುವುದಿಲ್ಲ. ತಿಳಿದಿರುವ ವಿಷಯಗಳ ಬಗ್ಗೆ ವಿಚಾರಮಾಡಬೇಕಾಗಿಲ್ಲ. "ಊಟಮಾಡುವುದರಿಂದ ತೃಪ್ತಿಯಾಗುತ್ತದೆ" ಎಂಬುದು ಮೇಲಿನದಕ್ಕೆ ಉದಾಹರಣೆ. ತಿಳಿಯದ ವಸ್ತುಗಳನ್ನು ಕುರಿತು ವಿಚಾರ ಮಾಡಲು ಸಾಧ್ಯವಿಲ್ಲ. ನಾವು ಅಸ್ತಿತ್ವದಲ್ಲಿದ್ದೇವೆ ಎಂಬುದು ಎಲ್ಲರಿಗೂ ತಿಳಿದ ವಿಷಯ ಆದರೆ, ನಮಗೆ ತಿಳಿಯದಿರುವುದೇನೆಂದರೆ, ನಮ್ಮ ನೈಜಸ್ಥಿತಿ. ಹೀಗೆ, ನಮ್ಮ ನೈಜ ಸ್ಥಿತಿಯ ಬಗ್ಗೆ ನಾವು ಸಂಪೂರ್ಣವಾಗಿ ಅಜ್ಞರೂ ಅಲ್ಲ. ನಾವು ಸಂಪೂರ್ಣವಾಗಿ ತಿಳಿದೂ ಇಲ್ಲ. ಆದ್ದರಿಂದ, ಈ ವಿಷಯವನ್ನು ಕುರಿತೇ ನಾವೂ ವಿಚಾರ ಮಾಡಬೇಕಾದುದು. ವಿಚಾರಮಾಡಬೇಕಾದರೆ ಸರಿಯಾದ ಸಾಧನಗಳುಬೇಕು ಸರಿಯಾದ ಸಾಧನಗಳಿಲ್ಲದೆ, ನಾವು ಯಾವುದನ್ನು ಸಾಧಿಸಲೂ ಸಾಧ್ಯವಿಲ್ಲ. ನಾವು ಓಡಾಡುವುದಕ್ಕೆ ಕಾಲುಗಳು ಅವಶ್ಯ. ಅಂತರಿಕ್ಷದಲ್ಲಿ ಯಾನ ಮಾಡುವುದಕ್ಕೆ ವಿಮಾನ ಅವಶ್ಯ. ವಿಮಾನವನ್ನು ತಯಾರು ಮಾಡಿದ ನಂತರವೇ ನಾವು ಅಂತರಿಕ್ಷದಲ್ಲಿ ಯಾನ ಮಾಡಲು ಸಾಧ್ಯ. ವಿಮಾನವು ಅಂತರಿಕ್ಷದಲ್ಲಿ ಹಾರಾಡಲು ಶಕ್ತವಾಗಿರಬೇಕು. ಸ್ವತಃ ವಿಮಾನವನ್ನು ತಯಾರುಮಾಡಲು ಶಕ್ತಿ ಇಲ್ಲದವರು, ಇತರರು ಮಾಡಿದ್ದನ್ನು ಉಪಯೋಗಿಸುತ್ತಾರೆ. ಆದ್ದರಿಂದ ಅಂತರಿಕ್ಷದಲ್ಲಿ ಹಾರಾಡಬೇಕೆಂಬ ನಮ್ಮ ಆಶೆಯು ಈಡೇರಬೇಕಾದರೆ, ಈ ಮೇಲೆ ಹೇಳಿದ ಸರಿಯಾದ ಸಾಧನವನ್ನುಪಯೋಗಿಸಬೇಕು.

ಆದ್ದರಿಂದ, ಯಾವುದೇ ಗುರಿಯನ್ನು ಹೊಂದಬೇಕಾದರೂ, ಸರಿಯಾದ ಸಾಧನವು ಅವಶ್ಯ. ನಮಗೆ ಅಭಿಲಷಿತವಾದ ಫಲವನ್ನು ಹೊಂದಲು ಬೇಕಾದ ಈ ಸಾಧನಗಳು ನಮ್ಮವಾಗಿರಬಹುದು ಅಥವಾ ಬೇರೆಯವರು ತಯಾರು ಮಾಡಿದವಾಗಿರಬಹುದು. ಆ ಸಾಧನಗಳಿಂದ ನಮ್ಮ ಗುರಿಯನ್ನು ಹೊಂದಬಹುದು. ಶ್ರೀ ಶಂಕರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವತ್ಪಾದರ ಕೃತಿಗಳು ನಮಗೆ ಸಾಧನಗಳನ್ನು ಒದಗಿಸುತ್ತವೆ. ಅವರ ಗ್ರಂಥಗಳಲ್ಲಿ ಆತ್ಮ ಅನಾತ್ಮಗಳ ನೈಜ ಸ್ಥಿತಿಯನ್ನು ವಿಚಾರ ಮಾಡಲಾಗಿದೆ—

ಜಾಗ್ರತ್ಸ್ವಪ್ನ ಸುಷುಪ್ತಿಷು ಸ್ಫುಟತರಂ ಯೋऽಸೌ ಸಮುಜ್ಜೃಂಭತೇ
ಪ್ರತ್ಯಗ್ರೂಪತಯಾ ಸದಾಹಮಹಮಿತ್ಯಂತಃ ಸ್ಫುರನ್ನೇಕಧಾ ।
ನಾನಾಕಾರವಿಕಾರಭಾಜಿನ ಇಮಾನ್ ಪಶ್ಯನ್ನಹಂಧೀಮುಖಾನ್
ನಿತ್ಯಾನಂದ ಚಿದಾತ್ಮನಾ ಸ್ಫುರತಿ ತಂ ವಿದ್ಧಿ ಸ್ವಮೇತಂ ಹೃದಿ ॥

[ಜಾಗ್ರತ್, ಸ್ವಪ್ನ ಮತ್ತು ಸುಷುಪ್ತಿಗಳಲ್ಲಿ ಯಾವುದು ಸ್ವತಂತ್ರವಾಗಿ ಹಾಗೂ ಸ್ಫುಟವಾಗಿ ಪ್ರಕಾಶಿಸುತ್ತಿದೆಯೋ, ಯಾವುದು ಅಂತರ್ಯದಲ್ಲಿ ಪ್ರತ್ಯಗ್ರೂಪದಿಂದ ಪ್ರಕಾಶಿಸುವುದೋ, ಯಾವುದು ಎಲ್ಲ ವಿಕಾರಗಳಿಗೂ ಮತ್ತು ಅಹಂಕಾರಕ್ಕೂ ಸಾಕ್ಷಿಯಾಗಿದೆಯೋ, ಅದನ್ನೇ ಹೃದಯದಲ್ಲಿರುವ ಮತ್ತು ಪರಮ ಆನಂದ ಹಾಗೂ ಜ್ಞಾನ ಸ್ವರೂಪವಾದ ಆತ್ಮ ಎಂದು ತಿಳಿ].

ನಮ್ಮ ವಿಷಯದಲ್ಲಿ ಆಶ್ಚರ್ಯಕರವಾದುದೊಂದಿದೆ. ವಿಚಾರವು ಸೂಚಿಸುವಂತೆ, ನಮ್ಮ ಅನುಭವ ಮತ್ತು ನೈಜಸ್ಥಿತಿಯ ನಡುವೆ ದೊಡ್ಡ ವಿರೋಧವಿದೆ. ಸಂತೋಷ, ದುಃಖ ಮತ್ತು ಮೃತ್ಯು-ಇವುಗಳನ್ನು ಅನುಭವಿಸುತ್ತೇವೆ. ಸಂತೋಷ ಹಾಗೂ ದುಃಖಗಳು ಆಧ್ಯಾತ್ಮಿಕಾ ಆಧಿದೈವಿಕ ಮತ್ತು ಆಧಿಭೌತಿಕ ಎಂದು ಮೂರು ವಿಧ. ಇವುಗಳಿಂದ ಬಿಡುಗಡೆ ಇರುವಂತೆ ಕಾಣುವುದಿಲ್ಲ. ಆದುದರಿಂದ, ಭಿಕ್ಷುಕನೊಬ್ಬನನ್ನು ರಾಜನೆಂದು ಕರೆದು ಹಾಸ್ಯಮಾಡುವಂತೆ, ಶ್ಲೋಕವು ಕಂಡು ಬರಬಹುದು. ಆದರೆ, ವಸ್ತು ಸ್ಥಿತಿ ಹಾಗಲ್ಲ. (ಏಕೆಂದರೆ, ಎಲ್ಲ ದುಃಖಗಳಿಂದ ನಾವು ನಿವೃತ್ತರಾಗಿದ್ದೇವೆಂದು ಸೂಚಿತವಾಗಿದೆ.). ಅಂತಹ ಪೂಜ್ಯವಾದ ಗ್ರಂಥವು ಕೇವಲ ಹಾಸ್ಯಕ್ಕಾಗಿ ರಚಿತವಾದುದಲ್ಲ.

ಶಾಂತೋ ಮಹಾಂತೋ ನಿವಸಂತಿ ಸಂತಃ
ವಸಂತವ ಲ್ಲೋಕಹಿತಂ ಚರಂತಃ ।
ತೀರ್ಣಾಃ ಸ್ವಯಂ ಭೀಮಭವಾರ್ಣವಂ
ಜನಾನಹೇತುನಾऽನ್ಯಾನಪಿ ತಾರಯಂತಃ ॥

[ಶಾಂತರೂ ಮಹಾತ್ಮರೂ ಆದ ಸತ್ಪುರುಷರಿದ್ದಾರೆ ; ಅವರು ವಸಂತಮಾಸದಂತೆ ಲೋಕಹಿತಕ್ಕಾಗಿ ಪ್ರಯತ್ನಮಾಡುತ್ತಿರುತ್ತಾರೆ. ಭಯಂಕರವಾದ ಜನನ-ಮರಣವೆಂಬ ಸಮುದ್ರವನ್ನು ಸ್ವತಃ ದಾಟಿ, ಯಾವ ಕಾರಣವೂ ಇಲ್ಲದೆ, ಇತರರೂ ಅದನ್ನು ದಾಟುವುದಕ್ಕೆ ಸಹಾಯ ಮಾಡುತ್ತಾರೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ, ಹಿಂದಿನ ಶ್ಲೋಕದಲ್ಲಿ ನಮ್ಮ ಅನುಭವದ ವಿಷಯದಲ್ಲಿ ಬಂದಿರುವ ಉಲ್ಲೇಖವು, ಭಿಕ್ಷುಕನೊಬ್ಬನನ್ನು ಕುರಿತು "ನೀನು ಒಬ್ಬ ರಾಜ" ಎಂದು ಕರೆದು ಅಪಹಾಸ್ಯ ಮಾಡುವುದಕ್ಕೆ ಸದೃಶವಾಗಿಲ್ಲ. ಆದರೆ, ತನ್ನ ನೈಜ ಸ್ಥಿತಿಯನ್ನು ಮರೆತಿದ್ದ ರಾಜಕುಮಾರನನ್ನು ಕುರಿತು "ನೀನು ಹಿಂದೆ ರಾಜಕುಮಾರನಾಗಿದ್ದೆ" ಎಂದು ಜ್ಞಾಪಿಸುವುದಕ್ಕೆ ಅದು ಸದೃಶವಾಗಿದೆ. ಅನಂತ ಆನಂದ ಸ್ವರೂಪರಾದ ನಾವು ವಿಶ್ವವನ್ನು ಯಾವರೀತಿ ಕಾಣುತ್ತೇವೆಂಬ ಪ್ರಶ್ನೆಯನ್ನು ಸ್ವತಃ ಭಗವತ್ಪಾದರೇ ಎತ್ತಿದ್ದಾರೆ.

ಪ್ರಜ್ಞಾವಾನಪಿ ಪಂಡಿತೋಽಪಿ ಚತುರೋಽಪ್ಯತ್ಯಂತ ಸೂಕ್ಷ್ಮಾರ್ಥದೃ-
ಗ್ವ್ಯಾಲೀಢಸ್ತಮಸಾ ನವೇತ್ತಿ ಬಹುಧಾ ಸಂಬೋಧಿತೋಽಪಿ ಸ್ಫುಟಮ್
ಭ್ರಾಂತ್ಯಾರೋಪಿತಮೇವ ಸಾಧುಕಲಯತ್ಯಾಲಂಬತೇ ತದ್ಗುಣಾನ್
ಹಂತಾಸೌ ಪ್ರಬಲಾ ದುರಂತತಮಸಃ ಶಕ್ತಿರ್ಮಹತ್ಯಾವೃತಿಃ ||

[ಚತುರನೂ, ಸೂಕ್ಷ್ಮವಾದ ಆತ್ಮದರ್ಶನ ಹೊಂದಲು ಸಮರ್ಥನಾದ ಪ್ರಾಜ್ಞನೂ ಪಂಡಿತನೂ ಆಗಿರುವ ವ್ಯಕ್ತಿಯು ತಮಸ್ಸಿನಿಂದ ಆವೃತನಾಗಿರುತ್ತಾನೆ. ಹಾಗೂ ಅನೇಕ ರೀತಿಯಲ್ಲಿ ಸ್ಪಷ್ಟವಾಗಿ ಬೋಧಿತನಾದರೂ ಆತ್ಮನನ್ನು ತಿಳಿಯುವುದಿಲ್ಲ; ಭ್ರಾಂತಿಯಿಂದ ಆರೋಪಿತವಾಗಿರುವುದನ್ನೇ ವಾಸ್ತವವೆಂದು ತಿಳಿದು, ಅದರ ಗುಣಗಳಲ್ಲಿ ಆಸಕ್ತನಾಗುತ್ತಾನೆ; ಆಹಾ ! ಭೀಕರವಾದ ತಮಸ್ಸಿನ ಆವರಣ ಶಕ್ತಿಯು ಎಷ್ಟು ಪ್ರಭಾವಶಾಲಿಯಾದುದು!]

—

ನಮ್ಮ ನೈಜ ಸ್ಥಿತಿಯ ಅಜ್ಞಾನವೇ ಅವಿದ್ಯೆ. ಅವಿದ್ಯೆಗೆ ಎರಡು ಶಕ್ತಿಗಳಿವೆ– ಒಂದು ಆವರಣಶಕ್ತಿ, ಮತ್ತೊಂದು ವಿಕ್ಷೇಪಶಕ್ತಿ. ಮಾಯೆಯು ತನ್ನ ಆವರಣಶಕ್ತಿಯಿಂದ ವಸ್ತುವಿನ ನೈಜ ಸ್ವರೂಪವನ್ನು ಆವರಿಸುತ್ತದೆ; ಆದ್ದರಿಂದ ವಸ್ತುವಿನ ನೈಜ ಸ್ವರೂಪದ ವಿಷಯದಲ್ಲಿ ನಾವು ಅಜ್ಞರಾಗುತ್ತೇವೆ. ಮಾಯೆಯ ವಿಕ್ಷೇಪ ಶಕ್ತಿಯ ಪ್ರಭಾವದಿಂದ ವಸ್ತುವಿನಲ್ಲಿ ವೈವಿಧ್ಯತೆಯು ಆವಿರ್ಭವಿಸುತ್ತದೆ. ಜೀವ ಸ್ವರೂಪ, ಹಾಗೂ "ನಾನು ಭೋಕ್ತೃ," 'ನಾನು ಕರ್ತೃ', 'ನಾನು' 'ನನ್ನದು' ಎಂಬ ಭಾವನೆಗಳೆಲ್ಲವೂ ವಿಕ್ಷೇಪಶಕ್ತಿಯ ಪ್ರಭಾವ. ಎಲ್ಲ ದುಃಖಗಳಿಗೂ ಇದೇ ಮೂಲ. ಇದನ್ನೇ ಸಂಸಾರ ಎಂಬ ಕರೆಯುವುದು. ಇದನ್ನು ನಿವಾರಿಸಿಕೊಳ್ಳುವುದಕ್ಕೆ ಏನಾದರೂ ಮಾರ್ಗವಿದೆಯೇ ಎಂದು ವಿಮರ್ಶಿಸೋಣ. ಬಂಧವು ಅವಿದ್ಯೆಯಿಂದ ಉಂಟಾಗುತ್ತದೆ ಅವಿದ್ಯೆಯನ್ನು ನಿವಾರಿಸುವುದಕ್ಕೆ ಜ್ಞಾನ ಅವಶ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಜ್ಞಾನವು ಪ್ರಮಾ ಮತ್ತು ಭ್ರಮಾ ಎಂದು ಎರಡು ವಿಧವಾಗಿದೆ. ಭ್ರಮೆಯ ಕಾರಣದಿಂದ ಶುಕ್ತಿರಜತವು ಬೆಳ್ಳಿಯಂತೆ ಪ್ರತೀತಿವಾಗುವಂತೆ, ಜಗತ್ತೂ ಪ್ರತೀತವಾಗುತ್ತದೆ. ಭ್ರಮೆಯನ್ನು ಯಾವ ಕರ್ಮ ಅಥವಾ ಉಪಾಸನೆಯೂ ನಿವಾರಿಸಲಾರದು. ಬಂಧವು ಮಾನವನಿಗೆ ಸಹಜವಾದುದಲ್ಲ. ಅದು ಮಾನವನಿಗೆ ಸಹಜವಾಗಿದ್ದಿದ್ದರೆ, ಅದನ್ನು ನಿವಾರಣೆಮಾಡಿಕೊಳ್ಳಲು ಸಾಧ್ಯವಿಲ್ಲ. ಜ್ಞಾನದಿಂದಲೂ ಅದನ್ನು ನಿವಾರಣೆ ಮಾಡಲು ಆಗುತ್ತಿರಲಿಲ್ಲ.

ಜ್ಞಾತ್ವಾ ದೇವಂ ಸರ್ವಪಾಶಾಪಹಾನಿಃ ।

(ಪರಮಾತ್ಮನನ್ನು ತಿಳಿದ ಮೇಲೆ ಎಲ್ಲ ಬಂಧಗಳೂ ನಾಶವಾಗುತ್ತವೆ.)

ತಮೇವ ವಿದಿತ್ವಾತಿಮೃತ್ಯುಮೇತಿ ।

(ಅವನನ್ನು ತಿಳಿಯುವುದರಿಂದ ಮೃತ್ಯುವನ್ನು ದಾಟಬಹುದು.)

ಜ್ಞಾನವೊಂದೇ ಬಂಧವನ್ನು ನಿವಾರಣೆಮಾಡುವುದೆಂದು ಈ ಶ್ರುತಿಗಳು ತಿಳಿಸುತ್ತವೆ. ಕರ್ತೃತ್ವಭಾವನೆಯಾಗಲೀ ಅಥವಾ ಭೋಕ್ತೃತ್ವಭಾವನೆಯಾಗಲೀ ಅಥವಾ ಜಾಗ್ರತ್ ಅಥವಾ ಸ್ವಪ್ನಾವಸ್ಥೆಯಾಗಲೀ, ಯಾವುದು ಸತ್ಯವಾದುದೋ ಅದು ಎಲ್ಲ ಕಾಲದಲ್ಲಿಯೂ ಇರಬೇಕು. ಜಾಗ್ರದವಸ್ಥೆಯು ಸ್ವಪ್ನದ ಕಾಲದಲ್ಲಿ ಇರುವುದಿಲ್ಲ ಮತ್ತು ಸ್ವಪ್ನಾವಸ್ಥೆಯಲ್ಲಿ ಜಾಗ್ರದವಸ್ಥೆಯಿರುವುದಿಲ್ಲ. ಸುಷುಪ್ತ್ಯವಸ್ಥೆಯಲ್ಲಿ ಇವೆರಡೂ ಇರುವುದಿಲ್ಲ. ಈ ಎಲ್ಲ ಅವಸ್ಥೆಗಳಲ್ಲಿಯೂ ಆತ್ಮವು ಇರುತ್ತದೆ. (ಆದರೆ ಈ ಮೂರು ಅವಸ್ಥೆಗಳು ಯಾವಾಗಲೂ ಇರುವುದಿಲ್ಲ.)

ಆದಾವಂತೇ ಚ ಯನ್ನಾಸ್ತಿ ವರ್ತಮಾನೇಽಪಿ ತತ್ತಥಾ ।

(ಮೊದಲು ಮತ್ತು ಕೊನೆಯಲ್ಲಿ ಯಾವುದು ಇರುವುದಿಲ್ಲವೋ ಅದು ವರ್ತಮಾನದಲ್ಲೂ ಇರುವುದಿಲ್ಲ.)

ಜನನ ಮತ್ತು ಮರಣಕ್ಕೆ ವಿಷಯವಾಗುವುದು ಕೇವಲ ಭ್ರಾಂತಿ. ಆತ್ಮನನ್ನು ಪ್ರಕಾಶಪಡಿಸುವುದಕ್ಕೆ ಮತ್ತೊಂದು ದೀಪದ ಅವಶ್ಯಕತೆ ಇರುವುದಿಲ್ಲ ; ಏಕೆಂದರೆ ಅದು ಸ್ವಪ್ರಕಾಶ. ನಾವು ಇದ್ದೇವೆ ಎಂಬುದನ್ನು ಇನ್ನೊಬ್ಬರಿಂದ ತಿಳಿಯುವ ಅವಶ್ಯಕತೆ ಇಲ್ಲ. ಸುಷುಪ್ತಿಯಲ್ಲಿ ಲೌಕಿಕ ವಸ್ತುಗಳ ಸಂಪರ್ಕವಿಲ್ಲದ ಆನಂದವಿರುತ್ತದೆ. ಈ ಆನಂದವನ್ನು ಮಾನವನು ಅನುಭವಿಸುವುದು ಅವಶ್ಯವಲ್ಲವೇ ? ವಸ್ತುಗಳನ್ನು ಮತ್ತು ಕರ್ಮಗಳನ್ನು ಬಿಟ್ಟು ನಾವು ಸುಷುಪ್ತಿಯನ್ನು ಆಶ್ರಯಿಸುತ್ತೇವೆ. ಆದ್ದರಿಂದ ಆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅವಸ್ಥೆಯಲ್ಲಿ ವಿಶಿಷ್ಟವಾದ ಆನಂದವಿದೆಯೆಂದು ನಾವು ಅವಶ್ಯವಾಗಿ ಒಪ್ಪಬೇಕೇ? ಆ ಸುಷುಪ್ತಿಯಲ್ಲಿ ಯಾವ ವಸ್ತುಗಳು ಇರುತ್ತವೆ? ಯಾವ ಇಂದ್ರಿಯ ಕೆಲಸಮಾಡುತ್ತಿರುವುದು? ಆತ್ಮವು ಅಖಂಡ ಆನಂದ ಸ್ವರೂಪವಾಗಿರದಿದ್ದರೆ, ಯಾವು ವಸ್ತುವು ಇಲ್ಲದಿದ್ದರೂ, ಸುಷುಪ್ತಿಯಲ್ಲಿ ಆನಂದದ ಅನುಭವವು ಹೇಗೆ ಆಗುತ್ತಿತ್ತು? (ಇಂತಹ ಪ್ರಶ್ನೆಯನ್ನು ಎತ್ತಬಹುದು.) ಸುಷುಪ್ತಿಯಲ್ಲಿ ವಿಕ್ಷೇಪಶಕ್ತಿಯಿರುವುದಿಲ್ಲ. ಆ ಅವಸ್ಥೆಯಲ್ಲಿ ಆವರಣಶಕ್ತಿ ಇರುತ್ತದೆ. ಈ ಆವರಣವನ್ನು ನಿವಾರಣೆಮಾಡುವುದಕ್ಕಾಗಿಯೇ ಆತ್ಮಾನುಭವವು ಅವಶ್ಯ. (ಆದ್ದರಿಂದ ಸುಷುಪ್ತಿಯು ಅಜ್ಞಾನವನ್ನು ನಿವಾರಣೆ ಮಾಡುವುದಿಲ್ಲ). ಸಾಕ್ಷಾತ್ಕಾರವನ್ನು ಹೊಂದಲು ಮಾರ್ಗ ಯಾವುದು?

ಸ್ವಸ್ಯಾವಿದ್ಯಾಬಂಧಸಂಬಂಧಮೋಕ್ಷಾತ್
ಸತ್ಯಜ್ಞಾನಾನಂದರೂಪಾತ್ಮಲಬ್ಧೌ ।
ಶಾಸ್ತ್ರಂ ಯುಕ್ತಿರ್ದೇಶಿಕೋಕ್ತಿಃ ಪ್ರಮಾಣಂ ।
ಚಾಂತಃಸಿದ್ಧಾ ಸ್ವಾನುಭೂತಿಃ ಪ್ರಮಾಣಮ್ ॥

(ಅವಿದ್ಯಾಬಂಧದ ಸಂಬಂಧದಿಂದ ವಿಮೋಚನೆ ಹೊಂದಲು, ಮತ್ತು ಸಚ್ಚಿದಾನಂದ ಸ್ವರೂಪವಾದ ಆತ್ಮನನ್ನು ಹೊಂದಲು, ಶಾಸ್ತ್ರಗಳು, ಯುಕ್ತಿ ಮತ್ತು ಗುರೂಪದೇಶ ಪ್ರಮಾಣಗಳು. ಜೊತೆಗೆ ಅಂತಸ್ಸಿದ್ಧವಾದ ಸ್ವಾನುಭೂತಿಯೂ ಸಹ ಪ್ರಮಾಣವಾಗುತ್ತದೆ.)

ಶಾಸ್ತ್ರಗಳು ಎಂದರೆ ಉಪನಿಷತ್ತುಗಳು. ಅವು ಹೀಗೆ ಹೇಳುತ್ತವೆ—

ಸ ಯಶ್ಚಾಯಂ ಪುರುಷೇ ॥ ಯಶ್ಚಾಸಾವಾದಿತ್ಯೇ । ಸ ಏಕಃ ।

(ಯಾರು ಪುರುಷನಲ್ಲಿರುತ್ತಾನೋ ಹಾಗೂ ಸೂರ್ಯನಲ್ಲಿರುತ್ತಾನೋ ಅವನು ಒಬ್ಬನೇ).

ಬ್ರಹ್ಮವಿದಾಪ್ನೋತಿ ಪರಮ್ ।

(ಬ್ರಹ್ಮನನ್ನು ತಿಳಿದವನು ಪರಮಾತ್ಮನನ್ನು ಹೊಂದುತ್ತಾನೆ).

ಯದಾ ಹ್ಯೇವೈಷ ಏತಸ್ಮಿನ್ನುದರಮಂತರಂ ಕುರುತೇ । ಅಥ ತಸ್ಯ ಭಯಂ ಭವತಿ ।

(ದ್ವೈತವನ್ನು ಅನುಭವಿಸುವವನಿಗೆ, ಹೆದರಿಕೆ ಇರುತ್ತದೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂತಹ ವಾಕ್ಯಗಳು ವೇದಗಳಲ್ಲಿ ಕಂಡು ಬರುತ್ತವೆ. ಇದು ಶಾಸ್ತ್ರೀಯ ಸಂದೇಶ. ತರ್ಕವನ್ನು ಹಿಂದೆಯೇ ವಿವರಿಸಲಾಗಿದೆ. ಅಧ್ಯಯನ, ಅಭ್ಯಾಸ ಮತ್ತು ಸರಿಯಾದ ಶಿಕ್ಷಣದಿಂದ ಕೆಲವು ಕೌಶಲ್ಯಗಳನ್ನು ಹೊಂದಬಹುದು. ಶಿಲ್ಪ ಮತ್ತು ವಿಜ್ಞಾನ ಈ ಮೇಲಿನ ಜಾತಿಗೆ ಸೇರುತ್ತವೆ ; ಆದರೆ ಇಲ್ಲಿ ಗುರುಗಳ ಉಪದೇಶ ಮಾತ್ರ ಸಾಲದು, ಅನುಭವವೂ ಅವಶ್ಯ. ಕೇವಲ ಶಬ್ದಗಳನ್ನು ಮಾತ್ರ ಕೇಳುವುದು ಪರ್ಯಾಪ್ತವಲ್ಲ. ಸ್ವಾನುಭವ ಉದಯಿಸಬೇಕು.

ಸಾಂಸಾರಿಕ ಸುಖಾಸಕ್ತಮಹಂ ಬ್ರಹ್ಮೇತಿವಾದಿನಮ್ ।
ಕರ್ಮಬ್ರಹ್ಮೋಭಯಭ್ರಷ್ಟಂ ತಂ ತ್ಯಜೇದಂತ್ಯಜಂ ಯಥಾ ॥

(ಸಾಂಸಾರಿಕ ಸುಖಗಳಲ್ಲಿ ಆಸಕ್ತನಾಗಿದ್ದು, "ನಾನು ಬ್ರಹ್ಮ" ಎಂದು ಹೇಳುವವನು ಕರ್ಮ ಮತ್ತು ಬ್ರಹ್ಮದಿಂದ ಭ್ರಷ್ಟನಾಗುತ್ತಾನೆ. ಅಂತ್ಯಜನಂತೆ ಅವನನ್ನು ತ್ಯಜಿಸಬೇಕು.)

ಸತ್ಯದ ಅನುಭವವನ್ನು ಹೊಂದಿರುವವನು ಅದೃಷ್ಟಶಾಲಿ. ಅವನೊಬ್ಬನೇ ವಿಚಾರದಲ್ಲಿ ಕುಶಲ. ಸಾಮಾನ್ಯವಾಗಿ ನಮ್ಮಲ್ಲಿ ಕಂಡುಬರುವ ವಿಚಾರಶಕ್ತಿಯು ಅವನಲ್ಲಿ ಪರಿಪೂರ್ಣವಾಗಿರುತ್ತದೆ.

ಅಂತಹ ವ್ಯಕ್ತಿಯ ಅಸ್ತಿತ್ವದ ಅವಸ್ಥೆಯು ಯಾವ ರೀತಿ ಇರುತ್ತದೆ?

ಶಾಂತೋದಾಂತಃ ಪರಮುಪರತಃ ಕ್ಷಾಂತಿಯುಕ್ತಸ್ಸಮಾಧಿಂ
ಕುರ್ವನ್ನಿತ್ಯಂ ಕಲಯತಿ ಯತಿಃ ಸ್ವಸ್ಯ ಸರ್ವಾತ್ಮಭಾವಮ್ ।
ತೇನಾವಿದ್ಯಾತಿಮಿರಜನಿತಾನ್ ಸಾಧು ದಗ್ಧ್ವಾವಿಕಲ್ಪಾನ್
ಬ್ರಹ್ಮಾಕೃತ್ಯಾ ನಿವಸತಿ ಸುಖಂ ನಿಷ್ಕ್ರಿಯೋ ನಿರ್ವಿಕಲ್ಪಃ ॥

(ಮನಸ್ಸು ಮತ್ತು ಅಂತಃಕರಣಗಳನ್ನು ನಿಗ್ರಹಿಸಿ, ಎಲ್ಲ ಕರ್ಮಗಳಿಂದಲೂ ವಿಮೋಚನೆ ಹೊಂದಿ, ಮನಸ್ಸು ಪರಮಾತ್ಮನಲ್ಲಿ ಲೀನವಾಗುವಂತೆ ಮಾಡಿ, ಎಲ್ಲೆಡೆಯಲ್ಲಿಯೂ ಆತ್ಮನನ್ನು ಅನುಭವಿಸುತ್ತಾ, ಸಮಾಧಿಯಿಂದ ಅವಿದ್ಯಾಂಧಕಾರವನ್ನು ನಿವಾರಣೆಮಾಡುತ್ತಾ, ಯಾವ ಸಂದೇಹ ಮತ್ತು ಕರ್ಮಗಳಿಲ್ಲದೆ ಬ್ರಹ್ಮದಂತೆ ಸುಖವಾಗಿ ಇರುತ್ತಾನೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಸತ್ಪುರುಷರನ್ನು ಕುರಿತು ಚಿಂತನೆಮಾಡುವುದೂ ಆತ್ಮಶ್ರೇಯಸ್ಸಿಗೆ ಕಾರಣವೆಂದು ತಿಳಿಸಲಾಗಿದೆ. ವಾಸ್ತವವಾಗಿ ಸತ್ ಎಂದರೆ ಬ್ರಹ್ಮ ಎಂದರ್ಥ. ಬ್ರಹ್ಮದಲ್ಲಿರುವವರೇ ವಾಸ್ತವವಾಗಿ ಸತ್ಪುರುಷರು. ಅಂತಹ ಸತ್ಪುರುಷರೇ ಈ ಕೆಳಗಿನ ಶ್ರುತಿ ವಾಕ್ಯದ ಅರ್ಥವನ್ನು ನೇರವಾಗಿ ನಮಗೆ ತೋರಿಸುತ್ತಾರೆ.

ಬ್ರಹ್ಮವಿತ್ ಬ್ರಹ್ಮೈವ ಭವತಿ ।

(ಬ್ರಹ್ಮಜ್ಞಾನಿಯಾದವನು ಬ್ರಹ್ಮನೇ ಆಗುತ್ತಾನೆ).

ಸತ್ ಶಬ್ದವನ್ನು ಇತರರ ವಿಷಯದಲ್ಲಿ ಪ್ರಯೋಗಮಾಡುವುದು ಕೇವಲ ಆಲಂಕಾರಿಕವಾಗಿ ಮಾತ್ರ ; ಅಂದರೆ ಲಾಕ್ಷಣಿಕ ಪ್ರಯೋಗ (ವೀರನಾದ ವ್ಯಕ್ತಿಯೊಬ್ಬನನ್ನು ಸಿಂಹ ಎಂದು ಕರೆಯುವುದು ಲಾಕ್ಷಣಿಕ ಪ್ರಯೋಗದ ಉದಾಹರಣೆ). ಅಂತಹ ಸತ್ಪುರುಷರಾಗುವುದಕ್ಕೆ ನಾವು ಪ್ರಯತ್ನಪಡಬೇಕು.

ಮೇಲೆ ಹೇಳಲಾಗಿರುವ ಎಲ್ಲ ಗುಣಗಳಿಂದ ಕೂಡಿದ್ದ ನಮ್ಮ ಶ್ರೇಷ್ಠ ಗುರುಗಳನ್ನು ಧ್ಯಾನಿಸುತ್ತ, ಈ ಪ್ರವಚನವನ್ನು ಮುಗಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಧಾರ್ಮಿಕ ಮಾರ್ಗದರ್ಶನಕ್ಕೆ ಶಾಸ್ತ್ರಗಳು ಅವಶ್ಯವೇ ?

ಪರಮಾತ್ಮನ ಸೃಷ್ಟಿಯಲ್ಲಿ ಮಾನವನು "ಪರಿಪೂರ್ಣತೆ"ಯನ್ನು ತಲಪಿದ್ದಾನೆ. ಅವನು ಯಾವುದರಲ್ಲಿ "ಪರಿಪೂರ್ಣತೆ"ಯನ್ನು ಹೊಂದಿದ್ದಾನೆ? ಅದು ಆಕಾರದಲ್ಲಿ ಇರಲಾರದು, ಏಕೆಂದರೆ ಆನೆಯು ಮಾನವನಿಗಿಂತ ಆಕಾರದಲ್ಲಿ ಬಹು ದೊಡ್ಡದು. ಶಕ್ತಿಯಲ್ಲೂ ಇರಲಾರದು, ಏಕೆಂದರೆ ಅನೇಕ ಪ್ರಾಣಿಗಳ ಶಕ್ತಿಯು ಮಾನವನಿಗಿಂತ ಅಧಿಕವಾಗಿದೆ. ದುಃಖಗಳನ್ನು ಅನುಭವಿಸುವುದರಲ್ಲಿಯೆ? ಇದನ್ನ ಕೇವಲ ಆಂಶಿಕವಾಗಿ ಒಪ್ಪಬಹುದು. ಯಾರೂ ಸಹ ದುಃಖದ ಪರಾಕಾಷ್ಠತೆಯನ್ನು ಮುಟ್ಟಿರಲಾರರು. ಹಾಗಾದರೆ, ಸೌಖ್ಯಗಳನ್ನು ಅನುಭವಿಸುವದು ಅವನ ಸಾಮರ್ಥ್ಯದಲ್ಲಿಯೋ ? ಇದನ್ನೂ ಸಹ ನಾವು ಅಂಗೀಕರಿಸಲು ಸಾಧ್ಯವಿಲ್ಲ. ಸಂಪತ್ತಿನ ವಿಷಯದಲ್ಲಿಯೂ ಅಲ್ಲ, ಏಕೆಂದರೆ, ಸಂಪತ್ತೆಂದರೆ ಅದು ಕೇವಲ ಒಬ್ಬ ವ್ಯಕ್ತಿ ಅಪೇಕ್ಷೆ ಪಡುವುದು ಮತ್ತು ಹುಲ್ಲುಗಾವಲಿನಲ್ಲಿ ಅಲೆದಾಡುವ ಜಿಂಕೆಗೂ ಸಹ ಸಂಪತ್ತಿನ ದಾರಿದ್ರ್ಯವಿರುವುದಿಲ್ಲ. ಹಾಗಾದರೆ, ಮಾನವನು ಯಾವುದರಲ್ಲಿ ಪರಿಪೂರ್ಣತೆಯನ್ನು ಹೊಂದಿದ್ದಾನೆ? ಅವನ ಜ್ಞಾನದಲ್ಲೇ ? ದುಃಖ, ಸುಖ, ಇಚ್ಛೆ, ಕೋಪ ಮುಂತಾದ ಭಾವನೆಗಳು ಮಾನವ ಮತ್ತು ಪ್ರಾಣಿಗಳಲ್ಲಿ ಸದೃಶವಾಗಿದ್ದರೂ, ಮಾನವನಿಗೆ ಜ್ಞಾನವನ್ನು ಸಂಪಾದಿಸುವ ಸಾಮರ್ಥ್ಯವಿರುತ್ತದೆ. ಆದರೆ, ಪ್ರಾಣಿಗಳಿಗೆ ಆ ಸಾಮರ್ಥ್ಯವಿರುವುದಿಲ್ಲ. ಆದರೂ, ಪ್ರಾಣಿಗಳಲ್ಲಿ ಯಾವ ಜ್ಞಾನವೂ ಇರುವುದಿಲ್ಲವೆಂದು ನಾವು ಹೇಳಲಾಗುವುದಿಲ್ಲ. ಅವಕ್ಕೂ ಸಹ ತಿನ್ನುವ, ಅಲೆದಾಡುವ ಮುಂತಾದ ವಿಷಯುಗಳಲ್ಲಿ ಜ್ಞಾನವಿರುತ್ತದೆ. ಮಾನವ ಮತ್ತು ಪಶುಗಳನ್ನು ಹೋಲಿಸುವಾಗ ಕೇವಲ ಇವಿಷ್ಟೇ ಗಮನದಲ್ಲಿರುವುದಾದರೇ, ಅವನು ಮಾತನಾಡುವಂತೆ ಅವನಿಗೂ ಮತ್ತು ಪ್ರಾಣಿಗೂ ಯಾವ ವ್ಯತ್ಯಾಸವೂ ಇರುವುದಿಲ್ಲ. ಇದಕ್ಕಿಂತ ಹೆಚ್ಚಾಗಿ ತಿಳಿಯಬೇಕಾದ ಕೆಲವು ಉತ್ತಮ ವಿಷಯುಗಳಿವೆ.

ದ್ವೇ ವಿದ್ಯೇ ವೇದಿತವ್ಯೇ . . . . ಪರಾ ಚೈವಾಪರಾ ಚ |

(ಎರಡು ವಿಧದ ವಿದ್ಯೆಗಳನ್ನು ತಿಳಿಯಬೇಕು—ಪರಾ ಮತ್ತುಅಪರಾ ಎಂದು).

ಇವುಗಳಲ್ಲಿ ಅಪರಾ ವಿದ್ಯೆಯು ಇಹಲೋಕದಲ್ಲಿ ಮತ್ತು ಪರಲೋಕದಲ್ಲಿ ಸೌಖ್ಯಕ್ಕೆ ಕಾರಣವಾಗುತ್ತದೆ. ಶಿಲ್ಪಶಾಸ್ತ್ರ, ವಿಜ್ಞಾನ, ಆಯುರ್ವೇದ ಮುಂತಾದುವು ಈ ಲೋಕದಲ್ಲಿ ಸೌಖ್ಯಕ್ಕೆ ಕಾರಣವಾಗುತ್ತವೆ.

ಕಾರೀರ್ಯಾ ವೃಷ್ಟಿಕಾಮೋ ಯಜೇತ |

(ವೃಷ್ಟಿಯನ್ನು ಅಪೇಕ್ಷಿಸುವವನು ಕಾರೀರೀ ಯಜ್ಞವನ್ನು ಮಾಡಬೇಕು),

ಜ್ಯೋತಿಷ್ಟೋಮೇನ ಸ್ವರ್ಗಕಾಮೋಯಜೇತ |

(ಸ್ವರ್ಗವನ್ನು ಅಪೇಕ್ಷಿಸುವವನು ಜ್ಯೋತಿಷ್ಟೋಮಯಾಗ ಮಾಡಬೇಕು).

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ವಿಷಯದಲ್ಲಿ ಪ್ರಾಣಿಗಳಿಗೆ ಅಂತಹ ಜ್ಞಾನವಿರುವುದಿಲ್ಲ, ಮಾನವರ ಜ್ಞಾನ ಚೆನ್ನಾಗಿರುತ್ತದೆ. ಈ ಜ್ಞಾನವು ಆದಿ ಮತ್ತು ಅಂತ್ಯವುಳ್ಳ ಸುಖಕ್ಕೆ ಕಾರಣವಾಗುತ್ತದೆ. ಮಾನವನಿಗೆ ಇಹಲೋಕದ ಹಾಗೂ ಪರಲೋಕಗಳ ಜ್ಞಾನವಿರುವುದರಿಂದ, ಮಾನವನು ಶ್ರೇಷ್ಠ. ಆದರೆ, ಇದು ವಜ್ರಾಯುಧದ ತುದಿಯು ಹೊಟ್ಟಿನ ರಾಶಿಗಿಂತ ಉತ್ತಮವಾದುದು ಎಂದು ಹೇಳುವುದಕ್ಕೆ ಸದೃಶವಾಗಿದೆ. ಆದ್ದರಿಂದ ಕೇವಲ ಲೌಕಿಕ ನಿಯಮಗಳ ಜ್ಞಾನವಿರುವ ಮಾತ್ರದಿಂದ, ನಾವು ಉತ್ತಮರು ಎಂದು ಹೇಳಲಾಗುವುದಿಲ್ಲ. ನಾನು ಯಾರು? ನಾನು ಈ ದೇಹವೇ? ಅಥವಾ ನಾನು ದೇಹಕ್ಕಿಂತ ಅತಿರಿಕ್ತನಾದವನೇ? ಅತಿರಿಕ್ತನಾದರೆ, ನಾನು ಮರ್ತ್ಯನೇ ಅಮರ್ತ್ಯನೇ? ನಾನು ಸುಖ ಅಥವಾ ದುಃಖದ ಸ್ವರೂಪನೇ? ಈ ಪ್ರಶ್ನೆಗಳಿಗೆ ಉತ್ತರರೂಪವಾದ ಅನುಭವವೇ ಪರಾವಿದ್ಯಾ ಎನ್ನುವುದು.

ಅಥ ಪರಾ ಯಯಾ ತದಕ್ಷರಮಧಿಗಮ್ಯತೇ ।

(ಪರಮಾರ್ಥ ಸತ್ಯವನ್ನು ಹೊಂದುವುದಕ್ಕೆ ಸಾಧನವೇ ಪರಾವಿದ್ಯೆ).

ಇತರ ಪ್ರಕಾರದ ವಿದ್ಯೆಗಳಂತೆ, ಪರಾವಿದ್ಯೆಯು ಭ್ರಾಂತಿಯನ್ನುಂಟುಮಾಡುವುದಿಲ್ಲ.

ನಿಚಾಯ್ಯ ತನ್ಮೃತ್ಯುಮುಖಾತ್ ಪ್ರಮುಚ್ಯತೇ ।

(ಅದನ್ನು ತಿಳಿಯುವುದರಿಂದ ವ್ಯಕ್ತಿಯು ಮೃತ್ಯುವಿನ ಹಿಡಿತದಿಂದ ಪಾರಾಗುತ್ತಾನೆ).

ಆದ್ದರಿಂದ, ಕೇವಲ ವಿಚಾರದಿಂದ ಮಾತ್ರ ವಿದ್ಯೆಯನ್ನು ಹೊಂದಬೇಕು. ಸರಿಯಾದ ಆಧಾರವಿಲ್ಲದೆ ವಿಚಾರ ಮಾಡಲಾಗುವುದಿಲ್ಲ. ಭೂಮಿ ಮತ್ತು ಸೂರ್ಯನ ನಡುವೆ ಇರುವ ದೂರವನ್ನು ನಾವು ಗಣಿತದಿಂದ ಅಳೆಯುತ್ತೇವೆಯೇ ಹೊರತು, ಅಳತೆ ಗೋಲಿನಿಂದಲ್ಲ. ಆದ್ದರಿಂದ ಉಪನಿಷತ್ತುಗಳ ಉಪದೇಶಗಳನ್ನು ನಾವು ಅನುಷ್ಠಾನಕ್ಕೆ ತರಬೇಕು. ಇದನ್ನು ಗಮನದಲ್ಲಿಟ್ಟುಕೊಂಡೇ ಭಗವತ್ಪಾದರು ಹೇಳುತ್ತಾರೆ—

ವಾಕ್ಯಾರ್ಥಶ್ಚ ವಿಚಾರ್ಯತಾಂ ಶ್ರುತಿಮತಸ್ತರ್ಕೋಽನುಸಂಧೀಯತಾಮ್ ।

(ಶ್ರುತಿ ವಾಕ್ಯಗಳ ಅರ್ಥವನ್ನು ಕುರಿತು ನಾವು ವಿಚಾರ ಮಾಡಬೇಕು. ಶ್ರುತಿಗೆ ಸಮ್ಮತವಾದ ತರ್ಕವನ್ನು ಉಪಯೋಗಿಸಬೇಕು).

ಆತ್ಮನ ಸ್ವರೂಪವನ್ನು ಕೇವಲ ತರ್ಕದಿಂದ ತಿಳಿಯಲಾಗುವುದಿಲ್ಲ. ಬ್ರಹ್ಮಸೂತ್ರ ತಿಳಿಸುತ್ತದೆ—

ತರ್ಕಾಪ್ರತಿಷ್ಠಾನಾತ್ . . . .

(ತರ್ಕದಿಂದ ಅದನ್ನು ಸಿದ್ಧಪಡಿಸಲಾಗದು . . .)

ಇಂದು ಸರಿಯೆಂದು ನಾವು ತೀರ್ಮಾನ ಮಾಡಿದ್ದು, ನಾಳೆ ತಪ್ಪಾಗಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯತ್ನೇನಾನುಮಿತೋಽಪ್ಯರ್ಥಃ ಕುಶಲೈರನುಮಾತೃಭಿಃ ।
ಅಭಿಯುಕ್ತತರೈರನ್ಯೈರನ್ಯಥೈವೋಪಪದ್ಯತೇ ॥

ಕೆಲವು ಕುಶಲಿಗಳು ಸಿದ್ಧಮಾಡಿರುವುದನ್ನು, ಇತರ ಅಧಿಕ ಕುಶಲಿಗಳು ಬೇರೇ ವಿಧದಲ್ಲಿ ತೋರಿಸಬಹುದು).

ವಾಚಸ್ಪತಿ ಮಿಶ್ರರ ಈ ವಾಕ್ಯವು ನಮ್ಮ ಅನುಭವದಲ್ಲಿರುತ್ತದೆ. ರಘುನಾಥ ಶಿರೋಮಣಿಯ ಈ ಮಾತು ಇದನ್ನು ಸಮರ್ಥಿಸುವಂತೆ ಕಾಣುತ್ತದೆ—

ವಿದುಷಾಂ ನಿವಹೈಃ ಇಹೈಕಮತ್ಯಾ-
ದ್ಯದುಷ್ಟಂ ನಿರಟಂಕ ಯಚ್ಚ ದುಷ್ಟಮ್ ।
ಮಯಿ ಜಲ್ಪತಿ ಕಲ್ಪನಾಧಿನಾಥೇ
ರಘುನಾಥೇ ಮನುತಾಂ ತದನ್ಯಥೈವ ॥

(ವಿದ್ವಾಂಸರು "ಸರಿ", "ತಪ್ಪು" ಮುಂತಾದ ರೀತಿಯಲ್ಲಿ ಸಿದ್ಧಮಾಡುವುದನ್ನು, ರಘುನಾಥನಾದ ನಾನು, ನನ್ನ ಕಲ್ಪನಾ ಪ್ರತಿಭೆಯಿಂದ ಅನ್ಯ ರೀತಿಯಲ್ಲಿ ತೋರಿಸುತ್ತೇನೆ).

ಆದ್ದರಿಂದ, ಉಪನಿಷತ್ತುಗಳನ್ನು ಆಧಾರವಾಗಿಟ್ಟುಕೊಂಡು, ನಾವು ಸತ್ಯವನ್ನು ತಿಳಿಯಬೇಕು. ಪರಮಾರ್ಥ ಸತ್ಯದ ಜ್ಞಾನದಿಂದ, ವರ್ಣಿತವಾಗಿರುವ ಈ ಸ್ಥಿತಿಯನ್ನು ಹೊಂದಬಹುದು—

ಪೂರ್ಣಮದಃ ಪೂರ್ಣಮಿದಮ್ ।

(ಅದು ಪೂರ್ಣ, ಇದು ಪೂರ್ಣ).

ಕೇವಲ ಈ ಸ್ಥಿತಿ ಮಾತ್ರ ಪರಿಪೂರ್ಣತೆಯನ್ನು ತಂದುಕೊಡಬಹುದು.

ಪರಬ್ರಹ್ಮದಲ್ಲಿ ಅಭಿನ್ನತೆಯ ಸ್ಥಿತಿಯನ್ನು ನಾನು ಇಚ್ಛಿಸಬೇಕೇ? ಇದಕ್ಕಾಗಿ, ಈ ವಿಷಯುವನ್ನು ಕುರಿತು ಉಪನಿಷತ್ತುಗಳು ಏನು ಹೇಳುತ್ತವೆ ಎಂದು ವಿಚಾರಮಾಡಬೇಕೇ? ಮತ್ತು ನನ್ನ ಮನಸ್ಸನ್ನು ಸಂಪೂರ್ಣವಾಗಿ ಆ ವಿಷಯದ ಮೇಲೆ ಏಕಾಗ್ರತೆಗೊಳಿಸಬೇಕೆ? ಈ ರೀತಿಯಾದ ಪ್ರಶ್ನೆಗಳು ಉದ್ಭವಿಸುವುದು ಸ್ವಾಭಾವಿಕ. ಪ್ರತಿಯೊಬ್ಬರೂ ಅಪೇಕ್ಷಿತವಾದುದನ್ನು ಹೊಂದಬೇಕೆಂದೂ, ಬೇಡದ್ದನ್ನು ನಿವಾರಿಸಿಕೊಳ್ಳಬೇಕೆಂದೂ ಇಚ್ಛಿಸುತ್ತಾರೆ.

ಸಾಮಾನ್ಯವಾಗಿ ನಾವು ಪ್ರೀತಿಸದಿದ್ದರೂ, ಹುಲಿಯಂತಹ ಪ್ರಾಣಿಯ ವಿಷಯದಲ್ಲಾಗಲ್ಲೀ ಮತ್ತು ವಿಷದಂತಹ ವಸ್ತುವಿನ ವಿಷಯದಲ್ಲಾಗಲೀ ನಾವು ಸಹಜವಾದ ದ್ವೇಷವನ್ನು ಹೊಂದಿರುವುದಿಲ್ಲ; ಅವುಗಳ ವಿಷಯದಲ್ಲಲ್ಲದೇ, ಅವು ಉಂಟುಮಾಡುವ ನೋವಿನ ಬಗ್ಗೆ ನಮಗೆ ಹೆದರಿಕೆ ಇರುತ್ತದೆ. ಆದ್ದರಿಂದ, ದುಃಖದ ಬಗ್ಗೆ ನಮಗೆ ಸಹಜವಾದ ದ್ವೇಷವಿರುತ್ತದೆ. ನಮ್ಮ ಬಹುತೇಕ ಕಾರ್ಯಗಳು ಈ ದುಃಖ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ನಿವಾರಿಸುವುದಕ್ಕಾಗಿಯೇ ಪ್ರವೃತ್ತವಾಗಿರುತ್ತದೆ. ಪ್ರಪಂಚದಲ್ಲಿ ಈ ದುಃಖವಿಲ್ಲದಿದ್ದರೆ, ಆತ್ಮನ ವಿಷಯದಲ್ಲಿ ಜ್ಞಾನವನ್ನು ತಿಳಿಸುವ ಯಾವ ಶಾಸ್ತ್ರವೂ ಇರುತ್ತಿರಲಿಲ್ಲ. ಒಂದು ವೇಳೆ ದುಃಖವಿದ್ದು ಅದರ ವಿಷಯದಲ್ಲಿ ದ್ವೇಷವಿಲ್ಲದಿದ್ದರೆ, ಮತ್ತು ಅದನ್ನು ನಿವಾರಿಸಿಕೊಳ್ಳಲು ಪ್ರಯತ್ನದ ಆವಶ್ಯಕತೆಯಿಲ್ಲದಿದ್ದರೆ, ಯಾವ ಶಾಸ್ತ್ರಗಳೂ ಇರಬೇಕಾಗಿಲ್ಲ. ಒಂದು ವೇಳೆ ದುಃಖ ಇದ್ದು ಮತ್ತು ಅದನ್ನು ನಿವಾರಿಸಿಕೊಳ್ಳಬೇಕೆಂಬ ಅಪೇಕ್ಷೆ ಇದ್ದರೂ, ಆದರೆ ಅದನ್ನು ಸಂಪೂರ್ಣವಾಗಿ ನಿವಾರಣೆಮಾಡಲು ಸಾಧ್ಯವಿಲ್ಲದಿದ್ದರೆ, ಆಗಲೂ ಶಾಸ್ತ್ರಗಳೂ ಇರಬೇಕಾಗಿರಲಿಲ್ಲ.

ಸಾಧ್ಯವಿಲ್ಲದಿರುವುದು ಎರಡು ವಿಧವಾಗಿರುತ್ತದೆ. ಆಕಾಶವು ನಿತ್ಯವಾದುದು. ಯಾವ ರೀತಿಯಿಂದಲೂ ಅದನ್ನು ನಾಶಮಾಡಲು ಸಾಧ್ಯವಿಲ್ಲ. ಒಂದು ವೇಳೆ ದುಃಖವು ಈ ರೀತಿ ಇದ್ದರೆ, ಆಗ ಅದನ್ನು ನಾಶಮಾಡುವುದು ಸಾಧ್ಯವಾಗುವುದಿಲ್ಲ. ದುಃಖ ನಿವಾರಿಸಲು ಸಾಧ್ಯವಾಗಿದ್ದರೂ, ಅದಕ್ಕೆ ಮಾರ್ಗವು ನಮಗೆ ತಿಳಿಯದಿದ್ದರೆ ಆಗಲೂ ಸಹ ದುಃಖವನ್ನು ನಿವಾರಣೆ ಮಾಡಲು ಸಾಧ್ಯವಾಗುವುದಿಲ್ಲ. ಇದು ಎರಡನೆಯ ವಿಧ. ಮತ್ತು ಉಪನಿಷತ್ತುಗಳಲ್ಲಿ ಹೇಳಿರುವುದನ್ನು ಬಿಟ್ಟು ಬೇರೆ ವಿಧದಿಂದ ದುಃಖವನ್ನು ನಿವಾರಿಸಬಹುದಾದರೆ, ಆಗಲೂ ಸಹ ಉಪನಿಷತ್ತುಗಳು ಅನವಶ್ಯಕವಾಗಿರುತ್ತವೆ. ದುಃಖವಿಲ್ಲವೆಂದು ಯಾರೂ ಹೇಳಲು ಸಾಧ್ಯವಿಲ್ಲ. ಎಲ್ಲರೂ ಅದನ್ನು ಅನುಭವಿಸುತ್ತಿರುತ್ತಾರೆ. ಅದನ್ನು ನಿವಾರಿಸಿಕೊಳ್ಳಲೂ ಪ್ರಯತ್ನಮಾಡುತ್ತಿರುತ್ತಾರೆ. ಶಾಸ್ತ್ರಗಳು ದುಃಖವನ್ನು ಮೂರು ವಿಭಾಗವಾಗಿ ಮಾಡುತ್ತವೆ–ಆಧ್ಯಾತ್ಮಿಕ, ಆಧಿದೈವಿಕ ಮತ್ತು ಆಧಿಭೌತಿಕ. ದೇಹಕ್ಕೆ ಸಂಬಂಧಿಸಿದುದು ಮತ್ತು ಮನಸ್ಸಿಗೆ ಸಂಬಂಧಿಸಿದುದು ಎಂದು ಆಧ್ಯಾತ್ಮಿಕ ದುಃಖ ಎರಡು ವಿಧ. ನಮ್ಮ ದೇಹವು ಸರಿಯಾಗಿ ಇಲ್ಲದಿದ್ದರೆ, ಆಗ ನಮಗೆ ಜ್ವರವೇ ಮುಂತಾದ ಅನೇಕ ರೋಗಗಳು ಬರುತ್ತವೆ. ಕಾಮ, ಕ್ರೋಧ, ದುರಾಶೆ, ಮುಂತಾದುವು ಮಾನಸಿಕ ದುಃಖಕ್ಕೆ ಕಾರಣವಾಗುತ್ತವೆ. ಈ ದುಃಖಗಳು ಆಧ್ಯಾತ್ಮಿಕ, ಏಕೆಂದರೆ ಇದರಿಂದ ದೇಹ ಮತ್ತು ಮನಸ್ಸಿಗೆ ದುಃಖವುಂಟಾಗುತ್ತದೆ. ವಿಷ ಪ್ರಾಣಿಗಳು, ಶತ್ರುಗಳು–ಇವುಗಳಿಂದ ಉಂಟಾಗುವ ದುಃಖ ಆಧಿಭೌತಿಕ ; ದುಷ್ಟಶಕ್ತಿಗಳಿಂದ ಹಾಗೂ ಭೂಕಂಪ ಮುಂತಾದ ಸ್ವಾಭಾವಿಕ ಅನಾಹುತಗಳಿಂದ ಉಂಟಾಗುವ ದುಃಖ ಆಧಿದೈವಿಕ. ಈ ಎಲ್ಲ ರೀತಿಯ ದುಃಖಗಳನ್ನೂ ನಿವಾರಿಸಬೇಕೆಂದು ನಾವು ಅಪೇಕ್ಷೆಪಡುತ್ತೇವೆ. ಆದರೆ ಈ ದುಃಖಗಳಿಂದ ನಾವು ಇನ್ನೂ ಬಿಡುಗಡೆ ಹೊಂದಿಲ್ಲ. ಈ ವಿಧವಾದ ದುಃಖಗಳು ಇರುತ್ತವೆಂದು ನಾವು ಅಂಗೀಕರಿಸುವುದಾದರೆ, ಮತ್ತು ಅವುಗಳಿಂದ ಬಿಡುಗಡೆ ಹೊಂದಲು ನಮ್ಮ ಪ್ರಯತ್ನಗಳನ್ನು ಅಂಗೀಕರಿಸಿದರೆ, ಉಪನಿಷತ್ತುಗಳಲ್ಲಿ ಹೇಳಿರುವ ಮಾರ್ಗವನ್ನು ಬಿಟ್ಟು ಬೇರೇ ರೀತಿಯಿಂದ ಮಾಡಬಹುದಾದರೆ, ಆಗ ಶಾಸ್ತ್ರಗಳ ಆವಶ್ಯಕತೆ ಏನೂ ಇರುವುದಿಲ್ಲ. ದುಃಖದಿಂದ ಬಿಡುಗಡೆಯನ್ನು ಹೊಂದಬೇಕಾದರೆ ವಿವೇಕ, ವೈರಾಗ್ಯ ಮನೋನಿಗ್ರಹ,

Sri Vidyabharathi Book Centre, Sringeri

CC-O. In Public Domain. Digitized by eGangotri

ಮುಮುಕ್ಷುತ್ವ ಗುರು ಹಾಗೂ ಶಾಸ್ತ್ರಗಳ ಉಪದೇಶ ಶ್ರವಣ, ಏಕಾಗ್ರತೆಯಿಂದ ಅವುಗಳ ಅರ್ಥದ ಬಗ್ಗೆ ಮನನ, ಮತ್ತು ಜ್ಞಾನ ಲಾಭ ಎಂಬ ಆರು ಗುಣಗಳನ್ನು ವೃದ್ಧಿಪಡಿಸಿಕೊಳ್ಳಬೇಕೆಂದು ಶಾಸ್ತ್ರವು ವಿಧಿಸುತ್ತದೆ. ಆದರೆ ಇದು ಸುಲಭವಲ್ಲ.

ಪರಾಂಚಿಖಾನಿ ವ್ಯತೃಣತ್ಸ್ವಯಾಭೂ-
ಸ್ತಸ್ಮಾತ್ಪರಾಂಪಶ್ಯತಿ ನಾಂತರಾತ್ಮನ್ ।

(ಸ್ವಯಂ ಉತ್ಪನ್ನವಾದ ಪರಮಾತ್ಮನು ಬಾಹ್ಯ ಇಂದ್ರಿಯಗಳು ದೋಷಯುಕ್ತಗಳನ್ನಾಗಿ ಮಾಡಿದ್ದಾನೆ. ಆದ್ದರಿಂದ ವ್ಯಕ್ತಿಯು ಬಾಹ್ಯ ವಸ್ತುಗಳನ್ನು ನೋಡುತ್ತಾನೆಯೇ ಹೊರತು, ಅಂತರ್ಯದಲ್ಲಿರುವ ಆತ್ಮನನ್ನಲ್ಲ).

ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವ ಸುದುಷ್ಕರಮ್

(ಮನೋನಿಗ್ರಹ ಮಾಡುವುದು ವಾಯುವನ್ನು ನಿಗ್ರಹಿಸುವುದಕ್ಕಿಂತ ಕಠಿಣವಾದುದು)

ಮಂತ್ರ ಶಾಸ್ತ್ರದ ವಿಧಿಗಳನ್ನು ಅನುಸರಿಸುವುದರಿಂದ ಆಧಿದೈವಿಕ ರೀತಿಯ ದುಃಖಗಳನ್ನು ನಿವಾರಿಸಿಕೊಳ್ಳಬಹುದು ಮತ್ತು ಹೀಗೆ ಭೂತ, ಪಿಶಾಚಿಗಳಿಂದ ಬಿಡುಗಡೆ ಹೊಂದಬಹುದು. ಸುಲಭವಾದ ಸಾಧನಗಳಿಂದ ಆಧಿದೈವಿಕ ದುಃಖಗಳನ್ನು ನಿವಾರಣೆ ಮಾಡಿಕೊಳ್ಳಲು ಸಾಧ್ಯವಿರುವುದರಿಂದ ಆಧ್ಯಾತ್ಮ ಶಾಸ್ತ್ರಗಳು ಅನವಶ್ಯವೆಂದು ತೋರಬಹುದು. ಆದರೂ, ನಿಗದಿತವಾದ ಔಷಧವನ್ನು ತೆಗೆದುಕೊಂಡರೂ, ಮನುಷ್ಯನಿಗೆ ದುಃಖವಾಸಿಯಾಗದಿರಬಹುದು. ಮನುಷ್ಯನ ಆಸೆಗಳನ್ನು, ಅವನು ಕೇಳುವ ಎಲ್ಲ ವಸ್ತುಗಳನ್ನೂ ಕೊಡುವುದರಿಂದ, ನಿವಾರಣೆ ಮಾಡಲು ಸಾಧ್ಯವಿಲ್ಲ. ಮಾನಸಿಕ ದುಃಖವು ಒಂದು ಕ್ಷಣ ನಿವೃತ್ತವಾದರೂ, ಮರುಕ್ಷಣದಲ್ಲಿ ಅದು ಕಾಣಿಸಿಕೊಳ್ಳುವುದಿಲ್ಲವೇ ?

ನ ಜಾತುಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯಏವಾಭಿವರ್ಧತೇ ॥

(ಅನುಭವಿಸುವುದರಿಂದ ಕಾಮವು ಎಂದೂ ತಣ್ಣಗಾಗುವುದಿಲ್ಲ ; ಅದು ತುಪ್ಪವನ್ನು ಹಾಕಿದ ಬೆಂಕಿಯಂತೆ, ಮತ್ತೂ ಅಭಿವೃದ್ಧಿಯಾಗುತ್ತದೆ.)

ಆದ್ದರಿಂದ, ಈ ಮೇಲೆ ಹೇಳಿದ ಮಾರ್ಗಗಳಿಂದ ಸ್ವಲ್ಪ ಸಮಯ ದುಃಖದ ನಿವೃತ್ತಿಯಾದರೂ, ಶಾಶ್ವತವಾಗಿ ನಿವಾರಣೆಯನ್ನು ಹೊಂದಲು ಆಗುವುದಿಲ್ಲ. ಸುಲಭವಾಗಿದ್ದರೂ, ಈ ಪ್ರಚಲಿತ ಸಾಧನಗಳು ನಮಗೆ ಅಪೇಕ್ಷಿತವಾದ ಫಲಗಳನ್ನು ಕೊಡುವುದಿಲ್ಲ. ಆದ್ದರಿಂದ ವಿವೇಕಶಾಲಿಯಾದವರು ಮೋಕ್ಷವನ್ನು ಅಪೇಕ್ಷಿಸುತ್ತಾರೆ. ಮತ್ತೊಂದು ಆಕ್ಷೇಪವೂ ಇದೆ–ದುಃಖಗಳನ್ನು ನಿವಾರಣೆ ಮಾಡುವುದಕ್ಕೆ ಕೇವಲ ಶಾಸ್ತ್ರಗಳು ಮಾತ್ರ ಇವೆ. ದುಃಖಗಳಿಗೆ ಕಾರಣವನ್ನು ಹುಡುಕಬೇಕು ಮತ್ತು ನಂತರ ಅವನ್ನು ನಿವಾರಿಸು

Sri Vidyabharathi Book Centre, Sringeri

CC-O. In Public Domain. Digitized by eGangotri

ವುದಕ್ಕೆ ಪ್ರಯತ್ನ ಪಡುವುದು ಉಚಿತ. ಆದ್ದರಿಂದ ಇದಕ್ಕಿಂತ ಸುಲಭವಾದ ಮಾರ್ಗ ವನ್ನು ಹುಡುಕಬೇಕು. ಇವು, ಮನಸ್ಸನ್ನು ನಿಗ್ರಹಿಸುವುದಕ್ಕಿಂತ, ಕಷ್ಟವಲ್ಲ.

ಅರ್ಕೇ ಚೇನ್ಮಧುವಿಂದೇತ ಕಿಮರ್ಥಂ ಪರ್ವತಂ ವ್ರಜೇತ್ ।
ಇಷ್ಟಸ್ಯಾರ್ಥಸ್ಯ ಸಂಸಿದ್ಧೌ ಕೋ ವಿದ್ವಾನ್ ಯತ್ನಮಾಚರೇತ್ ॥

(ಅರ್ಕ ಗಿಡದಲ್ಲೇ ಜೇನು ಸಿಗುವುದಾದರೆ, ಪರ್ವತಕ್ಕೆ ಯಾರು ಹೋಗುತ್ತಾರೆ. ಅಪೇಕ್ಷಿತವಾದುದು ಆಗಲೇ ಲಬ್ಧವಾಗಿರುವುದಾದರೆ, ಯಾವ ವಿವೇಕಿ ಪ್ರಯತ್ನ ಪಡುತ್ತಾನೆ ?)

ದುಃಖಗಳನ್ನು ನಿವಾರಣೆ ಮಾಡಿಕೊಂಡನಂತರ ಶಾಂತಿಯೂ ಸಹ ಲಭಿಸುತ್ತದೆ.

ಅಸೌ ಮಯಾ ಹತಃ ಶತ್ರುಃ ।

(ಈ ಶತ್ರುವು ನನ್ನಿಂದ ಹತನಾಗಿದ್ದಾನೆ).

ದೈಹಿಕವಾದ ನೋವನ್ನು ನಿವಾರಿಸಲು ಪ್ರಸಿದ್ಧ ವೈದ್ಯರಿಂದ ಸೂಚಿತವಾಗುವ ಅನೇಕ ಮಾರ್ಗಗಳಿವೆ. ಅಪೇಕ್ಷಿತವಾದ ವಸ್ತುವು ಸಿಗದಿದ್ದರೆ ಮಾನಸಿಕ ದುಃಖಗಳು ವೃದ್ಧಿಯಾಗುತ್ತವೆ. ಆದ್ದರಿಂದ, ಮನಸ್ಸು ಅಪೇಕ್ಷಿಸಿದ ವಸ್ತುಗಳನ್ನು ಒದಗಿಸಿದರೆ, ಮನಸ್ಸಿಗೆ ಸಂಬಂಧಿಸಿದ ಆಧ್ಯಾತ್ಮಿಕ ದುಃಖಗಳು ಇಲ್ಲವಾಗುತ್ತವೆ. ಆಶೆಗಳು ಪೂರೈಸು ವುದರಿಂದ ಉಂಟಾಗುವ ಶಾಂತಿಗಿಂತ ದುಃಖಗಳ ನಿವಾರಣೆಯಿಂದ ಉಂಟಾಗುವುದು ದೊಡ್ಡದಲ್ಲ. ನೀತಿಶಾಸ್ತ್ರಗಳಲ್ಲಿ ಸೂಚಿತವಾಗಿರುವ ಮಾರ್ಗಗಳಿಂದ ಆಧಿಭೌತಿಕ ದುಃಖಗಳನ್ನು ನಿವಾರಣೆಮಾಡಿಕೊಳ್ಳಬಹುದು.

ಹೇಗಾದರೂ ಸರಿಯಾದ ನಿರ್ಣಯವು ಏನೆಂದರೆ

ತರತಿ ಶೋಕಮಾತ್ಮವಿತ್ ।

(ಆತ್ಮಜ್ಞಾನಿಯಾದವನು ದುಃಖಗಳನ್ನು ದಾಟುತ್ತಾನೆ).

ಈ ರೀತಿಯಲ್ಲಿ ಜ್ಞಾನದಿಂದ ದುಃಖಗಳಿಂದ ನಿವಾರಣೆಯನ್ನು ಮಾಡಿಕೊಳ್ಳು ತ್ತಾನೆ. ಜ್ಞಾನಮಾರ್ಗದಿಂದ ಪರತತ್ತ್ವದೊಡನೆ ಒಂದಾಗುವುದೇ ಮೇಲೆ ಹೇಳಿದ ಪರಿಪೂರ್ಣತೆ. ಈ ಜ್ಞಾನವನ್ನು ಹೊಂದುವ ಮಾರ್ಗವನ್ನು ಅಧ್ಯಾತ್ಮ ಶಾಸ್ತ್ರದಲ್ಲಿ ವಿವರಿಸಲಾಗಿದೆ.

ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ-
ಮಂತವ್ಯೋ ನಿದಿಧ್ಯಾಸಿತವ್ಯಃ ।

(ಎಲೈ, ಆತ್ಮನನ್ನು ನೋಡಬೇಕು, ಅದನ್ನು ಕುರಿತು ಶ್ರವಣ ಮಾಡಬೇಕು, ಮನನ ಮಾಡಬೇಕು ಮತ್ತು ಏಕಾಗ್ರ ಚಿತ್ತತೆಯಿಂದ ಧ್ಯಾನ ಮಾಡಬೇಕು).

ಭಗವತ್ಪಾದರು ಈ ಭೂಮಿಯ ಮೇಲೆ ಅವತರಿಸಿದಾಗ, ಉಪನಿಷತ್ತುಗಳಲ್ಲಿ ವಿವರಿಸಲಾಗಿರುವ ಮಾರ್ಗವನ್ನು ತಿರಸ್ಕರಿಸಲಾಗಿತ್ತು. ಕೇವಲ ಮೂವತ್ತೆರಡು ವರ್ಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಗಳಲ್ಲಿ ಶಾಸ್ತ್ರಗಳಲ್ಲಿ ಉಪದಿಷ್ಟವಾಗಿರುವ ಸತ್ಯವನ್ನು ಭಾರತದ ಉದ್ದಗಲಗಳಲ್ಲಿ ಅವರು ಪ್ರತಿಪಾದಿಸಿದರು. ಎಲ್ಲರೂ ಆಧ್ಯಾತ್ಮಿಕ ಜೀವನವನ್ನನುಸರಿಸಿ, ಅದರಿಂದ ಕೃತಕೃತ್ಯರಾಗಲಿ ಎಂದು ಅವರು ಅನುಗ್ರಹಿಸಲಿ.

ಧಾರ್ಮಿಕ ಶಿಕ್ಷಣ :

ವಸ್ತುವಿನ ವಾಸ್ತವವಾದ ಜ್ಞಾನವನ್ನುಂಟುಮಾಡುವುದಕ್ಕೆ ಪ್ರಮಾಣವೆಂದು ಕರೆಯುತ್ತಾರೆ.

ಪ್ರಮಾಕರಣಂ ಪ್ರಮಾಣಂ ।

(ವಾಸ್ತವವಾದ ಜ್ಞಾನವನ್ನುಂಟು ಮಾಡುವುದಕ್ಕೆ ಪ್ರಮಾಣವೆಂದು ಹೆಸರು) ಕಣ್ಣೇ ಮೊದಲಾದ ಇಂದ್ರಿಯಗಳು ತಿಳಿಸುವುದೂ ಪ್ರಮಾಣವೇ, ಏಕೆಂದರೆ ಅವುಗಳಿಂದ ಜ್ಞಾನವುಂಟಾಗುತ್ತದೆ. ಹಾಗೆಯೇ ಶಬ್ದವೂ ಪ್ರಮಾಣ, ಏಕೆಂದರೆ ಕಿವಿಗಳ ಮೂಲಕ ಅದು ಜ್ಞಾನವನ್ನುಂಟು ಮಾಡುತ್ತದೆ.

ಆಪ್ತವಾಕ್ಯಂ ಶಬ್ದಃ ।

(ಆಪ್ತರಿಂದ ಹೇಳಲಾಗುವುದು ಶಬ್ದ)

ಕೇವಲ ಶಬ್ದವು ಪ್ರಮಾಣವಾಗುವುದಿಲ್ಲ. ಮತ್ತೊಬ್ಬನನ್ನು ಮೋಸ ಮಾಡುವುದಕ್ಕೆ ವ್ಯಕ್ತಿಯೊಬ್ಬನು ಹೇಳುವ ಮಾತುಗಳು ಪ್ರಮಾಣವಾಗುವುದಿಲ್ಲ. ಈ ಕಾರಣದಿಂದ, ಆಪ್ತನಾದವನ ಮಾತುಗಳನ್ನು ಪ್ರಮಾಣವೆಂದು ಕರೆಯುತ್ತಾರೆ. ವಿಷಯಗಳನ್ನು ತಿರುಚದೆ ಯಾರು ವಾಸ್ತವವಾದುದನ್ನು ಹೇಳುತ್ತಾನೋ ಅವನೇ ಆಪ್ತ. ಲೌಕಿಕ ನಿಯಮಗಳಿಗೆ ಅನುಗುಣವಾಗಿ ವಾಕ್ಯಗಳ ಮೂಲಕ ಯಾವುದನ್ನು ತಿಳಿಸಲಾಗುತ್ತದೆಯೋ, ಆ ವಾಕ್ಯಗಳೂ ಪ್ರಮಾಣವಾಗುತ್ತವೆ. ಎಲ್ಲರಿಗೂ ಆಪ್ತನಾದವನು ಯಾರು ?

ನ ಮೇ ದ್ವೇಷ್ಯೋಽಸ್ತಿ ನ ಪ್ರಿಯಃ ।

(ನನಗೆ ಯಾರೂ ದ್ವೇಷಿಸುವವರಾಗಲೀ ಅಥವಾ ಪ್ರಿಯರಾದವರಾಗಲೀ ಇಲ್ಲ)

ಯಾರು ಈ ಮೇಲಿನ ನಿಯಮಕ್ಕೆ ಅನುಗುಣವಾಗಿರುತ್ತಾನೋ ಅವನೇ ಎಲ್ಲರಿಗೂ ಆಪ್ತ. ಈ ನಿಯಮಕ್ಕೆ ಅನುಗುಣವಾಗಿರುವವನು ಏನನ್ನು ಹೇಳಿದರೂ ಅದು ಪ್ರಮಾಣವಾಗುತ್ತದೆ. ಕಲ್ಲು, ಮೊದಲಾದ ಪದಾರ್ಥಗಳಿಗೆ ದ್ವೇಷವಾಗಲೀ, ಪ್ರೀತಿಯಾಗಲೀ ಇರುವುದಿಲ್ಲ, ಏಕೆಂದರೆ ಅವು ಅಚೇತನವಾದವು (ಅವನ್ನು ನಾವು ಆಪ್ತರೆಂದು ಕರೆಯಲು ಸಾಧ್ಯವಿಲ್ಲ). ಆದ್ದರಿಂದ, ಹಿಂದೆ ಹೇಳಿರುವುದರ ಜೊತೆಗೆ, ಅವನಿಗೆ ಎಲ್ಲ ವಿಷಯಗಳ ಜ್ಞಾನವಿರಬೇಕು. ಅಂತಹ ವ್ಯಕ್ತಿಯು ಎಲ್ಲರಿಗೂ ಎಲ್ಲ ವಿಷಯಗಳಲ್ಲೂ ಆಪ್ತನಾಗುತ್ತಾನೆ. ಕೇವಲ ಪರಮಾತ್ಮನೊಬ್ಬನೇ ಅಂತಹವನು. ವೇದಗಳು ಮತ್ತು ಅದರ ಅಂಗಗಳು (ಶಿಕ್ಷಾ, ವ್ಯಾಕರಣ, ಮುಂತಾದುವು), ಸ್ಮೃತಿಗಳು (ಪುರಾಣ

Sri Vidyabharathi Book Centre, Sringeri

CC-O. In Public Domain. Digitized by eGangotri

ಇತಿಹಾಸ, ಮುಂತಾದುವು). ಮತ್ತು ತಂತ್ರಗಳು–ಈಶ್ವರನ ಅನುಗ್ರಹದಿಂದ ವೇದಗಳನ್ನು ಆಧಾರವಾಗಿಟ್ಟುಕೊಂಡು ಮಹರ್ಷಿಗಳಿಂದ ರಚಿತವಾಗಿರುವ ಈ ಎಲ್ಲವೂ ಪ್ರಮಾಣಗಳು. ಕೇವಲ ಇಂದ್ರಿಯ ಪ್ರತ್ಯಕ್ಷ ಮತ್ತು ಅನುಮಾನದಿಂದ ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ. ಯಾರೂ ಸಹ ಕೇವಲ ತನ್ನ ಜ್ಞಾನದಿಂದ ಎಲ್ಲವನ್ನೂ ತಿಳಿಯಲು ಸಾಧ್ಯವಿಲ್ಲ. ತನ್ನ ಪೂರ್ವಿಕರ ಅನುಭವಗಳನ್ನು ಕೇಳುವುದರಿಂದ ಮತ್ತು ಅವನ್ನು ಅನುಸರಿಸುವುದರಿಂದ ವ್ಯಕ್ತಿಯು ವಿದ್ವಾಂಸನಾಗುತ್ತಾನೆ.

ಕಣ್ಣಿಗೆ ಕಾಣುವ ಪ್ರಪಂಚದ ವಿಷಯದಲ್ಲಿಯೂ ಸಹ ಈ ನಿಯಮವಿರುವಾಗ, ಕೇವಲ ಇಂದ್ರಿಯ ಪ್ರತ್ಯಕ್ಷ ಮತ್ತು ಅನುಮಾನ ಇಂದ್ರಿಯಗಳಿಗೆ ಅಗೋಚರವಾದುದನ್ನು ತಿಳಿಸಲು ಸಾಕಾಗುವುದಿಲ್ಲ.

ನ್ಯಾಧ್ಯಾಪಯಿಷ್ಯನ್ ನಿಗಮಾನ್ ಶ್ರಮೇಣೋಪಾ–
ಧ್ಯಾಯಲೋಕಾ ಯದಿ ಶಿಷ್ಯವರ್ಗಾನ್ ।
ನಿರ್ವೇದವಾದಂ ಕಿಲ ನಿರ್ವಿತಾನ–
ಮುರ್ವೀತಲಂ ಹಂತ ತದಾ ಭವಿಷ್ಯತ್ ॥

(ಗುರುಗಳು ತಮ್ಮ ಶಿಷ್ಯರಿಗೆ ಶ್ರಮದಿಂದ ಅಧ್ಯಾಪನ ಮಾಡದಿದ್ದರೆ, ವೈದಿಕ ಮಾರ್ಗವು ಇಲ್ಲದಿರುವಂತಹ ಸ್ಥಿತಿಗೆ ಬರುತ್ತದೆ)

ವೇದಗಳಲ್ಲಿ ಪ್ರತಿಪಾದಿತವಾಗಿರುವ ಜ್ಞಾನವನ್ನು ಹೊಂದಬೇಕೆಂಬುದೇ ಪ್ರತಿಯೊಬ್ಬ ಮನುಷ್ಯನ ಇಚ್ಛೆಯಾಗಿರಬೇಕು.

ಅಪಿಮಾನುಷ್ಯಕಂ ಲಬ್ಧ್ವಾ ಭವಂತಿ ಜ್ಞಾನಿನೋ ನಯೇ ।
ಪಶುತ್ವೈವ ವರಂ ತೇಷಾಂ ಪ್ರತ್ಯವಾಯಾಪ್ರವರ್ತನಾತ್ ॥

(ಮಾನವ ಜನ್ಮವನ್ನು ಹೊಂದಿಯೂ ಜ್ಞಾನವನ್ನು ಹೊಂದದೇ ಇರುವವರಿಗಿಂತ ಪಶುಗಳೇ ವಾಸಿ ; ಏಕೆಂದರೆ, ಅವು ಯಾವ ಪಾಪಗಳನ್ನೂ ಮಾಡುವುದಿಲ್ಲ)

ಲೌಕಿಕಂ ವೈದಿಕಂ ವಾಪಿ ತಥಾಧ್ಯಾತ್ಮಿಕಮೇವ ವಾ ।
ಆದದೀತ ಯತೋ ಜ್ಞಾನಂ ತಂ ಪೂರ್ವಮಭಿವಾದಯೇತ್ ॥

(ಗುರುವು ಲೌಕಿಕ, ವೇದ ಮತ್ತು ಆಧ್ಯಾತ್ಮದ ಜ್ಞಾನವನ್ನು ಉಪದೇಶ ಮಾಡುವುದರಿಂದ, ಅವನಿಗೆ ಮೊದಲು ನಮಸ್ಕರಿಸಬೇಕು)

ಗತೇಽಪಿ ವಯಸಿಗ್ರಾಹ್ಯಾ ವಿದ್ಯಾಸರ್ವಾತ್ಮನಾ ಬುಧೈಃ ।
ಯದ್ಯಪಿಸ್ಯಾನ್ನ ಫಲದಾ ಸುಲಭಾ ಸಾಽನ್ಯಜನ್ಮನಿ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಬುದ್ಧಿವಂತರು ಮುಪ್ಪಿನಲ್ಲಾದರೂ ಸಹ ಜ್ಞಾನ ಲಾಭಕ್ಕಾಗಿ ಪ್ರಯತ್ನ ಮಾಡಬೇಕು ; ಆ ಜ್ಞಾನವು ಈ ಜನ್ಮದಲ್ಲಿ ಫಲಕಾರಿಯಾಗದಿದ್ದರೂ ಮುಂದಿನ ಜನ್ಮ ದಲ್ಲಿ ಸುಲಭವಾಗಿ ಪಡೆಯಬಹುದು.)

ಜ್ಞಾನವನ್ನು ಯಾವ ವಯಸ್ಸಿನಲ್ಲಾದರೂ ಹೊಂದಬಹುದಾದರೂ, ನಮ್ಮ ಲೌಕಿಕ ನಿಯಮದ ಪ್ರಕಾರವಾಗಲೀ ಅಥವಾ ಶಾಸ್ತ್ರಗಳ ನಿಯಮದ ಪ್ರಕಾರವಾಗಲೀ ಉಪನಯನ ಮತ್ತು ವಿವಾಹದ ಮಧ್ಯದ ಸಮಯವೇ ಅತ್ಯಂತ ಸೂಕ್ತವಾದುದು. ಜ್ಞಾನವನ್ನು ಹೊಂದುವುದಕ್ಕೆ ದೈಹಿಕ ಶಕ್ತಿ ಅತ್ಯಗತ್ಯ.

ಅಷ್ಟವರ್ಷಂ ಬ್ರಾಹ್ಮಣಮುಪನಯೀತ ।

(ಬ್ರಾಹ್ಮಣನಿಗೆ ಎಂಟು ವರ್ಷವಯಸ್ಸಿನಲ್ಲಿ ಉಪನಯನ ಮಾಡಬೇಕು.)

ಆದ್ದರಿಂದ, ಉಪನಯನದ ನಂತರದ ಸಮಯವೇ ವಿದ್ಯಾಧ್ಯಯನಕ್ಕೆ ಯೋಗ್ಯ ವಾದುದೆಂದು ಈ ವೇದದ ವಾಕ್ಯಗಳಿಂದ ತಿಳಿದುಬರುತ್ತದೆ. ವಿದ್ಯಾಧ್ಯಯನದ ಸಮ ಯದಲ್ಲಿ ಬ್ರಹ್ಮಚರ್ಯ ನಿಯಮವನ್ನು ಪಾಲಿಸಬೇಕು ; ಅದರ ನಂತರ ಗೃಹಸ್ಥಾಶ್ರಮ ವನ್ನು ಸ್ವೀಕರಿಸಬಹುದು. ಅಥವಾ, ಆಜೀವ ಪರ್ಯಂತ ಬ್ರಹ್ಮಚರ್ಯ ನಿಯಮ ವನ್ನು ಪಾಲಿಸುತ್ತೇನೆಂದು ಪ್ರತಿಜ್ಞೆಯನ್ನು ಸ್ವೀಕರಿಸಿ, ನೈಷ್ಠಿಕ ಬ್ರಹ್ಮಚರ್ಯದ ಜೀವ ನವನ್ನು ನಡೆಸಬಹುದು.

ನಮ್ಮ ಅತ್ಯಲ್ಪ ಕಾಲದ ಜೀವನದಲ್ಲಿ ಚಿನ್ನದ ಸೌಧಗಳನ್ನು ನಾವು ಹೊಂದದಿ ದ್ದರೂ ಯಾವ ನಷ್ಟವೂ ಇಲ್ಲ ; ಏಕೆಂದರೆ, ಅವೆಲ್ಲವೂ ಅನಿತ್ಯಗಳೆಂದು ಜ್ಞಾನದಿಂದ ಸಿದ್ಧವಾಗಿದೆ. ಆದ್ದರಿಂದ, ದೊಡ್ಡದನ್ನು ಹೊಂದಲು ಅಶಕ್ತರಾದೆವೆಂದು ನಾವು ದುಃಖಪಡಬೇಕಾಗಿಲ್ಲ, ಆದರೆ, ನಾವು ಉತ್ತಮವಾದುದನ್ನು ಮಾಡುವುದಕ್ಕೆ ಪ್ರಯತ್ನ ಪಡಬೇಕು.

ಆರ್ಯೋಕ್ತಿಯೊಂದರಲ್ಲಿ ಹೇಳಿರುವಂತೆ, ನಮ್ಮ ಜೀವನದ ಪ್ರತಿಯೊಂದು ಕ್ಷಣವೂ ಅಮೂಲ್ಯವಾದುದು. ಒಂದು ಕ್ಷಣವು ವ್ಯರ್ಥವಾಗಿ ಕಳೆದುಹೋದರೆ, ಆತ್ಯಂತಿಕವಾಗಿ ಕಳೆದು ಹೋದಂತೆಯೇ.

ಅಜರಾಮರವತ್ ಪ್ರಾಜ್ಞಃ ವಿದ್ಯಾಮರ್ಥಂ ಚ ಸಾಧಯೇತ್ ।
ಗೃಹೀತ ಇವ ಕೇಶೇಷು ಮೃತ್ಯುನಾ ಧರ್ಮಮಾಚರೇತ್ ॥

(ಬುದ್ಧಿವಂತನಾದ ವ್ಯಕ್ತಿಯು ವಿದ್ಯೆ ಮತ್ತು ಹಣವನ್ನು ಸಂಪಾದನೆ ಮಾಡು ವಾಗ ತನಗೆ ಮುಪ್ಪಿಲ್ಲವೆಂಬ ಹಾಗೂ ಮರಣವಿಲ್ಲವೆಂಬ ಭಾವನೆಯಿಂದ ಪ್ರಯತ್ನ ಮಾಡಬೇಕು ; ಆದರೆ, ಧರ್ಮಾಚರಣೆ ಮಾಡುವಾಗ ತನ್ನ ಕೂದಲನ್ನು ಮೃತ್ಯುವು ಹಿಡಿದಿದೆಯೋ ಎಂಬ ಭಾವನೆಯಿಂದ ಮಾಡಬೇಕು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ರೀತಿಯಾಗಿ ನಾವು ನಮ್ಮ ಜೀವನವನ್ನು ನಡೆಸಬೇಕು. ಕೇವಲ ಶಬ್ದಗಳನ್ನು ಮಾತ್ರ ಅಧ್ಯಯನ ಮಾಡುವುದು ಶಿಕ್ಷಣವೆನಿಸುವುದಿಲ್ಲ.

ವಿದ್ಯಯಾ ವಿನಯಾವಾಪ್ತಿಃ ಸಾ ಚೇದವಿನಯಾವಹ ।
ಕಿಂ ಕುರ್ಮಃ ಕಿಂ ಪ್ರತಿಕುರ್ಮೋ ಗರದಾಯಾಂ ಸ್ವಮಾತರಿ ॥

(ವಿದ್ಯೆಯಿಂದ ವಿನಯವು ಉಂಟಾಗಬೇಕು. ವಿದ್ಯೆಯು ವಿನಯವನ್ನುಂಟು ಮಾಡದಿದ್ದರೆ, ಅಂತಹ ವಿದ್ಯೆಯ ವಿಷಯದಲ್ಲಿ ನಾವು ಏನನ್ನು ತಾನೇ ಹೇಳಲಾದೀತು ? ಅಂತಹ ವಿದ್ಯೆಯು, ತನ್ನ ಮಗುವಿಗೆ ವಿಷವನ್ನು ಕೊಡುವ ತಾಯಿಗೆ ಸಮನಾಗಿರುತ್ತದೆ.)

ಯಾವುದರಿಂದ ಇಹ ಮತ್ತು ಪರಗಳಲ್ಲಿ ಸೌಖ್ಯವನ್ನು ಹೊಂದುವುದಕ್ಕೆ ಯಾವುದು ಕಾರಣವಾಗುವುದೋ ಅದು ವಿದ್ಯೆ. ಹಾಗಿಲ್ಲದಿದ್ದರೆ, ಅದು ಕೇವಲ ಅಜ್ಞಾನ. ವಿದ್ಯಾಧ್ಯಯನದ ಸಮಯದಲ್ಲಿ ಶೌಚ ಮತ್ತು ಆಚಾರಕ್ಕೆ ಪ್ರಾಮುಖ್ಯತೆಯನ್ನು ಕೊಡಬೇಕು.

ಮನುವು ಹೇಳುತ್ತಾನೆ—

ಉಪನೀಯ ಗುರುಃ ಶಿಷ್ಯಂ ಶಿಕ್ಷಯೇ ಚ್ಛೌಚಮಾದಿತಃ ।
ಆಚಾರಮಗ್ನಿಕಾರ್ಯಂಚ ಸಂಧ್ಯೋಪಾಸನ ಮೇವಚ ॥

(ಗುರುವು, ತನ್ನ ಶಿಷ್ಯನಿಗೆ ಉಪನಯನ ಮಾಡಿದ ನಂತರ, ಶೌಚ, ಆಚಾರ, ಸಮಿದಾಧಾನ ಮತ್ತು ಸಂಧ್ಯೋಪಾಸನೆ–ಈ ವಿಷಯಗಳಲ್ಲಿ ಶಿಕ್ಷಣ ಕೊಡಬೇಕು.)

ವೇದ ಹೇಳುತ್ತದೆ—

ಯನ್ಮನುರಬ್ರವೀತ್ ತದ್ಭೇಷಜಮ್ ।

(ಮನುವು ಯಾವುದನ್ನು ಹೇಳಿರುತ್ತಾನೋ ಅದು ಔಷಧವಂತೆ)

ಮನುವು ಹೇಳಿರುವಂತೆ ಶೌಚವು ಎರಡು ವಿಧ; (i) ಬಾಹ್ಯಶೌಚ ; ಮತ್ತು (ii) ಆಂತರಿಕ ಶೌಚ.

ಮೃಜ್ಜಲಾಭ್ಯಾಂ ಬಹಿಃ ಶೌಚಮ್ ।

(ಮೃತ್ ಮತ್ತು ಜಲದಿಂದ ಬಹಿಃ ಶೌಚ ಉಂಟಾಗುತ್ತದೆ.)

ಕಾಮಕ್ರೋಧಾದಿ ತ್ಯಾಗಃ ಅಭ್ಯಂತರ ಶೌಚಮ್ ।

(ಕಾಮಕ್ರೋಧಾದಿಗಳನ್ನು ತ್ಯಜಿಸುವುದು ಅಭ್ಯಂತರ ಶೌಚ)

ಧರ್ಮ ಶಾಸ್ತ್ರಗಳಲ್ಲಿ ಈ ರೀತಿ ಹೇಳಲಾಗಿದೆ—

ಪ್ರಾಗುಪನಯನಾತ್ಕಾಮಾಚಾರಃ ಕಾಮವಾದಃ ಕಾಮಭಕ್ಷಃ ।

(ಉಪನಯನಕ್ಕೆ ಮುಂಚೆ ಇಷ್ಟಬಂದತೆ ಇರಬಹುದು, ಮಾತನಾಡಬಹುದು ಮತ್ತು ತಿನ್ನಬಹುದು)

Sri Vidyabharathi Book Centre, Sringeri

CC-O. In Public Domain. Digitized by eGangotri

ಮೇಲೆ ಹೇಳಿದಂತೆ ಇದ್ದರೂ ಸಹ, ಉಪನಯನದ ನಂತರ ಎಲ್ಲ ನಿಯಮಗಳನ್ನೂ ಅನುಸರಿಸಬೇಕು. ಆಚಾರವೆಂದರೆ, ದೊಡ್ಡವರು ಮತ್ತು ಅವರಿಗೆ ಸರಿಸಮನಾದವರಲ್ಲಿ ಪೂಜ್ಯತೆ ಇರುವುದು.—

ಅಭಿವಾದನ ಶೀಲಸ್ಯ ನಿತ್ಯಂ ವೃದ್ಧೋಪಸೇವಿನಃ ।
ಚತ್ವಾರಿ ತಸ್ಯ ವರ್ಧಂತೇ ಆಯುರ್ವಿದ್ಯಾಯಶೋಬಲಮ್ ॥

(ಯಾರು ವೃದ್ಧರಿಗೆ ನಮಸ್ಕಾರ ಮತ್ತು ಸೇವೆ ಮಾಡುತ್ತಾರೋ ಅಂತಹವರ ಆಯುಸ್ಸು, ವಿದ್ಯಾ, ಯಶಸ್ಸು ಮತ್ತು ಬಲವೃದ್ಧಿಯಾಗುತ್ತದೆ).

ಸಜ್ಯೋತಿಷ್ಯಾ ಜ್ಯೋತಿಷೋ ದರ್ಶನಾತ್ ವಾಗ್ಯತಃ ।

(ಪ್ರಾತಃ ಕಾಲದಲ್ಲಿ ಸೂರ್ಯೋದಯಕ್ಕೆ ಮುಂಚೆ ಇನ್ನೂ ನಕ್ಷತ್ರಗಳು ಕಾಣುತ್ತಿರುವಾಗ ಮತ್ತು ಸಾಯಂಕಾಲದಲ್ಲಿ ಸೂರ್ಯಾಸ್ತಕ್ಕೆ ಮುಂಚೆ ಅರ್ಘ್ಯವನ್ನು ಅರ್ಪಿಸಬೇಕು. ಅದರ ನಂತರ ಗಾಯತ್ರೀ ಜಪವನ್ನು ಮಾಡಬೇಕು. ಇದೇ ಧರ್ಮಶಾಸ್ತ್ರಗಳಲ್ಲಿ ಹೇಳಲಾಗಿರುವ ಧಾರ್ಮಿಕ ವಿಧಿ) ಆ ಸಮಯದಲ್ಲಿ ಗಾಯತ್ರಿ ಜಪವನ್ನು ಪ್ರಾರಂಭಿಸಬೇಕು.

ಜಪ್ಯೇನೈವ ಸಂಸಿಧ್ಯೇತ್ ಬ್ರಾಹ್ಮಣೋ ನಾತ್ರ ಸಂಶಯಃ ।
ಕುರ್ಯಾದನ್ಯನ್ನವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥

(ಜಪ ಮಾತ್ರದಿಂದಲೇ ಬ್ರಾಹ್ಮಣನು ಪರವನ್ನು ಹೊಂದುತ್ತಾನೆ. ಅವನು ಇತರ ಕಾರ್ಯಗಳನ್ನು ಆಚರಿಸಲಿ ಅಥವಾ ಬಿಡಲಿ, ಅವನು ಪರತತ್ತ್ವದೊಡನೆ ಮೈತ್ರಿಯಿಂದಿರುತ್ತಾನೆಂದು ಹೇಳಲಾಗಿದೆ.)

ಇತರ ಎಲ್ಲಾ ಸಾಧನಗಳಿಗಿಂತ ಜಪವೇ ಅತ್ಯಂತ ಶ್ರೇಷ್ಠವಾದುದೆಂದು ಹೇಳಲಾಗಿದೆ. ಭಗವದ್ಗೀತೆಯಲ್ಲಿ ಹೇಳಲಾಗಿದೆ–

ಯಜ್ಞಾನಾಂ ಜಪಯಜ್ಞೋಽಸ್ಮಿ ।

(ಎಲ್ಲ ಯಜ್ಞಗಳಿಗಿಂತ, ನಾನು ಜಪಯಜ್ಞನಾಗಿದ್ದೇನೆ)

ಇದೆಲ್ಲವನ್ನೂ ಹೊಂದುವುದಕ್ಕೆ ಇಂದ್ರಿಯ ನಿಗ್ರಹ ಅತ್ಯಗತ್ಯ. ಆಶೆಗಳನ್ನೆಲ್ಲ ಅನುಭವಿಸಿದ ನಂತರ ಅವನ್ನು ನಿಗ್ರಹಿಸುವುದೆಂಬುದು, ಉಪ್ಪು ನೀರನ್ನು ಕುಡಿದು ಬಾಯಾರಿಕೆಯನ್ನು ಅಡಗಿಸುವ ಪ್ರಯತ್ನಕ್ಕೆ ಸದೃಶವಾದುದು.

ನ ಜಾತುಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

(ಅನುಭವಿಸುವುದರಿಂದ ಆಸೆಗಳು ಕಡಿಮೆಯಾಗುವುದಿಲ್ಲ. ಅನುಭವಿಸುವುದರಿಂದ ಆಸೆಗಳು ಹೆಚ್ಚುತ್ತವೆ ; ತುಪ್ಪವನ್ನು ಹಾಕುವುದರಿಂದ ಅಗ್ನಿಯು ವೃದ್ಧಿಸುವಂತೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಯತ್ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂಪಶವಃ ಸ್ತ್ರಿಯಃ ।
ಏಕಸ್ಯಾಪಿ ನಪರ್ಯಾಪ್ತಂ ತದಿತ್ಯತಿತೃಷಂ ತ್ಯಜೇತ್ ॥

(ಭೂಮಿ, ವ್ರೀಹಿ, ಯವ, ಚಿನ್ನ, ಪಶುಗಳು, ಸ್ತ್ರೀಯರು–ಇವುಗಳಿಂದ ಸಂಪೂರ್ಣವಾದ ತೃಪ್ತಿಯು ಲಭಿಸುವುದಿಲ್ಲ. ಆದ್ದರಿಂದ ದುರಾಸೆಯನ್ನು ತ್ಯಜಿಸಬೇಕು).

ಜಿತೇಂದ್ರಿಯತ್ವಂ ವಿನಯಸ್ಯಕಾರಣಂ ಗುಣಪ್ರಕರ್ಷೋ ವಿನಯಾದವಾಪ್ಯತೇ ।
ಗುಣಾಧಿಕೇ ಪುಂಸಿ ಜನೋಽನುರಜ್ಯತೇ ಜನಾನುರಾಗ ಪ್ರಭವಾಹಿ ಸಂಪದಃ ॥

ನಮ್ಮ ಪೂರ್ವಿಕರು ಹೇಳಿದ್ದಾರೆ—

(ಇಂದ್ರಿಯ ನಿಗ್ರಹ ಮಾಡುವುದು ವಿನಯಕ್ಕೆ ಕಾರಣ. ವಿನಯದಿಂದ ಶ್ರೇಷ್ಠವಾದ ಗುಣಗಳನ್ನು ಹೊಂದುತ್ತಾನೆ. ಅಧಿಕವಾದ ಶ್ರೇಷ್ಠ ಗುಣಗಳನ್ನು ಹೊಂದಿರುವವನನ್ನು ಜನಗಳು ಪ್ರೀತಿಸುತ್ತಾರೆ. ಜನಾನುರಾಗದಿಂದ ಸಂಪತ್ತು ಲಬ್ಧವಾಗುತ್ತದೆ.)

ಈ ವಿದ್ಯೆಯನ್ನು ಉಪದೇಶ ಮಾಡುವವನೇ ಗೌರವಕ್ಕೆ ಅರ್ಹನು. ಆತನೇ ಪೂಜ್ಯನಾದ ವ್ಯಕ್ತಿ. ಕೇವಲ ವಯಸ್ಸಿನಿಂದ ಮಾತ್ರವೇ ವ್ಯಕ್ತಿಯು ದೊಡ್ಡ ಮನುಷ್ಯನಾಗುವುದಿಲ್ಲ.

ನ ತೇನ ವೃದ್ಧೋ ಭವತಿ ಯೇನಾಸ್ಯ ಪಲಿತಂ ಶಿರಃ ।
ಯೋ ವೈ ಯುವಾಪ್ಯಧೀಯಾನಸ್ತಂ ದೇವಾಸ್ಥವಿರಂವಿದುಃ ॥

(ವಯಸ್ಸಿನ ಪರಿಣಾಮದಿಂದ) ನರೆತ ಕೂದಲು ಇರುವ ಮಾತ್ರದಿಂದ ವ್ಯಕ್ತಿಯೊಬ್ಬನು ವೃದ್ಧನಾಗುವುದಿಲ್ಲ; ಯುವಕನಾಗಿದ್ದರೂ, ಯಾರು ಅಧ್ಯಯನ ಮಾಡಿರುತ್ತಾರೋ, ದೇವತೆಗಳು ಅವನನ್ನು ವೃದ್ಧ ಎನ್ನುತ್ತಾರೆ).

ಲೌಕಿಕ ವಿದ್ಯೆಯನ್ನು ಹೊಂದಿರುವ ಹಾಗೂ ಮುಕ್ತಿ ಮಾರ್ಗವನ್ನು ತಿಳಿಯದಿರುವವನಿಗಿಂತ, ಇಹದಲ್ಲಿ ಮತ್ತು ಪರದಲ್ಲಿ ಉತ್ತಮವಾದ ಮಾರ್ಗವನ್ನು ತೋರಿಸುವ ಗುರುವಿನ ಶಕ್ತಿಯು ಮಹತ್ತರವಾದುದು.

ಶ್ರೀ ಭಗವತ್ಪಾದರು ಹೀಗೆ ಉಪದೇಶಿಸುತ್ತಾರೆ—

ಭವತಿ ನಿರುಪಮಸ್ತ್ರೇಽನ್ಯವಾ ಲೌಕಿಕೇಽಪಿ ।

(ಗುರುವಿಗೆ ಸದೃಶವಾದುದು ಯಾವುದೂ ಇಲ್ಲ ಮತ್ತು ಅಲೌಕಿಕನಾದವನು) ಗೌತಮರು ಜಾತಕರ್ಮ, ನಾಮಕರಣ ಮೊದಲಾದ 24 ಸಂಸ್ಕಾರಗಳನ್ನು ಕುರಿತು ಹೇಳಿರುತ್ತಾರೆ. ಅವರು ಈ ಮುಂದಿನ ಆತ್ಮನ ಗುಣಗಳನ್ನೂ ಹೇಳಿರುತ್ತಾರೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ದಯಾ ಸರ್ವಭೂತೇಷು ಕ್ಷಾಂತಿರನಸೂಯಾ ।
ಶೌಚಮನಾಯಾಸಃ ಮಂಗಲಮಕಾರ್ಪಣ್ಯಮಸ್ಪೃಹೇತಿ ॥

(ಎಲ್ಲರ ವಿಷಯದಲ್ಲಿಯೂ ದಯೆ, ಸಹನೆ, ಅಸೂಯೆ ಇಲ್ಲದಿರುವುದು, ಶುಚಿತ್ವ, ಸೋಮಾರಿತನವಿಲ್ಲದಿರುವುದು, ಮಂಗಳ, ಇನ್ನೊಬ್ಬರಲ್ಲಿ ದೋಷಗಳನ್ನು ಹುಡುಕದಿರುವುದು, ಮತ್ತು ರಾಗವಿಲ್ಲದಿರುವುದು).

ಕೊನೆಯಲ್ಲಿ ಹೇಳಿದ್ದಾರೆ—

ಯಸ್ಯೈತೇ ಚತ್ವಾರಿಂಶತ್ಸಂಸ್ಕಾರಾಃ ನ ಚ ಅಷ್ಟಾವಾತ್ಮಗುಣಾಃ ।
ನ ಸಬ್ರಹ್ಮಣಃ ಸಾಯುಜ್ಯಂ ಸಾಲೋಕ್ಯಂ ಗಚ್ಛತಿ ॥

(ಯಾರಿಗೆ ಈ ಎಲ್ಲ 24 ಸಂಸ್ಕಾರಗಳು ಆಗಿದ್ದರೂ, ಎಂಟು ಆತ್ಮ ಗುಣಗಳನ್ನು ಹೊಂದಿರುವುದಿಲ್ಲವೋ, ಅವನು ಬ್ರಹ್ಮನ ಸಾಯುಜ್ಯವನ್ನಾಗಲೀ ಸಾಲೋಕ್ಯವನ್ನಾಗಲೀ ಹೊಂದುವುದಿಲ್ಲ).

ಆದ್ದರಿಂದ, ಬೇರೆಯ ಗುಣಗಳು ಇಲ್ಲದಿದ್ದರೂ ಈ ಎಂಟು ಆತ್ಮಗುಣಗಳು ಇರುವ ಮಾತ್ರದಿಂದಲೇ ವಿದ್ಯೆಯ ಸಂಪೂರ್ಣ ಫಲವು ದೊರಕುತ್ತದೆಂಬುದು ಸ್ಪಷ್ಟವಾಗುತ್ತದೆ. ಪ್ರಯತ್ನಪೂರ್ವಕವಾಗಿ ಈ ಗುಣಗಳನ್ನು ಹೊಂದಬೇಕು.

ಆತ್ಮವು ದೇಹಕ್ಕಿಂತ ಬೇರೆಯಾದುದು

ಬೃಹದಾರಣ್ಯಕ ಉಪನಿಷತ್ತು ಹೇಳುತ್ತದೆ—

ಆತ್ಮನಸ್ತು ಕಾಮಾಯ ಸರ್ವಂ ಪ್ರಿಯಂ ಭವತಿ ।

(ಆತ್ಮನಿಗಾಗಿಯೇ ಎಲ್ಲವೂ ಪ್ರಿಯವಾಗುತ್ತವೆ)

ಒಬ್ಬನಿಗೆ ತನ್ನ ಮಗ ಅಥವಾ ಹೆಂಡತಿಯ ಮೇಲೆ ಪ್ರೀತಿ ಇರುತ್ತದೆ, ಅವರಿಗಾಗಿ ಅಲ್ಲ. ಆದರೆ ತನಗಾಗಿಯೇ. ತನ್ನಲ್ಲಿಯೇ ಪ್ರೀತಿಯಿರುವುದರಿಂದ ಮಾತ್ರವೇ ಒಬ್ಬನು ಇತರರನ್ನು ಪ್ರೀತಿಸುತ್ತಾನೆ. ಈ ವಿಷಯವನ್ನೇ ಭಗವತ್ಪಾದರು ತಿಳಿಸಿದ್ದಾರೆ.

ಯಸ್ಮಾದ್ಯಾವತ್ಪ್ರಿಯಂ ಸ್ಯಾದಿಹ ಹಿ ವಿಷಯತಸ್ತಾವದಸ್ಮಿನ್ಪ್ರಿಯತ್ವಂ
ಯಾವದ್ದುಃಖಂ ಚಯಸ್ಮಾದ್ಭವತಿ ಖಲು ತತಸ್ತಾವದೇವಾಪ್ರಿಯತ್ವಮ್ ।
ನೈಕಸ್ಮಿನ್ ಸರ್ವಕಾಲೇಽಸ್ತ್ಯುಭಯಮಪಿ ಕದಾಽಪ್ಯಪ್ರಿಯೋಽಪಿಪ್ರಿಯಃಸ್ಯಾತ್
ಪ್ರೇಯಾಸಪ್ಯಪ್ರಿಯೋವಾ ಸತತಮಪಿ ತತಃ ಪ್ರೇಯ ಆತ್ಮಾಖ್ಯ ವಸ್ತು ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಎಲ್ಲಿಯವರೆಗೆ ವಿಷಯವೊಂದರಿಂದ ವ್ಯಕ್ತಿಯು ಸೌಖ್ಯವನ್ನು ಹೊಂದುತ್ತಾನೋ, ಅಲ್ಲಿಯ ತನಕ ಅದು ಪ್ರಿಯವಾಗಿರುತ್ತದೆ; ಅದರಿಂದ ದುಃಖವುಂಟಾಗುವುದಾದರೆ ಆ ವಿಷಯವನ್ನು ವ್ಯಕ್ತಿಯು ಪ್ರೀತಿಸುವುದಿಲ್ಲ. ಒಂದೇ ವಸ್ತುವು ಯಾವಗಲೂ ಪ್ರಿಯ ಹಾಗೂ ಅಪ್ರಿಯವಾಗಿರಲು ಸಾಧ್ಯವಿಲ್ಲ. ಅಲ್ಲದೆ, ಪ್ರಿಯವಾಗಿರುವ ವಸ್ತುವು ಅಪ್ರಿಯ ವಾಗಬಹುದು. ಆದ್ದರಿಂದ, ಆತ್ಮವೊಂದೇ ಪ್ರಿಯವಾಗಿರುವುದು).

ಸಾಮಾನ್ಯವಾಗಿ, ಒಬ್ಬನು ಇನ್ನೊಬ್ಬರ ಮೇಲೆ ಪ್ರೀತಿ ಹೊಂದಿರುವುದು ಇನ್ನೊಬ್ಬರಿಗಾಗಿಯೇ ಎಂದು ತೋರಬಹುದು. ಅನೇಕರು ಹೀಗೆ ಯೋಚಿಸುತ್ತಾರೆ– "ನಾನು ಇದನ್ನ ಅವನಿಗಾಗಿಯೇ ಮಾಡುತ್ತೇನೆ. ಅವರು ಇದನ್ನು ನನಗಾಗಿಯೇ ಮಾಡುತ್ತಾರೆ". ಆದ್ದರಿಂದ, ಕೇವಲ ವಸ್ತುಗಳಿಗಾಗಿ ಮಾತ್ರವೇ ವಸ್ತುಗಳು ಒಬ್ಬ ನಿಗೆ ಪ್ರಿಯವಾಗುತ್ತವೆಂಬ ಸಂದೇಹವು ಸ್ವಾಭಾವಿಕವಾಗಿ ಉದಯಿಸುತ್ತವೆ. ಕೆಲವು ವೇಳೆ ನಾವು ಮತ್ತೊಬ್ಬರಿಗಾಗಿ ತ್ಯಾಗ ಮಾಡಲೂ ಸಿದ್ಧರಾಗುತ್ತೇವೆ. ಕೆಲವು ವೇಳೆ ವಸ್ತುವೊಂದು ಒಬ್ಬನಿಗೆ ಒಳ್ಳೆಯದಾಗಿ ಕಾಣಬಹುದು, ಆದರೆ, ಮತ್ತೊಬ್ಬನಿಗೆ ಹಾಗಿಲ್ಲದಿರಬಹುದು. ಲೌಕಿಕ ವಸ್ತುಗಳಿಂದ ನಾವು ಸೌಖ್ಯವನ್ನು ಪಡೆಯುತ್ತೇವೆ, ಆದರೆ ಸತ್ಪುರುಷರು ಲೌಕಿಕ ವಸ್ತುಗಳಲ್ಲಿ ಆಸಕ್ತರಾಗಿರುವುದಿಲ್ಲ. ವಿಚಾರ ಮಾಡಿ ನೋಡಿದರೆ, ಮಹಾತ್ಮರು, ಲೌಕಿಕ ಸೌಖ್ಯಗಳನ್ನು ತ್ಯಾಗ ಮಾಡಿ, ಆತ್ಮರತರಾಗಿ ಸೌಖ್ಯವನ್ನು ಹೊಂದುತ್ತಾರೆ. ಈ ವಸ್ತುಗಳು ದುಃಖಗಳನ್ನುಂಟು ಮಾಡುತ್ತವೆಂದು ಮಹಾತ್ಮರು ನಿಶ್ಚಯ ಹೊಂದಿರುತ್ತಾರೆ. ಪ್ರಪಂಚದಲ್ಲಿನ ದುಃಖವನ್ನು ನೋಡಲು ಸಹಿಸುವುದಿಲ್ಲ; ಆದ್ದರಿಂದ, ಪ್ರಪಂಚದ ಸೌಖ್ಯಕ್ಕಾಗಿ ಅವರು ಶ್ರಮ ಪಡುತ್ತಾರೆ. ಆದ್ದರಿಂದ ಸೌಖ್ಯವನ್ನು ಹೊಂದುವುದಕ್ಕಾಗಿ ಒಬ್ಬನು ಶ್ರಮ ಪಡುತ್ತಾನೆ. ಒಬ್ಬನು ತನ್ನ ಹೆಂಡತಿ ಮತ್ತು ಮಗನನ್ನು ಅತಿ ಪ್ರೀತಿಸಿದರೂ, ಅದಕ್ಕಿಂತಲೂ ಅಧಿಕ ವಾಗಿ ತನ್ನ ಆತ್ಮವನ್ನು ಪ್ರೀತಿಸುತ್ತಾನೆ. ಆದ್ದರಿಂದಲೇ ವಿದ್ಯಾರಣ್ಯರು ಹೇಳುತ್ತಾರೆ– "ಗಡ್ಡ ಕೂದಲಿನಿಂದ ಚುಚ್ಚಲ್ಪಟ್ಟ ಮಗುವು ಅಳುತ್ತಿದ್ದರೂ, ತಂದೆಯು ಆಗಾಗ ಅದನ್ನು ಮುದ್ದಿಸುತ್ತಾನೆ". ಲೌಕಿಕ ವಸ್ತುಗಳನ್ನು ಕುರಿತು ನಾವು ಚರ್ಚಿಸುತ್ತೇವೆ ಮತ್ತು ಅದರ ವಾಸ್ತವ ಸ್ವರೂಪವನ್ನು ತಿಳಿಯಲು ಪ್ರಯತ್ನ ಪಡುತ್ತೇವೆ. ಆದರೆ, ಯಾರೊಬ್ಬರೂ ತನ್ನ ವಾಸ್ತವ ಸ್ವರೂಪವನ್ನು ತಿಳಿಯಲು ಪ್ರಯತ್ನ ಪಡುವುದಿಲ್ಲ. ಅಂತಹ ಪ್ರಯತ್ನವು ಅಪರೂಪ. ತನ್ನ ವಾಸ್ತವ ಸ್ವರೂಪ ತಿಳಿಯಲು ಒಬ್ಬನು ಅದೃಷ್ಟಶಾಲಿಯಾಗಿರಬೇಕು.

ಶ್ರವಣಯಾಪಿ ಬಹುಭಿರ್ಯೋನ ಲಭ್ಯಃ
ಶೃಣ್ವಂತೋऽಪಿ ಬಹವೋ ಯಂ ನ ವಿದುಃ ।
ಆಶ್ಚರ್ಯೋ ವಕ್ತಾ ಕುಶಲೋऽಸ್ಯ ಲಬ್ಧಾऽऽ
ಶ್ಚರ್ಯೋ ಜ್ಞಾತಾ ಕುಶಲಾನುಶಿಷ್ಟಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಆತ್ಮವು ಅನೇಕರಿಗೆ ಕೇಳುವುದಕ್ಕೂ ಸಿಗುವುದಿಲ್ಲ ; ಅನೇಕರು ಕೇಳಿದರೂ ಅದನ್ನು ತಿಳಿಯುವುದಿಲ್ಲ ; ಅದನ್ನು ತಿಳಿಸುವವನು ಆಶ್ಚರ್ಯಕರನಾದ ವ್ಯಕ್ತಿ ಹಾಗೂ ಅದನ್ನು ತಿಳಿಯುವವನು ಕುಶಲನು ; ಕುಶಲನಾದವನಿಂದ ಅನುಶಾಸನ ಮಾಡಲ್ಪಟ್ಟು ಅದನ್ನು ತಿಳಿಯುವವನು ಆಶ್ಚರ್ಯಕರನು.)

ಹೀಗೆ, ಆತ್ಮವಸ್ತುವಿನ ಜ್ಞಾನ ಹೊಂದುವುದು ಬಹು ಕಠಿಣವೆಂದು ವೇದಗಳು ತಿಳಿಸುತ್ತವೆ.

ಚಾರ್ವಾಕನ ದೃಷ್ಟಿ—

ಅತ್ಯಂತ ಪ್ರೀತಿಗೆ ಪಾತ್ರವಾಗಿರುವ ಆತ್ಮವು ದೇಹಕ್ಕಿಂತ ಬೇರೆಯಲ್ಲವೆಂದು ಮೂರ್ಖನೂ ಸಹ ತಿಳಿದಿರುತ್ತಾನೆ. ದೇಹಕ್ಕಿಂತ ಬೇರೆಯಾಗಿ ಆತ್ಮವನ್ನು ನೋಡುವುದಿಲ್ಲ "ನಾನು ಸ್ಥೂಲ", "ನಾನು ಕೃಶ"-ಎಂಬ ಭಾವನೆಗಳು ಸಾಧಾರಣ ವ್ಯಕ್ತಿಗಳಿಗೂ ಹಾಗೂ ವಿದ್ವಾಂಸರಿಗೂ ಬರುತ್ತವೆ. ಇಂತಹ ಸಂದರ್ಭಗಳಲ್ಲಿ "ನಾನು" ಎಂಬ ಪದವು ದೇಹವನ್ನು ಸೂಚಿಸುವುದಕ್ಕೆ ಉಪಯುಕ್ತವಾಗಿದೆ. ಒಂದು ವೇಳೆ ದೇಹ ಮತ್ತು ಆತ್ಮ ಎರಡೂ ಬೇರೆಯಾಗಿದ್ದಿದ್ದರೆ, "ನಾನು ಸುಂದರ"-ಮುಂತಾದ ಭಾವನೆಗಳು ಬರಬಾರದಾಗಿತ್ತು. ಅಂತಹ ಭಾವನೆಗಳು, ಸ್ಫಟಿಕವು ಕೆಂಪಗಿದೆ ಎಂದು ವ್ಯವಹರಿಸುವುದಕ್ಕೆ ಸದೃಶವಾಗಿ, ಕೇವಲ ಭ್ರಾಂತಿಗಳೆಂದು ವೇದಾಂತಿಗಳು ಹೇಳುತ್ತಾರೆ. ಅಂತಹ ಭಾವನೆಗಳು ಭ್ರಾಂತಿಗಳಾದರೆ, ಒಂದಲ್ಲ ಒಂದು ದಿನ ಆ ಭ್ರಾಂತಿಯು ಹೋಗಬೇಕಾಗುತ್ತದೆ. ಆದರೆ ಸಾಮಾನ್ಯ ಜನರಿಗೆ ಮತ್ತು ವಿದ್ವಾಂಸರಿಗೆ "ನಾನು ಬ್ರಾಹ್ಮಣ", "ನಾನು ಸುಂದರ"-ಎಂದು ಮುಂತಾದ ಭಾವನೆಗಳು ಹೋಗುವುದಿಲ್ಲ. ಆದ್ದರಿಂದ, ಮೇಲೆ ಹೇಳಿದ ಭಾವನೆಗಳು ವಾಸ್ತವವಾದವುಗಳೆಂದು ನಾವು ನಿರ್ಧರಿಸಬೇಕು. ಹೀಗೆ, ಆತ್ಮವೆಂದರೆ ನಾವು ಹೇಳುವುದು ದೇಹವನ್ನೇ. ದೇಹವಿದ್ದಲ್ಲಿ ಮಾತ್ರ ಚೈತನ್ಯವು ಕಂಡು ಬರುತ್ತದೆ. ದೇಹವು ಪಂಚಮಹಾ ಭೂತಗಳ ಸಂಘಾತ ಹೀಗಿದ್ದರೆ, "ಕಲ್ಲು, ಮಣ್ಣು, ಮುಂತಾದುವಲ್ಲಿ ಚೈತನ್ಯವು ಏಕೆ ಕಂಡು ಬರುವುದಿಲ್ಲ" ಎಂದು ಮುಂತಾದ ಸಂದೇಹಗಳು ಉಂಟಾಗಬಹುದು. ಮದ್ಯದ ಒಂದು ಅಂಗವಾದ ಬೆಲ್ಲದಲ್ಲಿ ಮದ ಶಕ್ತಿಯು ಕಂಡು ಬರದಿರುವಂತೆ, ಪಂಚ ಮಹಾಭೂತಗಳ ಸಂಘಾತವಾದರೂ ಕಲ್ಲು, ಮಣ್ಣು, ಮುಂತಾದುವುಗಳಲ್ಲಿ ಚೈತನ್ಯವು ಕಂಡು ಬರುವುದಿಲ್ಲ. ದೇಹದ ರೂಪವನ್ನುಂಟುಮಾಡುವುದಕ್ಕೆ ಪಂಚ ಮಹಾ ಭೂತಗಳು ಸಂಘಾತವಾಗುವಲ್ಲಿ ಮಾತ್ರ ಚೈತನ್ಯ ಕಂಡು ಬರುತ್ತದೆ. ಆದ್ದರಿಂದ ಪಂಚ ಮಹಾಭೂತ ವಿಶಿಷ್ಟವಾದ ಸಂಘಾತವಾಗುವಲ್ಲಿ ಮಾತ್ರ ಚೈತನ್ಯ ಉದಯಿಸುತ್ತದೆ. ಅಂತಹ ವಿಶಿಷ್ಟವಾದ ಸಂಘಾತವೊಂದು ಕಲ್ಲು, ಮಣ್ಣು ಮುಂತಾದುವುಗಳಲ್ಲಿ ಕಂಡುಬರದಿರುವುದರಿಂದ, ಚೈತನ್ಯವು ಅವುಗಳಲ್ಲಿ ಕಂಡುಬರುವುದಿಲ್ಲ. ಚೈತನ್ಯವಿರುವಲ್ಲಿ ಮಾತ್ರ ಸುಖ ಮತ್ತು ದುಃಖ ಇರುತ್ತವೆ. ಚೈತನ್ಯವಿಲ್ಲದಿರುವುದರಿಂದ ಸುಖ ಮತ್ತು ದುಃಖ ಕಲ್ಲು, ಮಣ್ಣುಗಳಲ್ಲಿ ಕಂಡುಬರುವು

Sri Vidyabharathi Book Centre, Sringeri

CC-O. In Public Domain. Digitized by eGangotri

ದಿಲ್ಲ. ಆದುದರಿಂದ, ಕಲ್ಲು, ಮಣ್ಣು ಮುಂತಾದುವಲ್ಲಿ ಚೈತನ್ಯ ಏಕಿಲ್ಲ, ಹಾಗೂ ಅವುಗಳಲ್ಲಿ ಸುಖ, ದುಃಖ ಏಕಿಲ್ಲ ಎಂಬ ಆಕ್ಷೇಪವು ಸಮಂಜಸವಲ್ಲ. ಯಾವುದರಿಂದ ವಸ್ತುಗಳ ಜ್ಞಾನವುಂಟಾಗುವುದೋ, ಅದನ್ನು ಪ್ರಮಾಣವೆಂದು ಅಂಗೀಕರಿಸಬಹುದು. ಕಣ್ಣು, ಕಿವಿ, ಮೂಗು, ನಾಲಿಗೆ ಮತ್ತು ಚರ್ಮ ಇವುಗಳಿಂದ ಜ್ಞಾನವುಂಟಾಗುತ್ತದೆ. ಆದ್ದರಿಂದ ಇವುಗಳನ್ನು ಪ್ರಮಾಣಗಳೆಂದು ನಾವು ಅಂಗೀಕರಿಸಬೇಕು. ಆದರೆ, ಇವುಗಳಿಂದ ದೇಹಕ್ಕಿಂತ ಬೇರೆಯಾದ ಆತ್ಮವಸ್ತುವನ್ನು ತಿಳಿಯಲಾಗುವುದಿಲ್ಲ.

ಮಾನಾಧೀನಾ ಮೇಯ ಸಿದ್ಧಿಃ

(ಜ್ಞಾನವು ಪ್ರಮಾಣಕ್ಕೆ ಅಧೀನವಾಗಿರುತ್ತದೆ)

ಇದರ ಆಧಾರದಿಂದ, ಸ್ವತಂತ್ರವಾದ ಆತ್ಮ ವಸ್ತುವಿನ ಅಸ್ತಿತ್ವವನ್ನು ನಾವು ಅಂಗೀಕರಿಸಲು ಸಾಧ್ಯವಿಲ್ಲ. ದೇಹವೇ ಆತ್ಮವೆಂದು ಅಂಗೀಕರಿಸುವವರಿಗೆ, ಮರಣವೇ ಮೋಕ್ಷ. ಆದ್ದರಿಂದ ಅವರು ಹೇಳುತ್ತಾರೆ—

ಭಸ್ಮೀಭೂತಸ್ಯ ದೇಹಸ್ಯ ಪುನರಾಗಮನಂಕುತಃ ?

(ಭಸ್ಮವಾಗಿರುವ ದೇಹವು ಮತ್ತೆ ಹೇಗೆ ಬರುತ್ತದೆ ?)

ದೇಹವಿಲ್ಲದಿರುವಾಗ ಸುಖದುಃಖಗಳು ಬರುವುದಿಲ್ಲ. ಈಗ ನಾವು ಅನುಭವಿಸುತ್ತಿರುವುದೇ ಸುಖ–ದುಃಖಗಳು. ಹೀಗಿರುವಾಗ, ಪರಲೋಕದಲ್ಲಿನ ಸುಖ–ದುಃಖದ ವಿಷಯದಲ್ಲಿ ನಾವು ಯೋಚಿಸಬೇಕಾದ ಅಗತ್ಯವಿಲ್ಲ. ಈ ಜನ್ಮದಲ್ಲಿಯೇ ಸೌಖ್ಯವನ್ನು ಅನುಭವಿಸುವುದಕ್ಕೆ ನಾವು ಶ್ರಮಪಡಬೇಕು. ಇಲ್ಲಿ ಒಂದು ಪ್ರಶ್ನೆ ಬರಬಹುದು– "ನೀನು ಹೇಳುವುದು ಎಲ್ಲರಿಗೂ ಗೊತ್ತಿರುವುದಾದರೆ, ನಿನ್ನ ತತ್ತ್ವವನ್ನು ಪ್ರಚಾರ ಮಾಡುವುದಕ್ಕೆ ಏಕೆ ಪ್ರಯತ್ನಿಸುತ್ತಿರುವೆ ?"—ಎಂದು. ಉತ್ತರ–"ವಾಸ್ತವವಾಗಿ ಹಣವೇ ಎಲ್ಲಕ್ಕಿಂತ ಪ್ರಮುಖವಾದುದು. ಹಣವನ್ನು ಸಂಪಾದಿಸುವುದರಿಂದ ಎಲ್ಲ ಸೌಖ್ಯಗಳನ್ನೂ ನಾವು ಹೊಂದಬಹುದು. ಆಸ್ತಿಕರೆಂಬ ಹೆಸರನ್ನು ಹೊಂದಿ ಇತರರನ್ನು ಮೋಸ ಮಾಡಲು ಅಪೇಕ್ಷೆಯುಳ್ಳ ಕೆಲವರಿದ್ದಾರೆ. ಅವರು ವಿಷಯ ಸೌಖ್ಯವನ್ನು ಅನುಭವಿಸಲು ಸಮರ್ಥರಲ್ಲ. ಅಲ್ಲದೆ, ಅವರು ಇತರರ ವಿಷಯದಲ್ಲಿ ಅಸೂಯೆ ಪಡುತ್ತಾರೆ, ಏಕೆಂದರೆ, ಇವರು ಸೌಖ್ಯವಾಗಿ ಜೀವನ ನಡೆಸುತ್ತಾರೆ." ಆದ್ದರಿಂದ—"ಇಂತಹ ಕೆಲಸವನ್ನು ಮಾಡಿದರೆ ಕೆಟ್ಟದ್ದಾಗುತ್ತದೆ"—ಎಂದು ಹೇಳುತ್ತಾ, ಜನರಲ್ಲಿ ಒಂದು ರೀತಿಯ ಭ್ರಾಂತಿಯನ್ನುಂಟು ಮಾಡುತ್ತಾ, ಅವರಿಗೆ ಕಷ್ಟಗಳುಂಟಾಗುವಂತೆ ಮಾಡುತ್ತಾರೆ. ಆದ್ದರಿಂದ ನಮ್ಮ ಶಾಸ್ತ್ರವನ್ನು ಓದಬೇಕು ಮತ್ತು "ಪರಲೋಕವೆಂಬುದು ಇಲ್ಲ. ಹಾಗೂ ಅದರ ಬಗ್ಗೆ ನಾವು ಭಯಪಡಬೇಕಾಗಿಲ್ಲ"–ಎಂಬ ನಿರ್ಧಾರಕ್ಕೆ ಬಂದು, ಇಹ ಪ್ರಪಂಚದಲ್ಲಿನ ಸೌಖ್ಯಗಳನ್ನು ವ್ಯಕ್ತಿಯು ಅನುಭವಿಸಬೇಕು. ನಾವು ಈ ಉಪದೇಶವನ್ನು ಅತ್ಯಂತ ಕರುಣೆಯಿಂದ ಕೊಡುತ್ತಿದ್ದೇವೆ."

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ದರ್ಶನದ ಬಗ್ಗೆ ಈ ರೀತಿ ಹೇಳುತ್ತಾರೆ—

ತಸ್ಮಾದ್ ದೃಷ್ಟಪರಿತ್ಯಾಗಾದದೃಷ್ಟೇ ಚ ಪ್ರವರ್ತನಮ್ ।
ಲೋಕಸ್ಯ ತದ್ವಿಮೂಢಸ್ಯ ಚಾರ್ವಾಕಾಃ ಪ್ರತಿಷೇದಿರೇ ॥

(ತಮಗೆ ತಿಳಿದಿರುವುದನ್ನು ಪರಿತ್ಯಾಗ ಮಾಡಿ, ತಿಳಿಯದಿರುವುದನ್ನು ಹೊಂದಲು ಪ್ರಯತ್ನ ಪಡುವ ಜನರ ಮೌಢ್ಯವನ್ನು ಚಾರ್ವಾಕರು ತೋರಿಸುತ್ತಾರೆ)

ಇದು ಚಾರ್ವಾಕ ದರ್ಶನ. ಪ್ರಾಚೀನ ಕಾಲದಲ್ಲಿ ಎಷ್ಟು ಜನ ಇದನ್ನು ಅಂಗೀಕರಿಸಿದ್ದರೆಂಬುದನ್ನು ಹೇಳುವುದು ಕಷ್ಟ. ಆದರೆ, ಇಂದಿನ ದಿನಗಳಲ್ಲಿ, ಇದು ಎಲ್ಲೆಡೆಯೂ ಹರಡಿದೆ ಎಂದು ಹೇಳಿದರೆ ತಪ್ಪಾಗಲಾರದು. ವಿದೇಶಗಳಲ್ಲಿಯೂ ಸಹ, ವಿದ್ವಾಂಸರೆಂದು ಕರೆದುಕೊಳ್ಳುವವರು, ಕೆಲವು ರಚನೆಗಳ ಆಧಾರದ ಮೇಲೆ ಈ ದರ್ಶನವನ್ನು ಕುರಿತೇ ಮಾತನಾಡುತ್ತಾರೆ.

ದರ್ಶನಗಳು—

ಈ ಮೇಲಿನ ದರ್ಶನವೇ ವಾಸ್ತವವಾದುದಾದರೆ, ಶ್ರೇಯೋ ಮಾರ್ಗದ ಸಾಧನಗಳಾದ ಇತರ ಆರು ದರ್ಶನಗಳೂ ಅನುಪಯುಕ್ತವಾಗುತ್ತವೆ; ಏಕೆಂದರೆ, ಪ್ರತಿಯೊಂದು ದರ್ಶನವೂ ಇದಕ್ಕೆ ವಿರುದ್ದವಾಗಿದೆ. ಪರಸ್ಪರ ವಿರುಧ್ಧವಾದ ಎರಡು ಭಾವನೆಗಳು ಏಕಕಾಲದಲ್ಲಿ ವಾಸ್ತವವಾಗಿರುವುದು ಸಾಧ್ಯವಿಲ್ಲ.

ಆದ್ದರಿಂದ, ಚಾರ್ವಾಕನ ಈ ಅಭಿಪ್ರಾಯವು ಸತ್ಯವಾದರೆ, ಆರು ಆಸ್ತಿಕ ದರ್ಶನಗಳು ಅಸತ್ಯವಾಗಬೇಕಾಗುತ್ತದೆ ಮತ್ತು ಅವನ್ನು ಪ್ರಮಾಣಗಳೆಂದು ಅಂಗೀಕರಿಸಲಾಗುವುದಿಲ್ಲ. ನೈಯಾಯಿಕ, ವೈಶೇಷಿಕ, ಸಾಂಖ್ಯ, ಯೋಗ, ಜೈಮಿನೀಯ ಮತ್ತು ವೈಯಾಸಿಕ—ಇವು ಆರು ದರ್ಶನಗಳು.

ದರ್ಶಯತಿ ಪರಮಾರ್ಥತ್ವಂ ಇತಿ ದರ್ಶನಮ್ ।

(ಪರಮಾರ್ಥಕ್ಕೆ ಮಾರ್ಗವನ್ನು ತೋರಿಸುವುದೇ ದರ್ಶನ) ಎಂಬ ವಾಕ್ಯದಿಂದ "ದರ್ಶನವು ಪರಮಪುರುಷಾರ್ಥ (ಮೋಕ್ಷ)ವನ್ನು ತೋರಿಸುತ್ತದೆ"—ಎಂಬುದು ಸ್ಪಷ್ಟವಾಗುತ್ತದೆ. ಇತರ ವಿಷಯಗಳಲ್ಲಿ ಅಭಿಪ್ರಾಯಭೇದವಿದ್ದರೂ, ಈ ಎಲ್ಲ ದರ್ಶನಗಳೂ ದೇಹಕ್ಕಿಂತ ಬೇರೆಯಾದ ಆತ್ಮಾಸ್ತಿತ್ವವನ್ನು ಅಂಗೀಕರಿಸುತ್ತವೆ.

ಚಾರ್ವಾಕ ದರ್ಶನದಲ್ಲಿ ಮೋಕ್ಷವೆಂಬುದು ಇಲ್ಲ. ದೇಹದ ಅವಸಾನದ ನಂತರ ಕೇವಲ ಬೂದಿ ಮಾತ್ರ ಉಳಿಯುತ್ತದೆ. ಆದ್ದರಿಂದ ಸ್ವರ್ಗವನ್ನಾಗಲೀ ನರಕವನ್ನಾಗಲಿ ಅನುಭವಿಸುವುದಕ್ಕೆ ಯಾರೂ ಇರುವುದಿಲ್ಲ. ಆದರೆ, ದೇಹಕ್ಕಿಂತ ಬೇರೆಯಾಗಿ ಆತ್ಮನಿದ್ದಾನೆ ಹಾಗೂ ಸ್ವರ್ಗ ಮತ್ತು ನರಕ ಇವೆ ಎಂದು ಶ್ರುತಿ–ಸ್ಮೃತಿಗಳು ತಿಳಿಸುತ್ತವೆ ವೇದದ ಕರ್ಮಕಾಂಡದ ಭಾಗದಲ್ಲಿ—

ಜ್ಯೋತಿಷ್ಟೋಮೇನ ಸ್ವರ್ಗಕಾಮೋ ಯಜೇತ ।

Sri Vidyabharathi Book Centre, Sringeri

CC-O. In Public Domain. Digitized by eGangotri

(ಸ್ವರ್ಗವನ್ನು ಅಪೇಕ್ಷಿಸುವವನು ಜ್ಯೋತಿಷ್ಟೋಮ ಯಾಗವನ್ನು ಮಾಡಬೇಕು) ಎಂಬಂತಹ ವಾಕ್ಯಗಳು ಪ್ರೇಯಸ್ಸನ್ನು ಹೊಂದುವ ಮಾರ್ಗವನ್ನು ತೋರಿಸುತ್ತವೆ.

ಅಥ ಮರ್ತ್ಯೋಽಮೃತೋ ಭವತಿ ।

(ಮರ್ತ್ಯನು ಅಮೃತನಾಗುತ್ತಾನೆ)

ಜ್ಞಾನಕಾಂಡದ ಇಂತಹ ವಾಕ್ಯಗಳು ಶ್ರೇಯಸ್ಸು ಹೊಂದುವ ಮಾರ್ಗವನ್ನು ನಿರ್ದೇಶಿಸುತ್ತವೆ. ಮೇಲೆ ಹೇಳಿದ ಚಾರ್ವಾಕನ ಮಾತು ಸತ್ಯವಾದರೆ, ಈ ಎಲ್ಲ ಅಭಿಪ್ರಾಯಗಳೂ ಅಪ್ರಾಮಾಣಿಕಗಳಾಗುತ್ತವೆ.

ಶ್ರುತಿಯು ಕರ್ಮಕಾಂಡ ಮತ್ತು ಜ್ಞಾನಕಾಂಡ-ಇವೆರಡೂ ದೇಹಕ್ಕಿಂತ ಬೇರೆಯಾಗಿ ಆತ್ಮಾಸ್ತಿತ್ವವನ್ನು ಪ್ರತಿಪಾದಿಸುತ್ತವೆ. ಇದೇ ವಿಷಯವನ್ನೇ ಆರು ದರ್ಶನಗಳೂ ಸ್ಪಷ್ಟಪಡಿಸುತ್ತವೆ. ಹತ್ತು ಪ್ರಧಾನ ಉಪನಿಷತ್ತುಗಳಲ್ಲೊಂದಾದ ಕಠೋಪನಿಷತ್ತು ಒಂದು ಕಡೆಯಲ್ಲಿ ಆತ್ಮನ ಸ್ವರೂಪವನ್ನು ಕಥೆಯೊಂದರ ಮೂಲಕ ವಿವರಿಸುತ್ತದೆ. ಅಲ್ಲಿ ನಚಿಕೇತನು ಯಮನನ್ನು ಕೇಳುತ್ತಾನೆ—

ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇಽ
ಸ್ತೀತ್ಯೇಕೇ ನಾಯಮಸ್ತೀತಿ ಚಾನ್ಯೇ ।
ಏತದ್ವಿದ್ಯಾಮನುಶಿಷ್ಟಸ್ತ್ವಯಾಽಹಂ
ವರಾಣಾಮೇಷ ವರಸ್ತೃತೀಯಃ ॥

(ಒಬ್ಬನು ಸತ್ತನಂತರ ಈ ಸಂದೇಹವು ಉಂಟಾಗುತ್ತದೆ. ಕೆಲವರು ದೇಹಕ್ಕಿಂತ ಬೇರೆಯಾದ ಆತ್ಮನು ಇರುತ್ತಾನೆಂದು ಹೇಳುತ್ತಾರೆ; ಮತ್ತೆ ಕೆಲವರು ಇಲ್ಲವೆಂದು ಹೇಳುತ್ತಾರೆ. ಈ ವಿಷಯವನ್ನು ನಿನ್ನಿಂದ ನಾನು ತಿಳಿಯಲಪೇಕ್ಷಿಸುತ್ತೇನೆ. ವರಗಳಲ್ಲಿ ಇದೇ ಮೂರನೆಯ ವರ ನಾನು ಅಪೇಕ್ಷಿಸುವುದು).

ಇದಕ್ಕೆ ಯಮನು ಉತ್ತರಿಸುತ್ತಾನೆ--ದೇವತೆಗಳೂ ಸಹ ಇದನ್ನು ಸರಿಯಾಗಿ ತಿಳಿದಿಲ್ಲ—ಎಂದು ಹೇಳಿ, ವಿವರಿಸುತ್ತಾ ಸ್ಪಷ್ಟಪಡಿಸುತ್ತಾನೆ—

ನಜಾಯತೇ ಮ್ರಿಯತೇವಾ ವಿಪಶ್ಚಿತ್
ನಾಯಂ ಕುತಶ್ಚಿನ್ನ ಬಭೂವ ಕಶ್ಚಿತ್ ।
ಅಜೋನಿತ್ಯಃ ಶಾಶ್ವತೋಽಯಂ ಪುರಾಣೋ
ನ ಹನ್ಯತೇ ಹನ್ಯಮಾನೇ ಶರೀರೇ ॥

(ಆತ್ಮ ಹುಟ್ಟುವುದಿಲ್ಲ ಹಾಗೂ ಮರಣವನ್ನು ಹೊಂದುವುದಿಲ್ಲ; ಅದು ಯಾವುದರಿಂದಲೂ ಉದ್ಭವಿಸುವುದಿಲ್ಲ; ಅದರಿಂದ ಯಾವುದೂ ಸಹ ಹೊರ ಬರುವುದಿಲ್ಲ; ಅಜ,

Sri Vidyabharathi Book Centre, Sringeri

CC-O. In Public Domain. Digitized by eGangotri

ನಿತ್ಯ, ಶಾಶ್ವತ ಹಾಗೂ ಪುರಾತನವಾಗಿರುವುದರಿಂದ, ದೇಹಕ್ಕೆ ಅವಸಾನವಾದರೆ, ಅದು ಸಾಯುವುದಿಲ್ಲ.)

ಇದೇ ಅಭಿಪ್ರಾಯವನ್ನೇ ಭಗವದ್ಗೀತೆಯಲ್ಲಿ ಭಗವಂತನು ಅರ್ಜುನನಿಗೆ ಉಪದೇಶಿಸಿದ್ದಾನೆ—

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ॥

(ಜೀರ್ಣವಾಗಿರುವ ಬಟ್ಟೆಗಳನ್ನು ಎಸೆದು, ಮನುಷ್ಯನು ಹೊಸದನ್ನು ಹೇಗೆ ಧರಿಸುತ್ತಾನೋ, ಅದೇ ರೀತಿಯಲ್ಲಿ ಜೀವನು ಜೀರ್ಣವಾಗಿರುವ ದೇಹಗಳನ್ನು ಬಿಟ್ಟು, ಹೊಸದಾಗಿರುವುದನ್ನು ಪ್ರವೇಶಿಸುತ್ತಾನೆ.)

ಇದೇ ವಿಷಯವನ್ನೇ ಬ್ರಹ್ಮಸೂತ್ರದಲ್ಲಿ ಸಂದೇಹದ ರೂಪದಲ್ಲಿ ಎತ್ತಲಾಗಿದೆ.

ಏಕ ಆತ್ಮನಃ ಶರೀರೇ ಭಾವಾತ್ ।

(ಆತ್ಮನ ಅಸ್ತಿತ್ವವು ದೇಹದ ಅಸ್ತಿತ್ವವನ್ನವಲಂಬಿಸಿರುವುದರಿಂದ, ಕೆಲವರು ಆತ್ಮಾಸ್ತಿತ್ವವನ್ನು ನಿರಾಕರಿಸುತ್ತಾರೆ.)

ಮತ್ತು ಅದಕ್ಕೆ ಉತ್ತರವನ್ನೂ ಸಹ ಕೊಡಲಾಗಿದೆ—

ವ್ಯತಿರೇಕಂ ತದ್ಭಾವಾಭಾವಿತ್ವಾನ್ನ ತೂಪಲಬ್ಧಿವತ್ ।

(ಆದರೆ, ಅದು ಆ ರೀತಿಯಲ್ಲ. ಆತ್ಮ ಮತ್ತು ದೇಹ—ಇವುಗಳಿಗೆ ಭೇದವಿದೆ; ಏಕೆಂದರೆ, ದೇಹದ ಅಸ್ತಿತ್ವವಿದ್ದರೂ, ಅದರಲ್ಲಿ ಚೈತನ್ಯವಿರಬೇಕಾಗಿಲ್ಲ; ಪ್ರತ್ಯಕ್ಷವೇ ಇದಕ್ಕೆ ಉದಾಹರಣೆ.)

ಇಲ್ಲಿ, ಆತ್ಮ ಮತ್ತು ದೇಹ—ಇವುಗಳಿಗೆ ಅನ್ವಯ ಮತ್ತು ವ್ಯತಿರೇಕವನ್ನು ಹೊಂದಿಸಲು ಸಾಧ್ಯವಿಲ್ಲವೆಂಬುದನ್ನು ತೋರಿಸಿ, ಆತ್ಮ ದೇಹಕ್ಕಿಂತ ಬೇರೆಯಾದುದು ಎಂಬುದನ್ನು ಉಪದೇಶಮಾಡಲಾಗಿದೆ.

ಅಸ್ತ್ಯಾತ್ಮಾ ನಾಸ್ತಿತ್ವ ಸಾಧನಾಭಾವಾತ್ ।

(ಆತ್ಮ ಅಸ್ತಿತ್ವದಲ್ಲಿದೆ; ಏಕೆಂದರೆ, ಅದು ಅಸ್ತಿತ್ವದಲ್ಲಿಲ್ಲ ಎನ್ನುವುದಕ್ಕೆ ಯಾವ ಸಾಧನವೂ ಇಲ್ಲ.)

ದೇಹಾದಿವ್ಯತಿರಿಕ್ತೋಽಸೌ ವೈಚಿತ್ರ್ಯಾತ್ ।

(ಅನೇಕ ಭೇದಗಳಿರುವುದರಿಂದ, ಅದು ದೇಹಾದಿಗಳಿಗಿಂತ ಬೇರೆಯಾದುದು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ, ಸಾಂಖ್ಯಸೂತ್ರದಲ್ಲಿ ಆತ್ಮ ದೇಹಕ್ಕಿಂತ ಬೇರೆಯಾದುದು ಎಂದು ಸಿದ್ಧಾಂತಿಸಲಾಗಿದೆ.

"ಆತ್ಮ ದೇಹಕ್ಕಿಂತ ಬೇರೆಯಾದುದು"—ಎಂಬ ಶ್ರುತಿಯ ವಾಕ್ಯವನ್ನು ಸಿದ್ಧಾಂತಮಾಡುವುದಕ್ಕೆ ಮುಂದಿಡುವ ವಾದಗಳನ್ನು ವಿಮರ್ಶಿಸೋಣ. ಈ ರೀತಿ ಹೇಳಲಾಗಿದೆ—

ಕಶ್ಚಿದ್ದುಃಖೀ ಸ್ವಜನ್ಮಪ್ರಭೃತಿ ಸುಖಯುತಃ
ಚಾಪರಃ, ಕಸ್ಯಹೇತೋಃ

ಕಸ್ಮಾದಾದ್ಯಾ ಪ್ರವೃತ್ತಿಸ್ತನುರಪಿ ಚಕುತಃ
ಕಿಂನವೇತ್ತಿ ಪ್ರಮೀತಃ ।

ಸ್ವಾಭಾವ್ಯಂ ಹೇತುಸಾಮ್ಯೇ ಸಮಮಿತಿವಿದಿತಂ
ದೀಪಬೀಜಾಂಕುರಾದೌ

ವೈಷಮ್ಯಂ ಕರ್ಮಜನ್ಯಂ ಯದಿ ಗದಸಿ
ಜನೇಃ ಪೂರ್ವಮಸ್ಯಾತ್ಮಸಿದ್ಧಿಃ ॥

(ವ್ಯಕ್ತಿಯೊಬ್ಬನು ಜನನ ಮೊದಲ್ಗೊಂಡು ದುಃಖವನ್ನು ಅನುಭವಿಸುತ್ತಾನೆ; ಮತ್ತೊಬ್ಬನು ಸುಖದಲ್ಲಿರುತ್ತಾನೆ; ಇದಕ್ಕೆ ಕಾರಣವೇನು ? ಮೊಟ್ಟಮೊದಲನೆಯ ಪ್ರವೃತ್ತಿ ಹೇಗೆ ಉಂಟಾಯಿತು ? ದೇಹವು ಹೇಗೆ ಅಸ್ತಿತ್ವಕ್ಕೆ ಬಂದಿತು ? ಮರಣದ ನಂತರ ಜ್ಞಾನವು ಏತಕ್ಕೆ ಇರುವುದಿಲ್ಲ ? ದೀಪ, ಬೀಜ, ಸಸಿ ಮುಂತಾದವುಗಳ ಕಾರಣಗಳು ಸಮಾನವಾದುದಾದರೆ, ಆಗ ಅವುಗಳ ಸ್ವಭಾವವೂ ಸಮಾನವಾದುದಾಗಿರಬೇಕು—ಎಂಬ ನಿಯಮವಿದೆ; ಕರ್ಮದ ಕಾರಣದಿಂದ ಭೇದವುಂಟಾಗುವುದೆಂದು ಹೇಳುವುದಾದರೆ, ಆಗ ಆತ್ಮವು ಪೂರ್ವದಲ್ಲಿ ಇದ್ದಿರಬೇಕೆಂಬುದು ಸ್ಪಷ್ಟವಾಗುತ್ತದೆ.)

ಮಾನವ ದೇಹಗಳು ಒಂದೇ ವಿಧವಾಗಿದ್ದರೂ, ಕೆಲವರು ದುಃಖ, ವ್ಯಾಧಿ ಮುಂತಾದುವುಗಳನ್ನು ಹುಟ್ಟಿದಾರಭ್ಯ ಅನುಭವಿಸುತ್ತಾರೆ. ಕೆಲವರು ಸಂಪತ್ತು ಮತ್ತು ಒಳ್ಳೆಯ ಆರೋಗ್ಯವನ್ನು ಅನುಭವಿಸುತ್ತಾ ಸೌಖ್ಯವಾಗಿರುತ್ತಾರೆ. ಇದು ಏತಕ್ಕೆ ಹೀಗೆ ? ಪುಣ್ಯಪಾಪಗಳೇ ಇವಕ್ಕೆ ಕಾರಣವೆಂದು ಅಂಗೀಕರಿಸಬೇಕು. ಪುಣ್ಯ ಮತ್ತು ಪಾಪಗಳೇ ಸುಖ ಮತ್ತು ದುಃಖಗಳಿಗೆ ಕಾರಣಗಳಾಗುವುದಾದರೆ, ಈ ಅನುಭವಗಳು ಜನನ ಮೊದಲ್ಗೊಂಡು ಇರಲು ಸಾಧ್ಯವಿಲ್ಲ; ಕಾರಣ ಮತ್ತು ಕಾರ್ಯ ಏಕಕಾಲದಲ್ಲಿ ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ಆದ್ದರಿಂದ ಈ ಪುಣ್ಯ ಮತ್ತು ಪಾಪಗಳು ಹಿಂದಿನ ಜನ್ಮದಲ್ಲಿ ಶೇಖರವಾಗಿರಬೇಕು. ಈ ಅನ್ವಯ ಮತ್ತು ವ್ಯತಿರೇಕ ಪ್ರಕ್ರಿಯೆಯಿಂದ—"ನಾವು ಯಾವುದೇ ಕೆಲಸವನ್ನು ಮಾಡಿದರೂ, ಆ ಕಾರ್ಯದಿಂದಲೇ ನಮ್ಮ ಅಭಿಲಾಷೆಯು ಸಿದ್ಧಿಸುತ್ತದೆ"—ಎಂಬ ಜ್ಞಾನದ ಇರುವಿಕೆಯನ್ನು ನಾವು ತಿಳಿಯಬಹುದು. ಒಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಣ್ಣ ಮಗುವು ತನ್ನ ತಾಯಿಯ ಹಾಲನ್ನು ಕುಡಿಯುತ್ತಿರುವುದನ್ನು ನಾವು ನೋಡುತ್ತೇವೆ. ಈ ಕೆಲಸದಲ್ಲಿ ಅದು ಏತಕ್ಕೆ ಪ್ರವೃತ್ತವಾಗುತ್ತದೆ ? ಆ ರೀತಿಯ ಕೆಲಸದಿಂದ ತನ್ನ ಇಚ್ಛೆಯು ಪೂರ್ಣವಾಗುತ್ತದೆಂಬ ತಿಳುವಳಿಕೆ ಇದ್ದರೆ ಆ ರೀತಿ ಮಾಡುತ್ತದೆ. ಇನ್ನೊಬ್ಬರ ಮಾತಿನಿಂದಾಗಲೀ ಅಥವಾ ನೇರವಾದ ಪ್ರತ್ಯಕ್ಷದಿಂದಾಗಲೀ ಇದು ಅದಕ್ಕೆ ತಿಳಿದಿರಬೇಕಾಗಿತ್ತು. ಆದರೆ, ಈಗಿನ ಜನ್ಮದಲ್ಲಿ ಆ ಎರಡು ವಿಧಗಳಿಂದ ತಿಳುವಳಿಕೆಯನ್ನು ಹೊಂದುವುದಕ್ಕೆ ಆ ಮಗುವಿಗೆ ಯಾವ ಅವಕಾಶವೂ ಇರುವುದಿಲ್ಲ. ಆ ರೀತಿಯಾದ ಜ್ಞಾನವು ಅದಕ್ಕೆ ಇಲ್ಲದಿದ್ದರೆ, ಅದು ಆ ಕೆಲಸವನ್ನು ಮಾಡುತ್ತಿರಲಿಲ್ಲ. ಆ ರೀತಿಯಾದ ಜ್ಞಾನವು ಅದಕ್ಕೆ ಇಲ್ಲದಿದ್ದರೆ, ಅದು ಯಾವಾಗಲೂ ಒಣಗಿದ ಗಂಟಲಿನಿಂದ ಇರಬೇಕಾಗಿತ್ತು. ಆದರೆ, ತಾಯಿಯ ಹಾಲನ್ನು ಕುಡಿಯುವ ಸಂಸ್ಕಾರ ಅದಕ್ಕಿರುವುದರಿಂದ, ಅದಕ್ಕೆ ಪೂರ್ವಜನ್ಮವಿತ್ತೆಂದು ನಾವು ತೀರ್ಮಾನಿಸಬೇಕಾಗುತ್ತದೆ. ಹಿಂದಿನ ಜನ್ಮದಲ್ಲಿ ಉಂಟಾದ ತಿಳುವಳಿಕೆಯು ಈ ಜನ್ಮದಲ್ಲಿ ಸಂಸ್ಕಾರ ರೂಪದಲ್ಲಿರುತ್ತದೆ. ಅದೃಷ್ಟದಿಂದ ಮಗುವು ಆ ಸಂಸ್ಕಾರವನ್ನು ಸ್ಮರಿಸುತ್ತದೆ. ಮಾನವನ ಸಂತೋಷ ಮತ್ತು ದುಃಖಕ್ಕೆ ಕಾರ್ಯಗಳಾದ ರಥ, ಭವನ ಮುಂತಾದುವು ಕಾರಣಗಳಾಗುತ್ತವೆ. ಮತ್ತು ಅವು ಚೇತನ ವಸ್ತುವಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆಂಬುದನ್ನು ಅಂಗೀಕರಿಸಬೇಕಾಗುತ್ತದೆ. ಸುಖ-ದುಃಖವನ್ನುಂಟುಮಾಡುವ ಇತರ ವಸ್ತುಗಳು ಚೇತನ ವಸ್ತುವಿನ ನಿಯಂತ್ರಣಕ್ಕೆ ಒಳಪಟ್ಟಿರುತ್ತವೆಂದು ಹೇಳಿದಾಗ, ನಮ್ಮ ದೇಹವು ಆ ರೀತಿಯಲ್ಲಿ ಎಂದು ಹೇಳುವುದು ಸರಿಯಾಗುವುದಿಲ್ಲ.

ಚಾರ್ವಾಕರು ಹೇಳುವಂತೆ, ಮಹಾಭೂತಗಳ ಮಿಶ್ರಣದಿಂದ ಚೈತನ್ಯವು ಉತ್ಪನ್ನವಾಗುವುದಾದರೆ, ಆಗ ಚೈತನ್ಯವು ಆ ಮಹಾಭೂತಗಳ ಎಲ್ಲ ಭಾಗಗಳಲ್ಲಿಯೂ ವ್ಯಾಪಿಸಿರಬೇಕಾಗುತ್ತದೆ. ಇದನ್ನು ನಾವು ಅಂಗೀಕರಿಸುವುದಾದರೆ, ಚೈತನ್ಯವು ನಮ್ಮ ದೇಹದ ಪ್ರತಿಯೊಂದು ಭಾಗದಲ್ಲಿಯೂ ಇರಬೇಕಾಗುತ್ತದೆ. ದೇಹದ ಎಲ್ಲ ಭಾಗಗಳಲ್ಲಿಯೂ ಚೈತನ್ಯವು ಇರುವುದಾದರೆ, ಆಗ, ಒಂದೇ ಭಾವನೆಯು ಎಲ್ಲವುಗಳಲ್ಲಿಯೂ ಉತ್ಪನ್ನವಾಗುತ್ತದೆಂಬುದು ತೀರ ಅಸಂಗತ. ಹಾಗಾಗುವುದಾದರೆ, ಅನೇಕ ಆನೆಗಳಿಂದ ಎಲ್ಲ ದಿಕ್ಕುಗಳಲ್ಲಿಯೂ ಎಳೆಯಲ್ಪಟ್ಟ ಬಾಳೇ ಗಿಡವು ವಿನಾಶವನ್ನು ಹೊಂದುವಂತೆ, ಈ ದೇಹದ ಪರಿಸ್ಥಿತಿಯೂ ಆಗಬಹುದು. ಘಟವು ಇರುವವರೆಗೆ ಘಟದ ರೂಪವೂ ಇರುತ್ತದೆ. ಅದೇ ರೀತಿಯಲ್ಲಿ, ದೇಹವು ಇರುವಾಗ, ದೇಹದ ಧರ್ಮವಾಗಿರುವ ಚೈತನ್ಯವು ಇದ್ದೇತೀರಬೇಕು. ಏಕೆಂದರೆ, ಸತ್ತ ನಂತರವೂ ದೇಹವು ಇರುತ್ತದೆ. ಆದರೆ, ವಸ್ತು ಸ್ಥಿತಿ ಹೀಗಿಲ್ಲ. ಇದಕ್ಕೆ ಸಮಂಜಸವಾದ ಉತ್ತರವನ್ನು ಕೊಡಲು ಚಾರ್ವಾಕನಿಗೆ ಸಾಧ್ಯವಿಲ್ಲ. "ಎಲ್ಲಿ ದೇಹವು ಗೋಚರವಾಗುತ್ತದೆ, ಅಲ್ಲಿ ಮಾತ್ರ ಚೈತನ್ಯವು ಕಂಡುಬರುತ್ತದೆ. ಆದ್ದರಿಂದ ಚೈತನ್ಯವೇ ದೇಹದ ಸ್ವರೂಪ—" ಅನ್ವಯ ಮತ್ತು ವ್ಯತಿರೇಕದಿಂದ ಇಂತಹ ಸಿದ್ಧಾಂತವನ್ನು ಮಾಡಬಾರದು. ಘಟವೇ ಮೊದಲಾದ ಪದಾರ್ಥಗಳು ಕಾಣಬೇಕಾದರೆ ಪ್ರಕಾಶ ಅತ್ಯವಶ್ಯ. ಎಲ್ಲೆಲ್ಲಿ ದೀಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದೆಯೋ. ಅಂತಹ ಸ್ಥಳಗಳಲ್ಲಿ ಮಾತ್ರ ಈ ಪದಾರ್ಥಗಳು ದೃಷ್ಟಿಗೋಚರವಾಗುತ್ತವೆ. ಆದ್ದರಿಂದ, ಈ ಪದಾರ್ಥಗಳು ದೀಪದ ಸ್ವಭಾವವುಳ್ಳವೆಂದು ಒಪ್ಪಲು ಸಾಧ್ಯವೇ ?

ಈ ಪ್ರಸಂಗದಲ್ಲಿ, ಸುಖ ಮತ್ತು ದುಃಖ ಕೇವಲ ಸ್ವಾಭಾವಿಕವಾದವು ಎಂದು ಚಾರ್ವಾಕ ಹೇಳಬಹುದು. ಅವು ದೇಹದ ಸಹಜವಾದ ಗುಣಗಳೆಂದು ಹೇಳಬಹುದು. ಇದು ಸರಿಯಲ್ಲ. ಸದೃಶವಾದ ಕಾರ್ಯಗಳಿಂದುಂಟಾಗುವ ಕಾರ್ಯಗಳು ಸದೃಶವಾಗಿಯೇ ಇರಬೇಕು. ಭೂಮಿಯಲ್ಲಿ ಬಿತ್ತಲಾದ ಮಾವಿನ ಬೀಜವು ಮಾವಿನಮರವನ್ನುಂಟು ಮಾಡುವುದೇ ಹೊರತು, ತೆಂಗಿನ ಮರವನ್ನಲ್ಲ. ಹಾಗೆಯೆ, ಮಾವಿನ ಮರದಿಂದ ಮಾವಿನಹಣ್ಣನ್ನು ಹೊಂದಬಹುದೇ ಹೊರತು ತೆಂಗಿನಕಾಯನ್ನಲ್ಲ. ಆದ್ದರಿಂದ ಸದೃಶವಾದ ಕಾರಣಗಳಿದ್ದ ಕಾರ್ಯಗಳೂ ಸದೃಶವಾಗಿದ್ದೇ ತೀರಬೇಕು. ದೇಹಗಳು ಆಗುವುದಕ್ಕೆ ಕಾರಣಗಳು ಸದೃಶವಾಗಿರುವಾಗ, ಅವುಗಳ ಸ್ವಭಾವವೂ ಸದೃಶವಾಗಿರಬೇಕು. ಇದು ಏಕೆಂದರೆ, ಮೇಲೆ ಹೇಳಿದ ನಿಯಮದ ಪ್ರಕಾರ, ಕಾರ್ಯವು ಸದೃಶವಾಗಿರುತ್ತದೆ. ಆದ್ದರಿಂದ ಕಾರ್ಯವಾದ ಸ್ವಭಾವವೂ ಸದೃಶವಾಗಿರಬೇಕು. ಸುಖ ಮತ್ತು ದುಃಖವೂ ಎಲ್ಲರಿಗೂ ಸದೃಶವಾಗಿರಬೇಕು. "ಸುಖ ಮತ್ತು ದುಃಖ ಸಹಜವಾದುದು" ಎಂದು ಹೇಳಿದರೆ ಒಪ್ಪಲು ಸಾಧ್ಯವಿಲ್ಲ. ಏಕೆಂದರೆ, ಈ ನಿಯಮವನ್ನು ನಾವು ಒಪ್ಪುವುದಾದರೆ, ಪ್ರಪಂಚದಲ್ಲಿರುವ ಯಾವುದೂ ಸಹ ಯಾವ ನಿಯಮಕ್ಕೂ ಒಳಪಡುವುದಿಲ್ಲ. ಆದ್ದರಿಂದ, ಧರ್ಮವೊಂದೇ ಸುಖ–ದುಃಖಗಳಿಗೆ ಕಾರಣವೆಂದು ನಾವು ಒಪ್ಪಬೇಕು. ಧರ್ಮ ಮತ್ತು ಅಧರ್ಮಗಳು ಈಗ ಆಚರಿಸಿದವು ಎಂದು ಹೇಳಲಾಗುವುದಿಲ್ಲ. ಹಾಗೆ ಹೇಳುವುದಾದರೆ, ಅಧರ್ಮವನ್ನು ಮಾಡುವ ವ್ಯಕ್ತಿಯು ಆಗ ಸೌಖ್ಯವನ್ನು ಅನುಭವಿಸಲು ಸಾಧ್ಯವಿಲ್ಲ. ಮನುವಿನ ವಾಕ್ಯ ಹೀಗಿದೆ—

ಅಧರ್ಮೇಣೈಧತೇ ತಾವತ್ತತೋ ಭದ್ರಾಣಿ ಪಶ್ಯತಿ ।
ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ॥

(ಅಧರ್ಮದಿಂದ, ಅಭಿವೃದ್ಧಿಯಾಗುವಂತೆ ಕಂಡುಬರಬಹುದು; ಒಳ್ಳೆಯದನ್ನು ಕಾಣಬಹುದು; ಶತ್ರುಗಳನ್ನು ಜಯಿಸಬಹುದು; ಆದರೆ ಕೊನೆಯಲ್ಲಿ ಸಂಪೂರ್ಣವಾಗಿ ನಾಶವಾಗುತ್ತಾನೆ.)

ಧಾರ್ಮಿಕ ಕರ್ಮಗಳನ್ನು ಆಚರಿಸುವವನೂ ಸಹ ದುಃಖವನ್ನು ಅನುಭವಿಸುವುದರಿಂದ, ಈ ಜನ್ಮದಲ್ಲಿ ಮಾಡಲಾದ ಕರ್ಮಗಳ ಫಲವನ್ನು ಅನುಭವಿಸುತ್ತಾನೆಂದು ಹೇಳಲು ಸಾಧ್ಯವಿಲ್ಲ. ಹಿಂದಿನ ಜನ್ಮವೊಂದಿತ್ತೆಂಬುದನ್ನು ಅಂಗೀಕರಿಸಬೇಕು. ಆ ಜನ್ಮದಲ್ಲಿ ಅನುಭವಿಸಿದ ಸುಖ–ದುಃಖಗಳಿಗೆ ಕಾರಣವು, ಅದಕ್ಕಿಂತ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳಾಗಿರುತ್ತವೆ. ಇದನ್ನು ನಾವು ಒಪ್ಪುವುದಾದರೆ, ಸಂಸಾರವು ಅನಾದಿ ಮತ್ತು ಆಶ್ವವು ಈ ಪ್ರಪಂಚಕ್ಕೆ ಅನಾದಿಕಾಲದಿಂದಲೂ ಬರುತ್ತಿದೆ ಎಂಬುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದ್ಧವಾಗುತ್ತದೆ. ಈ ಪ್ರಸಂಗದಲ್ಲಿ ಪ್ರಶ್ನೆಯೊಂದು ಉದ್ಭವಿಸಬಹುದು. ಆಸ್ತಿಕರು ಅಂಗೀಕರಿಸುವಂತೆ ಪ್ರಪಂಚವು ಪರಮಾತ್ಮನಿಂದ ಸೃಷ್ಟವಾಗಿರುವುದಾದರೆ ಆಗ ದೇಹದ ಅಥವಾ ಸುಖ-ದುಃಖಗಳಿಗೆ ಆದರ ಹಿಂದಿನ ಜನ್ಮಗಳಲ್ಲಿ ಮಾಡಲಾದ ಕರ್ಮಗಳೇ ಕಾರಣ ಗಳು ಎಂಬುವನ್ನು ಏತಕ್ಕೆ ಒಪ್ಪಬೇಕು? "ಈ ವಿವರಿಸಲಾಗದ ಸುಖ ಮತ್ತು ದುಃಖಗಳು ಈಶ್ವರನಿಂದ ಸೃಷ್ಟವಾದವು" ಎಂದು ಹೇಳಬಹುದು. ಈಶ್ವರನು ಸ್ವತಃ ಸರ್ವಜ್ಞನಾ ದುದರಿಂದ ವಿವರಿಸಲಾಗದ ಇಂತಹ ಪ್ರಸಂಗಗಳು ಉಂಟಾಗುವುದಕ್ಕೆ ಕಾರಣವೆಂದು ನಾವು ಅಂಗೀಕರಿಸಬಹುದು. ಅದನ್ನು ಅಂಗೀಕರಿಸುವುದಾದರೆ, ಅವನಲ್ಲಿ ದೇವತ್ವಕ್ಕೆ ವಿರುದ್ಧವಾಗುತ್ತದೆ. ಪ್ರಪಂಚದಲ್ಲಿ ಒಬ್ಬನು ಒಳ್ಳೆಯ ರಾಜನಾಗುವುದಾದರೆ, ಆಗ ಅವನು ನಿಷ್ಪಕ್ಷಪಾತವಾಗಿ ಮಾಡಿದ ಕೆಲಸಗಳಿಗನುಗುಣವಾಗಿ ಬಹುಮಾನವನ್ನೋ' ಶಿಕ್ಷೆಯನ್ನೋ ಕೊಡುತ್ತಾನೆ. ಈ ರೀತಿಯಾಗದಿದ್ದರೆ, ಯಾವ ಕಾರಣವಿಲ್ಲದೆ ಸೃಷ್ಟಿಯ ಸಮಯದಲ್ಲಿ ಸುಖ-ದುಃಖಗಳನ್ನು ಸೇರಿಸಿರುವುದರಿಂದ ಈಶ್ವರನ್ನು ಪಕ್ಷಪಾತಿ ಹಾಗೂ ಕ್ರೂರಿಯಾಗುತ್ತಾನೆ. ಹಾಗಾದರೆ, ಅವನು ಈಶ್ವರತ್ವದಿಂದ ರಹಿತನಾಗುತ್ತಾನೆ. ಈ ಕಾರಣದಿಂದಲೇ ವೇದವ್ಯಾಸರು ಹೇಳಿದ್ದಾರೆ-

ವೈಷಮ್ಯನೈರ್ಘೃಣ್ಯೇ ನ ಸಾಪೇಕ್ಷತ್ವಾತ್ ತಥಾ ಹಿ ದರ್ಶಯತಿ।

(ಅವನು ಇತರ ಅಂಶಗಳನ್ನು ಗಮನಿಸಿರುವುದರಿಂದ, ಈಶ್ವರನು ಪಕ್ಷಪಾತಿ ಮತ್ತು ಕ್ರೂರಿ ಎಂದು ಹೇಳಲು ಸಾಧ್ಯವಿಲ್ಲ. ಈ ರೀತಿಯಾಗಿ ವೇದವು ತೋರಿಸುತ್ತದೆ.)

ಆದ್ದರಿಂದ, ಅನುಷ್ಠಿಸಿದ ಕರ್ಮಗಳಿಗನುಗುಣವಾಗಿ ಈಶ್ವರನು ಫಲಗಳನ್ನು ಕೊಡುತ್ತಾನೆಂದು ಅಂಗೀಕರಿಸಬೇಕು. ಹಿಂದಿನ ಜನ್ಮದಲ್ಲಿ ಮಾಡಲಾದ ಕರ್ಮಗಳೇ ಈಗಿನ ಕರ್ಮಗಳಿಗೆ ಕಾರಣವಾಗಿರುವುದರಿಂದ, ಸಂಸಾರವು ಅನಾದಿಯೆಂದು ನಾವು ಒಪ್ಪಬೇಕು. ಈ ಜನ್ಮಗಳು ಆತ್ಮನಿಗೆ ಅನ್ವಯಿಸುವುದರಿಂದ, ಆತ್ಮನೂ ಸಹ ಅನಾದಿ ಯೆಂದು ಸಿದ್ಧವಾಗುತ್ತದೆ.

ದೇಹಕ್ಕಿಂತ ಬಾಹ್ಯವಾಗಿ ಹಾಗೂ ಬೇರೆಯಾಗಿ ಆತ್ಮವು ಇರುತ್ತದೆಂಬುದು ಸಿದ್ಧವಾಗಿರುವುದರಿಂದ, "ನಾನು ಸುಂದರ"—ಎಂದು ಮುಂತಾದ ಜ್ಞಾನ "ಕಬ್ಬಿಣದ ತುಂಡು ಉರಿಯುತ್ತದೆ"—ಎಂಬ ಜ್ಞಾನಕ್ಕೆ ಸದೃಶವಾಗಿ ಭ್ರಮೆಯಾಗಿರುತ್ತದೆ.

ಹಿಂದಿನ ಜನ್ಮವನ್ನು ಸ್ಮರಿಸುವವರು, ಸಾಕ್ಷಾತ್ ಪ್ರತ್ಯಕ್ಷದಿಂದಲೇ ಆ ರೀತಿ ಮಾಡುತ್ತಾರೆ. ಮಾನವನಿಂದ ಆಚರಿಸಲಾದ ಕರ್ಮಗಳು ಮತ್ತು ಅನುಭವಿಸಿದ ಸುಖ-ದುಃಖಗಳು ದೇಹಕ್ಕಾಗಿ ಅಲ್ಲ, ಆದರೆ ಯಾವುದೋ ಒಂದು ಚೈತನ್ಯಕ್ಕೆ ಸಂಬಂಧಿಸಿರು ತ್ತವೆ. ಹಾಗೆ ನಾವು ಕಾಣುತ್ತೇವೆ. ಬೇರೆ ಚೈತನ್ಯವಸ್ತುವೊಂದು ಇರದಿದ್ದರೆ, ಇದು ಸಾಧ್ಯವಾಗುತ್ತಿರಲಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯೋಗ ಸೂತ್ರ ಹೇಳುತ್ತದೆ—

ಸಂಸಾರ ಸಾಕ್ಷಾತ್ಕರಣಾತ್ ಪೂರ್ವಜಾತಿಜ್ಞಾನಮ್ ।

(ಸಂಸ್ಕಾರಗಳ ಸಾಕ್ಷಾತ್ಕರಣದಿಂದ ಹಿಂದಿನ ಜನ್ಮದ ಜ್ಞಾನ ಉಂಟಾಗುತ್ತದೆ.)

ಚಾರ್ವಾಕರು ಈ ಸಿದ್ಧಾಂತವನ್ನು ಒಪ್ಪಬೇಕು, ಆದರೆ ಅವರು ಒಪ್ಪುವುದಿಲ್ಲ; ಏಕೆಂದರೆ ಅವರು ಪ್ರತ್ಯಕ್ಷವನ್ನು ಮಾತ್ರ ಪ್ರಮಾಣವೆಂದು ಒಪ್ಪುತ್ತಾರೆ. ಹೇಗಾದರೂ ಇರಲಿ, ಇಲ್ಲಿಯ ತನಕ ಹೇಳಿದವು ವಾದಗಳು. ಈ ವಾದಗಳು ಅನುಮಾನಕ್ಕೆ ಸಂಬಂಧಿಸಿದವು; ಆದರೆ ಚಾರ್ವಾಕರು ಅನುಮಾನವನ್ನು ಪ್ರಮಾಣವೆಂದು ಒಪ್ಪುವ್ವುದಿಲ್ಲ. ಆದ್ದರಿಂದ, ಅನುಮಾನವನ್ನು ಯಾವಾಗ ಪ್ರಮಾಣವಾಗಿ ತೆಗೆದುಕೊಳ್ಳಬೇಕೆಂಬುದನ್ನು ನಿರ್ಧರಿಸೋಣ.

ಸೂರ್ಯ ಮತ್ತು ಚಂದ್ರ ನಮಗೆ ಸಣ್ಣದಾಗಿ ಕಂಡುಬರುತ್ತಾರೆ. ವಾಸ್ತವವಾಗಿ ಅವು ತುಂಬ ದೊಡ್ಡದಾಗಿದ್ದರೂ, ನಮಗೆ ಅತ್ಯಂತ ದೂರದಲ್ಲಿರುವುದರಿಂದ ಸೂರ್ಯ ಮತ್ತು ಚಂದ್ರ ಸಣ್ಣದಾಗಿ ಕಾಣುತ್ತಾರೆಂದು ಜ್ಯೋತಿಶ್ಶಾಸ್ತ್ರ ತಿಳಿಸುತ್ತದೆ. ಇವುಗಳಲ್ಲಿ ನಾವು ಯಾವುದನ್ನು ಒಪ್ಪಬೇಕು ? ಸಾಧಾರಣನಾದ ಮನುಷ್ಯನು ತನ್ನ ಬುದ್ಧಿಗೆ ಯಾವುದು ಸರಿಯೆಂದು ತೋರುತ್ತದೋ ಅದನ್ನು ಒಪ್ಪುತ್ತಾನೆ. ಸಾಕ್ಷಾತ್ ಪ್ರತ್ಯಕ್ಷ ಮಾತ್ರವೇ ಪ್ರಮಾಣವಾಗುವುದಾದರೆ, ಆಗ ನಾವು ತಿಳಿದಿರುವ ಎಲ್ಲವೂ ನಮ್ಮ ಸಾಕ್ಷಾತ್ ಪ್ರತ್ಯಕ್ಷಾನುಭವಕ್ಕೆ ಒಳಪಡಬೇಕು. ಹಾಗಾಗುವುದಾದರೆ, ನಾವು ಇತರ ಕಾರ್ಯಗಳನ್ನು ಹೇಗೆ ತಾನೆ ಮುಂದುವರೆಸಬಹುದು ?

ಆದ್ದರಿಂದ, ಹೇಳಲಾಗಿದೆ—

ಮಾನಂ ಪ್ರತ್ಯಕ್ಷಮೇಕಂ ಕಥಯ ಹಿ ಕಥಂ ಭಾಷಿತಂ ತೇ ಪ್ರಮಾಣಮ್ ।

(ಪ್ರತ್ಯಕ್ಷವೊಂದೇ ನಿನಗೆ ಪ್ರಮಾಣವಾಗುವುದಾದರೆ, ನೀನು ಹೇಳುವುದು ಹೇಗೆ ತಾನೇ ಪ್ರಮಾಣವಾದೀತು ? (ಏಕೆಂದರೆ, ಹೇಳುವುದನ್ನು ತಿಳಿಯಬೇಕಾದರೆ, ಅನುಮಾನವು ಅವಶ್ಯ).

ಭವಾನ್ ತೇನ ಮಿಥ್ಯಾಪ್ರಲಾಪೀ ।

(ಆದ್ದರಿಂದ ನೀನು ಸುಳ್ಳು ಹೇಳುವವನು).

ಸಾಕ್ಷಾತ್ ಪ್ರತ್ಯಕ್ಷವೊಂದೇ ಪ್ರಮಾಣವೆಂದು ಅಂಗೀಕರಿಸುವುದಾದರೆ, ಇತರ ರೊಡನೆ ಮಾತನಾಡುವುದು ವ್ಯರ್ಥ; ಏಕೆಂದರೆ, ಅದರ ಜ್ಞಾನವನ್ನು ಪ್ರತ್ಯಕ್ಷವಾಗಿ ನಾವು ತಿಳಿದಿರುವುದಿಲ್ಲ. ಆದ್ದರಿಂದ, ನಾವು ಹೇಳಿದ ವಾದಗಳನ್ನು ಪ್ರಮಾಣವೆಂದು ಅಂಗೀಕರಿಸಬೇಕು. ವಾದಗಳನ್ನು ಮಾಡುವುದರಿಂದ ಯಾವ ದೋಷವೂ ಇಲ್ಲ.

ಆದ್ದರಿಂದ, ಈಶ್ವರ ಇದ್ದಾನೆ, ಮತ್ತು ಅವನಿಂದಲೇ ಹೊರಬಂದಿರುವ ಶ್ರುತಿ–ಸ್ಮೃತಿಗಳು ಪ್ರಮಾಣಗಳು ಎಂಬುದು ಸಿದ್ಧವಾಯಿತು. ನೀನು (ಚಾರ್ವಾಕ)

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂದ್ರಿಯಗಳನ್ನು ನಿಗ್ರಹಿಸಲು ಶಕ್ತನಲ್ಲದುದರಿಂದ, ಇತರರು ನಿನ್ನಂತೆ ಆಗಲಿ ಹಾಗೂ ವಿರೋಧ ಮಾಡದಿರಲಿ ಎಂದು ಈ ತಪ್ಪು ಸಿದ್ಧಾಂತವನ್ನು ಪ್ರಚಾರಮಾಡುತ್ತಿರುವೆ. ಜ್ಞಾನ ಮತ್ತು ಕರ್ಮಕಾಂಡಗಳಿಗೆ ಸಾರವಾದ ಆತ್ಮ ವಿಷಯಕವಾದ ಸತ್ಯವು ನಮ್ಮ ಹೃದಯದಲ್ಲಿ ಸರ್ವದಾ ನೆಲಸಲೆಂದು ನಾವು ಆಚಾರ್ಯರನ್ನು ಪ್ರಾರ್ಥಿಸೋಣ.

ಒಟ್ಟಿನಲ್ಲಿ, ನಾವು ಹೇಳಬೇಕಾದುದು, ಇದು—

ಸಂದಿಗ್ಧೇಽಪಿ ಪರೇ ಲೋಕೇ ಕರ್ತವ್ಯೋ ಧರ್ಮ ಏವಹಿ ।
ನಾಸ್ತಿಚೇನ್ನಾಸ್ತಿ ನೋ ಹಾನಿರಸ್ತಿ ಚೇನ್ನಾಸ್ತಿಕೋ ಹತಃ ॥

(ಪರ ಲೋಕದ ಅಸ್ತಿತ್ವದ ವಿಷಯದಲ್ಲಿ ಸಂದೇಹವುಂಟಾದರೂ, ಧರ್ಮವನ್ನು ಮಾತ್ರ ಆಚರಣೆ ಮಾಡಬೇಕು; ಒಂದು ವೇಳೆ ಪರಲೋಕ ಇಲ್ಲದಿದ್ದರೆ, ಧರ್ಮವನ್ನು ಆಚರಿಸುವುದರಿಂದ ಯಾವ ಹಾನಿಯೂ ಇಲ್ಲ; ಆದರೆ, ಒಂದು ವೇಳೆ ಪರಲೋಕವು ಇರುವುದಾದರೆ ನಾಸ್ತಿಕನು ನಾಶವಾಗುತ್ತಾನೆ.)

ಕಠೋಪನಿಷತ್ ತಿಳಿಸುತ್ತದೆ—

ನ ಸಾಂಪರಾಯಃ ಪ್ರತಿಭಾತಿ ಬಾಲಂ
ಪ್ರಮಾದ್ಯಂತಂ ವಿತ್ತಮೋಹೇನ ಮೂಢಮ್ ।
ಅಯಂ ಲೋಕೋ ನಾಸ್ತಿಪರ ಇತಿ ಮಾನೀ
ಪುನಃ ಪುನರ್ವಶಮಾಪದ್ಯತೇ ಮೇ ॥

(ಹಣದ ಮೋಹದಿಂದ ಪ್ರಮಾದಗಳನ್ನು ಮಾಡುವ ಅವಿವೇಕಿಯಾದವನಿಗೆ ಪರಲೋಕವನ್ನು ಹೊಂದುವ ಮಾರ್ಗವು ಸ್ಫುರಿಸುವುದಿಲ್ಲ; ಇಹಲೋಕ ಮಾತ್ರವಿದೆ ಮತ್ತು ಇದರ ನಂತರ ಯಾವುದೂ ಇಲ್ಲ ಎಂದು ಸರ್ವದಾ ಚಿಂತಿಸುತ್ತಿರುವವನು ಪುನಃ ಪುನಃ ನನ್ನ (ಯಮನ) ಅಧಿಕಾರಕ್ಕೆ ಒಳಪಡುತ್ತಾನೆ.)

ಭಕ್ತಿಯೋಗ

ಅಮಿತಮುದಮೃತಂಮುಹುರ್ದುಹಂತೀಂ
ವಿಮಲಭವತ್ಪದ ಗೋಷ್ಠಮಾವಸಂತೀಮ್ ।
ಸದಯ ಪಶುಪತೇ ಸುಪುಣ್ಯಪಾಕಾಂ
ಮಮ ಪರಿಪಾಲಯ ಭಕ್ತಿಧೇನುಮೇಕಾಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

(ಸಮಸ್ತ ಸೃಷ್ಟಿಗೂ ಸ್ವಾಮಿಯೇ; ದಯಾಸಾಗರನೇ; ಬಾರಿಬಾರಿಗೂ ಅಮಿತವಾದ ಅಮೃತರೂಪವಾದ ಆನಂದವನ್ನುಂಟುಮಾಡುವ, ಪರಿಶುದ್ಧವಾದ ನಿನ್ನ ಪಾದಕಮಲವೆಂಬ ಗೋಶಾಲೆಯಲ್ಲಿ ವಾಸಮಾಡುವ, ಸುಪುಣ್ಯ ಕರ್ಮಗಳ ಫಲಸ್ವರೂಪವಾದ, ನನ್ನ ಏಕಮಾತ್ರವಾದ ಭಕ್ತಿಯೆಂಬ ಧೇನುವನ್ನು ರಕ್ಷಿಸು.)

ಈ ರೀತಿಯಾಗಿ ಶ್ರೀಶಂಕರಭಗವತ್ಪಾದರು ಶಿವಾನಂದಲಹರಿಯಲ್ಲಿ ಹೇಳಿರುತ್ತಾರೆ. ಆನಂದಸ್ವರೂಪನಾದ ಪರಮಾತ್ಮನ ವಿಷಯದಲ್ಲಿ ನಾವು ಭಕ್ತಿಯನ್ನು ಹೊಂದಬೇಕು. ಅವನ ಅನುಗ್ರಹವು ನಮ್ಮ ಮೇಲೆ ಸದಾ ಇರಲಿ ಎಂದು ಆದಿಶಂಕರಭಗವತ್ಪಾದರು ಶಿವಾನಂದಲಹರಿಯಲ್ಲಿ ಪ್ರಾರ್ಥಿಸುತ್ತಾರೆ. ಭಕ್ತಿಯು ಪರಮಪುಣ್ಯವನ್ನು ಹೊಂದುವುದಕ್ಕೆ ಸಾಧನಮಾತ್ರವಲ್ಲದೆ, ಶ್ರೇಷ್ಠವಾದ ಸಾಧನವೆಂದು ಭಗವತ್ಪಾದರ ಸ್ತೋತ್ರದಿಂದ ನಾವು ಊಹಿಸಬಹುದು. ಪರಬ್ರಹ್ಮವನ್ನು ಹೊಂದುವುದಕ್ಕೆ ಸಾಧನವಾಗಿರುವ ಭಕ್ತಿಯನ್ನು ಸ್ವಲ್ಪ ವಿಶ್ಲೇಷಿಸೋಣ.

ಸುಖಾಯ ಯದ್ಯತ್ಕ್ರಿಯತೇಽಪಿ ವಾಽನಿಶಂ
ಸುಖಂ ನ ಕಿಂಚಿದ್ಬಹುದುಃಖಮೇವತತ್ ।

(ಸುಖಕ್ಕಾಗಿ ನಿರಂತರವಾಗಿ ಏನನ್ನು ಮಾಡಿದರೂ, ಅದು ಸುಖವನ್ನುಂಟುಮಾಡದೇ, ಅತಿಯಾದ ದುಃಖವನ್ನುಂಟುಮಾಡುತ್ತದೆ.)—
ಎಂದು ಹೇಳಲಾಗಿದೆ.

ಸುಖವನ್ನು ಹೊಂದುವುದಕ್ಕಾಗಿ ನಾವು ನಾನಾ ರೀತಿಯಲ್ಲಿ ಪ್ರಯತ್ನಪಡುತ್ತೇವೆ. ಕೊನೆಯಲ್ಲಿ ನಾವು ದುಃಖವನ್ನು ಅನುಭವಿಸುತ್ತೇವೆ ಎಂದು ಹೇಳುವುದು ತಪ್ಪಾಗಲಾರದು. ನಮ್ಮ ವ್ಯಾವಹಾರಿಕ ಪ್ರಯತ್ನಗಳೆಲ್ಲವೂ ಸುಖವನ್ನುಂಟುಮಾಡುವುದಿಲ್ಲವೆಂಬ ದೃಢನಿರ್ಧಾರವನ್ನು ನಮ್ಮ ಮನಸ್ಸಿನಲ್ಲಿ ನಾವು ಹೊಂದಬೇಕು. ನಮ್ಮ ಶಾಸ್ತ್ರಗಳು, ಋಷಿಗಳ ಜೀವನ ಮತ್ತು ಪುರಾಣಗಳು ಅಮಿತವಾದ ಸುಖವಿರುವುದನ್ನು ಸ್ಪಷ್ಟವಾಗಿ ಸೂಚಿಸುತ್ತವೆ. ಅಮಿತವಾದ ಸುಖವನ್ನು ಇನ್ನೂ ನಾವು ಹೊಂದದಿರುವುದರಿಂದ, ನಮ್ಮ ಪ್ರಯತ್ನಗಳಲ್ಲೇ ಏನೋ ದೋಷವಿರಬೇಕೆಂದು ನಾವು ಅರ್ಥಮಾಡಿಕೊಳ್ಳಬೇಕು. ಪ್ರತಿಯೊಬ್ಬರೂ ಫಲವನ್ನು ಅಪೇಕ್ಷಿಸುತ್ತಾರೆ. ಆದರೆ, ನಮ್ಮ ಪ್ರಯತ್ನವು ಸರಿಯಾಗಿಲ್ಲದಿರುವುದರಿಂದ, ಅಪೇಕ್ಷಿತವಾದ ಫಲವು ನಮಗೆ ಲಭಿಸುವುದಿಲ್ಲ. "ಆಲದ ಬೀಜವನ್ನು ನೆಟ್ಟು, ಮಾವಿನ ಮರವು ಬರಲಿಲ್ಲ" ಎಂದು ದುಃಖಪಡುವಂತೆ, ಕೊನೆಯಲ್ಲಿ ಕೇವಲ ದುಃಖವನ್ನೇ ನಾವು ಅನುಭವಿಸುತ್ತಿರುತ್ತೇವೆ.

ವ್ಯಾವಹಾರಿಕ ಫಲಗಳ ವಿಷಯದಲ್ಲಾದರೋ, ವಿರೋಧ ಮತ್ತು ಅವಿರೋಧ ರೀತಿಯಿಂದ ವ್ಯಾವಹಾರಿಕ ಪ್ರಯತ್ನಗಳನ್ನು ನಾವು ವಿಶ್ಲೇಷಣೆಮಾಡುವುದಾದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ಆಪ್ತವಾಕ್ಯದ ಸ್ವರೂಪದಲ್ಲಿರುವ ಶಬ್ದಪ್ರಮಾಣವಿರುವುದನ್ನು ನಾವು ಒಪ್ಪಬೇಕಾಗುತ್ತದೆ.

ನಮಗೆ ಪರಮ ಆಪ್ತನಾದ ಈಶ್ವರನ ಮುಖದಿಂದ ಹೊರಹೊಮ್ಮಿದ, ಮತ್ತು ಎಲ್ಲ ರೀತಿಯ ಫಲಗಳನ್ನೂ ಅನುಗ್ರಹಿಸುವ ಶ್ರೇಷ್ಠವಾದ ವೇದವು ಈ ರೀತಿ ಹೇಳುತ್ತದೆ—

ತಮೇವ ವಿದಿತ್ವಾಽತಿಮೃತ್ಯುಮೇತಿ

(ಅವನನ್ನು ತಿಳಿಯುವುದರಿಂದ, ಮೃತ್ಯುವನ್ನು ದಾಟುತ್ತಾನೆ.)

ಈ ಉಕ್ತಿಗಳಿಂದ, ಕೇವಲ ಪರಬ್ರಹ್ಮವನ್ನು ತಿಳಿಯುವುದರಿಂದ ದುಃಖಗಳ ನಿವೃತ್ತಿಯಾಗುತ್ತದೆ ಹಾಗೂ ಪರಮ ಆನಂದವು ಪ್ರಾಪ್ತವಾಗುತ್ತದೆ ಎಂಬುದು ಸ್ಪಷ್ಟ ನಾಗುತ್ತದೆ.

ಪರಬ್ರಹ್ಮವನ್ನು ಹೊಂದುವುದಕ್ಕೆ, ಶಾಸ್ತ್ರಗಳಲ್ಲಿ ಹೇಳಿದೆ—

ಆತ್ಮಾ ವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿಧಿಧ್ಯಾಸಿತವ್ಯಃ

(ಎಲೈ ! ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬೇಕು, ಕೇಳಬೇಕು, ಮನನಮಾಡಬೇಕು ಮತ್ತು ಏಕಾಗ್ರತೆಯಿಂದ ಧ್ಯಾನಿಸಬೇಕು.)

ಆದ್ದರಿಂದ, ಆತ್ಮನನ್ನು ಹೊಂದಲು ಶ್ರವಣ (ಕೇಳುವುದು), ಮನನ (ಚಿಂತನೆ ಮಾಡುವುದು) ಮತ್ತು ನಿದಿಧ್ಯಾಸನ (ಏಕಾಗ್ರತೆ)—ಇವುಗಳನ್ನು ವಿಧಿಸಲಾಗಿದೆ. ಶ್ರವಣ, ಮನನ ಮತ್ತು ನಿದಿಧ್ಯಾಸನಗಳ ಫಲವಾದ ಆತ್ಮಜ್ಞಾನದಿಂದ, ಆತ್ಮನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು ಮತ್ತು ಆಗ ಮೋಕ್ಷವನ್ನು ಹೊಂದಬಹುದು—ಎಂಬುದು ನಮಗೆ ಸ್ಪಷ್ಟವಾಗಿ ಈ ಉಕ್ತಿಗಳಿಂದ ತಿಳಿದು ಬರುತ್ತದೆ. ಶ್ರವಣ, ಮನನಾದಿಗಳನ್ನು ಅನುಷ್ಠಾನ ಮಾಡುವುದಕ್ಕೆ ಮನಸ್ಸು ಪರಿಶುದ್ಧವಾಗಿರಬೇಕು; ಈ ಕೆಳಗಿನ ಉಕ್ತಿಯಲ್ಲಿ ಈ ವಿಷಯವು ಸ್ಪಷ್ಟವಾಗಿದೆ—

ಕಷಾಯೇ ಕರ್ಮಭಿಃ ಪಕ್ವೇ ತತೋ ಜ್ಞಾನಂ ಪ್ರವರ್ತತೇ

(ಕರ್ಮಗಳಿಂದ ಮನಸ್ಸಿನ ಕಶ್ಮಲಗಳನ್ನು ನಿವಾರಣೆಮಾಡಿದರೆ, ಜ್ಞಾನ ಫಲಿಸುತ್ತದೆ).

ಪರಿಶುದ್ಧವಾದ ಮನಸ್ಸುಳ್ಳ ವಿಶಿಷ್ಟರಾದ ಉತ್ತಮಾಧಿಕಾರಿಗಳ ವಿಷಯದಲ್ಲಿ ಇದು ವಾಸ್ತವವಾದುದು. ಶಂಕರವಿಜಯದಲ್ಲಿ ಈ ಕೆಳಗಿನ ವಾಕ್ಯ ಬರುತ್ತದೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಿಪಕ್ವಮತೇಃ ಸಕೃತ್ ಶ್ರುತಂ ಜನಯೇದಾತ್ಮಧಿಯಂ ಶ್ರುತೇರ್ವಚಃ।
ಪರಿಮಂದಮತೇಃ ಶನೈಃ ಶನೈರ್ಗುರುಪಾದಾಬ್ಜನಿಷೇವಣಾದಿನಾ ॥

(ಪರಿಪಕ್ವವಾದ ಬುದ್ಧಿಯುಳ್ಳವರಿಗೆ, ಶ್ರುತಿಯ ವಾಕ್ಯಗಳನ್ನು ಒಂದು ಸಲ ಕೇಳುವ ಮಾತ್ರದಿಂದಲೇ ಆತ್ಮಜ್ಞಾನವುಂಟಾಗಬಹುದು. ಗುರುಗಳ ಪಾದಕಮಲಗಳ ಶುಶ್ರೂಷೆ ಮಾಡುವುದು ಮುಂತಾದ ಕ್ರಿಯೆಗಳಿಂದ ಮಂದಮತಿಗಳಿಗೆ ನಿಧಾನವಾಗಿ ಉಂಟಾಗುತ್ತದೆ).

ವಿಶಿಷ್ಟರಾದ ಉತ್ತಮಾಧಿಕಾರಿಗಳಿಗೆ ಗುರುಮುಖೇನ ಒಂದು ಬಾರಿ ಮಹಾ ವಾಕ್ಯಗಳನ್ನು ಕೇಳುವುದರಿಂದಲೇ ಆತ್ಮಜ್ಞಾನವುಂಟಾಗುತ್ತದೆ—ಎಂಬುದು ಇದರಿಂದ ತಿಳಿದುಬರುತ್ತದೆ. ಶ್ರವಣ, ಮನನ, ನಿದಿಧ್ಯಾಸನಗಳು ಮಧ್ಯಮಾಧಿಕಾರಿಗಳಿಗೆ ಅತ್ಯವಶ್ಯ. ಉಪಾಸನಾ ಮುಂತಾದುವು ಮಂದಾಧಿಕಾರಿಗಳಿಗೆ ಅವಶ್ಯ. ಈ ಉಪಾಸನೆಗಳಲ್ಲಿ ಭಕ್ತಿಯು ಪ್ರಮುಖವಾದುದು.

ಹರಿಚರಣ ಭಕ್ತಿಯೋಗಾನ್ಮನಃ ಸ್ವವೇಗಂ ಜಹಾತಿ ಶನೈಃ

(ಹರಿಯ ಚರಣಗಳಲ್ಲಿ ಭಕ್ತಿಯೋಗದಿಂದ ಮನಸ್ಸು ನಿಧಾನವಾಗಿ ತನ್ನ ಸುತ್ತುವ ಸ್ವಭಾವವನ್ನು ಬಿಡುತ್ತದೆ).

ಭಕ್ತಿಯು ಮನಸ್ಸನ್ನು ಶುದ್ಧಗೊಳಿಸುತ್ತದೆ ಎಂದು ಹೇಳಲಾಗಿದೆ. ಕ್ತಿಯ ಸ್ವರೂಪವನ್ನು ವಿಶ್ಲೇಷಣೆ ಮಾಡೋಣ. ಭಕ್ತಿಯೆಂದರೆ ಪೂಜ್ಯರಾದವರ ವಿಷಯದಲ್ಲಿ ನಮ್ಮ ಮಾನಸಿಕ ಭಾವನೆ. ಅಂತಹ ವ್ಯಕ್ತಿಗಳಲ್ಲಿ ನಮ್ಮ ಶ್ರದ್ಧೆಯೇ ಭಕ್ತಿ ಎನಿಸುತ್ತದೆ. ಇಂತಹ ಶ್ರದ್ಧೆಯನ್ನೇ ನಾವು ವ್ಯಾವಹಾರಿಕ ಮಟ್ಟದಲ್ಲಿ ಪಿತೃ ಭಕ್ತಿ, ಮಾತೃಭಕ್ತಿ ಎಂದು ಕರೆಯುತ್ತೇವೆ. ಈ ಶ್ರದ್ಧೆಯನ್ನು ಹೊಂದುವುದಕ್ಕೆ ನಾವು ಮಾಡುವ ಪ್ರಯತ್ನವೂ ಭಕ್ತಿ ಎನಿಸುತ್ತದೆ. ಈ ಕಾರಣದಿಂದಲೇ, ಪರಮಾತ್ಮನ ಲೀಲೆಗಳನ್ನು ಕೇಳುವುದು ಮತ್ತು ಅವನನ್ನು ಕುರಿತು ಯೋಚನೆ ಮಾಡುವುದೂ ಭಕ್ತಿ ಎನಿಸುತ್ತದೆ. ಶ್ರೇಷ್ಠರಾದ ಭಕ್ತರಲ್ಲಾದರೂ ಶ್ರದ್ಧೆಯ ನಂತರವೂ ಈ ಗುಣಗಳು ಇರುತ್ತವೆ. ಸಾಧನೆ ಮತ್ತು ಸಾಧನೆಯ ಫಲ—ಇವೆರಡನ್ನೂ ನಾವು ಭಕ್ತಿಯೆಂದು ಕರೆಯುತ್ತೇವೆ. ಭಕ್ತಿಯು ಪರಮ ಪ್ರೇಮ. ಇದನ್ನು ಅನುರಾಗವೆಂದೂ ಕರೆಯಬಹುದು.

ಸಾ ಪರಾನುರಕ್ತಿರೀಶ್ವರೇ

(ಈಶ್ವರನ ವಿಷಯವಾದ ಅನುರಕ್ತಿಯೇ ಭಕ್ತಿ).

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಹ್ಲಾದನು ಹೇಳಿದ್ದಾನೆ-

ಯಾ ಪ್ರೀತಿರವಿವೇಕಿನಾಂ ವಿಷಯೇಷ್ವನಪಾಯಿನೀ ।

ತ್ವಾಮನುಸ್ಮರತಃ ಸಾ ಮೇ ಹೃದಯಾನ್ಮಾಽಪಸರ್ಪತು ॥

(ವಿಷಯಗಳಲ್ಲಿ ಅವಿವೇಕಿಗಳಿಗೆ ಯಾವ ರೀತಿಯಲ್ಲಿ ಅಮಿತವಾದ ಪ್ರೀತಿಯಿರುತ್ತದೆಯೋ, ಹಾಗೆಯೇ, ನಿನ್ನನ್ನು ಸರ್ವದಾಸ್ಮರಣೆ ಮಾಡುತ್ತಿರುವ ನನ್ನ ಹೃದಯದಿಂದ ಅದು ಹೋಗದಿರಲಿ.)

ಸುಖವನ್ನುಂಟುಮಾಡುವ ಕ್ರಿಯೆಗಳ ವಿಷಯದಲ್ಲಿನ ಮೋಹವನ್ನು "ರಾಗ"ವೆಂದು ಕರೆಯುತ್ತಾರೆ.

ಸುಖಾನು ಶಾಯೀ ರಾಗಃ

(ಸುಖದ ವಿಷಯದಲ್ಲಿ ಮೋಹವಿರುವುದೇ ರಾಗ)

ಪರಮ ಆನಂದಸ್ವರೂಪನಾದ ಮತ್ತು ಭಕ್ತರಿಗೆ ಸುಖವನ್ನು ಅನುಗ್ರಹಿಸುವ ಈಶ್ವರನ ವಿಷಯದಲ್ಲಿನ ಅನುರಕ್ತಿಯೇ ವಾಸ್ತವವಾದ "ರಾಗ"ವೆನಿಸುತ್ತದೆ. ಈಶ್ವರನ ಮಹಿಮೆಯನ್ನು ಕುರಿತು ಯೋಚನೆ ಮಾಡುವುದರ ಫಲವಾದ ಭಾವನೆಯೇ ರಾಗ. ಆದ್ದರಿಂದ, ಈಶ್ವರನಿಗೆ ಸಂಬಂಧಿಸಿದಂತೆ, ಅನುರಾಗ ಎಂಬ ಪದವೂ ಪ್ರಸ್ತುತವಾದುದು. ಅದೂ ಸಹ ಈಶ್ವರನಲ್ಲಿ ಪ್ರೇಮ ಹಾಗೂ ಭಕ್ತಿ. ಹೀಗೆ ಹೇಳಲಾಗಿದೆ- "ನಾನು ಜೀವಂತನಾಗಿರುವಾಗ ಈಶ್ವರನ ಕೃಪೆಯಿಂದ ಸುಖವನ್ನು ಅನುಭವಿಸಿದೆ. ನನ್ನ ಮರಣದ ನಂತರ, ನಾನು ಈ ದೇಹದಿಂದ ಹೋಗುತ್ತೇನೆ. ನಾನು ಈ ದೇಹವನ್ನು ಬಿಟ್ಟನಂತರವೂ, ಈ ದೇಹವನ್ನುಂಟುಮಾಡಿದ ಪಂಚಮಹಾಭೂತಗಳು ಈಶ್ವರನನ್ನು ಸೇರಲಿ. ಪೃಥಿವಿಯ ಅಂಶವು ಈಶ್ವರನ ಸ್ಥಾನವನ್ನು ಸೇರಲಿ, ಮತ್ತು ತೇಜಸ್ಸಿನ ಅಂಶವು ಈಶ್ವರನು ಉಪಯೋಗಿಸುವ ಕನ್ನಡಿಯನ್ನು ಸೇರಲಿ............ ಎಂದು.

ಸಾತ್ವಿಕ, ರಾಜಸಿಕ ಹಾಗೂ ತಾಮಸಿಕ-ಎಂದು ಭಕ್ತಿಯನ್ನು ಮೂರು ವಿಧವಾಗಿ ವಿಂಗಡಿಸಲಾಗಿದೆ. ಇತರರಿಗೆ ತೊಂದರೆ ಮಾಡುವುದಕ್ಕಾಗಿ ಬೆಳೆಸಿದ ಭಕ್ತಿಯು ತಾಮಸಭಕ್ತಿ. ಆ ಕ್ಷಣದಲ್ಲಿ ಸುಖವನ್ನುಂಟುಮಾಡಿದರೂ, ಪರಮ ಪದವನ್ನು ಅದು ತಂದುಕೊಡದಿರುವುದರಿಂದ, ಅದನ್ನು ನಾವು ಇಚ್ಛಿಸಬಾರದು. ರಾವಣ ಮತ್ತು ಇತರ ರಾಕ್ಷಸರು ಬೆಳೆಸಿಕೊಂಡ ಭಕ್ತಿಯು ಈ ಗುಂಪಿಗೆ ಸೇರಿದುದು. ಇಹದಲ್ಲಿ ಸುಖ ಮತ್ತು ಸ್ವರ್ಗವನ್ನು ಪಡೆಯಬೇಕೆಂದು ಬೆಳೆಸಿಕೊಂಡ ಭಕ್ತಿಯು ರಾಜಸಿಕ ಭಕ್ತಿ. ಇದರಿಂದ ಮೋಕ್ಷವೂ ಲಭಿಸುವುದಿಲ್ಲ; ಕೇವಲ ಪ್ರಾಪಂಚಿಕ ಸೌಖ್ಯವು ಲಭಿಸುತ್ತದೆ. ಕೇವಲ ಮೋಕ್ಷವನ್ನು ಇಚ್ಛಿಸುವವರಿಗೆ ಈ ವಿಧವಾದ ಭಕ್ತಿಯು ಅವಶ್ಯವಲ್ಲ. ಸಾತ್ವಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಯೇ ಮೂರನೆಯ ವಿಧವಾದುದು. ಯಾವ ಆಸಕ್ತಿಯೂ ಇಲ್ಲದೆ, ಹಾಗೂ ಈಶ್ವರಾರ್ಪಣ ಬುದ್ಧಿಯಿಂದ ತನ್ನ ಆಶ್ರಮಕ್ಕೆ ವಿಹಿತವಾದ ಕರ್ಮಗಳನ್ನು ಮಾಡುವುದೇ ಸಾತ್ವಿಕ ಭಕ್ತಿ. ಈಶ್ವರನ ಅನುಗ್ರಹವನ್ನು ಹೊಂದುವುದಕ್ಕಾಗಿ ವಿಹಿತವಾದ ಕರ್ಮಗಳನ್ನು ಮಾಡುವುದೇ ಭಕ್ತಿಯೆಂದು ಭಾಗವತದಲ್ಲಿ ಹೇಳಿದೆ. ಸಾಮಾನ್ಯವಾಗಿ ಈಶ್ವರನ ಮೂರ್ತಿಯನ್ನು ಪೂಜಿಸುವುದು ಮತ್ತು ಭಜನೆ ಮಾಡುವುದು ಇವನ್ನೇ ಭಕ್ತಿಯೆಂದು ಸಾಧಾರಣ ಜನರು ತಿಳಿಯುತ್ತಾರೆ; ಆದರೆ, ಸರಿಯಾದ ಮಾರ್ಗದಲ್ಲಿ ತನಗೆ ವಿಹಿತವಾದ ಕರ್ಮಗಳನ್ನು ಆಚರಿಸುವುದೇ ವಾಸ್ತವವಾಗಿ ಭಕ್ತಿ. ಬೃಹನ್ನಾರದೀಯದಲ್ಲಿ ಹೀಗೆ ಹೇಳಿದೆ-

ವೇದೋದಿತಾನಿ ಕರ್ಮಾಣಿ ಕುರ್ಯಾದೀಶ್ವರ ತುಷ್ಟಯೇ ।
ಯಥಾಽಽಶ್ರಮಂ ತ್ಯಕ್ತಕಾಮಃ ಪ್ರಾಪ್ನೋತಿ ಪರಮಂ ಪದಮ್ ॥

(ಆಸೆಗಳನ್ನು ತ್ಯಜಿಸಿ, ಈಶ್ವರನನ್ನು ಸಂತೋಷಪಡಿಸುವುದಕ್ಕಾಗಿ, ವೇದೋಕ್ತ ತನ್ನ ಆಶ್ರಮದ ಕರ್ಮಗಳನ್ನು ಯಾವನು ಮಾಡುತ್ತಾನೋ, ಅವನು ಪರಮ ಪದವನ್ನು ಹೊಂದುತ್ತಾನೆ.)

ಈ ರೀತಿಯ ಭಕ್ತಿಯನ್ನು ಅಭ್ಯಾಸ ಮಾಡುವುದು "ದಾಸ್ಯ" ವರ್ಗಕ್ಕೆ ಸೇರುತ್ತದೆ. ನಾವು ಜಪವನ್ನು ಮಾಡಲಾಗುತ್ತಿದೆಯೆಂಬ ಕಾರಣದಿಂದ, ತನ್ನ ಆಶ್ರಮಕ್ಕೆ ವಿಹಿತವಾದ ಕರ್ಮಗಳನ್ನು ಆಚರಿಸದಿರುವುದು ತಪ್ಪಾಗುತ್ತದೆ. ಏಕೆಂದರೆ, ಆ ಕರ್ಮಗಳು ಸ್ವತಃ ಈಶ್ವರನಿಂದಲೇ ವಿಹಿತವಾಗಿವೆ. ವಿಹಿತವಾದ ಕರ್ಮಗಳನ್ನು ನಾವು ಆಚರಿಸದಿದ್ದರೆ, ಈಶ್ವರನ ಆಜ್ಞೆಯನ್ನು ಉಲ್ಲಂಘಿಸಿದಂತಾಗುತ್ತದೆ. ಆ ರೀತಿ ನಾವು ವ್ಯವಹರಿಸಿದರೆ, ನಾವು ಈಶ್ವರನಿಂದ ದಂಡಿಸಲ್ಪಡುತ್ತೇವೆ. ಒಂದು ಉದಾಹರಣೆಯನ್ನು ಕೊಡಬಹುದು-ತನ್ನ ರಾಜನಲ್ಲಿ ವಿಶಿಷ್ಟವಾದ ಪ್ರೀತಿಯನ್ನು ಹೊಂದಿದ್ದರೂ, ಸೇವಕನು, ರಾಜನ ಆಜ್ಞೆಗಳನ್ನು ಪಾಲಿಸದಿದ್ದರೆ, ರಾಜನ ಕ್ರೋಧಕ್ಕೆ ಪಾತ್ರನಾಗುತ್ತಾನೆ. ಈಶ್ವರನ ವಿಷಯದಲ್ಲಿಯೂ ಹೀಗೆಯೇ ಎಂದು ತಿಳಿಯಬೇಕು.

ಭಕ್ತಿಯನ್ನು ಅಭ್ಯಾಸ ಮಾಡುವುದಕ್ಕೆ ಎಲ್ಲರೂ ಅಧಿಕಾರಿಗಳು. ಜ್ಞಾನ ಮಾರ್ಗಕ್ಕೆ ಅಧಿಕಾರಿಗಳಾದ ಸಂನ್ಯಾಸಿಗಳನ್ನು ಬಿಟ್ಟು, ಇತರ ಆಶ್ರಮಗಳಿಗೆ ಸೇರಿದ ಎಲ್ಲರೂ ಭಕ್ತಿಯ ಮೂಲಕ ಶ್ರೇಯಸ್ಸನ್ನು ಪಡೆಯಬೇಕು. ಮೋಕ್ಷವನ್ನುಂಟು ಮಾಡುವ ಜ್ಞಾನವು ಶ್ರವಣ, ಮನನ ಹಾಗೂ ನಿದಿಧ್ಯಾಸನಗಳಿಂದ ಉಂಟಾಗುತ್ತದೆ. ಶ್ರವಣ, ಮನನ, ನಿದಿಧ್ಯಾಸನಗಳನ್ನು ವಿಹಿತವಾದ ರೀತಿಯಲ್ಲಿ ಆಚರಿಸುವುದಕ್ಕೆ ಶಮಾದಿ ಆರು ಗುಣಗಳು ಅವಶ್ಯ. ಈ ಗುಣಗಳು ಎಲ್ಲರಲ್ಲೂ ಪೂರ್ಣವಾಗಿಲ್ಲ) ಅವರು ಪ್ರಯತ್ನವನ್ನು ಮಾಡಿದರೂ, ವಾಸ್ತವವಾಗಿ ಭಕ್ತರು ಅಥವಾ ಶ್ರವಣಾದಿಗಳನ್ನು ಅನುಷ್ಠಾನ ಮಾಡುತ್ತಿರುವವರು ಎಂದು ವರ್ಗೀಕರಿಸಲಾಗದ ಒಂದು ಸ್ಥಿತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಲ್ಲಿ ಕೆಲವರಿರುತ್ತಾರೆ. ಇವರೂ ಸಹ ಮೋಕ್ಷವನ್ನು ಅಪೇಕ್ಷಿಸುತ್ತಾರೆ. ಮನಸ್ಸು ಪರಿಶುದ್ಧವಾಗದಿರುವುದರಿಂದ, ಅವರು ಶ್ರವಣ, ಮನನ, ನಿದಿಧ್ಯಾಸನಕ್ಕೆ ಅರ್ಹರಾಗುವುದಿಲ್ಲ. ಈ ವರ್ಗದ ಜನರು ವಿಶೇಷವಾಗಿ ಭಕ್ತಿಗೆ ಶರಣರಾಗಬೇಕು. ಅವನು ಹೇಳಿದ್ದಾನೆ-

ಭಾಗ್ಯೋದಯೇನ ಮತ್ಕಥಾದೌ ಜಾತಶ್ರದ್ಧಸ್ತು ಯಃ ಪುಮಾನ್ ।

ನ ನಿರ್ವಿಣ್ಣೋ ನ ಚಾಸಕ್ತೋ ಭಕ್ತಿಯೋಗೋಽಸ್ಯ ಸಿದ್ಧಿದಃ ॥

(ಭಾಗ್ಯೋದಯದಿಂದ ನನ್ನ ಕಥೆ, ಮುಂತಾದುವಲ್ಲಿ ಶ್ರದ್ಧೆಯುಳ್ಳವನಾದ, ಮತ್ತು ನಿರ್ವಿಣ್ಣನೂ, ನಿರಾಸಕ್ತನೂ ಆದ ಮನುಷ್ಯನಿಗೆ ಭಕ್ತಿಯೋಗವು ಸಿದ್ಧಿಯನ್ನುಂಟು ಮಾಡುತ್ತದೆ.)

ಸಾಧಕನನ್ನು ಕುರಿತು ಹೇಳಲಾಗಿದೆ-

ಸಕಲಭವನಿವೃತ್ತಂ ಚಿತ್ತಮೇತನ್ನಯಸ್ಮಾತ್
ಶ್ರವಣಮನನ ಕರ್ಮಾನುಷ್ಠಿತಿಸ್ಸ್ಯಾನ್ನ ತಸ್ಮಾತ್ ।
ವಿಷಯಕೃತಿವಿಷಾದೋ ನಾಪಿ ಸೋಢುಂ ಪ್ರಶಕ್ಯಃ
ಹರಿಪದಭಜನಂ ತನ್ನಿವೃತ್ತ್ಯೈ ಪ್ರಕುರ್ಮಃ ॥

(ಪ್ರಾಪಂಚಿಕ ವಿಷಯಗಳಲ್ಲಿ ಆಸಕ್ತಿಯು ಮನಸ್ಸಿನಿಂದ ನಿವೃತ್ತವಾಗದಿರುವುದರಿಂದ, ಶ್ರವಣ, ಮನನ ಕರ್ಮಾನುಷ್ಠಾನ ಮುಂತಾದುವು ಇರುವುದಿಲ್ಲ. ಪ್ರಾಪಂಚಿಕ ವಿಷಯಗಳಿಂದ ಫಲಿತವಾಗುವ ದುಃಖವನ್ನೂ ಸಹ ಸಹಿಸಲು ಸಾಧ್ಯವಾಗುವುದಿಲ್ಲ. ಇದರಿಂದ ಮುಕ್ತಿಯನ್ನು ಪಡೆಯುವುದಕ್ಕೆ ಹರಿಪದವನ್ನು ಸೇವಿಸೋಣ.)

ಈ ರೀತಿಯ ಭಕ್ತಿಯನ್ನು ಅಭ್ಯಾಸ ಮಾಡಿದರೆ, ಚಿತ್ತವು ನಿರ್ಮಲವಾಗುತ್ತದೆ. ಇದು ಸಗುಣೋಪಾಸನೆಗೆ ಸದೃಶವಾಗುತ್ತದೆ. ಚಿತ್ತದ ಕಶ್ಮಲವು ಸಗುಣೋಪಾಸನೆಯಿಂದ ನಿವೃತ್ತವಾಗುತ್ತದೆ. ನಿರ್ಮಲವಾದ ಚಿತ್ತವುಳ್ಳ ಭಕ್ತರು ಜ್ಞಾನವನ್ನು ಹೊಂದುತ್ತಾರೆ.

ಭಗವದ್ಗೀತೆಯಲ್ಲಿ-

ತೇಷಾಂ ಸತತಯುಕ್ತಾನಾಂ ಭಜತಾಂ ಪ್ರೀತಿಪೂರ್ವಕಮ್ ।

ದದಾಮಿ ಬುದ್ಧಿಯೋಗಂ ತಂ ಯೇನ ಮಾಮುಪಯಾಂತಿ ತೇ ॥

(ಯಾರು ಸರ್ವದಾ ನನ್ನಲ್ಲಿ ಭಕ್ತಿಯುಕ್ತರಾಗಿರುತ್ತಾರೋ ಮತ್ತು ಪ್ರೀತಿಪೂರ್ವಕವಾಗಿ ನನ್ನನ್ನು ಸೇವಿಸುತ್ತಾರೋ, ಅವರಿಗೆ ನನ್ನನ್ನು ಸೇರುವ ಬುದ್ಧಿಯೋಗವನ್ನು ಅನುಗ್ರಹಿಸುತ್ತೇನೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ವೇದವೂ ಸಹ ಹೀಗೆ ಹೇಳುತ್ತದೆ—

ನಾಯಮಾತ್ಮಾ ಪ್ರವಚನೇನ ಲಭ್ಯಃ
ನ ಮೇಧಯಾ ನ ಬಹುನಾ ಶ್ರುತೇನ।
ಯಮೇವೈಷ ವೃಣುತೇ ತೇನ ಲಭ್ಯ-
ಸ್ತಸ್ಯೈಷ ಆತ್ಮಾ ವಿವೃಣುತೆ ತನೂಂಸ್ವಾಮ್ ॥

(ಅಧ್ಯಯನದಿಂದ, ಬುದ್ಧಿಯಿಂದ ಅಥವಾ ಅಧಿಕವಾದ ವಿದ್ವತ್ತಿನಿಂದ ಆತ್ಮನು ಲಭಿಸುವುದಿಲ್ಲ; ಆತ್ಮನನ್ನು ಮಾತ್ರ ಯಾರು ಅರಸುತ್ತಾರೋ ಅವರಿಗೆ ಮಾತ್ರ ಲಭ್ಯತ ತನ್ನ ವಾಸ್ತವ ಸ್ವರೂಪವು ಅವನಿಗೆ ಮಾತ್ರ ಲಭಿಸುತ್ತದೆ).

ಈಶ್ವರಾನುಗ್ರಹವಿಲ್ಲದೆ ಜ್ಞಾನವುಂಟಾಗುವುದಿಲ್ಲ.

ವಿಜ್ಞಾನಂ ಚ ತ್ವಯಿ ಶಿವ ಯತೇ ತ್ವತ್ಪ್ರಸಾದಾನ್ನ ಲಭ್ಯಂ।
(ಹೇ ಶಿವ ! ನಿನ್ನ ಅನುಗ್ರಹವಿಲ್ಲದೆ, ಜ್ಞಾನವು ಲಭಿಸುವುದಿಲ್ಲ)—
ಎಂದು ಹೇಳಲಾಗಿದೆ.

ನಿರ್ಗುಣ ಉಪಾಸನೆಯು ನಿರ್ಗುಣ ಬ್ರಹ್ಮನ ಜ್ಞಾನವನ್ನುಂಟುಮಾಡುತ್ತದೆ.

....ಸಗುಣಬ್ರಹ್ಮಶೀಲನಾತ್ ।
ತದೇವಾವಿರ್ಭವೇತ್ಸಾಕ್ಷಾದಪೇತೋಪಾಧಿಕಲ್ಪನಮ್ ॥

(ಆ ಉಪಾಧಿ ರಹಿತವಾದ ಸತ್ಯವು ಸಗುಣೋಪಾಸನೆಯಿಂದ ಸ್ಪಷ್ಟವಾಗುತ್ತದೆ)—
ಎಂದು ಹೇಳಲಾಗಿದೆ.

ಭಕ್ತಿಯನ್ನು ಬೆಳಸಿಕೊಳ್ಳುವುದು ಎಲ್ಲರ ಕರ್ತವ್ಯ; ಏಕೆಂದರೆ, ಅದು ಚಿತ್ತ ಬುದ್ಧಿಯನ್ನುಂಟುಮಾಡುತ್ತದೆ. ನಿದಿಧ್ಯಾಸನಾದಿಗಳನ್ನು ಆಚರಿಸುವುದಕ್ಕೆ ಅರ್ಹತೆಯನ್ನು ತಂದುಕೊಡುತ್ತದೆ, ಮತ್ತು ಆತ್ಮಜ್ಞಾನವನ್ನುಂಟು ಮಾಡುತ್ತದೆ.

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು।
(ನನ್ನನ್ನೇ ಕುರಿತು ಯಾವಾಗಲೂ ಚಿಂತಿಸು, ನನ್ನ ಭಕ್ತನಾಗು........)

ಇಂತಹ ಉಕ್ತಿಗಳು ಭಕ್ತಿಯ ಪ್ರಾಮುಖ್ಯತೆಯನ್ನು ಸ್ಪಷ್ಟಪಡಿಸುತ್ತವೆ.

● ಎಲ್ಲರ ಹೃದಯದಲ್ಲಿ ಭಕ್ತಿಯು ಅಧಿಕಗೊಳ್ಳಲಿ ಎಂದು ನಾನು ಈಶ್ವರನನ್ನು ಪ್ರಾರ್ಥಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರನ ಆರಾಧನೆ

ನಾವೆಲ್ಲರೂ ಬಹುಕಾಲ ಬದುಕಬೇಕೆಂದು ಅಪೇಕ್ಷಿಸುತ್ತೇವೆ. ಆ ಅಪೇಕ್ಷೆಯು ಎಲ್ಲರಿಗೂ ಈಡೇರಿದೆಯೇ ಎಂದು ಪ್ರಶ್ನಿಸಿದರೆ, ಹಾಗಿಲ್ಲವೆಂಬುದು ಎಲ್ಲರ ಅನುಭವದಿಂದ ತಿಳಿದುಬರುತ್ತದೆ. ಪರಮಾತ್ಮನು ಹೇಳಿದ್ದಾನೆ—

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ।
ತಸ್ಮಾದಪರಿಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ ॥

(ಹುಟ್ಟಿದವನಿಗೆ ಸಾವು ನಿಶ್ಚಿತ; ಸತ್ತವನಿಗೆ ಹುಟ್ಟು ನಿಶ್ಚಿತ; ಆದ್ದರಿಂದ ಅಪರಿಹಾರ್ಯವಾದ ವಿಷಯದಲ್ಲಿ ನೀನು ಶೋಚಿಸುವುದು ಬೇಡ.)

ನಾವು ಈಗ ಹುಟ್ಟಿದ್ದೇವೆ. ಆದ್ದರಿಂದ ಪುನರ್ಜನ್ಮವಿರುವುದಾದರೆ, ಸಾವು ಇದ್ದೇ ತೀರಬೇಕು. ದೇಹದಿಂದ ಪ್ರಾಣವು ಹೊರಹೊರಡುವುದೇ ಸಾವು. ಸಾವಿನ ವಿಷಯದಲ್ಲಿ, ವೇದವು–"ಭೌತಿಕ ಶರೀರದಿಂದ ಸೂಕ್ಷ್ಮ ಶರೀರವು ಹೊರಹೊರಡುವುದು" ಎಂದು ತಿಳಿಸುತ್ತದೆ. ಆದರೆ, ಪ್ರಾಣವು ನಮ್ಮ ದೇಹದಲ್ಲೇ ಇರಬೇಕೆಂದು ಇಚ್ಛಿಸುತ್ತೇವೆ. ಯಾರಿಗೆ ಆ ರೀತಿಯ ಉತ್ಕ್ರಮಣ (ಹೊರಹೊರಡುವುದು) ಉಂಟಾಗುವುದಿಲ್ಲ? ವೇದದಲ್ಲಿ ಈ ರೀತಿ ಹೇಳಿದೆ—

ನ ತಸ್ಯ ಪ್ರಾಣಾ ಉತ್ಕ್ರಾಮಂತಿ ಅತ್ರೈವ ಸಮವಲೀಯಂತೇ ।

(ಅವನ ಪ್ರಾಣಗಳು ದೇಹವನ್ನು ಬಿಡುವುದಿಲ್ಲ; ಇಲ್ಲಿಯೇ ಅವು ಐಕ್ಯಗೊಳ್ಳುತ್ತವೆ.)

ಜ್ಞಾನಿಯ ವಿಷಯದಲ್ಲಿ ಸೂಕ್ಷ್ಮ ಶರೀರವು ಭೌತಿಕ ಶರೀರವನ್ನು ಬಿಟ್ಟು ಮತ್ತೊಂದಕ್ಕೆ ಹೋಗುವುದಿಲ್ಲ. ಶರೀರಕ್ಕೆ ಕಾರಣವಾಗಿರುವ ಪಂಚ ಮಹಾಭೂತಗಳು– ಅಂದರೆ, ಪೃಥಿವಿ, ಜಲ, ತೇಜಸ್ಸು, ವಾಯು ಮತ್ತು ಆಕಾಶ–ತಮ್ಮ ತಮ್ಮ ಮೂಲ ಕಾರಣವನ್ನು ಸೇರುತ್ತವೆ. ಜ್ಞಾನಿಗೆ ಮರಣವಿಲ್ಲವೆಂದು ವೇದವು ಹೇಳುತ್ತದೆ—

ತಮೇವ ವಿದಿತ್ವಾತಿಮೃತ್ಯುಮೇತಿ ।

(ಅವನನ್ನು ತಿಳಿಯುವುದರಿಂದ ಮೃತ್ಯುವನ್ನು ದಾಟುತ್ತಾನೆ)

"ಸಾವಿಲ್ಲದವನಿಗೆ, ಪುನರ್ಜನ್ಮವೂ ಇರುವುದಿಲ್ಲ"

ಪುನರಪಿ ಜನನಂ ಪುನರಪಿ ಮರಣಂ
ಪುನರಪಿ ಜನನೀ ಜಠರೇ ಶಯನಮ್

"ಮತ್ತೆ ಹುಟ್ಟುವುದು, ಮತ್ತೆ ಮರಣ ಹೊಂದುವುದು, ಮತ್ತೆ ತಾಯಿಯ ಜಠರದಲ್ಲಿರುವುದು"—ಇಂತಹ ಉಕ್ತಿಗಳು ಜ್ಞಾನಿಯ ವಿಷಯದಲ್ಲಿ ಉಚಿತವಾಗುವುದಿಲ್ಲ. ಎಲ್ಲರಿಗೂ ಮೃತ್ಯುವನ್ನು ಗೆಲ್ಲಬೇಕೆಂಬ ಆಸೆಯಿರುವುದರಿಂದ, ಎಲ್ಲರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನವನ್ನು ಹೊಂದಬೇಕು. ಜ್ಞಾನವನ್ನು ಹೊಂದಬೇಕಾದರೆ, ನಾವು ನಿಯಮಿತ ವಾದ ಮಾರ್ಗವನ್ನು ಅವಲಂಬಿಸಬೇಕು. ವೇದದಲ್ಲಿ ಹೇಳಿದೆ—

ಆತ್ಮಾವಾ ಅರೇ ದ್ರಷ್ಟವ್ಯಃ ಶ್ರೋತವ್ಯೋ ಮಂತವ್ಯೋ ನಿದಿಧ್ಯಾಸಿತವ್ಯಃ

(ಎಲೈ ! ಆತ್ಮವನ್ನು ನೋಡಬೇಕು ; ಕೇಳಬೇಕು, ಮನನ ಮಾಡಬೇಕು ಮತ್ತು ಏಕಾಗ್ರತೆಯಿಂದ ಧ್ಯಾನಮಾಡಬೇಕು.)

ಶ್ರವಣ, ಮನನ, ನಿದಿಧ್ಯಾಸನ, ಮುಂತಾದುವುಗಳ ಮೂಲಕ ಆತ್ಮದರ್ಶನ ಮಾಡಬೇಕೆಂದು ವೇದದಲ್ಲಿ ಹೇಳಲಾಗಿದೆ. ಬಾಹ್ಯಸಾಧನಗಳಲ್ಲಿ ವಿವೇಕ, ವೈರಾಗ್ಯ, ಶಮದಮಾದಿ ಆರು ಮತ್ತು ಮುಮುಕ್ಷುತ್ವ ಬಹುಮುಖ್ಯವಾದವು. ಈ ಸಾಧನಗಳು ಇಲ್ಲದಿದ್ದರೆ, ಶ್ರವಣಾದಿಗಳು ಅಪೇಕ್ಷಿತವಾದ ಫಲವನ್ನು ಕೊಡದಿರಬಹುದು. ಒಂದು ಯಾಗವನ್ನು ಮಾಡಬೇಕಾದರೆ, ಮಾಡುವವನಿಗೆ ಉಪನಯನ ಸಂಸ್ಕಾರವಾಗಿರ ಬೇಕು. ಯಾಗವನ್ನು ಮಾಡಬೇಕಾದರೆ ಅನೇಕ ಕಷ್ಟಗಳನ್ನು ಎದುರಿಸಬೇಕಾಗು ತ್ತದೆ. ಆದರೆ, ಜ್ಞಾನದ ಸಾಧನಗಳನ್ನು ಹೊಂದಬೇಕಾದರೆ, ಅಂತಹ ಕಷ್ಟಕರ ವಾಗಿರುವುದಿಲ್ಲ.

ಸಕಲಭವನಿವೃತ್ತಂ ಚಿತ್ತಮೇತಸ್ನ ಯಸ್ಮಾತ್
ಶ್ರವಣಮನನ ಕರ್ಮಾನುಷ್ಠಿತಿಸ್ಸ್ಯಾನ್ನ ತಸ್ಮಾತ್ ।
ವಿಷಯಕೃತಿವಿಷಾದೋ ನಾಪಿ ಸೋಢುಂ ಪ್ರಶಕ್ಯಃ
ಹರಿಪದಭಜನಂ ತನ್ನಿವೃತ್ತ್ಯೈ ಪ್ರಕುರ್ಮಃ ॥

(ಪ್ರಾಪಂಚಿಕ ವಿಷಯಗಳಿಂದ ಮನಸ್ಸು ಸಂಪೂರ್ಣವಾಗಿ ನಿವೃತವಾಗದಿರುವುದರಿಂದ, ಆತ್ಮನ ವಿಷಯವಾದ ಶ್ರವಣವಾಗಲೀ ಅಥವಾ ಮನನವಾಗಲೀ ಅಥವಾ ಕರ್ಮಾನು ಷ್ಠಾನವಾಗಲೀ ಇರುವುದಿಲ್ಲ ; ವಿಷಯಗಳಿಂದುಂಟಾದ ದುಃಖಗಳನ್ನು ಸಹಿಸಲೂ ಅದು ಶಕ್ತವಾಗಿರುವುದಿಲ್ಲ ; ಇವರಿಂದ ನಿವೃತ್ತಿಯನ್ನು ಹೊಂದುವುದಕ್ಕಾಗಿ ಹರಿಯಪಾದ ಗಳನ್ನು ಸೇವಿಸೋಣ.)

ಯೋಗ್ಯ ವ್ಯಕ್ತಿಯ ವಿಷಯದಲ್ಲಿ ಈ ರೀತಿ ಹೇಳಲಾಗಿದೆ.

ಸ್ವಾಭಾವಿಕವಾಗಿ ನಾವು ಯಾವುದಾದರೂ ಒಂದು ವಸ್ತುವಿನಲ್ಲಿ ಆಸಕ್ತರಾಗಿರು ತ್ತೇವೆ. ಈ ರೀತಿ ಒಂದು ಉಕ್ತಿ ಇದೆ—

ಬಾಲಸ್ತಾವತ್ಕ್ರೀಡಾಸಕ್ತಃ ತರುಣಸ್ತಾವತ್ತರುಣೀರಕ್ತಃ ।
ವೃದ್ಧಸ್ತಾವತ್ ಚಿಂತಾಸಕ್ತಃ ಪರೇ ಬ್ರಹ್ಮಣಿ ಕೋऽಪಿನಸಕ್ತಃ ॥

(ಬಾಲಕನಾಗಿರುವಾಗ ಆಟದಲ್ಲಿ ಆಸಕ್ತಿ ; ಯುವಕನಾಗಿರುವಾಗ ತರುಣಿಯಲ್ಲಿ ಆಸಕ್ತಿ ; ವಾರ್ಧಕ್ಯದಲ್ಲಿ ಚಿಂತೆಗಳಲ್ಲಿ ಆಸಕ್ತಿ ; ಆದರೆ, ಪರಬ್ರಹ್ಮದ ವಿಷಯದಲ್ಲಿ ಯಾರಿಗೂ ಆಸಕ್ತಿ ಇಲ್ಲ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಎಲ್ಲ ಸಮಯದಲ್ಲಿಯೂ ಯಾವುದಾದರೂ ಒಂದು ವಿಷಯದಲ್ಲಿ ನಮಗೆ ಆಸಕ್ತಿ ಇರುತ್ತದೆಂಬುದು ಇದರಿಂದ ತಿಳಿಯುತ್ತದೆ. ಅಂತಹ ಆಶೆ ದಾಟಿ ಹೋಗುವುದು ಕಷ್ಟವಾಗುತ್ತದೆ. ಪರಮಾತ್ಮನ ವಿಷಯದಲ್ಲಿ ನಮಗಿರುವ ಆಸಕ್ತಿಯನ್ನು ಪರಿಶುದ್ಧಗೊಳಿಸಿದರೆ, ನಮಗೆ ಎಲ್ಲ ವಿಧವಾದ ಫಲಗಳೂ ದೊರೆಯುತ್ತವೆ. ಅದು ಪ್ರೀತಿ ಎಂದು ಮನಸ್ಸಿನ ಒಂದು ವಿಶಿಷ್ಟವಾದ ವೃತ್ತಿ. ಇದಕ್ಕೆ ಒಂದು ವಸ್ತುವು ಬೇಕಾಗುಗುತ್ತದೆ. ವಸ್ತುವೇ ಇಲ್ಲದಿದ್ದರೆ, ಪ್ರೀತಿ ಇರುವುದಿಲ್ಲ. ಮಕ್ಕಳ ವಿಷಯದಲ್ಲಿನ ಪ್ರೀತಿಗೆ ವಾತ್ಸಲ್ಯವೆಂದು ಹೆಸರು ; ಹೆಂಡತಿಯ ವಿಷಯದಲ್ಲಿ ರತಿ ಎನಿಸುತ್ತದೆ, ಮತ್ತು ಪೂಜ್ಯವಾದ ವಸ್ತುಗಳ ವಿಷಯದಲ್ಲಿ ಭಕ್ತಿ ಎನಿಸುತ್ತದೆ. ಭಕ್ತಿಯ ವಿಷಯದಲ್ಲಿ ನಾರದರು ತಮ್ಮ ಭಕ್ತಿ ಸೂತ್ರದಲ್ಲಿ ಹೀಗೆ ಹೇಳುತ್ತಾರೆ—

ಸಾತ್ವಸ್ಮಿನ್ ಪರಮಪ್ರೇಮರೂಪಾ

(ಪರಮಾತ್ಮನ ವಿಷಯದಲ್ಲಿ ಅತ್ಯಂತ ಪ್ರೇಮ ರೂಪವಾದುದೇ ಭಕ್ತಿ)

ಇಲ್ಲಿ "ಪರಮ ಪ್ರೇಮ"—ಎಂದರೆ "ಈ ವ್ಯಕ್ತಿಯು ಪರಮಾತ್ಮನಿಲ್ಲದೆ ಬದುಕಲಾರ". ಅಂದರೆ, ಈಶ್ವರನ ವಿಷಯದಲ್ಲಿ ಒಂದು ಕ್ಷಣವಾದರೂ ಪ್ರೇಮವಿಲ್ಲದಿದ್ದರೆ, ಅವನು ನೈಜ ಭಕ್ತನಲ್ಲ. ಇದೇ ಪರಮ ಭಕ್ತಿಯು. ಅಂತಹ ಭಕ್ತಿಗೆ ಆಧಾರನಾಗಿರುವವನೇ ಪರಮಾತ್ಮ. ಅಂತಹವನಿಗೆ ಮುಪ್ಪು-ಮರಣವಾಗಲೀ ಇರುವುದಿಲ್ಲ.

ಸತ್ಯಂ ಜ್ಞಾನಮನಂತಂ ಬ್ರಹ್ಮ

(ಬ್ರಹ್ಮವು ವಿಕಾರರಹಿತವಾದುದು, ಜ್ಞಾನಸ್ವರೂಪ ಮತ್ತು ಅನಂತವಾದುದು)

ಅಂತಹ ಗುಣವುಳ್ಳವನು ಈಶ್ವರ. ಗುಣರಹಿತನಾದ ಈಶ್ವರನಲ್ಲಿ ಹೇಗೆ ಭಕ್ತಿಯನ್ನು ಹೊಂದುವುದು? ಗುಣಗಳು ಪ್ರೀತಿಗೆ ಕಾರಣಗಳಾಗುತ್ತವೆ. ಗುಣಗಳಿಲ್ಲದ ಕಡೆ ಪ್ರೀತಿಯನ್ನು ಹೊಂದುವುದು ಹೇಗೆ? ಇದಕ್ಕೆ ಈಶ್ವರನು ಹೇಳುತ್ತಾನೆ—

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿಸನ್ ।
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

(ಅಜನಾದರೂ, ಅವ್ಯಯನಾದರೂ, ಮತ್ತು ಪ್ರಾಣಿಗಳಿಗೆ ಈಶ್ವರನಾದರೂ, ನನ್ನ ಪ್ರಕೃತಿಯನ್ನು ನಿಯಂತ್ರಿಸಿ ನನ್ನ ಮಾಯೆಯಿಂದ ಅವಿರ್ಭವಿಸುತ್ತೇನೆ.)

ವೇದ ಹೇಳುತ್ತದೆ.

ಅಜಾಯಮಾನೋ ಬಹುಧಾ ವಿಜಾಯತೇ

(ಜನಿಸದೆ ಅನೇಕ ವಿಧವಾಗಿ ಆವಿರ್ಭವಿಸುತ್ತದೆ)

ಅವನ ಅವತಾರಗಳು ಪರಮಾತ್ಮನ ಲೀಲೆಗಳು. ಪರಮಾತ್ಮನು ಅವತರಿಸುವುದಕ್ಕೆ ಏನು ಕಾರಣ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಹೇಳಿದೆ—

ಪರೋಪಕೃತಿ ಕೈವಲ್ಯೇ ತೋಲಯಿತ್ವಾ ಜನಾರ್ದನಃ ।
ಗುರ್ವೀಮುಪಕೃತಿಂ ಮತ್ವಾವತಾರಾನ್ ದಶಾಗ್ರಹೀತ್ ॥

(ಪರೋಪಕಾರ ಮತ್ತು ಮೋಕ್ಷವನ್ನು ತೋಲನ ಮಾಡಿದಾಗ, ಪರೋಪಕಾರವೇ ಅಧಿಕವಾಗಿರುವುದನ್ನು ತಿಳಿದು ಜನಾರ್ಧನನು ಹತ್ತು ಅವತಾರಗಳನ್ನು ಮಾಡಿದನು).

ಪರೋಪಕೃತಿಶೂನ್ಯಸ್ಯ ಧಿಕ್ ಮನುಷ್ಯಸ್ಯ ಜೀವನಮ್ ।

(ಪರೋಪಕಾರ ಮಾಡದ ಮನುಷ್ಯನ ಜೀವನ ವ್ಯರ್ಥ)

ಅಂದರೆ, ಪರೋಪಕಾರ ಮಾಡದ ಮನುಷ್ಯನ ಜೀವನವು ಕೇವಲ ವ್ಯರ್ಥ. ಇತರರಿಗೆ ಸಹಾಯಮಾಡದ ಮನುಷ್ಯನ ಜೀವನ ಪ್ರಾಣಿಗಳ ಜೀವನಕ್ಕಿಂತ ನಿಕೃಷ್ಟವಾದುದು; ಏಕೆಂದರೆ, ಆ ಪ್ರಾಣಿಗಳು ಸತ್ತ ನಂತರ ಅವುಗಳ ಚರ್ಮವಾದರೂ ಉಪಯೋಗಕ್ಕೆ ಬರುತ್ತದೆ.

ಈಶ್ವರನು ದಯೆಯ ಮೂರ್ತಸ್ವರೂಪ. ಇದಕ್ಕೆ ಉದಾಹರಣೆಯನ್ನು ನಾವು ಮಹಾಭಾರತದಲ್ಲಿ ಹೊಂದಬಹುದು. ಭಗವಾನ್ ಕೃಷ್ಣನು ತನ್ನ ಅರಮನೆಯಲ್ಲಿರುತ್ತಾನೆ. ಆ ಸಮಯದಲ್ಲಿಯೇ ಪರಮ ಭಕ್ತಳಾದ ದ್ರೌಪದಿಯನ್ನು, ದುರ್ಯೋಧನನ ಆಜ್ಞೆಯಂತೆ, ದುಶ್ಯಾಸನನು ಎಳೆದು ತಂದು, ಅವಳನ್ನು ಅವಮಾನಪಡಿಸಲು ಸೀರೆಯನ್ನು ಎಳೆಯುವುದಕ್ಕೆ ಪ್ರಾರಂಭಿಸುತ್ತಾನೆ. ಆಗ ದ್ರೌಪದಿಯು ಕೃಷ್ಣನನ್ನು ಪ್ರಾರ್ಥಿಸುತ್ತಾಳೆ—

ಹಾ ಕೃಷ್ಣ ದ್ವಾರಕಾವಾಸ ಕ್ವಾಸಿ ಯಾದವ ನಂದನ ।
ಇಮಾಮವಸ್ಥಾಂ ಸಂಪ್ರಾಪ್ತಾಮನಾಥಾಂ ಕಿಮುಪೇಕ್ಷಸೇ ॥

(ಹೇ ಕೃಷ್ಣ ! ದ್ವಾರಕೆಯಲ್ಲಿ ವಾಸ ಮಾಡುವವನೇ ! ಯಾದವರಿಗೆ ಆನಂದವನ್ನುಂಟು ಮಾಡುವವನೇ ! ಎಲ್ಲಿದ್ದೀಯೆ ? ರಕ್ಷಕರಿಲ್ಲದೆ ಈ ದುಃಸ್ಥಿತಿಯಲ್ಲಿರುವ ನನ್ನನ್ನು ಏಕೆ ಉಪೇಕ್ಷೆ ಮಾಡುತ್ತಿದ್ದೀಯೆ ?)

ಭಗವಂತನ ಹೃದಯವು ಕರಗಿತು. ಅವನು ಪ್ರಯಾಣಕ್ಕೆ ಸೌಕರ್ಯಗಳನ್ನು ಗಮನಿಸಲಿಲ್ಲ ; ಯಾರಿಗೂ ತಿಳಿಸಲಿಲ್ಲ. ತಕ್ಷಣವೇ ದ್ರೌಪದಿಯ ಸಮೀಪಕ್ಕೆ ಹೋದ.

ಋಣಮೇತತ್ಪ್ರವೃದ್ಧಂ ಮೇ ಹೃದಯಾನ್ನಾಪಸರ್ಪತಿ ।
ಯದ್ಗೋವಿಂದೇತಿ ಚುಕ್ರೋಶ ಕೃಷ್ಣಾ ಮಾಂ ದೂರವಾಸಿನಮ್ ॥

(ದೂರದಲ್ಲಿದ್ದ ನನ್ನನ್ನು ದ್ರೌಪದಿಯು ಕರೆದು, "ಗೋವಿಂದ" ಎಂದು ಗಟ್ಟಿಯಾಗಿ ಕೂಗಿದಳೋ, ಆ ಋಣವು ನನ್ನ ಹೃದಯದಿಂದ ಹೋಗುವುದಿಲ್ಲ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರನ ಗುಣಗಳನ್ನು ಕುರಿತು ಭಾಗವತದಲ್ಲಿ ಹೀಗೆ ಬರುತ್ತದೆ—

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾ ಅಪ್ಯುರುಕ್ರಮೇ
ಕುರ್ವಂತ್ಯಹೇತುಕೀಂ ಭಕ್ತಿಮಿತ್ಥಂಭೂತಗುಣೋ ಹರಿಃ ॥

(ಆತ್ಮಾರಾಮರಾದ ಹಾಗೂ ಬಂಧನದಿಂದ ಮುಕ್ತರಾದ ಮುನಿಗಳೂ ಸಹ ಯಾವ ಉದ್ದೇಶವೂ ಇಲ್ಲದೆ ಪರಮಾತ್ಮನ ಭಕ್ತರಾಗಿರುತ್ತಾರೆ. ಇದೇ ಪರಮಾತ್ಮ ಗುಣಗಳ ಮಹತ್ವ.)

ಯೋಗಕ್ಷೇಮ ಧುರಂಧರಸ್ಯ ಸಕಲಶ್ರೇಯಃ ಪ್ರದೋದ್ಯೋಗಿನೋ
ದೃಷ್ಟಾದೃಷ್ಟಮತೋಪದೇಶಕೃತಿನೋ ಬಾಹ್ಯಾಂತರ ವ್ಯಾಪಿನಃ ।

ಸರ್ವಜ್ಞಸ್ಯ ದಯಾಕರಸ್ಯ ಭವತಃ ಕಿಂ ವೇದಿತವ್ಯಂ ಮಯಾ
ಶಂಭೋ ತ್ವಂ ಪರಮಾಂತರಂಗ ಇತಿ ಮೇ ಚಿತ್ತೇ ಸ್ಮರಾಮ್ಯನ್ವಹಮ್ ॥

(ಭಕ್ತರ ಯೋಗಕ್ಷೇಮದ ಭಾರವನ್ನು ವಹಿಸಿದವನಾದ, ಸಕಲ ಶ್ರೇಯಸ್ಸುಗಳನ್ನೂ ಕೊಡುವುದರಲ್ಲಿ ಉದ್ಯುಕ್ತನಾಗಿರುವ, ಐಹಿಕ–ಆಮುಷ್ಮಿಕ–ಫಲೋಪಾಯಗಳನ್ನು ಉಪದೇಶಿಸುವುದರಲ್ಲಿ ಸಮರ್ಥನಾದ, ಜಗತ್ತನ್ನು ಒಳಗೂ ಹೊರಗೂ ವ್ಯಾಪಿಸಿರುವ ಸರ್ವಜ್ಞನೂ ದಯಾಕರನೂ ಆದ ನಿನ್ನಲ್ಲಿ ನಾವು ವಿಜ್ಞಾಪಿಸುವುದು ಏನಿದೆ? ಹೇ ಶಂಭು! ನೀನೇ ನನ್ನ ಪರಮಾಂತರಂಗವೆಂದು ನನ್ನ ಮನಸ್ಸಿನಲ್ಲಿ ಸದಾ ಸ್ಮರಿಸುತ್ತೇನೆ.)

ಇದೂ ಒಂದು ಪ್ರಾರ್ಥನೆಯೇ. ಪರಮಾತ್ಮನ ಸ್ವರೂಪವು ಹಿಂದೆ ವರ್ಣಿಸಿದಂತೆ ಇರುತ್ತದೆ. ಪರಮಾತ್ಮನ ವಿಷಯಕವಾದ ಆ 'ಪರಮಪ್ರೇಮವೇ ಪ್ರಮುಖವಾಗಿ 'ಭಕ್ತಿ', 'ಸಾಧ್ಯಭಕ್ತಿ'—ಎಂದು ಇದಕ್ಕೆ ಮತ್ತೊಂದು ಹೆಸರು. ಇದಕ್ಕೆ ಒಂಭತ್ತು ಸಾಧನಾ ಮಾರ್ಗಗಳಿವೆ. ಇವನ್ನೂ ಸಹ ಒಂದು ವಿಧದಲ್ಲಿ ಭಕ್ತಿ ಎನ್ನಲಾಗುತ್ತದೆ. ಇಲ್ಲಿ ಸಾಧನಗಳಿಗೂ ಭಕ್ತಿ ಎಂಬ ಹೆಸರನ್ನು ಕೊಡಲಾಗಿದೆ.

ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।
ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮನಿವೇದನಮ್ ॥

ಇತಿ ಪುಂಸಾರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।
ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥

(ಭಗವಂತನ ಮಾಹಾತ್ಮ್ಯವನ್ನು ಕೇಳುವುದು; ಅವನ ಗುಣಕೀರ್ತನೆ ಮಾಡುವುದು; ಅವನನ್ನು ಯಾವಾಗಲೂ ಸ್ಮರಿಸುವುದು; ಅವನ ಪಾದಸೇವೆ ಮಾಡುವುದು; ಅವನನ್ನು ಅರ್ಚಿಸುವುದು; ಅವನಿಗೆ ನಮಸ್ಕರಿಸುವುದು; ಅವನ ದಾಸನಾಗುವುದು; ಅವನಲ್ಲಿ ಸಖ್ಯವೃತ್ತಿಯನ್ನು ಹೊಂದುವುದು; ಅವನಲ್ಲಿ ಆತ್ಮ ಸಮರ್ಪಣೆ ಮಾಡುವುದು—ಈ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂಭತ್ತು ವಿಧವಾದ ಭಕ್ತಿಯನ್ನು ಮಾನವನು ಭಗವಂತನಲ್ಲಿ ಹೊಂದಿದ್ದರೆ, ಅದೇ ಅತ್ಯಂತ ಶ್ರೇಷ್ಠವಾದ ವಿದ್ಯೆಯೆಂದು ತಿಳಿಯುತ್ತೇನೆ.)

ಭಗವಂತನ ಮಾಹಾತ್ಮ್ಯವನ್ನು ವರ್ಣಿಸುವ ಭಾಗವತವೇ ಮುಂತಾದ ಗ್ರಂಥಗಳ ಪ್ರವಚನವನ್ನು ಕೇಳುವುದು "ಶ್ರವಣ" ವೆನಿಸುತ್ತದೆ. ಆ ರೀತಿ ಕೇಳುವುದು ಭಗವಂತನ ವಿಷಯದಲ್ಲಿನ ಪ್ರೀತಿಯನ್ನು ವೃದ್ಧಿಗೊಳಿಸುತ್ತದೆ.

ಆದರೆ, ಈಗ ನಾವು ನಿರರ್ಥಕವಾದ ವಿಷಯಗಳಲ್ಲಿ ಸಮಯವನ್ನು ಹಾಳು ಮಾಡುತ್ತಿದ್ದೇವೆ. ಈ ರೀತಿಯಾಗಿ ನಾವು ವ್ಯರ್ಥವಾಗಿ ಕಾಲ ಕಳೆಯುವುದರಿಂದ ಇಹದಲ್ಲಾಗಲೀ, ಪರದಲ್ಲಾಗಲೀ ನಾವು ಯಾವ ಶ್ರೇಯಸ್ಸನ್ನೂ ಹೊಂದಲಾಗುವುದಿಲ್ಲ. ಭಾಗವತವೇ ಮುಂತಾದ ಗ್ರಂಥಗಳ ಪ್ರವಚನವನ್ನು ನಾವು ಕೇಳುವುದರಿಂದ ಭಕ್ತಿಯು ವೃದ್ಧಿಯಾಗುವುದಲ್ಲದೇ, ಪ್ರಪಂಚದಲ್ಲಿ ನಾವು ಹೇಗಿರಬೇಕು ಮತ್ತು ಪ್ರಪಂಚದ ಪರಿಸ್ಥಿತಿ ಏನು ಎಂಬುದರ ಅರಿವೂ ಆಗುತ್ತದೆ. ಶ್ರೇಯಸ್ಸನ್ನು ಹೊಂದಲು ಅನೇಕ ಮಾರ್ಗಗಳನ್ನು ಶಾಸ್ತ್ರಗಳು ತಿಳಿಸುತ್ತವೆ. ಈ ಕಲಿಯುಗದಲ್ಲಿ ಈ ಸಾಧನಗಳನ್ನು ಅನುಷ್ಠಿಸುವುದು ಎಲ್ಲರಿಗೂ ಕಷ್ಟವಾಗುತ್ತದೆ. ಭಗವಂತನ ನಾಮ ಸಂಕೀರ್ತನ ಮಾಡುವುದು ಸುಲಭವಾದ ಮಾರ್ಗ.

ಧ್ಯಾಯನ್ ಕೃತೇ ಯಜನ್ಯಜ್ಞೈಸ್ತ್ರೇತಾಯಾಂ ದ್ವಾಪರೇಽ
ರ್ಚಯನ್ ।
ಯದಾಪ್ನೋತಿ ತದಾಪ್ನೋತಿ ಕಲೌ ಸಂಕೀರ್ತ್ಯ ಕೇವಲಮ್ ॥

(ಕೃತಯುಗದಲ್ಲಿ ಧ್ಯಾನಮಾಡುವುದರಿಂದ, ತ್ರೇತಾಯುಗದಲ್ಲಿ ಯಜ್ಞ ಮಾಡುವುದರಿಂದ, ದ್ವಾಪರದಲ್ಲಿ ಅರ್ಚನೆ ಮಾಡುವುದರಿಂದ, ಯಾವ ಶ್ರೇಯಸ್ಸನ್ನು ಪಡೆಯುತ್ತಾನೋ, ಕಲಿಯುಗದಲ್ಲಿ ನಾಮಸಂಕೀರ್ತನೆ ಮಾಡುವುದರಿಂದ ಅದನ್ನು ಪಡೆಯುತ್ತಾನೆ).

ಯುಗಗಳು ಕಳೆದಹಾಗೆ, ಸಾಮರ್ಥ್ಯವು ಕ್ಷೀಣಿಸುತ್ತಾ ಬಂದಿತು; ಆದ್ದರಿಂದ ಸಾಧನವೂ ಕ್ರಮವಾಗಿ ಸುಲಭವಾಯಿತು. ಆದರೂ, ಯಾವುದನ್ನು ಪಡೆಯಬೇಕೋ, ಅದು ಮಾತ್ರ ಬದಲಾಗಲಿಲ್ಲ. ಅದನ್ನು ನಾವು ಯಾವಾಗಲೂ ಬಿಡಬಾರದು. ಮಹಾಮಂತ್ರದ ಜಪಮಾಡುವುದೂ ಕೀರ್ತನೆಯ ಗುಂಪಿಗೆ ಸೇರುತ್ತದೆ.

ಜಪ್ಯೇನೈವತು ಸಂಸಿದ್ಧ್ಯೇತ್ ಕಲೌನಾಸ್ತ್ಯತ್ರ ಸಂಶಯಃ ।
ಕುರ್ಯಾದನ್ಯನ್ನ ವಾ ಕುರ್ಯಾನ್ಮೈತ್ರೋ ಬ್ರಾಹ್ಮಣ ಉಚ್ಯತೇ ॥

(ಕಲಿಯುಗದಲ್ಲಿ ಕೇವಲ ಜಪ ಮಾಡುವುದರಿಂದ ಸಿದ್ಧಿಯನ್ನು ಹೊಂದುತ್ತಾನೆಂಬುದರಲ್ಲಿ ಸಂಶಯವಿಲ್ಲ; ಅವನು ಇತರ ಯಾವುದನ್ನು ಬೇಕಾದರೂ ಮಾಡಲಿ ಅಥವಾ ಬಿಡಲಿ, ಅವನು ಭಗವಂತನಿಗೆ ಸಂಬಂಧಿಸಿದವನು).

Sri Vidyabharathi Book Centre, Sringeri

CC-O. In Public Domain. Digitized by eGangotri

ಕಲೇರ್ದೋಷನಿಧೇ ರಾಜನ್ನಸ್ತಿ ಹ್ಯೇಕೋಮಹಾನ್ ಗುಣಃ ।
ಕೀರ್ತನಾದೇವ ಕೃಷ್ಣಸ್ಯ ಮುಕ್ತಸಂಗಃ ಪರಂ ವ್ರಜೇತ್ ॥

(ಹೇ ರಾಜನ್; ಅನೇಕ ದೋಷಗಳನ್ನು ಹೊಂದಿರುವ ಕಲಿಯುಗದಲ್ಲಿ ಒಂದು ಮಹತ್ತರ ವಾದ ಗುಣವಿದೆ; ಕೃಷ್ಣನ ಕೀರ್ತನೆ ಮಾಡುವುದರಿಂದ ಸಂಸಾರ ಬಂಧನದಿಂದ ಮುಕ್ತ ನಾಗಿ, ಪರಬ್ರಹ್ಮವನ್ನು ಹೊಂದುತ್ತಾನೆ).

ಆದ್ದರಿಂದ, ನಾವು ಸರ್ವದಾ ಭಗವಂತನ ನಾಮಸಂಕೀರ್ತನೆ ಮಾಡುವುದರಿಂದ, ನಮ್ಮ ಎಲ್ಲ ದೋಷಗಳೂ ನಿವೃತ್ತವಾಗುತ್ತವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಯಾವುದೇ ಕಾರಣದಿಂದ ನಮಗೆ ವಿಹಿತವಾದ ಕರ್ಮಗಳನ್ನು ನಾವು ಬಿಡಕೂಡದು. ಬಿಟ್ಟರೆ, ಜಪವು ಫಲಕಾರಿಯಾಗುವುದಿಲ್ಲ. ಆ ರೀತಿ ಬಿಡುವುದನ್ನು "ನಾಮಾಪರಾಧ" ಎಂದು ಕರೆಯುತ್ತಾರೆ.

ಸನ್ನಿಂದ್ಯಾಸತಿ ನಾಮವೈಭವಕಥಾ ಶ್ರೀಶೇಶಯೋರ್ಭೇದಧೀಃ
ಅಶ್ರದ್ಧಾ ಶ್ರುತಿಶಾಸ್ತ್ರದೇಶಿಕಗಿರಾಂ ನಾಮ್ನ್ಯರ್ಥವಾದಭ್ರಮಃ ।
ನಾಮಾಸ್ತೀತಿ ನಿಷಿದ್ಧವೃತ್ತಿವಿಹಿತತ್ಯಾಗೌ ಚ ಧರ್ಮಾಂತರೈಃ
ಸಾಮ್ಯಂ ನಾಮನಿ ಶಂಕರಸ್ಯ ಚ ಹರೇಃ ನಾಮಾಪರಾಧಾದಶ ॥

(ಸತ್ಪುರುಷರ ನಿಂದನೆಮಾಡುವುದು, ಭಗವಂತನಾಮಗಳ ಮಾಹಾತ್ಮ್ಯವನ್ನು ಅಯೋಗ್ಯರಿಗೆ ಉಪದೇಶಿಸುವುದು, ವಿಷ್ಣು ಮತ್ತು ಶಿವ ಇವರಲ್ಲಿ ಭೇದ ಬುದ್ಧಿಯನ್ನು ಹೊಂದುವುದು, ಶ್ರುತಿ, ಶಾಸ್ತ್ರ ಹಾಗೂ ಗುರುಗಳ ಉಪದೇಶಗಳಲ್ಲಿ ನಂಬಿಕೆಯನ್ನು ಹೊಂದದಿರುವುದು, ಭಗವಂತನ ನಾಮಗಳು ಕೇವಲ ಅರ್ಥವಾದಗಳೆಂದು ಭ್ರಾಂತಿ ಹೊಂದುವುದು, ಭಗವಂತನ ನಾಮವು ಇದೆಯೆಂದು ನಿಷಿದ್ಧವಾದ ಕೆಲಸಗಳಲ್ಲಿ ತೊಡಗುವುದು, ವಿಹಿತವಾದ ಧರ್ಮಾಚರಣೆಯನ್ನು ತ್ಯಜಿಸುವುದು, ಶಂಕರ ಮತ್ತು ವಿಷ್ಣುವಿನ ನಾಮಗಳನ್ನು ಇತರ ಧರ್ಮಗಳೊಡನೆ ಸಾಮ್ಯವೆಂದು ತಿಳಿಯುವುದು— ಇವು ಹತ್ತು ನಾಮಾಪರಾಧಗಳು).

ತೃಣಾದಪಿ ಸುನೀಚೇನ ತರೋರಪಿ ಸಹಿಷ್ಣುನಾ ।
ಅಮಾನಿನಾ ಮಾನದೇನ ಕೀರ್ತನೀಯಃ ಸದಾ ಹರಿಃ ॥

(ಹುಲ್ಲಿಗಿಂತಲೂ ವಿನೀತನಾಗಿ, ಮರಕ್ಕಿಂತಲೂ ಸಹಿಷ್ಣುವಾಗಿ, ಸಮ್ಮಾನಿತನಾದರೂ ಅಹಂಕಾರ ಪಡದಿರುವುದು—ಎಂಬ ಗುಣಗಳುಳ್ಳವನು ಯಾವಾಗಲೂ ಹರಿಯ ಕೀರ್ತನೆ ಮಾಡುತ್ತಿರಬೇಕು).

ಯೋಗಸೂತ್ರದಲ್ಲಿ ಹೇಳಿದೆ—

ತಜ್ಜಪಸ್ತದರ್ಥಭಾವನಾ

(ಜಪ ಮತ್ತು ಅದರ ಅರ್ಥದ ವಿಷಯದಲ್ಲಿ ಏಕಾಗ್ರತೆ ಇರುವುದು).

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರೀ ಕೃಷ್ಣನೂ ಹೇಳಿದ್ದಾನೆ—

ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ ।
ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ॥

(ಬೇರೆ ಯಾವುದನ್ನೂ ಯೋಚಿಸದೇ ನನ್ನನ್ನೇ ಯಾವಾಗಲೂ ಚಿಂತಿಸುವ ಹಾಗೂ ವಿನೀತರಾದವರ ಯೋಗಕ್ಷೇಮವನ್ನು ನಾನು ವಹಿಸುತ್ತೇನೆ).

ಬರ್ಹಾಪೀಡಂ ನಟವರವಪುಃ ಕರ್ಣಯೋಃ ಕರ್ಣಿಕಾರಂ
ಬಿಭ್ರದ್ವಾಸಃ ಕನಕಕಪಿಶಂ ವೈಜಯಂತೀಂ ಚ ಮಾಲಾಮ್ ।
ರಂಧ್ರಾನ್ವೇಣೋರಧರಸುಧಯಾ ಪೂರಯನ್ ಗೋಪವೃಂದೈಃ
ವೃಂದಾರಣ್ಯಂ ಸ್ವಪದರಮಣಂ ಪ್ರಾವಿಶತ್ ಗೀತಕೀರ್ತಿಃ ॥

(ನವಿಲುಗರಿಯನ್ನು ಧರಿಸಿರುವ, ಶ್ರೇಷ್ಠನಟನಂತೆ ಶರೀರವುಳ್ಳ, ಕಿವಿಗಳಲ್ಲಿ ಕರ್ಣಕುಂಡಲಗಳುಳ್ಳ, ಸ್ಮಿತವದನನಾದ, ಚಿನ್ನದ ಕಾಂತಿಯುಳ್ಳ ವೈಜಯಂತೀ ಮಾಲೆಯನ್ನು ಧರಿಸಿರುವ, ತನ್ನ ವೇಣುರಂಧ್ರದಿಂದ ಹೊರಹೊಮ್ಮುವ ಸುಮಧುರನಾದಸುಧೆಯಿಂದ ಗೋಪವೃಂದ ಕಿವಿಗಳನ್ನು ತುಂಬುತ್ತಿರುವ—ಅಂತಹ ಗೀತದ ಯಶಸ್ಸು ವೃಂದಾವನವನ್ನು ಪ್ರವೇಶಿಸಿತು).

ಹೀಗೆ ಈಶ್ವರನನ್ನು ಏಕಾಗ್ರತೆಯಿಂದ ಧ್ಯಾನಿಸಬೇಕು.

ಮುಂದಿನದು ಪಾದಸೇವನ—ಅಂದರೆ, ಭಗವಂತನ ಚರಣಕಮಲಗಳ ಸೇವೆ ಮಾಡುವುದು, ಭಗವಂತನ ಪಾದದಿಂದ ಪ್ರವಹಿಸುವ ನೀರಿನಂತಿರುವ, ಗಂಗಾ ಮುಂತಾದ ನದಿಗಳಲ್ಲಿ ಸ್ನಾನ ಮಾಡುವುದೂ ಈ ವಿಧವಾದ ಭಕ್ತಿಯಲ್ಲಿ ಬರುತ್ತದೆ.

ವಿಹರ ಪಿತೃವನೇ ವಾ ವಿಶ್ವಪಾರೇ ಪುರೇ ವಾ
ರಜತಗಿರಿತಟೇ ವಾ ರತ್ನಸಾನುಸ್ಥಲೇ ವಾ ।
ದಿಶ ಭವದುಪಕಂಠ ದೇಹಿ ಮೇ ಭೃತ್ಯಭಾವಂ
ಪರಮಶಿವ ತವ ಶ್ರೀಪಾದುಕಾವಾಹಕಾನಾಮ್ ॥

(ಪರಮಶಿವನೇ ! ನೀನು ಸ್ಮಶಾನದಲ್ಲಿ ವಿಹರಿಸಬಹುದು ಅಥವಾ ಪ್ರಪಂಚವನ್ನು ಮೀರಿದ ಜಾಗದಲ್ಲಿ ಅಥವಾ ಪಟ್ಟದಲ್ಲಿ ಅಥವಾ ಕೈಲಾಸಪರ್ವತದಲ್ಲಿ ಅಥವಾ ರತ್ನ ಪರ್ವದ ಮೇಲೆ ವಿಹರಿಸಬಹುದು; ಆದರೆ, ನನಗೆ ನಿನ್ನ ಸಮೀಪದಲ್ಲಿಯೇ ಓರ್ವ ಸೇವಕನಾಗಿರುವಂತೆ ಮಾಡು).

ಶಾಸ್ತ್ರದಲ್ಲಿ ವಿವರಿಸಲಾಗಿರುವಂತೆ ಈಶ್ವರನ ರೂಪವನ್ನು ಆರಾಧಿಸಬೇಕು. ಇದರ ಮಾರ್ಗದರ್ಶನಕ್ಕಾಗಿ ಮೃತ್ಯುಂಜಯ ಮಾನಸಪೂಜಾ, ದೇವೀಮಾನಸ ಪೂಜಾ ಮುಂತಾದ ಸ್ತೋತ್ರಗಳು ರಚಿತವಾಗಿವೆ. ವಿಗ್ರಹವಿಲ್ಲದಿದ್ದರೆ ಅಥವಾ ಪೂಜೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಲು ಸಾಮರ್ಥ್ಯವಿಲ್ಲದಿದ್ದರೆ ಏನು ಮಾಡಬೇಕು ? ಈ ವಿಷಯದಲ್ಲಿ ನಮ್ಮ ಆಚಾರ್ಯರು ಏನು ಹೇಳಿದ್ದಾರೆಂದರೆ, ನಾವು ದೇವಾಲಯಗಳಿಗೆ ಹೋಗಿ ಅರ್ಚನೆ ಮಾಡಿಸಬಹುದು.

ಪತ್ರಂ ಪುಷ್ಪಂ ಫಲಂ ತೋಯಂ ಯೋ ಮೇ ಭಕ್ತ್ಯಾ ಪ್ರಯಚ್ಛತಿ ।
ತದಹಂ ಭಕ್ತ್ಯುಪಹೃತಮಶ್ನಾಮಿ ಪ್ರಯತಾತ್ಮನಃ ॥

(ಪತ್ರ, ಹೂವು, ಫಲ ಮತ್ತು ನೀರು—ಇವುಗಳನ್ನು ಯಾರು ಭಕ್ತಿಯಿಂದ ಸಮರ್ಪಿಸು ತ್ತಾರೋ, ನಾನು ಅವುಗಳನ್ನು ಸ್ವೀಕರಿಸುತ್ತೇನೆ).

ಭಗವಂತನು ಹೀಗೆ ಹೇಳಿದ್ದಾನೆ. ಪ್ರಾಣಪ್ರತಿಷ್ಠೆಯನ್ನು ಮಾಡದಿರುವ ವಿಗ್ರಹಗಳಿಗೆ ಪೂಜೆಯನ್ನು ಮಾಡಬಾರದು.

ಅಕೃತಾಯಾಂ ಪ್ರತಿಷ್ಠಾಯಾಂ ಪ್ರಾಣಾನಾಂ ಪ್ರತಿಮಾಸು ಚ ।
ಯಥಾ ಪೂರ್ವ ಯಥಾ ಭಾವಃ ಸ್ವರ್ಣಾದೀನಾಂ ನ ವಿಷ್ಣುತಾ ॥

(ಪ್ರಾಣಪ್ರತಿಷ್ಠೆ ಮಾಡದಿರುವ ವಿಗ್ರಹಗಳು, ಹಿಂದಿನಂತೆಯೇ ಇರುತ್ತವೆ; ಚಿನ್ನ ಮುಂತಾದುವುಗಳಲ್ಲಿ ವಿಷ್ಣುವಿನ ಅಸ್ತಿತ್ವ ಇರುವುದಿಲ್ಲ).

ನಮ್ಮ ಚಿತ್ರವನ್ನು ನೋಡಿದಾಗ, ಇದು "ನನ್ನ ಚಿತ್ರ" ಎಂಬ ಆಸಕ್ತಿ ಯುಂಟಾಗುವಂತೆ, ಪ್ರಾಣಪ್ರತಿಷ್ಠೆ ಮಾಡಿದ ವಿಗ್ರಹದಲ್ಲಿ ಪರಮಾತ್ಮನ ಸಾನ್ನಿಧ್ಯ ಉಂಟಾಗುತ್ತದೆ. ಸರ್ವತ್ರ ವ್ಯಾಪಿಸಿರುವ ಈಶ್ವರನಿಗೆ ಆ ರೂಪದಲ್ಲಿ ಪೂಜೆ ಮಾಡುವುದು ಅವಶ್ಯವೇ ? ಹೌದು, ಅತ್ಯವಶ್ಯ. ಹಸುವಿನ ದೇಹದಲ್ಲಿ ಅಧಿಕವಾಗಿ ಹಾಲು ಇರುತ್ತದೆ. ಹಾಗೆ ಇರುವ ಮಾತ್ರದಿಂದಲೇ ಅದಕ್ಕೆ ಔಷಧವಾಗಲು ಸಾಕಾಗದು. ಹಸುವಿಗೆ ಕೊಡುವುದಕ್ಕೆ ತುಪ್ಪದೊಡನೆ ಔಷಧವನ್ನು ಮಿಶ್ರಣಮಾಡಿ ಕೆಲವು ಸಮಯದಲ್ಲಿ ಕೊಡಬೇಕಾಗಬಹುದು. ಹಾಗೆಯೇ ಇಲ್ಲಿಯೂ ಸಹ. ನಮಸ್ಕರಿಸುವುದು ಪೂಜೆಯ ಒಂದಂಶ. ಇದು, ಈಶ್ವರನು ಸರ್ವತ್ರ ವ್ಯಾಪಿಸಿದ್ದಾನೆ ಎಂದು ಮಾನಸಿಕವಾಗಿ ಚಿಂತನೆ ಮಾಡುತ್ತಾ ಪೂಜಿಸುವುದು. ಇದನ್ನೇ ಭಕ್ತಿ ಸಾಹಿತ್ಯದಲ್ಲಿ "ವಂದನಾ" ಎಂದು ವಿವರಿಸಲಾಗಿದೆ. ಭಗವಂತನನ್ನು ಪ್ರಶಂಸೆ ಮಾಡುತ್ತಾ ಅರ್ಜುನನು ಹೇಳು ತ್ತಾನೆ—

ನಮಃ ಪುರಸ್ತಾದಥಪೃಷ್ಠತಸ್ತೇ ನಮೋಽಸ್ತು ತೇ ಸರ್ವತ ಏವಸರ್ವ ।

(ಮುಂದುಗಡೆಯಿಂದ, ಹಿಂದುಗಡೆಯಿಂದ ನಿನಗೆ ನಮಸ್ಕಾರವು; ಸರ್ವವ್ಯಾಪಿಯಾದ ವನೇ, ನಿನಗೆ ಎಲ್ಲ ಕಡೆಯಿಂದಲೂ ನಮಸ್ಕಾರ).

ಮುಂದಿನ ಸಾಧನ "ದಾಸ್ಯ"—ಎಂದು ವಿವರಿಸಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶ್ರುತಿ ಸ್ಮೃತೀ ಮಮೈವಾಜ್ಞೇ
(ವೇದ ಮತ್ತು ಸ್ಮೃತಿಗಳು ನನ್ನ ಆಜ್ಞೆಗಳು).

—ಎಂದು ಭಗವಂತನು ಹೇಳಿದ್ದಾನೆ. ಆದ್ದರಿಂದ, ನಾವು ಏನು ಮಾಡಬೇಕೆಂದರೆ, ಶ್ರುತಿ-ಸ್ಮೃತಿ ಎರಡೂ ಭಗವಂತನ ಆಜ್ಞೆಗಳೆಂದು ಪಾಲಿಸಿ, ಶ್ರದ್ಧೆಯಿಂದ ಅವನ್ನು ಅನುಷ್ಠಿಸಿ, ಭಗವಂತನೇ ಹೇಳಿರುವಂತೆ ಎಲ್ಲವನ್ನು ಅವನಿಗೇ ಸಮರ್ಪಿಸುವುದು.

ಯತ್ಕರೋಷಿ ಯದಶ್ನಾಸಿ ಯಜ್ಜುಹೋಷಿ ದದಾಸಿ ಯತ್ ।
ಯತ್ತಪಸ್ಯಸಿ ಕೌಂತೇಯ ತತ್ಕುರುಷ್ವ ಮದರ್ಪಣಮ್ ॥

(ಕುಂತೀಪುತ್ರನೇ, ನೀನು ಯಾವುದನ್ನು ಮಾಡುತ್ತೀಯೋ, ತಿನ್ನುತ್ತೀಯೋ, ಹೋಮ ಮಾಡುತ್ತೀಯೋ, ದಾನಮಾಡುತ್ತೀಯೋ ಮತ್ತು ತಪಸ್ಸು ಮಾಡುತ್ತೀಯೋ ಅದೆಲ್ಲವನ್ನು ನನಗೆ ಅರ್ಪಣೆಮಾಡು).

ಮುಂದಿನದು ಸಖ್ಯ !

ಇಂತಹ ಭಕ್ತಿಯನ್ನು ನಾವು ಅಭ್ಯಾಸ ಮಾಡುತ್ತಾ ಬಂದರೆ, ಈಶ್ವರನ ವಿಷಯಕವಾದ ಆಸಕ್ತಿಯು ದೃಢವಾಗುತ್ತದೆ. ಯಾವ ಭಯವೂ ಇಲ್ಲದಂತಹ ಓರ್ವ ಸ್ನೇಹಿತ. ನಾನೂ ಸುಖವಾಗಿರಬೇಕೆಂದು ಅವನೂ ಅಭಿಪ್ರಾಯಪಡುತ್ತಾನೆ. ಈಶ್ವರನ ವಿಷಯದಲ್ಲಿ ಈ ರೀತಿಯ ಭಾವನೆಯನ್ನು ಹೊಂದುವುದೇ ಸಖ್ಯ. ಕೊನೆಯದಾಗಿ ಆತ್ಮನಿವೇದನ. ಈಶ್ವರನು ನಮಗಿಂತ ಬೇರೆಯಲ್ಲವೆಂದು ತಿಳಿಯುವುದೇ ಆತ್ಮನಿವೇದನ. ನದಿಯು ಸಮುದ್ರದಲ್ಲಿ ಸೇರಿದೊಡನೆ, ಸಮುದ್ರವನ್ನು ಬಿಟ್ಟು ಅದರ ಸ್ವತಂತ್ರವಾದ ಅಸ್ತಿತ್ವವಿರುವುದಿಲ್ಲ. ನದಿಯಾಗಿದ್ದುದು ಸಮುದ್ರವಾಗುತ್ತದೆ, ಸಮುದ್ರವಾಗಿದ್ದುದು ನದಿಯಾಗುತ್ತದೆ. ಆ ಒಂದು ಸ್ಥಿತಿಯನ್ನು ಹೊಂದಿದ ವ್ಯಕ್ತಿಯು ಈಶ್ವರನಲ್ಲೇ ಇರುತ್ತಾನೆ.

ತಮೇವ ಶರಣಂ ಗಚ್ಛ ಸರ್ವಭಾವೇನ ಭಾರತ ।
ತತ್ಪ್ರಸಾದಾತ್ಪರಂ ಶಾಂತಿಂ ಸ್ಥಾನಂಪ್ರಾಪ್ಸ್ಯಸಿ ಶಾಶ್ವತಮ್ ॥

(ಭಾರತ, ಸರ್ವವಿಧವಾದ ಭಾವಗಳಿಂದ ಅವನಲ್ಲಿಯೇ ಶರಣಾಗತನಾಗು; ಅವನ ಅನುಗ್ರಹದಿಂದ ಪರಮ ಶಾಶ್ವತವಾದ ಸ್ಥಾನವನ್ನು ಪಡೆಯುತ್ತೀಯೆ). ಹೀಗೆ ಭಗವಾನ್ ಕೃಷ್ಣನು ಗೀತೆಯಲ್ಲಿ ಹೇಳಿದ್ದಾನೆ.

ತಚ್ಚಿಂತನಂ ತತ್ಕಥನಂ ಅನ್ಯೋನ್ಯ ತತ್ಪ್ರಬೋಧನಮ್ ।
ಏತದೇಕ ಪರತ್ವಂ ಚಬ್ರಹ್ಮಾಭ್ಯಾಸಂ ವಿದುರ್ಬುಧಾಃ ॥

(ಯಾವಾಗಲೂ ಅವನನ್ನೇ ಚಿಂತಿಸುತ್ತ, ಅವನ ವಿಷಯವನ್ನೇ ಹೇಳುತ್ತ ಅನ್ಯೋನ್ಯವಾಗಿ ಅವನ ವಿಷಯವನ್ನು ಚರ್ಚಿಸುತ್ತ, ಅವನಲ್ಲೇ ಏಕಾಗ್ರತೆಯಿಂದ ಇರುವುದನ್ನು ಜ್ಞಾನಿಗಳು ಬ್ರಹ್ಮಾಭ್ಯಾಸವೆಂದು ಹೇಳುತ್ತಾರೆ).

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನಿಗಳೂ ಈ ರೀತಿ ಹೇಳುತ್ತಾರೆ. ನಾವು ಎಲ್ಲವನ್ನೂ ಅವನಿಗೆ ಸಮರ್ಪಣೆ ಮಾಡಿ, ಯಾವ ಚಿಂತೆಯಿಲ್ಲದೆ ಇರಬೇಕು. ನಾವು ಆ ರೀತಿ ಮಾಡಿದರೆ ಭಗವಂತನೇ ನಮ್ಮ ಯೋಗಕ್ಷೇಮವನ್ನು ನಿರ್ವಹಿಸುತ್ತಾನೆ. ಕೊನೆಯಲ್ಲಿ ಆತ್ಮಜ್ಞಾನವನ್ನೂ ಅನುಗ್ರಹಿಸುತ್ತಾನೆ. ಆ ಪರಮೋತ್ಕೃಷ್ಟವಾದ ಸ್ಥಿತಿಯನ್ನೇ ನಾವು ಅಪೇಕ್ಷಿಸುವುದು: ಅದೇ ಶಾಶ್ವತವಾದುದು. ಪರಮಾತ್ಮನನ್ನು ಸೇರುವುದೇ ಪರಮೋತ್ಕೃಷ್ಟವಾದ ಫಲ.

ಈಶ್ವರ ಮತ್ತು ಜಗತ್ತು

ಪಿತಾ ಯಥಾ ರಕ್ಷತಿ ಪುತ್ರಮೀಶ
ಜಗತ್ಪಿತಾ ತ್ವಂ ಜಗತಃ ಸಹಾಯಃ ।
ಕೃತಾಪರಾಧಂ ತವ ಸರ್ವಕಾಲೇ
ಕೃಪಾನಿಧೇ ಮಾಂ ಶಿವ ಪಾಹಿ ಶಂಭೋ ॥

(ಹೇ ಶಿವ! ಸಮಸ್ತ ಜಗತ್ತಿಗೂ ನೀನೇ ತಂದೆ; ಸೃಷ್ಟವಾದ ಜಗತ್ತಿಗೆ ನೀನೇ ಸಹಾಯಕ. ತಂದೆಯು ತನ್ನ ಮಗನನ್ನು ರಕ್ಷಿಸುವಂತೆ, ಹೇ ಕೃಪಾನಿಧೇ, ಶಂಭೋ! ಯಾವಾಗಲೂ, ನಾನು ಅಪರಾಧ ಮಾಡಿದರೂ, ನನ್ನನ್ನು ಕಾಪಾಡು.)

ಈಶ್ವರನು ನಿರ್ಗುಣನೆಂದು ನಿಶ್ಚಿತವಾದ ಮೇಲೆ, ಕೆಲವು ಪ್ರಶ್ನೆಗಳು ಏಳುತ್ತವೆ—ಈಶ್ವರನಿಗೂ ನಮಗೂ ಇರುವ ಸಂಬಂಧವೇನು ? ಈ ಸಂಬಂಧಕ್ಕನುಗುಣವಾಗಿ ನಮ್ಮ ಕರ್ತವ್ಯಗಳೇನು ? ಈ ಪ್ರಶ್ನೆಗಳನ್ನು ವಿಶ್ಲೇಷಿಸೋಣ—

ಈಶ್ವರನಿಗೂ ನಮಗೂ ಇರುವ ಸಂಬಂಧ;

ಜಗತ್ತಿಗೆ ಈಶ್ವರನೇ ತಂದೆಯೆಂಬ ವಿಷಯದಲ್ಲಿ ವಿಶ್ವದ ಎಲ್ಲ ಧರ್ಮಗಳೂ ಒಮ್ಮತವನ್ನು ಹೊಂದಿವೆ. ಭಗವದ್ಗೀತೆಯಲ್ಲಿ ಕೃಷ್ಣನಿಗೆ ಅರ್ಜುನ ಹೇಳುತ್ತಾನೆ—

ಪಿತಾಽಸಿ ಲೋಕಸ್ಯ ಚರಾಚರಸ್ಯ
ತ್ವಮಸ್ಯ ಪೂಜ್ಯಸ್ಯ ಗುರುರ್ಗರೀಯಾನ್ ।
ನ ತ್ವತ್ಸಮೋಽಸ್ತ್ಯಭ್ಯಧಿಕಃ ಕುತೋಽನ್ಯೋ
ಲೋಕತ್ರಯೇಽಪ್ಯಪ್ರತಿಮಪ್ರಭಾವ ॥

(ಚರಾಚರ ವಸ್ತುಗಳಿಂದ ಕೂಡಿರುವ ಈ ಜಗತ್ತಿಗೆ ನೀನೇ ತಂದೆ; ನೀನೇ ಪೂಜನೀಯನು; ನೀನೇ ಶ್ರೇಷ್ಠನಾದ ಗುರು; ನಿನಗೆ ಸರಿಸಮಾನರಾದವರು ಇಲ್ಲ;

Sri Vidyabharathi Book Centre, Sringeri

ಅಪ್ರತಿಮವಾದ ಪ್ರಭಾವವುಳ್ಳವನೇ ! ಈ ಮೂರು ಲೋಕಗಳಲ್ಲಿ ನಿನಗಿಂತ ಶ್ರೇಷ್ಠ ರಾದವರು ಯಾರು ಇದ್ದಾರೆ ?)

ತಂದೆ ಮತ್ತು ಮಗನಿಗಿರುವ ಸಂಬಂಧದಂತೆ, ಈಶ್ವರ ಮತ್ತು ನಮ್ಮ ನಡುವೆ ಇರುವ ಸಂಬಂಧವೂ ಸದೃಶವಾದುದೆಂದು ತಿಳಿದುಬರುತ್ತದೆ. ತಂದೆಯಲ್ಲಿ ನಾವು ಯಾವ ಗುಣಗಳನ್ನು ನೋಡುತ್ತೇವೆ ?

ತನ್ನ ಮಕ್ಕಳನ್ನು ಕಾಪಾಡುವುದರಿಂದ ಮತ್ತು ಅವರಿಗೆ ಆಹಾರವೊದಗಿಸು ವುದರಿಂದ ಈಶ್ವರನೇ ವಾಸ್ತವವಾಗಿ ತಂದೆ. ಇತರ ತಂದೆಗಳು ಕೇವಲ ತಮ್ಮ ಮಕ್ಕಳ ಜನ್ಮದಾತೃಗಳು. ಸನ್ಮಾರ್ಗದಲ್ಲಿ ಮಾರ್ಗದರ್ಶನ ನೀಡುವವನು, ಆಹಾರವೊದಗಿಸು ವವನು ಮತ್ತು ಭಯದಿಂದ ವಿಮೋಚನೆಗೊಳಿಸುವವನನ್ನೇ "ತಂದೆ" ಯೆಂದು ಕರೆಯುತ್ತಾರೆ. ಅಂಧಕಾರದ ಭಯವನ್ನು ಹೋಗಲಾಡಿಸಲು ಈಶ್ವರನು ಸೂರ್ಯ, ಚಂದ್ರ, ಮುಂತಾದುವನ್ನು ಸೃಷ್ಟಿಮಾಡಿದಂತೆ ಕಾಣುತ್ತದೆ. ಜೀವರ ಸುಖಕ್ಕಾಗಿ ಈಶ್ವರನು ನದಿಗಳು, ಕ್ಷೇತ್ರಗಳು, ದವಸ-ಧಾನ್ಯಗಳು ಮುಂತಾದುವನ್ನು ಸೃಷ್ಟಿ ಮಾಡಿದ್ದಾನೆ ಮತ್ತು ಅವನು ನಮಗೆ ಸನ್ಮಾರ್ಗವನ್ನುಪದೇಶಿಸಿದ್ದಾನೆ. ತಂದೆಯು ಪ್ರಾರಂಭದಲ್ಲಿ ತನ್ನ ಮಗುವಿಗೆ ಬುದ್ಧಿವಾದಗಳನ್ನು ಹೇಳುವಂತೆ, ಈಶ್ವರನೂ ಸಹ ಸೃಷ್ಟಿಯ ಪ್ರಾರಂಭದಲ್ಲಿ ನಮಗೆ ವೇದಗಳನ್ನು ತಿಳಿಸಿದ್ದಾನೆ.

ಸ ಭಗವಾನ್....ಮರೀಚ್ಯಾದೀನ್ ಅಗ್ರೇ ಸೃಷ್ಟ್ವಾ

(ಆ ಈಶ್ವರನು ಮೊದಲು ಮರೀಚೀ ಮುಂತಾದುವರನ್ನು ಪ್ರಾರಂಭದಲ್ಲಿ ಸೃಷ್ಟಿ ಮಾಡಿ...)—ಎಂದು ಗೀತಾಭಾಷ್ಯ ತಿಳಿಸುತ್ತದೆ.

ಈಶ್ವರನನ್ನು ಯಾವ ರೀತಿಯಲ್ಲಿ ನಮಗೆ ಸನ್ಮಾರ್ಗವನ್ನು ಉಪದೇಶಿಸಿದ್ದಾನೆ ? ಇತರ ಎಲ್ಲ ಧರ್ಮಗಳೂ ತಮ್ಮ ತಮ್ಮ ಶಾಸ್ತ್ರಗ್ರಂಥಗಳನ್ನು ಹೊಂದಿವೆ. ಅವುಗಳಲ್ಲಿ ಸತ್ಕರ್ಮ ಮತ್ತು ದುಷ್ಕರ್ಮಗಳನ್ನು ವಿವರಿಸಲಾಗಿದೆ. ಈ ಶಾಸ್ತ್ರಗಳಲ್ಲಿ ಹೇಳಿರುವ ರೀತಿಯಲ್ಲಿಯೇ ನಮ್ಮ ಜೀವನವನ್ನು ನಡೆಸಿದರೆ, ಮುಕ್ತಿಯನ್ನು ಹೊಂದಬಹುದೆಂದು ತಿಳಿದುಬರುತ್ತದೆ. ಈ ಶಾಸ್ತ್ರಗಳನ್ನು ರಚಿಸಿದ ಆ ವ್ಯಕ್ತಿಗಳು ಜೀವಿಸಿದ್ದರೆ ? ಈ ಶಾಸ್ತ್ರಗಳನ್ನು ಯಾರಾದರೂ ರಚಿಸಿದ್ದರೆ, ಅವರಿಗಿಂತ ಹಿಂದೆ ಶಾಸ್ತ್ರಗಳು ಇರಲಿಲ್ಲವೇ ? ಆ ಸಮಯದಲ್ಲಿ ಜನಗಳು ಈಶ್ವರನ ಉಪದೇಶಗಳನ್ನು ತಿಳಿಯದ್ದರಿಂದ, ಸನ್ಮಾರ್ಗ ಯಾವುದು ಕೆಟ್ಟಮಾರ್ಗ ಯಾವುದು ಎಂಬುದನ್ನು ಅವರು ತಿಳಿಯಲಾರ ದಾಗಿದ್ದರು. ಅವರು ಕೆಟ್ಟ ಕೆಲಸವನ್ನು ಮಾಡಿದ್ದರೆ, ಯಾವ ತಪ್ಪನ್ನು ತಾನೇ ಕಾಣಬಹುದು ? ತಮ್ಮ ಕೆಲಸಗಳಿಗಾಗಿ ಅವರನ್ನು ಶಿಕ್ಷಿಸಿದ್ದರೆ, ಅದು ನ್ಯಾಯ ವಾಗುವುದಿಲ್ಲ. ಕಾನೂನುಗಳನ್ನು ವಿಧಿಸಿದ ನಂತರವೇ ಶಿಕ್ಷೆ ವಿಧಿಸುವುದು ಸಾಧು ವಾಗುತ್ತದೆ. ಕಾನೂನಿನ ರಚನೆಗೆ ಮೊದಲೇ ಶಿಕ್ಷೆ ವಿಧಿಸುವುದು ಉಚಿತವೆನಿಸುವುದೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ಒಂದು ವಿಷಯದಲ್ಲಿ ನಮ್ಮ ಧರ್ಮವು ಇತರ ಧರ್ಮಗಳಿಗಿಂತ ಬೇರೆಯಾಗಿದೆ. ಈಶ್ವರನು ಈ ಜಗತ್ತನ್ನು ಸೃಷ್ಟಿಸಿದಾಗಲೇ, ಸನ್ಮಾರ್ಗದ ಸಾಧನವನ್ನು ನಮಗೆ ಉಪದೇಶಿಸಿರುವನೆಂದು ನಮ್ಮ ಮತ.

ಸಹ ಯಜ್ಞಾಃ ಪ್ರಜಾಃ ಸೃಷ್ಟ್ವಾ....

(ಯಜ್ಞಗಳ ಜೊತೆಯಲ್ಲಿ ಪ್ರಜೆಗಳನ್ನು ಸೃಷ್ಟಿಮಾಡಿ....)—
ಎಂದು ಗೀತೆಯು ವಿವರಿಸುತ್ತದೆ.

ಋಚಃ ಸಾಮಾನಿ ಜಜ್ಞಿರೇ । ಛಂದಾಂಸಿ ಜಜ್ಞಿರೇ ತಸ್ಮಾತ್ ।
ಯಜುಸ್ತಸ್ಮಾದಜಾಯತ ।

(ಋಕ್ ಮತ್ತು ಸಾಮವೇದಗಳು ಹೊರಹೊಮ್ಮಿದವು; ಅವನಿಂದ (ಪರಮಾತ್ಮನಿಂದ) ವಿವಿಧ ಮಂತ್ರಗಳು ಹೊರಹೊಮ್ಮಿದವು; ಯಜುರ್ವೇದವೂ ಹೊರಹೊಮ್ಮಿತು.)

ನಾವು ಜೀವನವನ್ನು ನಡೆಸುವುದಕ್ಕೆ ಸಂಬಂಧಿಸಿದ ನಿಯಮಗಳೂ ಪ್ರಾರಂಭದಲ್ಲೇ ವಿಹಿತವಾಗಿದ್ದವು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

ಜ್ಞಾತ್ವಾ ಶಾಸ್ತ್ರವಿಧಾನೋಕ್ತಂ ಕರ್ಮಕರ್ತುಮಿಹಾರ್ಹಸಿ ।

(ಶಾಸ್ತ್ರಗಳಿಂದ ನೀನು ಮಾಡಬೇಕಾದ ಕರ್ತವ್ಯಗಳನ್ನು ತಿಳಿದು, ಶಾಸ್ತ್ರಗಳಲ್ಲಿ ಹೇಳಿರುವಂತೆ ನೀನು ಕರ್ತವ್ಯಗಳನ್ನು ಮಾಡಬೇಕು.)

ಶಾಸ್ತ್ರಗಳಲ್ಲಿ ಹೇಳಿರುವ ಉಪದೇಶಗಳನ್ನು ನಾವು ತಿಳಿದು, ಶಾಸ್ತ್ರೋಕ್ತವಾದ ರೀತಿಯಲ್ಲಿ ನಾವು ಆಚರಣೆಮಾಡಬೇಕೆಂಬುದು ಇದರಿಂದ ಸ್ಪಷ್ಟವಾಗುತ್ತದೆ.

ನಮ್ಮ ಜೀವನಕ್ಕೆ ತೊಂದರೆಯುಂಟುಮಾಡುವ ಕೆಲವು ವಿಷಯಗಳಿವೆ. ಅವುಗಳನ್ನು ತಿಳಿಯದೆ ನಾವು ಜೀವನ ನಡೆಸಿದರೆ, ಮರಣವು ಶತಸ್ಸಿದ್ಧ. ಸಮರ್ಥನಾದ ವೈದ್ಯನನ್ನು ಆಶ್ರಯಿಸಿ, ನಮ್ಮ ವ್ಯಾಧಿಯನ್ನು ಅವನಿಂದ ವಾಸಿಮಾಡಿಸಿಕೊಂಡರೆ, ನಾವು ದೀರ್ಘಕಾಲ ಬದುಕಬಹುದು. ಅದಕ್ಕೆ ಬದಲು ನಾವೇ ವಿಷವನ್ನು ಸೇವಿಸಿದರೆ, ನಮ್ಮನ್ನು ನಾವೇ ಹಾಳುಮಾಡಿಕೊಂಡಂತೆ ಆಗುತ್ತದೆ. ಈ ಮೇಲೆ ಹೇಳಿದ ವಿಧಾನವನ್ನು ನಾವು ಅನುಸರಿಸಬಾರದು.

ಸ್ಥೂಲ ಶರೀರಕ್ಕೆ ವ್ಯಾಧಿಗಳು ತೊಂದರೆಯನ್ನುಂಟು ಮಾಡುವಂತೆ ಕಾಮ, ಕ್ರೋಧ, ಮುಂತಾದುವು ಸೂಕ್ಷ್ಮ ಶರೀರಕ್ಕೆ ತೊಂದರೆಯುಂಟುಮಾಡುತ್ತವೆ. ಆದ್ದರಿಂದಲೇ ಆ ವಿಷಯುವನ್ನು ಕುರಿತು ಹೀಗೆ ಹೇಳಲಾಗಿದೆ.

ಶಬ್ದಾದಿಭಿಃ ಪಂಚಭಿರೇವ ಪಂಚ
ಪಂಚತ್ವಮಾಪುಃ ಸ್ವಗುಣೇನ ಬದ್ಧಾಃ ।
ಕುರಂಗ ಮಾತಂಗ ಪತಂಗ ಮೀನ ಭೃಂಗಾ
ನರಃ ಪಂಚಾಭಿರಂಚಿತಃ ಕಿಮ್ ?

Sri Vidyabharathi Book Centre, Sringeri

CC-O. In Public Domain. Digitized by eGangotri

(ಜಿಂಕೆ, ಆನೆ, ಪತಂಗ, ಮೀನು ಮತ್ತು ಜೇನುನೊಣ—ಇವುಗಳು ಶಬ್ದ, ಸ್ಪರ್ಶ, ರೂಪ, ರಸ ಮತ್ತು ಗಂಧಗಳೆಂಬ ಗುಣಗಳಿಗೆ ಆಸಕ್ತವಾಗಿ ನಾಶಹೊಂದುವುವು; ಈ ಎಲ್ಲ ಐದು ಗುಣಗಳ ವಿಷಯದಲ್ಲಿಯೂ ಆಸಕ್ತನಾದ ಮನುಷ್ಯನ ಸ್ಥಿತಿ ಏನು ?)

ಆದ್ದರಿಂದ ವಿಷಯಸೌಖ್ಯಗಳಲ್ಲಿ ಮಗ್ನವಾಗುವಂತೆ ನಾವು ಇಂದ್ರಿಯಗಳನ್ನು ಬಿಟ್ಟರೆ, ಅದರ ಫಲ ವಿನಾಶ. ಸೌಖ್ಯವನ್ನು ಅನುಭವಿಸಬೇಕಾದರೆ, ಅದು ಶಾಸ್ತ್ರದ ನಿಯಮಕ್ಕೆ ವಿರುದ್ಧವಾಗಿರಬಾರದು.

ಧರ್ಮಾವಿರುದ್ಧೋ ಭೂತೇಷು ಕಾಮೋಽಸ್ಮಿ ಭರತರ್ಷಭ ||

(ಹೇ ಭರತ ಶ್ರೇಷ್ಠನೇ ! ಎಲ್ಲ ಜೀವಿಗಳಲ್ಲಿ ಧರ್ಮಕ್ಕೆ ಅವಿರುದ್ಧವಾದ ಕಾಮ (ಸೌಖ್ಯ) ವಾಗಿದ್ದೇನೆ.)

ಕೋಪದಿಂದ ದುಃಖವು ಫಲಿಸುತ್ತದೆ. ಇದು ದೊಡ್ಡ ಪಾಪಕ್ಕೆ ಸಾಧನ ವಾಗಬಹುದು.

ತಾನು ಮಾಡಿದ್ದನ್ನು ಮರೆಯುವುದೇ ಮಾನವನ ಸ್ವಭಾವ. ಆದ್ದರಿಂದಲೇ, ತಾನು ಅನುಭವಿಸಿದ ಕಷ್ಟಗಳನ್ನು ಅವನು ಮರೆತು, ಪುನಃ ಪಾಪಿಷ್ಠವಾದ ಕರ್ಮ ಗಳನ್ನು ಮಾಡುವುದರಲ್ಲೇ ತೊಡಗುತ್ತಾನೆ. ಕಾಮ, ಕ್ರೋಧ ಹಾಗೂ ಆಶೆಯ ದೆಸೆಯಿಂದ ಅವನು ಶಾಸ್ತ್ರಗಳ ನಿಯಮಗಳನ್ನು ಮೀರಿ, ದುರ್ಮಾರ್ಗದಲ್ಲಿ ನಡೆಯುತ್ತಾನೆ.

ದೀರ್ಘೇಣಕಾಲೇನ ಅನುಷ್ಠಾತೃಣಾಂ ಕಾಮೋದ್ಭವಾತ್ ಹೀಯ-ಮಾನವಿವೇಕ ವಿಜ್ಞಾನ ಹೇತುಕೇನ ಅಧರ್ಮೇಣ ಅಭಿಭೂಯಮಾನೇ ಧರ್ಮೇ ಪ್ರವರ್ಧಮಾನೇ ಚ ಅಧರ್ಮೇ, ಜಗತಃ ಸ್ಥಿತಿಂ ಪರಿಪಿಪಾಲ-ಯಿಷುಃ ಸ ಆದಿಕರ್ತಾ ನಾರಾಯಣಾಖ್ಯೋ ವಿಷ್ಣುಃ ಭೌಮಸ್ಯ ಬ್ರಹ್ಮಣೋ ಬ್ರಾಹ್ಮಣತ್ವಸ್ಯ ರಕ್ಷಣಾರ್ಥಂ ದೇವಕ್ಯಾಂ ವಸುದೇವಾಂಶೇನ ಕೃಷ್ಣಃ ಕಿಲ ಸಂಬಭೂವ ।

(ಬಹುದೀರ್ಘಕಾಲದ ಅನಂತರ, ಅನುಷ್ಠಾನ ಮಾಡುವವರ ಮನಸ್ಸಿನಲ್ಲಿ ಕಾಮ, ಕ್ರೋಧಾದಿಗಳು ಉದ್ಭವಿಸಿದಾಗ, ವಿವೇಕಜ್ಞಾನವು ನಷ್ಟವಾಗಿ, ಅದರ ಕಾರಣ ಅಧರ್ಮದಿಂದ ಧರ್ಮವು ತಿರಸ್ಕೃತವಾಗಿ, ಅಧರ್ಮವು ಪ್ರವರ್ಧಮಾನಕ್ಕೆ ಬಂದಾಗ ನಾರಾಯಣನೆಂಬ ಹೆಸರುಳ್ಳ ಅಧಿಕರ್ತೃವಾದ ವಿಷ್ಣುವು ಜಗತ್ತನ್ನು ರಕ್ಷಿಸಬೇಕೆಂಬ ಇಚ್ಛೆಯಿಂದ, ಆಧ್ಯಾತ್ಮವನ್ನು ರಕ್ಷಿಸಲು, ಭೂಮಿಯ ಬ್ರಹ್ಮನ ಬ್ರಾಹ್ಮಣತ್ವವನ್ನು ರಕ್ಷಿಸುವುದಕ್ಕಾಗಿ, ವಸುದೇವ ಅಂಶದಿಂದ ದೇವಕಿಯಲ್ಲಿ ಕೃಷ್ಣನ ರೂಪದಲ್ಲಿ ಅವತರಿಸಿದನು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರನಿಂದ ಉಪದಿಷ್ಟವಾದ ಧರ್ಮಕ್ಕೆ ಚ್ಯುತಿ ಬಂದಾಗಲೆಲ್ಲ, ಶ್ರೀರಾಮನಂತೆ, ಈಶ್ವರನು ಅವತರಿಸಿ, ಜನಗಳನ್ನು ಉದ್ಧಾರ ಮಾಡುತ್ತಾನೆ. ತನ್ನ ಭಕ್ತರಿಗೆ ಸರಿಯಾದ ಮಾರ್ಗವನ್ನು ತೋರಿಸುವುದಕ್ಕಾಗಿ, ತನಗೆ ಯಾವ ಫಲಪ್ರಾಪ್ತಿಯೂ ಆಗದಿದ್ದರೂ, ಶ್ರೀಕೃಷ್ಣನು ಯೋಗ್ಯವಾದ ರೀತಿಯಲ್ಲಿ ತನ್ನ ಅನುಷ್ಠಾನಗಳನ್ನು ಆಚರಿಸಿದನು.

ಈಶ್ವರನಿಗಾದರೋ ಕರ್ಮಗಳನ್ನು ಮಾಡುವುದರಿಂದ ಯಾವ ಫಲಪ್ರಾಪ್ತಿಯೂ ಆಗಬೇಕಾದುದಿಲ್ಲ.

ನ ಮೇ ಪಾರ್ಥಾಽಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥

ಯದಿ ಹ್ಯಹಂ ನವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥

ಉತ್ಸೀದೇಯುರಿಮೇ ಲೋಕಾಃ ನ ಕುರ್ಯಾಂ ಕರ್ಮ ಚೇದಹಮ್।
ಸಂಕರಸ್ಯ ಚ ಕರ್ತಾ ಸ್ಯಾಮುಪಹನ್ಯಾಮಿಮಾಃ ಪ್ರಜಾಃ ॥

X X X

ಯದ್ಯದಾಚರತಿ ಶ್ರೇಷ್ಠಾಃ................ಲೋಕಸ್ತದನುವರ್ತತೇ ॥

(ಎಲೈ ಪಾರ್ಥ, ಈ ಮೂರು ಲೋಕಗಳಲ್ಲಿ ನಾನು ಯಾವುದನ್ನೂ ಸಾಧನೆ ಮಾಡಬೇಕಾದುದಿಲ್ಲ. ಅಥವಾ ನಾನು ಹೊಂದಬೇಕಾದುದು ಯಾವುದೂ ಇಲ್ಲ. ಆದರೂ ನಾನು ಕರ್ಮಗಳನ್ನು ಮಾಡುತ್ತೇನೆ. ಏಕೆಂದರೆ, ನಾನು ಕರ್ಮಗಳನ್ನು ಮಾಡದಿದ್ದರೆ, ಮಾನವರು ಸರ್ವಥಾ ನನ್ನ ಮಾರ್ಗವನ್ನು ಅನುಸರಿಸುತ್ತಾರೆ. ನಾನು ಕರ್ಮವನ್ನು ಮಾಡದಿದ್ದರೆ, ಈ ಲೋಕಗಳು ನಾಶವಾಗುವವು. ಆಗ ನಾನು ಸಂಕರಕ್ಕೆ ಕಾರಣನಾಗಿ, ಈ ಪ್ರಜೆಗಳನ್ನು ನಾಶಮಾಡುತ್ತೇನೆ.)

(ಸತ್ಪುರುಷರು ಏನನ್ನು ಮಾಡುತ್ತಾರೋ ಅದನ್ನೇ ಇತರರೂ ಅನುಸರಿಸುತ್ತಾರೆ–ಎಂದು ಹೇಳಲಾಗಿದೆ.)

ವೇದದಲ್ಲೂ ಈ ರೀತಿ ಬರುತ್ತದೆ—

ಸತ್ಯಾನ್ನ ಪ್ರಮದಿತವ್ಯಂ—

(ಸತ್ಯದ ವಿಷಯದಲ್ಲಿ ಯಾವ ಪ್ರಮಾದವೂ ಕೂಡದು.)

ನಾವು ಸತ್ಯನಿಷ್ಠರಾಗಿರಬೇಕೆಂಬುದನ್ನು ಶ್ರೀರಾಮಚಂದ್ರ ತನ್ನ ಅವತಾರದಲ್ಲಿ ತೋರಿಸಿದ್ದಾನೆ. ರಾಮನ ವಿಶಿಷ್ಟ ಗುಣಗಳನ್ನು ನಾವು ತಿಳಿಯಬೇಕಾದರೆ, ರಾಮಾಯಣದ ಅಯೋಧ್ಯಾಕಾಂಡದ ಮೊದಲನೆಯ ಸರ್ಗವನ್ನು ನಾವು ಓದಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮಾಯಣದಲ್ಲಿ ರಾಮನ ಪಿತೃಭಕ್ತಿಯನ್ನು ನಾವು ಕಾಣಬಹುದು; ತನ್ನ ಸಹೋದರನಲ್ಲಿ ಅವನಿಗಿದ್ದ ವಾತ್ಸಲ್ಯ ಹಾಗೆ ಸೀತೆಯ ವಿಷಯದಲ್ಲಿ ಅವನಿಗಿದ್ದ ಸನ್ನಡತೆ; ಹಾಗೂ ಪ್ರಜೆಗಳಿಗಾಗಿ ಅವನು ಸೀತೆಯನ್ನು ತ್ಯಾಗ ಮಾಡುವುದನ್ನೂ ನೋಡಬಹುದು. ಹೀಗೆ, ಮನುಷ್ಯರೂಪದ ಅವತಾರದಲ್ಲೂ ಈಶ್ವರನು ತನ್ನ ಮಾಹಾತ್ಮ್ಯವನ್ನು ತೋರಿಸಿದ್ದಾನೆ.

ಕಾಮ, ಕ್ರೋಧ, ಮುಂತಾದುವುಗಳಿಗೆ ಪ್ರಾಧಾನ್ಯವನ್ನು ಕೊಡುವವರ ವಿಷಯದಲ್ಲಿ ಹೀಗೆ ಹೇಳಲಾಗಿದೆ.

ಮೋಘಾಶಾ ಮೋಘ ಕರ್ಮಾಣಃ ಮೋಘಜ್ಞಾನಾ ವಿಚೇತಸಃ ।
ರಾಕ್ಷಸೀಮಾಸುರೀಂ ಚೈವ ಪ್ರಕೃತಿಂ ಮೋಹಿನೀಂ ಶ್ರಿತಾಃ ॥

(ಈಶ್ವರನ ಸಾಕ್ಷಾತ್ಕಾರ ಮಾಡಿಕೊಳ್ಳದ ಮಾನವರು, ಈಡೇರದ ಆಸೆಗಳು, ವ್ಯರ್ಥವಾದ ಕರ್ಮಗಳುಳ್ಳವರು. ವ್ಯರ್ಥವಾದ ಜ್ಞಾನವುಳ್ಳವರು, ವಿವೇಕವಿಲ್ಲದವರೂ, ರಾಕ್ಷಸರ ಹಾಗೂ ಅಸುರರ ಮೋಹಜಾಲದಲ್ಲಿ ಸಿಲುಕಿದವರೂ...............)

ಮನಸ್ಸೆಂಬ ಪದಾರ್ಥವು ಗಾಳಿಗಿಂತ ಅತ್ಯಂತ ವೇಗವಾದುದು. ಅದು ಬೆಳಕಿಗಿಂತ ವೇಗವಾಗಿ ಚಲಿಸಬಲ್ಲ ಸಾಮರ್ಥ್ಯ ಹೊಂದಿರುತ್ತದೆ. ಪ್ರತಿಕ್ಷಣವೂ ಮನಸ್ಸು ತನ್ನ ಆಕಾರವನ್ನು ಬದಲಾಯಿಸುತ್ತದೆ. ಮನಸ್ಸಿನ ಕ್ರಿಯೆಗಳನ್ನು ಶಾಸ್ತ್ರಗಳಲ್ಲಿ "ವೃತ್ತಿಗಳು" ಎಂದು ಕರೆಯುತ್ತಾರೆ. ಕೆಲವು ವೃತ್ತಿಗಳನ್ನು ಆಶೆಗಳು ಎಂದು ಕರೆಯುತ್ತಾರೆ. "ನನಗೆ ಅದು ಬೇಕು ; ನನಗೆ ಇದು ಬೇಕು ; ನನಗೆ ವಸ್ತುಗಳು ಬೇಕು ; ಇಂದು ನಾನು ಮನೆಯನ್ನು ಕಟ್ಟಿದೆ ; ನಾಳೆ ನಾನು ಜಮೀನನ್ನು ಹೊಂದಬೇಕು; ನಾಳಿದ್ದು ನಾನು ಲಕ್ಷಾಧಿಪತಿಯಾಗಬೇಕು"-ಇಂತಹ ಭಾವನೆಗಳು ಆಸೆಗಳೆನಿಸುತ್ತವೆ. ನಮ್ಮ ಪ್ರತಿನಿತ್ಯದ ಜೀವನದಲ್ಲಿ ಅವು ನಿರಂತರವಾಗಿ ನಮ್ಮ ಮನಸ್ಸಿನಲ್ಲಿ ಆವಿರ್ಭವಿಸುತ್ತವೆ. ಹೇಗಾದರೂ, ನಾವು ಸ್ವಲ್ಪ ವಿಮರ್ಶೆ ಮಾಡಿದರೆ, ಈ ಆಸೆಗಳಿಗೆ ಕೊನೆಯೇ ಇಲ್ಲವೇನೋ ಎಂದು ತಿಳಿದುಬರುತ್ತದೆ. ಆದಕಾರಣದಿಂದಲೇ ನಮ್ಮ ಪೂರ್ವಿಕರು ಹೇಳಿದ್ದಾರೆ—

ಏಕೋ ವಷ್ಟಿ ಶತಂ ಶತೀ ದಶಶತಂ ಲಕ್ಷಂ ಸಹಸ್ರಾಧಿಪಃ
ಲಕ್ಷೇಶಃ ಕ್ಷಿತಿಪಾಲತಾಂ ಕ್ಷಿತಿಪತಿರ್ವಿತ್ತೇಶತಾಂ ವಾಂಛತಿ ।
ವಿತ್ತೇಶಃ ಸುರರಾಜತಾಂ ಸುರಪತಿ ರ್ಬ್ರಹ್ಮಾಸ್ಪದಂ ವಾಂಛತಿ
ಬ್ರಹ್ಮಾ ವಿಷ್ಣುಪದಂ ಹರಿಃ ಶಿವಪದಂ ಹ್ಯಾಶಾವಧಿಂ ಕೋ ಗತಃ ॥

(ಒಂದು ರೂಪಾಯಿ ಇರುವವನು ನೂರಕ್ಕೆ ಆಸೆಪಡುತ್ತಾನೆ; ನೂರು ಇರುವವನು ಸಾವಿರವನ್ನು; ಸಾವಿರವಿರುವವನು ಲಕ್ಷವನ್ನು; ಲಕ್ಷವಿರುವವನು ರಾಜನಾಗಬೇಕೆಂದು;

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಜನಾದವನು ಕುಬೇರನಾಗಬೇಕೆಂದು; ಕುಬೇರನು ಇಂದ್ರನಾಗಬೇಕೆಂದು; ಇಂದ್ರನು ಬ್ರಹ್ಮಪದವಿಯನ್ನು ; ಬ್ರಹ್ಮನು ವಿಷ್ಣುವಿನ ಪದವಿಯನ್ನು, ವಿಷ್ಣುವು ಶಿವನಾಗ ಬೇಕೆಂದು-ಯಾರು ಆಶೆಯ ಅವಧಿಯನ್ನು ಸೇರಿದ್ದಾರೆ.)

ಸಾಮಾನ್ಯರಾದ ಜನರು ಊಟ, ಹಣ ಮತ್ತು ಭೂಮಿಯನ್ನು ಅಪೇಕ್ಷಿಸುತ್ತಾರೆ. ಶಾಸ್ತ್ರಜ್ಞಾನವಿರುವವರು ಸ್ವರ್ಗ, ಬ್ರಹ್ಮಲೋಕ, ಮುಂತಾದುವನ್ನು ಅಪೇಕ್ಷಿಸುತ್ತಾರೆ. ಲೋಕೇಷಣಾ, ವಿತ್ತೇಷಣಾ ಮತ್ತು ತ್ರೇಪುಷಣಾ-ಎಂಬ ಏಷಣಾತ್ರಯಗಳನ್ನು ಬಿಟ್ಟವರೂ ಸಹ ಮೋಕ್ಷವನ್ನು ಅಪೇಕ್ಷಿಸುತ್ತಾರೆ. ಆಟವಾಡುವುದರಲ್ಲಿ ಮಕ್ಕಳು ಕಾಣುವ ಆನಂದವನ್ನು ನಮ್ಮಲ್ಲಿ ಕಾಣಲಾಗುವುದಿಲ್ಲ. ಮಕ್ಕಳನ್ನು ನೋಡಿ-ಅವರು ಹೆಚ್ಚು ತಿಳುವಳಿಕೆಯಿಲ್ಲದವರು ಎಂದು ನಾವು ಹೇಳುತ್ತೇವೆ.

ಮತ್ತೊಂದು ವಿಧದಲ್ಲಿ ಪ್ರಾಪಂಚಿಕ ವ್ಯವಹಾರಗಳಲ್ಲಿ ನಾವು ಸಂತೋಷವನ್ನು ಕಾಣುತ್ತೇವೆ. ಕೆಲವರು ಯಶಸ್ಸು ಬರಲೆಂದು ಪ್ರಯತ್ನ ಪಡುತ್ತಾರೆ; ಕೆಲವರು ಹಣ ವನ್ನು ಹೊಂದಲು ಪ್ರಯತ್ನ ಮಾಡುತ್ತಾರೆ; ಕೆಲವರು ಜ್ಞಾನ ಸಂಪಾದಿಸಲು ಪ್ರಯತ್ನಿಸುತ್ತಾರೆ. ಪ್ರತಿಯೊಬ್ಬನಿಗೂ ಒಂದು ವಿಧವಾದ ಆಸೆ ಇರುತ್ತದೆ. ಹಾಗೂ ತನ್ನ ಆಸೆಯೇ ಇನ್ನೊಬ್ಬನದಕ್ಕಿಂತ ಶ್ರೇಷ್ಠವಾದುದು ಎಂಬ ಭಾವನೆಯೂ ಇರುತ್ತದೆ. ಮೋಕ್ಷಾಕಾಂಕ್ಷಿಗಳು ಇಂತಹ ಕ್ಷುಲ್ಲಕವಾದ ಆಸೆಗಳನ್ನು ತ್ಯಜಿಸಿ, ಉನ್ನತವಾದ ಭಾವನೆಗಳನ್ನು ಹೊಂದಿರುತ್ತಾರೆ. ಪ್ರಬುದ್ಧರು ಮಕ್ಕಳ ಆಟ ನೆಗೆಗಳಲ್ಲಿ ಆಸಕ್ತ ರಾಗದಿರುವಂತೆ, ಮೋಕ್ಷಾಕಾಂಕ್ಷಿಗಳು ಇಂತಹ ಆಸೆಗಳಲ್ಲಿ ಆಸಕ್ತರಾಗುವುದಿಲ್ಲ; ಆದರೆ ಅವರೂ ಸಹ ಮೋಕ್ಷವನ್ನು ಅಪೇಕ್ಷಿಸುತ್ತಾರೆ. ಪ್ರತಿಯೊಬ್ಬನೂ ಯಾವುದಾದ ರೊಂದು ಆಸೆಯನ್ನು ಹೊಂದಿ ಜೀವಿಸುತ್ತಾನೆ ಎಂದರೆ ತಪ್ಪಾಗಲಾರದು. ಯಾರೂ ಸಹ ಯಾವ ಆಸೆಯನ್ನು ಹೊಂದದೆ ಒಂದು ಕ್ಷಣವೂ ಕಳೆಯಲಾರರು.

ಪ್ರಯತ್ನಗಳಿಂದ ಆಸೆಗಳು ಫಲಕಾರಿಯಾಗುವುದಿಲ್ಲ. ಆಸೆಗಳು ಫಲಕಾರಿ ಯಾದರೂ, ಮಾನಸಿಕ ವ್ಯಥೆಗಳು ಹೆಚ್ಚುತ್ತಲೇ ಹೋಗುತ್ತವೆ. ವ್ಯಾವಹಾರಿಕ ಅನು ಕೂಲತೆಗಳನ್ನು ಮಾಡಿಕೊಡಲು ಸಾಮರ್ಥ್ಯವುಳ್ಳ ಅನೇಕ ಶ್ರೀಮಂತರು ಇರುತ್ತಾರೆ. ಅವರು ಅಂತಹ ಫಲಗಳನ್ನು ಕೊಡುತ್ತಾರೆ (ಆದರೆ, ನಾವು ಅಂತಹವರಲ್ಲಿ ಶರಣು ಹೊಂದಬೇಕೆ ?) ಇದಕ್ಕೆ ಒಂದು ಉದಾಹರಣೆಯನ್ನು ಕೊಡಬಹುದು. ಅದೇನೆಂದರೆ, ಕ್ಷಯರೋಗದಿಂದ ನರಳುತ್ತಿರುವ ರೋಗಿಯೊಬ್ಬನು, ಅದೇ ಕ್ಷಯ ರೋಗದಿಂದ ನರಳು ತ್ತಿರುವ ವೈದ್ಯನ ಹತ್ತಿರಕ್ಕೆ ಹೋಗುವುದು. ಪ್ರಪಂಚದ ಅಧಿಕಾರಿಗಳೂ ಸ್ವತಃ ಆಸೆ ಯಿಂದ ಕೂಡಿದವರಾಗಿ, ವ್ಯಥೆಗಳಿಂದ ಮುಕ್ತರಾಗದಿರುವಾಗ, ಹೇಗೆ ತಾನೇ ಅವರು ಇತರರ ದುಃಖಗಳನ್ನು ನಿವಾರಿಸಿಯಾರು ? ಇಂತಹ ಪರಿಸ್ಥಿತಿಯನ್ನು ಕುರಿತು ಭರ್ತೃ ಹರಿ ಹೇಳುತ್ತಾನೆ—

Sri Vidyabharathi Book Centre, Sringeri

CC-O. In Public Domain. Digitized by eGangotri

ಮೌನಾನ್ಮೂಕಃ ಪ್ರವಚನ ಪಟುಃ....

(ಮೌನವಾಗಿದ್ದರೆ ಮೂಕನೆಂದೂ, ಚೆನ್ನಾಗಿ ಮಾತನಾಡಿದರೆ, ಹರಟೆಮಲ್ಲ ಎಂದೂ....)

ಆದ್ದರಿಂದ, ಎಲ್ಲ ಬಂಧನಗಳಿಂದಲೂ ಸಂಪೂರ್ಣವಾಗಿ ಮುಕ್ತನಾಗಿರುವ ಸರ್ವ ತಂತ್ರ ಸ್ವತಂತ್ರನಲ್ಲಿ ಮಾತ್ರ ನಾವು ಶರಣಾಗಬೇಕು. ಅಂತಹ ವ್ಯಕ್ತಿಯನ್ನು ನಾವು ಕಣ್ಣಿನಿಂದ ನೋಡಲು ಸಾಧ್ಯವಾಗದಿದ್ದರೂ, ದಿವ್ಯದೃಷ್ಟಿಯಿಂದ ನೋಡಬಹುದು. ಅಂತಹ ಈಶ್ವರನನ್ನು ಕುರಿತು ಭಗವತ್ಪಾದರು ಹೇಳುತ್ತಾರೆ-

ಅರಹಸಿ ರಹಸಿ ಸ್ವತಂತ್ರಬುದ್ಧ್ಯಾ ವರಿವಸಿತುಂ ಸುಲಭಃ ಪ್ರಸನ್ನಮೂರ್ತಿಃ ।
ಅಗಣಿತ ಫಲದಾಯಕಃ ಪ್ರಭುರ್ಮೇ ಜಗದಧಿಕೋ ಹೃದಿ
ರಾಜಶೇಖರೋಽಸ್ತಿ ॥

(ಕಾಣುವಂತೆ ಆಗಲಿ ಅಥವಾ ರಹಸ್ಯವಾಗಲೀ, ಸ್ವತಂತ್ರವಾದ ಬುದ್ಧಿಯಿಂದ ಅವನ ಜೊತೆ ವಾಸ ಮಾಡುವುದು ಸುಲಭ; ಅವನದು ಪ್ರಸನ್ನ ಮೂರ್ತಿ; ಅವನು ಅಗಣಿತ ವಾದ ಫಲವನ್ನು ಕೊಡುವವನು; ಜಗತ್ತನ್ನು ಮೀರಿದವನು; ಅಂತಹ ರಾಜಶೇಖರನಾದ ಪ್ರಭುವು ನನ್ನ ಹೃದಯದಲ್ಲಿ ವಾಸಿಸುತ್ತಾನೆ.)

ರಾಜಾಧಿರಾಜನ ಜೊತೆಯಲ್ಲಿ ವಾಸಮಾಡುವುದು ಸುಲಭವೆಂದು ಅವರು ತೋರಿಸಿದ್ದಾರೆ. ಅಂತಹ ಈಶ್ವರನ ಸ್ವರೂಪವನ್ನು ವಿಶ್ಲೇಷಿಸೋಣ. ನಮ್ಮ ಇಂದ್ರಿಯಗಳಿಂದ ನಾವು ವಿವಿಧ ಪದಾರ್ಥಗಳನ್ನು ಅನುಭವಿಸುತ್ತೇವೆ. ನೇರವಾದ ಪ್ರತ್ಯಕ್ಷದಿಂದ ಅಥವಾ ಕೆಲವು ವೇಳೆ ಅನುಮಾನದಿಂದ ಜ್ಞಾನವುಂಟಾಗುತ್ತದೆ. ಸುಂದರವಾದ ವಿಗ್ರಹವೊಂದನ್ನು ನೋಡಿ, ಅದನ್ನು ಕೆತ್ತಿದ ಶಿಲ್ಪಿಯು ಬಹು ಕುಶಲ ನಿರಬೇಕೆಂದು ತಿಳಿಯುತ್ತೇವೆ. ಇದು ಅನುಮಾನ. ಈ ವಿಧವಾದ ಅನುಮಾನ ಗಳಿಂದ, ಯಾವುದೇ ಕಾರ್ಯಕ್ಕೆ, ಆ ಕಾರ್ಯವನ್ನುಂಟುಮಾಡುವ ವ್ಯಕ್ತಿಯೊಬ್ಬನು ಇರಬೇಕೆಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ. ಇಲ್ಲಿ ಅನುಮಾನ ಪ್ರಮಾಣವನ್ನು ಉಪಯೋಗಿಸಲಾಗಿದೆ. ಯಾವುದೋ ಒಂದು ಸಮಯದಲ್ಲಿ ಈ ಪ್ರಪಂಚವು ಸೃಷ್ಟಿ ಯಾಗಿರಬೇಕೆಂದು ನಿಶ್ಚಿತವಾಗಿದೆ. ಉತ್ಪತ್ತಿ ಮತ್ತು ಲಯವಿಲ್ಲದುದನ್ನು ಇಂದ್ರಿಯ ಗಳಿಂದ ಗ್ರಹಿಸಲು ಸಾಧ್ಯವಿಲ್ಲ. ಈ ಭೂಮಿಯೇ ಮುಂತಾದ ಪ್ರಪಂಚಕ್ಕೆ ಉತ್ಪತ್ತಿ ಯಿದೆಯೆಂದು ನಿರ್ಧರಿಸುವುದಾದರೆ, ಅದಕ್ಕೆ ಒಬ್ಬ ಸೃಷ್ಟಿಕರ್ತ ಇರಬೇಕೆಂಬುದು ಅನು ಗತವಾಗುತ್ತದೆ. ಅಂತಹ ಸೃಷ್ಟಿಕರ್ತನನ್ನು ನಾವು ಈಶ್ವರ ಎಂದು ಕರೆಯುತ್ತೇವೆ. ರಾಜ್ಯದಲ್ಲಿ ಎಲ್ಲವೂ ಸುಖವಾಗಿದ್ದರೆ, ಅಲ್ಲಿ ಒಳ್ಳೆಯ ರಾಜನಿದ್ದಾನೆಂದು ನಾವು ನಿರ್ಧರಿಸುವುದಿಲ್ಲವೇ ? ಪ್ರಪಂಚದಲ್ಲಿ ಒಂದಾದ ಮೇಲೆ ಒಂದರಂತೆ ವಸಂತ, ಬೇಸಿಗೆ, ಹಾಗೂ ವರ್ಷಕಾಲ ಬರುವುದನ್ನು ನಾವು ಕಾಣುತ್ತೇವೆ, ವಸಂತ ಋತುವಿನಲ್ಲಿ ಮತ್ತು ಇತರ ಋತುಗಳಲ್ಲಿ ಆಯಾಯ ಋತುವಿಗೆ ಸಂಬಂಧಿಸಿದ ಹೂಗಳು ಅರಳುವು

Sri Vidyabharathi Book Centre, Sringeri

CC-O. In Public Domain. Digitized by eGangotri

ದನ್ನು ನೋಡುತ್ತೇವೆ. ಸೂರ್ಯ ಮತ್ತು ಚಂದ್ರ ಉಚಿತವಾದ ಸಮಯದಲ್ಲಿ ಬೆಳಕು ಕೊಡುತ್ತಾರೆ ಮತ್ತು ಅನುಕೂಲಕರವಾದ ಫಲಗಳನ್ನುಂಟುಮಾಡುತ್ತಾರೆ. ನಮ್ಮ ತಂದೆ ಹಾಗೂ ಮುತ್ತಾತಂದಿರ ಕಾಲದಲ್ಲಿಯೂ ಇದೇ ನಿಯಮಗಳು ಇದ್ದವು. ಇದರಿಂದ ವಿಶ್ವಕ್ಕೆ ಅನ್ವಯವಾಗುವ ನಿಯಮಗಳು ಬದಲಾಗದಿರುವವು ಎಂಬುದು ಸ್ಪಷ್ಟವಾಗುತ್ತದೆ. ಎಲ್ಲ ಪ್ರಾಣಿಗಳೂ ಉಚಿತವಾದ ಅಂಗಗಳನ್ನು ಹೊಂದಿರುತ್ತವೆ. ಒಬ್ಬನಿಗೆ ಒಂದು ವಿಧದಲ್ಲಿ ಕಣ್ಣಿದ್ದರೆ, ಮತ್ತೊಬ್ಬನಿಗೆ ಇನ್ನೊಂದು ರೀತಿಯಲ್ಲಿರುತ್ತದೆ ಎಂದಲ್ಲ. ಈ ರೀತಿಯಾದ ನಿಯಮಗಳನ್ನು ಜಾರಿಗೊಳಿಸಿದವನು ಯಾರು? ಸ್ವತಃ ವಸ್ತುಗಳಲ್ಲಿ ಅಂತಃಸ್ಥವಾಗಿರುವ ಚೈತನ್ಯವೇ ಅವನೇ, ಅಥವಾ ವಸ್ತುಗಳನ್ನು ಹೊಂದುವ ಚೈತನ್ಯಕ್ಕಿಂತ ಅವನು ಶ್ರೇಷ್ಠನಾದವನೇ? ಚೈತನ್ಯ ಮತ್ತು ವಸ್ತುಗಳಿಗೆ ಸಂಬಂಧಿಸಿದಂತೆ ಸಾಂಗತ್ಯ ಮತ್ತು ಅಸಾಂಗತ್ಯಗಳ ಪ್ರಯೋಗಗಳು ತೃಪ್ತಿಕರವಾಗಿವೆ ಎಂದು ಕೆಲವು ವಿಜ್ಞಾನಿಗಳು ತರ್ಕಾಭಾಸಗಳನ್ನು ಉಪಯೋಗಿಸಿ ಸಿದ್ಧಮಾಡಲು ಪ್ರಯತ್ನಿಸುತ್ತಾರೆ. ಆದರೆ, ಸಾಂಗತ್ಯವಾಗಲೀ ಅಥವಾ ಅಸಾಂಗತ್ಯವಾಗಲೀ ಅಲ್ಲಿ ಕಂಡುಬರುವುದಿಲ್ಲ. ಈ ವಸ್ತುಗಳನ್ನು ಸೃಷ್ಟಿಮಾಡಿದ ಪ್ರತ್ಯೇಕವಾದ ಒಂದು ಪದಾರ್ಥವಿರಬೇಕು. ಆ ಒಂದು ವಸ್ತುವನ್ನೇ ನಾವು ಈಶ್ವರ ಎಂದು ಕರೆಯುತ್ತೇವೆ. ಈಶ್ವರನೆಂದರೆ ಅಸಾಧ್ಯವಾದ ಒಂದು ಶಕ್ತಿಯನ್ನು ಹೊಂದಿದವನೆಂದರ್ಥ. ವೇದ ತಿಳಿಸುತ್ತದೆ–

ಏತಸ್ಯವಾ ಅಕ್ಷರಸ್ಯ ಪ್ರಶಾಸನೇ ಸೂರ್ಯಾಚಂದ್ರಮಸೌ ವಿಧೃತೌತಿಷ್ಠತಃ ||
(ನಾಶರಹಿತನಾದ ಅವನ ಶಾಸನದಂತೆ, ಸೂರ್ಯಚಂದ್ರರು ಅಲ್ಲಿ ಇದ್ದಾರೆ.)

ಭೀಷಾಸ್ಮಾದ್ವಾತಃ ಪವತೇ | ಭೀಷೋದೇತಿಸೂರ್ಯಃ |
ಭೀಷಾಽಸ್ಮಾದಗ್ನಿಶ್ಚೇಂದ್ರಶ್ಚ | ಮೃತ್ಯುರ್ಧಾವತಿ ಪಂಚಮಃ ||

(ಅವನ ಹೆದರಿಕೆಯಿಂದ ಗಾಳಿಯು ಬೀಸುತ್ತದೆ; ಅವನ ಹೆದರಿಕೆಯಿಂದ ಸೂರ್ಯನು ಉದಯಿಸುತ್ತಾನೆ; ಅವನ ಹೆದರಿಕೆಯಿಂದ ಅಗ್ನಿ, ಇಂದ್ರ, ಮತ್ತು ಮೃತ್ಯು–ತಮ್ಮ ತಮ್ಮ ಕೆಲಸಗಳನ್ನು ನಿರ್ವಹಿಸುತ್ತಾರೆ.)

ಈ ರೀತಿಯಾಗಿ, ವಿಶ್ವಕ್ಕೆ ಒಬ್ಬ ನಿಯಂತೃವಿರುವುದನ್ನು ವೇದವು ಸ್ಪಷ್ಟಪಡಿಸುತ್ತದೆ. ಈ ನಿಯಂತೃವೇ ಈಶ್ವರ. ಇದೇ ಈಶ್ವರನ ಐಶ್ವರ್ಯ. ಪ್ರಪಂಚ ಮುಂತಾದವು ಯಾರಿಂದ ಉತ್ಪತ್ತಿಯಾಗುವುವೋ ಅದೇ ಬ್ರಹ್ಮ–ಎಂದು ವೇದವ್ಯಾಸರು ಸ್ಪಷ್ಟಪಡಿಸುತ್ತಾರೆ. ಇದರಿಂದ ಈಶ್ವರನ ಅಸ್ತಿತ್ವವು ಸಿದ್ಧವಾಗುತ್ತದೆ. ಈಶ್ವರನ ಸ್ವರೂಪವನ್ನು ವಿಶ್ಲೇಷಿಸುತ್ತಾ, ಮಹರ್ಷಿ ಪತಂಜಲಿಗಳು ಹೇಳುತ್ತಾರೆ.

ಕ್ಲೇಶಕರ್ಮವಿಪಾಕೈರಪರಾಮೃಷ್ಟಃ ಪುರುಷ ವಿಶೇಷಃ ಈಶ್ವರಃ ||
(ಕ್ಲೇಶ, ಕರ್ಮ, ಅವುಗಳ ಫಲ ಮತ್ತು ಸಂಸ್ಕಾರ ಇವುಗಳ ಸಂಪರ್ಕವಿಲ್ಲದ ವಿಶಿಷ್ಟನಾದ ಪುರುಷನೇ ಈಶ್ವರ)

Sri Vidyabharathi Book Centre, Sringeri

CC-O. In Public Domain. Digitized by eGangotri

ಕ್ಲೇಶವೆಂದರೆ ಅಜ್ಞಾನ ಮುಂತಾದವು. ಕರ್ಮವೆಂದರೆ ಮಿಶ್ರಿತವಾದ ಕಾರ್ಯಗಳು. ವಿಪಾಕವೆಂದರೆ–ಅವುಗಳ ಫಲರೂಪವಾದ ಜೀವನ. ಮುಂತಾದವು. ಆಶಯವೆಂದರೆ ಸಂಸ್ಕಾರ. ಈಶ್ವರನೆಂದರೆ ಇವುಗಳ ಸಂಪರ್ಕವಿಲ್ಲದವನು. ಈ ರೀತಿಯಾಗಿ ಹೇಳಿ, ಅವರು ಈಶ್ವರನನ್ನು ವರ್ಣಿಸುತ್ತಾರೆ.

ಯೋಗದರ್ಶನವನ್ನು ಅನುಸರಿಸುವವರು ದ್ವೈತವನ್ನು ಅಂಗೀಕರಿಸುತ್ತಾರೆ. ಪ್ರಪಂಚ ಮತ್ತು ಆತ್ಮ–ಎರಡೂ ವಿಶಿಷ್ಟವಾದವೆಂದು ಅವರ ಅಭಿಮತ. ಈಶ್ವರನು ಜೀವನಿಗಿಂತ ಭಿನ್ನನಾದವನೆಂದು ಅವರ ಸೂತ್ರಗಳಲ್ಲಿ ತಿಳಿಸಲಾಗಿದೆ. ಪ್ರಕೃತಿಯ ಪರಿಣಾಮದ ಫಲವಾಗಿ ಈ ಪ್ರಪಂಚವು ಬಂದಿದೆಯೆಂದು ಯೋಗದರ್ಶನದಲ್ಲಿ ಹೇಳಲಾಗಿದೆ. ಇದನ್ನು ಒಪ್ಪುವುದಾದರೆ, ಆಗ ಪುರುಷನು ಅವಶ್ಯವೇ ಎಂಬ ಪ್ರಶ್ನೆ ಏಳುತ್ತದೆ. ನಾವು ಒಂದು ಗಡಿಗೆಯನ್ನು ನೋಡುತ್ತೇವೆ. ಆ ಗಡಿಗೆಯು ಅಚೇತನವಾದ ಮಣ್ಣಿನಿಂದ ಮಾಡಲಾಗಿದೆ. ಆದರೆ, ಅದನ್ನು ಮಾಡಬೇಕಾದರೆ ಓರ್ವ ಮನುಷ್ಯ ಅವಶ್ಯ. ಹಾಗೆಯೇ, ಪ್ರಕೃತಿಯು ಪರಿಣಾಮವನ್ನು ಹೊಂದಬೇಕಾದರೆ ಪುರುಷನು ಅವಶ್ಯ. ಅಚೇತನವಾದ ಪ್ರಕೃತಿಯು ಪರಿಣಾಮವನ್ನು ಹೊಂದುತ್ತದೆ ಎಂದು ಹೇಳಿದರೆ, ಆಗ ಆ ರೀತಿ ಪರಿಣಾಮವಾಗುವುದಕ್ಕೆ ಒಬ್ಬ ಪುರುಷನು ಅವಶ್ಯ ಎಂದು ಅಂಗೀಕರಿಸಬೇಕಾಗುತ್ತದೆ. ಇದನ್ನು ಅಂಗೀಕರಿಸದಿದ್ದರೆ, ನಮ್ಮ ಅನುಭವಕ್ಕೆ ಬರುವ ನಿಯಮದ ಉಲ್ಲಂಘನೆಯಾಗುತ್ತದೆ.

ವೇದಾಂತ ದರ್ಶನದಲ್ಲಿ ಆತ್ಮವೊಂದೇ ಸತ್ಯವಾದುದು. ಬಾಕಿಯದೆಲ್ಲವೂ ಕೇವಲ ತೋರಿಕೆಗಳು ಎಂದು ಹೇಳಲಾಗಿದೆ. ಆತ್ಮ ಮತ್ತು ಪ್ರಪಂಚ ಎರಡೂ ಸಂಪೂರ್ಣವಾಗಿ ಅವಸ್ತುಗಳಾದರೆ, ಆಗ ಇಂದ್ರಿಯಗಳಿಂದ ಯಾವ ವಸ್ತುವನ್ನೂ ಗ್ರಹಿಸಲಾಗುವುದಿಲ್ಲ. ಹಗ್ಗವನ್ನು ನೋಡಿ ಸರ್ಪವೆಂದು ತಪ್ಪುಗ್ರಹಿಕೆಯನ್ನು ಹೊಂದಬಹುದಾಗಿರುವಂತೆ, ಸದ್ವಸ್ತುವನ್ನು ಪ್ರಪಂಚವೆಂದು ತಪ್ಪುತಿಳಿಯಬಹುದು. ಈ ದೃಷ್ಟಾಂತದ ಅಭಿಪ್ರಾಯವೇನೆಂದರೆ, ಅಜ್ಞಾನದ ದೆಸೆಯಿಂದ ಹಗ್ಗದಹಾವು ಕಂಡುಬರುವಂತೆ, ಈಶ್ವರನಿಂದ ಪ್ರಪಂಚವು ಆವಿರ್ಭವಿಸುವಂತೆ ತೋರುತ್ತದೆ. ಬ್ರಹ್ಮವೊಂದೇ ಪರಮಸತ್ಯವಾದುದು. ಅದರಲ್ಲಿಯೇ ಪ್ರಪಂಚವನ್ನು ಕಲ್ಪನೆ ಮಾಡಲಾಗಿದೆ. ಈ ಪ್ರಪಂಚವನ್ನೇ ನಾವು ನೋಡುತ್ತಿರುವುದು. ಮಾಯೆಯೇ ಈ ಪ್ರಪಂಚಕ್ಕೆ ಕಾರಣ. ಅಚೇತನವಾದ ಮಾಯೆಯು ತಾನಾಗಿಯೇ ಏನನ್ನು ಮಾಡಲೂ ಸಾಧ್ಯವಿಲ್ಲ. ಯಾರು ಈ ಮಾಯೆಯಿಂದ ಸೃಷ್ಟಿಸುತ್ತಾನೋ, ರಕ್ಷಿಸುತ್ತಾನೋ ಹಾಗೂ ಲಯಮಾಡುತ್ತಾನೋ ಅವನೇ ಈಶ್ವರ. ಆದ್ದರಿಂದ ಪ್ರಪಂಚಕ್ಕೆ ಕಾರಣ ಮಾಯೆ, ಮತ್ತು ಅದನ್ನು ನಿಯಂತ್ರಿಸುವವನು ಈಶ್ವರ.

ಮಾಯಾಂ ತು ಪ್ರಕೃತಿಂ ವಿದ್ಯಾತ್
ಮಾಯಿನಂ ತು ಮಹೇಶ್ವರಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಶ್ವೇತಾಶ್ವತರ ಉಪನಿಷತ್ತಿನಲ್ಲಿ ಹೇಳಲಾಗಿದೆ.

ಜ್ಞಾನದ ಶಕ್ತಿಯು ಎಲ್ಲಿರುತ್ತದೆಯೋ, ಅಲ್ಲಿ ಚೈತನ್ಯವಿರುವುದನ್ನು ಕಾಣುತ್ತೇವೆ. ಈಶ್ವರನು ಚೈತನ್ಯ ಸ್ವರೂಪ. ಕಲ್ಲು, ಮಣ್ಣು, ಇತ್ಯಾದಿಗಳಲ್ಲಿ ಚೈತನ್ಯವಿರುವುದಿಲ್ಲ. ಆದ್ದರಿಂದ ಅವನ್ನು ಜಡವಸ್ತುಗಳೆಂದು ಕರೆಯುತ್ತಾರೆ. ಪ್ರಾಣಿಗಳು, ಪಕ್ಷಿಗಳು, ಮುಂತಾದುವಲ್ಲಿ ತಿಳಿಯುವ ಶಕ್ತಿಯಿರುವುದರಿಂದ, ಅವಲ್ಲೂ ಚೈತನ್ಯವಿದೆಯೆಂದು ಒಪ್ಪಬೇಕು. ಪ್ರಾಣಿಗಳಲ್ಲಿ ತಿಳಿಯುವ ಶಕ್ತಿಯು ಪರಿಮಿತವಾದುದು. ಮಾನವರಲ್ಲಿ ಅದು ಸ್ವಲ್ಪ ಅಧಿಕವಾಗಿದೆ. ವಿವೇಚನೆ ಮಾಡುವ ಶಕ್ತಿಯಿರುವಲ್ಲಿ ತಿಳಿಯುವ ಶಕ್ತಿಯು ಅಧಿಕವಾಗಿದೆಯೆಂದು ಹೇಳಬೇಕು. ಅಂತಹ ವಿಶಿಷ್ಟವಾದ ತಿಳುವಳಿಕೆಯಿಲ್ಲದೆಡೆಯಲ್ಲಿ ಸಾಮಾನ್ಯ ತಿಳುವಳಿಕೆ ಇದೆಯೆಂದು ಅಂಗೀಕರಿಸಬೇಕು. ತಿಳುವಳಿಕೆಯಿರುವ ಮನುಷ್ಯನಲ್ಲೂ ಅನೇಕ ರೀತಿಯ ಅಜ್ಞಾನವಿರುತ್ತದೆ.

ನಹಿ ಸರ್ವಃ ಸರ್ವಂ ಜಾನಾತಿ ।
(ಎಲ್ಲರೂ ಎಲ್ಲವನ್ನೂ ತಿಳಿದಿರುವುದಿಲ್ಲ)

ಮನುಷ್ಯನಲ್ಲಿ ವಿಶಿಷ್ಟ ರೀತಿಯ ತಿಳುವಳಿಕೆಯಿದ್ದರೂ ಸಹ, ಅವನಲ್ಲಿ ಯಾವುದಾದರೂ ಅಜ್ಞಾನವಿರಲೇಬೇಕು. ಯಾವ ವ್ಯಕ್ತಿಯೂ ವಿದ್ಯಾಪಾರಂಗತನಲ್ಲ. ಪ್ರಾಣಿಗಳು ಪರಿಮಿತವಾದ ಜ್ಞಾನವನ್ನು ಹೊಂದಿರುತ್ತವೆ. ಕಲ್ಲುಗಳು ಅದನ್ನೂ ಸಹ ಹೊಂದಿರುವುದಿಲ್ಲ. ವಿದ್ಯೆಯ ಸಂಪೂರ್ಣ ಅವಧಿಯನ್ನು ನಾವು ಎಲ್ಲಿ ಕಾಣಬಹುದು ? ಈಶ್ವರನಲ್ಲಿ ಮಾತ್ರ ಅದನ್ನು ಕಾಣಬಹುದು. ಅಜ್ಞಾನವೆಂಬುದು ಈಶ್ವರನಲ್ಲಿರುವುದಿಲ್ಲ. ಯೋಗಿಗಳು ಹೇಳುತ್ತಾರೆ.

(ಈಶ್ವರನಲ್ಲಿ ಎಲ್ಲ ವಿಷಯಗಳ ನಿರವಧಿಜ್ಞಾನದ ಬೀಜವಿರುತ್ತದೆ)

ಈಶ್ವರನೇ ಎಲ್ಲಕ್ಕೂ ದ್ವಾರ ಮತ್ತು ಎಲ್ಲ ಶಕ್ತಿಗಳನ್ನೂ ಹೊಂದಿದವನೆಂದು ಅಂಗೀಕರಿಸಬೇಕಾಗುತ್ತದೆ. ಇಹ–ಪರಗಳಿನ ಸೌಖ್ಯಕ್ಕೆ ಸಾಧನೆಯನ್ನು ವೇದಗಳು ವಿವರಿಸುತ್ತವೆ.

ಅಸ್ಯ ಮಹತೋ ಭೂತಸ್ಯ ನಿಶ್ವಸಿತಮೇತತ್
(ಈ ವೇದಗಳು ಪರಮಾತ್ಮನ ನಿಃಶ್ವಾಸರೂಪಗಳು)

ವೇದಗಳ ಈ ಮಾತುಗಳಿಂದ, ವೇದಗಳೂ ಈಶ್ವರನಿಂದ ಹೊಮ್ಮಿದವೆಂಬುದು ಸ್ಪಷ್ಟವಾಗುತ್ತದೆ. ಎಲ್ಲವನ್ನೂ ಅಭಿವ್ಯಕ್ತಗೊಳಿಸುವ ವೇದಗಳಿಗೆ ಈಶ್ವರನೇ ಮೂಲ ಕಾರಣನಾದರೆ, ಅವನು ಸರ್ವಜ್ಞನೆಂಬುದನ್ನು ಒಪ್ಪಬೇಕಾಗುತ್ತದೆ.

ಈಶ್ವರನ ವಿಷಯಗಳಲ್ಲಿ ವೇದಗಳು ಹೇಳುತ್ತವೆ.

ಯಃ ಸರ್ವಜ್ಞಃ ಸರ್ವವಿತ್

Sri Vidyabharathi Book Centre, Sringeri

CC-O. In Public Domain. Digitized by eGangotri

(ಯಾರು ವಸ್ತುಗಳನ್ನು ಸಾಮಾನ್ಯರೂಪದಲ್ಲಿ ಮತ್ತು ವಿಶಿಷ್ಟರೂಪದಲ್ಲಿ ತಿಳಿಯುತ್ತಾನೋ) ಈ ವಿಧವಾದ ಮಾತುಗಳಿಂದ ಈಶ್ವರನು ಸರ್ವಜ್ಞನೆಂದು ಘೋಷಿಸಲಾಗಿದೆ. ತಮ್ಮ ಬ್ರಹ್ಮ ಸೂತ್ರಗಳಲ್ಲಿ ವೇದವ್ಯಾಸರು ಈಶ್ವರನ ಸ್ವರೂಪವನ್ನು ವರ್ಣಿಸಿದ್ದಾರೆ. ವೇದದ ಮೂಲಕ ಹಾಗೂ ಅನುಮಾನದ ಮೂಲಕ ಎಲ್ಲವನ್ನೂ ತಿಳಿದಿರುವ ಈಶ್ವರನೊಬ್ಬನು ಇದ್ದಾನೆಂದು ಸಿದ್ಧಾಂತಿಸಬಹುದು. ಅನೇಕ ಲೌಕಿಕ ಶಬ್ದಗಳೂ ಈಶ್ವರನನ್ನು ಸೂಚಿಸುತ್ತವೆ. "ಭಗವಾನ್" ಎಂಬ ಶಬ್ದವು ಈಶ್ವರನನ್ನೇ ಸೂಚಿಸುತ್ತದೆ.

ಉತ್ಪತ್ತಿಂಚ ವಿನಾಶಂಚ ಭೂತಾನಾಮಾಗತಿಂ ಗತಿಮ್।
ವೇತ್ತಿವಿದ್ಯಾಮವಿದ್ಯಾಂಚ ಸವಾಚ್ಯೋ ಭಗವಾನಿತಿ॥

(ಯಾರು ಉತ್ಪತ್ತಿ ಮತ್ತು ವಿನಾಶ, ಬರುವುದು ಮತ್ತು ಹೋಗುವುದು, ವಿದ್ಯೆ ಮತ್ತು ಅವಿದ್ಯೆ-ಇವುಗಳನ್ನು ತಿಳಿದಿರುವನೋ ಅವನನ್ನು ಭಗವಾನ್ ಎಂದು ಕರೆಯಬೇಕು.)

ಇದರಿಂದ 'ಭಗವಾನ್' ಎಂಬ ಶಬ್ದವು ಈಶ್ವರನನ್ನು ಸೂಚಿಸುತ್ತದೆ, ಎಂದು ನಾವು ನಿರ್ಣಯಿಸಬಹುದು.

ಮಾಯೆಯನ್ನು ತನ್ನ ಶಕ್ತಿಯಾಗಿ ಉಳ್ಳವನೇ ಈಶ್ವರ. ಮಾಯೆಗೆ ಮೂರು ಗುಣಗಳಿರುತ್ತವೆ. ಮಾಯೆಯು ನಮ್ಮಲ್ಲಿ ಅಜ್ಞಾನವನ್ನುಂಟು ಮಾಡುವಂತೆ, ಈಶ್ವರನಲ್ಲಿಯೂ ಅಜ್ಞಾನವನ್ನುಂಟುಮಾಡುತ್ತದೆ. ಈ ರೀತಿ ಯೋಚನೆಮಾಡುವುದು ತಪ್ಪು. ಮಾಯೆಗೆ ದಾಸರಾಗಿರುವ ನಾವು ಮಾತ್ರ ಅದರ ಪ್ರಭಾವಕ್ಕೆ ಒಳಗಾಗಿದ್ದೇವೆ; ಮಾಯೆಯನ್ನು ಅಧೀನದಲ್ಲಿಟ್ಟುಕೊಂಡಿರುವ ಈಶ್ವರನು ಅದರ ಪ್ರಭಾವಕ್ಕೆ ಸಿಗುವುದಿಲ್ಲ. ಇದನ್ನು ಒಂದು ಉದಾಹರಣೆಯ ಮೂಲಕ ವಿವರಿಸಬಹುದು. ಒಂದು ಮ್ಯಾಜಿಕ್ ಪ್ರದರ್ಶನದಲ್ಲಿ ಪ್ರೇಕ್ಷಕರಾದ ನಮಗೆ ಭ್ರಾಂತಿಯುಂಟಾಗಬಹುದು. ಆದರೆ ಮ್ಯಾಜಿಕ್ ಮಾಡುವ ಐಂದ್ರಜಾಲಿಕನಿಗಲ್ಲ.

ಪ್ರಾಣಿಗಳಿಗೆ ಕರ್ಮಾನುಸಾರವಾಗಿ ಈಶ್ವರನು ದೇಹಗಳನ್ನು ಕೊಡುತ್ತಾನೆ. ಈಶ್ವರನಿಗೂ ಸಹ ಒಂದು ದೇಹವಿದೆಯೆಂದು ಅಂಗೀಕರಿಸುವುದಾದರೆ, ಆಗ ಅವನಿಗೂ ಸಹ ಸುಖ-ದುಃಖಗಳಿವೆಯೆಂದು ಅವಶ್ಯ ಒಪ್ಪಬೇಕಾಗುತ್ತದೆ. ಈಶ್ವರನಿಗೆ ದೇಹವಿದೆಯೆಂದು ಒಪ್ಪುವುದರಿಂದ ಏನಾದರೂ ದೋಷವಿದೆಯೆ? ದೇಹವಿದ್ದರೆ ಸುಖ-ದುಃಖಗಳಿದ್ದೇ ತೀರಬೇಕೆಂದು ವೇದವು ತಿಳಿಸುತ್ತದೆ. ಆದ್ದರಿಂದ ಈಶ್ವರನಿಗೂ ದೇಹವಿದೆಯೆಂದು ಒಪ್ಪುವುದು ತಪ್ಪಾಗುತ್ತದೆ.

ನ ಹ ವೈ ಸಶರೀರಸ್ಯ ಸತಃ ಪ್ರಿಯಾಪ್ರಿಯಯೋರಪಹತಿರಸ್ತಿ ॥

(ದೇಹವಿರುವ ವ್ಯಕ್ತಿಯು ಪ್ರಿಯಾಪ್ರಿಯಗಳ ಸಂಬಂಧವನ್ನು ಹೊಂದದಿರಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಸಾಧ್ಯವಿಲ್ಲ). ವೇದದ ಈ ವಾಕ್ಯವು ಸ್ಥೂಲ ಶರೀರವಿದ್ದರೆ ದುಃಖವಿರುತ್ತದೆಂಬುದನ್ನು ಸೂಚಿಸುತ್ತದೆ. ಪರಮಾತ್ಮನ ಅವತಾರದ ವಿಷಯ ಏನು ?

ಅಜೋಽಪಿ ಸನ್ನವ್ಯಯಾತ್ಮಾ ಭೂತಾನಾಮೀಶ್ವರೋಽಪಿ ಸನ್
ಪ್ರಕೃತಿಂ ಸ್ವಾಮಧಿಷ್ಠಾಯ ಸಂಭವಾಮ್ಯಾತ್ಮಮಾಯಯಾ ॥

(ನಾನು ಹುಟ್ಟಿಲ್ಲದವನೂ, ನಾಶವಿಲ್ಲದವನೂ, ಪ್ರಾಣಿಗಳಿಗೆ ಈಶ್ವರನಾಗಿದ್ದರೂ, ನನ್ನ ಪ್ರಕೃತಿಯನ್ನು ಆಶ್ರಯಿಸಿ, ನನ್ನ ಮಾಯೆಯ ಮೂಲಕ ಅವತಾರ ಮಾಡುತ್ತೇನೆ). ಈಶ್ವರನು ತನ್ನ ಮಾಯಾ ಶಕ್ತಿಯಿಂದ ದೇಹವನ್ನು ಹೊಂದುತ್ತಾನೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ಅವನು ಯಾವ ಬಂಧನಕ್ಕೂ ಒಳಗಾಗುವುದಿಲ್ಲ. ಇದಕ್ಕೆ ಏನಾದರೂ ಉದಾಹರಣೆ ಇದೆಯೆ ? ಎಂದರೆ—ಹೌದು ಇದೆ. ಮ್ಯಾಜಿಕ್ ಪ್ರದರ್ಶನವು ಉದಾಹರಣೆ. ಈಶ್ವರನು ಸುಖ–ದುಃಖಗಳಿಗೆ ಒಳಪಡುತ್ತಾನೆಂಬುದು ತಪ್ಪು. ಗೀತೆಯು ಹೇಳುವಂತೆ ಅವನಿಗೆ ಅವತಾರಗಳಿವೆಯೆಂದು ಒಪ್ಪಬೇಕು. ಮತ್ತು ವೇದವೂ ತಿಳಿಸುತ್ತದೆ.

ಅಜಾಯಮಾನೋ ಬಹುಧಾ ವಿಜಾಯತೇ ।

(ಜನಿಸಿದವನು ಬಹುವಿಧದಲ್ಲಿ ಆವಿರ್ಭವಿಸುತ್ತಾನೆ)

ಬಂಧನವಿಲ್ಲದವನು ಅವತಾರವನ್ನು ಏತಕ್ಕೆ ಎತ್ತಬೇಕು ? ಈಶ್ವರನೇ ಸ್ವತಃ ಕಾರಣವನ್ನು ತಿಳಿಸಿದ್ದಾನೆ. ಅವತಾರಗಳನ್ನು ಎತ್ತುವುದಕ್ಕೆ ಕರುಣೆಯೇ ಕಾರಣ.

ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ ।
ಅಭ್ಯುತ್ಥಾನಮಧರ್ಮಸ್ಯ ತದಾತ್ಮಾನಂ ಸೃಜಾಮ್ಯಹಮ್ ॥

(ಹೇ ಭಾರತ, ಯಾವಾಗ ಧರ್ಮಕ್ಕೆ ಹಾನಿಯುಂಟಾಗಿ, ಅಧರ್ಮವು ತಲೆ ಎತ್ತುತ್ತದೆಯೋ, ಆಗ ನಾನು ಅವತರಿಸುತ್ತೇನೆ).

ಆದ್ದರಿಂದ, ಜನಗಳ ಹಿತಕ್ಕಾಗಿಯೇ ಈಶ್ವರನು ಅವತರಿಸುತ್ತಾನೆ. ಅಂತಹ ದೇಹಗಳಿಂದ ಅವನಿಗೆ ಯಾವ ಬಂಧನವೂ ಆಗುವುದಿಲ್ಲ. ಅಂತಹ ದೇಹಗಳ ಉತ್ಪತ್ತಿ ಮತ್ತು ನಾಶದಿಂದ ಹಾಗೂ ಅಂತಹ ದೇಹಗಳಿಗೆ ಅಂಟಿಕೊಂಡಿರುವ ಸುಖ–ದುಃಖಗಳಿಂದ ಈಶ್ವರನಿಗೆ ಯಾವ ಬಂಧನವೂ ಉಂಟಾಗುವುದಿಲ್ಲ. ಅಂತಹ ಅವತಾರಗಳಲ್ಲಿ ರಾಮ ಮತ್ತು ಕೃಷ್ಣನ ದೇಹಗಳು ಉದಾಹರಣೆಗಳಾಗಿರುತ್ತವೆ. ಪ್ರಪಂಚದ ಉದ್ಧಾರಕ್ಕಾಗಿ ಅವರ ಮಾನವ ಶರೀರವನ್ನು ತೆಗೆದುಕೊಂಡಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಯದ್ಯದ್ವಿಭೂತಿಮತ್ಸತ್ತ್ವಂ ಶ್ರೀಮದೂರ್ಜಿತಮೇವ ವಾ ।
ತತ್ತದೇವಾವಗಚ್ಛ ತ್ವಂ ಮಮ ತೇಜೋಽಂಶಸಂಭವಮ್ ॥

(ಯಾವ ಯಾವ ವಸ್ತು ವಿಭೂತಿಯುಳ್ಳದ್ದೋ, ಶ್ರೀಯುಕ್ತವೋ ಅಥವಾ ಉತ್ಸಾಹದಿಂದ ಕೂಡಿದೆಯೋ ಅವೆಲ್ಲವೂ ನನ್ನ ತೇಜಸ್ಸಿನ ಒಂದು ಅಂಶದಿಂದ ಉಂಟಾದುದೆಂದು ತಿಳಿದುಕೋ).

ಈ ವಿಧವಾದ ವಾಕ್ಯಗಳಿಂದ ಮತ್ತು ಇತಿಹಾಸ ಪುರಾಣಗಳ ವಾಕ್ಯಗಳಿಂದ ರಾಮ, ಕೃಷ್ಣ ಮುಂತಾದವರ ದೇಹಗಳು ಪರಮಾತ್ಮನ ಅವತಾರಗಳೆಂದು ನಾವು ಅಂಗೀಕರಿಸಬೇಕು.

ಮಾಯೆಗೆ ಮೂರು ಗುಣಗಳಿವೆ. ಈ ಮೂರು ಗುಣಗಳನ್ನು ಗಮನದಲ್ಲಿಟ್ಟುಕೊಂಡು, ಹಾಗೂ ಭಕ್ತರ ಉಪಾಸನೆಗೆ ಅನುಕೂಲವಾಗಲೆಂದು, ಬೇರೆ ಬೇರೆ ಹೆಸರುಗಳಿಂದ ಕೂಡಿದ ಪರಮಾತ್ಮನ ಮೂರು ರೂಪಗಳನ್ನು ಶಾಸ್ತ್ರಗಳು ತಿಳಿಸುತ್ತವೆ. ಪರಮಸತ್ಯದ ದೃಷ್ಟಿಯಿಂದ ಬ್ರಹ್ಮ, ವಿಷ್ಣು ಮತ್ತು ಶಿವ – ಇವರಲ್ಲಿ ಯಾವ ಭೇದವೂ ಇಲ್ಲ.

ಶಿವಾಯ ವಿಷ್ಣುರೂಪಾಯ ಶಿವರೂಪಾಯ ವಿಷ್ಣವೇ

(ವಿಷ್ಣುವಿನ ರೂಪದಲ್ಲಿರುವ ಶಿವನಿಗೂ, ಶಿವನ ರೂಪದಲ್ಲಿರುವ ವಿಷ್ಣುವಿಗೂ ನಮಸ್ಕಾರ).

ಯಥಾ ಶಿವಮಯೋ ವಿಷ್ಣುಃ ಏವಂ ವಿಷ್ಣುಮಯಃ ಶಿವಃ

(ವಿಷ್ಣುವು ಶಿವಮಯನಾಗಿರುವಂತೆ, ಶಿವನು ವಿಷ್ಣುಮಯನಾಗಿರುತ್ತಾನೆ). ಈ ರೀತಿ ಹೇಳಲಾಗಿದೆ ; ಪರಮಾತ್ಮನ ಏಕ ಹಾಗೂ ಗುಣ-ದೋಷರಹಿತನಾಗಿದ್ದರೂ, ಸೃಷ್ಟಿ ಇತ್ಯಾದಿ ಕ್ರಿಯೆಗಳ ಕಾರಣದಿಂದ ಅವನು ಮೂರು ರೂಪಗಳನ್ನು ಹೊಂದಿರುತ್ತಾನೆಂದು ಪುರಾಣಗಳು ತಿಳಿಸುತ್ತವೆ. ಅಂತಹ ಈಶ್ವರನನ್ನು ವೇದಗಳು ಹೀಗೆ ತಿಳಿಸುತ್ತವೆ.

ಸತ್ಯಕಾಮಃ ಸತ್ಯಸಂಕಲ್ಪಃ

(ಸತ್ಯಕಾಮನೂ, ಸತ್ಯಸಂಕಲ್ಪವುಳ್ಳವನೂ)

ಆದ್ದರಿಂದ ವೇದಗಳು, ಇತಿಹಾಸ-ಪುರಾಣಗಳು ಮತ್ತು ನಮ್ಮ ಅನುಭವಗಳು ಪ್ರಪಂಚದ ಸೃಷ್ಟಿ, ಸ್ಥಿತಿ, ಲಯಗಳಿಗೆ ಬಾಧ್ಯನಾದ ಈಶ್ವರನೊಬ್ಬನಿದ್ದಾನೆಂದು ನಾವು

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಗೀಕರಿಸಬೇಕು ; ಅವನು ಎಲ್ಲರನ್ನೂ ಅನುಗ್ರಹಿಸುತ್ತಾನೆ ಮತ್ತು ಅವನನ್ನು ಸ್ಮರಿಸುವುದರಿಂದ ಸದ್ಗತಿಯುಂಟಾಗುತ್ತದೆ. ಪರಿಸ್ಥಿತಿ ಹೀಗಿರುವಾಗ ಯಾವುದೋ ದುರದೃಷ್ಟದಿಂದ, ಈಶ್ವರನನ್ನು ಮರೆಯುವ ಕೆಲವು ಜನರಿದ್ದಾರೆ. ವಿಷಯ ಸೌಖ್ಯಗಳಲ್ಲಿ ಆಸಕ್ತಿಯೇ ಇದಕ್ಕೆ ಕಾರಣ. ಈ ರೀತಿ ನಶ್ವರವಾದ ಸೌಖ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು, ಶಾಶ್ವತ ಸೌಖ್ಯವನ್ನು ನಮಗೆ ಕರುಣಿಸುವ ಈಶ್ವರನನ್ನು ಮರೆಯುತ್ತಾರೆ.

ಲಬ್ಧ್ವಾಽಪಿ ಕಾಮಧೇನುಂ ತೇ ಲಾಂಗಲೇ ವಿನಿಯುಂಜ್ಯತೇ ।

(ಸಕಲ ಇಷ್ಟಾರ್ಥಗಳನ್ನೂ ಕೊಡುವ ಕಾಮಧೇನುವನ್ನು ಹೊಂದಿದರೂ, ಅದನ್ನು ನೇಗಲಿಗೆ ಕಟ್ಟುತ್ತಾನೆ).

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।

(ನನ್ನಲ್ಲಿ ಮನಸ್ಸನ್ನು ನಿಲ್ಲಿಸು ; ನನ್ನ ಭಕ್ತನಾಗು ; ನನಗೋಸ್ಕರ ಯಾಗ ಮಾಡು ; ನನಗೆ ನಮಸ್ಕರಿಸು) ಇದಕ್ಕನುಗುಣವಾಗಿ ನಾವು ಜೀವನ ನಡೆಸಬೇಕು.

ಅರಹಸಿ ರಹಸಿ ಸ್ವತಂತ್ರಬುದ್ಧ್ಯಾ....

(ಗೊತ್ತಾಗುವಂತಾಗಲೀ ಅಥವಾ ರಹಸ್ಯದಲ್ಲಾಗಲೀ, ಸ್ವತಂತ್ರಬುದ್ಧಿಯಿಂದ....)
ಈ ಶ್ಲೋಕದಲ್ಲಿ ಹೇಳಿರುವಂತಹ ಈಶ್ವರನಿಗೆ ನಮಸ್ಕಾರಗಳನ್ನು ಸಲ್ಲಿಸೋಣ.

ಶ್ರೀ ಶಂಕರರು

ಈಶ್ವರನ ನಿಃಶ್ವಾಸದಂತಿರುವ ವೇದಗಳು ಅನಾದಿ ಕಾಲದಿಂದಲೂ ಎಲ್ಲರ ಆಧ್ಯಾತ್ಮಿಕ ಮತ್ತು ಲೌಕಿಕ ಅಭ್ಯುದಯಕ್ಕಾಗಿ ಇವೆ. ವೇದಗಳ ಆಧಾರದ ಮೇಲೆ ಸ್ಮೃತಿಗಳೂ ಸಹ ರಚಿತವಾಗಿವೆ. 'ಅನಾದಿಕಾಲ'ವೆಂದರೆ ಈ ಭೂಮಿಯ ಮೇಲೆ ಮಾನವನು ಕಾಣಿಸಿಕೊಂಡ ಕಾಲ ಎಂದರ್ಥ. ನಮ್ಮ ಅಭ್ಯುದಯಕ್ಕಾಗಿ ಈಶ್ವರನು ವೇದಗಳನ್ನು ಬೋಧಿಸಿದನು ಎಂದು ಶಾಸ್ತ್ರಗಳಿಂದ ಹಾಗೂ ನಮ್ಮ ಸಂಪ್ರದಾಯದಿಂದ ತಿಳಿಯುತ್ತೇವೆ. ಪಾಂಚಭೌತಿಕ ದೇಹದಿಂದ ಮಾಡಬೇಕಾದ ಕರ್ಮಗಳನ್ನು ವೇದಗಳು ತಿಳಿಸುತ್ತವೆ. ವಿಶ್ವವನ್ನು ನಿಯಮನಗೊಳಿಸುವ ಧರ್ಮವನ್ನು ಕುರಿತು ಏಕಾಗ್ರತೆಯನ್ನು ಹೊಂದಲು ಉಪಾಸನೆಯನ್ನೂ ಮತ್ತು ವಿಶ್ವವನ್ನು ಸೃಷ್ಟಿಮಾಡಿದ ಈಶ್ವರನ ಸ್ವರೂಪವನ್ನು ಸಾಕ್ಷಾತ್ಕರಿಸಿಕೊಳ್ಳಲು ಜ್ಞಾನವನ್ನೂ ತಿಳಿಸುತ್ತವೆ. ಕರ್ಮ, ಉಪಾಸನಾ ಮತ್ತು ಜ್ಞಾನ—ಇವುಗಳನ್ನು ಕುರಿತು ಅನೇಕ ಕಡೆಗಳಲ್ಲಿ ಪ್ರಾಧಾನ್ಯವನ್ನು ಕೊಡಲಾಗಿದೆ. ಒಂದು ವಿಷಯಕ್ಕೆ ಪ್ರಾಧಾನ್ಯವನ್ನು ಕೊಟ್ಟಾಗ, ಸ್ವಾಭಾವಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಮತ್ತೊಂದು ವಿಷಯದ ಮೇಲೆ ಅಷ್ಟು ಪ್ರಾಧಾನ್ಯವನ್ನು ಕೊಡುವುದಿಲ್ಲ. ಪ್ರಾಪಂಚಿಕ ಹಾಗೂ ಲೌಕಿಕ ಸುಖಗಳನ್ನು ನಾವು ಅಪೇಕ್ಷಿಸುವುದಾದರೆ, ಆಗ ಕರ್ಮ ಮತ್ತು ಉಪಾಸನೆಗಳಿಗೆ ಪ್ರಾಧಾನ್ಯವನ್ನು ಕೊಡಬೇಕಾಗುತ್ತದೆ. ಆದರೆ ಅವುಗಳಲ್ಲಿ ಶ್ರೇಷ್ಠವಾಗಿರುವುದು ಜ್ಞಾನ. ಜ್ಞಾನ ಹೊಂದುವುದಕ್ಕೆ ಕರ್ಮ ಮತ್ತು ಉಪಾಸನೆಗಳನ್ನು ಉಪಯೋಗಿಸಲಾಗುತ್ತದೆ. ಕೇವಲ ಕರ್ಮ ಮತ್ತು ಉಪಾಸನೆಗಳಲ್ಲಿಯೇ ನಿಂತರೆ, ಜ್ಞಾನವನ್ನು ಹೊಂದಲು ಸಾಧ್ಯವಾಗುವುದಿಲ್ಲ. ಅನೇಕ ಶತಮಾನಗಳ ಹಿಂದೆ ಕರ್ಮ ಮತ್ತು ಉಪಾಸನೆಗಳಿಗೆ ಮಾತ್ರ ಪ್ರಾಧಾನ್ಯವನ್ನು ಕೊಡಲಾಗಿತ್ತು. ಜ್ಞಾನಕ್ಕೆ ಸಾಧನ ಶ್ರವಣ, ಮನನ ಮತ್ತು ನಿದಿಧ್ಯಾಸನಗಳನ್ನು ಕಡೆಗಣಿಸಲಾಗಿತ್ತು ಮತ್ತು ಜನರು ಕೇವಲ ಯಾಂತ್ರಿಕಜೀವನವನ್ನು ನಡೆಸುತ್ತಿದ್ದರು. ಆ ದಿನಗಳಲ್ಲಿ, ಕೇವಲ ತಮ್ಮ ತರ್ಕದಿಂದ ಶ್ರೇಯಸ್ಸನ್ನು ಹೊಂದಲು ಸಾಧ್ಯವೆಂದು ಜನರು ತಿಳಿದಿದ್ದರು. ಇದರ ಫಲವಾಗಿ, ವೇದಗಳ ಆಧಾರವಿಲ್ಲದ, ಕೇವಲ ಮನಸ್ಸಿನಲ್ಲಿ ಕಲ್ಪಿತವಾದ, ಅನೇಕ ಮತಗಳು ಅಸ್ತಿತ್ವಕ್ಕೆ ಬಂದವು. ಇದಕ್ಕೆ ಅನೇಕ ಕಾರಣಗಳಿವೆ.

> ಭಕ್ಷ್ಯಾದ್ಯನಿಯಮ ಇತಿ ರಾಗಿಣಃ, ಸ್ವೇಚ್ಛಯಾ ದಾರಪರಿಗ್ರಹ
> ಇತಿ ಕುತರ್ಕಾಭ್ಯಾಸಿನಃ, ಕರ್ಮಲಾಘವಮಿತ್ಯಲಸಾಃ, ಇತಃಪತಿ
> ತಾನಾಮಪ್ಯತ್ರ್ಯಾಸು ಪ್ರವೇಶ ಇತಿ ಅನನ್ಯಗತಿಕಾಃ—

(ಊಟಾದಿ ವಿಷಯಗಳಲ್ಲಿ ಯಾವ ನಿಯಮವೂ ಇಲ್ಲ ಎಂದು ಆಶಿಬುರುಕರು; ತಮ್ಮ ಇಚ್ಛೆಗೆ ತೋರಿದಂತೆ ಮದುವೆ ಮಾಡಿಕೊಳ್ಳಬಹುದೆಂದು ಕುತರ್ಕಿಗಳು, ಕರ್ಮವನ್ನು ಲಘುವಾಗಿ ತೆಗೆದುಕೊಳ್ಳಬಹುದೆಂದು ಸೋಮಾರಿಗಳು, ಪತಿತರಾದವರಿಗೂ ಇಲ್ಲಿ ಪ್ರವೇಶವಿದೆ ಎಂದು ದಿಕ್ಕಿಲ್ಲದವರು........)

ಈ ಕಾರಣಗಳಿಂದಾಗಿ, ಜನರು ತಪ್ಪು ದಾರಿಯನ್ನು ಹಿಡಿದಿದ್ದರು. ತಮ್ಮ ತರ್ಕದ ಬಲದಿಂದ ಪ್ರತಿಯೊಬ್ಬರೂ ಬೇರೆ ಬೇರೆ ಸಿದ್ಧಾಂತಗಳನ್ನು ಮಾಡಿದರೆ, ಸರಿಯಾದ ಸಿದ್ಧಾಂತವೆಂದು ಎಲ್ಲರೂ ಅಂಗೀಕರಿಸಿರುವುದನ್ನು ಹೇಗೆ ತಾನೆ ಹೊಂದಲಾಗುತ್ತದೆ ?

> ಕೈಶ್ಚಿದಭಿಯುಕ್ತೈರ್ಯತ್ನೇನೋತ್ಪ್ರೇಕ್ಷಿತಾಸ್ತರ್ಕಾ
> ಅಭಿಯುಕ್ತತರೈರನ್ಯೈರಾಭಾಸ್ಯಮಾನಾ ದೃಶ್ಯಂತೇ ||

(ಬುದ್ಧಿವಂತರಾದ ಕೆಲವರು ಯಾವುದನ್ನು ತಮ್ಮ ತರ್ಕದಿಂದ ಸರಿ ಎಂದು ತೋರಿಸುತ್ತಾರೋ, ಅದನ್ನು ತಪ್ಪೆಂದು ಅವರಿಗಿಂತ ಬುದ್ಧಿವಂತರೂ ತೋರಿಸುತ್ತಾರೆ.)

Sri Vidyabharathi Book Centre, Sringeri

CC-O. In Public Domain. Digitized by eGangotri

ಇದನ್ನು ನಾವು ಸ್ಮರಣೆಯಲ್ಲಿಟ್ಟುಕೊಳ್ಳಬೇಕು : ಪರಮಾತ್ಮನೊಬ್ಬನಿದ್ದಾನೆ. ಅವನು ಮಾನವರನ್ನು ಸೃಷ್ಟಿ ಮಾಡಿದಾಗ, ಅದರ ಜೊತೆಯಲ್ಲಿ ಅವನು ಅವರಿಗೆ ತನ್ನ ನಿಯಮಗಳನ್ನು ಕೊಟ್ಟಿರಬೇಕು. ಇದು ಸ್ವಾಭಾವಿಕ. ರಾಜ್ಯವನ್ನಾಳಲು ಅಪೇಕ್ಷೆಯಿರುವ ರಾಜನು ತನ್ನ ನಿಯಮಗಳನ್ನು ಹಾಕುವಂತೆ, ನಮಗೆ ನಮ್ಮ ಶಾಸ್ತ್ರಗಳಿರಬೇಕು ಮತ್ತು ಆ ಶಾಸ್ತ್ರಕ್ಕನುಗುಣವಾಗಿ, ಕರ್ಮಗಳ ಫಲಗಳಿರಬೇಕು. ಒಂದು ವೇಳೆ ಈಶ್ವರನು, ಮೊದಲು ನಿಯಮಗಳನ್ನು ಹಾಕದೇ, ತನ್ನ ಪ್ರಜೆಗಳನ್ನು ಆಳುವುದಾದರೆ, ಅದಕ್ಕೆ ಯಾವ ಪ್ರಯೋಜನವೂ ಇಲ್ಲ. ಜೀನು ಇಲ್ಲದೆ ಕುದುರೆಯ ಮೇಲೆ ಸವಾರಿ ಮಾಡುವುದಕ್ಕೆ ಪ್ರಯತ್ನಿಸುವಂತೆ ಆಗುತ್ತದೆ. ವೇದಗಳ ಆಧಾರ ವಿಲ್ಲದ ಮತಗಳು ಅಭಿವೃದ್ಧಿಯಾದಂತೆ, ಜನಗಳಿಗೆ ವೇದಗಳ ಮೇಲಿನ ಶ್ರದ್ಧೆ ಕಡಿಮೆ ಯಾಗುತ್ತಾ ಬಂದಿತು. ಇಂತಹ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಪೂರ್ಣಾನದಿಯ ದಡದ ಮೇಲೆ, ಶ್ರೀ ಕೃಷ್ಣನ ದೇವಸ್ಥಾನದಿಂದ ಪವಿತ್ರವಾದ, ಪವಿತ್ರನಾದ ಹಾಗೂ ಪರಿಶುದ್ಧವಾದ ವಂಶದಲ್ಲಿ ಆದಿಶಂಕರ ಭಗವತ್ಪಾದರು ಅವತರಿಸಿದರು.

ಅವರು ತಮ್ಮ ಬಾಲ್ಯದಲ್ಲಿಯೇ ಎಲ್ಲಾ ಶಾಸ್ತ್ರಗಳನ್ನೂ ಅಧ್ಯಯನ ಮಾಡಿದ್ದರು. ಅವರ ಜ್ಞಾನಫಲವಾಗಿ, ಅವರಿಗೆ ಪ್ರಾಸಂಚಿಕ ಸೌಖ್ಯಗಳ ಕಡೆ ಆಶೆ ಇರಲಿಲ್ಲ. ವೇದಗಳ ಆಧಾರವಿಲ್ಲದ ಮತಗಳನ್ನು ಹಾಗೆಯೇ ಬಿಡಬಾರದು ಎಂಬ ಅಭಿಪ್ರಾಯವನ್ನು ಹೊಂದಿದ್ದರು. ತಂದೆ–ತಾಯಿಗೆ ಅವರು ಒಬ್ಬನೇ ಮಗ ಮತ್ತು ಅವರ ತಂದೆ ದಿವಂಗತರಾಗಿದ್ದರು. ಆದರೆ, ವಿಶ್ವದ ಕಲ್ಯಾಣವೇ ಅವರ ಆಸೆ ಯಾಗಿದ್ದಿತು. ಅವರು ಓರ್ವ ಸಂತ.

ಅಯಂ ನಿಜಃ ಪರೋವೇತಿ ಗಣನಾ ಲಘುಚೇತಸಾಂ ।
ಉದಾರಚರಿತಾನಾಂತು ವಸುಧೈವ ಕುಟುಂಬಕಮ್ ॥

(ಇವನು ತನ್ನವನು ; ಅವನು ಬೇರೆಯವನು ; ಈ ರೀತಿಯಾಗಿ ಗಣನೆ ಮಾಡುವವರು ಅಲ್ಪಬುದ್ಧಿಯಿರುವವರು; ಆದರೆ ಉದಾರ ಚರಿತರಾದವರಿಗೆ ವಿಶ್ವವೇ ಅವರ ಕುಟುಂಬ).

ಶಂಕರರು ಇದಕ್ಕೆ ನಿದರ್ಶನ. ಪ್ರಾಚೀನರ ಈ ಮಾತು ಶ್ರೀ ಶಂಕರ ಭಗವತ್ಪಾದರ ರೂಪದಲ್ಲಿ ಜೀವಂತವಾಗಿದ್ದಿತು. ಮನೆಬಿಟ್ಟು ಹೋಗುವುದರಿಂದ ತಾಯಿಯ ಮನಸ್ಸಿಗೆ ದುಃಖವನ್ನುಂಟುಮಾಡುವುದೂ ಸರಿಯಾಧುದಲ್ಲ. ಈ ಸಂವರ್ಭದಲ್ಲಿ, ಅವರು ಪೂರ್ಣಾನದಿಯಲ್ಲಿ ಒಮ್ಮೆ ಸ್ನಾನ ಮಾಡುತ್ತಿದ್ದಾಗ, ಮೊಸಳೆಯು ಅವರನ್ನು ಹಿಡಿಯಿತು. ಆಗ ಶಂಕರರು ತಮ್ಮ ತಾಯಿಯನ್ನು ಕರೆದರು. ಅವರು ಬಂದು ದಿಗ್ಭ್ರಾಂತರಾದರು. ಶಂಕರರು ಆಗ ಹೇಳಿದರು—

Sri Vidyabharathi Book Centre, Sringeri

CC-O. In Public Domain. Digitized by eGangotri

“ಸಂನ್ಯಾಸವೆಂದರೆ ಎಲ್ಲರಿಗೂ ಅಭಯವನ್ನು ನೀಡುವುದು. ಯಾವುದೋ ಕಾರಣಕ್ಕಾಗಿ ನನ್ನ ವಿಷಯದಲ್ಲಿ ಭೀತಿಗೊಂಡ ಈ ಮೊಸಳೆಯು ನನ್ನನ್ನು ಹಿಡಿದಿದೆ. ನಾನು ಯಾರಿಗೂ ತೊಂದರೆ ಮಾಡದಿದ್ದರೆ, ಈ ಮೊಸಳೆಯು ನನ್ನನ್ನು ಬಿಟ್ಟುಹೋಗುತ್ತದೆ. ಅದಕ್ಕಾಗಿ ನಾನು ಸಂನ್ಯಾಸವನ್ನು ಸ್ವೀಕರಿಸಬೇಕು. ಆದ್ದರಿಂದ ಸಂನ್ಯಾಸ ಸ್ವೀಕಾರಕ್ಕೆ ನೀವು ನನಗೆ ಅನುಮತಿ ನೀಡಬೇಕು”. ನಿಸ್ಸಹಾಯಕಳಾದ ತಾಯಿಯು ಆ ಮಾತುಗಳಿಗೆ ಒಪ್ಪಬೇಕಾಯಿತು. ಯಾವುದರಲ್ಲಿಯೂ ಆಸಕ್ತಿಯಿಲ್ಲದ ಅವರು ಗುರುವನ್ನು ಅರಸುತ್ತಾ ನರ್ಮದಾ ನದಿಯ ದಡವನ್ನು ಸಮೀಪಿಸಿದರು. ಅಲ್ಲಿ ಅವರು ಗೋವಿಂದ ಭಗವತ್ಪಾದರಿಂದ ಸಂನ್ಯಾಸ ಸ್ವೀಕಾರ ಮಾಡಿದರು. ತಮ್ಮ ಗುರುಗಳಾದ ಗೋವಿಂದ ಭಗವತ್ಪಾದರಿಂದ ಶಂಕರರು ಸಂಪ್ರದಾಯ ರೀತಿಯಲ್ಲಿ ಆಧ್ಯಾತ್ಮಿಕ ವಿದ್ಯೆಯನ್ನು ಪಡೆದರು. ಗುರುಮುಖೇನ ಅಧ್ಯಯನ ಮಾಡುವುದರಿಂದಲೇ ಅದು ಸಂಪ್ರದಾಯವಾಗುತ್ತದೆ.

ಶಂಕರರ ಕೆಲವು ಶಕ್ತಿಗಳನ್ನು ನೋಡಿ ಅವರ ಗುರುಗಳು ಆಶ್ಚರ್ಯಪಟ್ಟರು ಹಾಗೂ ಸಂತೋಷಪಟ್ಟರು. ಲೋಕಕಲ್ಯಾಣಕ್ಕಾಗಿ ಗುರುಗಳು ಶಂಕರರನ್ನು ಬ್ರಹ್ಮಸೂತ್ರಗಳು, ಉಪನಿಷತ್ತುಗಳು, ಮತ್ತು, ಭಗವದ್ಗೀತೆಯ ಮೇಲೆ ಭಾಷ್ಯಗಳನ್ನು ಬರೆಯುವಂತೆ ಆದೇಶಿಸಿದರು. ಮತ್ತು ಶ್ವೇತಾಶ್ವತರ ಉಪನಿಷತ್ ಸನತ್ಸುಜಾತೀಯಂ (ಮಹಾಭಾರತದಲ್ಲಿರುವುದು)—ಇವುಗಳ ಮೇಲೂ ಭಾಷ್ಯ ಬರೆದರು. ಅವರು ಇನ್ನೂ ಕೆಲವು ಗ್ರಂಥಗಳನ್ನು ರಚಿಸಿದರು. ಸರ್ವವ್ಯಾಪಿಯಾದ ಬ್ರಹ್ಮವೊಂದೇ ಸತ್ಯವೆಂದು ಅವರು ಸ್ಪಷ್ಟಪಡಿಸಿದರು. ಅದೇ ಪರಮಾರ್ಥ ಸತ್ಯವೆಂದರು. ಶಂಕರರ ಭಾಷ್ಯಗಳು ಮನೋಹರವಾದ ದೃಷ್ಟಾಂತಗಳಿಂದ ಕೂಡಿವೆ. ಶಾಸ್ತ್ರಗಳ ಮೇಲೆ ವ್ಯಾಖ್ಯಾನ ಮಾಡಲು ಸಾಮರ್ಥ್ಯವುಳ್ಳ ವಿದ್ವಾಂಸರು ಮಾತ್ರ ಅವರ ಗ್ರಂಥಗಳನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬಲ್ಲರು. ಶಂಕರರು ತಮ್ಮ ಭಾಷ್ಯಗಳಲ್ಲಿ ತಾರ್ಕಿಕರ ಎಲ್ಲ ರೀತಿಯ ಯುಕ್ತಿಗಳಿಗೂ ಸ್ಪಷ್ಟವಾಗಿ ಉತ್ತರ ನೀಡಿದ್ದಾರೆ. ಈ ಗ್ರಂಥಗಳು ವಿದ್ವಾಂಸರಿಗೆ ಅತ್ಯಂತ ಸಂತೋಷವನ್ನುಂಟು ಮಾಡುತ್ತವೆ. ಆದರೆ, ಕೇವಲ ವಿದ್ವಾಂಸರ ಅನುಕೂಲಕ್ಕಾಗಿ ಮಾತ್ರ ಶಂಕರರು ಭೂಮಿಯ ಮೇಲೆ ಅವತರಿಸಲಿಲ್ಲ. ಪ್ರತಿಯೊಬ್ಬರಿಗೂ ಶ್ರೇಯಸ್ಸಾಗಬೇಕು ಮತ್ತು ಪ್ರತಿಯೊಬ್ಬರೂ ಸಂಸಾರ ಸಾಗರವನ್ನು ದಾಟಬೇಕು ಎಂಬುದು ಆದಿಶಂಕರರ ಅಭಿಪ್ರಾಯವಾಗಿತ್ತು. ಇದಕ್ಕಾಗಿ ಅವರು ವಿವೇಕ ಚೂಡಾಮಣಿ, ಉಪದೇಶ ಸಾಹಸ್ರೀ, ಪ್ರಬೋಧ ಸುಧಾಕರ, ಮುಂತಾದ ಅನೇಕ ಪ್ರಕರಣ ಗ್ರಂಥಗಳನ್ನು ರಚನೆ ಮಾಡಿರುತ್ತಾರೆ. ಇವುಗಳನ್ನು ಅಧ್ಯಯನ ಮಾಡುವುದಕ್ಕೆ ಅನೇಕ ದಿನಗಳು ಬೇಕಾಗುವುದಿಲ್ಲ. ಈ ಗ್ರಂಥಗಳಲ್ಲಿರುವ ವಿಷಯಗಳನ್ನು ಅರ್ಥ ಮಾಡಿಕೊಳ್ಳುವುದಕ್ಕೆ ಶಾಸ್ತ್ರಗಳ ಜ್ಞಾನವು ಅವಶ್ಯವೇನಿಲ್ಲ. ಈ ಗ್ರಂಥಗಳಲ್ಲಿ ಶಂಕರರು ಏನು ಹೇಳಿದ್ದಾರೆ ಎಂದು ಅರ್ಥ ಮಾಡಿಕೊಳ್ಳುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಂಸ್ಕೃತದ ಜ್ಞಾನ ಮತ್ತು ಶ್ರದ್ಧೆ ಇದ್ದರೆ ಸಾಕು. ಶಂಕರರು ಕೇರಳದಲ್ಲಿ ಜನ್ಮವೆತ್ತಿ ದವರು. ಆದ್ದರಿಂದ, ಆ ದೇಶ ಭಾಷೆಯು ಅವರ ಮಾತೃಭಾಷೆಯಾಗಿದ್ದಿರಬೇಕು. ಆದರೆ, ಅವರು ವಿಶಾಲ ಮನಸ್ಸುಳ್ಳವರಾದ್ದರಿಂದ, ಆ ಭಾಷೆಯಲ್ಲಿ ಅವರು ಗ್ರಂಥ ರಚನೆ ಮಾಡಲಿಲ್ಲ. ಆ ಕಾಲದಲ್ಲಿ ಸಮಗ್ರ ಭಾರತದಲ್ಲಿ ವಿದ್ವಾಂಸರು ಸಂಸ್ಕೃತವನ್ನು ಉಪಯೋಗಿಸುತ್ತಿದ್ದರು. ಆ ಭಾಷೆಯಲ್ಲಿ ವಿದ್ವಾಂಸರು ವ್ಯವಹರಿಸುತ್ತಿದ್ದರು. ಆದ್ದರಿಂದ ಸಮಗ್ರ ಭಾರತದಲ್ಲಿ ಹರಡುವಂತೆ ಅವರು ತಮ್ಮ ಗ್ರಂಥಗಳನ್ನು ಸಂಸ್ಕೃತ ದಲ್ಲಿ ರಚನೆ ಮಾಡಿದರು. ಧರ್ಮಕ್ಕೆ ಮೂಲವಾದುದು ವೇದ. ವೇದಗಳು ಸಂಸ್ಕೃತ ದಲ್ಲಿವೆ. ಆದ್ದರಿಂದ, ಶಂಕರರು ತಮ್ಮ ಗ್ರಂಥಗಳನ್ನು ಸಂಸ್ಕೃತದಲ್ಲಿ ರಚನೆ ಮಾಡಿರು ವುದು ಸ್ವಾಭಾವಿಕ. ಭಗವತ್ಪಾದರು ತಮ್ಮದೇ ಆದ ಹೊಸ ಪಂಥವೊಂದನ್ನು ಪ್ರಚಾರ ಮಾಡಲು ಅವತರಿಸಿದವರಲ್ಲ. ಇದು ವ್ಯರ್ಥ ಕೂಡ. "ವೇದಗಳ ನಿಯಮ ಗಳೇನು ? ಅವನ್ನು ನಾವು ಕಡೆಗಣಿಸಬಹುದೇ ? ಅವುಗಳನ್ನು ನಾವು ಕಡೆಗಣಿಸಿ ದರೆ, ನಮಗೆ ಶ್ರೇಯಸ್ಸು ದೊರಕುವುದಿಲ್ಲ. ಅವುಗಳನ್ನು ಕಡೆಗಣಿಸಿದರೆ, ನಮಗೆ ಸತ್ಯದ ಜ್ಞಾನ ಬರುವುದಿಲ್ಲ"—ಈ ರೀತಿ ಇದ್ದವು ಅವರ ಉಪದೇಶಗಳು; ಮತ್ತು ಯಾವ ಹೊಸ ಪಂಥವೂ ಅಲ್ಲ. ವೇದಗಳೇ ಸಂಸ್ಕೃತದಲ್ಲಿರುವುದರಿಂದ, ವೇದಗಳ ವಿಷಯಗಳನ್ನು, ಬೇರೆ ಭಾಷೆಯಲ್ಲಿ ಶಂಕರರು ಸ್ಪಷ್ಟಪಡಿಸುವುದು ಹೇಗೆ ತಾನೇ ಸಮಂಜಸವಾಗುತ್ತಿದ್ದಿತು. ಎಲ್ಲರಿಗೂ ವಿವೇಕ, ವೈರಾಗ್ಯ, ಶಮಾದಿ ಸಾಧನ ಸಂಪತ್ತು ಮತ್ತು ಮೋಕ್ಷೇಚ್ಛೆ ಇರುವುದಿಲ್ಲ. ವೇದಗಳಿಂದ ಜ್ಞಾನವನ್ನು ಹೊಂದಲು ಅತ್ಯವಶ್ಯವಾದ ಶ್ರವಣ, ಮನನ, ಮತ್ತು ನಿದಿಧ್ಯಾಸನಗಳನ್ನು ಹೊಂದಲು ಇವರಿಗೆ ಅಧಿಕಾರವಿರುವುದಿಲ್ಲ. ಇವರಿಗೂ ಶ್ರೇಯಸ್ಸಾಗಬೇಕು. ಪರಮಾತ್ಮನ ಅನುಗ್ರಹವಿದ್ದರೆ, ಯಾವ ಪ್ರಯತ್ನವೂ ಇಲ್ಲದೆ ಏನನ್ನು ಬೇಕಾದರೂ ಹೊಂದ ಬಹುದು. ಆದ್ದರಿಂದ ಅವರು ಮಂತ್ರಶಾಸ್ತ್ರದ ಮೇಲೆ "ಪ್ರಪಂಚ ಸಾರ"ವೆಂಬ ಗ್ರಂಥ ವನ್ನು ರಚಿಸಿದರು. ಎಲ್ಲರೂ ದೇವತೆಗಳನ್ನು ಪ್ರಾರ್ಥನೆ ಮಾಡಬೇಕು. ತನ್ಮೂಲಕ ಈಶ್ವರಾನುಗ್ರಹವನ್ನು ಹೊಂದಿ ಇಹ-ಪರಗಳೆರಡರಲ್ಲಿ ಒಳ್ಳೆಯದನ್ನು ಹೊಂದಬೇಕೆಂಬ ಸದ್ಭಾವನೆಯನ್ನು ಅವರು ಹೊಂದಿದ್ದರು. ಈಶ್ವರಾನುಗ್ರಹದಿಂದ ಈ ಜನರೂ ಸಹ ವೇದಾಂತ ತತ್ತ್ವಜ್ಞಾನವನ್ನು ಹೊಂದಲಿ ಎಂಬುದು ಅವರ ಅಪೇಕ್ಷೆಯಾಗಿದ್ದಿತು. ಇಂತಹ ಒಂದು ಮಹತ್‌ಸಂಕಲ್ಪವೇ ಅವರು ಸ್ತೋತ್ರಗಳನ್ನು ರಚನೆ ಮಾಡುವುದಕ್ಕೆ ಪ್ರೇರಣೆಯಾಯಿತು. ಶಿವಾನಂದ ಲಹರೀ, ಸೌಂದರ್ಯ ಲಹರೀ, ಮುಂತಾದುವು— ಇವುಗಳನ್ನು ಓದುವುದರಿಂದ ಎಲ್ಲರೂ ಶ್ರೇಯಸ್ಸನ್ನು ಪಡೆಯಬಹುದು. ಭಗವತ್ಪಾದರು ಆಸೇತು ಹಿಮಾಚಲ ಪರ್ಯಂತ ಎರಡು ಬಾರಿ ಭಾರತದಲ್ಲಿ ಸಂಚರಿಸಿದರು. ತಮ್ಮ ಪ್ರತಿಭೆ ಮತ್ತು ಜ್ಞಾನದಿಂದ ಎಲ್ಲ ವಿದ್ವಾಂಸರ ಮನವೊಲಿಸಿದರು. ಆ ಸಮಯದಲ್ಲಿ ಅನೇಕ ಮತಗಳು ಪ್ರಚಲಿತವಿದ್ದವು. ಅವರೆಲ್ಲರೂ ವೇದವನ್ನು ಅನುಸರಿಸುವಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಂಕರರು ಮಾಡಿದರು ಹಾಗೂ ಅವರಿಗೆ—"ನೀವು ಶಿವ, ವಿಷ್ಣು, ಗಣಪತಿ, ದೇವಿ ಅಥವಾ ಇನ್ನಾವ ದೇವತೆಯನ್ನು ಪೂಜಿಸಿದರೂ, ಸಚ್ಚಿದಾನಂದ ಸ್ವರೂಪವಾದ ಆ ಪರಬ್ರಹ್ಮವನ್ನೇ ನೀವು ಆರಾಧಿಸುವುದು"—ಎಂದು ಉಪದೇಶಿಸಿದರು. ಪ್ರತಿಯೊಬ್ಬರೂ ತಮ್ಮ ಶ್ರದ್ಧೆಗೆ ಅನುಗುಣವಾಗಿ ಆರಾಧಿಸಬಹುದು.

ಏಕಂ ಸತ್ ವಿಪ್ರಾಃ ಬಹುಧಾ ವದಂತಿ ।

(ಸದ್ವಸ್ತು ಒಂದೇ, ಅದನ್ನು ವಿದ್ವಾಂಸರು ಅನೇಕ ಹೆಸರುಗಳಿಂದ ಕರೆಯುತ್ತಾರೆ) ಈ ಸತ್ಯವನ್ನು ನಾವು ಮರೆಯಬಾರದು. ನಾವು ವಾಸಿಸುವ ಜಾಗ ಮಾತ್ರ ಧರ್ಮಭೂಮಿಯಲ್ಲಿ. "ಸಮಗ್ರ ಭಾರತವು ಧರ್ಮಭೂಮಿ"—ಎಂದು ಅವರು ಹೇಳಿದರು. ಅವರು ಭಾರತದ ನಾಲ್ಕು ದಿಕ್ಕಿನಲ್ಲಿ—ಉತ್ತರ, ದಕ್ಷಿಣ, ಪೂರ್ವ ಮತ್ತು ಪಶ್ಚಿಮ—ನಾಲ್ಕು ಮಠಗಳನ್ನು ಸ್ಥಾಪನೆ ಮಾಡಿ, ಅವುಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ಮಹಾವಾಕ್ಯವನ್ನು ಕೊಟ್ಟರು. ಅವರು ಭಾರತದ ಐಕ್ಯತೆಯನ್ನು ಸ್ಥಾಪಿಸಿದ ಈ ಮಠಗಳನ್ನು ನಾವು ಇಂದೂ ಕಾಣಬಹುದು.

ಅವರಿಲ್ಲದಿದ್ದರೆ, ನಮಗೆ ವೇದಗಳು ಲಭ್ಯವಾಗುತ್ತಿರಲಿಲ್ಲ, ಹಾಗೂ ಇಂದಿನ ರೀತಿಯಲ್ಲಿ ಶಿವ–ವಿಷ್ಣು ದೇವಸ್ಥಾನಗಳು ಇರುತ್ತಿರಲಿಲ್ಲ. ಶಂಕರರು ಇಲ್ಲದಿದ್ದರೆ, ಈಗ ಜನಗಳಲ್ಲಿರುವ ಧರ್ಮದ ವಿಷಯಕವಾದ ಜ್ಞಾನವೂ ಲಭ್ಯವಾಗುತ್ತಿರಲಿಲ್ಲ. ಸಂಸಾರಬಂಧನದಲ್ಲಿ ಸಿಲುಕುವ ಜೀವನಿಗೆ, ಮೋಕ್ಷವನ್ನು ಪಡೆಯಲು ಮತ್ತು ಆತ್ಯಂತಿಕವಾದ ಆನಂದವನ್ನು ಹೊಂದಲು ಶಂಕರರು ಮಾರ್ಗವನ್ನು ಉಪದೇಶಿಸಿದ್ದಾರೆ ಮತ್ತು ಆಶೀರ್ವದಿಸಿದ್ದಾರೆ. ಅವರ ಉಪದೇಶಗಳಲ್ಲಿ "ಮೋಹ ಮುದ್ಗರ"—ಎಂಬುದು ಒಂದು. ಅವರ ಒಂದು ಶ್ಲೋಕ ನೋಡೋಣ—

ತ್ವಯಿ ಮಯಿ ಚಾನ್ಯತ್ರೈಕೋ ವಿಷ್ಣುಃ
ವ್ಯರ್ಥಂ ಕುಪ್ಯಸಿ ಮಯ್ಯಸಹಿಷ್ಣುಃ ।
ಸರ್ವಸ್ಮಿನ್ನಪಿ ಪಶ್ಯಾತ್ಮಾನಂ
ಸರ್ವತ್ರೋತ್ಸೃಜ ಭೇದ ಜ್ಞಾನಮ್ ॥

(ನನ್ನಲ್ಲಿ, ನಿನ್ನಲ್ಲಿ, ಎಲ್ಲ ಕಡೆಯೂ ಒಬ್ಬನೇ ಈಶ್ವರನು ಇರುತ್ತಾನೆ; ವ್ಯರ್ಥವಾಗಿ ನನ್ನ ಮೇಲೆ ಕೋಪಗೊಳ್ಳುತ್ತೀಯೆ; ಎಲ್ಲರಲ್ಲಿ ಆತ್ಮವನ್ನು ನೋಡು ; ಎಲ್ಲ ಕಡೆಯೂ ಭೇದ ಜ್ಞಾನವನ್ನು ತ್ಯಜಿಸು.)

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು

(ಪ್ರಶ್ನೋತ್ತರ ರೂಪದಲ್ಲಿ)

ಮೋಕ್ಷಾಪೇಕ್ಷಿಯಾದ ವ್ಯಕ್ತಿಗೆ ಗುರುವು ಅವಶ್ಯವೇ ?

ಹೌದು. ಖಂಡಿತವಾಗಿ

ಗುರುವಿನ ಪ್ರಧಾನವಾದ ಲಕ್ಷಣಗಳೇನು ?

ಗುರುವು ಸತ್ಯವನ್ನು ಸಾಕ್ಷಾತ್ಕರಿಸಿಕೊಂಡ ಜ್ಞಾನಿಯಾಗಿರಬೇಕು; ಅವನು ತನ್ನ ಶಿಷ್ಯನ ಶ್ರೇಯಸ್ಸಿನ ವಿಷಯದಲ್ಲಿ ಆಸಕ್ತನಾಗಿರಬೇಕು. ಇಂದಿನ ದಿನಗಳಲ್ಲಿ ಅನೇಕರು ಸಂತರಂತೆ ವೇಷಹಾಕಿಕೊಂಡಿರುತ್ತಾರೆ ; ಪರಿಸ್ಥಿತಿ ಹೀಗಿರುವಾಗ ವಾಸ್ತವವಾದ ಗುರುವನ್ನು ಪತ್ತೆಮಾಡುವುದು ಹೇಗೆ ? ಈ ವಿಷಯದಲ್ಲಿ ನಿಷ್ಕೃಷ್ಟವಾದ ನಿಯಮಗಳೇನೂ ಇಲ್ಲ ; ನಾವು ಬಹು ಶ್ರದ್ಧೆಯಿಂದಿದ್ದರೆ, ಈಶ್ವರನೇ ಸ್ವತಃ ನಮ್ಮನ್ನು ಸದ್ಗುರುವಿನ ಸಮೀಪಕ್ಕೆ ಕರೆದುಕೊಂಡು ಹೋಗುತ್ತಾನೆ. ನಾವು ಗುರುವೆಂದು ಎಣಿಸುವ ವ್ಯಕ್ತಿಯು ಜ್ಞಾನಿಯೇ ಹಾಗೂ ನಮ್ಮ ಶ್ರೇಯಸ್ಸನ್ನು ಕೋರುತ್ತಾನೆಯೇ ಎಂಬುದನ್ನು ನಾವು ಸ್ವತಃ ನೋಡಬಹುದು. ವ್ಯಕ್ತಿಯೊಬ್ಬನು ಜ್ಞಾನಿಯೇ ಅಲ್ಲವೇ ಎಂಬುದನ್ನು ನಿರ್ಣಯಿಸುವುದು ಕಷ್ಟವಾದರೂ, ಭಗವದ್ಗೀತೆಯಲ್ಲಿ ವರ್ಣಿಸಲಾಗಿರುವ ಜ್ಞಾನಿಯ ಲಕ್ಷಣವನ್ನು ನಾವು ಸ್ವಲ್ಪಮಟ್ಟಿಗಾದರೂ ಅನ್ವಯಿಸಬಹುದು. ಆದರೆ, ಹೀಗೆ ಮಾಡುವಾಗ, ಜ್ಞಾನಿಯನ್ನು ಆಯ್ಕೆಮಾಡಲು ಅನುಕೂಲವಾಗಲೆಂಬ ಉದ್ದೇಶದಿಂದ ಈ ವಿವರಣೆಯನ್ನು ಕೊಟ್ಟಿಲ್ಲವೆಂಬುದನ್ನು ಗಮನದಲ್ಲಿಡಬೇಕು.

ಗುರುವಿನ ವಿಷಯದಲ್ಲಿ ಶಿಷ್ಯನಿಗೆ ಯಾವ ಅಭಿಪ್ರಾಯವಿರಬೇಕು ?

ಗುರು, ಈಶ್ವರ ಮತ್ತು ಆತ್ಮ–ಇವರು ಪರಸ್ಪರ ಭಿನ್ನರೆಂಬ ಭಾವನೆ ಅವನು ಹೊಂದಿರಬಾರದು.

ಈಶ್ವರೋ ಗುರುರಾತ್ಮೇತಿ

ಈಶ್ವರ, ಗುರು, ಆತ್ಮ–ಒಂದೇ ಎಂದು ಹೇಳಲಾಗಿದೆ. ಅವನು ಯಾವಾಗಲೂ ಗುರುವಿನ ಉಪದೇಶದಂತೆ ನಡೆಯಬೇಕು. ಇತರರ ಅಭಿಪ್ರಾಯಗಳು ವಿರುದ್ಧವಾಗಿದ್ದರೂ, ಯಾವ ವಿಷಯದಲ್ಲೇ ಆಗಲಿ ಗುರುವಿನ ಉಪದೇಶವೇ ಅಂತಿಮ ನಿರ್ಣಯವೆಂದು ಅವನು ತಿಳಿಯಬೇಕು.

ಜ್ಞಾನವನ್ನು ಹೊಂದದಿರುವವನು ಮತ್ತೊಬ್ಬನಿಗೆ ಆತ್ಮಜ್ಞಾನವನ್ನು ಉಪದೇಶಿಸಬಹುದೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ನ ನರೇಣಾವರೇಣ ಪ್ರೋಕ್ತ ಏಷ ಸುವಿಜ್ಞೇಯೋ
ಬಹುಧಾಚಿಂತ್ಯಮಾನಃ ।
ಅನನ್ಯ ಪ್ರೋಕ್ತೇ ಗತಿರತ್ರನಾಸ್ತಿ॥

"ಆತ್ಮನನ್ನು ಅರಿಯದವನಿಂದ ಉಪದೇಶಿಸಲ್ಪಟ್ಟರೂ, ದೀರ್ಘವಾಗಿ ಮನನ ಮಾಡಿದರೂ ಸಹ, ಆತ್ಮನನ್ನು ತಿಳಿಯಲು ಸಾಧ್ಯವಿಲ್ಲ. ಆತ್ಮಸಾಕ್ಷಾತ್ಕಾರಮಾಡಿ ಕೊಂಡವನಿಂದ ಉಪದೇಶವಾದಾಗ, ಮೋಕ್ಷವನ್ನು ಹೊಂದಲು ಸಾಧ್ಯ". ಹೀಗೆ ಕಠೋಪನಿಷತ್ತಿನಲ್ಲಿ ಹೇಳಲಾಗಿದೆ.

ಆಧ್ಯಾತ್ಮಿಕ ಜೀವನದಲ್ಲಿ ಆಸಕ್ತಿಯಿರುವವನು ಗುರು ಅಥವಾ ಈಶ್ವರನ ವಿಷಯ ದಲ್ಲಿ ವಿರುದ್ಧವಾಗಿ ವ್ಯಾಖ್ಯಾನಮಾಡುವುದನ್ನು ಕೇಳುವುದು ತಪ್ಪೇ ?

ಹೌದು.

ಅಂತಹ ಸಂದರ್ಭದಲ್ಲಿ ವ್ಯಕ್ತಿ ಏನನ್ನು ಮಾಡಬೇಕು ?

ಟೀಕೆ ಮಾಡುವವನು ತರ್ಕಕ್ಕೆ ಅನುಕೂಲನಾದರೆ, ಆ ರೀತಿ ಟೀಕೆಮಾಡಬಾರ ದೆಂದು ಅವನಿಗೆ ಹೇಳಬೇಕು. ಇಲ್ಲವಾದರೆ, ಶಿಷ್ಯನು ಆ ಜಾಗವನ್ನು ಬಿಟ್ಟು ಹೋಗಬೇಕು.

ಗುರುವನ್ನು ಸಮೀಪಿಸಲು ಮತ್ತು ಆಧ್ಯಾತ್ಮಿಕ ಜೀವನ ನಡೆಸಲು ಇಚ್ಛೆಯುಳ್ಳ ವ್ಯಕ್ತಿಯು ಗುರುವನ್ನು ಹೊಂದುವುದಕ್ಕೆ ಮೊದಲು ಏನನ್ನು ಮಾಡಬೇಕು ?

ಉಪನಯನವಾಗಿದ್ದರೆ, ಅವನು ಸಾಧ್ಯವಾದಷ್ಟು ಗಾಯತ್ರೀಜಪವನ್ನು ಮಾಡ ಬಹುದು. ಅವನು ಮಾನಸಿಕವಾಗಿ ಈಶ್ವರಪೂಜೆಯನ್ನು ಮಾಡಬಹುದು. ಇದಕ್ಕೆ ಯಾವ ನಿರ್ಬಂಧವೂ ಇಲ್ಲ. ಮೃತ್ಯುಂಜಯಮಾನಸಪೂಜಾಸ್ತೋತ್ರ. ಶಿವಮಾನಸ ಪೂಜಾಸ್ತೋತ್ರ, ಮುಂತಾದುವುಗಳಲ್ಲಿ ಈ ವಿಧವಾಗಿ ಪೂಜೆ ಮಾಡುವುದನ್ನು ಸ್ಪಷ್ಟ ವಾಗಿ ತಿಳಿಸಲಾಗಿದೆ. ಎಲ್ಲ ಕರ್ಮಗಳ ಫಲವನ್ನು ಅರ್ಪಣೆಮಾಡುತ್ತಾ ಈಶ್ವರನಲ್ಲಿ ಭಕ್ತಿಯನ್ನು ಹೊಂದುವುದು ಶ್ರೇಯಸ್ಕರ. ವಿವೇಕದಿಂದ ದೃಢವಾದ ವೈರಾಗ್ಯವನ್ನು ಹೊಂದಬೇಕು. ಈಶ್ವರನನ್ನು ಶ್ರದ್ಧೆಯಿಂದ ಪ್ರಾರ್ಥಿಸುವುದಾದರೆ, ಸದ್ಗುರುವನ್ನು ಹೊಂದಲು ಅವನೇ ಸಹಾಯ ಮಾಡುತ್ತಾನೆ.

ಆಧ್ಯಾತ್ಮಿಕ ಸಾಧನೆಗಳನ್ನು ಯಾವ ವಯಸ್ಸಿನಲ್ಲಿ ಪ್ರಾರಂಭಿಸಬೇಕು ?

ನಾವು ಎಷ್ಟು ಬೇಗ ಪ್ರಾರಂಭಮಾಡಿದರೆ, ಅಷ್ಟು ಒಳ್ಳೆಯದು. ತಮ್ಮ ಆಧ್ಯಾತ್ಮಿಕ ಸಾಧನೆಗಳನ್ನು ಪ್ರಾರಂಭಿಸಿದ ಧ್ರುವ, ಮತ್ತು ಪ್ರಹ್ಲಾದ ಇನ್ನೂ ಸಣ್ಣವ ರಾಗಿರಲಿಲ್ಲವೇ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಲೌಕಿಕ ಜೀವನದಲ್ಲಿ ಆಸಕ್ತಿಯಿರುವವನಿಗೆ ಗುರುಗಳ ಉಪದೇಶವು ಅವಶ್ಯವೇ?

ಹೌದು.

ಲೌಕಿಕ ಜೀವನದಲ್ಲಿ ಸೌಖ್ಯವನ್ನು ಬಯಸುವ ಮಾನವನು, ಅವನಿಗೆ ಅಪೇಕ್ಷೆಯಿರುವಷ್ಟು ಅದನ್ನು ಹೊಂದುತ್ತಾನೆಯೇ? ಖಂಡಿತವಾಗಿಯೂ ಇಲ್ಲ. ಈ ಸೌಖ್ಯವನ್ನು ಹೊಂದಬೇಕಾದರೂ ಸಹ, ಮಾರ್ಗದರ್ಶನವನ್ನು ಪಡೆಯುವುದು ಒಳ್ಳೆಯದಲ್ಲವೇ? ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿರುವವನ ಅನುಗ್ರಹವು ವೀರ್ಯವತ್ತಾಗಿರುತ್ತದೆ. ಆದ್ದರಿಂದ, ಯಾವುದೇ ರೀತಿಯ ಜೀವನ ಮಾರ್ಗವು ಅಪೇಕ್ಷಿತವಾಗಿದ್ದರೂ, ಸತ್ಪುರುಷರ ಅನುಗ್ರಹ ಮತ್ತು ಮಾರ್ಗದರ್ಶನ ಪಡೆಯುವುದು ಹಿತಕಾರಿಯಾದುದು.

ಗುರುವಿನ ಆದೇಶಗಳನ್ನು ಪಾಲನೆಮಾಡಲು ಅಪೇಕ್ಷಿಸಿದರೂ ಸಹ, ಕೆಲವರು ಅದರಂತೆ ಯಾವಾಗಲೂ ಪ್ರವರ್ತಿಸುವುದಿಲ್ಲ. ಸೌಖ್ಯವನ್ನು ಬೇರೆ ಯಾವುದಾದರೂ ಮಾರ್ಗದಿಂದ ಪಡೆಯಬಹುದೆಂಬ ತಪ್ಪು ಕಲ್ಪನೆಯೂ ಸಹ ಅವರಲ್ಲಿರುತ್ತದೆ. ಆ ಭಾವನೆಗಳನ್ನು ನಾವು ಹೇಗೆ ತಾನೇ ನಿರೋಧಿಸಬಹುದು?

ಒಬ್ಬ ಸಂತನ ವಿಷಯದಲ್ಲಿ "ಅವನು ನನಗಿಂತ ಜಾಸ್ತಿ ತಿಳುವಳಿಕೆಯುಳ್ಳವನು" ಎಂಬ ಭಾವನೆಯನ್ನು ನಾಸ್ತಿಕನೂ ಸಹ ಹೊಂದಿರುವುದಿಲ್ಲವೇ?

ಖಂಡಿತವಾಗಿ ಹೌದು.

ತನ್ನ ಶಿಷ್ಯನ ಶ್ರೇಯಸ್ಸನ್ನೂ ಮತ್ತು ತೊಂದರೆಗಳನ್ನೂ ಗುರುವು ಗಣನೆಗೆ ತೆಗೆದುಕೊಳ್ಳುವುದಿಲ್ಲವೇ?

ಹೌದು.

ಗುರುವು ನಮ್ಮೆಲ್ಲರ ಶ್ರೇಯಸ್ಸನ್ನು ಅಪೇಕ್ಷಿಸುತ್ತಾನೆ. ನಮಗಿಂತ ಜಾಸ್ತಿಯಾಗಿ ಅವನು ತಿಳಿದಿರುತ್ತಾನೆ. ಅವನು ನಮ್ಮ ಕಷ್ಟಗಳನ್ನು ಅರ್ಥಮಾಡಿಕೊಂಡಿರುತ್ತಾನೆ. ಅವನು ನಮಗೇನಾದರೂ ಬುದ್ಧಿವಾದ ಹೇಳುವುದಾದರೆ, ಅದು ನಮ್ಮ ಒಳ್ಳೆಯದಕ್ಕೆ ಅಲ್ಲವೇ? ಈ ವಿಧವಾದ ಭಾವನೆಯನ್ನು ಶಿಷ್ಯನು ತನ್ನ ಮನಸ್ಸಿನಲ್ಲಿ ದೃಢವಾಗಿ ಹೊಂದಿರುವುದಾದರೆ, ಆಗ ಅವನು ತನ್ನ ಗುರುವಿನ ಆದೇಶಕ್ಕನುಸಾರವಾಗಿ ನಡೆಯುತ್ತಾನೆ. ಅವನ ಆದೇಶಗಳನ್ನು ಅನುಸರಿಸುವಾಗ ಕಷ್ಟಗಳು ಬಂದರೂ, "ಅವನ ಆದೇಶದಂತೆ ನಾನು ನಡೆಯುವುದು ಒಳ್ಳೆಯದು" ಎಂದು ಒಂದು ಕ್ಷಣಕಾಲ ಯೋಚಿಸಬೇಕು. ಆಗ, ಅವನ ಆದೇಶಗಳನ್ನು, ಯಾವ ತಿರಸ್ಕಾರದ ಭಾವನೆಯೂ ಇಲ್ಲದೆ, ಅನುಸರಿಸಬಹುದು.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರು ತಮ್ಮ ಮನಸ್ಸಿನಲ್ಲಿರುವುದನ್ನೆಲ್ಲ ತಮ್ಮ ಗುರುಗಳ ಮುಂದೆ ಹೇಳಲು ಹಿಂತೆಗೆಯುತ್ತಾರೆ. ವಸ್ತುಸ್ಥಿತಿ ಹೀಗಿರುವಾಗ, ತಮ್ಮ ಮನಸ್ಸಿನಲ್ಲಿರುವ ಕಷ್ಟಗಳನ್ನಾಗಲೀ ಅಥವಾ ದುಃಖಗಳನ್ನಾಗಲೀ ಗುರುಗಳಿಗೆ ತಿಳಿಸುವುದಿಲ್ಲ. ಗುರುವು ನನ್ನ ಒಳ್ಳೆಯದಕ್ಕಾಗಿಯೇ ಈ ಬುದ್ಧಿವಾದಗಳನ್ನು ಕೊಟ್ಟಿರುತ್ತಾನೆ. ಆದರೆ, ಅದನ್ನು ಅನುಸರಿಸುವುದಕ್ಕೆ ಕೆಲವು ತೊಂದರೆಗಳಿವೆ. ನನ್ನ ಶಕ್ತಿಯು ಪರಿಮಿತವಾದುದು. ಅವನ ಆದೇಶದಂತೆ ನಾನು ಹೇಗೆ ತಾನೇ ಅನುಸರಿಸುವುದು ? ಅವನ ಆದೇಶಗಳನ್ನು ಅನುಸರಿಸುವುದು ಕಷ್ಟವೆನಿಸಿದಾಗ ಇಂತಹ ಸಂದೇಹಗಳು ಉತ್ಪನ್ನವಾಗಬಹುದು.

ವೈದ್ಯನ ಹತ್ತಿರಕ್ಕೆ ಹೋಗುವಾಗ ತನ್ನ ರೋಗದ ವಿಷಯಗಳು ಮುಚ್ಚಿಡುವುದು ಶುದ್ಧ ಮೂರ್ಖತನವಲ್ಲವೇ? ಆದ್ದರಿಂದ, ಗುರುಗಳಲ್ಲಿ ಯಾವ ರೀತಿ ಹಿಂತೆಗೆಯದೇ, ನಮ್ಮ ಕಷ್ಟಗಳನ್ನೆಲ್ಲ ತಿಳಿಸಬೇಕು. ಅದು ನಮ್ಮ ಕರ್ತವ್ಯ. ಅದನ್ನು ಮಾಡದಿದ್ದರೂ ಸಹ, ಗುರುವು ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡಿರುವವನಾದುದರಿಂದ ಅವನ ಉಪದೇಶಗಳು ಕೇವಲ ಈಶ್ವರನ ಇಚ್ಛೆಯಂತೆಯೇ ಇರುತ್ತವೆ. ವಸ್ತುಸ್ಥಿತಿ ಹೀಗಿರುವಾಗ, ಅವನು ಏನು ಹೇಳಿದರೂ ಅದು ನಮಗೆ ಅನುಕೂಲವಾಗಿಯೇ ಇರುತ್ತದೆ. ಅವನ ಉಪದೇಶಗಳನ್ನು ಅನುಸರಿಸುವುದಕ್ಕೆ ನಮಗೆ ಶಕ್ತಿಯಿಲ್ಲದಿದ್ದರೂ, ಆ ಶಕ್ತಿಯೂ ಸಹ ಅವನ ಅನುಗ್ರಹದಿಂದಲೇ ಲಬ್ಧವಾಗುತ್ತದೆ. ನಿಷ್ಠನಾದ ಶಿಷ್ಯನು ಗುರುವಿನ ಉಪದೇಶದಂತೆ ನಡೆಯುತ್ತಾನೆ ; ಮತ್ತು "ಅವನು ಹೇಳುವಂತೆ ನನಗೆ ನಡೆಯಲು ಸಾಧ್ಯವೇ ? ಬೇರೆ ಯಾವದನ್ನಾದರೂ ಪ್ರಯತ್ನಿಸಲೇ" ಎಂಬ ಭಾವನೆಗಳಿಗೆ ಅವಕಾಶವನ್ನೇ ಕೊಡುವುದಿಲ್ಲ. ನಮ್ಮ ಗುರುಗಳ ಉಪದೇಶಗಳನ್ನು ಅನುಸರಿಸುವುದರಿಂದ, ನಾವು ಬುದ್ಧಿವಂತರಲ್ಲವೆಂದು ಅರ್ಥವಲ್ಲ. ನಮ್ಮ ಶ್ರೇಯಸ್ಸಿಗಾಗಿ, ನಮಗಿಂತ ಶ್ರೇಷ್ಠವಾದ ಶಕ್ತಿಯೊಂದಕ್ಕೆ ಶರಣಾಗತರಾಗಿದ್ದೇವೆ ಎಂಬುದನ್ನು ಅದು ಸೂಚಿಸುತ್ತದೆ.

ಗುರುವಿನ ಅನುಗ್ರಹದಿಂದ ಅತ್ಯಂತ ಪಾಪಿಷ್ಠನೂ ಸಹ ಆಧ್ಯಾತ್ಮಿಕ ಜೀವನದಲ್ಲಿ ಪ್ರಗತಿಯನ್ನು ಹೊಂದಬಹುದೇ ?

ಈಶ್ವರ ಮತ್ತು ಗುರುವಿನ ಅನುಗ್ರಹವನ್ನು ಹೊಂದಿದರೆ, ಅತ್ಯಂತ ಪಾಪಿಷ್ಠನೂ ಸಹ ಒಳ್ಳೆಯದನ್ನು ಪಡೆಯಬಹುದು. ಆದರೆ 'ಕೇವಲ ಅವನ ಅನುಗ್ರಹದಿಂದ ಮಾತ್ರ ನಾವು ಪ್ರಗತಿಯನ್ನು ಹೊಂದಬಹುದು'—ಎಂದು ಯೋಚಿಸುತ್ತಾ ನಾವು ಅಜಾಗರೂಕರಾಗಿರಬಾರದು.

ಕೆಲವು ವೇಳೆ ಅನೇಕ ಕೆಟ್ಟ ಕೆಲಸಗಳನ್ನು ಮಾಡಿದರೂ ಸಹ ಸತ್ಪುರುಷರ ಅನುಗ್ರಹಕ್ಕೆ ಪಾತ್ರರಾಗುತ್ತಾರೆ. ಮತ್ತೆ ಕೆಲವರು ಅಷ್ಟು ಕೆಟ್ಟ ಮಾರ್ಗದಲ್ಲಿ ಇರದಿರ

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುದು. ಆದರೂ, ಅವರು ಅನುಗ್ರಹಕ್ಕೆ ಪಾತ್ರರಾಗದಿರುವುದು ಕಂಡು ಬರುತ್ತದೆ. 'ಅವನು ನನಗೆ ಬೇಕಾದವನು, ಮತ್ತೊಬ್ಬನು ಅಲ್ಲ' ಎಂದು ಸತ್ಪುರುಷರು ತಾರತಮ್ಯ ಭಾವನೆಯುನ್ನು ಹೊಂದಿರದಿದ್ದರೂ, ಏತಕ್ಕೆ ಈ ರೀತಿಯ ಭೇದಗಳು ಇರಬೇಕು?

ನಾವು ಕಾರಣದಿಂದ ಕಾರ್ಯವನ್ನು ಅನುಮಾನಮಾಡಬೇಕು. ಒಬ್ಬ ವ್ಯಕ್ತಿ ಮತ್ತೊಬ್ಬನಿಗಿಂತ ಅಧಿಕಪಾಪಿಯಾಗಿರುತ್ತಾನೆ. ಆದರೂ, ಅವನು ಅಧಿಕವಾಗಿ ಈಶ್ವರನ ಅನುಗ್ರಹವನ್ನು ಅನುಭವಿಸುವುದು ಕಂಡುಬರುತ್ತದೆ. ಇದರ ಹಿಂದೆ ಏನೋ ಕಾರಣವಿರಬೇಕು. ಅದೇನಿರಬಹುದು? ಕಾರಣವನ್ನು ಹೀಗೆ ಊಹಿಸಬಹುದು. 'ಪಾಪಿಯ ಈ ಜನ್ಮದ ಜೀವನವನ್ನು ಗಣನೆಗೆ ತೆಗೆದುಕೊಂಡರೆ ಯಾವ ಕಾರಣವೂ ಇಲ್ಲದಿರಬಹುದು. ಆದರೆ, ಈ ಜನ್ಮದ ವಿಮರ್ಶೆ ಮಾತ್ರ ಪರ್ಯಾಪ್ತವಾಗುವುದಿಲ್ಲ; ಏಕೆಂದರೆ, ಇದಕ್ಕಿಂತ ಹಿಂದಿನ ಜನ್ಮವೊಂದಿದೆ. ಆಗ ಅವನು ಅನೇಕ ಒಳ್ಳೆ ಕೆಲಸ ಗಳನ್ನು ಮಾಡಿರಬಹುದು. ಆದ್ದರಿಂದ, ಈ ಜನ್ಮದಲ್ಲಿ ಅವನು ಈಶ್ವರನ ಕೃಪೆಗೆ ಪಾತ್ರನಾಗುತ್ತಾನೆ. ಆದ್ದರಿಂದ, ಈ ಜನ್ಮದಲ್ಲಿ ಅವನ್ನು ಉನ್ನತವಾದ ನೈತಿಕ ಜೀವನವನ್ನು ಅನುಸರಿಸದಿದ್ದರೂ, ಸತ್ಪುರುಷರ ಅನುಗ್ರಹಕ್ಕೆ ಪಾತ್ರನಾಗುವುದರಿಂದ, ಅವನು ತನ್ನ ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಶೇಖರಿಸಿರಬೇಕು. ಈ ರೀತಿಯಾಗಿ ವಿಶ್ಲೇಷಣೆ ಮಾಡದೆ, ಸತ್ಪುರುಷನು ತಾರತಮ್ಯ ಭಾವನೆಯುನ್ನು ಹೊಂದಿರುವನೆಂದು ಯೋಚಿಸುವುದು ತಪ್ಪಾಗುತ್ತದೆ. ಜೀವನ್ಮುಕ್ತನು ಯಾವುದನ್ನೂ ಹೊಂದಬೇಕಾ ಗಿರುವುದಿಲ್ಲ. 'ಈ ವ್ಯಕ್ತಿಯ ವಿಷಯದಲ್ಲಿ ನನಗೆ ಆಸಕ್ತಿಯಿದೆ, ಆದ್ದರಿಂದ ನಾನು ಅವನನ್ನು ಅನುಗ್ರಹಿಸಬೇಕು; ಮತ್ತೊಬ್ಬ ವ್ಯಕ್ತಿಯ ವಿಷಯದಲ್ಲಿ ನನಗೆ ಆಸಕ್ತಿ ಯಿಲ್ಲ, ಅವನನ್ನು ನಾನು ಅನುಗ್ರಹಿಸಬೇಕಾಗಿಲ್ಲ'—ಎಂಬಂತಹ ಸಂಕುಚಿತ ಭಾವನೆ ಗಳನ್ನು ಅವನು ಹೊಂದಿರುವುದಿಲ್ಲ. ಅವನು ಇನ್ನೊಬ್ಬರನ್ನು ಅನುಗ್ರಹಿಸಲಿ ಅಥವಾ ಬಿಡಲಿ, ಅದರಿಂದ ಅವನಿಗೇನೂ ಲಾಭವಿಲ್ಲ; ಏಕೆಂದರೆ, ಯಾವುದನ್ನು ಹೊಂದಬೇಕೋ ಅದು ಅವನಿಗೆ ಆಗಲೇ ಪ್ರಾಪ್ತವಾಗಿರುತ್ತದೆ.

ಹಿಂದಿನ ಜನ್ಮಗಳಲ್ಲಿನ ಪುಣ್ಯಗಳಿಂದ ಮಾತ್ರವೇ ಈಶ್ವರನ ಅನುಗ್ರಹವು ಲಭಿಸುವುದೆಂದಾದರೆ, ಆಗ ಅದೂ ಸಹ (ಈಶ್ವರನ ಅನುಗ್ರಹವೂ ಸಹ) ಪುಣ್ಯದಿಂದ 'ಖರೀದಿ'ಸಲ್ಪಟ್ಟ ವಸ್ತುವಾಗುವುದಿಲ್ಲವೆ ?

ದೀಪದ ಪ್ರಕಾಶವು ತನ್ನ ಸುತ್ತಲೂ ಹರಡುತ್ತದೆ. ಆ ಬೆಳಕಿನಲ್ಲಿ ಒಬ್ಬನು ಶಾಸ್ತ್ರಗಳನ್ನು ಓದಬಹುದು; ಮತ್ತೊಬ್ಬನು ಅದನ್ನು ಗಣನೆಗೆ ತರದೆ ಮಲಗಿ ನಿದ್ರಿಸ ಬಹುದು. ಅದರಂತೆ, ಮಹಾತ್ಮರು ತಮ್ಮ ಅನುಗ್ರಹವನ್ನು ಯಾವಾಗಲೂ ದಯಪಾಲಿಸುತ್ತಾರೆ. ಪ್ರತಿಯೊಬ್ಬನೂ ತನ್ನ ಮಾನಸಿಕ ಸ್ಥಿತಿಗನುಗುಣವಾಗಿ ಅದರಿಂದ ಫಲವನ್ನು ಪಡೆಯಬಹುದು. ಕೇಗೆ ಒಂದು ದೊಡ್ಡ ಪಾತ್ರೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಗೆದುಕೊಂಡು ಹೋದರೆ, ಅಧಿಕವಾಗಿ ನೀರನ್ನು ತರಬಹುದು. ಒಂದು ಸಣ್ಣ ಪಾತ್ರೆಯು ಸ್ವಲ್ಪವೇ ನೀರನ್ನು ಹಿಡಿಯುತ್ತದೆ ಎಂಬುದರಿಂದ, ಕೆರೆಯ ಸಾಮರ್ಥ್ಯಕ್ಕೆ ಪಾತ್ರೆಯೇ ಒಂದು ಪರಿಮಿತಿ ಎಂದು ಅರ್ಥವಲ್ಲ. ತನ್ನ ಹಿಂದಿನ ಜನ್ಮದಲ್ಲಿ ಪುಣ್ಯವನ್ನು ಶೇಖರಿಸಿರಬಹುದು. ಸತ್ಪುರುಷರ ಸಹವಾಸವನ್ನು ಹೊಂದಿರಬಹುದು. ಆದರೆ, ಅದನ್ನು ಸರಿಯಾದ ಮಾರ್ಗದಲ್ಲಿ ಉಪಯೋಗಿಸದಿರಬಹುದು. ಆದರೆ, ಮತ್ತೊಬ್ಬ ವ್ಯಕ್ತಿ, ಅಂತಹ ಅವಕಾಶಗಳನ್ನು ಹೊಂದಿರದಿದ್ದರೂ, ತನಗೊದಗಿದ ಅವಕಾಶವನ್ನು ಸಂಪೂರ್ಣವಾಗಿ ಬಳಸಿಕೊಂಡು ಸ್ವಲ್ಪ ಸಮಯದಲ್ಲಿಯೇ ಪರಮಾತ್ಮನ ಅನುಗ್ರಹಕ್ಕೆ ಪಾತ್ರನಾಗಬಹುದು.

ತಮ್ಮ ಪಾದುಕೆಗಳನ್ನು ಕೊಡುವುದರ ಮೂಲಕ ಗುರುವು ಶಿಷ್ಯನನ್ನು ಅನುಗ್ರಹಿಸಿದರೆ, ಶಿಷ್ಯನು ಅವನ್ನು ಯಾವ ರೀತಿ ಗೌರವಿಸಬೇಕು ?

ಗುರುವಿನ ವಿಷಯದಲ್ಲಿ ಯಾವ ರೀತಿಯ ಪೂಜ್ಯ ಭಾವನೆ ಇರುತ್ತದೆಯೋ, ಅದೇ ರೀತಿ ಪಾದುಕೆಗಳ ವಿಷಯದಲ್ಲಿಯೂ ಇರಬೇಕು. ಪ್ರತಿನಿತ್ಯವೂ ಅವುಗಳಿಗೆ ಶ್ರದ್ಧೆಯಿಂದ ನಮಸ್ಕರಿಸಿ. ಗಂಧ–ಹೂಗಳನ್ನಿಡಬೇಕು. ಅವುಗಳಿಗೆ ಪ್ರತಿನಿತ್ಯ ಅಭಿಷೇಕ ಮಾಡುವುದು ಒಳ್ಳೆಯದಾದರೂ, ಅವು ಮರದಿಂದ ಮಾಡಿದ್ದಾಗಿ, ಶಿಷ್ಯನು ತನ್ನ ಹತ್ತಿರ ಬಹುಕಾಲದವರೆಗೆ ಇರಬೇಕೆಂಬ ಇಚ್ಛೆ ಇದ್ದರೆ, ಅಭಿಷೇಕ ಮಾಡುವುದು ಸೂಕ್ತವೇ ಎಂದು ಅವನೇ ನಿರ್ಧರಿಸಬೇಕು. ಗುರು ಪಾದುಕೆಗಳಿಗೆ ಶ್ರದ್ಧೆಯಿಂದ ಪೂಜೆ ಮಾಡಿ, ಭಕ್ತಿಯಿಂದ ಪ್ರಾರ್ಥಿಸಿದರೆ, ಗುರುಚರಣಗಳಿಗೆ ಪೂಜೆ ಮಾಡುವುದರಿಂದ ಯಾವ ಫಲ ದೊರಕುವುದೋ, ಅದೇ ಫಲವನ್ನು ಹೊಂದುತ್ತಾನೆ.

ಗುರುಪಾದುಕೆಗಳನ್ನು ಶಿಷ್ಯನು ಧ್ಯಾನಿಸಬೇಕಾದರೆ ಯಾವ ರೀತಿ ಮಾಡಬೇಕು ?

ಗುರುಗಳು ಪಾದುಕೆಗಳನ್ನು ಧರಿಸಿರುವಂತೆ ಕಲ್ಪನೆ ಮಾಡಿಕೊಂಡು ಧ್ಯಾನಿಸಬಹುದು.

ಗುರುಗಳ ಸನ್ನಿಧಿಯಲ್ಲಿ ಶಿಷ್ಯನು ಯಾವ ರೀತಿ ವ್ಯವಹರಿಸಬೇಕು ?

ಅವರಲ್ಲಿ ಅವನು ಪೂಜ್ಯ ಭಾವನೆಯನ್ನು ಹೊಂದಿರಬೇಕು. ಅವಕಾಶ ಸಿಕ್ಕಿದಾಗಲೆಲ್ಲ ಅವರನ್ನು ಸೇವಿಸಬೇಕು. ಆದರೆ, ಆ ರೀತಿ ಮಾಡುವುದಕ್ಕೆ ಮೊದಲು ಅವರ ಅನುಮತಿಯನ್ನು ಪಡೆಯಬೇಕು. ಏನಾದರೂ ಸ್ಪಷ್ಟನೆ ಬೇಕಾದರೆ, ಅವರು ವಿರಾಮದಲ್ಲಿದ್ದಾಗ ಕೇಳಬೇಕೇ ಹೊರತು, ಇತರ ಕೆಲಸಗಳಲ್ಲಿ ಮಗ್ನರಾಗಿದ್ದಾಗ ಅಲ್ಲ. ತನ್ನ ಗುರುವಿನಲ್ಲಿ ಅಧ್ಯಯನ ಮಾಡುತ್ತಿರುವುದು ಅದೃಷ್ಟ ಎಂಬ ಭಾವನೆಯಿಂದ ಯಾವಾಗಲೂ ಶ್ರದ್ಧೆಯಿಂದ ಅಧ್ಯಯನದಲ್ಲಿ ನಿರತನಾಗಿರಬೇಕು. ಗುರುಗಳ ಉಪದೇಶಗಳನ್ನು ಯಾವಾಗಲೂ ಮನಸ್ಸಿನಲ್ಲಿಟ್ಟುಕೊಂಡು, ಅದರಂತೆ ಜೀವನ ನಡೆಸಬೇಕು.

Sri Vidyabharathi Book Centre, Sringeri

CC-O. In Public Domain. Digitized by eGangotri

ತಾವು ಪ್ರತ್ಯಕ್ಷವಾಗಿ ಕಾಣಲಾರದುದರಿಂದ, ಕೆಲವರಿಗೆ ಈಶ್ವರನು ವಾಸ್ತವವಾಗಿ ಇದ್ದಾನೆಯೋ ಅಥವಾ ಇಲ್ಲನೇ ಎಂಬ ವಿಷಯದಲ್ಲಿ ಸಂದೇಹವುಂಟಾಗುತ್ತದೆ. ಅವರಲ್ಲಿ ಶ್ರದ್ಧೆಯನ್ನುಂಟುಮಾಡುವುದಕ್ಕಾಗಿ ಈಶ್ವರನು ಹೇಗಾದರೂ ಅವರಿಗೆ ತನ್ನ ಅಸ್ತಿತ್ವವನ್ನು ತೋರಿಸಲು ಸಾಧ್ಯವಿಲ್ಲವೇ ?

ಈಶ್ವರನು ಸ್ವತಃ ಒಂದು ಸಂದಿಗ್ಧದಲ್ಲಿ ಸಿಕ್ಕಿಕೊಂಡಿರುವಂತೆ ಕಾಣುತ್ತದೆ. ಅವನು ಅವರಿಗೆ ದರ್ಶನವನ್ನು ಕೊಡಬೇಕಾದರೆ, ಅವನ ಯಾವುದಾದರೂ ರೂಪವನ್ನು ಧರಿಸಬೇಕು. ಆ ರೂಪವನ್ನು ನೋಡಿದ ಮೇಲೆ ಜನಗಳು ಹೇಳಬಹುದು—"ನೀನು ಒಂದು ರೂಪವನ್ನು ಹೊಂದಿದ್ದೀಯೆ ಆದ್ದರಿಂದ ನೀನು ಸರ್ವವ್ಯಾಪಿಯಲ್ಲ. ಆದ್ದರಿಂದ ನೀನು ಈಶ್ವರನಾಗಲು ಸಾಧ್ಯವಿಲ್ಲ"–ಎಂದು. ಯಾವ ರೂಪವನ್ನೂ ತೆಗೆದುಕೊಳ್ಳದೆ ಅವನು ಅವರಿಗೆ ದರ್ಶನ ಕೊಡದಿದ್ದರೆ, ಅವರು ಮತ್ತೆ ಹೇಳುತ್ತಾರೆ—"ನಾವು ಈಶ್ವರನನ್ನು ಕಾಣುತ್ತಿಲ್ಲ. ಆದ್ದರಿಂದ ಈಶ್ವರನಿಲ್ಲ"–ಎಂದು. ಹೀಗೆ, ಈಶ್ವರನು ರೂಪವನ್ನು ಹೊಂದಲಿ ಅಥವಾ ಬಿಡಲಿ, ಅವನನ್ನು ನಂಬದ ಕೆಲವರಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಈಶ್ವರನು ತಾನೇ ಏನು ಮಾಡಬಹುದು ?

ವಿಭಿನ್ನತೆಯೇ ವಿಶ್ವದ ಸ್ವಭಾವ. ನಿರೀಶ್ವರವಾದಿಗಳ ಗುಂಪೂ ಇದೆ. ಈಶ್ವರನ ವಿಷಯಕವಾದ ಶ್ರದ್ಧೆಯನ್ನು ಪ್ರಚೋದಿಸಬಹುದು ಹಾಗೂ ಅಭಿವೃದ್ಧಿ ಮಾಡಬಹುದು ; ಆದರೆ ಬಲಾತ್ಕಾರವಾಗಿ ಶ್ರದ್ಧೆಯನ್ನು ಪ್ರಚೋದನೆ ಮಾಡುವುದರಿಂದ ಯಾವ ಪ್ರಯೋಜನವೂ ಇಲ್ಲ. ವಾದಗಳನ್ನು ಮಂಡಿಸಬಹುದು ಮತ್ತು ಅನೇಕ ಭಕ್ತ ನೈಜ ಅನುಭವಗಳನ್ನು ಉಲ್ಲೇಖಿಸಬಹುದು. ವಾಸ್ತವವಾಗಿ ನಡೆದಿರುವ ಅನೇಕ ಆಶ್ಚರ್ಯಕರವಾದ ಪ್ರಸಂಗಗಳನ್ನು ವಿವರಿಸಬಹುದು ಮತ್ತು ಅವುಗಳ ಆಧಾರದ ಮೇಲೆ ಈಶ್ವರನ ಅಸ್ತಿತ್ವವನ್ನು ಸ್ಪಷ್ಟಪಡಿಸುವ ಪ್ರಸಂಗಗಳನ್ನೂ ಕೊಡಬಹುದು. ಶಾಸ್ತ್ರಗಳಲ್ಲಿ ಹೇಳಲಾಗಿರುವುದನ್ನೂ ಉಲ್ಲೇಖಿಸಬಹುದು. ಇಷ್ಟಾದರೂ, ಈಶ್ವರನ ಅಸ್ತಿತ್ವದಲ್ಲಿ ಶ್ರದ್ಧೆಯಿಡದಿದ್ದರೆ, ಯಾರೂ ಏನು ಮಾಡಲೂ ಸಾಧ್ಯವಿಲ್ಲ.

ಭಕ್ತನು ಈಶ್ವರನನ್ನು ಕಾಣಬಹುದೇ ?

ಅಂದರೆ, ಒಂದು ಆಕಾರದಿಂದಲೋ ?

ಹೌದು.

ಈಶ್ವರನು ನಿರಾಕಾರನಾಗಿದ್ದರೂ ಸಹ, ತನ್ನ ಭಕ್ತರಿಗೋಸ್ಕರವಾಗಿ ಒಂದು ಆಕಾರವನ್ನು ತೆಗೆದುಕೊಳ್ಳಬಹುದು. ನಮ್ಮಲ್ಲಿ ಅಮಿತವಾದ ಶ್ರದ್ಧೆ ಇದ್ದರೆ, ನಾವು ನಿಶ್ಚಯವಾಗಿಯೂ ಈಶ್ವರನ ರೂಪವನ್ನು ನೋಡಬಹುದು. ಈ ವಿಷಯದಲ್ಲಿ ಯಾವ ಸಂದೇಹವೂ ಇಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂದರೆ, ಈಶ್ವರನು ತೆಗೆದುಕೊಳ್ಳುವ ರೂಪವನ್ನು ಕೇವಲ ಮಾನಸಿಕವಾ ನೋಡಬಹುದು ಅಥವಾ ಸ್ವತಃ ಕಣ್ಣುಗಳಿಂದ ಅವನನ್ನು ನೋಡಬಹುದು ಎಂಬುದು ಆಚಾರ್ಯರ ಅಭಿಪ್ರಾಯವೇ ?

ಎರಡು ವಿಧದಲ್ಲೂ ಈಶ್ವರನು ದರ್ಶನವನ್ನು ಕೊಡಲು ಸಮರ್ಥ. ಅಂದು ಅವನನ್ನು ನೋಡಬಹುದು, ಅವನೊಡನೆ ಮಾತನಾಡಬಹುದು. ಮತ್ತು ಅವನನ್ನು ಮುಟ್ಟಬಹುದು-ಎಂಬುದು ಆಚಾರ್ಯರ ಅಭಿಪ್ರಾಯವೇ ?

ಹೌದು, ಭಕ್ತಿಯು ಅತ್ಯಂತ ಪರಿಶುದ್ಧವಾಗಿದ್ದರೆ, ನಿಶ್ಚಯವಾಗಿಯೂ ಈಶ್ವರನು ಕಾಣಿಸಿಕೊಳ್ಳುತ್ತಾನೆ. ಅವನು ಕಾಣಿಸಿಕೊಂಡಾಗ, ಅವನೊಡನೆ ಏತಕ್ಕೆ ಮಾತ ನಾಡಬಾರದು ?

ಈ ಕಲಿಯುಗದಲ್ಲೂ ಇದು ಸಂಭಾವಿತವೇ ?

ಭಕ್ತನಾದವನು ಈಶ್ವರನನ್ನು ನೋಡುವುದಕ್ಕೂ, ಕಲಿಯುಗಕ್ಕೂ ಏನು ಸಂಬಂಧ ?

ಯಾರಿಗೆ ಈಶ್ವರನ ದರ್ಶನವಾಗಬಹುದು ?

ಈಶ್ವರನನ್ನು ಬಿಟ್ಟು ಬೇರೆ ಯಾವುದನ್ನೂ ಅಪೇಕ್ಷಿಸದ ವ್ಯಕ್ತಿಯು ಅವನನ್ನು ನೋಡಬಹುದು. ಅಮಿತವಾದ ಭಕ್ತಿಯು ಈಶ್ವರನು ನಮ್ಮಲ್ಲಿಗೆ ಬರುವಂತೆ ನಿರ್ಬಂಧ ಪಡಿಸುತ್ತದೆ.

ಈಶ್ವರನ ವಿಷಯಕವಾದ ಅನುಭವವು ವಾಸ್ತವವೇ ಅಥವಾ ಅಲ್ಲವೇ ಎಂಬು ದನ್ನು ತಿಳಿಯುವುದು ಹೇಗೆ ?

ವಾಸ್ತವವಾದ ಅನುಭವವನ್ನು ಹೊಂದಿದವನಿಗೆ ಅಂತಹ ಸಂದೇಹಗಳು ಬರುವುದಿಲ್ಲ.

ಹಾಗಾದರೆ ಇತರರ ವಿಷಯವೇನು ? ಅವನ ಅನುಭವಗಳು ಭ್ರಾಂತಿಜನ್ಯ ವಾದವು ಎಂದು ಅವರು ತಿಳಿಯಬಹುದಲ್ಲ ?

ಅನುಭವವನ್ನು ಹೊಂದಿದವನಿಗೆ ಇತರರು ಒಪ್ಪುವುದರಿಂದ ಅಥವಾ ಬಿಡುವುದ ರಿಂದ ಆಗುವ ನಷ್ಟವಾದರೂ ಏನು ? ಇತರರು ಒಪ್ಪುವುದರಿಂದ, ಅಥವಾ ಬಿಡುವುದ ರಿಂದ ಅವನ ಅನುಭವಕ್ಕೆ ಯಾವ ತೊಂದರೆಯೂ ಆಗುವುದಿಲ್ಲ. ಪರಿಸ್ಥಿತಿ ಹೀಗಿ ದ್ದರೂ, ನಿನ್ನ ಪ್ರಶ್ನೆಗೆ ನಾನು ನೇರವಾದ ಉತ್ತರವನ್ನು ಕೊಡುತ್ತೇನೆ. ಒಂದು ವೇಳೆ ಈಶ್ವರನು ದೃಷ್ಟಿಗೋಚರನಾದಾಗ ಒಂದು ಹಣ್ಣನ್ನೋ ಅಥವಾ ಮತ್ತಾವುದಾದರೋ

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುವನ್ನು ತನ್ನ ಭಕ್ತನಿಗೆ ಕೊಡುತ್ತಾನೆ. ಈಶ್ವರನು ಅದೃಶ್ಯನಾದ ನಂತರವೂ ಆ ಹಣ್ಣು ಭಕ್ತನಲ್ಲಿರುವುದಾದರೆ, ಆಗ ಆ ಅನುಭವವು ವಾಸ್ತವವಾದುದು ಎಂದು ತಿಳಿಯಬಹುದು. ಅಂತಹ ಅನುಭವವು ಭಕ್ತನ ಮನಸ್ಸನ್ನೇ ಬದಲಾಯಿಸ ಬಹುದು. ದರ್ಶನಾನುಭವವು ಕೇವಲ ಅಲ್ಪ ಮಾತ್ರವೇ ಆದರೂ, ಅದರ ಭಾವನೆಯು ದೀರ್ಘಕಾಲವಿರುತ್ತದೆ. ಮತ್ತೂ, ಅಂತಹ ಅನುಭವವನ್ನು ಹೊಂದಿದವರು ಇತರರನ್ನು ಪ್ರಚೋದಿಸಲು ಸಮರ್ಥರಾಗುತ್ತಾರೆ. ಈಶ್ವರನ ದಿವ್ಯವಾದ ಅನುಭವವನ್ನು ಹೊಂದಿದ ವ್ಯಕ್ತಿಯು, ಅತ್ಯಂತ ಆರೋಗ್ಯವಂತನಾಗಿರುವಾಗ, ಇದ್ದಕ್ಕಿದ್ದಂತೆ ಅವನು ಏತಕ್ಕಾಗಿ ಸುಳ್ಳಾದ ವಿಷಯಗಳನ್ನು ಹಣೆಯುತ್ತಾನೆ? ಭ್ರಾಂತಿಗೆ ವಶನಾದ ವ್ಯಕ್ತಿಯು ಆ ರೀತಿ ಮಾಡಬಹುದು. ಆದರೆ, ಮೇಲೆ ಹೇಳಿದಂತಹ ವಿಶಿಷ್ಟವಾದ ಅನುಭವಗಳನ್ನು ವ್ಯಕ್ತಿಯು ತನ್ನಿಚ್ಛೆಯಂತೆ ಅನುಭವಿಸಲು ಸಾಧ್ಯವಿಲ್ಲ. ಈ ರೀತಿಯ ವಿಶ್ಲೇಷಣೆಯಿಂದ ವಾಸ್ತವವಾದ ಅನುಭವಕ್ಕೂ ಮತ್ತು ಭ್ರಾಂತಿಜನ್ಯ ವಾದುದಕ್ಕೂ ಇರುವ ವ್ಯತ್ಯಾಸವನ್ನು ತಿಳಿಯಬಹುದು.

ಈ ಪ್ರಪಂಚದಲ್ಲಿ ಇಷ್ಟೊಂದು ದುಃಖಗಳು ಏಕಿವೆ? ಈ ಪ್ರಪಂಚವನ್ನು ಅವನೇ ಸೃಷ್ಟಿಮಾಡಿರುವುದರಿಂದ, ಈ ಕಷ್ಟಗಳಿಗೆಲ್ಲಾ ಅವನೇ ಜವಾಬ್ದಾರನಲ್ಲವೇ? ವ್ಯಕ್ತಿಯು ತನ್ನ ಪ್ರಾರಬ್ಧ ಕರ್ಮಗಳಿಗನುಸಾರವಾಗಿ ದುಃಖಗಳನ್ನು ಅನುಭವಿಸುತ್ತಾನೆ. ವ್ಯಕ್ತಿಯು ಮಾಡಿದ ಕರ್ಮಗಳು ಫಲವನ್ನು ಕೊಡಲೇಬೇಕು. ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳು ಈಗ ಫಲವನ್ನು ಕೊಡುವುದರಿಂದ, ಈ ಜನ್ಮದಲ್ಲಿ ವ್ಯಕ್ತಿಯು ದುಃಖಗಳನ್ನು ಅನುಭವಿಸುತ್ತಾನೆ. ಈಶ್ವರನೇ ಈ ಕಷ್ಟಗಳಿಗೆಲ್ಲ ಕಾರಣನೆಂದು ಹೇಳುವುದು ತಪ್ಪು. ಏಕೆಂದರೆ ಮನುಷ್ಯರಿಗೆ ಶಾಸ್ತ್ರಗಳಲ್ಲಿ ಹೇಳಿರುವ ವಿಧಿಗಳನ್ನು ಅನುಸರಿಸುವುದಕ್ಕೆ ಅಥವಾ ಅವುಗಳನ್ನು ಉಲ್ಲಂಘನೆ ಮಾಡುವುದಕ್ಕೆ ಸ್ವಾತಂತ್ರ್ಯವಿದೆ. ತನ್ನ ಕರ್ಮಗಳ ಫಲಗಳಿಗನುಗುಣವಾಗಿ ಮಾನವನು ಪುಣ್ಯ ಅಥವಾ ಪಾಪವನ್ನು ಹೊಂದುತ್ತಾನೆ; ಮತ್ತು ಈಶ್ವರನು ಆ ಕರ್ಮಗಳ ಫಲವನ್ನು ಕೊಡುತ್ತಾನೆ. ಅಷ್ಟೇ. ಹಿಂದಿನ ಜನ್ಮದಲ್ಲಿ ಮಾಡಲಾದ ಕೆಟ್ಟ ಕರ್ಮಗಳೇ ಈ ಜನ್ಮದಲ್ಲಿ ಕಷ್ಟಗಳನ್ನುಂಟು ಮಾಡುತ್ತವೆ ಎಂದು ಹೇಳಿದರೆ, ಹಾಗಾದರೆ, ಹಿಂದಿನ ಜನ್ಮದಲ್ಲಿ ಅನುಭವಿಸಿದ ಕಷ್ಟ ಗಳಿಗೆ ಕಾರಣವೇನೆಂದು ವ್ಯಕ್ತಿಯು ಕೇಳಬಹುದು. ಇದಕ್ಕೆ ಉತ್ತರ ಅವರ ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳೇ ಎಂದು. ಸಂಸಾರವು ಅನಾದಿಯಾದುದರಿಂದ, ಯಾವ ಕರ್ಮವೂ ಇಲ್ಲದೆ ನಮ್ಮ ಮೊದಲಿನ ಜನ್ಮವು ಯಾವಾಗ ಪ್ರಾರಂಭವಾಯಿತು ಎಂದು ಕೇಳುವುದು ಅಸಂಗತ ಪ್ರಶ್ನೆ. ಪ್ರತಿಯೊಂದು ಕಲ್ಪದಲ್ಲಿಯೂ ಈಶ್ವರನು ಸೃಷ್ಟಿ ಮಾಡುತ್ತಾ ಹಿಂದಿನ ಕಲ್ಪದಲ್ಲಿದ್ದುದನ್ನೇ ಅಭಿವ್ಯಕ್ತಗೊಳಿಸುತ್ತಾನೆಯೇ ಹೊರತು ಹೊಸದಾಗಿ ಯಾವುದನ್ನೂ ಸೃಷ್ಟಿಮಾಡುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರನಿಗೆ ಭೂತ, ಭವಿಷ್ಯತ್ ಮತ್ತು ವರ್ತಮಾನಗಳು ತಿಳಿದಿವೆಯೆಂದು ಹೇಳ ಲಾಗಿದೆ. ಅವನಿಗೆ ಮುಂದೇನಾಗುವುದೆಂಬುದು ತಿಳಿದಿರುವುದಾದರೆ, ಮುಂದೆ ಜನಗಳು ಹೇಗೆ ವರ್ತಿಸುತ್ತಾರೆಂಬುದು ಪೂರ್ವನಿಶ್ಚಿತವಾಗಿರುವುದೆಂದು ಅರ್ಥವಾಗುತ್ತದೆ. ಅದು ವಾಸ್ತವವಾದರೆ, ವಿಧಿಯ ನಿಯಮದಂತೆ ಮನುಷ್ಯನು ವರ್ತಿಸಬೇಕಾಗುತ್ತದೆ. ಅಲ್ಲದೆ, ವ್ಯಕ್ತಿಯೊಬ್ಬನು ಆಧ್ಯಾತ್ಮಿಕ ನಿಯಮಗಳಿಗೆ ವಿರುದ್ಧವಾಗಿ ವರ್ತಿಸುವುದಾದರೆ, ಅವನು (ಈಶ್ವರನು) ಭವಿಷ್ಯತ್ತನ್ನು ನಿರ್ಧರಿಸಲು ಸಾಧ್ಯವಿಲ್ಲವೆಂಬುದು ಸೂಚಿತವಾಗುತ್ತದೆ. ಆದ್ದರಿಂದ, ಅವನು (ಈಶ್ವರನು) ಸರ್ವಜ್ಞನೆಂದು ಹೇಗೆ ಹೇಳುವುದು ?

ವಾಸ್ತವವಾಗಿ, ಪ್ರಪಂಚವು ಮಾಯೆಯಿಂದ ಜನ್ಯವಾದುದು, ಹಾಗೂ ಈಶ್ವರನು ಮಾಯೆಯ ನಿಯಂತೃ. ಈ ಅರ್ಥದಲ್ಲಿ, ಎಲ್ಲವೂ ಅವನ ಅಪೇಕ್ಷೆಯಂತೆ ನಡೆಯುತ್ತವೆ ; ಅಂದರೆ, ಮನುಷ್ಯರ ಸ್ವತಂತ್ರವಾದ ಮಾನಸೀಶಕ್ತಿ ಮತ್ತು ವಿಧಿಯಂತೆ ತೋರುತ್ತದೆ. ಈ ರೀತಿಯಾಗಿ ವಿಚಾರ ಮಾಡಿದಾಗ, ಅವನು ಸರ್ವಜ್ಞ ಮತ್ತು ವಿಧಿ ಗನುಗುಣವಾಗಿ ಎಲ್ಲವೂ ಹೋಗಬೇಕಾಗಿಲ್ಲ ಎಂಬಂತಹ ಭಾವನೆಗಳನ್ನು ಯಾವ ವಿರೋಧವೂ ಇಲ್ಲದೆ ಅರ್ಥಮಾಡಿಕೊಳ್ಳಬಹುದು. ಪರೀಕ್ಷೆಗಾಗಿ ಸರಿಯಾದ ಸಿದ್ಧತೆ ಗಳನ್ನು ಒಬ್ಬನು ಮಾಡಿಕೊಂಡಿರುವುದಿಲ್ಲವೆಂದು ಇಟ್ಟುಕೊಳ್ಳೋಣ. ಆಗ, ಅವನು ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದಿಲ್ಲವೆಂದು ನಿಶ್ಚಯವಾಗಿ ನಾವು ಹೇಳಲು ಸಾಧ್ಯ ವಿಲ್ಲವೇ ? ಇದನ್ನು ನಾವು ಹೇಳಿದ ಮಾತ್ರದಿಂದ, ಪರೀಕ್ಷೆಗೆ ಮುಂಚಿತವಾಗಿ ವಿದ್ಯಾರ್ಥಿಗೆ ಓದುವುದಕ್ಕೆ ಅಥವಾ ಓದದಿರುವುದಕ್ಕೆ ಸ್ವಾತಂತ್ರ್ಯವಿಲ್ಲವೆಂದು ಹೇಳ ಲಾದೀತೇ ? ಹೀಗೆಯೇ, ಅವನು (ಈಶ್ವರನು) ತನ್ನ ಸೃಷ್ಟಿಯೆಲ್ಲವನ್ನೂ ತಿಳಿದಿದ್ದಾ ನೆಂದು ಗ್ರಹಿಸುವುದಾದರೆ, ಈಶ್ವರನು ಸರ್ವಜ್ಞನೆಂದು ಹೇಳುವುದಕ್ಕೆ ಯಾವ ತೊಂದ ರೆಗೂ ಅವಕಾಶವಿಲ್ಲವಾಗುತ್ತದೆ.

ಶರದಿಂದುವಿಕಾಸಿ ಮಂದಹಾಸಾಂ
ಸ್ಫುರದಿಂದೀವರಲೋಚನಾಭಿರಾಮಾಮ್ ||
ಅರವಿಂದಸಮಾನಸುಂದರಾಸ್ಯಾಂ
ಅರವಿಂದಾಸನಸುಂದರೀಮುಪಾಸೇ ||

ಶ್ರೀ ಶಂಕರ ಭಗವತ್ಪಾದರು ಅನೇಕ ಭಾಷ್ಯಗ್ರಂಥಗಳನ್ನು (ಉಪನಿಷತ್ತು, ಗೀತೆ ಮತ್ತು ಬ್ರಹ್ಮಸೂತ್ರಗಳ ಮೇಲೆ) ಬರೆದರಲ್ಲದೆ, ಸುಲಭವಾಗಿ ತತ್ತ್ವಬೋಧೆ ಯಾಗಲು ಪ್ರಕರಣಗಳೆಂಬ ಲಘು ಗ್ರಂಥಗಳನ್ನು ರಚಿಸಿದ್ದಾರೆ. ಭಾಷ್ಯ ಗ್ರಂಥಗಳನ್ನು ಅಧ್ಯಯನ ಮಾಡಿ ತತ್ತ್ವವನ್ನು ತಿಳಿಯಬೇಕಾದರೆ ಗುರುವು ಅತ್ಯವಶ್ಯ. ಇದರ ಜೊತೆಗೆ ಅಧ್ಯಯನ ಮಾಡುವವನ ಪ್ರಜ್ಞೆಯೂ ವಿಶಿಷ್ಟವಾಗಿರಬೇಕಾಗುತ್ತದೆ. ಅದು

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಕರಣ ಗ್ರಂಥಗಳನ್ನು ಅಧ್ಯಯನ ಮಾಡುವಾಗ ಹೆಚ್ಚಿನ ಶ್ರಮವೇನೂ ಬೇಕಾಗುವು ದಿಲ್ಲ. ಈ ಗ್ರಂಥಗಳು ಸುಲಭವಾದ ಶೈಲಿಯಲ್ಲಿ ಭಾಷ್ಯ ಗ್ರಂಥಗಳು ತಿಳಿಸಿಕೊಡುವ ತತ್ತ್ವವನ್ನೇ ತಿಳಿಸಿಕೊಡುತ್ತವೆ.

ಶಾಸ್ತ್ರೇಷುದುರ್ಗ್ರಹೋಽಪ್ಯರ್ಥಃ ಸ್ವರತೇ ಕವಿಸೂಕ್ತಿಷು ।
ಹೃದ್ಯಂ ಕರಗತಂ ರತ್ನಂ ಧಾರುಣಂ ಫಣಿಮೂರ್ಧನಿ ॥

(ಶಾಸ್ತ್ರಗಳಿಂದ ತಿಳಿಯಲು ಬಹು ಕಠಿಣವಾದ ವಿಷಯಗಳನ್ನೂ ಕವಿಗಳ ಸೂಕ್ತಿಗಳಿಂದ ಸುಲಭವಾಗಿ ತಿಳಿಯಬಹುದಾಗಿದೆ ; ರತ್ನವೊಂದು ಸರ್ಪದ ತಲೆಯ ಮೇಲಿದ್ದಾಗ ಭಯವನ್ನುಂಟುಮಾಡಿದರೆ, ಒಬ್ಬನ ಕೈಲಿದ್ದಾಗ ಸುಂದರವಾಗಿರುತ್ತದೆ)—ಎಂದು ನೀಲಕಂಠದೀಕ್ಷಿತರು ಒಂದು ಕಡೆ ಹೇಳಿದ್ದಾರೆ.

ಒಂದು ವಿಷಯವನ್ನು ಶಾಸ್ತ್ರರೀತ್ಯಾ ವಿವರಿಸಿದರೆ, ಅದನ್ನು ಗ್ರಹಿಸಲು ಬಹು ಕಷ್ಟವಂತೆ ; ಅದನ್ನೇ ಕವಿಸೂಕ್ತಿಯಿಂದ ತಿಳಿಸಿದಲ್ಲಿ ಅದು ಸುಲಭವಾಗಿ ಅರ್ಥವಾಗುವು ದಂತೆ. ಉದಾಹರಣೆಗೆ—ವೈಜ್ಞಾನಿಕ ವಿಷಯಗಳನ್ನು ಗಣಿತ ಶಾಸ್ತ್ರ ಪುರಸ್ಸರವಾಗಿ ವಿವರಿಸಿದರೆ ಜನರಿಗೆ ಅರ್ಥವಾಗುವುದಿಲ್ಲ. ಅದೇ ವಿಷಯಗಳನ್ನು ಗಣಿತ ಶಾಸ್ತ್ರದ ಸಹಾಯವಿಲ್ಲದೆ ನಾವು ನೋಡಿರುವ ವಸ್ತುಗಳ ದೃಷ್ಟಾಂತದೊಂದಿಗೆ ವಿವರಿಸಿದರೆ ಅರ್ಥವಾಯಿತೆನ್ನುತ್ತೇವೆ. ಆದರೆ, ಆ ವಿಷಯಗಳನ್ನು ನಂತರ ನಾವು ನಿರೂಪಿಸಲು ಅಸಮರ್ಥರಾಗುತ್ತೇವೆ. ಆದರೆ, ಶಾಸ್ತ್ರಗ್ರಂಥಗಳ ವಿಷಯಗಳ ಸಂಬಂಧದಲ್ಲಿ ಹಾಗಿರುವು ದಿಲ್ಲ. ಜನರು ಅದನ್ನು ಓದಿ ಅರ್ಥ ಮಾಡಿಕೊಳ್ಳುವುದಲ್ಲದೆ, ಅದನ್ನು ಅನುಷ್ಠಾನ ಮಾಡಲೂ ಸಮರ್ಥರಾಗುತ್ತಾರೆ.

ಶತಶ್ಲೋಕೀ ಎಂಬುದೊಂದು ಪ್ರಕರಣ ಗ್ರಂಥ. ಅದರ ಆರಂಭದಲ್ಲಿ ಹೀಗೆ ಹೇಳಿದೆ—

ದೃಷ್ಟಾಂತೋನೈವದೃಷ್ಟಃ ತ್ರಿಭುವನಜಠರೇ ಸದ್ಗುರೋರ್ಜ್ಞಾನದಾತುಃ
ಸ್ಪರ್ಶಶ್ಚೇತ್ತತ್ರಕಲ್ಪ್ಯಃ ಸ ನಯತಿ ಯದಹೋ ಸ್ವರ್ಣತಾಮಶ್ಮ-
ಸಾರಮ್ ।

ನ ಸ್ಪರ್ಶತ್ವಂ ತಥಾಪಿ ಶ್ರಿತಚರಣಯುಗೇ ಸದ್ಗುರೋಸ್ಸ್ವೀಯ ಶಿಷ್ಯೇ
ಸ್ವೀಯಂಸ್ಸಾಮ್ಯಂ ವಿಧತ್ತೇ ಭವತಿ ನಿರುಪಮಃ ತೇನ ವಾ ಲೌಕಿಕೋಽಪಿ॥

(ಮೂರು ಲೋಕಗಳಲ್ಲಿಯೂ ಜ್ಞಾನವನ್ನು ನೀಡುವ ಸದ್ಗುರುವಿಗೆ ದೃಷ್ಟಾಂತವಾಗುವ ವಸ್ತುವು ಇಲ್ಲ ; ಸ್ಪರ್ಶಮಣಿಯನ್ನು ಆ ವಿಷಯದಲ್ಲಿ ಕಲ್ಪನೆ ಮಾಡುವುದಾದರೆ, ಅದು

Sri Vidyabharathi Book Centre, Sringeri

CC-O. In Public Domain. Digitized by eGangotri

ತನ್ನ ಸಂಪರ್ಕಕ್ಕೆ ಬಂದ ಕಬ್ಬಿಣವನ್ನೇನೋ ಚಿನ್ನವಾಗಿ ಮಾರ್ಪಡಿಸುತ್ತದೆ. ಆದರೆ, ಆ ಕಬ್ಬಿಣವನ್ನು ಇನ್ನೊಂದು ಸ್ಪರ್ಶಮಣಿಯನ್ನಾಗಿಸದು. ಸದ್ಗುರುವು ತನ್ನ ಚರಣಾರವಿಂದಗಳಲ್ಲಿ ಶರಣು ಹೊಂದಿರುವ ಶಿಷ್ಯನಿಗೆ ತನ್ನದೇ ಸ್ವಾಭಾವಿಕವಾದ ಸ್ಥಿತಿಯನ್ನು ನೀಡುತ್ತಾನೆ. ಆದ್ದರಿಂದ ಲೌಕಿಕವಿದ್ಯಾದಾಯಕನಾದ ಗುರುವು ಅಪ್ರತಿಮನಾಗುತ್ತಾನೆ).

ಯಾವುದಾದರೂ ವಸ್ತುವನ್ನು ಮತ್ತೊಬ್ಬರಿಗೆ ಪರಿಚಯಿಸುವಲ್ಲಿ ಅವರಿಗೆ ಪರಿಚಿತವಾದ ವಸ್ತುವಿನ ಸ್ವರೂಪವನ್ನು ಮುಂದಿಟ್ಟುಕೊಂಡು, ಇದರಂತೆ ಆ ವಸ್ತುವೂ ಇದೆ. ಅಂದರೆ ಸುಲಭವಾಗಿ ತಿಳಿಯುವುದು ಸಹಜ. ಹಾಗೆಯೇ ಗುರುವಿನ ವಿಷಯದಲ್ಲೂ ಹೇಳಬೇಕಾದಲ್ಲಿ ಲೋಕಸಿದ್ಧವಾದ ವಸ್ತುವೊಂದು ಅದೇ ರೀತಿಯಾಗಿದೆಯೇ ಎಂದು ಭಗವತ್ಪಾದರು ಪ್ರಶ್ನಿಸಿಕೊಂಡರು. ಗುರುವು ಒಬ್ಬ ಅಜ್ಞನನ್ನು ಮಹಾವಿಜ್ಞನನ್ನಾಗಿ ಮಾಡುತ್ತಾನೆ. ಈ ತರಹದ ವಸ್ತುವೊಂದು ಲೋಕದಲ್ಲಿದೆಯೇ ಎಂಬ ಪ್ರಶ್ನೆಗೆ—

ಸ್ಪರ್ಶಶ್ಚೇತ್ತತ್ರಕಲ್ಪ್ಯಃ ಸ ನಯತಿ ಯದಹೋ ಸ್ವರ್ಣತಾಮಶ್ಮಸಾರಮ್.

ಒಂದು ಕಬ್ಬಿಣದ ತುಂಡು ಸ್ಪರ್ಶಮಣಿಯನ್ನು ಸ್ಪರ್ಶಿಸಿದಲ್ಲಿ ಅದು ಚಿನ್ನವಾಗಿ ಪರಿವರ್ತನೆಗೊಳ್ಳುವುದಂತೆ. ಚಿನ್ನದ ಬೆಲೆಯ ಮುಂದೆ ಕಬ್ಬಿಣದ ಬೆಲೆ ಯಾವ ಲೆಕ್ಕ? ಸ್ಪರ್ಶಮಣಿಗೆ ತನ್ನನ್ನು ತಾಕಿದ ಕಬ್ಬಿಣದ ತುಂಡುಗಳನ್ನು ಸ್ವರ್ಣವಾಗಿ ಮಾರ್ಪಡಿಸುವ ಶಕ್ತಿಯಿದೆಯಂತೆ. ಹಾಗೆಯೇ, ಒಬ್ಬ ಗುರುವೂ ಕೂಡ ಜಡನಾದ ಶಿಷ್ಯನನ್ನು ವಿಜ್ಞಾನಮೂರ್ತಿಯನ್ನಾಗಿ ಪರಿವರ್ತಿಸುತ್ತಾನೆ. ಮೇಲ್ನೋಟಕ್ಕೆ ಗುರುವಿಗೆ ದೃಷ್ಟಾಂತವಾಗಿ ಸ್ಪರ್ಶಮಣಿಯು ಸರಿಯಾಗಿದೆ ಎನಿಸುತ್ತದೆ.

ಆದರೆ, ಭಗವತ್ಪಾದರು ಈ ದೃಷ್ಟಾಂತದಲ್ಲಿ ಸ್ವಾರಸ್ಯವಿಲ್ಲವೆನ್ನುತ್ತಾರೆ. ಏಕೆ? ಸ್ಪರ್ಶಮಣಿಯೇನೋ ತನ್ನ ಸಂಪರ್ಕಕ್ಕೆ ಬಂದ ಕಬ್ಬಿಣವನ್ನು ಸ್ವರ್ಣವಾಗಿಸುವುದು ದಿಟ. ಆದರೆ ಆ ಚಿನ್ನದ ತುಂಡಿನ ಸಂಪರ್ಕಕ್ಕೆ ಬೇರೊಂದು ಕಬ್ಬಿಣವನ್ನು ತಂದರೆ ಯಾವುದೇ ಬದಲಾವಣೆ ಇರದೆ, ಚಿನ್ನವು ಚಿನ್ನವಾಗಿಯೇ ಹಾಗೂ ಕಬ್ಬಿಣವು ಕಬ್ಬಿಣವಾಗಿಯೇ ಉಳಿಯುತ್ತದೆ. ಒಬ್ಬ ಸದ್ಗುರುವಿನ ವಿಷಯದಲ್ಲಿ ಹಾಗೆ ಹೇಳಲು ಬಾರದು. ಒಬ್ಬ ಶ್ರದ್ಧಾಭಕ್ತಿಗಳುಳ್ಳ ಶಿಷ್ಯನು ಗುರುವಿನಿಂದ ಜ್ಞಾನವನ್ನಷ್ಟೇ ಪಡೆಯದೆ, ತಾನೂ ಕೂಡ ತನ್ನ ಶಿಷ್ಯನನ್ನು ತನ್ನಂತೆ ಮಾಡುವ ಶಕ್ತಿಯನ್ನೂ ಸಹ ಪಡೆಯುತ್ತಾನೆ. ಅಂದರೆ, ಗುರುವು ತನ್ನ ಶಿಷ್ಯನಿಗೆ ಜ್ಞಾನವನ್ನು ನೀಡುವುದಷ್ಟೇ ಅಲ್ಲದೆ, ಮತ್ತೊಬ್ಬ ಅಜ್ಞನನ್ನು ಪ್ರಾಜ್ಞನನ್ನಾಗಿ ಮಾರ್ಪಡಿಸುವ ಶಕ್ತಿಯನ್ನೂ ನೀಡುತ್ತಾನೆ. ಆದ್ದರಿಂದಲೇ—

Sri Vidyabharathi Book Centre, Sringeri

CC-O. In Public Domain. Digitized by eGangotri

ನಿರುಪಮಸ್ತೇನ ವಾ ಲೌಕಿಕೋಽಪಿ

(ಲೌಕಿಕವಾದ ವಿಷಯಗಳ ಗುರುವೂ ಕೂಡ ಹೋಲಿಕೆಗೆ ಸಿಗುವುದಿಲ್ಲ)—ಒಬ್ಬ ಸಾಮಾನ್ಯ ಅಧ್ಯಾಪಕನ ವಿಷಯದಲ್ಲೇ ಹೀಗಾದಲ್ಲಿ, ಬ್ರಹ್ಮಜ್ಞಾನವನ್ನು ಕೊಡುವ ಸದ್ಗುರುವಿನ ವಿಷಯದಲ್ಲಿ ಹೇಳುವುದು ತಾನೇ ಏನಿದೆ ; ಇಂತಹ ಗುರುಗಳ ದರ್ಶನ ಭಾಗ್ಯ ಲಭಿಸುವುದೇ ಬಹು ಪುಣ್ಯವಿಶೇಷದಿಂದ.

ಶ್ರವಣಯಾಪಿ ಬಹುಭಿಃ ಯೋ ನ ಲಭ್ಯಃ
ಶೃಣ್ವಂತೋಽಪಿ ಬಹವೋ ಯಂ ನ ವಿದ್ಯುಃ ।

ಎಂಬ ವಚನದಂತೆ, ಅಂತಹ (ಬ್ರಹ್ಮಜ್ಞನಾಗಿರುವ ಹಾಗೂ ವಾಸ್ತವವಾಗಿ ಬ್ರಹ್ಮವೇ ಆಗಿರುವ) ಗುರುವಿನ ದರ್ಶನವೇ ದುರ್ಲಭ. ಪ್ರಾಪ್ತ ದರ್ಶನದಿಂದ, ನಾವು ಅವರಿಂದ ತತ್ತ್ವದ ಬಗ್ಗೆ ಕೇಳಿ, ಅದನ್ನು ಮನನ ಮಾಡಿದರೆ ಅದರಿಂದ ಮತ್ತೂ ವಿಶೇಷಫಲ. ಇಷ್ಟರ ಮೇಲೆ ಅವರಿಂದ ನಮಗೆ ಆತ್ಮಸಾಕ್ಷಾತ್ಕಾರ ಉಂಟಾದಲ್ಲಿ ಕೇಳಬೇಕಾದ್ದು ಏನೂ ಇರದು.

ಕುಲಂ ಪವಿತ್ರಂ ಜನನೀಕೃತಾರ್ಥಾ ವಸುಂಧರಾ ಪುಣ್ಯವತೀ ಚ ಯೇನ– (ಅವರಿಂದ ಕುಲವು ಪವಿತ್ರವಾಗುತ್ತದೆ. ತಾಯಿಯೂ ಕೃತಾರ್ಥಳಾಗುತ್ತಾಳೆ, ಮತ್ತು ಭೂಮಿಯೂ ಪುಣ್ಯವತಿಯಾಗುತ್ತಾಳೆ) ಎಂದು ಹೇಳಿದಂತೆ ಅವನು—

ಸ್ವಯಂ ಮುಕ್ತಃ ಪರಾನಪಿ ಮೋಚಯಂತಿ–
(ತಾನೂ ಮುಕ್ತನಾಗಿ, ಬೇರೆಯವರನ್ನೂ ಮುಕ್ತಗೊಳಿಸುತ್ತಾನೆ).

ಇಂತಹ ಮಹಿಮೆಯುಳ್ಳ ಆಚಾರ್ಯನ ವರ್ಣನೆಯನ್ನು ಭಗವತ್ಪಾದರು ವಿವೇಕ ಚೂಡಾಮಣಿಯಲ್ಲಿ ಸ್ವಾರಸ್ಯವಾಗಿ ಮಾಡಿದ್ದಾರೆ—

ಶಾಂತೋ ಮಹಾಂತೋ ನಿವಸಂತಿ ಸಂತಃ
ವಸಂತವಲ್ಲೋಕಹಿತಂ ಚರಂತಃ ।
ತೀರ್ಣಾಃಸ್ವಯಂ ಭೀಮಭವಾರ್ಣವಂ
ಜನಾನಹೇತುನಾನ್ಯಾನಪಿ ತಾರಯಂತಃ ॥

(ವಸಂತ ಋತುವಿನಂತೆ ಜನರ ಹಿತವನ್ನೇ ಬಯಸುತ್ತಾ, ಭಯಂಕರವಾದ ಭವಸಾಗರವನ್ನು ತಾವು ದಾಟಿದವರಾಗಿ, ಯಾವ ಸ್ವಾರ್ಥವೂ ಇಲ್ಲದೆ ಬೇರೆಯವರನ್ನೂ ದಾಟಿಸುತ್ತಾ ಶಾಂತರಾಗಿರುವ ಮಹಾತ್ಮರಿದ್ದಾರೆ)—

Sri Vidyabharathi Book Centre, Sringeri

CC-O. In Public Domain. Digitized by eGangotri

ನದಿಯನ್ನು ದಾಟಬೇಕಾದ ಸಂದರ್ಭದಲ್ಲಿ ನಾವು ಅಂಬಿಗನ ಬಳಿಸಾ ನಮ್ಮನ್ನು ದಾಟಿಸಲು ಕೋರುತ್ತೇವೆ. ದಾಟಿಸಲು ಒಪ್ಪಿದ ಅವನು ದಾಟಿಸಿದ ತರುವಾಯ ನಮ್ಮಿಂದ ಶುಲ್ಕವನ್ನು ಅಪೇಕ್ಷಿಸುತ್ತಾನೆ. ಆದರೆ ಗುರುಗಳು "ಅಹೇತು ನಾನ್ಯಾನಪಿ ತಾರಯಂತಃ"—ಎಂಬಂತೆ ತಾವು ಭವಸಾಗರವನ್ನು ದಾಟಿದ ಮೇಲೆ ಮತ್ತೊಬ್ಬರನ್ನು ದಾಟಿಸಲು ಯಾವ ಸ್ವಾರ್ಥವನ್ನೂ ಹೊಂದಿರುವುದಿಲ್ಲ. "ಪರೋಪಕಾರಾಯ ಬಲಂ ಮನಃ" ಎಂಬಂತೆ ಅವರ ಉದ್ದೇಶ ಪರೋಪಕಾರ ಮಾತ್ರ.

"ವಸಂತವಲ್ಲೋಕ ಹಿತಂ ಚರಂತಃ"—ವಸಂತಋತು ಬಂದಾಗ ಜನರು ಆನಂದಿತರಾಗುತ್ತಾರೆ. ಈ ಆನಂದವನ್ನು ನೀಡುವ ವಸಂತಋತುವು ತನಗೆ ಯಾವುದೇ ಫಲಾಪೇಕ್ಷೆ ಇಟ್ಟುಕೊಳ್ಳದೆ, ತನ್ನ ಸ್ವಭಾವವೆಂಬಂತೆ, ಕರ್ತವ್ಯವೆಂಬಂತೆ ಆನಂದ ನೀಡುತ್ತದೆ. ಸತ್ಪುರುಷರ ಸ್ವಭಾವವೂ ಹಾಗೆಯೇ ಇರುತ್ತದೆ. ಅಂತಹ ಗುರುವಿನಲ್ಲಿ ಕಲಿಯುವವನು ಧನ್ಯನೇ ಸರಿ.

ಅಂತಹ ಗುರುಗಳ ಲಕ್ಷಣಗಳೇನು ? ಭಗವತ್ಪಾದರು ವಿವೇಕ ಚೂಡಾಮಣಿ ಯಲ್ಲಿ ಹೀಗೆ ಹೇಳಿದ್ದಾರೆ—

ಬ್ರಹ್ಮಾಕಾರತಯಾ ಸದಾ ಸ್ಥಿತತಯಾ ನಿರ್ಮುಕ್ತಬಾಹ್ಯಾರ್ಥಧೀಃ
ಅನ್ಯಾವೇದಿತಭೋಗ್ಯಭೋಗಕಲನಾ ನಿದ್ರಾಲುವತ್ ಬಾಲವತ್ ।
ಸ್ವಪ್ನಾಲೋಕಿತಲೋಕವಜ್ಜಗದಿದಂ ಪಶ್ಯನ್ ಕ್ವಚಿಲ್ಲಬ್ಧಧೀಃ
ಆಸ್ತೇ ಕಶ್ಚಿದನಂತಪುಣ್ಯಫಲಭುಗ್ಧನ್ಯಃ ಸಮಾನ್ಯೋ ಭುವಿ ॥

(ಅನಂತವಾದ ಸದ್ಗುಣಗಳ ಫಲವನ್ನು ಅನುಭವಿಸುವವನೂ, ಯಾರ ಮತಿಯು ಸದಾ ಬ್ರಹ್ಮಸ್ವರೂಪದಲ್ಲಿರುವುದರಿಂದ ಬಾಹ್ಯ ವಸ್ತುಗಳು ಸಂಪೂರ್ಣವಾಗಿ ಇಲ್ಲ ವಾಗಿವೆಯೋ, ಯಾರು ನಿದ್ರಿಸುತ್ತಿರುವಂತೆಯೋ ಅಥವಾ ಮಗುವಿನಂತೆಯೋ ಬೇರೆ ಯವರ ಬಲವಂತಕ್ಕಾಗಿ ಲೋಕ ವ್ಯವಹಾರದಲ್ಲಿ ತೊಡಗುತ್ತಾರೆಯೋ, ಮತ್ತು ಕೆಲವೊಮ್ಮೆ ಸಮಾಧಿ ಸ್ಥಿತಿಯಿಂದ ಹೊರಬಂದು ಬಾಹ್ಯ ಪ್ರಪಂಚವನ್ನು ಸ್ವಪ್ನದಂತೆ ಯಾರ ಮನಸ್ಸು ಕಾಣುವುದೋ ಅಂತಹ ಸತ್ಪುರುಷನೊಬ್ಬನಿದ್ದಾನೆ. ಈ ಪ್ರಪಂಚ ದಲ್ಲಿ ಅವನು ಪೂಜಾರ್ಹನು.)

"ಬ್ರಹ್ಮಾಕಾರತಯಾ"—ನಮ್ಮ ಮನಸ್ಸು ಸದಾ ವಿಷಯಾಕಾರವಾಗಿ ಸರಿಯುತ್ತಿದ್ದರೆ, ಸತ್ಪುರುಷರ ಮನಸ್ಸು ಯಾವಾಗಲೂ ನಿರ್ಗುಣ ನಿರಾಕಾರವಾದ ಸಚ್ಚಿದಾನಂದ ಸ್ವರೂಪವಾದ ಬ್ರಹ್ಮಾಕಾರವಾಗಿ ಹರಿಯುತ್ತದೆ. ಬಾಹ್ಯ ವಿಷಯ ಗಳ ಗ್ರಹಣೆಗೆ ಅವಕಾಶವಿರುವುದಿಲ್ಲ. "ನಿರ್ಮುಕ್ತ ಬಾಹ್ಯಾರ್ಥಧೀಃ"—ಅವರಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಶಬ್ದ, ಸ್ಪರ್ಶ, ರೂಪ, ರಸ, ಗಂಧಾದಿಗಳ ಸಂಪರ್ಕವೇ ಇರುವುದಿಲ್ಲ. ಮತ್ತೆ "ಅನ್ಯಾವೇದಿತ ಭೋಗ್ಯಭೋಗ ಕಲನಾ"—ಹಾಗಿದ್ದ ಪಕ್ಷದಲ್ಲಿ ಅವರಿಗೆ ಪ್ರಪಂಚದ ವ್ಯವಹಾರವೇ ಇಲ್ಲವೇ ? ಇದಕ್ಕೆ ಭಗವಂತನು 'ಅವನಿಗೆ ಯಾವುದೇ ವ್ಯವಹಾರದ ಅವಶ್ಯಕತೆ ಇಲ್ಲದಿದ್ದರೂ ಅನ್ಯರ ಪುಣ್ಯ ವಿಶೇಷದಿಂದ ಬಾಹ್ಯ ವ್ಯವಹಾರದಲ್ಲಿ ತೊಡಗುತ್ತಾರೆ' ಎಂದು ತಿಳಿಸಿದ್ದಾನೆ. ಹಾಗಿದ್ದ ಪಕ್ಷದಲ್ಲಿ, ಯಾರು ಏನೇ ಹೇಳಿದರೂ ಆ ಸತ್ಪುರುಷನು ಮಾಡುತ್ತಾನೆಯೇ ಎಂಬ ಪ್ರಶ್ನೆ ಬರುತ್ತದೆ. ಅದಕ್ಕೆ ಹಾಗಲ್ಲವೆಂದೇ ಉತ್ತರ. ಈಗಿನ ಕಾಲಕ್ಕೆ ಚೆನ್ನಾಗಿ ಅನ್ವಯಿಸುವ ಒಂದು ಶ್ಲೋಕವನ್ನು ಶ್ರೀ ವಿದ್ಯಾರಣ್ಯರು ತಮ್ಮ ಪಂಚದಶೀ ಎಂಬ ಗ್ರಂಥದಲ್ಲಿ ಬರೆದಿದ್ದಾರೆ.

ಬ್ರಹ್ಮಾದ್ವೈತಸತತ್ತ್ವಸ್ಯ ಯಥೇಷ್ಟಾಚರಣಂ ಯದಿ ।
ಶುನಾಂ ತತ್ತ್ವದೃಶಾಂಚೈವ ಕೋ ಭೇದ್ಯಾಶುಚಿಭಕ್ಷಣೇ ॥

(ಒಬ್ಬ ತತ್ತ್ವಜ್ಞಾನಿಯು ಸ್ವೇಚ್ಛಾಚಾರಿಯಂತೆ ವರ್ತಿಸಿದರೆ, ಒಂದು ನಾಯಿಗೂ ಮತ್ತು ತತ್ತ್ವದರ್ಶಿಗೂ ನಡುವೆ ಅಶುಚಿಯಾದ ಪದಾರ್ಥದ ಭಕ್ಷಣದಲ್ಲಿ ವ್ಯತ್ಯಾಸವೇನಿದೆ ?) ಈಗ ಅನೇಕರ ಮನಸ್ಸಿನಲ್ಲಿ ಹೀಗೆ ಆಲೋಚನೆ ಬರುತ್ತದೆ—

ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥

'ಜ್ಞಾನವು ಎಲ್ಲಾ ಶುಭಾಶುಭ ಕರ್ಮಗಳನ್ನು ನಾಶಮಾಡುತ್ತದೆ. ನಾನು ಜ್ಞಾನಿಯಾದ್ದರಿಂದ, ನಾನು ಮಾಡಿದ ಯಾವುದೇ ಅಸತ್ಕಾರ್ಯದ ಫಲ ನನಗೆ ಅಂಟದು. ಆದ್ದರಿಂದ ನಾನು ಸಿಕ್ಕಿದ್ದನ್ನು ತಿನ್ನಬಹುದು, ಕುಡಿಯಬಹುದು ಮತ್ತು ಮನಬಂದಂತೆ ಕೆಲಸ ಮಾಡಬಹುದು.' ಎಂದು.

ಹೀಗೆ ಒಬ್ಬನು ನಿರ್ಧಾರಕ್ಕೆ ಬಂದರೆ ಅವನನ್ನು ಜ್ಞಾನಿಯೆಂದು ತಿಳಿಯಬಹುದೇ ? ಸತ್ಪುರುಷನ ಸಹವಾಸದಲ್ಲಿ ಬೆಳೆದವನು ಜ್ಞಾನಿಯಾಗದಿದ್ದರೂ, ಅಸತ್ಕಾರ್ಯವನ್ನು ಮಾಡಬೇಕಾದ ಪ್ರಸಂಗದಲ್ಲಿ 'ಛೇ, ಇಂತಹ ಕರ್ಮವನ್ನು ಮಾಡಬಾರದು'—ಎಂದು ತೊರೆದು ಬಿಡುತ್ತಾನೆ. ಹೀಗಿರುವ ಪಕ್ಷದಲ್ಲಿ, ಸದಾ ದೈವಸಂಪರ್ಕದಲ್ಲಿ ಬೆಳೆದ ಬ್ರಹ್ಮಜ್ಞಾನಿಯು ಉನ್ಮಾರ್ಗದಲ್ಲಿ ಪ್ರವರ್ತಿಸುತ್ತಾನೆಂದಾದರೆ, "ಶುನಾಂ ತತ್ತ್ವದೃಶಾಂ ಚೈವ ಕೋ ಭೇದಃ ಅಶುಚಿಭಕ್ಷಣೇ"—ಎಂಬಂತೆ ಶುಚಿ ಇಲ್ಲದ ವಸ್ತುವನ್ನು ತಿನ್ನುವ ವಸ್ತುವಿನ ವಿಷಯದಲ್ಲಿ ಅವನಿಗೂ ಮತ್ತು ನಾಯಿಗೂ ಯಾವ ವ್ಯತ್ಯಾಸವಿದೆ ? ಏಕೆಂದರೆ, ನಾಯಿಯು ಅಶುಚಿಯನ್ನು ತಿನ್ನುವುದು ಮಾತ್ರವಲ್ಲದೇ, ಕೃತ್ಯಾಕೃತ್ಯ ವಿವೇಕವೂ ಇಲ್ಲದಾಗಿರುತ್ತದೆ. ಒಬ್ಬ ತತ್ತ್ವದರ್ಶಿಯೂ ಹಾಗೆಯೇ ಎಂದಾದಲ್ಲಿ ಇವರಿಬ್ಬರಲ್ಲಿ ವ್ಯತ್ಯಾಸವೇನಿದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನಿಯು ಅಸತ್ಕಾರ್ಯದಲ್ಲಿ ಏಕೆ ಪ್ರವೃತನಾಗುವುದಿಲ್ಲವೆಂದರೆ, ಅವನ ಸಂಸ್ಕಾರಗಳು ಉತ್ತಮವಾಗಿದ್ದು ಅವನ ಬುದ್ಧಿಯು ಸ್ವೇಚ್ಛಾಚಾರದಲ್ಲಿ ಪ್ರವರ್ತಿಸುವುದಿಲ್ಲ. ಆದರೆ, ಅವನು ತನ್ನ ಸಮೀಪದಲ್ಲಿರುವವರ ದುಷ್ಕರ್ಮದ ಪ್ರಭಾವದಿಂದ ಅಂತಹ ಕೆಲಸದಲ್ಲಿ ತೊಡಗಿದರೆ, ಅದಕ್ಕೆ ಅವನು ಬಾಧ್ಯನಾಗದೆ ಅದನ್ನು ಅವನ ಕೈಯಲ್ಲಿ ಮಾಡಿಸಿದವರೇ ಬಾಧ್ಯರಾಗುತ್ತಾರೆ. ಅಂತಹ ಸತ್ಪುರುಷನು—'ಅನ್ಯಾವೇದಿತ ಭೋಗ್ಯಭಾಗ್ಯಕಲನಾ'—ಎಂಬಂತೆ ಬೇರೆಯವರಿಂದ ಪ್ರೇರಿತನಾಗಿ ತೊಡಗುತ್ತಾನೆ.

"ನಿದ್ರಾಲುವತ್ ಬಾಲವತ್"—ಸಮಾಧಿಯಲ್ಲಿದ್ದಾಗ ಕೆಲವೊಮ್ಮೆ ಮನಸ್ಸು ಪ್ರಾಪಂಚಿಕ ಮಟ್ಟಕ್ಕೆ ಇಳಿಯುವುದಿಲ್ಲ. ಆ ಸಮಯದಲ್ಲಿ ಯಾರಾದರೂ ಅಂತಹ ಸತ್ಪುರುಷನ ಬಳಿಗೆ ಹೋಗಿ, ಅವನನ್ನು ಅಲುಗಾಡಿಸಿ ಎಬ್ಬಿಸಿ, ಯಾವುದಾದರೂ ಕಾರ್ಯವನ್ನು ಮಾಡಲೇಬೇಕೆಂದು ಆಗ್ರಹ ಪಡಿಸಿದರೆ, ಹಾಗೇ ಆಗಲೆಂದು ಹೇಳುತ್ತಾನೆ. ನಾವು "ನಾನು" ಎಂಬುದಾಗಿ ಹೇಳಿದರೆ, ಅವನು "ಈ ದೇಹ" ಎಂದು ಹೇಳುತ್ತಾನೆ. ಏಕೆಂದರೆ, ಆತನಿಗೆ ದೇಹದಲ್ಲಿ ಆತ್ಮಬುದ್ಧಿ ಬಿಟ್ಟು ಹೋಗಿರುತ್ತದಲ್ಲದೆ, ಯಾವುದರಲ್ಲಿ 'ಅಂದರೆ ಸಚ್ಚಿದಾನಂದ ಸ್ವರೂಪದಲ್ಲಿ' ಅಂತಹ ಭಾವನೆ ಇರಬೇಕೋ ಅಲ್ಲಿ ಆತ್ಮ ಬುದ್ಧಿಯಿರುತ್ತದೆ.

ಮಕ್ಕಳು ನಿದ್ರಿಸುತ್ತಿರುವಾಗ ಕೆಲವೊಮ್ಮೆ ತಾಯಂದಿರು ಅವರನ್ನು ನಿದ್ರೆಯಿಂದೆಬ್ಬಿಸಿ ಊಟ ಮಾಡಿಸಿದಾಗ, ಅರೆ ನಿದ್ರೆಯಲ್ಲಿಯೇ ಊಟವನ್ನು ಮುಗಿಸಿಬಿಡುತ್ತಾರೆ. ಮರುದಿನ ಬೆಳಗ್ಗೆ ಹಿಂದಿನ ರಾತ್ರಿ ಊಟ ಮಾಡಲಿಲ್ಲವೆಂದು ಹಠ ಮಾಡುತ್ತಾರೆ. ಊಟ ಮಾಡಿದೆಯಲ್ಲಾ ಎಂದು ತಾಯಿಯು ಹೇಳಿದಾಗ "ಯಾವಾಗ" ಎಂದು ಪ್ರಶ್ನಿಸುತ್ತಾರೆ. ಆಗ ತಾಯಿಯು "ನಿದ್ದೆಯಲ್ಲಿ" ಎಂದು ಹೇಳಿದಾಗ—"ಹ್ಹಾ ! ಜ್ಞಾಪಕಕ್ಕೆ ಈಗ ಬಂದಿತು" ಎನ್ನುತ್ತದೆ. ಜ್ಞಾನಿಗಳೂ ಕೂಡ ಅದೇ ತರಹ. ಜ್ಞಾನಿಗಳೂ ಕೂಡ ಅವರ ಸೇವೆಗಾಗಿ ಬಂದ ಜನರ ಪ್ರೇರಣೆಯಂತೆ ಅರೆ ನಿದ್ರೆಯಲ್ಲಿದ್ದವರಂತೆ, ಅಥವಾ ಮಕ್ಕಳಂತೆ ಸಾಮಾನ್ಯವಾಗಿ ಕಾರ್ಯೋನ್ಮುಖರಾಗುತ್ತಾರೆ. ಹಾಗಿದ್ದರೆ ಅವರು ಪ್ರಪಂಚವನ್ನು ಹೇಗೆ ಕಾಣುತ್ತಾರೆ.

ಸ್ವಪ್ನಾಲೋಕಿತಲೋಕವಜ್ಜಗದಿದಂ ಪಶ್ಯನ್ ಕ್ವಚಿತ್ ಲಬ್ಧಧೀಃ—

ಅವರ ಮನಸ್ಸು ಆತ್ಮನಲ್ಲೇ ಇದ್ದರೂ, ಮೇಲೆ ಹೇಳಿದಂತೆ ಪ್ರಪಂಚದಲ್ಲಿ ವ್ಯವಹರಿಸುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಗುರುಗಳ ಜೀವನದಲ್ಲಿ ಒಂದು ವಿಶೇಷವೇನೆಂದರೆ–ಅವರಿಗೆ ಯಾರೊಬ್ಬರ ಉಪದೇಶದಿಂದಲೂ ಜ್ಞಾನವುಂಟಾಗಲಿಲ್ಲ. ಅರ್ಜುನನು (ಗೀತೆಯಲ್ಲಿ) ಹೇಳುತ್ತಾನೆ–

ಅಯತಿಃ ಶ್ರದ್ಧಯೋಪೇತೋ ಯೋಗಾಚ್ಚಲಿತಮಾನಸಃ ।
ಅಪ್ರಾಪ್ಯ ಯೋಗಸಂಸಿದ್ಧಿಂ ಕಾ ಗತಿಂ ಕೃಷ್ಣಗಚ್ಛತಿ ॥

(ಎಲೈ ಕೃಷ್ಣನೇ, ಶ್ರದ್ಧೆಯುಳ್ಳವನಾಗಿದ್ದರೂ, ಪ್ರಯತ್ನಿಸದೆ ಹಾಗೂ ಯೋಗಮಾರ್ಗದಿಂದ ಫಲವನ್ನು ಹೊಂದದೆ ಜಾರಿದ ಪುರುಷನಿಗೆ ಯಾವ ಗತಿ ಪ್ರಾಪ್ತವಾಗುತ್ತದೆ ?).

ಭಗವಂತನು ಉತ್ತರಿಸುತ್ತಾ —

ಶುಚೀನಾಂ ಶ್ರೀಮತಾಂ ಗೇಹೇ ಯೋಗಭ್ರಷ್ಟೋಽಭಿಜಾಯತೇ ।
ಅಥವಾ ಯೋಗಿನಾಮೇವ ಕುಲೇ ಭವತಿ ಧೀಮತಾಮ್ ॥

ಏತದ್ಧಿ ದುರ್ಲಭತರಂ ಲೋಕೇ ಜನ್ಮ ಯದೀದೃಶಮ್ ।
ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ॥

(ಯೋಗದಲ್ಲಿ ವಿಫಲನಾದವನು ಶುಚಿಯಾದ ಹಾಗೂ ಶ್ರೀಮಂತರ ಗೃಹದಲ್ಲಿ ಜನಿಸುತ್ತಾನೆ; ಅಥವಾ ಅವನು ಧೀಮಂತರಾದ ಜ್ಞಾನಿಗಳ ಕುಲದಲ್ಲಿ ಹುಟ್ಟುತ್ತಾನೆ. ಅಂತಹ ಜನ್ಮಪ್ರಾಪ್ತಿಯು ಈ ಲೋಕದಲ್ಲಿ ದುರ್ಲಭವೇ ! ಆ ಜನ್ಮದಲ್ಲಿ ಅವನು ತಾನು ಹಿಂದಿನ ಜನ್ಮದಲ್ಲಿ ಆರ್ಜಿಸಿದ ಜ್ಞಾನವನ್ನು ಪಡೆಯುತ್ತಾನೆ.)

ನಾವು ವಿವಿಧ ರೀತಿಯ ಸಂಸ್ಕಾರಗಳುಳ್ಳ ಜನರನ್ನು ನೋಡುತ್ತೇವೆ–ಕೆಲವರು ಪೂರ್ವಜನ್ಮದ ಸಂಸ್ಕಾರದ ಬಲದಿಂದ ಯಾವಾಗಲೂ ಒಳ್ಳೆಯ ಕೆಲಸದಲ್ಲೇ ತೊಡಗುವುದನ್ನು ಕಾಣುತ್ತೇವೆ. ಮತ್ತೆ ಕೆಲವರು ಎಷ್ಟೇ ಯೋಗ್ಯರಾಗಿದ್ದರೂ ಸದಾ ದುಷ್ಕರ್ಮದಲ್ಲಿ ಪ್ರವೃತ್ತರಾಗಿರುವುದನ್ನು ನೋಡುತ್ತೇವೆ. ಏತಕ್ಕೆ ? ದುರ್ಯೋಧನನ ಈ ಮಾತಿನಂತೆ—

ಕೇನಾಪಿ ದೇವೇನ ಹೃದಿಸ್ಥಿತೇನ ಯಥಾ ನಿಯುಕ್ತೋಽಸ್ಮಿ ತಥಾ
ಕರೋಮಿ ॥

(ನನ್ನ ಹೃದಯದಲ್ಲಿರುವ ಯಾವನೋ ಒಬ್ಬ ದೇವರ ಪ್ರೇರಣೆಯಂತೆ ಕಾರ್ಯದಲ್ಲಿ ತೊಡಗುತ್ತೇನೆ.)

ನಮ್ಮ ಗುರುಗಳ ಮಟ್ಟಿಗೆ ಹೇಳಬಹುದಾದರೆ, ಅವರ ಅಂತರ್ಮುಖತ್ವವು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ, ಶಾಸ್ತ್ರವನ್ನು ಅಧ್ಯಯನಮಾಡಿ ಮತ್ತು ಆಧ್ಯಾ

Sri Vidyabharathi Book Centre, Sringeri

CC-O. In Public Domain. Digitized by eGangotri

ತ್ರಿಕ ಸಾಧನೆಗಳನ್ನು ಅನುಷ್ಠಾನ ಮಾಡಿದ ನಂತರ ಬಂದದ್ದಲ್ಲ. ಅವರಿಗೆ ಜನ್ಮ ಬಂದಿತ್ತು. ಬಾಲ್ಯದಲ್ಲಿ ಅವರಿಗೆ ಆಗಾಗ ಪೇಟೆಗೆ ಹೋಗುವ ಸಂದರ್ಭ ಒದ ತ್ತಿತ್ತು. ಅವರಿಗೆ ಮನೆಯ ಕೆಲಸಗಳಲ್ಲಿ ಯಾವುದೇ ಹಂಗು ಇಲ್ಲದಿದ್ದರೂ, ಅವ ಮಾತಾಪಿತೃಗಳಲ್ಲಿ ಕಳಕಳಿ ಇರಬೇಕಿತ್ತು. ಪೇಟೆಗೆ ಹೋಗಬೇಕಾಗಿ ಬಂದಲ್ಲಿ ಅವ "ಮೂಕ ಪಂಚಶತೀ"-ಎಂಬ ಸ್ತೋತ್ರವನ್ನು ಮನನ ಮಾಡುತ್ತಾ ಹೊರಟು, ಕೆ ವೊಮ್ಮೆ ಪೇಟೆ ಬೀದಿಯನ್ನು ದಾಟಿ ಊರಾಚೆ ಬಂದುಬಿಡುತ್ತಿದ್ದರು. (ಅವ ಮನಸ್ಸು ಆ ಶ್ಲೋಕಗಳಲ್ಲಿದ್ದ ದೇವೀ ಸ್ತುತಿಯಲ್ಲೇ ಮಗ್ನವಾಗಿ ತಿಳಿಯದೆಯೇ ಅವ ಊರಾಚೆಗೆ ಬಂದುಬಿಡುತ್ತಿದ್ದರು). ಆಗ ಅವರಿಗೆ ಓಹೋ, ನಾನು ಮಾರುಕಟ್ಟೆ ಹೋಗಬೇಕಿದ್ದವನು; ಊರಾಚೆಗೆ ಬಂದು ಬಿಟ್ಟೆನಲ್ಲಾ-ಅಂತ ತಿಳಿದು, ಹಿಂದಿರು ಮಾರುಕಟ್ಟೆಗೆ ಬಂದು ಪದಾರ್ಥಗಳನ್ನು ಖರೀದಿಸಿ ಮನೆಗೆ ಹಿಂದಿರುಗುತ್ತಿದ್ದರು ಇಂಥವರು (ಹೀಗೆ ಅಂತರ್ಮುಖಿಗಳಾಗಿರುವವರು) ಈಗ ನೋಡಲು ಸಿಗುತ್ತಾರೆಯೇ ಈಗ ಜನರಿಗೆ ಹೇಗೆಂದರೆ, ಪೇಟೆಯಲ್ಲಿರುವ ಅಂಗಡಿಯಷ್ಟನ್ನು ನೋಡಿದರೂ ತೃಪ್ತಿ ಯಿರುವುದಿಲ್ಲ; ಅಲ್ಲದೇ ಅಲ್ಲಿರುವ ಪದಾರ್ಥಗಳಷ್ಟನ್ನೂ ಕೊಳ್ಳುವಷ್ಟು ಹಣವ ಇರದು. ಆದರೆ, ನಮ್ಮ ಗುರುಗಳವರ ಮನಸ್ಸು ಹೇಗಿತ್ತೆಂದರೆ, ಈ ವಸ್ತುಗಳನ್ನ ಕೊಳ್ಳುವ ಕೆಲಸವನ್ನು ಮಾಡಬೇಕಾಗಿದೆ, ಆದ್ದರಿಂದ ಮಾಡಲೇಬೇಕು. ಆದ ನಾನು ಯಾವಾಗಲೂ ಹೊಂದಬೇಕಾದ ಹಾಗೂ ಅಲ್ಲಿಂದ ಚ್ಯುತಿಗೊಳ್ಳದಿರುವ ಮ ಸ್ಸಿನ ಸ್ಥಿತಿಯೊಂದೆ ಎಂಬುದಾಗಿತ್ತು.

ಅವರು ಬಾಲ್ಯದಲ್ಲಿ ಈಶ್ವರನ ಪೂಜೆ ಮಾಡುತ್ತಿದ್ದರು. ಈಶ್ವರಾರ್ಚನೆಯ ಕಾಯಿಕ, ವಾಚಕ ಮತ್ತು ಮಾನಸಿಕ-ಎಂದು ಮೂರು ವಿಧವಾಗಿದೆ. ಇವುಗಳ ಮುಂದಿನ ಬಗೆಯು ಹಿಂದಿನದಕ್ಕಿಂತ ಶ್ರೇಷ್ಠವಾದುದು. ನಾವು ಪೂಜೆ ಮಾಡುವಾ ನಮ್ಮ ಕೈಗಳು ವಿಗ್ರಹಕ್ಕೆ ಹೂಗಳನ್ನು ಅರ್ಪಿಸುತ್ತಿದ್ದರೆ, ಕಣ್ಣುಗಳು ಬೇರೆಲ್ಲೋ ದೃಷ್ಟಿ ಇಟ್ಟಿರುತ್ತವೆ; ಮತ್ತು ಮನಸ್ಸು ಇನ್ಯಾವುದೋ ವಿಷಯ ಚಿಂತನೆಯಲ್ಲಿ ತೊಡಗಿರುತ್ತದೆ. ಇದೂ ಪೂಜೆಯ ಒಂದು ವಿಧಾನ. ಮತ್ತೆ ಕೆಲವರು ಪೂಜೆಯನ್ನು ಮಾಡುವಾಗ, ಕೈಗಳು ಪುಷ್ಪಾರ್ಚನೆಯಲ್ಲಿ ತೊಡಗಿದ್ದು, ಕಣ್ಣುಗಳು ಮೂರ್ತಿಯನ್ನೇ ವೀಕ್ಷಿಸಿರುತ್ತವೆ. ಆದರೆ, ಮನಸ್ಸು ಮಾತ್ರ ಯಾವುದೋ ನಾಳಿನ ಆಫೀಸಿನ ಅಥವಾ ಕೋರ್ಟಿನ ವಿಷಯಗಳನ್ನು ಬೇಡವೆಂದರೂ ಚಿಂತಿಸುತ್ತಿರುತ್ತದೆ. ಕೆಲವರಿಗೆ ಮಾತ್ರವೆ ಈ ಮೂರೂ ಕರಣಗಳು ಒಂದಾಗಿ ಕೆಲಸಮಾಡುತ್ತವೆ. ಕರಣೈಕವಂತಃ-ಎಂಬಂತೆ

ಯನ್ಮನಸಾಧ್ಯಾಯತಿ, ತದ್ವಚಸಾವದತಿ, ತತ್ಕರ್ಮಣಾ ಕರೋತಿ ॥

(ಯಾವುದನ್ನು ಮನಸ್ಸಿನಲ್ಲಿ ಧ್ಯಾನಿಸುತ್ತಾನೋ, ಅದನ್ನು ಬಾಯಿಂದ ಉಚ್ಚರಿಸು ತ್ತಾನೆ, ಹಾಗೂ ಅದನ್ನೇ ಕಾರ್ಯದಲ್ಲೂ ಮಾಡುತ್ತಾನೆ) ಎಂಬುದಾಗಿಯೂ ಹೇಳಿದೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಯಿಕ, ವಾಚಿಕ ಮತ್ತು ಮಾನಸಿಕ ಪೂಜೆಗಳಲ್ಲಿ ಮಾನಸಿಕ ಪೂಜಾ ವಿಧಾನವೇ ಬಹು ವಿಶಿಷ್ಟವೆನ್ನಲಾಗಿದೆ. ನಮ್ಮ ಗುರುಗಳಲ್ಲಿ ಕಾಯಕ ಪೂಜೆಗೆ ಬೇಕಾದ ಸಾಮಗ್ರಿಗಳಿರಲಿಲ್ಲ. ಅವರು ವಾಚಿಕ ಪೂಜೆಯಲ್ಲಿ ತೊಡಗಿದರೆ ಬೇರೆಯವರು ಇವರು ಗಟ್ಟಿಯಾಗಿ ಉಚ್ಚರಿಸುವಾಗ ಅಕ್ಷೇಪಿಸಬಹುದು. ಆದರೆ, ಒಬ್ಬನು ತನ್ನ ಮನಸ್ಸನ್ನು ಲೀನವಾಗಿಸಿ ಪೂಜಿಸುವಾಗ ಯಾವ ಅಡಚಣೆ ತಾನೆ ಇದೆ. ಇದರಲ್ಲಿ ಯಾವ ತೊಂದರೆಯೂ ಇರದಿದ್ದರೂ, ಮನಸ್ಸನ್ನು ಏಕಾಗ್ರವಾಗಿ ಮಾಡುವುದು ಕಷ್ಟವಷ್ಟೆ.

ನಮ್ಮ ಗುರುಗಳವರು ಏಕಾಗ್ರಮನಸ್ಕರಾಗಿ ಪ್ರತಿಪ್ರದೋಷದಲ್ಲಿಯೂ ಈಶ್ವರನಿಗೆ ಮಾನಸಿಕ ಪೂಜೆ ಸಲ್ಲಿಸುತ್ತಿದ್ದರು. ಅವರು ಈ ಪೂಜೆಯನ್ನು ಹೇಗೆ ಸಲ್ಲಿಸುತ್ತಿದ್ದರೆಂದರೆ,–ಯಾವುದೇ ಸಾಮಾಗ್ರಿಗಳಿಲ್ಲದೆ—

ಶ್ರದ್ಧಾನದೀ ವಿಮಲಚಿತ್ತ ಜಲಾಭಿಷೇಕೈಃ
ನಿತ್ಯಂ ಸಮಾಧಿಕುಸುಮೈರ್ನ ಪುನರ್ಭವಾಯ ||

(ಶ್ರದ್ಧೆಯಿಂದ ನದಿಯಿಂದ ತಂದ ವಿಮಲ ಚಿತ್ತವೆಂಬ ಜಲದಿಂದ ಅಭಿಷೇಕ ಮಾಡಿ, ನಿತ್ಯವೂ ಸಮಾಧಿಯೆಂಬ ಹೂಗಳಿಂದ ಪುರ್ನಜನ್ಮ ತಾಳದಿರಲು–).

ಶೃಂಗೇರಿಯಲ್ಲಿ ಪರಂಪರೆಯಿಂದ ಬಂದ ವಿದ್ಯಾಶಂಕರ ದೇವಾಲಯವೆಂಬ ದೇವಸ್ಥಾನವಿದೆ. ಅದನ್ನಿಗ ನಾನು ಪ್ರಾಚ್ಯವಸ್ತು ವಿಭಾಗಕ್ಕೆ ಅವರ ಕೋರಿಕೆಯಂತೆ ವಹಿಸಿದ್ದೇನೆ. ಆ ದೇವಾಲಯ ನೋಡಲು ವಿಚಿತ್ರವಾಗಿದೆ. ಅಲ್ಲಿ ಪ್ರದೋಷಕಾಲದಲ್ಲಿ ಸಂಜೆ 6 ಘಂಟೆಗೆ ಯಾವುದಾದರೂ ಒಂದು ಕಂಬದ ಬುಡದಲ್ಲಿ ಪೂಜೆಯ ಸಮಯದಲ್ಲಿ ಕುಳಿತಿದ್ದರೆ ಬಹಳ ವಿಶೇಷ. ನಮ್ಮ ಗುರುಗಳು ಅಲ್ಲಿ ಸಂಜೆ 7-30 ಘಂಟೆಯವರೆಗೆ ಬಾಹ್ಯ ಪ್ರಪಂಚದ ಅರಿವಿಲ್ಲದೆ–

ರತ್ನೈಃ ಕಲ್ಪಿತಮಾಸನಂ....

(ರತ್ನ ಖಚಿತವಾದ ಆಸನವನ್ನು ಮಾನಸಿಕವಾಗಿ ಕಲ್ಪಿಸಿ....)

ಎಂದು ಮೊದಲ್ಗೊಂಡು ಧೂಪ, ದೀಪ, ನೈವೇದ್ಯಾದಿಗಳ ಪರ್ಯಂತ ಮಾನಸಿಕವಾಗಿ ಈಶ್ವರನಿಗೆ ಅರ್ಪಿಸುತ್ತಿದ್ದರು. ಮಾನಸಿಕ ಪೂಜೆಯನ್ನು ಹೊಗಳುವ ಕಥೆಯೊಂದಿದೆ–

ಒಮ್ಮೆ ಶಿವರಾತ್ರಿಯಂದು ಎಲ್ಲರೂ ಪೂಜೆಯನ್ನು ಮಾಡುತ್ತಿದ್ದರು. ಆದರೆ ಭೀಮನು ಮಾತ್ರ ಒಂದು ಮರಕ್ಕೆ ಒರಗಿ ಕುಳಿತಿರುವಂತೆ ಕಾಣುತ್ತಿತ್ತು. ಅರ್ಜುನಾದಿಗಳು – ಏನು, ಇಂತಹ ಪುಣ್ಯದಿವಸದಲ್ಲೂ ಭೀಮ ತನ್ನ ಸ್ವಾಭಾವಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾದ ವಿದ್ಯೆಯನ್ನು ಬಿಟ್ಟಿಲ್ಲವಲ್ಲ – ಎಂದು ದುಃಖಿತರಾದರು. ಕೃಷ್ಣನು ಇವನೇನು ಮಾಡುತ್ತಿದ್ದಾನೆಂದು ತಿಳಿದಿದ್ದುದರಿಂದ, ಅರ್ಜುನನಿಗೆ ತಿಳಿಸುವುದಕ್ಕಾಗಿ ಅವನನ್ನು ಕೈಲಾಸಕ್ಕೆ ಕರೆದುಕೊಂಡು ಹೊರಟನು. ದಾರಿಯಲ್ಲಿ ಅವರಿಗೆ ಕೆಲವರು ಬುಟ್ಟಿಗಳಲ್ಲಿ ಬಿಲ್ವಪತ್ರೆಗಳನ್ನು ತುಂಬಿಕೊಂಡು ಹೋಗುತ್ತಿರುವುದು ಕಣ್ಣಿಗೆ ಬಿತ್ತು. ಏಕೆ ಇಷ್ಟೊಂದು ಬಿಲ್ವಪತ್ರೆಗಳನ್ನು ಹೊತ್ತುಕೊಂಡು ಹೋಗುತ್ತಿದ್ದೀರಿ – ಎಂದು ಕೇಳಿದಾಗ, ಅವರು – ಯಾರೋ ರಾಶಿಗಟ್ಟಲೆ ಬಿಲ್ವಪತ್ರೆಗಳನ್ನು ಶಿವನ ತಲೆಯ ಮೇಲೆ ಹೇರುತ್ತಿದ್ದಾನೆ, ಮತ್ತು ಅದನ್ನು ನಾವು ಹೊರುತ್ತಿದ್ದೇವೆ–ಎಂಬುದಷ್ಟೆ ನಮಗೆ ತಿಳಿದಿರುವುದು. ಜನರು ಒಮ್ಮೆಗೆ ಒಂದು ಬಿಲ್ವದಳವನ್ನು ಸಮರ್ಪಿಸಿದರೆ, ಇವನು ಮರದ ಕೆಳಗೆ ಕೂತು ಒಮ್ಮೆಗೆ ಒಂದೊಂದು ಬಿಲ್ವ ಮರವನ್ನೇ ಅರ್ಪಿಸುತ್ತಿದ್ದಾನೆ. ಅಂತಹ ಪುಣ್ಯಾತ್ಮನಿವನು–ಎಂದರು. ಅರ್ಜುನನು ನಾನು ಪೂಜೆ ಮಾಡಿದೆ–ಎಂದು ಹೇಳಿದಾಗ–ನೀನು ಪೂಜೆ ಮಾಡಿದ್ದು ಆ ಮರದ ಬುಡದಲ್ಲಿ ಒಟ್ಟುಮಾಡಿ ಬುಟ್ಟಿಯಲ್ಲಿರುವುದಷ್ಟೇ. ಇವನು ಮಾನಸಿಕವಾಗಿ ಅರ್ಪಿಸಿದ್ದು ಅನಂತವಾಯಿತು. ನೀನು ಅರ್ಪಿಸಿದ ಬಿಲ್ವಪತ್ರಗಳಿಗಷ್ಟೇ ನೀನು ಮಾಡಿದ್ದು ಸೀಮಿತವಾಯಿತು–ಎಂದರು.

ಮಾನಸಿಕ ಪೂಜೆಯನ್ನು ಬಹುವಾಗಿ ಪ್ರಶಂಸಿಸಲಾಗಿದೆ. ನಮ್ಮ ಗುರುಗಳು ಬಾಲ್ಯದಲ್ಲಿಯೇ ಇಂತಹ ಪೂಜೆಯನ್ನು "ಮಾನಸಿಕಪೂಜಾದುರಂಧರ" ರಂತೆ ನಡೆಸಿಕೊಂಡು ಬಂದಿದ್ದರು. ಇದರ ಹಾಗೆ ಹೇಳುವ ಇನ್ನಿತರ ಘಟನೆಗಳು ಬೇಕಾದಷ್ಟಿದೆ. ಇಂದು ಒಂದೆರಡನ್ನು ಮಾತ್ರ ಹೇಳುತ್ತೇನೆ.

ನಮ್ಮ ಗುರುಗಳು ಪೀಠಾಧಿಪತಿಗಳಾದ ನಂತರ ಹಲವಾರು ಭಕ್ತರು ಅವರ ಬಳಿ ಬರುತ್ತಿದ್ದರು. ಗುರುಗಳಲ್ಲಿ ಬಂದು ನಮ್ಮ ಇಚ್ಛೆಯನ್ನು ಪೂರೈಸಬೇಕು–ಎಂದು ಪ್ರಾರ್ಥಿಸುವ ಇಚ್ಛೆಯುಳ್ಳವರಾಗಿರುತ್ತಿದ್ದರು. ನಮ್ಮ ಗುರುಗಳಾದರೋ ಅನೇಕ ಬಾರಿ ಭಕ್ತರ, ಇಚ್ಛೆಯನ್ನು ತಿಳಿಸುವುದಕ್ಕೆ ಮುಂಚೆಯೇ ಸಮಾಧಾನವನ್ನು ಹೇಳಿ ಕಳುಹಿಸಿಕೊಡುತ್ತಿದ್ದರು. ನಾನಿನ್ನೂ ಚಿಕ್ಕವನಾಗಿದ್ದಾಗ ಇದನ್ನು ಕಂಡು, ಭಕ್ತರೆಲ್ಲ ತೆರಳಿದ ನಂತರ "ಮಹಾಸ್ವಾಮಿಗಳೇ ಜನರು ತಮ್ಮ ಬಳಿ ಸಮಾಧಾನವನ್ನು ಬಯಸಿ ಬಂದಾಗ, ಅವರು ತಮ್ಮ ಬಿನ್ನಹವನ್ನು ಮುಂದಿಡುವ ಮುಂಚೆಯೇ ತಾವು ಅದಕ್ಕೆ ಜವಾಬು ಹೇಳಿ ಬಿಡುತ್ತೀರಲ್ಲ. ಹೇಗೆ ಸಾಧ್ಯ ?—ಎಂದು ಪ್ರಶ್ನಿಸಿದೆ. ಅದಕ್ಕೆ ಅವರು ಇದರಲ್ಲಿ ಏನೂ ಇಲ್ಲ. ನನ್ನನ್ನು ಪ್ರೇರೇಪಿಸುವ ಈಶ್ವರನೊಬ್ಬನಿದ್ದಾನೆ ಹಾಗೂ ಅವನಿಚ್ಛೆಯಂತೆ ಪ್ರತಿಕ್ರಿಯೆ ಸೂಚಿಸುತ್ತಾನೆ. ಹಾಗಿರುವುದರಿಂದ ಈಶ್ವರನ ಮನಸ್ಸಿನಲ್ಲಿರುವುದು ತಾನಾಗಿಯೇ ನನ್ನ ಮನಸ್ಸಿನಿಂದ ಹೊರಬೀಳುತ್ತದೆ. ನಾನು ಯಾವುದೇ ಪ್ರಯತ್ನ ಮಾಡಬೇಕಿಲ್ಲ. ನಮ್ಮ ಗುರುಗಳು ಇಂತಹ ಸಿದ್ಧಿಯನ್ನು ಹೊಂದಿದ್ದ ಮಹಾತ್ಮರಾಗಿದ್ದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅವರ ವೈರಾಗ್ಯ ಎಷ್ಟು ಉನ್ನತವಾದದ್ದೆಂದರೆ, ಅವರು ಅಂತಹ ದೊಡ್ಡ ಮಠ ದಲ್ಲಿದ್ದರೂ, ಮಠದಲ್ಲಿದ್ದೇನೆಂಬ ಭಾವನೆಯೇ ಇರಲಿಲ್ಲ. ನಾನು–

ಕರತಲಭಿಕ್ಷಸ್ತರುತಲವಾಸಃ

(ಕೈಯಲ್ಲಿ ಭಿಕ್ಷೆಯನ್ನು ಹಿಡಿದು, ವೃಕ್ಷದ ಬುಡದಲ್ಲಿ ವಾಸಿಸುವ....)! ಎಂಬಂತೆ ಜೀವಿತ ದಲ್ಲಿದ್ದೇನೆ—ಎಂದುಕೊಂಡು ಮಠದಲ್ಲಿ ಬಾಳಿದರು. ಆದರೆ, ದೇವಕಾರ್ಯವಾಗಲಿ, ಅಥವಾ ಶಿಷ್ಯರಿಗೆ ಉಪಯೋಗವಾಗುವ ಕಾರ್ಯದಲ್ಲಿ ಗೀತೆಯಲ್ಲಿ ಹೇಳಿರುವಂತೆ—

ನ ಮೇ ಪಾರ್ಥಾಽಸ್ತಿ ಕರ್ತವ್ಯಂ ತ್ರಿಷುಲೋಕೇಷು ಕಶ್ಚನ ।
ನಾನವಾಪ್ತಮವಾಪ್ತವ್ಯಂ ವರ್ತ ಏವ ಚ ಕರ್ಮಣಿ ॥

(ಎಲೈ ಪಾರ್ಥ, ಮೂರು ಲೋಕಗಳಲ್ಲಿಯೂ ನಾನು ಮಾಡಬೇಕಾದ ಯಾವ ಕಾರ್ಯವೂ ಇಲ್ಲ, ಹಾಗೂ ನಾನು ಹೊಂದಬೇಕಾದುದು ಹೊಂದದೇ ಇರುವುದು ಯಾವುದೂ ಇಲ್ಲ. ಆದರೂ ನಾನು ಕರ್ಮದಲ್ಲಿ ತೊಡಗಿರುತ್ತೇನೆ.)

ಯಾಕೆಂದರೆ—

ಯದಿ ಹ್ಯಹಂ ನ ವರ್ತೇಯಂ ಜಾತು ಕರ್ಮಣ್ಯತಂದ್ರಿತಃ ।
ಮಮ ವರ್ತ್ಮಾನುವರ್ತಂತೇ ಮನುಷ್ಯಾಃ ಪಾರ್ಥ ಸರ್ವಶಃ ॥
ಉತ್ಸೀದೇಯುರಿಮೇ ಲೋಕಾಃ ನ ಕುರ್ಯಾಂ ಕರ್ಮ ಚೇದಹಮ್ ।

(ಎಲೈ ಪಾರ್ಥ, ನಾನು ಆಲಸ್ಯಪಡದೇ ಕಾರ್ಯಗಳಲ್ಲಿ ತೊಡಗದಿದ್ದರೆ, ಮಾನವರು ನನ್ನ ಮಾರ್ಗವನ್ನು ಸಂಪೂರ್ಣವಾಗಿ ಅನುಸರಿಸುತ್ತಾರೆ ; ನಾನು ಕರ್ಮದಲ್ಲಿ ತೊಡಗ ದಿದ್ದರೆ, ಈ ಮೂರು ಲೋಕಗಳೂ ನಾಶವನ್ನು ಹೊಂದುತ್ತವೆ.)

ಅವರು–ನೀವೆಲ್ಲ ನನಗೆ ದೊಡ್ಡ ಮಠಾಧಿಪಯೆಂದು ಹೆಸರಿಟ್ಟಿದ್ದೀರಿ. ನಾನು ಪೂಜಾದಿಗಳನ್ನು ಮಾಡಿ ಅದರ ಫಲವನ್ನು ಪಡೆಯಬೇಕೋ, ಬೇಡವೋ ? ನಾನು ಪೂಜಾದಿಗಳನ್ನು ಮಾಡದಿದ್ದಲ್ಲಿ, ನೀವು–ಸ್ವಾಮಿಗಳೇ ಪೂಜಾದಿಗಳನ್ನು ಮಾಡುವು ದಿಲ್ಲ. ಆದರೂ ಬಾರಿ ಬಾರಿಗೂ ನಾವು ಪೂಜಾದಿಗಳನ್ನು ಮಾಡಬೇಕೆಂದು ಹೇಳು ತ್ತಾರೆ. ಅವರಿಗೆ ಬೇಡವಾದ್ದನ್ನು ನಾವು ಯಾಕೆ ಮಾಡಬೇಕು ? ಎಂದು ಪ್ರಶ್ನಿಸು ತ್ತೀರಿ. ಆದ್ದರಿಂದ ನಾನು, ನನಗೆ ಬೇಕೋ ಬೇಡವೋ, ಪೂಜಾದಿಗಳನ್ನು ಮಾಡಬೇಕು. ಆಗಲೂ ನೀವು ಇಂತಹ ಮಹಾತ್ಮರೇ ಪೂಜೆ ಮಾಡುತ್ತಾರೆ. ಅವರಿಗೆ ಅದರ ಅವಶ್ಯ ಕತೆ ಇದೆಯೋ ಇಲ್ಲವೋ, ನಮಗಂತೂ ಅದು ಬೇಕಿದೆ. ಆದ್ದರಿಂದ, ನಾವು ಅದನ್ನು ಮಾಡಲೇಬೇಕು ಎಂದು ಯೋಚಿಸುತ್ತೀರಿ.

ಉತ್ಸೀದೇಯುರಿಮೇ ಲೋಕಾಃ ನ ಕುರ್ಯಾಂ ಕರ್ಮ ಚೇದಹಮ್ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬಂತೆ ನಮ್ಮ ಗುರುಗಳು ಜ್ಞಾನಮಾರ್ಗದಲ್ಲಿ ನಿಷ್ಠರಾಗಿದ್ದರೂ, ಕರ್ಮಗಳಿಗೆ ಬಹು ಮಹತ್ವ ನೀಡುತ್ತಿದ್ದರು. ಅವರ ಶಿಷ್ಯರು ಕೆಲವರು ಇದೇ ಹಾದಿಯನ್ನು ಅನುಸರಿಸುತ್ತಿದ್ದಾರೆ. ಏಕೆಂದರೆ, ಅವರಿಗೂ ಅದೇ ಭಯವಿದೆ–ನಾನು ಒಂದು ದಿನ ಸಂಧ್ಯಾವಂದನೆ ಮಾಡದಿದ್ದರೆ, ನನ್ನ ಮಗ ಇಡೀ ವರ್ಷವೇ ಮಾಡುವುದಿಲ್ಲ. ಆದ್ದರಿಂದ, ಅವನಿಗೆ ನಾನು ಸರಿಯಾದ ದಾರಿತೋರಿಸಲು ನಿತ್ಯವೂ ಸಂಧ್ಯಾವಂದನೆ ಮಾಡಬೇಕು"–ಎಂಬುದು.

ನಮ್ಮ ಗುರುಗಳು ಬ್ರಹ್ಮಜ್ಞರಾಗಿದ್ದು ಕಾರ್ಯ–ಕಾರಣಗಳ ಸಂಬಂಧದಿಂದ ಸ್ವತಂತ್ರರಾಗಿದ್ದರು. ಹೀಗಿದ್ದರೂ, ಅವರು ತಮ್ಮ ಜೀವನವನ್ನು ಲೋಕೋದ್ಧಾರಕ್ಕಾಗಿ ನಡೆಸಿದರು. ಅವರಂತಹವರ ಜೀವನದಲ್ಲಿ ನಡೆದ ಘಟನೆಗಳ ಚಿಂತನ, ಅವರ ನಾಮಸ್ಮರಣೆ, ಮತ್ತು ಅವರು ತಮ್ಮ ಜೀವನದಲ್ಲಿ ನಿರೂಪಿಸಿದ ಕೆಲವನ್ನಾದರೂ ನಾವು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳುವುದು ನಮಗೆ ಶ್ರೇಯಸ್ಸನ್ನುಂಟು ಮಾಡುತ್ತದೆ.

ಶ್ರೀ ರುದ್ರದ ಹಿರಿಮೆ

ಲೋಕದ ಕೆಲಸಗಳು ನಡೆಯುವುದಕ್ಕಾಗಿ ಭಗವಂತನು ಆಯಾಯ ಕೆಲಸಗಳಿಗೆ ಸಂಬಂಧಿಸಿದ ದೇವತೆಯಾಗಿ ಅವತರಿಸಿ ಲೋಕವನ್ನು ಕಾಪಾಡುತ್ತಿದ್ದಾನೆ. ಪುಷ್ಪದಂತನು ಶಿವಮಹಿಮ್ನ ಸ್ತೋತ್ರದಲ್ಲಿ ಹೀಗೆ ಸ್ತುತಿಸಿದ್ದಾನೆ—

ಬಹುಲರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ
ಪ್ರಬಲ ತಮಸೇ ತತ್ಸಂಹಾರೇ ಹರಾಯ ನಮೋ ನಮಃ ।
ಜನಸುಖಕೃತೇ ಸತ್ತ್ವೋದ್ರಿಕ್ತೌ ಮೃಡಾಯ ನಮೋ ನಮಃ
ಪ್ರಮಹಸಿ ಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ ॥

ಜಗತ್ಸೃಷ್ಟಿಗಾಗಿ ರಜೋಗುಣವನ್ನು ಹೆಚ್ಚಾಗಿ ಹೊಂದಿರುವ ಭವನಿಗೆ ನಮಸ್ಕಾರ; ಜಗತ್ತಿನ ಲಯಕ್ಕಾಗಿ ಹೆಚ್ಚಾಗಿ ತಮೋಗುಣವನ್ನು ಹೊಂದಿರುವ ಹರನಿಗೆ ನಮಸ್ಕಾರ; ಜನರಿಗೆ ಸುಖವನ್ನು ಕೊಡುವುದಕ್ಕಾಗಿ ಸತ್ತ್ವ ಗುಣವನ್ನೇ ಹೆಚ್ಚಾಗಿ ಹೊಂದಿರುವ ಮೃಡನಿಗೆ ನಮಸ್ಕಾರ; ಮೂರು ಗುಣಗಳಿಗೂ ಮೀರಿ ಪ್ರಕಾಶಿಸುತ್ತಿರುವ ಶಿವನಿಗೆ ನಮಸ್ಕಾರ.

ಒಬ್ಬನೇ ಪರಮೇಶ್ವರನಿಗೆ ಭವ ಎಂಬ ಹೆಸರುಂಟು, ಹಾಗೆಯೇ ಮೃಡನೆಂಬ ಹೆಸರೂ ಉಂಟು, ಹರನೆಂಬ ಹೆಸರೂ ಉಂಟು, ಶಿವನೆಂಬ ಹೆಸರೂ ಉಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಬಹುಲರಜಸೇ ವಿಶ್ವೋತ್ಪತ್ತೌ ಭವಾಯ ನಮೋ ನಮಃ ।

ಭವ-ಎಂದರೆ ಸೃಷ್ಟಿಮಾಡುವವನು. ಅವನು ರಜೋಗುಣವನ್ನು ಪ್ರಧಾನವಾಗಿ ತನ್ನಲ್ಲಿ ಹೊಂದಿ ಈ ಜಗತ್ತನ್ನು ಪಡೆದದ್ದರಿಂದ ಅವನಿಗೆ ಭವನೆಂಬ ಹೆಸರು ಬಂತು.

ಪ್ರಬಲ ತಮಸೇ ತತ್ಸಂಹಾರೇ ಹರಾಯ ನಮೋ ನಮಃ ।

—ಎಂದು ಹೇಳಿರುವಂತೆ, ಭಗವಂತನು ತನ್ನಲ್ಲಿ ತಮೋಗುಣವನ್ನು ಹೊಂದಿ ಜಗತ್ತೆಲ್ಲ ವನ್ನೂ ಸಂಹಾರ ಮಾಡುವುದರಿಂದ ಅವನಿಗೆ ಹರನೆಂಬ ಹೆಸರು.

ಜನಸುಖಕೃತೇ ಸತ್ತ್ವೋದ್ರಿಕ್ತೌ ಮೃಡಾಯ ನಮೋ ನಮಃ ।

—ಎಂದು ಹೇಳಲಾಗಿದೆ. ಜನರನ್ನು ಕಾಪಾಡುವುದಕ್ಕಾಗಿ ಸತ್ತ್ವಗುಣವನ್ನು ಪ್ರಧಾನವಾಗಿ ಹೊಂದಿರುವ ಅವನಿಗೆ ಮೃಡನೆಂದು ಹೆಸರು. ಲೋಕದಲ್ಲಿ ಪುಣ್ಯಗಳೂ ಪಾಪಗಳೂ ಉಂಟಾಗುತ್ತಿದ್ದರೂ ಅವುಗಳಿಗೆಲ್ಲ ಒಮ್ಮೆ ಪರಿಪಾಕವೆಂಬುದುಂಟು. ಪುಣ್ಯಗಳೂ ಪಾಪಗಳು ನಾಶವಾಗದೇ ಹೋದರೂ ಅವಕ್ಕೆ ಒಂದು ಪರಿಪಾಕವುಂಟು. ಆಗ ಪ್ರಳಯವಾಗುತ್ತದೆ.

ಆದ್ದರಿಂದ ಭಗವಂತನ ಹಿರಿಮೆ ಎಂಥಾದ್ದು ಎಂಬುದು ನಮಗೆ ವಿವರಣೆಯಿಲ್ಲ ದೆಯೇ ತಿಳಿದು ಬರುತ್ತದೆ. ಅವನು ರಜೋಗುಣವುಳ್ಳವನೋ, ಸತ್ತ್ವಗುಣವನ್ನು ಹೊಂದಿರುವವನೋ? ಅಲ್ಲ, ತಮೋಗುಣವುಳ್ಳವನೋ? ಎಂದು ಪ್ರಶ್ನಿಸಿದರೆ-

ಪ್ರಮಹಸಿ ಪದೇ ನಿಸ್ತ್ರೈಗುಣ್ಯೇ ಶಿವಾಯ ನಮೋ ನಮಃ ।

—ಎಂದು ಹೇಳಿರುವಂತೆ ಗುಣಗಳಿಗೆ ಅತೀತವಾದ ಉನ್ನತವಾದ ಸ್ಥಾನದಲ್ಲಿದ್ದಾನೆ ಭಗವಂತ. ಆದ್ದರಿಂದಲೇ ಭಗವಂತನ ಸ್ವರೂಪವನ್ನು ವರ್ಣಿಸುವಾಗ ವೇದವು-

ಅಜಾಯಮಾನೋ ಬಹುಧಾ ವಿಜಾಯತೇ

ಹುಟ್ಟದಿದ್ದರೂ ಬಹುವಿಧವಾಗಿ ಕಾಣಿಸಿಕೊಳ್ಳುತ್ತಾನೆ-ಎಂದು ಹೇಳುತ್ತದೆ. ಅವನಿಗೆ ಹುಟ್ಟು ಎಂಬುದೇ ಇರದಿದ್ದರೂ ಬೇಕಾದ ಸಮಯದಲ್ಲಿ ಅವನು ಆವಿರ್ಭವಿಸ ಬಲ್ಲನು, ಅವತರಿಸುತ್ತಾನೆ.

ಪಶ್ಯತ್ಯಚಕ್ಷುಃ ಸ ಶೃಣೋತ್ಯಕರ್ಣಃ

ಕಣ್ಣಿಲ್ಲದವನು ನೋಡುತ್ತಾನೆ, ಕಿವಿಯಿಲ್ಲದವನು ಕೇಳುತ್ತಾನೆ-ಅವನಿಂದಲೇ ಎಲ್ಲರನ್ನೂ ನೋಡಲಾಗುತ್ತದೆ. ನೋಡುವುದಕ್ಕಾಗಿ ನಾವು ಯಾವ ಸಾಧನವನಿಟ್ಟು ಕೊಂಡಿದ್ದೇವೋ ಆ ಉಪಕರಣ ಅವನಿಗೆ ಬೇಕಾಗಿಲ್ಲ. ಅವನಿಂದ ಎಲ್ಲವು ಕೇಳಲು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗುತ್ತದೆ; ಆದರೆ ಕೇಳಲು ಬೇಕಾದ ಸಾಧನ ಅವನಿಗೆ ಬೇಕಾಗಿಲ್ಲ. ಇದ ತಾತ್ಪರ್ಯವೇನೆಂದರೆ ಭಗವಂತನು ಸಚ್ಚಿದಾನಂದ ಸ್ವರೂಪನಾದವನು ಎಂದು ಜ್ಞಾನ ಸ್ವರೂಪನಾದದ್ದರಿಂದ ಸಾಧನವಿಲ್ಲದೆಯೇ ಅವನಲ್ಲಿ ಸಕಲ ವಿಧವಾದ ಜ್ಞಾ ಗಳೂ ಇವೆ ಎಂಬುದೇ ಅದರ ಅರ್ಥ.

ಅಂಥ ಭಗವಂತನು ಜಗತ್ತನ್ನು ಸೃಷ್ಟಿಸಿರುವಾಗ ಅದನ್ನು ಚೆನ್ನಾಗಿ ಕಾಪಾಡಲು ಬೇಕು. ಲೋಕದಲ್ಲಿ ಜನ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ; ಒಳ್ಳೆಯ ಕೆಲ ಗಳನ್ನೂ ಮಾಡುತ್ತಾರೆ. ಕೆಟ್ಟ ಕೆಲಸಗಳನ್ನು ಮಾಡುವವರಿಗೆ ಪ್ರಾಯಶ್ಚಿತ್ತವನ್ನು ಮಾಡಿ, ಅವರಿಗೆ ಒಳ್ಳೆಯ ದಾರಿಯನ್ನು ತೋರಿಸಬೇಕು. ಒಂದೊಂದು ಬಗೆಯ ಕರ್ಮಕ್ಕೂ ಯಾವುದು ಪ್ರಾಯಶ್ಚಿತ್ತವೆಂದು ಶಾಸ್ತ್ರವು ವಿಧಿಸಿದೆ. **ಸರ್ವೋಪ ನಿಷದಾಂ ಸಾರಂ**–ಎಲ್ಲಾ ಉಪನಿಷತ್ತುಗಳ ಸಾರ ಎಂದು ಶ್ರೀ ರುದ್ರಾಧ್ಯಾಯವನ್ನು ಕರೆಯಲಾಗಿದೆ. ಇದನ್ನು ಬ್ರಹ್ಮನಿಗೆ ಶಿವನು ಕೊಟ್ಟನು.

ಸರ್ವೋಪನಿಷದಾಂ ಸಾರಂ ರುದ್ರಾಧ್ಯಾಯಂ ಚ ಪ್ರದತ್ತವಾನ್ ।

ಸೃಷ್ಟಿಕರ್ತವ್ಯವನ್ನು ಹೊತ್ತಿರುವ ಬ್ರಹ್ಮನಿಗೆ ಇದನ್ನು ಕೊಟ್ಟು–ಈ ಅಧ್ಯಯ ಪದ್ಧತಿಯನ್ನು ಚೆನ್ನಾಗಿ ನಡೆಸಿಕೊಂಡು ಬಾ–ಎಂದು ಅಪ್ಪಣೆ ಮಾಡಿದನು.

ಸ ಏಷ ಮುನಿಭಿಃ ಪೂರ್ವೈರ್ಮರೀಚ್ಯತ್ರಿಪುರೋಗವೈಃ ।
ಸಹ ದೈವೈರುತಸ್ತೇಭ್ಯಸ್ತತ್ ಶಿಷ್ಯಾ ಜಹುಹುಃ ಶತಮ್ ॥

ಮರೀಚಿ, ಅತ್ರಿ, ಮುಂತಾದ ಋಷಿಗಳ ಮೂಲಕವಾಗಿಯೂ ದೇವತೆಗಳ ಮೂಲಕ ವಾಗಿಯೂ ಶಿಷ್ಯರು ಅವರ ಶಿಷ್ಯರು ನೂರಾರು ಮಂದಿಗೆ ತಿಳಿದು ಹರಡಿತು. ಬ್ರಹ್ಮನು ಅತ್ರಿ ಮರೀಚಿ ಮುಂತಾದ ಮಹರ್ಷಿಗಳಿಗೂ ದೇವತೆಗಳಿಗೂ ಹೇಳಿಕೊಟ್ಟಮೇಲೆ ಭೂಲೋಕಕ್ಕೂ ಇದರ ಉಪದೇಶವಾಯಿತು.

ತಪ್ಪುಗಳಿಗೆ ಎಷ್ಟೋ ಪ್ರಾಯಶ್ಚಿತ್ತಗಳಿರುವಾಗ ರುದ್ರದಿಂದ ಆಗುವ ಪ್ರಾಯ ಶ್ಚಿತ್ತದಿಂದ ಆಗುವ ವಿಶೇಷವೇನೆಂಬುದನ್ನು ನೋಡೋಣ. ಒಂದೊಂದು ವಿಧವಾದ ಪಾಪಕ್ಕೂ ಒಂದೊಂದು ಬಗೆಯ ಪ್ರಾಯಶ್ಚಿತ್ತ ವಿಧಿಸಲ್ಪಟ್ಟಿದ್ದರೂ, ರುದ್ರವು ಶ್ರೇಷ್ಠ ವಾದ ಮಂತ್ರವೆಂದು ಹೇಳಲಾಗಿದೆ.

ಏಷ ವಃ ಪರಮೋ ಮಂತ್ರಃ ಏಷ ಏವ ಪರಮಂ ತಪಃ

ಇದೇ ಶ್ರೇಷ್ಠವಾದ ಮಂತ್ರ ಉತ್ತಮವಾದ ತಪಸ್ಸು ಕೂಡ. ಇದು ಒಂದು ತಪಸ್ಸೂ ಹೌದು ಎಂದು ಹೇಳಲಾಗಿದೆ. ಅದನ್ನು ಮಾಡಿದರೆ ಫಲವೇನು ?

Sri Vidyabharathi Book Centre, Sringeri

CC-O. In Public Domain. Digitized by eGangotri

ರುದ್ರಾಧ್ಯಾಯ ಜಪಃ ಪುಂಸಾಂ ಪರಂ ಕೈವಲ್ಯ ಸಾಧನಮ್

ರುದ್ರಾಧ್ಯಾಯ ಜಪವು ಮನುಷ್ಯರಿಗೆ ಮೋಕ್ಷಕ್ಕಾಗಿರುವ ಉತ್ತಮ ಸಾಧನ. ನಾವು ಜಗತ್ತಿನಿಂದ ನಿರೀಕ್ಷಿಸುವುದು—i) ಲೌಕಿಕ ಸುಖಗಳನ್ನು, ii) ಸ್ವರ್ಗವೇ ಮುಂತಾದ ಅಲೌಕಿಕ ಸುಖಗಳನ್ನು, ಮತ್ತು iii) ಆತ್ಮಸಂಬಂಧವಾದ ಆತ್ಮವನ್ನು, ಆದರೆ, ಪುಂಸಾಂ ಪರಂ ಕೈವಲ್ಯಂ-ಎಂದು ಹೇಳಿರುವಂತೆ ರುದ್ರಾಧ್ಯಾಯದ ಪಾರಾಯಣವನ್ನು ಮಾಡುತ್ತಿದ್ದರೆ ಮೋಕ್ಷವನ್ನು ಪಡೆಯಬಹುದು. ಮೋಕ್ಷಸಾಧನೆಗೆ ಶ್ರವಣ, ಮನನ, ನಿದಿಧ್ಯಾಸನಗಳು ಅವಶ್ಯ. ಆದರೆ ಶ್ರದ್ಧೆಯಿಂದ ನಾವು ರುದ್ರಾಧ್ಯಯನವನ್ನು ಮಾಡುತ್ತಾ ಬಂದರೆ ಶ್ರವಣ ಮನನ ನಿದಿಧ್ಯಾಸನಗಳಿಂದ ಬರುವ ಫಲವನ್ನು ಭಗವಂತನು ತಾನಾಗಿಯೇ ಅನುಗ್ರಹಿಸುತ್ತಾನೆ. ಆದ್ದರಿಂದಲೇ ಕೈವಲ್ಯ ಸಾಧನಂ-ಎಂದು ರುದ್ರವನ್ನು ಕರೆದಿದ್ದಾರೆ.

ಎಷ್ಟು ಮಂದಿಗೆ ಮೋಕ್ಷ ಬೇಕಾಗಿದೆ ಎಂಬುದನ್ನು ನಾವು ಮೊದಲು ನೋಡಬೇಕು. ಆಗಾಗ ಅಷ್ಟಿಷ್ಟು ಸಿಕ್ಕುವ ಸುಖದಲ್ಲಿಯೇ ತೃಪ್ತಿ ಪಟ್ಟುಕೊಳ್ಳುವವರಿದ್ದಾರೆ. ನಾಳೆಯ ಗತಿ ಏನು ಎಂದು ಚಿಂತಿಸುವವರೂ ಇದ್ದಾರೆ. "ನಾನು ಶಾಶ್ವತವಾಗಿ ಇರುವುದಕ್ಕೆ ಅವಶ್ಯವಾದದ್ದು ಬೇಕು"-ಎಂದು ಅಪೇಕ್ಷಿಸಬಹುದು. "ನಾನು ಇರಬೇಕು"-ಎಂದು ಹೇಳಿದಾಗ, ನಮ್ಮ ದೇಹ ಶಾಶ್ವತವಾಗಿರುವುದು ಸಾಧ್ಯವಿಲ್ಲ-ಎಂಬುದು ಎಲ್ಲರಿಗೂ ತಿಳಿದ ವಿಷಯವೇ. ಆದರೆ, "ನಾನು"-ಇರಬೇಕು ಎಂದೇ ಎಲ್ಲರ ಅಪೇಕ್ಷೆಯಾಗಿರುತ್ತದೆ. ಹಾಗಾದರೆ,-"ನಾನು" ಎಂಬುದು ಯಾರನ್ನು ಕುರಿತದ್ದು ? ಅದು ಆತ್ಮನನ್ನು ಕುರಿತ ಮಾತೇ ?

ಯೇ ಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ
ಽಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ।

(ಮನುಷ್ಯನು ಸತ್ತ ಮೇಲೆ ಸಂಶಯವುಂಟು. ಕೆಲವರು ಅವನು ಇದ್ದಾನೆ ಎಂದು ಹೇಳುತ್ತಾರೆ ; ಇನ್ನು ಕೆಲವರು ಇಲ್ಲ ಎನ್ನುತ್ತಾರೆ).

—ಎಂಬ ಮಂತ್ರವೊಂದಿದೆ ಕಠೋಪನಿಷತ್ತಿನಲ್ಲಿ.

ಒಬ್ಬನು ಕಾಲವಾದರೆ, ಸಾಮಾನ್ಯವಾಗಿ ಅವನು 'ಸತ್ತನು' ಎಂದು ಹೇಳುವುದಿಲ್ಲ. ಅವನು "ಸತ್ತುಹೋದನು"-ಎಂದು ಹೇಳುತ್ತಾರೆ. ಸತ್ತ ಮೇಲೆ ಎಲ್ಲಿಗೋ ಹೋದವನು ಎಂಬುದು ಅವರ ಇಂಗಿತ. ಆದ್ದರಿಂದ ಮರಣ ಎಂಬುದು ಪರಿಪೂರ್ಣ ಕ್ರಿಯೆಯಾಗುವುದಿಲ್ಲ. ಅದಕ್ಕೆ ಇನ್ನೂ ಕ್ರಿಯೆ ಇದೆ. ಸತ್ತವನು ಎಲ್ಲಿಗೆ ಹೋಗುತ್ತಾನೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನು ಎರಡು ಲೋಕಗಳನ್ನು ಸೃಷ್ಟಿಮಾಡಿದ್ದಾನೆ.

ಪುಣ್ಯಕರ್ಮಫಲಂ ಸ್ವರ್ಗೋ ನರಕಸ್ತದ್ವಿಪರ್ಯಯಃ ।

(ಪುಣ್ಯ ಕರ್ಮಗಳ ಫಲವಾಗಿ ಸ್ವರ್ಗವೂ, ಅದಕ್ಕೆ ವಿಪರೀತವಾದ ಕರ್ಮಗಳ ಫಲವಾಗಿ ನರಕವೂ ಸಿಗುತ್ತದೆ.)

ಅನಂತರ ಇವೆರಡಕ್ಕೂ ಭಗವಂತನು ಇಬ್ಬರು ದೇವತೆಗಳನ್ನು ನೇಮಿಸಿದನು. ನರಕದ ಆಳ್ವಿಕೆಗೆ ಯಮನನ್ನೂ, ಸ್ವರ್ಗದಲ್ಲಿ ಆಡಳಿತ ನಡೆಸಲು ದೇವೇಂದ್ರ ಎಂಬುವವನನ್ನೂ ನಿಯಮಿಸಿದನು—

ಯೇಯಂ ಪ್ರೇತೇ ವಿಚಿಕಿತ್ಸಾ ಮನುಷ್ಯೇ
ಽಸ್ತೀತ್ಯೇಕೇ ನಾಯಮಸ್ತೀತಿ ಚೈಕೇ ॥

—ಎಂದು ಮನುಷ್ಯರು ಜಗಳವಾಡುತ್ತಿದ್ದರೂ, ನೀವು ಮಾತ್ರ ನಿಮ್ಮ ಕೆಲಸಗಳಲ್ಲಿ ಮಗ್ನರಾಗಿರಿ—ಎಂದು ಅವರಿಗೆ ಅಪ್ಪಣೆ ಮಾಡಿದನು ಭಗವಂತ.

ನಾವು ನಾಸ್ತಿಕರಾಗಿದ್ದರೂ ಯಮನು ನಾಸ್ತಿಕನಾಗಿಬಿಡುವುದಿಲ್ಲ. ದೇವೇಂದ್ರನೂ ನಾಸ್ತಿಕನಾಗುವುದಿಲ್ಲ. ಲೋಕದಲ್ಲಿರುವ ಕಾನೂನು ತಪ್ಪಾದವು ಎಂದು ಕಳ್ಳನೊಬ್ಬನು ಹೇಳಿದರೆ, ನ್ಯಾಯಾಧಿಪತಿಯು ಅವನನ್ನು ಬಿಡುಗಡೆ ಮಾಡುವುದಿಲ್ಲ. ಯಾರು ಯಾರು ಏನೇನು ಪುಣ್ಯಕರ್ಮಗಳನ್ನು ಮಾಡಿದ್ದಾರೋ ಅದಕ್ಕೆ ತಕ್ಕಂತೆ ಅವರು ಫಲವನ್ನು ಅನುಭವಿಸಲೇಬೇಕು. ಅನೇಕ ಮಂದಿ ಪಾಪಕಾರ್ಯಗಳನ್ನು ಮಾಡಿ ನರಕಕ್ಕೆ ಹೋಗುತ್ತಿದ್ದಾರೆ. ಭಗವಂತನಿಗಾದರೋ ಅಪಾರ ಕರುಣೆ. ಆದ್ದರಿಂದಲೇ-ಹೀಗೆ ಜನ ತಪ್ಪು ಮಾಡಿ ನರಕಕ್ಕೆ ಹೋಗುತ್ತಿದ್ದಾರಲ್ಲ! ಇದನ್ನು ತಪ್ಪಿಸಲು ದಾರಿಯಿಲ್ಲವೇ ?—ಎಂದು ಚಿಂತಿಸಿದ ಭಗವಂತನು ರುದ್ರವನ್ನು ಉಪದೇಶ ಮಾಡಿದನು. ಅದೇ ಕೈವಲ್ಯಸಾಧನ, ಮೋಕ್ಷ ಸಾಧನವಾಗಿ ಪ್ರಕಾಶಿಸುತ್ತಿದೆ.

ಯಾರು ಮಹಾಪಾಪಗಳನ್ನು ಮಾಡಿದ್ದಾರೋ, ಮತ್ತು ಉಪಪಾತಕಗಳನ್ನು ಮಾಡಿದ್ದಾರೋ ಅವರು ರುದ್ರಾಧ್ಯಾಯ ಜಪದಿಂದ ಉತ್ತಮ ಗತಿಯನ್ನು ಹೊಂದುತ್ತಾರೆ—ಎಂಬ ಮಾತೊಂದಿದೆ.

ಪಾತಕಗಳಲ್ಲಿ ಮಹಾಪಾತಕಗಳು ಎಂಬುವು ಉಂಟು. ಉಪಪಾತಕಗಳೆಂಬುವೂ ಉಂಟು. ಮಹಾಪಾತಕಗಳು ಯಾವುವು ?

ಬ್ರಹ್ಮಹತ್ಯಾ ಸುರಾಪಾನಂ ಸ್ತೇಯಂ ಗುರ್ವಂಗನಾಗಮಃ ।

Sri Vidyabharathi Book Centre, Sringeri

CC-O. In Public Domain. Digitized by eGangotri

ಬ್ರಾಹ್ಮಣನನ್ನು ಕೊಲ್ಲುವುದು, ಮದ್ಯಪಾನ, ಕಳ್ಳತನ, ಗುರುಪತ್ನೀಗಮನ–ಈ ನಾಲ್ಕೂ ಮಹಾಪಾತಕಗಳನ್ನು ಮಾಡಿದವರೊಡನೆ ಸಂಪರ್ಕವೇ ಒಂದು ಮಹಾ ಪಾತಕ ಎಂದು ಹೇಳಲಾಗಿದೆ.

ಸಂಧ್ಯಾವಂದನೆ ಮಾಡದಿರುವುದು, ಶ್ರಾದ್ಧವನ್ನು ಮಾಡದಿರುವುದು, ಮುಂತಾದುವು ಚಿಕ್ಕ ಚಿಕ್ಕ ಪಾತಕಗಳಲ್ಲಿ ಸೇರಿವೆ.

ನರಕ ಸ್ವರ್ಗ ಎಂದು ಏರ್ಪಡಿಸಿ, ಅವುಗಳಿಗೆ ಇಬ್ಬರು ದೇವತೆಗಳನ್ನು ನೇಮಿಸಿದ ಮೇಲೆ, ಯಮನು ಭಗವಂತನ ಬಳಿ ಸಾರಿ–ನನ್ನ ಆಜ್ಞೆಕೆ ನಡೆಯಬೇಕಾದರೆ ಜನ ನನ್ನಲ್ಲಿಗೆ ಬರಬೇಕಲ್ಲವೇ ಎಂದು ಕೇಳಿದ. ಭಗವಂತ–ನೀನು ಚಿಂತಿಸಬೇಕಾಗಿಲ್ಲ. ನಿನಗೆ ಕೆಲವಾರು ದೂತರನ್ನು ಕೊಡುತ್ತೇನೆ. ಅವರು ನಿನ್ನಲ್ಲಿಗೆ ಜನರನ್ನು ಕರೆತರುತ್ತಾರೆ. ಆದ್ದರಿಂದ ಸ್ವರ್ಗಮಾತ್ರ ತುಂಬಿಹೋಗಿದೆ ; ನರಕ ತುಂಬುವುದೇ ಇಲ್ಲ ಎಂದ ಯೋಚಿಸಬೇಡ ಎಂದನು. ಭಗವಂತನು ಯಮನಿಗೆ ಕೊಟ್ಟ ದೂತರು ಯಾರು ?

ಕಾಮಃ ಕ್ರೋಧಶ್ಚ ಲೋಭಶ್ಚ ಮದ ಮಾನಾದಯಸ್ತಥಾ |
ಅಧರ್ಮಸ್ಯ ಸೋದರಾ ಆಸನ್ ಸರ್ವೇ ನರಕನಾಯಕಾಃ ||

ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯ–ಮುಂತಾದುವು ಅಧರ್ಮದಿಂದಲೇ ಉಂಟಾಗುತ್ತವೆ. ಆದ್ದರಿಂದ ಅವು ಅಧರ್ಮದ ಮಕ್ಕಳು. ನರಕದ ನಾಯಕರು ಅವರು. ಆ ಅಧಿಕಾರಿಗಳು ನರಕದಲ್ಲೇ ಕುಳಿತುಬಿಟ್ಟರೆ ನರಕಕ್ಕೆ ಹೋಗುವವರು ಯಾರು ? ಆದ್ದರಿಂದಲೇ ನರಕದಿಂದ ಕಾಮ, ಕ್ರೋಧ, ಲೋಭ, ಮೋಹ, ಮುಂತಾದುವು ಭೂಲೋಕಕ್ಕೆ ಬಂದವಂತೆ. ಬಂದು ಇಲ್ಲಿ ತಾವಿರುವುದಕ್ಕೆ ಜಾಗವೆಲ್ಲಿ ಎಂದು ನೋಡಿದುವಂತೆ. ಒಂದು ಆಡಿನಲ್ಲಿಯೋ ಒಂದು ಹಸುವಿನಲ್ಲಿಯೋ ನೆಲಸಲು ಅವು ಇಷ್ಟಪಡಲಿಲ್ಲ. ಆದರಿಂದ ಪ್ರಯೋಜನವಿಲ್ಲ ಎಂದು ಅವುಗಳಿಗೆ ಗೊತ್ತು.

ಕರ್ಮಗಳನ್ನು ಮಾಡಲು ಮನುಷ್ಯನಿಗೆ ಮಾತ್ರ ಅಧಿಕಾರವುಂಟು. ಮೃಗಗಳಿಗೆ ಆ ಅಧಿಕಾರವಿಲ್ಲ. ಆಡೋ ಹಸುವೋ ಸತ್ತಮೇಲೆ ಸ್ವರ್ಗಕ್ಕೆ ಹೋಗುತ್ತದೆಯೋ ನರಕಕ್ಕೆ ಹೋಗುತ್ತದೆಯೋ ಎಂದು ಯಾರಾದರೂ ಯೋಚಿಸುತ್ತಾರೇನು ? ಹಾಗೆ ಯಾರೂ ಯೋಚಿಸುವುದೇ ಇಲ್ಲ. ಆಡು, ಹಸುವಾಗಿರುವುದರೊಡನೆ ಕರ್ಮವು ತೀರಿತು ಎಂದೇ ಹೇಳುತ್ತಾರೆ. ಆದರೆ ಮನುಷ್ಯನನ್ನು ಕುರಿತು ಹಾಗೆ ಹೇಳುವುದಿಲ್ಲ. ಅವನು ಯಾವುದಾದರೂ ಮಹಾಪಾತಕವನ್ನು ಮಾಡಿದರೆ, "ಅವನಿಗೆ ಯಾವ ದುರ್ಗತಿ ಬರುತ್ತದೆಯೋ"—ಎಂದೇ ನಾವು ಹೇಳುತ್ತೇವೆ. "ಹುಲಿ ಇಷ್ಟು ಮನುಷ್ಯರನ್ನು ತಿಂದಿತು. ಇದಕ್ಕೆ ಯಾವ ದುರ್ಗತಿಯೋ ?"— ಎಂದು ಯಾರೂ ಹೇಳುವುದಿಲ್ಲ. ಹುಲಿಯು ಮನುಷ್ಯನನ್ನಾದರೂ ತಿಂದು ಜೀವಿಸಿರಬೇಕೇ ಹೊರತು ಅದಕ್ಕೆ ಬೇರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾರ್ಗವಿಲ್ಲ. ಮನುಷ್ಯನಿಗೆ ಹಲವಾರು ದಾರಿಗಳಿವೆ. ಅವನು ಒಳ್ಳೆಯ ಕೆಲಸಗಳನ್ನು ಮಾಡಿದರೆ ಒಳ್ಳೆಯದಾಗುತ್ತದೆ. ಕೆಟ್ಟ ಕೆಲಸಗಳನ್ನು ಮಾಡಿದರೆ ಕೆಟ್ಟದ್ದೇ ಆಗುತ್ತದೆ. ಆದ್ದರಿಂದ ಈ ಕಾಮ, ಕ್ರೋಧ, ಲೋಭ, ಮದ, ಮಾತ್ಸರ್ಯ ಮುಂತಾದುವು ಮನುಷ್ಯನನ್ನೇ ಆಶ್ರಯಿಸಿದವು.

ಇಷ್ಟರಲ್ಲಿ ಲೋಕದಲ್ಲಿ ರುದ್ರಾಧ್ಯಾಯದ ಹಿರಿಮೆಯನ್ನು ಪ್ರಸಾರ ಮಾಡಿದ್ದರು. "ಮಹಾಪಾತಕ ಸಂಯುಕ್ತಾ". ಯಾರು ಯಾರು ಮಹಾಪಾತಕಗಳನ್ನು ಮಾಡಿದ್ದಾರೋ ಅವರೂ ಸಹ ರುದ್ರಾಧ್ಯಯನದಿಂದ ಶ್ರೇಯಸ್ಸನ್ನು ಪಡೆಯುತ್ತಾರೆ ಎಂಬ ವಿಷಯ ಪ್ರಸಾರವಾಯಿತು. ಅದನ್ನು ಕೇಳಿದ ಜನರಿಗೆಲ್ಲಾ ಜ್ಞಾನೋದಯವಾಯಿತು. "ಏನೋ ಹಲವಾರು ಪಾಪಗಳನ್ನು ಮಾಡಿಬಿಟ್ಟೆವು. ಇನ್ನೂ ನರಕಕ್ಕೆ ಹೋಗದೇ ಇರಬೇಕಾದರೆ ಅದಕ್ಕೆ ಒಂದು ವರ ಸಿಕ್ಕಿಬಿಟ್ಟಿದೆ"—ಎಂದು ಯೋಚಿಸಿ ಎಲ್ಲರೂ ತಾಮ್ರ ಪರ್ಣಿಯಂಥ ನದಿಯ ತೀರದಲ್ಲಿರುವ ಪುಣ್ಯ ಕ್ಷೇತ್ರಗಳಲ್ಲಿ ರುದ್ರಾಧ್ಯಯನ ಮಾಡಿ, ಸತತವಾಗಿ ಶಿವಪೂಜೆ ಮಾಡುತ್ತಾ ಬಂದರು. ಈ ಕಾರಣದಿಂದ ಯಮನಿಗೆ ತುಂಬ ಯೋಚನೆಯಾಯಿತು. "ಭೂಲೋಕದಿಂದ ನಾಲ್ಕು ಮಂದಿ ಕೂಡ ಇಲ್ಲಿಗೆ ಬರುತ್ತಿಲ್ಲವಲ್ಲ. ಅರಸನಾಗಿ ನಾನು ಮಾತ್ರ ಕೂತಿರಬೇಕಾಗಿದೆಯಲ್ಲ"—ಎಂದು ವ್ಯಥೆಪಟ್ಟು, ಬ್ರಹ್ಮನ ಬಳಿಗೆ ಹೋಗಿ— "ನೀನು ನನಗೆ ಏಕೆ ಈ ಅಧಿಕಾರವನ್ನು ಕೊಟ್ಟಿದ್ದೀಯೆ ? ನಾನು ಈಗ ಏನು ಮಾಡಲಿ ? ಯಾರಾದರೂ ಪ್ರಜೆಗಳಿದ್ದರಲ್ಲವೇ ನಾನು ಆಡಳಿತ ನಡೆಸಬಹುದು. ಪ್ರಜೆಗಳೇ ಇಲ್ಲದ ಕಾರಣ ನನ್ನನ್ನು ಈ ಕೆಲಸದಿಂದ ನಿವೃತ್ತಿಗೊಳಿಸಿಬಿಡು"—ಎಂದು ಕೇಳಿಕೊಂಡನು. ಆ ಬ್ರಹ್ಮನು- -"ಜನರು ರುದ್ರಾಧ್ಯಾಯ ಪಾರಾಯಣ ಮಾಡುವುದೂ, ಅದರ ಫಲವಾಗಿ ಅವರೆಲ್ಲರೂ ಸ್ವರ್ಗಕ್ಕೆ ಹೋಗುತ್ತಿರುವುದು ನಿಜವೇ. ಆದರೂ ಈಗ ನಿನಗೆ ಅಶ್ರದ್ಧೆ, ಮತ್ತು ದುರ್ಮೇಧೆ ಎಂಬ ಇಬ್ಬರು ದೂತರನ್ನು ಕೊಡುತ್ತೇನೆ. ಅವರ ಮೂಲಕ ಜನರು ಅಶ್ರದ್ಧೆಯಿಂದಲೂ ದುರ್ಮೇಧೆಯಿಂದಲೂ ರುದ್ರಾಧ್ಯಯನ ಮಾಡಿದರೂ ತಕ್ಕ ಫಲ ದೊರಕದು. ಆನಂತರ ನಿನ್ನ ಆಳ್ವಿಕೆ ಚೆನ್ನಾಗಿ ನಡೆಯುತ್ತದೆ—" ಎಂದು ಆಶ್ವಾಸನೆ ಕೊಟ್ಟನು.

ಅಶ್ರದ್ಧಾಂ ಚೈವ ದುರ್ಮೇಧಾಮವಿದ್ಯಾಯಾ ಉಭೇ ಸುತೇ ।

(ಅಶ್ರದ್ಧೆ ಮತ್ತು ದುರ್ಮೇಧೆ ಎಂಬುವು ಅವಿದ್ಯೆಯ ಎರಡು ಮಕ್ಕಳು)

ಅವಿದ್ಯೆಯೆಂದರೆ ಅಜ್ಞಾನ, ತಿಳಿವಿಲ್ಲದಿರುವಿಕೆ. ಪರಿಶುದ್ಧವಾದುದನ್ನು ಕೊಳಕೆಂದು ತಿಳಿಯುವುದು ಅಜ್ಞಾನದ ಒಂದು ಬಗೆ. ನಶ್ವರವಾದುದನ್ನು ಶಾಶ್ವತವೆಂದು ತಿಳಿದು ಅದರಲ್ಲಿಯೇ ಸಂತೋಷಪಡುವುದು ಇನ್ನೊಂದು ಬಗೆ. ದುಃಖವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಡುವ ವಿಷಯವನ್ನು ಸುಖಪ್ರದವೆಂದು ತಿಳಿಯುವುದು ಇನ್ನೊಂದು ಬಗೆಯ ಅಜ್ಞಾನ. ಇದಕ್ಕೆ ಇಬ್ಬರು ಮಕ್ಕಳಾದವಂತೆ. ದುರ್ಮೇಧೆ ಮತ್ತು ಅಶ್ರದ್ಧೆ ಎಂಬುವೇ ಆ ಮಕ್ಕಳು.

"ನಾನು ಏನೆಲ್ಲಾ ಮಹಾಪಾತಕಗಳನ್ನು ಮಾಡಿದ್ದೇನೆ. ರುದ್ರ ಜಪವನ್ನು ಮಾಡಿದರೆ ಪಾಪ ಪರಿಹಾರವಾಗಿ ಬಿಡುತ್ತದೆ—ಎಂದಾದರೆ, ಲೋಕದಲ್ಲಿ ಪಾಪವೇ ಇಲ್ಲದಂತಾಗಿ ಬಿಡುತ್ತದಲ್ಲ ! ಭಗವಂತನ ಸೃಷ್ಟಿಯೇ ಸರಿಯಾಗಿಲ್ಲ ಎಂದಾಗಿ ಬಿಡುತ್ತದೆ. ಆದ್ದರಿಂದ ರುದ್ರಾಧ್ಯಯನ ಮಾಡಿದರೆ ಪಾಪಗಳೆಲ್ಲ ನಾಶವಾಗುತ್ತವೆ ಎಂಬುದು ಕೇವಲ ಅರ್ಥವಾದ. ಒಂದು ಬಗೆಯ ಹೊಗಳಿಕೆ"—ಎಂದು ತಿಳಿಯುವುದು ದುರ್ಮೇಧೆ.

ಅರ್ಥವಾದವೆಂದರೇನು ? ಕೆಲವು ಔಷಧಿ ಸೀಸೆಗಳ ಮೇಲೆ—"ಇದನ್ನು ಸೇವಿಸಿದರೆ ಯಾವ ವ್ಯಾಧಿಯೂ ಬರುವುದಿಲ್ಲ"—ಎಂದು ಬರೆದಿರುತ್ತದೆ. ಅದು ಜೀರ್ಣಶಕ್ತಿಗಾಗಿ ಕೊಡುವ ಮದ್ದಾಗಿರಬಹುದು. ನಾವು ತಿನ್ನುವ ಆಹಾರ ಚೆನ್ನಾಗಿ ಜೀರ್ಣವಾದರೆ ನಮಗೆ ಯಾವ ವ್ಯಾಧಿಯೂ ಬರುವುದಿಲ್ಲ ಎಂಬುದು ತೀರ್ಮಾನವಾದ ವಿಷಯ. ಆದರೆ, ಔಷಧಿಯ ಸೀಸೆಯ ಮೇಲೆ ಜಾಹಿರಾತು ಮಾಡುವಾಗ—"ಇದು ಹೊಟ್ಟೆನೋವು ವಾಯುನೋವು ಮುಂತಾದುವನ್ನು ವಾಸಿ ಮಾಡುತ್ತದೆ" ಎಂದು ಬರೆದಿರುತ್ತದೆ. ಆದರೆ, ನಿಜವಾಗೂ ಹಾಗೇನೂ ನಡೆಯುವುದೇ ಇಲ್ಲ. ಹಾಗೆಯೇ ಈ ರುದ್ರಾಧ್ಯಾಯವನ್ನು ಕುರಿತು ಹೇಳಿರುವುದೂ ಕೂಡ. "ರುದ್ರನು ತುಂಬ ಹೆಚ್ಚಿನವನು—ಎಂದು ತೋರಿಸುವ ಸಲುವಾಗಿ ಹೇಳಿದ್ದಾರೆಯೇ ಹೊರತು ಇದರಿಂದ ಯಾವ ಪಾಪವೂ ನಿವಾರಣೆಯಾಗುವುದಿಲ್ಲ"—ಎಂದು ತಿಳಿಯುವುದು ದುರ್ಮೇಧಾ ಎನ್ನಿಸಿಕೊಳ್ಳುತ್ತದೆ.

ಇನ್ನೊಂದು ಯಾವುದೆಂದರೆ—ಅಶ್ರದ್ಧೆ.

ಶಾಸ್ತ್ರಸ್ಯ ಗುರುವಾಕ್ಯಸ್ಯ ಸತ್ಯಬುದ್ಧ್ಯವಧಾರಣಮ್ ।
ಸಾ ಶ್ರದ್ಧಾ ಕಥಿತಾ ಸದ್ಭಿರ್ಯಯಾವಸ್ತೂಪಲಭ್ಯತೇ ॥

(ಯಾವುದರಿಂದ ಸತ್ಯವಾದ ವಸ್ತುವಿನ ತಿಳುವಳಿಕೆ ಉಂಟಾಗುವುದೋ ಆ ಶಾಸ್ತ್ರವೂ ಗುರುವಿನ ಉಪದೇಶವೂ ನಿಜವೆಂಬ ಮನೋಭಾವದಿಂದ ಉಂಟಾಗುವ ನಿಶ್ಚಯವಾದ ನಂಬಿಕೆಯೇ ಶ್ರದ್ಧೆಯೆಂದು ಸಜ್ಜನರಿಂದ ಕರೆಯಲಾಗಿದೆ.)

ತತ್ತ್ವಜ್ಞಾನಿಯ ಮಾತುಗಳು ನಿಜವಾದವು ಎಂದೂ, ವೇದ—ಸ್ಮೃತಿ ಮುಂತಾದುವು ಸತ್ಯವೆಂಬ ಭಾವನೆಯನ್ನಿಟ್ಟುಕೊಳ್ಳುವುದೇ ಶ್ರದ್ಧೆಯೆನಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗಿಲ್ಲದೇ ಹೋದರೆ, ಅದು ಅಶ್ರದ್ಧೆಯೆಂದು ನಾವು ಕರೆಯಬೇಕು. ಆದ್ದರಿಂದಲೇ ಭಗವಂತನು ಅಶ್ರದ್ಧೆಯನ್ನೂ ದುರ್ಮೇಧೆಯನ್ನೂ ಅಧರ್ಮದ ಮಕ್ಕಳೆಂದು ಕರೆದನು.

ಲೋಕದಲ್ಲಿ ಒಳ್ಳೆಯ ಕೆಲಸಗಳು ನಡೆಯುವ ಸ್ಥಳಗಳನ್ನು ನೋಡಿದಾಗ ಕೆಲವರು—"ಇಲ್ಲಿ ಜನ ವ್ಯರ್ಥವಾಗಿ ಶ್ರಮ ಪಡುತ್ತಿದ್ದಾರೆ" ಎಂಬ ಭಾವನೆ ತಾಳುತ್ತಾರೆ. ಇದು ಅವರಿಗೆ ದುರ್ಮೇಧೆ ಇದೆಯೆಂಬುದನ್ನು ತೋರಿಸುತ್ತದೆ. "ಒಳ್ಳೆಯ ಕೆಲಸಗಳು" ಬೇಕೆಂದೇ ವ್ಯರ್ಥವಾಗಿ ಶಾಸ್ತ್ರಗಳಲ್ಲಿ ಹೊಗಳಲ್ಪಟ್ಟಿವೆ—ಎಂಬ ಭಾವನೆಯನ್ನು ಅಶ್ರದ್ಧೆ ಉಂಟುಮಾಡುತ್ತದೆ.

ಕೆಲವರು—"ಬಾಳನ್ನು ನಡೆಸಲು ಮನುಷ್ಯರಿಗೆ ಹಲವಾರು ಮಾರ್ಗಗಳಿವೆ. ಒಬ್ಬನು ಕಾರ್ಖಾನೆಯನ್ನು ಸ್ಥಾಪಿಸುತ್ತಾನೆ. ಮತ್ತೊಬ್ಬನು ಯಾವುದೋ ಒಂದು ಕಡೆ ಗುಮಾಸ್ತನಾಗಿರುತ್ತಾನೆ. ಮಗದೊಬ್ಬನು ಹಾರೆ ಗುದ್ದಲಿ ಪಿಕಾಸಿಗಳನ್ನು ಹಿಡಿದು ಮಣ್ಣನ್ನು ಎತ್ತಿ ಹಾಕುತ್ತಿರುತ್ತಾನೆ. ಇದರಂತೆಯೇ ಉದರ ಪೋಷಣೆಗಾಗಿ ವೇದವನ್ನು ಕೆಲವರು ಓದುತ್ತಾರೆ"—ಎಂದು ಭಾವಿಸುತ್ತಾರೆ. ಮಾಧವಾಚಾರ್ಯರು ರಚಿಸಿರುವ ಸರ್ವದರ್ಶನ ಸಂಗ್ರಹವೆಂಬ ಗ್ರಂಥದಲ್ಲಿ ಚಾರ್ವಾಕ ದರ್ಶನವನ್ನು ಕುರಿತ ಭಾಗದಲ್ಲಿ ಈ ಮಾತು ಬರುತ್ತದೆ—

ಅಗ್ನಿಹೋತ್ರಂ ತ್ರಯೋ ವೇದಾಃ ತ್ರಿದಂಡಂ ಭಸ್ಮಕುಂಡಲಂ।
ಬುದ್ಧಿ ಪೌರುಷಹೀನಾನಾಂ ಜೀವಿಕೇತಿ ಬೃಹಸ್ಪತಿಃ ॥

(ಅಗ್ನಿಹೋತ್ರ ಮಾಡುವುದು, ಮೂರು ವೇದಗಳನ್ನು ಕಲಿಯುವುದು, ಮೂರು ದಂಡಗಳನ್ನು ಇಟ್ಟುಕೊಳ್ಳುವುದು, ವಿಭೂತಿಯನ್ನು ಧರಿಸುವುದು, ಮುಂತಾದುವು ತಿಳುವಳಿಕೆ ಮತ್ತು ಪೌರುಷವಿಲ್ಲದವರು ಜೀವಧಾರಣೆಗಾಗಿ ಮಾಡುತ್ತಿರುವ ಕೆಲಸಗಳೆಂದು ಬೃಹಸ್ಪತಿ ಹೇಳಿದ್ದಾನೆ).

ಆಕಳ ಸಗಣಿಯನ್ನು ನಾವು ತುಂಬ ಪವಿತ್ರವೆಂದು ಭಾವಿಸುತ್ತೇವೆ. ಅಂಥ ಗೋಮಯದಿಂದ ಮಂತ್ರ ಪೂರ್ವಕವಾಗಿ ಮಾಡಲ್ಪಟ್ಟ ಭಸ್ಮವನ್ನು ಹಣೆಯಲ್ಲಿ ಧರಿಸಿದರೆ ಅದು ದೇಹವನ್ನು ಪವಿತ್ರಗೊಳಿಸುತ್ತದೆ—ಎಂದು ಹೇಳಲಾಗಿದೆ. ಮನಸ್ಸಿಗೆ ನೆಮ್ಮದಿಯನ್ನೂ ತರುತ್ತದೆ ಎಂದೂ ಹೇಳಲಾಗಿದೆ.

ಇನ್ನು ತ್ರಿದಂಡ ಸಂನ್ಯಾಸಿಯನ್ನು ಕುರಿತು ಆ ಶ್ಲೋಕ ಹೇಳುತ್ತದೆ. ತ್ರಿದಂಡಿ ಸಂನ್ಯಾಸಿಯಾದರೂ. ಏಕದಂಡಿ ಸನ್ಯಾಸಿಯಾದರೂ, ಒಟ್ಟಿನಲ್ಲಿ ಸಂನ್ಯಾಸಿಯನ್ನು ಕುರಿತು ಶ್ಲೋಕ ಹೇಳುತ್ತದೆ. ಹೀಗೆ ವೇದವನ್ನು ಓದುವುದೋ, ಅಗ್ನಿಹೋತ್ರ ಮಾಡುವುದೋ, ತ್ರಿದಂಡಿ ಸಂನ್ಯಾಸಿಯಾಗಿರುವುದೋ, ಭಸ್ಮಧಾರಣೆಯೋ—ಇವೆಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಚೆನ್ನಾಗಿ ತಿನ್ನುವ, ಕೆಲಸ ಮಾಡಲು ಶಕ್ತಿಯಿಲ್ಲದವರೂ, ಬಾಳನ್ನು ನಡೆಸಲು ಅನುಸರಿಸುವ ಮಾರ್ಗಗಳು ಎಂದು ಹೇಳುತ್ತದೆ ಆ ಶ್ಲೋಕ.

ಇಂಥ ಭಾವನೆಗಳು ಹುಟ್ಟಲು ಕಾರಣ ಅಶ್ರದ್ಧೆ ಮತ್ತು ದುರ್ಮೇಧೆ. ಹಲವರು ರುದ್ರಾಧ್ಯಾಯವನ್ನು ಜಪಮಾಡುತ್ತಾರೆ. ಏತಕ್ಕಾಗಿ ? ದಕ್ಷಿಣೆ ಗಿಟ್ಟುತ್ತದೆ ಎಂಬುದಕ್ಕಾಗಿ ರುದ್ರಾಧ್ಯಾಯ ಜಪಮಾಡುತ್ತಾರೆ. ಕಾಮಧೇನುವನ್ನು ಪಡೆದಿರುವಾಗ "ಕಾಮಧೇನುವೇ, ನನಗೆ ಇಂದು ಊಟ ಬೇಕು"-ಎಂದು ಕೇಳಿದರೆ ಅದು ಕೊಡುತ್ತದೆ. ಆದರೆ ಯಾವನೋ ಒಬ್ಬ ಅದನ್ನು ಗದ್ದೆಗೆ ಎಳೆತಂದು ನೇಗಿಲನ್ನು ಹೂಡಿ ಉತ್ತನಂತೆ. ತನಗೆ ಬೇಕಾದುದನ್ನು ಕಾಮಧೇನುವಿನಲ್ಲಿ ಕೇಳಿ ಪಡೆಯುವ ಬುದ್ಧಿ ಅವನಿಗೆ ಬರಲಿಲ್ಲ. ಅದರಂತೆಯೇ, ರುದ್ರಾಧ್ಯಯನದಂಥ ಸತ್ಕಾರ್ಯವನ್ನು ಮಾಡುವ ಅವಕಾಶ ದೊರಕಿದೆಯಲ್ಲ ಎಂದು ತಿಳಿದು ರುದ್ರಾಧ್ಯಯನ ಮಾಡಿದರೆ, ಅದರಿಂದ ನಮ್ಮ ಊರಿಗೆ, ದೇಶಕ್ಕೆ ಹೆಚ್ಚಾದ ಫಲವು ಸಿಗುತ್ತದೆ ಎಂಬ ಮನೋಭಾವವಿಲ್ಲದೆ, ಕೇವಲ "ದಕ್ಷಿಣೆಗಾಗಿ ರುದ್ರಾಧ್ಯಯನ ಮಾಡುತ್ತೇನೆ"-ಎಂದುಕೊಂಡರೆ ಅದು ಸರಿಯೇ ಅಲ್ಲ.

ಹೀಗೆ ಅಶ್ರದ್ಧೆಯನ್ನು ದುರ್ಮೇಧೆಯನ್ನು ಕಂಡ ಯಮನು "ಪರವಾಗಿಲ್ಲ. ಇನ್ನು ನನ್ನ ಆಡಳಿತ ಚೆನ್ನಾಗಿ ನಡೆಯುತ್ತದೆ" ಎಂದುಕೊಂಡನಂತೆ. ನಾವು ಚೆನ್ನಾಗಿ ವೇದವನ್ನು ಅಧ್ಯಯನ ಮಾಡಬಹುದು ; ಕಲಿತ ವೇದವನ್ನು ಕ್ರಮವಾಗಿ ಪ್ರಯೋಗಿಸಲೂಬಹುದು. ಇದೆಲ್ಲವನ್ನು ಮಾಡಿದರೂ,-"ವೇದವೇ ಪ್ರಮಾಣ"-ಎಂಬ ಭಾವನೆಯೇ ಇಲ್ಲದೆಹೋದರೆ, ಅದರಿಂದ ಯಾವ ವಿಧವಾದ ಪ್ರಯೋಜನವೂ ಆಗುವುದಿಲ್ಲ. ಒಬ್ಬನು ಸೈಕಲ್ ಅಂಗಡಿಯನ್ನು ಇಟ್ಟಿದ್ದಾನೆ ; ಇನ್ನೊಬ್ಬನು ಹೋಟೆಲು ನಡೆಸುತ್ತಿದ್ದಾನೆ. ಅವರಲ್ಲಿ ಹಣ ಕೊಟ್ಟರೆ ಸಾಮಾನು ಸಿಗುತ್ತದೆ. ಅದರಂತೆಯೆ ವೇದವನ್ನು ಹಣಕ್ಕೆ ಮಾರಾಟ ಮಾಡುವ "ವೇದಮಾರ್ಕೆಟ್" ಇಟ್ಟಿದ್ದಾನೆ ಒಬ್ಬ. ಇಂಥ ಪರಿಸ್ಥಿತಿಯಿದ್ದರೆ ನಾವು ಮಾಡುವ ಕರ್ಮಗಳಿಗೆ ಹೇಗೆ ಫಲ ಸಿಗುತ್ತದೆ.

ದಕ್ಷಬ್ರಹ್ಮನು "ಪರಮೇಶ್ವರನು ನನ್ನ ಅಳಿಯ ತಾನೆ! ಅವನು ನನಗಿಂತ ದೊಡ್ಡವನೋ ? ನಾನು ತಾನೇ ಅವನಿಗೆ ಹೆಣ್ಣನ್ನು ಕೊಟ್ಟಿರುವುದು. ನಾನೇ ದೊಡ್ಡವನು"-ಎಂದು ಭಾವಿಸಿ ಪರಮೇಶ್ವರನನ್ನು ತಾನು ಮಾಡುತ್ತಿದ್ದ ಯಾಗಕ್ಕೆ ಕರೆಯಲೇ ಇಲ್ಲ. ಕೊನೆಯಲ್ಲಿ ತನ್ನ ತಲೆ ಕತ್ತರಿಸಲ್ಪಟ್ಟಾಗ, ಒಂದು ಆಡಿನ ತಲೆ ಜೋಡಿಸಲ್ಪಟ್ಟು "ಮೇ ಮೇ" ಎಂದು ಕೂಗಿಕೊಳ್ಳುತ್ತಿದ್ದನು ಎಂದು ಪುರಾಣಗಳಲ್ಲಿ ನಾವು ಓದುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆದ್ದರಿಂದ ಉತ್ತಮವಾದ ಕರ್ಮಗಳನ್ನು ನಾವು ಮಾಡುತ್ತಿರುವಾಗ ಅಶ್ರದ್ಧೆ ಮತ್ತು ದುರ್ಮೇಧೆಯಿಲ್ಲದೆ ಮಾಡಿದರೆ ಸರಿಯಾದ ಫಲವು ದೊರಕುತ್ತದೆ. ರುದ್ರಾಧ್ಯಯನ ಮಾಡಿದರೆ ಅದರಿಂದ ಫಲವೇನು ?

ಭಸ್ಮಚ್ಛನ್ನೋ ಭಸ್ಮಶಯ್ಯಾಂ ಶಯಾನೋ ರುದ್ರಾಧ್ಯಾಯೀ
ಮುಚ್ಯತೇ ಸರ್ವಪಾಪೈಃ ।

ಭಸ್ಮಧಾರಣೆ ಮಾಡಿ, ಅದರಲ್ಲೇ ಮಲಗಿ ಉಪಯೋಗಿಸುತ್ತಾ ರುದ್ರಾಧ್ಯಯನ ಮಾಡುವವನು ಎಲ್ಲ ಪಾಪಗಳಿಂದಲೂ ಬಿಡುಗಡೆ ಹೊಂದುವನು.

ಭಸ್ಮವನ್ನು ಧರಿಸಿ, ಅದು ಪವಿತ್ರವಾದದ್ದು ಎಂದು ತಿಳಿದು ರುದ್ರವನ್ನು ಅಧ್ಯಯನ ಮಾಡುವವನ ಸಕಲ ಪಾಪಗಳು ನಾಶವಾಗುತ್ತವೆ. ಒಂದೊಂದು ಪಾಪ ಕಾರ್ಯಕ್ಕೂ ಒಂದೊಂದು ಪ್ರಾಯಶ್ಚಿತ್ತ ಹೇಳಲಾಗಿರುವಂತೆ, ರುದ್ರವು ಎಲ್ಲ ಪಾಪಗಳಿಗೂ ಪ್ರಾಯಶ್ಚಿತ್ತ ರೂಪವಾಗಿ ಪ್ರಕಾಶಿಸುತ್ತದೆ.

ಕೆಲವರು, ನಾವು ಪಾಪವನ್ನೇ ಮಾಡುವುದಿಲ್ಲ. ಆದ್ದರಿಂದ ನಮಗೆ ರುದ್ರಾಧ್ಯಯನವೇಕೆ ?–ಎಂದು ಪ್ರಶ್ನಿಸುತ್ತಾರೆ. ಆದರೆ ಅಂಥವರು ಮರುಜನ್ಮವನ್ನು ಪಡೆಯುವಾಗ ಅವರು ಕೇಳಿದ್ದೆಲ್ಲಾ ಅವರಿಗೆ ಸಿಗುವುದಿಲ್ಲ.

ಯತ್ ಪೃಥಿವ್ಯಾಂ ವ್ರೀಹಿ ಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ಏಕಸ್ಯಾಪಿ ನ ಪರ್ಯಾಪ್ತಂ ತದಿತ್ಯತಿ ತೃಷಂ ತ್ಯಜೇತ್ ॥

ಭೂಮಿಯಲ್ಲಿರುವ ಭತ್ತ, ಗೋಧಿ, ಚಿನ್ನ, ಪಶುಗಳು, ಸ್ತ್ರೀಯರು ಇವು ಯಾವುದರಿಂದಲೂ ಸಂಪೂರ್ಣವಾಗಿ ತೃಪ್ತಿಯುಂಟಾಗುವುದಿಲ್ಲ. ಆದ್ದರಿಂದ, ಅತಿಯಾದ ಆಸೆಯನ್ನು ಬಿಡಬೇಕು–ಎಂದು ಹೇಳಿರುವಂತೆ, ಲೋಕದಲ್ಲಿರುವ ಎಲ್ಲ ವಸ್ತುಗಳು ಸಿಕ್ಕಿದರೂ ಕೂಡ ಅವೆಲ್ಲವೂ ಉಪಯೋಗವಿಲ್ಲ ಎಂದು ಕೊನೆಯಲ್ಲಿ ತಿಳಿದುಬರುತ್ತದೆ. ಚಂದ್ರಮಂಡಲದಿಂದ ನಮ್ಮ ಬಾಳಿಗೆ ಯಾವ ಉಪಯೋಗವೂ ಇಲ್ಲ ಎಂದು ತಿಳಿದುಕೊಳ್ಳಲು ಎಷ್ಟೋ ಶ್ರಮಪಟ್ಟು ಮನುಷ್ಯ ಚಂದ್ರಮಂಡಲಕ್ಕೆ ಹೋದ. ಕೊನೆಯಲ್ಲಿ ಅಲ್ಲಿ ಮನುಷ್ಯ ಜೀವಿಸಿರಲು ಸಾಧ್ಯವಿಲ್ಲ. ಏನನ್ನೂ ಬೆಳೆಯಲು ಸಾಧ್ಯವಿಲ್ಲ–ಎನ್ನುವುದನ್ನೂ ತಿಳಿದುಕೊಂಡ—ಆದ್ದರಿಂದ ಎಷ್ಟೇ ಜನ್ಮಗಳನ್ನು ಎತ್ತಿದರೂ ತೃಪ್ತಿಯೆಂಬುದಿಲ್ಲ. ಕೈವಲ್ಯವನ್ನು ಪಡೆದರೆ ಮಾತ್ರ ಮನುಷ್ಯ ಜನ್ಮವನ್ನು ಪಡೆದದ್ದಕ್ಕೆ ಫಲ ಎಂದು ಹೇಳಲಾಗಿದೆ. ಆದ್ದರಿಂದ "ಪುಂಸಾಂ ಕೈವಲ್ಯ ಸಾಧನಂ"–ಎಂದು ರುದ್ರಾಧ್ಯಾಯವನ್ನು ಕುರಿತು ಹೇಳಲಾಗಿದೆ. ಅದು ಮೋಕ್ಷಕ್ಕೆ ಮಾರ್ಗ,

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರಿಗೆ ಒಂದು ಪ್ರಶ್ನೆ ಎದುರಾಗಬಹುದು— "ಮನುಷ್ಯರಲ್ಲಿ ಹಲವರಿಗೆ ಮೋಕ್ಷ ಬೇಕೆಂಬ ಆಸೆಯೇ ಇಲ್ಲವಲ್ಲ. ಅವರಿಗೆ ರುದ್ರಾಧ್ಯಯನದಿಂದ ಏನು ಪ್ರಯೋಜನ ?" ಆದರೆ ಮೊದಲೇ ಹೇಳಿದಂತೆ, ರುದ್ರಾಧ್ಯಯನ ಮನುಷ್ಯನು ಮಾಡುವ ಮಹಾಪಾತಕಗಳನ್ನೂ ಉಪಪಾತಕಗಳನ್ನೂ ನಾಶಪಡಿಸುತ್ತದೆ. ಆದ್ದರಿಂದ ರುದ್ರಾಧ್ಯಾಯ ತುಂಬಾ ಶ್ರೇಷ್ಠ ಎನ್ನುತ್ತಾರೆ.

ಇದಕ್ಕೆ ಶತರುದ್ರೀಯಂ ಎಂದು ಹೆಸರು. ಯಜುರ್ವೇದದ ಎಲ್ಲ ಶಾಖೆಗಳಲ್ಲೂ ರುದ್ರಾಧ್ಯಾಯವಿದೆ. ಉದಾಹರಣೆಗಾಗಿ ಶುಕ್ಲಯಜುರ್ವೇದವನ್ನು ತೆಗೆದುಕೊಳ್ಳೋಣ. ಅಲ್ಲಿ ರುದ್ರವನ್ನು ಹೇಳುವ ಬಗೆಯೇ ಬೇರೆ. ಅದರಂತೆ ಮಾಧ್ಯಂದಿನ ಶಾಖೆಯೆಂಬುದೂ ಉಂಟು. ಶಾಖೆಯ ಕ್ರಮದಂತೆ ವೇದವನ್ನು ಹೇಳುವುದು ಕೆಲವರಿಗೆ ನಗುವನ್ನೇ ತರುತ್ತದೆ. ಆದರೆ, ಹಾಗೆ ಹೇಳಿದರೆ ಮಾತ್ರ ಅವರಿಗೆ ಪುಣ್ಯ. "ನಮಸ್ತೇ ರುದ್ರಮನ್ಯವೇ ಉತೋತ ಇಕವೇ ನಮಃ"—ಎಂದು ಅವರು ಹೇಳುತ್ತಾರೆ. "ಇಷವೇ" ಎಂದು ಕೃಷ್ಣ ಯಜುರ್ವೇದದಲ್ಲಿ ಹೇಳಿರುವುದನ್ನು ಅವರು "ಇಕವೇ ನಮಃ" ಎಂದು ಹೇಳುತ್ತಾರೆ. ಹಾಗೆ ಹೇಳಿದರೆ ಮಾತ್ರ ಅವರಿಗೆ ಪುಣ್ಯವುಂಟಾಗುತ್ತದೆ. ನೂರು ಶಾಖೆಗಳಲ್ಲಿಯೂ ಇರುವುದರಿಂದ ರುದ್ರಕ್ಕೆ 'ಶತರುದ್ರೀಯಮ್' ಎಂದು ಹೆಸರು. ಆದರೆ ಒಂದೊಂದು ಶಾಖೆಯಲ್ಲಿಯೂ ಚಿಕ್ಕ ಪುಟ್ಟ ಭೇದಗಳಿವೆ. ಹೇಳುವ ಕ್ರಮವೂ ಭಿನ್ನವಾಗಿರಬಹುದು.

ನಾವು ಹುಡುಗರಿಗೆ ಒಂದು ಮುಖ್ಯವಾದ ವಿಷಯವನ್ನು ತಿಳಿಸುವಾಗ— "ಗೊತ್ತಾಯಿತೇ ? ಸರಿಯಾಗಿ ಕೇಳಿದೆಯಾ ?" ಎಂದು ನಾಲ್ಕಾರು ಸಲ ಕೇಳುತ್ತೇವಲ್ಲವೇ ? ಸಾಮಾನ್ಯವಾದ ವಿಷಯವಾದರೆ ಒಂದು ಬಾರಿ ವಿಷಯವನ್ನು ಹೇಳಿ ನಿಲ್ಲಿಸಿಬಿಡುತ್ತೇವೆ. ಹುಡುಗರು ಅದನ್ನು ಮರೆತರೂ ಮರೆಯಬಹುದು. ಆದರೆ, ಮುಖ್ಯವಾದ ವಿಷಯವಾದರೆ ನಾವು ಹಲವು ಬಾರಿ ಮನದಟ್ಟು ಮಾಡ ಬಯಸುತ್ತೇವೆ. ಅದರಂತೆಯೇ ರುದ್ರವನ್ನು ನೂರು ಶಾಖೆಗಳಲ್ಲಿ ನಾವು ಕಾಣುತ್ತೇವೆ. ಆದ್ದರಿಂದ ಇದಕ್ಕೆ ವಿಶೇಷ ಪ್ರಾಮುಖ್ಯತೆ ಉಂಟು. ಒಂದು ಬಾರಿ ಹೇಳುವ ರುದ್ರಕ್ಕೇ ಇಷ್ಟು ಹೆಚ್ಚುಗಾರಿಕೆ ಇರಬೇಕಾದರೆ, ಹನ್ನೊಂದು ಬಾರಿ ಹೇಳಲಾಗುವ ಏಕಾದಶ ರುದ್ರಕ್ಕೆ; ಅದಕ್ಕಿಂತ ಹಲವು ಪಟ್ಟು ಹೇಳಲಾಗುವ ಅತಿರುದ್ರಕ್ಕೆ ಎಷ್ಟು ಹಿರಿಮೆ ಇದೆ ಎನ್ನುವುದನ್ನು, ನಾವು ಊಹಿಸಿಕೊಳ್ಳಬಹುದು. ಆದ್ದರಿಂದ ಇಂಥಾ ಸತ್ಕರ್ಮಗಳನ್ನು ನಾವು ಆಗಾಗ ನಡೆಸಿ ಶ್ರೇಯಸ್ಸಿಗೆ ಭಾಗಿಗಳಾಗೋಣ.

ಹರ ನಮಃ ಪಾರ್ವತೀ ಪತಯೇ, ಹರ ಹರ ಮಹಾದೇವ ।
ಜಾನಕೀಕಾಂತಸ್ಮರಣಂ, ಜಯ ಜಯ ರಾಮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಅಸ್ತೇ ದೇಶಿಕಚರಣಂ ನಿರವಧಿರಾಸ್ತೇ ತದೀಕ್ಷಣೇ ಕರುಣಾ ।
ಅಸ್ತೇ ಕಿಮಪಿ ತದುಕ್ತಂ ಕಿಮತಃಪರಮಸ್ತಿ ಜನ್ಮ ಸಾಫಲ್ಯೇ ॥

(ಗುರುವಿನ ಚರಣಾರವಿಂದಗಳೆಂಬುದು ಇದೆ ; ಅವರ ನೋಟದಲ್ಲಿ ಅಸೀಮಿ... ವಾದ ಕರುಣೆಯೆಂಬುದು ಇದೆ ; ಅವರು ಹೇಳಿರುವುದು ಇದೆ ; ಜನ್ಮಸಫ... ವಾಗುವುದಕ್ಕೆ ಇವನ್ನು ಬಿಟ್ಟು ಬೇರೆ ಏನು ತಾನೇ ಇದೆ ?)

ಶಂಕರ ಭಗವತ್ಪಾದರು ಅನೇಕ ಪ್ರಕರಣ ಗ್ರಂಥಗಳನ್ನು ಬರೆದು ಒಂದು ಕ... ಅತಿಮನೋಹರವಾದ ಈ ಶ್ಲೋಕವನ್ನು ರಚಿಸಿದ್ದಾರೆ. "ನಿನ್ನ ಬಳಿ ಏನೆಲ್ಲಾ ಇದೆ ನಿನಗೆ ಏನು ಬೇಕಾಗಿದೆ"–ಎಂದು ಪ್ರಶ್ನಿಸಿದಲ್ಲಿ, ಅದಕ್ಕೆ ಉತ್ತರ ರೂಪವಾಗಿ–"ಅಸ್ತೇ **ದೇಶಿಕ ಚರಣಂ**"–ನನಗೆ ಗುರುಗಳ ಚರಣಾರವಿಂದ ಒಂದಿದೆ. ಮತ್ತೇನು ಇದೆ? **"ನಿರವಧಿ ರಾಸ್ತೇ ತದೀಕ್ಷಣೇ ಕರುಣಾ"**–ಅವರ ವೀಕ್ಷಣೆಯಲ್ಲಿ ಅಸೀಮಿತವಾ... ಕರುಣೆ ಇದೆ. ಅವರು ಕೃಪೆ ತುಂಬಿರುವಂತಹ ಕೃಪಾಕಟಾಕ್ಷವನ್ನು ನಮ್ಮ ಮೇ... ಅನುಗ್ರಹಿಸಿದ್ದಾರೆ. ನೀನು ನಡೆಯುವ ದಾರಿ ಯಾವುದು ? ಎಂದರೆ "ಅಸ್ತೇ ಕಿಮ... **ತದುಕ್ತಂ**" ಅವರು ನೀಡಿರುವ ದಾರಿಯೊಂದಿದೆ. ನಾವು ಗುರುಗಳನ್ನು ನಂ... ಅವರ ಅನುಗ್ರಹವನ್ನು ಪಡೆದು, ಅವರ ಉಪದೇಶದಂತೆ ನಡೆದರೆ **"ಕಿಮತಃ ಪರಮಸ್ತಿ ಜನ್ಮ ಸಾಫಲ್ಯೇ"**–ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಲು ಮತ್ತೇನ... ತಾನೇ ಬೇಕಾಗಿದೆ ?

ಆದರೆ, ಅಂತಹ ಗುರುಗಳು—**"ತ್ರಯಮೇವೈತದ್ದೇವಾನುಗ್ರಹ ಹೇತು ಕಮ್"**–ಈ ಮೂರು ದೈವಾನುಗ್ರಹದಿಂದ ಎಂಬಂತೆ, ಅಂಥಹ ಮಹಾಪುರುಷರ ಆಶ್ರಯ ಸಿಗುವುದು ಬಹಳ ಕಷ್ಟ.

ನನ್ನ ಗುರುವರ್ಯರು ಮಹಾಪುರುಷರು ಎಂಬುದನ್ನು ಅವರ ಸಮಕಾಲೀನರಾ... ಅವರನ್ನು ಕಂಡವರು ಅನುಭವಿಸಿದ್ದಾರೆ. ಒಬ್ಬರು ಹೇಗೆ ಮಹಾಪುರುಷರಾಗುತ್ತಾ... ರೆಂಬ ಪ್ರಶ್ನೆಗೆ, ಜನ್ಮಜನ್ಮಾಂತರಗಳಿಂದ ಆರ್ಜಿತವಾದ ಸತ್ಸಂಸ್ಕಾರಗಳು ಯಾವ ಜನ್ಮ ದಲ್ಲಿ ಫಲೋನ್ಮುಖವಾಗುತ್ತವೆಯೋ ಆ ಜನ್ಮದಲ್ಲಿ ಅವರು ಮಹಾಪುರುಷರಾಗುತ್ತಾರೆ. **"ತಾಂ ಹಂಸಮಾಲಾ ಶರದೀವ ಗಂಗಾ ಮಹೌಷಧಿಂ ನಕ್ತಮಿವಾತ್ಮಭಾಸಃ"**– (ಶರದೃತುವಿನಲ್ಲಿ ಹಂಸಗಳು ಹೇಗೆ ಗಂಗೆಯನ್ನು ಸೇವಿಸುತ್ತವೆಯೋ, ಮತ್ತು ಹೇಗೆ ಮಹತ್ತರವಾದ ಔಷಧಿಗಳು ರಾತ್ರಿಯಲ್ಲಿ ತಮ್ಮ ಕಾಂತಿಯನ್ನು ಹೊಂದುತ್ತವೋ....) ಹಾಗೆಯೇ, ಹಿಂದಿನ ಜನ್ಮದಲ್ಲಿ ಅಭ್ಯಾಸ ಮಾಡಿದ್ದು ಈ ಜನ್ಮದಲ್ಲಿ ತಾವಾಗಿಯೇ ಸ್ಫುರಿಸುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಮನುವು ಒಂದು ಕಡೆ ಮನುಷ್ಯನು ಎಷ್ಟೇ ವಯಸ್ಸಾದವನಾದರೂ, ವಿದ್ಯಾಭ್ಯಾಸವನ್ನು ನಿಲ್ಲಿಸಬಾರದು ಎಂದಿದ್ದಾನೆ. "ನನಗೆ ವೃದ್ಧಾಪ್ಯ ಬಂದಿದೆ; ಈ ಜನ್ಮದಲ್ಲಿ ನಾನು ಕಲಿತ ವಿದ್ಯೆಯನ್ನು ಉಪಯೋಗಿಸುವ ಅವಕಾಶವಿಲ್ಲ–ನಾನು ಹಾಗಾದರೆ ವೃಥಾ ಪರಿಶ್ರಮವೇಕೆ ಪಡಬೇಕು. ಬದಲಾಗಿ ನಾನು ಸುಖವಾಗಿ ನಿದ್ರಿಸಿದರೆ ಉತ್ತಮವಲ್ಲವೇ ?" ಎಂದು ಕೆಲವರು ಶಂಕಿಸಬಹುದು. ಅದಕ್ಕೆ ಮನುವು ಹೇಳುತ್ತಾನೆ–

ಗತೇಽಪಿ ವಯಸಿಗ್ರಾಹ್ಯೇ ವಿದ್ಯಾ ಸರ್ವಾತ್ಮನಾ ಬುಧೈಃ ।
ಯದ್ಯಪಿ ಸ್ಯಾತ್‌ನ ಫಲದಾ ಸುಲಭಾ ಸಾಽನ್ಯ ಜನ್ಮನಿ ॥

(ವಯಸ್ಸಾದರೂ ಸಹ ಬುದ್ಧಿವಂತರು ನಿಷ್ಠೆಯಿಂದ ಜ್ಞಾನಾರ್ಜನೆ ಮಾಡಬೇಕು ; ಅದು ಈ ಜನ್ಮದಲ್ಲಿ ಫಲಕಾರಿಯಾಗದಿದ್ದರೂ, ಮುಂದಿನ ಜನ್ಮದಲ್ಲಿ ಸುಲಭವಾಗುವುದು). ಸ್ವಲ್ಪ ತಿಳುವಳಿಕೆಯುಳ್ಳವನಾದರೆ ವಯಸ್ಸು ಎಷ್ಟೇ ಆಗಿರಲಿ ವಿದ್ಯಾರ್ಜನೆಮಾಡಲೇಬೇಕು. ಅದರಿಂದ ಪ್ರಯೋಜನವೇನೆಂದರೆ, ಈ ಜನ್ಮದಲ್ಲಿ ಅದರಿಂದ ಏನೂ ಪ್ರಯೋಜನವಿಲ್ಲದಿದ್ದರೂ ಮುಂದಿನ ಜನ್ಮಗಳಲ್ಲಿ ಮತ್ತೆ ಮಾನವನಾಗಿ ಹುಟ್ಟಿದರೆ, ವಿದ್ಯಾಭ್ಯಾಸಕ್ಕೆ ಅವಕಾಶ ಒದಗಿಬಂದಲ್ಲಿ, ಆಗ ನಿನಗೆ ಸಂಸ್ಕಾರವಿದ್ದರೆ ಹೇಳಿಕೊಟ್ಟಿದ್ದು ಸುಲಭವಾಗಿ ವೇದ್ಯವಾಗುತ್ತದೆ. ಹಾಗಿಲ್ಲದಿದ್ದರೆ, ಗುರುವು ಉಪದೇಶಿಸಿದ ವಿದ್ಯೆ ಗುರುವಿನಲ್ಲೇ ಉಳಿಯುತ್ತದೆ. ಹಾಗೆ ಆಗಬಾರದು. ಅವರು ಹೇಳಿಕೊಟ್ಟಿದ್ದು ಚೆನ್ನಾಗಿ ಮನವರಿಕೆಯಾದರೆ, ಅವರು ಮುಂದಿನದನ್ನು ಉಪದೇಶಿಸುತ್ತಾರೆ. ಇಲ್ಲವಾದರೆ, "ಈ ಪಾಠವನ್ನು ಯಾಕೆ ಹೇಳಿಕೊಡಬೇಕು"–ಎಂದು ನಿರಾಶರಾಗುತ್ತಾರೆ. ಅದರಿಂದ ನಮಗೇನೂ ಪ್ರಯೋಜನವಿಲ್ಲ. ನಾವು ಸುಲಭವಾಗಿ ವಿದ್ಯೆ ಕಲಿತರೆ ನಮಗೆ ಹಿಂದಿನ ಜನ್ಮದ ಸೂಕ್ತ ಸಂಸ್ಕಾರಗಳು ಇತ್ತೆಂಬುದು ತಿಳಿದು ಬರುತ್ತದೆ. ಹಾಗೆಯೇ ನಾವು ಸತ್ಪುರುಷರನ್ನು ನೋಡಿದಾಗ–'ಈತನು ತನ್ನ ಹಿಂದಿನ ಜನ್ಮದಲ್ಲಿ ಸಿದ್ಧ ಪುರುಷನಾಗಿದ್ದು, ತಾನು ಪಟ್ಟ ಶ್ರಮಕ್ಕೆ ಸಲ್ಲುವ ಫಲಗಳನ್ನು ಯಾವುದೋ ಅಡಚಣೆಯಿಂದ ಅನುಭವಿಸಲಾಗದೆ ಈ ಜನ್ಮದಲ್ಲಿ ಅದನ್ನು ಅನುಭವಿಸಲು ಹುಟ್ಟಿದ್ದಾನೆ"–ಎಂಬುದಾಗಿ ತಿಳಿಯುತ್ತೇವೆ.

ನನ್ನ ಗುರುಗಳವರಲ್ಲಿ ಇದ್ದ ಅಂತರ್ಮುಖತ್ವ ಎಂಬುದು ಅವರಿಗೆ ಆಜನ್ಮವಾಗಿ ಬಂದಿದ್ದಿತು. ಎಷ್ಟೇ ಪ್ರಾಪಂಚಿಕ ವಿಷಯಗಳ ನಡುವೆ ಇರುತ್ತಿದ್ದರೂ, ಅವರು ಆತ್ಮವನ್ನು ಮರೆಯದೆ, ತಮ್ಮ ಮನಸ್ಸನ್ನು ಸದಾ ತಮ್ಮ ಲಕ್ಷ್ಯದಲ್ಲಿಯೇ ಕೇಂದ್ರೀಕರಿಸಿದ್ದರು ಎಂಬುದನ್ನು ನಿರೂಪಿಸಲು ನಾನು ಎರಡು ದೃಷ್ಟಾಂತಗಳನ್ನು ಈ ಹಿಂದೆ ಹೇಳಿದ್ದೆ. ಈ ಸಂದರ್ಭದಲ್ಲಿ ಮಾತನಾಡಿದ ಎಲ್ಲರೂ ತಾವು ನನ್ನ ಗುರುಗಳಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ಏನೇನು ಫಲಗಳನ್ನು ಗಳಿಸಿದರು ಎಂಬುದನ್ನು ಹೇಳುತ್ತಿದ್ದಾರೆ. ನಾನು ಅವುಗಳನ್ನು ಬಿಟ್ಟು, ನಾನು ಅವರಲ್ಲಿ ಏನು ಕಂಡೆ ಎಂಬುದನ್ನು ಮಾತ್ರ ಹೇಳುತ್ತಿರುವೆ. ನನಗೆ ನಾನೇ ಸ್ವತಃ ಕಂಡಿದ್ದು ಹಾಗೂ ಅವರ ಬಾಯಿಂದಲೇ ಕೇಳಿದ್ದು ಮೂಲಗಳು. ನಿನ್ನೆ ನಾನು ಹೇಳಿದುದು ಅವರೇ ಹೇಳಿದ ವಿಷಯಗಳು.

ನಾವೆಲ್ಲಾ ಶ್ರದ್ಧೆಯಿರಬೇಕೆನ್ನುತ್ತೇವೆ. ಶ್ರದ್ಧೆ ಎಂದರೇನು ?

"ವೇದಾಂತಗುರುವಾಕ್ಯೇಷು ಸತ್ಯಬುದ್ಧ್ಯವಧಾರಣಾ"–ಗುರುವಚನದಲ್ಲಿ ಮತ್ತು ಶಾಸ್ತ್ರಗಳಲ್ಲಿ ಇವು ಸತ್ಯವೆಂಬ ಅಚಲವಾದ ನಂಬಿಕೆ. "ನಮಗೆ ನಂಬಿಕೆ ಇದ್ದೇ ಇದೆ. ಇಲ್ಲದಿದ್ದರೆ, ನಾವು ವೇದಾಂತವನ್ನು ಏಕೆ ಓದುತ್ತೇವೆ"–ಎಂದೆನಿಸುತ್ತದೆ. "ನಮಗೆ ಶ್ರದ್ಧೆ ಇದೆ"–ಎಂಬುದು ಬರೀ ನಮ್ಮ ಮಾತಷ್ಟೆ. ನಾವು ನಮ್ಮ ಕೆಲಸಗಳಲ್ಲಿ ಶ್ರದ್ಧೆಯನ್ನು ತೋರಿಸುತ್ತಿದ್ದೇವೆಯೋ–ಎಂಬುದೇ ಪ್ರಶ್ನೆ.

ಶಾಸ್ತ್ರಗಳು ಸಂಧ್ಯಾವಂದನೆ ಮಾಡಲೇಬೇಕು ಎನ್ನುತ್ತವೆ. ಆದರೆ ಸಂಧ್ಯಾವೇಳೆಯಲ್ಲಿ ಬೇರೆ ಯಾವುದೋ ವಿಷಯಬಂದಲ್ಲಿ ನಾವು ಸಂಧ್ಯಾವಂದನೆ ಮಾಡದೆಯೂ ಇರಬಹುದು. ಹಾಗಿದ್ದಲ್ಲಿ ನಮಗೆ ಶ್ರದ್ಧೆ ಇದೆಯೆಂಬುದು ಸತ್ಯವಾಗಲಾರದು. ನಾವು ಯಾವುದನ್ನು ಸತ್ಯವೆಂದು ಅಂಗೀಕರಿಸುತ್ತೇವೋ ಅದನ್ನು ಅನುಸರಿಸಿ ನಡೆಯಬೇಕು.

ನನ್ನ ಗುರುಗಳು ಚಿಕ್ಕವಯಸ್ಸಿನಿಂದಲೂ ರಾಮಾಯಣಪಾರಾಯಣ ಮಾಡುವುದನ್ನು ಅಭ್ಯಾಸಮಾಡಿಕೊಂಡಿದ್ದರು. ರಾಮಾಯಣಪಾರಾಯಣ ಮಾಡುವ ಸಂದರ್ಭದಲ್ಲಿ ಮೊದಲು ಕೆಲವು ಶ್ಲೋಕಗಳನ್ನು ಹೇಳುವುದು ಕ್ರಮ. ಅಲ್ಲಿ ಒಂದು ಶ್ಲೋಕ ಹೀಗಿದೆ–

ಯತ್ರ ಯತ್ರ ರಘುನಾಥಕೀರ್ತನಂ ತತ್ರ ತತ್ರ ಕೃತಮಸ್ತಕಾಂಜಲಿಂ ।
ಬಾಷ್ಪವಾರಿಪರಿಪೂರ್ಣಲೋಚನಂ ಮಾರುತಿಂ ನಮತ ರಾಕ್ಷಸಾಂತಕಮ್॥

(ಎಲ್ಲೆಲ್ಲಿ ರಾಮನ ಕೀರ್ತನೆ ನಡೆಯುತ್ತದೆಯೋ, ಅಲ್ಲೆಲ್ಲಾ ತನ್ನ ತಲೆಯ ಮೇಲೆ ಕೈಯನ್ನು ಜೋಡಿಸಿ ಆನಂದ ಬಾಷ್ಪಗಳಿಂದ ಕೂಡಿರುವ ರಾಕ್ಷಸಾಂತಕನಾದ ಹನುಮಂತನನ್ನು ನಮಸ್ಕರಿಸಿ).

ರಾಮಭಕ್ತನಾದ ಹನುಮಂತನ ಒಂದು ಸ್ವಭಾವವೇನೆಂದರೆ–ಎಲ್ಲೆಲ್ಲಿ ರಾಮಾಯಣದ ಕಥಾಪ್ರವಚನ ನಡೆಯುತ್ತದೆಯೋ ಅಲ್ಲಿ ಅವನು ಬಂದು ಕುಳಿತಿರುತ್ತಾನೆ. ನಮ್ಮ ಬೆಂಗಳೂರಿನಲ್ಲಿ ನೂರು ಕಡೆ ರಾಮೋತ್ಸವ ನಡೆದರೆ ಏನು ಮಾಡುತ್ತಾನೆ–

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದರೆ, ನೂರು ಕಡೆಯೂ ಬಂದು ಕುಳಿತಿರುತ್ತಾನೆ. ಇದು ಹೇಗೆ ಸಾಧ್ಯ. ಎಂದು ಪ್ರಶ್ನಿಸಬಹುದು. ವೇದಗಳು ಚರ್ಚಿಸುತ್ತವೆ. ನಾವು ಯಜ್ಞದಲ್ಲಿ ನೀಡುವ ಆಹುತಿ ಸೀಮಿತವಾಗಿರುತ್ತದೆ. ಅದು ಅವರ ಹೊಟ್ಟೆತುಂಬಲು ಸಾಕೇ ? ಇಲ್ಲ. ಒಮ್ಮೆ ಒಬ್ಬರು ಸಹಸ್ರಮೋದಕ ಹೋಮ ಮಾಡಲು ನಿಶ್ಚಯಿಸಿ ನಡೆಸಿಕೊಟ್ಟಿರಬಹುದು. ದೇವರು ಅಷ್ಟೊಂದು ಮೋದಕ ತಿಂದು ಅಜೀರ್ಣದಿಂದ ಬಳಲುವುದಿಲ್ಲವೇ ? ನಾವು ವಿವಿಧ ಪ್ರಮಾಣದಲ್ಲಿ ಆಹುತಿ ಸಲ್ಲಿಸುತ್ತೇವೆ. ಇದರಿಂದ ದೇವತೆಗಳಿಗೆ ಸಾಲದೆಯೂ ಇರಬಹುದು ; ಅಥವಾ ಅಜೀರ್ಣವನ್ನುಂಟುಮಾಡುವಷ್ಟು ಹೆಚ್ಚಾಗಿರಬಹುದು. ಇದಕ್ಕೆ ವೇದವು "**ಯಾವದೇಕಾ ದೇವತಾ ಕಾಮಯತೇ ತಾವದೇಕಾ, ಯಾವ ದಾಹುತಿಃ ಪ್ರಥತೇ, ನ ಹಿ ತದಸ್ತಿ। ಯತ್ತಾವದೇವಸ್ಯಾತ್ ಯಾವಜ್ಜು ಹೋತಿ**"–ದೇವತೆಗಳಿಗೆ ಸಮರ್ಪಣೆ ಮಾಡಬೇಕಾದಲ್ಲಿ ಶಾಸ್ತ್ರದ ವಿಧಿಯಂತೆ ಮಾಡು ವುದು ನಮ್ಮ ಕರ್ತವ್ಯ. ಸಮರ್ಪಿಸಿದ ದ್ರವ್ಯವು ದೇವರಿಗೆ ಸಾಕಾಗುವುದೇ ಇಲ್ಲವೇ ಎಂದು ಚಿಂತಿಸಬೇಕಾದ ಅವಶ್ಯಕತೆ ಇಲ್ಲ. ಹೆಚ್ಚಾಗಿ ಸಮರ್ಪಿಸಿದಲ್ಲಿ ದೇವತೆಗಳು ತಮಗೆ ಬೇಕಾದಷ್ಟನ್ನೇ ಸ್ವೀಕರಿಸುತ್ತಾರೆ–"ಯಾವದೇಕಾ.... ....ಪ್ರಥತೇ" ಸ್ವಲ್ಪವೇ ನೀಡಿದರೆ ತಮಗೆ ಇಷ್ಟವಾದಷ್ಟು ವೃದ್ಧಿಗೊಳಿಸುವಷ್ಟು ಶಕ್ತಿ ದೇವತೆಗಳಿಗೆ ಇರುತ್ತದೆ. ನಮಗೆ ನಂಬಿಕೆ ಇದ್ದರೆ ನಾವೇನೇ ಅರ್ಪಿಸಿದರೂ ದೇವರಿಗೆ ಸೇರುತ್ತದೆ. ಶಾಸ್ತ್ರದ ಚೌಕಟ್ಟಿನಲ್ಲಿ ಯೋಚಿಸದೆ, ನಮ್ಮಿಷ್ಟ ಬಂದಂತೆ–"ನಾವು ಗಣಪತಿಗೆ ಒಂದು ನೂರು ಮೋದಕಗಳನ್ನು ಹೋಮಮಾಡಿದ್ದೇವೆ. ಆದರೆ, ಅವನ ಹೊಟ್ಟೆಯ ಗಾತ್ರವನ್ನು ನೋಡಿದರೆ ಒಂದು ಸಾವಿರ ಮೋದಕಗಳು ಬೇಕಾಗುತ್ತವೆ. ನಾವು ಮಾಡಿದ್ದು ಸಾಲದು" ಎಂದು ಚಿಂತಿಸಿದರೆ, ಮೂರ್ಖರೇ ಸರಿ. ಅಲ್ಲದೆ, ನಾವು ಒಂದು ಸಾವಿರ ಮೋದಕ ಮಾಡಲು ನಿರ್ಧರಿಸಿ, ನಂತರ–"ಗಣಪತಿ ಇಷ್ಟೊಂದು ಹೇಗೆ ತಿನ್ನಲ್ಲು ಶಕ್ತನು ? ನಮಗೆ ಹತ್ತು ಮೋದಕಗಳನ್ನು ತಿಂದರೇ ಅಧಿಕವಾಗುತ್ತದೆ. ಆದ್ದರಿಂದ ಅವನು ನೂರು ಮೋದಕಗಳಿಗಿಂತ ಹೆಚ್ಚಾಗಿ ಸ್ವೀಕರಿಸಲಾರ" ಎಂದು ಚಿಂತಿಸಿ, ನೂರು ಮೋದಕಗಳಿಂದಲೇ ಹೋಮನಡೆಸಿದರೆ, "ಯಾವದೇಕಾ........ಪ್ರಥತೇ"–ಎಂಬ ಶ್ರುತಿಯ ವಾಕ್ಯದ ಮೇಲೆ ನಮ್ಮ ನಂಬಿಕೆ ಏನಾಯಿತು ?

ನಂಬಿಕೆಯ ಲಕ್ಷಣವೇನು ? ಶಾಸ್ತ್ರದ ವಿಧಿಯಂತೆ ಕರ್ಮಾಚರಣೆ. ನನ್ನ ಗುರು ಗಳು ರಾಮಾಯಣದ ಕೀರ್ತನೆ ನಡೆಯುವ ಜಾಗದಲ್ಲಿ ಹನುಮಂತನು ಬಂದು ಕುಳಿ ತಿರುತ್ತಾನೆ ಎಂದು ಓದಿದ್ದರು. ಹನುಮಂತನಿಗೆ ಎಲ್ಲಾ ಜಾಗಗಳಲ್ಲಿಯೂ ಕುಳಿತು ಕೊಳ್ಳುವ ಶಕ್ತಿಯಿದೆ ಎಂಬುದನ್ನು ನಂಬಿದ್ದರು. ಅವನು ತನ್ನ ಶರೀರವನ್ನು ಸೂಕ್ಷ್ಮ ವಾಗಿ ಮಾರ್ಪಡಿಸಿ ಬರುತ್ತಿದ್ದನೆಂದು ನಂಬಿದ್ದರು. ಎಲ್ಲೆಲ್ಲಿ ಗಾಳಿಯ ಅಭಾವ ವಿದೆಯೋ ಅಲ್ಲೆಲ್ಲಾ ಗಾಳಿಯು ನುಗ್ಗುತ್ತದೆ. ಸ್ಥಳವು ಚಿಕ್ಕದಾಗಿದ್ದರೂ, ದೊಡ್ಡ ದಾಗಿದ್ದರೂ ಬರುತ್ತದೆ. ಹಾಗೆಯೇ ಹನುಮಂತನು ರಾಮನ ಕೀರ್ತನೆ ನಡೆಯುವ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಥಳಕ್ಕೆ ಬರುತ್ತಾನೆ. ನಾವು ಈ ಶ್ಲೋಕವನ್ನು ಓದಿ ಅದರ ಅರ್ಥವನ್ನು ತಿಳಿದಿದ್ದೇವೆ. ಆದರೂ, ನಾವು ಹನುಮಂತನು ಬಂದು ಹೋಗುತ್ತಾನೆಂಬುದನ್ನು ಭಾವಿಸಿದ್ದೇವೆ. ನನ್ನ ಗುರುಗಳ ಅಭಿಪ್ರಾಯವಾದರೋ ವಿಶೇಷವಾಗಿತ್ತು. "ಹನುಮಂತನು ಬಂದರೆ ಅವನನ್ನು ಕುಳ್ಳಿರಿಸುವ ವಿಧಾನವಾದರೂ ಏನು ? ನಾವು ಪಾರಾಯಣ ಮಾಡುವಾಗ ಮಣೆಯ ಮೇಲೆ ಕುಳಿತು ಮಾಡುತ್ತೇವೆ. ಅವನಿಗಾಗಿ ಒಂದು ಆಸನವಿಲ್ಲದೆ ಬಂದು ಕೂತು ಪಾರಾಯಣ ಮುಗಿದ ನಂತರ ಹೊರಟು ಹೋಗು ಎಂತಲೇ, ಅಥವಾ ಅವನಿಗೆ ಉಚಿತ ಸ್ಥಾನವೇನಾದರೂ ಇದೆಯೇ ? ನಾನು ಮಣೆ ಹಾಕಿಕೊಂಡು ಪಾರಾಯಣ ಮಾಡುವಾಗ ಅವನಿಗಾಗಿ ಒಂದು ಮಣೆಯನ್ನು ಹಾಕಬೇಕಲ್ಲವೇ" ಎಂದು ಪ್ರತಿನಿತ್ಯವೂ ರಾಮಾಯಣ ಪಾರಾಯಣ ಮಾಡುವಾಗ ಮಣೆ ಹಾಕಿ ಪಾರಾಯಣ ಮಾಡುತ್ತಿದ್ದರು. ಯಾರಾದರೂ ಬಂದು "ಏತಕ್ಕಾಗಿ ಮಣೆ ಹಾಕಿದ್ದಾನೆ ಹುಡುಗ" ಎಂದು ಕೇಳಿದರೆ, "ಹನುಮಂತ"ನಿಗಾಗಿ ಎಂದು ಹೇಳುತ್ತಿದ್ದರು. "ಆಂಜನೇಯ ಕಾಣುವುದಿಲ್ಲವಲ್ಲ"– ಎಂದರೆ, "ನಿಮಗೆ ಕಾಣದಿರಬಹುದು. ಆದರೆ, ಯತ್ರ ಯತ್ರ ರಘುನಾಥ ಕೀರ್ತನಂ ....ಅಂಜಲಿಂ ಎಂದು ಹೇಳಿದಂತೆ ತಲೆಯ ಮೇಲೆ ಕೈಮುಗಿದು ಕುಳಿತಿದ್ದಾನೆ"– ಎನ್ನುವರು. "ಏನಪ್ಪಾ ನೀನು ಹೀಗೆಲ್ಲಾ ಹೇಳುವಿಯಲ್ಲಾ" ಎಂದರೆ "ದೊಡ್ಡವರ ಮಾತು ಸುಳ್ಳಾಗುತ್ತದೆಯೇ ? ನಾನು ನಿತ್ಯವೂ ಈ ಶ್ಲೋಕವನ್ನು ಹೇಳುತ್ತಿರುವೆನಲ್ಲಾ" ಎನ್ನುವರು. ಅವರಲ್ಲಿ ಶ್ರದ್ಧೆ ಎಷ್ಟರಮಟ್ಟಿಗೆ ಇತ್ತು ಎಂಬುದು ನಮಗೆ ಇದರಿಂದ ತಿಳಿದು ಬರುತ್ತದೆ.

ಶ್ರದ್ಧೆ ಹೇಗೆ ಫಲವನ್ನು ನೀಡುತ್ತದೆ ? ಬಾಲ್ಯದಿಂದಲೇ ನನ್ನ ಗುರುಗಳು ನನ್ನ ಪರಮಗುರುಗಳಲ್ಲಿ ಭಕ್ತಿಯನ್ನಿಟ್ಟಿದ್ದರು. ಅವರ ಬಡತನದಿಂದ ನನ್ನ ಗುರುಗಳು ತಮ್ಮ ಗುರುಗಳಲ್ಲಿ ಹೋಗಿ ತಮ್ಮ ಇಚ್ಛೆಯನ್ನು ವಿನಂತಿಸಿಕೊಳ್ಳಲು ಧೈರ್ಯವಾಗಲೀ ಅಥವಾ ಅವಕಾಶವಾಗಲೀ ಇರಲಿಲ್ಲ. ಅವರ ಆಸೆ ಏನಿತ್ತು ? "ಹೇಗಾದರೂ ಗುರುಗಳವರ ಪಾದುಕೆಗಳು ದೊರೆತು ಮನೆಯಲ್ಲಿ ಅವನ್ನು ಪೂಜಿಸುವಂತಾದರೆ ಎಷ್ಟು ಚೆನ್ನಾಗಿರುತ್ತದೆ" ಎಂಬುದಾಗಿತ್ತು. ಒಂದು ಸ್ವಾರಸ್ಯಕರ ಸಂಗತಿ ಜರುಗಿತು. ಪರಸ್ಥಳದಿಂದ ಶೃಂಗೇರಿಗೆ ಬಂದವರೊಬ್ಬರು ಬಹಳ ದಿನಗಳು ಭಕ್ತಿಯಿಂದ ನನ್ನ ಪರಮಗುರುಗಳವರಿಗೆ ಸೇವೆ ಸಲ್ಲಿಸಿ ಅವರ ಕೃಪೆಗೆ ಪಾತ್ರರಾದರು. ಕೊನೆಗೆ ಅವರು ಹೊರಡುವ ವೇಳೆಯಲ್ಲಿ–"ನಿಮ್ಮ ಪಾದುಕೆಗಳು ನನ್ನ ಮನೆಯಲ್ಲಿದ್ದರೆ ನನಗೆ ಶ್ರೇಯಸ್ಸು ದೊರೆಯುತ್ತದೆ. ದಯವಿಟ್ಟು ಅವುಗಳನ್ನು ಅನುಗ್ರಹಿಸಿ" ಎಂದು ಅವರು ಗುರುಗಳಲ್ಲಿ ವಿನಂತಿಸಿದರು. ಪರಮ ಗುರುಗಳು ಅವರ ಮೇಲೆ ಕೃಪೆಮಾಡಿ, ಪಾದುಕೆಗಳನ್ನು ದಯಪಾಲಿಸಿದರು. ಅವರು ಅವನ್ನು ಸ್ವೀಕರಿಸಿ, ಅವರು ತಂಗುತ್ತಿದ್ದ ನನ್ನ ಗುರುಗಳ ಮನೆಗೆ ಬಂದರು. ಹೊರಡುವ ಸಮಯದಲ್ಲಿ ಅವರು ವಸ್ತುಗಳನ್ನು ತೆಗೆದುಕೊಂಡು, ವೃದ್ಧರಾಗಿದ್ದುದರಿಂದ ಪಾದುಕೆಗಳನ್ನು ಮರೆತು ಮನೆಯಲ್ಲೇ ಬಿಟ್ಟು

Sri Vidyabharathi Book Centre, Sringeri

CC-O. In Public Domain. Digitized by eGangotri

ಹೊರಟುಹೋದರು. ನನ್ನ ಗುರುಗಳವರ ಆನಂದಕ್ಕೆ ಪಾರವೇ ಇಲ್ಲ. ಆ ದಿನಗಳಲ್ಲಿ ಶೃಂಗೇರಿಗೆ ಬಂದು ಹೋಗುತ್ತಿದ್ದ ಬಸ್ಸುಗಳು ಬಹಳ ವಿರಳವಾದ್ದರಿಂದ, ಅವರು ಮರಳಿ ಇವರ ಮನೆಗೆ ಬರುವ ಸಾಧ್ಯತೆ ಇರಲಿಲ್ಲ. ನನ್ನ ಗುರುಗಳವರು ಏನು ಮಾಡ ಬೇಕು ? "ನನಗೆ ಪಾದುಕೆಗಳು ಬೇಕೆಂದು ಇಚ್ಛಿಸುತ್ತಿದ್ದೆ. 'ಪಂಗೋರುಪರಿ ಗಂಗಾ ಪ್ರವಾಹಃ'–ಎಂಬಂತೆ ಕುಂಟನಾದವನ ಮೇಲೆ ಗಂಗೆಯೇ ಹರಿಯುವಂತೆ, ನನಗೆ ಅವು ದೊರಕಿದವು" ಎಂದುಕೊಂಡರು.

ಇದೇ ತರಹದ ಘಟನೆಯೊಂದು ಇಂದು ಒಬ್ಬರ ಮನೆಯಲ್ಲಿ ನಡೆಯಿತು. ಕೆಲವರಿಗೆ ನನ್ನ ಕಾಲುಗಳನ್ನು ತೊಳೆಯಬೇಕೆಂಬ ಆಸೆ ಇರುತ್ತದೆ. ಹಾಗೆಂದು ನಾನು ಎಲ್ಲರ ಮನೆಯಲ್ಲಿ ನಾನು ಕಾಲು ತೊಳೆದುಕೊಂಡರೆ ನನ್ನ ಕಾಲುಗಳು ಸವೆ ಯುತ್ತೆಂದೆ ನನ್ನ ಭಾವನೆ. ಆದ್ದರಿಂದ ಅದನ್ನು ನಾನು ತಪ್ಪಿಸಲು ನೋಡುತ್ತೇನೆ. ಇಂದೊಬ್ಬರು ಶ್ರದ್ಧೆಯಿಂದ ಪೂರ್ಣಕುಂಭ ತಂದುಕೊಟ್ಟರು. ಕೆಲವರು "ಶೂನ್ಯ ಕುಂಭ" ತರುತ್ತಾರೆ. ಅವರಿಗೆ ಪೂರ್ಣಕುಂಭ ಎಂದರೇನೆಂದು ತಿಳಿಯದು. ಚೆನ್ನಾಗಿ ಪಾತ್ರೆಯನ್ನು ಬೆಳಗಿಸಿ, ತೆಂಗಿನಕಾಯನ್ನು ಅದರ ಮೇಲಿಟ್ಟು ತರುತ್ತಾರೆ. ತೆಂಗಿನ ಕಾಯಿ ನೋಡಿದರೆ ಪಾತ್ರೆ ಶೂನ್ಯವಾಗಿರುತ್ತದೆ. ಯಾರೋ ಹಿರಿಯರು ಇಂದು ನಾನು ಹೋಗಿದ್ದ ಮನೆಯವರಿಗೆ ತಿಳಿಸಿದಂತೆ ಕಾಣುತ್ತದೆ. ಅವರು ಪಾತ್ರೆಯನ್ನು ನೀರಿನಿಂದ ತುಂಬಿಸಿತಂದಿದ್ದರು. ಅದನ್ನು ತರುತ್ತಿದ್ದಾಗ ನನ್ನನ್ನು ನೋಡಿದ ಹರ್ಷ ದಲ್ಲಿ ಮತ್ತು ಅಲ್ಲಿ ನೆರದಿದ್ದ ಜನರು ಮಾಡಿದ ಕೋಲಾಹಲದಲ್ಲಿ ತೆಂಗಿನಕಾಯಿ ಮತ್ತು ಪಾತ್ರೆಯಲ್ಲಿದ್ದ ನೀರು ಎರಡೂ ಕೆಳಗೆ ಬಿತ್ತು. ತೆಂಗಿನಕಾಯಿ ನನ್ನ ಪಾದಗಳ ಮೇಲೆ ಬೀಳದೆ ಪಕ್ಕಕ್ಕೆ ಬಿತ್ತು. ಆದರೆ ನೀರು ನನ್ನ ಪಾದಗಳ ಮೇಲೆ ಬಿತ್ತು. "ಅಯ್ಯೋ, ಅಪಶಕುನವಾಯಿತಲ್ಲ" ಎಂದು ಅವರು ತಿಳಿದುಕೊಂಡರು. ಆದರೆ, ನಾನು ಅವರಿಗೆ ಹೇಳಿದೆ–"ನೀವು ನಿಜವಾಗಿ ಪುಣ್ಯವಂತರು. ನಿಮಗೆ ನನ್ನ ಕಾಲು ಗಳನ್ನು ತೊಳೆಯುವ ಆಸೆ ಇತ್ತು. ನೀವು ತೊಳೆಯಲೆಂದು ನೀರು ತಂದಿದ್ದರೆ, ನಾನು ಬೇಡವೆನ್ನುತ್ತಿದ್ದೆ ಆದರೆ ನೀರು ತಾನಾಗಿಯೇ ನನ್ನ ಕಾಲಿನ ಮೇಲೆ ಬಿತ್ತು. ನಿಮ್ಮ ಮನಸ್ಸಿನ ಇಚ್ಛೆಯನ್ನು ದೇವರೇ ನಡೆಸಿಕೊಟ್ಟನೆಂದೇ ಅರ್ಥ. ಆದ್ದರಿಂದ ಚಿಂತಿಸ ಬೇಡಿ...."

ದೇವರು ನಮ್ಮ ಮೇಲೆ ಕೃಪೆ ಮಾಡಿದರೆ ಮತ್ತು ನಮಗೆ ಶ್ರದ್ಧೆ–ಭಕ್ತಿಗಳಿದ್ದರೆ ನಾವು ಏನನ್ನು ಬಯಸುತ್ತೇವೊ ಅದು ತಾನಾಗಿಯೇ ಸಿದ್ಧಿಸುತ್ತದೆ ಎಂಬುದನ್ನು ತೋರಿಸಲು ಇದನ್ನು ಹೇಳಿದೆ. ಹಾಗೆಯೇ ಅವರ ಶ್ರದ್ಧೆಯ ಬಲದಿಂದ ಅವರಿಗೆ ಪಾದುಕೆಗಳು ದೊರಕಿತು. ಅನಂತರ ಅದನ್ನು ಪೂಜಿಸತೊಡಗಿದರು. ಇದರಿಂದ ಅವರಿಗೆ ದೊರೆತ ಫಲಗಳೇನು ಎಂಬುದನ್ನು ನಂತರ ವಿವರಿಸುತ್ತೇನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾಳೆ ನಮ್ಮ ಕೈಲಿಲ್ಲ

ನಾವು ಮಾಡಬೇಕಾದ ಕೆಲಸಗಳನ್ನು ಸಕಾಲದಲ್ಲಿ ಮಾಡದೆ ಹಲವು ಬಗೆಯಾದ ತೊಂದರೆಗಳಿಗೆ ಒಳಗಾಗುತ್ತೇವೆ. ಇದಕ್ಕೆ ಕಾರಣವೇನು ? "ನಾವು ಈ ದಿನ ಧರ್ಮ ಮಾಡದಿದ್ದರೂ ಪರವಾಗಿಲ್ಲ, ನಾಳೆ ಮಾಡಬಹುದು. ಇವತ್ತು ಸ್ವಲ್ಪ ಮಾಡೋಣ. ನಾಳೇ ಇನ್ನೂ ಸ್ವಲ್ಪ ಹೆಚ್ಚು ಮಾಡಬಹುದು"– ಎಂದುಕೊಳ್ಳುತ್ತೇವೆ. "ನಾಳೆ ಮಾಡಲಾಗಲ್ಲಾ" –ಎಂದರೆ– "ನಾಡಿದ್ದು ಹೇಗೂ ಇದೆಯಲ್ಲಾ" –ಎನ್ನುತ್ತೇವೆ. ಹಾಗೆಯೇ ಈ ವರ್ಷ ಧರ್ಮಮಾಡಲಾಗದಿದ್ದರೆ, ಅದರ ಆಚೆಯ ವರ್ಷ ಇದ್ದೇ ಇದೆಯಲ್ಲಾ ಎಂದು ಹೇಳುತ್ತೇವೆ. ನಾವು ಹಲವಾರು ವರ್ಷಗಳು ಬಾಳುತ್ತೇವೆ ಎಂಬ ಎಣಿಕೆಯೇ ಇದಕ್ಕೆ ಕಾರಣ. ಆದ್ದರಿಂದ ಈಗ ಸಂಸಾರ ಭೋಗದಲ್ಲಿ ಓಲಾಡಿಕೊಂಡಿದ್ದೇವೆ. "ಈಗ ಸಂಸಾರದಲ್ಲಿ ಚೆನ್ನಾಗಿ ಸುಖಗಳನ್ನು ಅನುಭವಿಸಿ ತೃಪ್ತಿಪಟ್ಟು ಅನಂತರ ವೈರಾಗ್ಯವನ್ನು ಪಡೆಯೋಣ"– ಎಂದು ನಾವು ಅಂದುಕೊಳ್ಳುತ್ತೇವೆ. ಅದು ತಪ್ಪಾದ ಅಭಿಪ್ರಾಯ. ಈ ವಿಚಾರದಲ್ಲಿ ಒಂದು ಮಾತಿದೆ–

ನ ಜಾತು ಕಾಮಃ ಕಾಮಾನಾಮುಪಭೋಗೇನ ಶಾಮ್ಯತಿ ।
ಹವಿಷಾ ಕೃಷ್ಣವರ್ತ್ಮೇವ ಭೂಯ ಏವಾಭಿವರ್ಧತೇ ॥

[ಆಸೆಯು, ಅದನ್ನು ಅನುಭವಿಸುವುದರಿಂದ, ಎಂದಿಗೂ ಶಾಂತವಾಗುವುದಿಲ್ಲ; ತಪ್ಪದ ಹವಿಸ್ಸಿನಿಂದ ಬೆಂಕಿಯು ಹೆಚ್ಚುವಂತೆ, ಅದು ಇನ್ನೂ ಪ್ರಬಲವಾಗುತ್ತದೆ.]

ನಮ್ಮ ಮನಸ್ಸು ಯಾವುದನ್ನು ಇಷ್ಟಪಡುತ್ತದೆಯೋ ಅದನ್ನು ಹೊಂದಲು ನಾವು ಪ್ರಯತ್ನಿಸುತ್ತೇವೆ. ಆದರೆ, ಆ ವಸ್ತುವಿನ ಮೂಲಕ ಉಂಟಾಗುವ ತೃಪ್ತಿ ತುಂಬ ಹೊತ್ತು ನಿಲ್ಲುವುದಿಲ್ಲ. ಇನ್ನೊಂದು ಆಸೆ ಉಂಟಾಗುತ್ತದೆ. ಅದನ್ನು ತೀರಿಸಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರಂತೆಯೇ ಆ ಆಸೆ ಈಡೇರಿದರೆ, ನಮಗೆ ಒಂದು ಬಗೆಯ ತೃಪ್ತಿಯುಂಟಾಗುತ್ತದೆ. ಆಸೆ ಈಡೇರದಿದ್ದರೆ ನಮಗೆ ದುಃಖವಾಗುತ್ತದೆ. ಆದರೆ, ಆ ಆಸೆಯನ್ನೂ ಪೂರೈಸಿದ ಮೇಲೆ ಪುನಃ ಇನ್ನೊಂದು ಆಸೆ ಹುಟ್ಟುತ್ತದೆ.

ನಾವು "ಈಗ ಚೆನ್ನಾಗಿ ಕೆಲಸ ಮಾಡಿ ಹಣ ಸಂಪಾದಿಸೋಣ. ಆಮೇಲೆ ಭಗವಂತನನ್ನು ಸ್ಮರಿಸಿ ಅವನನ್ನು ಸ್ತೋತ್ರಮಾಡೋಣ"–ಎಂದುಕೊಳ್ಳುತ್ತೇವೆ. ಆದರೆ, ನಾವು ಯಾವಾಗ ತಾನೆ ಭಗವಂತನ ಭಜನೆ ಮಾಡುತ್ತೇವೆ ? ಅಥವಾ ಭಗವಂತನ ಸ್ತೋತ್ರ ಮಾಡುತ್ತೇವೆ ? ವಯಸ್ಸಾದ ಮೇಲೆ ನಮ್ಮ ಕಣ್ಣುಗಳಿಂದ ಸರಿಯಾಗಿ ನೋಡಲು ಸಾಧ್ಯವಿಲ್ಲ. ಕಿವಿಗಳು ಕೇಳುವ ಶಕ್ತಿಯನ್ನು ಕಳೆದುಕೊಂಡು ಬಿಡುತ್ತವೆ. ಭಗವಂತನ ನಾಮಗಳನ್ನು ಕುರಿತು ಮಾಡನಾಡಲು ಇಷ್ಟಪಟ್ಟರೂ ಬಾಯಿಗೆ ಮಾತನಾಡುವ ಶಕ್ತಿಯಿರುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವು ವಿದ್ಯಾರ್ಥಿಗಳೂ ಹೀಗೆಯೇ ಇರುತ್ತಾರೆ. ಅವರು ವಿದ್ಯೆ ಕಲಿಯಲು ಪಾಠಶಾಲೆಗೆ ಹೋಗುತ್ತಾರೆ. ಆದರೆ ಪರೀಕ್ಷೆಗಳಿಗೆ ಒಂದು ತಿಂಗಳು ಮೊದಲು ಓದಲು ಪ್ರಾರಂಭಿಸಿದರೆ ಸಾಕು ಎಂಬ ಧೋರಣೆಯಲ್ಲಿರುತ್ತಾರೆ. ಹೀಗೆ ಕಾಲವನ್ನು ವ್ಯರ್ಥ ಮಾಡುತ್ತಾರೆ. ಪರೀಕ್ಷೆ ಹತ್ತಿರ ಬಂದಂತೆ ಹೆಚ್ಚು ಓದಬೇಕು ಎಂಬ ಆಸೆಯೂ ಇರುತ್ತದೆ. ಆದರೆ ಅಷ್ಟು ಹೊತ್ತು ಓದುವುದು ಹೇಗೆ ಸಾಧ್ಯ ಎಂಬ ಪ್ರಶ್ನೆಯೂ ಅವರಿಗೆ ಎದುರಾಗುತ್ತದೆ. ಕೊನೆಗೆ ಸೋಮಾರಿತನದಿಂದ ನಾವು ಇಷ್ಟು ದಿನ ಕಿವಿಯಲ್ಲಿ ಕೇಳಿದ್ದು ಸಾಕು, ಅಷ್ಟನ್ನೂ ಪರೀಕ್ಷೆಯಲ್ಲಿ ಬರೆದರೆ ಸಾಕು ಎಂದು ಯೋಚಿಸಿ ಪರೀಕ್ಷೆಯಲ್ಲಿ ನಪಾಸಾಗಿ ಬಿಡುತ್ತಾರೆ. "ಈ ವರ್ಷ ಹೀಗಾಗಿ ಹೋಯಿತಲ್ಲ ಎಂದು ಯೋಚಿಸಿ, ದುಃಖಿಸಿ, ಮುಂದಿನ ವರ್ಷ ಹೀಗಾಗಬಾರದು, ಜಾಣನಾಗಿರಬೇಕು"– ಎಂದು ತೀರ್ಮಾನ ಮಾಡಿಕೊಳ್ಳುತ್ತಾರೆ. ಆದರೆ, ಆ ವರ್ಷವೂ ಹಿಂದಿನಂತೆಯೇ ಆಗುತ್ತದೆ.

ಈ ವಿಧವಾಗಿ ನಾವೂ ಧರ್ಮಮಾಡುವುದನ್ನು ಮುಂದೂಡಿಕೊಂಡೇ ಹೋದರೆ, ಕೊನೆಗೆ ನಮಗೆ ಧರ್ಮಮಾಡುವ ಅವಕಾಶವೇ ಇಲ್ಲವಾಗಿ ಹೋಗುತ್ತದೆ. ನಮ್ಮ ಪರಿಸ್ಥಿತಿ ಹೇಗಿದೆ ಎಂದು ಕೇಳಿದರೆ–

ಅನಿತ್ಯಾನಿ ಶರೀರಾಣಿ ವಿಭವಃ ಶಾಶ್ವತೋ ನ ಹಿ ।
ನಿತ್ಯಂ ಸನ್ನಿಹಿತೋ ಮೃತ್ಯುಃ ಕರ್ತವ್ಯೋ ಧರ್ಮಸಂಗ್ರಹಃ ॥

[ದೇಹಗಳು ಅನಿತ್ಯವಾದವು ; ಸಂಪತ್ತೂ ಶಾಶ್ವತವಲ್ಲ ; ಮೃತ್ಯುವು ಸದಾ ಸಮೀಪದಲ್ಲಿಯೇ ಇರುತ್ತದೆ ; ಆದ್ದರಿಂದ ಮನುಷ್ಯ ಧರ್ಮವನ್ನು ಸಂಗ್ರಹ ಮಾಡಬೇಕು.]–

–ಎಂದು ಹೇಳಲಾಗಿದೆ. "ನಮ್ಮ ದೇಹಗಳು ಯಾವಾಗಲೂ ಇರುತ್ತವೆ– ಎಂದುಕೊಳ್ಳುತ್ತೇವೆ. ಕಲ್ಲಿನಿಂದ ಆಗಿರುವ ಬೆಟ್ಟವೂ ಕೂಡ ಭೂಮಿಯಲ್ಲಿ ಯಾವುದಾದರೂ ಬದಲಾವಣೆಯಾದರೆ ನಾಶವಾಗಿ ಹೋಗುವುದನ್ನು ನಾವು ನೋಡಬಹುದು. ಅಷ್ಟು ಗಟ್ಟಿಯಾದ ಬೆಟ್ಟವೇ ಭೂಮಿಯಲ್ಲಿ ಸೇರಿಹೋಗುವಾಗ, ಮಾಂಸ, ರಕ್ತದಿಂದ ತುಂಬಿರುವ ಮನುಷ್ಯದೇಹ ನಾಶವಾಗದೇ ಇರುತ್ತದೆಯೇ ? ಎಷ್ಟೋ ಮುನಿಗಳ ದೇಹಗಳು ಕೂಡ ನಾಶವಾಗಿ ಹೋಗಿಲ್ಲವೇ ? ಅದನ್ನು ಕುರಿತು ನಾವು ಕೇಳಿಯೂ ಇದ್ದೇವೆ, ನೋಡಿಯೂ ಇದ್ದೇವೆ.

"ನಿತ್ಯಂ ಸನ್ನಿಹಿತೋ ಮೃತ್ಯುಃ"-ಎಂದು ಹೇಳಿರುವಂತೆ, ಮರಣವೆಂಬುದು ನಮ್ಮ ಇಷ್ಟದಂತೆ ಬರುವುದಿಲ್ಲ. ಅದು ನಮ್ಮ ಇಷ್ಟದಂತೆ ಆಗುವ ಹಾಗಿದ್ದರೆ,

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಯಾವಾಗಬೇಕಾದರೂ ಯಾರ ಕೆಲಸಗಳನ್ನಾದರೂ ಮಾಡಬಹುದಾಗಿತ್ತು ಆದರೆ, ಹಾಗಿಲ್ಲವಲ್ಲ. ಆದ್ದರಿಂದ ನಾಳೆ ಯಾವುದನ್ನು ಮಾಡಬೇಕೋ ಅದನ್ನು ಇಂದೇ ಮಾಡಬೇಕು. ಈ ದಿನ ಮಾಡಬೇಕಾದ ಕೆಲಸವನ್ನು ನಾಳೆ ಮಾಡೋಣ ಎಂದು ಮುಂದೆಹಾಕಬಾರದು. ಏಕೆಂದರೆ, ನಾಳೆ ನಾವು ಜೀವಿಸಿರುತ್ತೇವೆಯೋ ಇಲ್ಲವೋ ಎಂದು ನಿಸ್ಸಂಶಯವಾಗಿ ಹೇಳಲು ಸಾಧ್ಯವಿಲ್ಲ. ಆದ್ದರಿಂದ ಮಾಡಬೇಕಾದ ಕೆಲಸವನ್ನು ಮಾಡಲು ಅನಂತರ ಅವಕಾಶವೇ ಇರುವುದಿಲ್ಲ.

ಒಬ್ಬನ ಹತ್ತಿರ ಅಪಾರವಾದ ಸಂಪತ್ತಿದೆಯೆಂದುಕೊಳ್ಳೋಣ. ಆ ಐಶ್ವರ್ಯವಂತ ಏನೆಂದು ಕೊಳ್ಳುತ್ತಾನೆ "ಇನ್ನೂ ಸಂಪತ್ತನ್ನು ಸೇರಿಸಬೇಕು. ಇನ್ನೂ ಸಂಪಾದಿಸಬೇಕು"–ಎಂದು ಯೋಚಿಸುತ್ತಾನೆ. ಅವನು ಐಶ್ವರ್ಯವನ್ನು ತುಂಬ ಮುತುವರ್ಜಿಯಿಂದ ಕೂಡಿ ಹಾಕುತ್ತಾ ಹೋಗುತ್ತಾನೆ. ಮತ್ತು ಲಕ್ಷ್ಮಿಯು ತನ್ನಲ್ಲಿ ಸ್ಥಿರವಾಗಿರುತ್ತಾಳೆ ಎಂದೇ ತಿಳಿದಿರುತ್ತಾನೆ. ಆದರೆ, ಲಕ್ಷ್ಮಿಯು ಸ್ಥಿರವಾಗಿ ಇರುವವಳಲ್ಲ. ಅವನು ಮಾಡಿದ ಅನ್ಯಾಯಗಳು ಹೊರಬಂದರೆ, ಸರ್ಕಾರದವರು ಇವನ ಐಶ್ವರ್ಯವೆಲ್ಲವನ್ನೂ ಮುಟ್ಟುಗೋಲು ಹಾಕಿಕೊಂಡು ಬಿಡುತ್ತಾರೆ. ಐಶ್ವರ್ಯವನ್ನು ಸೇರಿಸುವುದೇ ತಪ್ಪು ಎಂದು ನಾನು ಹೇಳುತ್ತಿಲ್ಲ. ಐಶ್ವರ್ಯವನ್ನು ಕೂಡಿಡುವ ಸಮಯದಲ್ಲೂ ಧರ್ಮಮಾಡುತ್ತಿರಬೇಕು. ಅದನ್ನು ನಾವು ಮನಸ್ಸಿನಲ್ಲಿಟ್ಟುಕೊಂಡಿರಬೇಕು.

ವಿಭವಃ ಶಾಶ್ವತೋ ನ ಹಿ ।

ದೇಹಗಳು ಶಾಶ್ವತವಲ್ಲ ಎಂದು ಹೇಳಿದ್ದಾಯಿತು. ಅಷ್ಟೇ ಅಲ್ಲ, ಯಮ "ಈ ಮನುಷ್ಯ ಒಳ್ಳೆಯ ಕೆಲಸಗಳನ್ನು ಮಾಡಿದ್ದಾನೆ. ಇನ್ನೊಬ್ಬನು ಈವರೆಗೂ ಒಳ್ಳೆಯ ಕೆಲಸಗಳನ್ನು ಮಾಡಿದ್ದೇ ಇಲ್ಲ. ಅವನು ಒಳ್ಳೆಯ ಕೆಲಸಗಳನ್ನು ಮಾಡದೇ ಇದ್ದುದರಿಂದ, ಅವನಿಗೆ ಇನ್ನೂ ಸ್ವಲ್ಪಕಾಲ ಮರಣ ಕೊಡುವುದು ಬೇಡ. ಅಷ್ಟರಲ್ಲಿ ಅವನು ಒಳ್ಳೆಯ ಕೆಲಸಗಳನ್ನು ಮಾಡಬಹುದು"–ಎಂದು ಹೇಳುವುದಿಲ್ಲ.

ಆದ್ದರಿಂದ ಒಬ್ಬ ಮನುಷ್ಯನು ಯಾವಾಗಲೂ ಇರುತ್ತಾನೆಂದು ಯಾರೂ ಹೇಳಲಾಗುವುದಿಲ್ಲ. ನಾವು ನಮಗೆ ಸಿಕ್ಕಿದ ಕಾಲದಲ್ಲಿ ಧರ್ಮವನ್ನು ಮಾಡುತ್ತಿದ್ದರೆ ಮಾತ್ರ ಬುದ್ಧಿಶಾಲಿಗಳೆನಿಸಿಕೊಳ್ಳುವುದು.

ಪರಿಸ್ಥಿತಿ ಹೀಗಿರುವಾಗ ನಮ್ಮ ಮನಸ್ಸಿನಲ್ಲಿ ಕೆಲವು ಸಂದೇಹಗಳು ಏಳಬಹುದು– 1) ನಮಗೆ ದೊರಕಿರುವ ಐಶ್ವರ್ಯ ಯಾವಾಗಲೂ ನಮ್ಮಲ್ಲಿಯೇ ಏಕಿರಬಾರದು? 2) ನಾವು ಇನ್ನೂ ಹಲವು ಕಾಲ ಏಕೆ ಬದುಕಿರಬಾರದು? 3) ನಾವು ಕೂಡಿಸಿಟ್ಟ ಹಣವನ್ನು ಧರ್ಮಕ್ಕಾಗಿ ವಿನಿಯೋಗಿಸಿದರೆ ಅದು ನಮ್ಮೊಡನೆ ಬರುತ್ತದೆಯೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಹೀಗೆ ಸಂದೇಹಪಡುವವರನ್ನು ಕುರಿತು ನಾವು– "ನೀನು ಐಶ್ವರ್ಯವನ್ನು ಬಿಟ್ಟುಬಿಡಬೇಕೆಂದು ಬಯಸುವೆಯಾ ? ಅಥವಾ ನಿನ್ನೊಡನೆ ತೆಗೆದುಕೊಂಡು ಹೋಗಬೇಕೆಂದಿರುವೆಯಾ ? "– ಎಂದು ಪ್ರಶ್ನೆ ಮಾಡಬೇಕು. ಅವಕಾಶವಾಗುವುದಾದರೆ ಐಶ್ವರ್ಯವನ್ನು ತನ್ನೊಡನೆ ತೆಗೆದುಕೊಂಡು ಹೋಗಬೇಕೆಂಬುದೇ ಎಲ್ಲರ ಆಸೆ.

ಮೃತ್ಯೋಽಪ್ಯರ್ಥಂ ನಮೋಕ್ಷ್ಯಾಮಿ ಬದ್ಧ್ವಾನೇಷ್ಯಾಮಿ ಮೂರ್ಧನಿ।
ಇತಿ ಚೇತ್ ಸುದೃಢೋ ಲೋಭಃ ಪಾತ್ರೇ ದೇಯಮಶಂಕಿತಮ್॥

[ಸತ್ತರೂ ಹಣವನ್ನು ಬಿಡಲಾರೆ ; ಅದನ್ನು ಕಟ್ಟಿ ತಲೆಯ ಮೇಲೆ ಹೊತ್ತು ಕೊಂಡು ಹೋಗುತ್ತೇನೆ ಎಂದು ಲೋಭವು ದೃಢವಾಗುವುದಾದರೆ, ಹಿಂದೆ ಮುಂದೆ ನೋಡದೆ ಯೋಗ್ಯರಿಗೆ ದಾನಮಾಡು.]

ನಾವು ಸಂಪಾದಿಸಿದ್ದೆಲ್ಲವನ್ನೂ ನಾವು ಜೊತೆಯಲ್ಲೇ ತೆಗೆದುಕೊಂಡು ಹೋಗಬೇಕೆಂಬ ಆಸೆಯಿದ್ದರೆ ಸತ್ಪಾತ್ರರಿಗೆ ದಾನಮಾಡಬೇಕು.

ಒಬ್ಬ ವಿದ್ಯಾರ್ಥಿಗೆ ಓದುವುದರಲ್ಲಿ ಅತೀವ ಆಸಕ್ತಿ, ಶಕ್ತಿಯೂ ಇದೆ. ಆದರೆ, ಅವನಿಗೆ ಬೇಕಾದ ಹಣವಿಲ್ಲ ಎಂದರೆ, ಅವನಿಗೆ ದಾನಮಾಡಬೇಕು. ನಾವು ಅವನಿಗೆ ಸ್ವಲ್ಪವಾದರೂ ದಾನ ಮಾಡಿದರೆ, ಅದರಿಂದ ನಮಗೆ ಕಮ್ಮಿಯೇನೂ ಆಗುವುದಿಲ್ಲ. ಆದರೆ; ಹಾಗೆ ದಾನ ಮಾಡಿದ ಹಣ ನಮ್ಮೊಡನೆ ಬರುವುದೇನು ?–ಎಂದು ಕೆಲವರು ಕೇಳಬಹುದು. ಆ ಹಣ ವಿದ್ಯಾರ್ಥಿಗೆ ಸೇರಿಹೋದದ್ದರಿಂದ ನಮ್ಮೊಡನೆ ಬರುವುದಿಲ್ಲ. ಆದರೆ, ಆ ದಾನವನ್ನು ಮಾಡಿದ್ದರಿಂದ ಆದ ಪುಣ್ಯ ಮರುಜನ್ಮದಲ್ಲಿಯೂ ಹಿಂದೆಯೇ ಒಬ್ಬ ಬರುತ್ತದೆ. ಈ ರೀತಿಯಾಗಿ ಮಾಡದೆ,ಮನುಷ್ಯ ತನ್ನ ಮಕ್ಕಳನ್ನು ಮಾತ್ರ ಪಾಲಿಸುತ್ತಾ, ಇತರ ಮಕ್ಕಳನ್ನು ಬಯ್ಯುತ್ತಿದ್ದರೆ, ತನಗೆ ವಿಧಿಸಲ್ಪಟ್ಟ ಕರ್ತವ್ಯಗಳನ್ನು ಮಾಡದೇ ಹೋದರೆ, ಯಾವ ವಿಧವಾದ ಪುಣ್ಯವೂ ಅವನೊಡನೆ ಬರದು ; ಮತ್ತು ಪಾಪವೇ ಸುತ್ತಿಕೊಳ್ಳುತ್ತದೆ. "ನಮಗೆ ಯಾವ ವಿಧವಾದ ಪುಣ್ಯವೂ ಬೇಡ, ಪಾಪವೂ ಬೇಡ ; ಯಾವಾಗಲೂ ನೆಮ್ಮದಿಯಾಗಿರಬೇಕು"–ಎಂದೆನಿಸಿದರೆ, ಅದಕ್ಕೆ ಈಶ್ವರನ ಸಾಕ್ಷಾತ್ಕಾರವಾಗಬೇಕು. ಹಾಗೆ ಈಶ್ವರನ ಸಾಕ್ಷಾತ್ಕಾರವಾಗಿ ಬಿಟ್ಟರೆ–

ನೈವ ತಸ್ಯ ಕೃತೇನಾರ್ಥೋ ನಾಕೃತೇನೇಹ ಕಶ್ಚನ ॥

[ಯಾವುದು ಮಾಡಲಾಗಿದೆಯೋ, ಯಾವುದು ಮಾಡಬೇಕಾಗಿದೆಯೋ ಅವುಗಳ ಸಂಬಂಧ ಅವನಿಗಿರದು.]

–ಎಂದು ಭಗವಂತನು ಹೇಳಿದಂತೆ, ಈಶ್ವರ ಸಾಕ್ಷಾತ್ಕಾರವಾದವರು ಮಾಡಬೇಕಾದದ್ದು ಯಾವುದೂ ಇಲ್ಲ. ಹಾಗೆ ಕೆಲಸಗಳನ್ನು ಮಾಡಿದುದರಿಂದ ಯಾವ ವಿಧವಾದ ಸಂಬಂಧವೂ ಅವನಿಗೆ ಇರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಬ್ರಹ್ಮಚಾರಿಯಾಗಿಯೋ ಸಂನ್ಯಾಸಿಯಾಗಿಯೋ ಅಥವಾ ಬೇರೆ ಆಶ್ರಮಿಗಳಾಗಿಯೋ ಇದ್ದ ಪಕ್ಷಕ್ಕೆ ನಮಗೆ ವಿಧಿಸಿರುವ ಕಾರ್ಯಗಳನ್ನು ಸರಿಯಾಗಿ ಮಾಡಬೇಕು. ಆ ಕೆಲಸಗಳು ನಮ್ಮ ಕರ್ತವ್ಯವೆಂದು ತಿಳಿದು ಮಾಡಬೇಕು. ನಾವೆಲ್ಲರೂ ಈಶ್ವರನನ್ನು ಕಾಣಬೇಕೆಂದು ಬಯಸುತ್ತೇವೆ. ಆ ಈಶ್ವರ ದರ್ಶನವಾಗುವುದು ಯಾರಿಗೆ ?

ನಾವು ಧರ್ಮಮಾಡುತ್ತೇವೆ. ಹಾಗೆ ಧರ್ಮಮಾಡುವಾಗ ಅದಕ್ಕೆ ಫಲ ಸಿಗಬೇಕು ಎಂದು ನಿರೀಕ್ಷಿಸುತ್ತೇವೆ. ಹಾಗೆ ಭಾವಿಸಬಾರದು. ಏಕೆಂದರೆ ಧರ್ಮದ ಫಲ ಸಿಕ್ಕಿ ಬಿಟ್ಟರೆ ಮಾಡಿದ ಧರ್ಮದ ಫಲ ತೀರಿಹೋಯಿತೆಂದೇ ಆಗಿ ಬಿಡುತ್ತದೆ. ಹಾಗಾಗದೆ ಏನೇನನ್ನು ನಾವು ಮಾಡುತ್ತೇವೋ ಅದನ್ನು ಈಶ್ವರನಿಗೆ ಸಮರ್ಪಿಸಿ ಫಲದಲ್ಲಿ ಸಂಬಂಧ ಇಟ್ಟುಕೊಳ್ಳಬಾರದು. ಎಲ್ಲಕ್ಕಿಂತಲೂ ಉತ್ತಮವಾದದ್ದು "ಫಲ" ಅಲ್ಲ. ಎಲ್ಲಕ್ಕಿಂತ ಹಿರಿದಾದದ್ದು ಜ್ಞಾನ. ಆದ್ದರಿಂದಲೇ–

ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ ||
[ಜ್ಞಾನವೊಂದನ್ನು ಬಿಟ್ಟು ಪವಿತ್ರವಾದುದು ಬೇರೊಂದು ಇಲ್ಲ.]

–ಎಂದು ಹೇಳಲಾಗಿದೆ. ಜ್ಞಾನದಲ್ಲಿ ಶ್ರೇಷ್ಠವಾದದ್ದು ಯಾವುದು ? ಎಲ್ಲಕ್ಕಿಂತ ಶ್ರೇಷ್ಠವಾದದ್ದು ಅಧ್ಯಾತ್ಮಜ್ಞಾನ. ನಾವು ಯಾವಾಗಲೂ ಫಲಾಪೇಕ್ಷಿಗಳಾಗಿಯೇ ಕೆಲಸಗಳನ್ನು ಮಾಡುತ್ತಿದ್ದರೆ, ಕೆಲವು ಸಲ ಆ ಕೆಲಸದ ಫಲ ನಮಗೆ ಸಿಗಬಹುದು; ಇನ್ನು ಕೆಲವು ಸಲ ಕೆಲಸಗಳಿಗೆ ಫಲ ಸಿಗದೇ ಹೋಗಬಹುದು. ಹೇಗಾದರೂ ಕರ್ಮವು ಫಲವನ್ನು ಕೊಟ್ಟು ತನ್ನ ಕಾರ್ಯವನ್ನು ಮುಗಿಸಿಕೊಂಡು ಬಿಡುತ್ತದೆ. ಆದ್ದರಿಂದ ಭಗವಂತನ ಸಾಕ್ಷಾತ್ಕಾರ ನಮಗೆ ಆಗುವುದಿಲ್ಲ. ನಾವು ಕರ್ಮದ ಫಲವನ್ನು ಕುರಿತು ಯೋಚಿಸುವುದನ್ನು ಬಿಟ್ಟು ಅದನ್ನು ಭಗವಂತನಿಗೆ ಸಮರ್ಪಿಸಿದರೆ, ನಾವು ತುಂಬು ಮನಸ್ಸಿನಿಂದ ಕೆಲಸಗಳನ್ನು ಮಾಡಲಾಗುತ್ತದೆ. ನಾವು ಹಾಗೆ ಮಾಡಬೇಕೆಂಬುದೇ ಭಗವಂತನ ನಿಯಮ.

ನಾವು ಈ ದೇಶದಲ್ಲಿ ಹುಟ್ಟಿದ್ದೇವೆ. ಈ ದೇಶಕ್ಕಾಗಿ ದುಡಿಯುವುದೂ ನಮ್ಮ ಕರ್ತವ್ಯ. ಹಾಗೆ ಈ ದೇಶಕ್ಕಾಗಿ ನಾವು ದುಡಿಯುತ್ತಿದ್ದರೆ, ಭಗವಂತನಿಗೆ ತೃಪ್ತಿಯಾಗುತ್ತದೆ. ಉದಾಹರಣೆಗೆ–ನಾವು ಮಾಡುವ ಕೆಲಸಗಳನ್ನು ನಮ್ಮ ಮೇಲಧಿಕಾರಿಗಳು ನೋಡುತ್ತಿರುತ್ತಾರೆ ಎಂದು ಮಾಡುತ್ತಿದ್ದರೆ, ಅವರು "ನಮ್ಮಿಂದ ಏನನ್ನೋ ನಿರೀಕ್ಷಿಸಿಕೊಂಡು ಕೆಲಸ ಮಾಡುತ್ತಿದ್ದಾನೆ" ಎಂದು ತಿಳಿದು, ನಾವು ಬಯಸಿದ್ದನ್ನು ಕೊಡುವುದಿಲ್ಲ. ಆದರೆ, ಆ ಕೆಲಸ ನಮ್ಮ "ಕರ್ತವ್ಯ"–ಎಂಬ ಭಾವನೆಯಿಂದ ಮಾಡಿದರೆ ನಮ್ಮ ಮೇಲಧಿಕಾರಿಗಳು "ಇವನು ಶ್ರದ್ಧೆಯಿಂದ ಕೆಲಸ ಮಾಡುತ್ತಾನೆ" ಎಂದೆಣಿಸಿ, ನಮಗೆ ಹಿತವಾದದ್ದನ್ನೇ ಮಾಡುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶಾಯಾಃ ಯೇ ದಾಸಾಃ ತೇ ದಾಸಾಃ ಸರ್ವಲೋಕಸ್ಯ ।

–ಎಂದು ಹೇಳಿರುವಂತೆ ಯಾರು ಆಶೆಗೆ ಗುರಿಯಾಗುತ್ತಾರೋ, ಅವರುಗಳು ಲೋಕಕ್ಕೆಲ್ಲಾ ಗುಲಾಮರಾಗಿಯೇ ಇರುತ್ತಾರೆ. ಅದಕ್ಕೆ ಪ್ರತಿಯಾಗಿ ಯಾರು ಆಶೆಯನ್ನು ತಮ್ಮ ಅಧೀನ ಮಾಡಿಕೊಂಡಿರುತ್ತಾರೋ ಅಂಥವರ ಪಾದಾರವಿಂದಗಳಲ್ಲಿ ಲೋಕವೆಲ್ಲಾ ಬಂದು ಬೀಳುತ್ತದೆ. ಏಕೆಂದರೆ, ಜನ– "ಈ ಮಹಾತ್ಮರು ತಮ್ಮ ಲಾಭಕ್ಕಾಗಿ ಏನನ್ನೂ ಮಾಡಿಕೊಳ್ಳುವುದಿಲ್ಲ. ಲೋಕಹಿತವನ್ನು ಕೋರಿಯೇ ಇವರು ಕೆಲಸಗಳನ್ನು ನಡೆಸಿಕೊಂಡು ಹೋಗುತ್ತಾರೆ" ಎಂದು ಆಶೆಯಿಲ್ಲದವರನ್ನು ಕುರಿತು ಹೇಳುತ್ತಾರೆ.

ಆದ್ದರಿಂದ ಮನುಷ್ಯ ಜನ್ಮದಲ್ಲಿ ನಮಗೆ ಎಷ್ಟು ಆಯುಸ್ಸು ಇದೆಯೋ, ಅಷ್ಟನ್ನು ವ್ಯರ್ಥವಾಗಿ ಕಳೆಯ ಬಾರದು. ನಮ್ಮಿಂದ ಎಷ್ಟು ಧರ್ಮಕಾರ್ಯಗಳನ್ನು ಮಾಡುವುದು ಸಾಧ್ಯವೋ. ಅಷ್ಟನ್ನು ಮಾಡಬೇಕು. ಹಾಗೆ ಮಾಡುವವನೇ "ಜ್ಞಾನಿ" ಎಂದು ಕರೆಯಲ್ಪಡುತ್ತಾನೆ. ಹಾಗೆ ಮಾಡದೇ ಇದ್ದರೆ, ಭಗವಂತನು ನಮಗೆ ಬುದ್ಧಿಯನ್ನು ಅನುಗ್ರಹಿಸಿದ್ದರೂ ಬುದ್ಧಿ ಇಲ್ಲದವರಂತೆ ನಡೆದುಕೊಳ್ಳುತ್ತಿದ್ದೇವೆ ಎಂದೇ ಆಗುತ್ತದೆ.

ಲೋಕದಲ್ಲಿ ಪ್ರಾಣಿಗಳೂ ಇವೆ. ಅವು ನಿದ್ರಿಸಬೇಕೆಂದಾದರೆ ನಿದ್ರಿಸುತ್ತವೆ. ನೀರು ಕುಡಿಯಬೇಕೆಂದಾದರೆ, ನೀರು ಕುಡಿಯುತ್ತವೆ. ಅವುಗಳಂತೆಯೇ ನಾವೂ ಇದ್ದರೆ, ನಮಗೂ ಅವಕ್ಕೂ ವ್ಯತ್ಯಾಸವೇನು ? ಆದ್ದರಿಂದ ನಾವು ನಾಳೆ ಯಾವ ಒಳ್ಳೆಯ ಕೆಲಸ ಮಾಡಬೇಕೆಂದು ಕೊಳ್ಳುತ್ತೇವೋ, ಅದನ್ನು ಇಂದೇ ಮಾಡಬೇಕು. ಇಂದು ಯಾವುದನ್ನು ಮಾಡಬೇಕೆಂದಿರುವೆವೋ ಅದನ್ನು ಈಗಲೇ ಮಾಡಬೇಕು. ಹೀಗೆ ಧರ್ಮದ ವಿಷಯದಲ್ಲಿಯೂ ನಡೆದುಕೊಂಡರೆ, ಅಧರ್ಮದಿಂದ ತಪ್ಪಬಹುದು. ಎಂದಿಗೂ ಧರ್ಮಮಾಡುವುದನ್ನು ಮುಂದೂಡಬಾರದು. ನಾವು ಧರ್ಮಾಚರಣೆಯಲ್ಲಿ ನಿರತರಾಗಿದ್ದರೆ ಮಾತ್ರ ನಮ್ಮ ಮುಂದಿನ ಜನ್ಮ ಇನ್ನೂ ಉತ್ತಮವಾದದ್ದಾಗ ಬಹುದು. ಆಗ ಇನ್ನೂ ಹೆಚ್ಚಿನ ಧರ್ಮಕಾರ್ಯಗಳನ್ನು ಮಾಡಬಹುದು. ಮತ್ತು ಸಂಬಂಧವಿಲ್ಲದೆ ಕಾರ್ಯಗಳನ್ನು ಮಾಡುವ ಸ್ಥಿತಿ ನಮಗೆ ಬಂದರೆ, ಅಂತರಂಗವು ನಿರ್ಮಲವಾಗಿ ಆದರ ಮೂಲಕ ಭಗವಂತನ ಸಾಕ್ಷಾತ್ಕಾರವನ್ನು ಪಡೆಯಬಹುದು. ನಾವು ಇದನ್ನು ಬಿಟ್ಟು ಈಗ ನಡೆಯುತ್ತಿರುವಂತೆಯೇ ಹೋಗುತ್ತಿದ್ದರೆ, ಅಧೋಗತಿಯೇ ಫಲ.

ಭಗವಂತನು ನಮಗೆ ಸುಲಭವಾದ ಉಪದೇಶಗಳನ್ನೇ ಕೊಟ್ಟಿದ್ದಾನೆ. ಅಂಥ ಭಗವಂತನ ನಾಮಗಳನ್ನಾದರೂ ಹೇಳಿಕೊಳ್ಳಬಹುದು. ಭಗವಂತನ ಮಹಿಮಾ

Sri Vidyabharathi Book Centre, Sringeri

CC-O. In Public Domain. Digitized by eGangotri

ದ್ಯೋತಕವಾದ ಗ್ರಂಥ ಯಾವುದನ್ನಾದರೂ ಓದುಬಹುದು. ಆ ಗ್ರಂಥ ಸಂಸ್ಕೃತದಲ್ಲಿದ್ದರೂ ಸರಿ ಅಥವಾ ಬೇರೆ ಯಾವ ಭಾಷೆಯಲ್ಲಿದ್ದರೂ ಸರಿ, ಅದನ್ನು ಓದಬಹುದು

ಸ್ವಾಧ್ಯಾಯಾನ್ಮಾಪ್ರಮದಃ

(ಅಧ್ಯಯನದ ವಿಷಯದಲ್ಲಿ ಅಸಡ್ಡೆ ಮಾಡಬೇಕು)

–ಎಂದು ವೇದ ಹೇಳುತ್ತದೆ. ಇಲ್ಲಿ ಸ್ವಾಧ್ಯಾಯ ಎಂಬುದು ವೇದದಲ್ಲಿ ಒಬ್ಬಾತನು ಸೇರಿರುವ ಶಾಖೆಯನ್ನು ಕುರಿತದ್ದು. ಸಾಮಾನ್ಯವಾಗಿ ನೋಡಿದಾಗ ನಮ್ಮ ಹಿತಕ್ಕೆ ಯಾವ ಗ್ರಂಥ ಮಾರ್ಗದರ್ಶಕವೋ ಅದನ್ನು ಶ್ರದ್ಧೆಯಿಂದ ಓದಬೇಕು. ಭಗವಂತನಿಗೆ ಸಂಬಂಧಿಸಿದ ಗ್ರಂಥಗಳನ್ನು ಓದುತ್ತಾ ಬಂದರೂ ನಾವು ನಮ್ಮ ಮನಸ್ಸನ್ನು ನಿರ್ಮಲಗೊಳಿಸಬಹುದು. ಹಾಗೆ ನಿರ್ಮಲವಾದ ಮೇಲೆ ಸಾಕ್ಷಾತ್ಕಾರವನ್ನು ಪಡೆದುಕೊಳ್ಳಬಹುದು.

ಬಾಳಿನ ಗುರಿ

ವಿಶುದ್ಧಜ್ಞಾನದೇಹಾಯ ತ್ರಿವೇದೀ ದಿವ್ಯಚಕ್ಷುಷೇ ।
ಶ್ರೇಯಃ ಪ್ರಾಪ್ತಿನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥಲೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ ॥

ಲೋಕದಲ್ಲಿ ಎಲ್ಲರೂ ಸುಖವನ್ನೇ ಅಪೇಕ್ಷಿಸುತ್ತಾರೆ. "ಸುಖವನ್ನು ಪಡೆಯಲು ಶಾಸ್ತ್ರದಲ್ಲಿ ಏನಾದರೂ ದಾರಿಯನ್ನು ಹೇಳಿದ್ದರೆ ಅದನ್ನು ನಮಗೆ ಹೇಳಿ. ಆ ಮಾರ್ಗವನ್ನು ಹಿಡಿದು ನಾವು ಸುಖವಾಗಿರುತ್ತೇವೆ" ಎಂದು ಜನ ಕೇಳುತ್ತಾರೆ. "ಬಾಳಿನ ಮುಖ್ಯ ಲಕ್ಷ್ಯ ಯಾವುದಾಗಿರಬೇಕು ? ಅದನ್ನು ಪಡೆಯಲು ದಾರಿಯಿದ್ದರೆ ಅದರಲ್ಲಿ ಹೋಗುತ್ತೇವೆ" ಎಂದು ಹೇಳುತ್ತಾರೆ. ನಾವೆಲ್ಲರೂ ಭಾರತಕ್ಕೆ ಸೇರಿದವರು. ಚಿಕ್ಕ ಮಗುವಿನಿಂದ ಹಿಡಿದು ವೃದ್ಧರವರೆಗೂ ನಾವೆಲ್ಲರೂ ಒಂದು ತತ್ತ್ವವನ್ನು ಒಪ್ಪಿಕೊಳ್ಳುವವರು. "ನಮ್ಮ ಹುಟ್ಟು ಇದೊಂದೇ ಅಲ್ಲ. ಹಿಂದಿನ ಜನ್ಮ ಇದೆ" ಎಂದೇ ನಾವು ಭಾವಿಸುತ್ತೇವೆ. ಒಬ್ಬನು ಈಗ ಸುಖವಾಗಿದ್ದರೆ ನಾವು "ಈ ಹುಟ್ಟಿನಲ್ಲಿ ಇವನು ಏನನ್ನೂ ಮಾಡಲಿಲ್ಲ. ಏನೋ ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದಿಂದ ಈ ಜನ್ಮದಲ್ಲಿ ಸುಖವನ್ನು ಅನುಭವಿಸುತ್ತಿದ್ದಾನೆ, ಎಂದೇ ಹೇಳುತ್ತೇವೆ. ಅದರಂತೆ ಈಗ ಯಾರಾದರೊಬ್ಬನು ಕಷ್ಟವನ್ನನುಭವಿಸುತ್ತಿದ್ದು ಧರ್ಮವನ್ನೂ ಮಾಡುತ್ತಿದ್ದರೆ, ಅವನನ್ನು ಕುರಿತು ನಾವು "ಇವನು ಈಗ ಧರ್ಮ ಮಾಡುತ್ತಿದ್ದಾನೆ, ಆದರೆ, ಹಿಂದಿನ ಜನ್ಮದಲ್ಲಿ ಎಷ್ಟು ಪಾಪ ಮಾಡಿದ್ದನೋ, ಯಾರಿಗೆ ಗೊತ್ತು ? ಅದರ ಫಲವನ್ನು ಈಗ ಅನುಭವಿಸುತ್ತಿದ್ದಾನೆ" ಎಂದು ಹೇಳುತ್ತೇವೆ. ಹೀಗೆ ನಾವು ಜನ್ಮಾಂತರವನ್ನು ಒಪ್ಪಿಕೊಳ್ಳುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಪುನರ್ಜನ್ಮವನ್ನು ನಿರೂಪಿಸಲು ಯುಕ್ತಿಗಳಿವೆ. ಆದರೆ, ನಾವು ಈಗ ಅವನ್ನು ನೋಡ ಹೋಗುವುದಿಲ್ಲ. ಗೀತೆಯಲ್ಲಿ ಭಗವಂತನು–

ನ ಜಾಯತೇ ಮ್ರಿಯತೇ ವಾ ಕದಾಚಿತ್
ನಾಯಂ ಭೂತ್ವಾ ಭವಿತಾ ವಾ ನ ಭೂಯಃ ।

(ಈ ಆತ್ಮ ಹುಟ್ಟುವುದಿಲ್ಲ, ಸಾಯುವುದಿಲ್ಲ ; ಇದು ಇಲ್ಲದೇ ಹೋಗಿ ಪುನಃ ಹುಟ್ಟುವುದಿಲ್ಲ)–

ಎಂದು ಹೇಳಿದ್ದಾನೆ. ಆತ್ಮನಿಗೆ ಹುಟ್ಟೂ ಸಾವೂ ಇಲ್ಲ ; ಹಾಗೆಂದರೆ ಹೇಗೆ ಜೀವಿಗಳು ಆಗುತ್ತವೆ ಎಂಬ ಪ್ರಶ್ನೆ ಎದುರಾಗುತ್ತದೆ. ಭಗವಂತನು—

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ
ನವಾನಿ ಗೃಹ್ಣಾತಿ ನರೋಽಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನಿ
ಅನ್ಯಾನಿ ಸಂಯಾತಿ ನವಾನಿ ದೇಹೀ ॥

(ಹಳೆಯದಾದ ಬಟ್ಟೆಗಳನ್ನು ಬಿಟ್ಟು ಮನುಷ್ಯನು ಹೊಸದನ್ನು ಉಟ್ಟುಕೊಳ್ಳುವಂತೆ, ಆತ್ಮವು ಹಳೆಯ ದೇಹಗಳನ್ನು ಬಿಟ್ಟು ಹೊಸ ದೇಹಗಳನ್ನು ಹೊಂದುತ್ತದೆ).

ಆತ್ಮವು ಹಳೆಯ ಶರೀರವನ್ನು ಮಾತ್ರ ಬಿಡುವುದೇನು ? ಚಿಕ್ಕ ಮಕ್ಕಳೂ ಸತ್ತು ಹೋಗುತ್ತವೆ ಎಂಬುದನ್ನು ನಾವು ನೋಡುತ್ತೇವಲ್ಲವೇ ? ಆ ಮಕ್ಕಳ ದೇಹಗಳು ಹೊಸವಲ್ಲವೇ ? ಎಂದು ಕೆಲವರು ಪ್ರಶ್ನೆಯೆತ್ತಬಹುದು. ಇದರಲ್ಲಿ ಗಮನಿಸಬೇಕಾದ ವಿಷಯವೇನೆಂದರೆ, ಒಬ್ಬೊಬ್ಬರಿಗೂ ಹಳೆಯದೂ ಹೊಸದೂ ಬೇರೆ ಬೇರೆಯಾಗಿರುತ್ತದೆ. ಉದಾಹರಣೆಗೆ ಒಂದನ್ನು ನೋಡೋಣ–ನಾನು ನನ್ನ ಎದುರಿಗೆ ಮೈಕ್ ಒಂದನಿಟ್ಟುಕೊಂಡು ಮಾತನಾಡುತ್ತಿದ್ದೇನೆ. ಈಗ "ಮೈಕ್" ಫಳಫಳನೆ ಹೊಳೆಯುತ್ತಿದೆ. ಇದನ್ನು ನೋಡಿ ಈ "ಮೈಕ್ ಹೊಸದು, ಇದು ಚೆನ್ನಾಗಿ ಕೆಲಸ ಮಾಡುತ್ತದೆ" ಎಂದು ನಾವೆಣಿಸಬಹುದು. ಆದರೆ ಇದನ್ನು ವಿದ್ಯುತ್ ವಿಷಯ ತಿಳಿದವರ ಬಳಿ ಕೊಟ್ಟರೆ "ಇದರ ಒಳ ಭಾಗದಲ್ಲಿ ಯಾವುದೋ ಒಂದು ಭಾಗ ಹಳತಾಗಿದೆ. ಇದು ಪ್ರಯೋಜನವಿಲ್ಲ" ಎಂದು ಹೇಳಿಬಿಡುತ್ತಾರೆ. ಆದ್ದರಿಂದ ಈ ಮೈಕ್ ಅವರ ದೃಷ್ಟಿಯಲ್ಲಿ ಹಳೆಯದಾಗಬಿಟ್ಟಿತು. ಹೊರನೋಟಕ್ಕೆ ಇದು ಹೊಸದರಂತೆ ಕಾಣಿಸುತ್ತಿದೆ. ಆದ್ದರಿಂದ ಹೊಸದು ಹಳೆಯದು ಎಂದು ಹೇಳುವುದರಲ್ಲಿ ಒಬ್ಬೊಬ್ಬರ ದೃಷ್ಟಿ ಬೇರೆ ಬೇರೆಯದಾಗಿರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವ ದೇಹದಲ್ಲಿ ಯಾವ ಕರ್ಮದ ಫಲವನ್ನು ಎಷ್ಟು ಕಾಲ ಅನುಭವಿಸಬೇಕು ಎಂಬುದಕ್ಕೆಲ್ಲ ಒಂದು ಲೆಕ್ಕಾಚಾರವುಂಟು. ಯಾವಾಗ ಕರ್ಮ ಮುಗಿಯುತ್ತದೆಯೋ ಆಗ ಆ ದೇಹಕ್ಕೆ ವಯಸ್ಸಾಯಿತು ಎಂದೇ ತಿಳಿಯಬೇಕು. ಕೆಲವರು ನೂರು ವರ್ಷಗಳಾದರೂ ದೃಢಕಾಯರಾಗಿರುತ್ತಾರೆ. ಆಗ ಅವರ ದೇಹ ಹೊಸ ದೇಹದಂತೆಯೇ ಇದೆ ಎನ್ನಬೇಕು. ಕೆಲವರಿಗೆ ಚಿಕ್ಕವಯಸ್ಸಿನಲ್ಲಿಯೇ ಹಲವು ವ್ಯಾಧಿಗಳು ಬಂದಿರುವುದರಿಂದ ದೇಹ ಹಳೆಯ ದೇಹದಂತಾಗಿ ಬಿಡುತ್ತದೆ. ಆದ್ದರಿಂದ ಹೊಸದು ಹಳೆಯದು ಎನ್ನುವುದು ಎಲ್ಲರಿಗೂ ಸಮಾನವಾಗಿರುವುದಿಲ್ಲ. ಅದನ್ನು ತೀರ್ಮಾನಿಸುವುದರಲ್ಲಿ ತಾರತಮ್ಯವುಂಟು. ಆದ್ದರಿಂದಲೇ "ನಾವು ಪೂರ್ವ ಜನ್ಮವನ್ನು ಒಪ್ಪಿಕೊಳ್ಳುತ್ತೇವೆ" ಎಂಬುದೇ ಇದರ ಇಂಗಿತ.

ಎಷ್ಟು ದಿನಗಳಿಂದ ಹುಟ್ಟು ಎನ್ನುವುದು ಆಗುತ್ತಿದೆ ಎಂಬ ಪ್ರಶ್ನೆ ನಮಗೆ ಬರಬಹುದು. ನಾವು ಇದಕ್ಕೆ ಪ್ರಾರಂಭವೇ ಇಲ್ಲ ಎಂದು ಹೇಳುತ್ತೇವೆ. ಏಕೆಂದರೆ, ಸಂಸಾರ ಅಂದರೆ ಹುಟ್ಟು-ಸಾವು ಎನ್ನುವುದು ಅನಾದಿಯಾಗಿದೆ. ಕರ್ಮಗಳನ್ನು ನಾವು ಅನಾದಿ ಕಾಲದಿಂದಲೂ ಮಾಡುತ್ತಾ ಬಂದಿದ್ದೇವೆ, ಮತ್ತು ಹಲವು ದೇಹಗಳನ್ನು ಧರಿಸಿದ್ದೇವೆ. ಇದರಲ್ಲಿ ಯಾರು ದೇಹಗಳನ್ನು ಹೊಂದುತ್ತಾರೆ ? ಯಾರು ಅನುಭವಿಸುತ್ತಾರೆ ? ಎಂದು ಕೇಳಿದರೆ ನಿಜವಾಗಿ ಭಗವಂತನಾದ ಪರಮಾತ್ಮನೇ ಎಂದು ಹೇಳಬೇಕು. ಅವನೇ ಹಲವು ವಿಧಗಳಲ್ಲಿ ತೋರಿಕೊಳ್ಳುತ್ತಾನೆ. ಅವನಿಗೆ ನಿಜವಾಗಿ ಯಾವ ಬಂಧವೂ ಇಲ್ಲ. ಅವನು ಅನೇಕ ವಿಧವಾಗಿ ಕಾಣಿಸಿಕೊಳ್ಳುತ್ತಾನೆ. ಜೀವನಾಗುತ್ತಾನೆ, ಈಶ್ವರನಾಗಿ ಕಾಣಬರುತ್ತಾನೆ.

ಜನ್ಮಮೃತ್ಯುಜರಾವ್ಯಾಧಿದುಃಖ ಸಂತೋಷಾಸು ದರ್ಶನಮ್ ।

ಎಲ್ಲಿಯವರೆಗೆ ನಮಗೆ ಶರೀರದಲ್ಲಿ ಬಲವಿರುತ್ತದೆಯೋ, ನಮ್ಮ ಮಾತಿಗೆ ಮರ್ಯಾದೆ ದೊರಕುತ್ತದೆಯೋ ಅಲ್ಲಿಯವರೆಗೂ ಲೋಕದಲ್ಲಿ ಸುಖವಿರುತ್ತದೆ. ಆಗ "ನಾವು ತುಂಬ ದಿನ ಬದುಕಬೇಕು" ಎಂದು ಹೇಳುತ್ತೇವೆ. ಅವೆಲ್ಲವೂ ಕಡಿಮೆಯಾದರೆ ನಮಗೆ ದುಃಖವೇ ಕಂಡುಬರುತ್ತದೆ. ಆದ್ದರಿಂದಲೇ ದುಃಖವೇ ಹೆಚ್ಚು. ಕೆಲವರು ಆತ್ಮಹತ್ಯೆ ಮಾಡಿಕೊಳ್ಳಬೇಕೆಂದುಕೊಳ್ಳುತ್ತಾರೆ. ಅವರು ತಮಗೆ ಬಂದ ಕಷ್ಟಗಳನ್ನು ಸಹಿಸಲಾರದೆ ಹಾಗೆ ಮಾಡಿಕೊಳ್ಳಬಯಸುತ್ತಾರೆ. ತಾವು ಸುಖವಾಗಿರಬೇಕು ಎಂಬ ಕಾರಣದಿಂದಲೇ ಅಂಥವರು ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವುದರಿಂದ ಯಾರೂ ಸುಖವನ್ನು ಪಡೆಯಲು ಸಾಧ್ಯವಿಲ್ಲ.

ವೃಶ್ಚಿಕಭಯಾತ್ ಪಲಾಯಮಾನಸ್ಯ ಆಶೀಮುಖೇ ನಿಪಪಾತಃ ।
—ಎಂಬ ಮಾತೊಂದುಂಟು.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬ ಚೇಳಿನ ಭಯದಿಂದ ಓಡಿದನಂತೆ. ಹಾಗೆ ಓಡಿ ಹೋಗಿ ಒಂದು ಹಾವಿನ ಬಾಯಲ್ಲಿ ಬಿದ್ದನಂತೆ. ಆಗ ಏನಾಗುತ್ತದೆ ? ಖಂಡಿತವಾಗಿ ಅವನು ಮರಣವನ್ನೇ ಅಪ್ಪಿಕೊಳ್ಳಬೇಕಾದದ್ದೇ. ಚೇಳು ಕುಟುಕಿದರೆ ನೋವಾಗುತ್ತದೆ. ಆದರೆ ಜೀವಿಸಲು ಅವಕಾಶವಿರುತ್ತದೆ. ಹೆಬ್ಬಾವಿನ ಬಾಯಿಗೆ ಬಿದ್ದು ಒಂದು ಹತ್ತು ನಿಮಿಷ ಬದುಕಿದ್ದರೆ ಅದೇ ದೊಡ್ಡ ಆಶ್ಚರ್ಯ. ಅದರಂತೆಯೇ ಯಾವುದೋ ಪಾಪವನ್ನು ಹಿಂದಿನ ಜನ್ಮದಲ್ಲಿ ಮಾಡಿದ್ದೇವೆ. ಅದಕ್ಕಾಗಿ ಈ ಜನ್ಮದಲ್ಲಿ ನಮಗೆ ಕಷ್ಟಗಳು ಬಂದಿವೆ. ಅವುಗಳಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡರೆ ಯಾವ ಪ್ರಯೋಜನವೂ ಇಲ್ಲ. ಏಕೆಂದರೆ ಆತ್ಮಹತ್ಯೆ ಎಂಬುದೇ ಮಹಾಪಾಪ.

ಒಬ್ಬನು ಏನಾದರೂ ತಪ್ಪು ಮಾಡಿದರೆ ಅವನಿಗೆ ಶಿಕ್ಷೆ ಕೊಡುವುದಕ್ಕಾಗಿ ಅವನನ್ನು ಆರು ತಿಂಗಳು ಜೈಲಿನಲ್ಲಿ ಹಾಕಿ ಬಿಡುತ್ತಾರೆ. ಆದರೆ, ಅವನಿಂದ ಶಿಕ್ಷೆಯನ್ನು ಸಹಿಸಲಾಗಲಿಲ್ಲ ಎಂಬ ಕಾರಣದಿಂದ ಅವನು ಸೆರೆಮನೆಯಿಂದ ತಪ್ಪಿಸಿಕೊಂಡುಹೋದರೆ. ಪೋಲೀಸಿನವರು ಅವನನ್ನು ಹುಡುಕಿ ಹಿಡಿದು ಪುನಃ ಸೆರೆಮನೆಯಲ್ಲಿ ಹಾಕಿ ಇನ್ನೂ ಹೆಚ್ಚು ಶಿಕ್ಷೆ ವಿಧಿಸುತ್ತಾರೆ. ಒಂದು ವರ್ಷವೋ ಅಥವಾ ಹತ್ತು ವರ್ಷವೋ ಕಾರಾಗೃಹವಾಸದ ದಂಡನೆಯನ್ನು ವಿಧಿಸಿಬಿಡುತ್ತಾರೆ. ಇದರಿಂದ ಆದ ಪ್ರಯೋಜನವೇನು ? ಸೆರೆಮನೆಯಿಂದ ತಪ್ಪಿಸಿಕೊಂಡು ಹೋದದ್ದರಿಂದ ಕಷ್ಟ ಮಾತ್ರ ಹೆಚ್ಚಿತು, ಮೊದಲಿನ ತಪ್ಪಿಗೆ ಜೈಲುವಾಸವನ್ನು ಅನುಭವಿಸಿದ್ದರೆ, ಇನ್ನೂ ಹೊಸ ಹೆಚ್ಚಿನ ದಂಡನೆ ಅನುಭವಿಸಬೇಕಾಗಿರಲಿಲ್ಲ.

ಅದರಂತೆ ಈ ದೇಹದಲ್ಲಿ ಈಗ ಕಷ್ಟಗಳನ್ನು ಅನುಭವಿಸುತ್ತಿದ್ದೇವೆ ಎಂದರೆ, ಅದು ಹಿಂದಿನ ಜನ್ಮದಲ್ಲಿ ಮಾಡಿದ ಪಾಪದ ಕಾರಣದಿಂದಲೇ ಎಂದು ನಾವು ತಿಳಿದುಕೊಳ್ಳಬೇಕು. ಆದ್ದರಿಂದ ನಾವು ಕಷ್ಟಗಳನ್ನು ಕಂಡು ಹೆದರಬಾರದು ಎಂದು ಶಾಸ್ತ್ರಗಳು ಹೇಳುತ್ತವೆ. ಕಷ್ಟಗಳು ಪಾಪಗಳ ಫಲಿತಾಂಶಗಳ ರೂಪ. ಆದರೆ, ಪಾಪ ಮಾತ್ರ ಫಲಗಳನ್ನು ಕೊಡುವುದಿಲ್ಲ. ಅದರೊಡನೆ ಪುಣ್ಯವೂ ಫಲವನ್ನು ಕೊಡುತ್ತದೆ. ಪುಣ್ಯಪಾಪಗಳಲ್ಲದೆ ಪುರುಷ ಪ್ರಯತ್ನವೂ ಅವಶ್ಯವಾಗುತ್ತದೆ. ಇದನ್ನು ಕುರಿತು ಮನುಷ್ಯ ಹೇಳುತ್ತಾನೆ–

ಯಥಾಹ್ಯೇಕೇನ ಚಕ್ರೇಣ ನ ರಥಸ್ಯ ಗತಿರ್ಭವೇತ್ ।

ಒಂದೇ ಒಂದು ಚಕ್ರದ ಸಹಾಯದಿಂದ ಒಂದು ರಥ ಚಲಿಸಲಾರದು. ಹಿಂದೆ ಮಾಡಿದ ಪುಣ್ಯ–ಪಾಪಗಳ ಫಲದಿಂದ ಮಾತ್ರ ನಾನು ಈಗಿನ ಬಾಳನ್ನು ನಡೆಸುತ್ತಿದ್ದೇನೆ ಎಂದು ಹೇಳಲಾಗದು. ಹೇಗೆ ರಥಕ್ಕೆ ಎರಡನೆಯ ಚಕ್ರ ಅವಶ್ಯಕವೋ ಅದರಂತೆಯೇ ಮನುಷ್ಯನಿಗೆ ಪ್ರಯತ್ನ ಪಟಬೇಕು ಬೇಕು. ನಾವು "ನಮಗೆ ತುಂಬ

Sri Vidyabharathi Book Centre, Sringeri

CC-O. In Public Domain. Digitized by eGangotri

ಪುಣ್ಯವಿದೆ. ನಮಗಿರುವ ಪುಣ್ಯ ತಾನಾಗಿಯೇ ಕೆಲಸ ಮಾಡಿ ಫಲವನ್ನು ತಂದು ಕೊಡುತ್ತದೆ" ಎಂದುಕೊಳ್ಳಬಹುದು. ಹಾಗೆ ತಿಳಿದುಕೊಂಡು ಕೆಟ್ಟದಾರಿಯಲ್ಲಿ ಹೋಗಿ ಪಾಪಕಾರ್ಯಗಳನ್ನು ಮಾಡಿದರೆ, ಅವನು ಅಧೋಗತಿಗೆ ಹೋಗುತ್ತಾನೆ. ಮತ್ತು ಅಂಥವನು ತಾನು ಮಾಡಿದ ಪುಣ್ಯದಿಂದ ಯಾವ ಫಲವನ್ನು ಅನುಭವಿಸ ಬೇಕಾಗಿತ್ತೋ ಆ ಸುಖವನ್ನೂ ಅವನು ಅನುಭವಿಸಲಾಗುವುದಿಲ್ಲ. ನಾವು ಒಬ್ಬನಿಗೆ ಒಂದು ವಸ್ತುವನ್ನು ಕೊಡಬೇಕಾಗಿದ್ದರೂ ಅವನು ನಮ್ಮಲ್ಲಿ ಬಂದು ತಕರಾರು ಮಾಡಿದರೆ, ಅದನ್ನು ನಾವು ಕೊಡುವುದಿಲ್ಲ. ಅದರಂತೆಯೇ ಇಲ್ಲಿಯೂ ಹಿಂದೆ ಪುಣ್ಯ ಮಾಡಿದ್ದರೂ ಈಗ ಕೆಟ್ಟ ದಾರಿಯಲ್ಲಿ ಹೋದರೆ ಸುಖ ದೊರಕದ ಸ್ಥಿತಿ ಏರ್ಪಟ್ಟಿದೆ. ಆದ್ದರಿಂದ ಪುಣ್ಯವಿದ್ದರೂ, ಪಾಪವಿದ್ದರೂ ಅದರ ಫಲವನ್ನು ನಾವು ಅನುಭವಿಸಿಯೇ ತೀರಬೇಕು.

ವಿಧಿಯೊಂದಿದ್ದರೆ ಸಾಲದು, ನಮ್ಮ ಪ್ರಯತ್ನವೂ ಬೇಕು. ಪಾಪ ಮಾಡಿದವರು ಅದಕ್ಕೆ ಪ್ರಾಯಶ್ಚಿತ್ತ ಮಾಡಿಕೊಂಡು ಪಾಪದ ಬಲವನ್ನು ಕಡಿಮೆ ಮಾಡಿಕೊಳ್ಳಬಹುದು. ಭಗವಂತನಲ್ಲಿ ಪ್ರಾರ್ಥನೆ ಸಲ್ಲಿಸಬಹುದು. ಭಗವಂತನ ಅನುಗ್ರಹವನ್ನು ಪಡೆಯಬಹುದು. ನಾವು ಪಾಪದ ಫಲವನ್ನು ಅನುಭವಿಸಬೇಕಾಗಿದ್ದರೂ ಭಗವದನುಗ್ರಹದಿಂದ ದುಃಖವು ಕಡಿಮೆಯಾಗುತ್ತದೆ.

ಪ್ರಾಣಿಗಳೂ ಕರ್ಮಕ್ಕೆ ವಶವಾಗಿಯೇ ಇವೆ. ಒಂದು ಆಕಳಿಗೆ ಹಿಂದಿನ ಜನ್ಮದ ಪುಣ್ಯವಿದ್ದರೆ ಕರುಣೆಯಿರುವ ಮನುಷ್ಯನೊಬ್ಬನ ಮನೆಯಲ್ಲಿ ಅದು ವಾಸ ಮಾಡಬಹುದು. ಅವನೂ ಅದಕ್ಕೆ ಒಳ್ಳೆಯ ತಿನಿಸನ್ನು ಕೊಡುತ್ತಾನೆ. ಚೆನ್ನಾಗಿ ನೋಡಿಕೊಳ್ಳುತ್ತಾನೆ. ಅದಕ್ಕೆ ಯಾವ ವಿಧವಾದ ತೊಂದರೆಯನ್ನೂ ಕೊಡದೆ ಪಾಲಿಸುತ್ತಾನೆ. ಇನ್ನೊಂದು ಆಕಳು ಹಿಂದಿನ ಜನ್ಮದಲ್ಲಿ ಹೆಚ್ಚಿನ ಪಾಪಮಾಡಿದ್ದರೆ, ಹಸುಗಳನ್ನು ಕೊಲ್ಲುವವನ ಮನೆಯನ್ನು ಸೇರಬಹುದು. ಅದನ್ನು ಅಲ್ಲಿ ನೋಡಿಕೊಳ್ಳುವವರು ಯಾರೂ ಇಲ್ಲದೆ, ಕಷ್ಟಕ್ಕೆ ಒಳಗಾಗಬಹುದು. ಕೆಟ್ಟವನನ್ನು ಸೇರಿದ ಆ ಹಸುವು ಪ್ರತಿದಿನವೂ ಹೊಡೆತವನ್ನು ತಿಂದು ನೋವು ಅನುಭವಿಸಬೇಕಾಗುತ್ತದೆ. ಆದರೆ ಮನುಷ್ಯನ ಪರಿಸ್ಥಿತಿ ಹಾಗಲ್ಲ. ತನ್ನ ಬಾಳಿನ ಸ್ಥಿತಿಯನ್ನು ಮನುಷ್ಯ ಸ್ವಲ್ಪ ಬದಲಾಯಿಸಲು ಸಾಧ್ಯವಿದೆ. ಆದ್ದರಿಂದಲೇ ಮನುಷ್ಯ ಜನ್ಮ ಉತ್ತಮವಾದದ್ದು ಎಂದು ಹೇಳುತ್ತಾರೆ.

ಜ್ಯೋತಿಷ ಗ್ರಂಥಕರ್ತೃವಾದ ವರಾಹ ಮಿಹಿರನು "ನಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮದಿಂದ ನಮಗೆ ಆಯುಸ್ಸು ಕಡಿಮೆಯಾಗಿರಬಹುದು. ಇನ್ನು ಕೆಲವರಿಗೆ ಪುಣ್ಯದ ಫಲವಾಗಿ ದೀರ್ಘಾಯಸ್ಸು ಇರಬಹುದು. ಈ ರೀತಿಯಾಗಿ ಹಿಂದಿನ

Sri Vidyabharathi Book Centre, Sringeri

CC-O. In Public Domain. Digitized by eGangotri

ಜನ್ಮನಲ್ಲಿ ಮಾಡಿದ್ದ ಕರ್ಮಫಲದ ಅನುಸಾರವಾಗಿ ಒಬ್ಬನಿಗೆ ಅಲ್ಪಾಯಸ್ಸೋ ದೀರ್ಘಾಯಸ್ಸೋ ಬರುತ್ತದೆ. ಭಗವಂತನನ್ನು ಪ್ರಾರ್ಥಿಸಿ ಸತ್ಪುರುಷರ ಸೇವೆ ಮಾಡಿ ಅವರ ಆಶೀರ್ವಾದವನ್ನು ಪಡೆದುಕೊಂಡರೆ ದೀರ್ಘಾಯಸ್ಸನ್ನು ಪಡೆಯಬಹುದು" ಎಂದು ಹೇಳಿರುತ್ತಾನೆ.

ಸತ್ಯವಾನನಿಗೆ ಆಯುಸ್ಸು ಕಡಿಮೆಯಾಗಿಯೇ ಇತ್ತು. ಆದರೆ ಸಾವಿತ್ರಿಯ ಅತಿಶಯವಾದ ಪ್ರಯತ್ನದಿಂದ ಸತ್ಯವಾನನಿಗೆ ದೀರ್ಘಾಯಸ್ಸು ಸಿಕ್ಕಿಬಿಟ್ಟಿತು. ಇದು ನಮ್ಮ ಅನುಭವದಲ್ಲಿ ನಿಜವೇ ? ಜಾತಕದ ಪ್ರಕಾರ ಕೆಲವರಿಗೆ ಆಯುಸ್ಸು ಕಡಿಮೆಯಾಗಿರಬಹುದು. ಅಂಥವರು ಧರ್ಮ ಕಾರ್ಯಗಳನ್ನು ಮಾಡಿ ಒಳ್ಳೆಯ ಬಾಳನ್ನು ಬಾಳಿ, ಹಿರಿಯರ ಆಶೀರ್ವಾದಕ್ಕೆ ಪಾತ್ರರಾಗಿ ತುಂಬ ವರ್ಷಗಳು ಬಾಳಿದ್ದಾರೆ. ಆದ್ದರಿಂದ ಮನುಷ್ಯನಿಗಿರುವ ಈ ಹಿರಿಮೆಯನ್ನು ನಾವು ಉಪಯೋಗಪಡಿಸಿಕೊಳ್ಳಬೇಕು.

ಮನುಷ್ಯನು ಪ್ರಯತ್ನಪಟ್ಟರೆ ಏಳಿಗೆಯನ್ನು ಪಡೆಯಬಹುದು. ಅಥವಾ ಅಧೋಗತಿಗೆ ಹೋಗಬಹುದು-ಎಂಬುದು ಇದರಿಂದ ತಿಳಿದುಬರುತ್ತದೆ. ನಾವೆಲ್ಲರೂ ಊಟ ಮಾಡುತ್ತೇವೆ, ನಿದ್ರಿಸುತ್ತೇವೆ, ಲೋಕದ ಭೋಗಗಳನ್ನು ಅನುಭವಿಸುತ್ತೇವೆ. ಒಂದು ದಿನ ಸಾಯುತ್ತೇವೆ. ಪ್ರಾಣಿಗಳಿರುವುದೂ ಇದರಂತೆಯೇ ಅಲ್ಲವೇ ? ಅವೂ ಗೂಡುಗಳನ್ನು ಕಟ್ಟುತ್ತವೆ. ಸಂತಾನವನ್ನು ಪಡೆಯುತ್ತವೆ. ಇದರಲ್ಲಿ ನಮಗೂ ಅವಕ್ಕೂ ವ್ಯತ್ಯಾಸವೇನಿಲ್ಲ.

ಕೆಲವು ಪಕ್ಷಿಗಳ ಗೂಡು ಕಟ್ಟುವ ವಿದ್ಯೆಯನ್ನು ಕಂಡರೆ ನಮಗೆ ಆಶ್ಚರ್ಯವಾಗುತ್ತದೆ. ಇವುಗಳಿಗೆ ಇಷ್ಟು ಸಾಮರ್ಥ್ಯವಿದೆಯಲ್ಲಾ ! ಎಂದುಕೊಳ್ಳುತ್ತೇವೆ. ಕೆಲವು ಪ್ರಾಣಿಗಳು ನೀರಿನ ಮೇಲಿರುವುದಕ್ಕೂ ವಸತಿ ಮಾಡಿಕೊಳ್ಳುತ್ತವೆ. ಕೆಲವು ಮರಗಳ ಮೇಲೆ ವಾಸಿಸುತ್ತವೆ. ಹಾಗೆ ಇನ್ನು ಬೇರೆ ಯಾವುದಾದರೂ ಪ್ರಾಣಿಗಳು ತೊಂದರೆ ಕೊಡಲು ಬಂದರೆ, ನದಿಯಲ್ಲಿ ಬಿದ್ದು ತಪ್ಪಿಸಿಕೊಳ್ಳಲೂ ಕೆಲವು ಪ್ರಾಣಿಗಳು ಉಪಾಯವನ್ನು ಕಂಡುಹಿಡಿದುಕೊಂಡಿರುತ್ತವೆ. ಆದರೆ, ಈ ಚೋದ್ಯಗಳನ್ನು ಪ್ರಾಣಿಗಳು ಎಷ್ಟು ಮಾಡಿದರೂ ಬಾಳಿನಲ್ಲಿ ಗುರಿಯೊಂದನ್ನಿಟ್ಟುಕೊಂಡು ಅದನ್ನು ಸಾಧಿಸಲು ಪ್ರಾಣಿಗಳು ಪ್ರಯತ್ನ ಪಡುವುದು ಸಾಧ್ಯವಿಲ್ಲ. ಅದು ಮನುಷ್ಯನಿಗೆ ಮಾತ್ರ ಸಾಧ್ಯ.

ಹೀಗೆ ಸುಖ-ದುಃಖಗಳನ್ನು ಅನುಭವಿಸುವ ನಾವು ಬಂದಿದ್ದು ಎಲ್ಲಿಂದ ? ಎಂಬ ಪ್ರಶ್ನೆ ಏಳುತ್ತದೆ. ಭಗವಂತನ ಅಂಶವೇ 'ಜೀವ' ಎಂಬುದೇ ಇದಕ್ಕೆ ಉತ್ತರ. ಇದನ್ನು ಮೊದಲೇ ನಾವು ನೋಡಿದ್ದೇವೆ. ಭಗವಂತನು ಗೀತೆಯಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಮೈವಾಂಶೋ ಜೀವಲೋಕೇ ಜೀವಭೂತಃ ಸನಾತನಃ ||

ಎಂದು ಹೇಳಿದ್ದಾನೆ. ಸಮುದ್ರದಲ್ಲಿ ದೊಡ್ಡ ದೊಡ್ಡ ಹಡಗುಗಳು ಹೋಗುತ್ತವೆ. ಸಮುದ್ರದ ನೀರನ್ನು ಒಂದು ಪಾತ್ರೆಯಲ್ಲಿಟ್ಟುಕೊಂಡರೆ ಅದರಲ್ಲಿ ಒಂದು ದೊಡ್ಡ ಹಡಗು ಹೋಗುವುದಿಲ್ಲ. ಏಕೆಂದರೆ, ನೀರಿಗೆ ಒಂದು ಉಪಾಧಿ, ಒಂದು ಎಲ್ಲೆ ಇಲ್ಲಿ ಬಂದಿದೆ. ಅದರಂತೆ, ನಾವು ಬ್ರಹ್ಮನೇ, ಅವನ ಸ್ವರೂಪವೇ. ಈಗ ಜೀವ ನಾಗಿರುವುದರಿಂದ ಅವನ ಅಂಶಕ್ಕೆ ಸರ್ವಜ್ಞತ್ವವು ಹೋಗಿದೆ. "ನನಗೆ ಹುಟ್ಟು ಉಂಟು, ಮರಣವಿದೆ, ದುಃಖವನ್ನು ಅನುಭವಿಸುತ್ತಿದ್ದೇನೆ" ಎಂದು ಹೇಳಿಕೊಳ್ಳುತ್ತದೆ ಜೀವ. ಈ ಭ್ರಮೆ ಹೋದರೆ, ನಮ್ಮ ನಿಜ ಸ್ವರೂಪವನ್ನು ತಿಳಿದುಕೊಂಡು ನಾವು ಮೋಕ್ಷವನ್ನು ಹೊಂದಬಹುದು. ಆಗ ಬಾಳಿನ ಗುರಿ ಯಾವುದೋ ಅದನ್ನು ಪಡೆಯ ಬಹುದು. ಇಲ್ಲಿ "ತಿಳಿದುಕೊಂಡು ಎಂದರೆ, ಪ್ರತ್ಯಕ್ಷವಾಗಿ ಅನುಭವಿಸಿ ತಿಳಿದು ಕೊಳ್ಳುವುದು ಎಂದೇ ಅರ್ಥ. ಮೇಲ್ನೋಟದಿಂದ ತಿಳಿದುಕೊಂಡರಾಗದು, ಒಬ್ಬರು- "ನಾಲ್ಕೂ ವೇದಗಳನ್ನು ತಿಳಿದವರಿಗೆ ನಾನು ಪಾರಿತೋಷಕವನ್ನು ಕೊಡುತ್ತೇನೆ"- ಎಂದು ಹೇಳಿದರು. ಆಗ ಒಬ್ಬಾತ ಅವರ ಬಳಿಗೆ ಬಂದು-"ನಾನು ನಾಲ್ಕು ವೇದ ಗಳನ್ನೂ ತಿಳಿದಿದ್ದೇನೆ"-ಎಂದು ಹೇಳಿದನು. ಪಾರಿತೋಷಕವನ್ನು ಕೊಡುತ್ತೇನೆಂದು ಹೇಳಿದವರು ಅವನನ್ನು ಕುರಿತು "ನಾಲ್ಕು ವೇದಗಳೂ ನಿನಗೆ ಗೊತ್ತೋ" ಎಂದು ಕೇಳಿದ್ದಕ್ಕೆ ಅವನು "ಹೌದು ನಾಲ್ಕೂ ವೇದಗಳು ಇವೆ ಎಂದು ನನಗೆ ಗೊತ್ತು" ಎಂದನು. ಇಂತಹ ತಿಳುವಳಿಕೆ ಇದ್ದು ಏನು ಪ್ರಯೋಜನ? ಅದರಂತೆಯೇ ಇಲ್ಲಿ ಮೇಲು ಮೇಲಿನ ತಿಳಿವಿನಿಂದ ಯಾವ ಫಲವೂ ಇಲ್ಲ. ನಾವು ಶಾಸ್ತ್ರಗಳನ್ನು ಓದು ತ್ತೇವೆ. ಅವುಗಳ ತಿರುಳನ್ನು ಬಲ್ಲೆವು. ಆದರೆ, ನಾವು ನಮ್ಮ ಸ್ವರೂಪವನ್ನು ಅನುಭವಪೂರ್ವಕವಾಗಿ ತಿಳಿದುಕೊಂಡಿಲ್ಲ.

ನಾವು ಒಂದು ಕಟ್ಟಡವನ್ನೋ, ಒಂದು ದೃಶ್ಯವನ್ನೋ ಮೇಲೆ ಮೇಲೆ ನೋಡಿ ಕೊಂಡಾಡಬಹುದು. ಆದರೆ, ತಂತ್ರಜ್ಞನಾದವನು "ಈ ವಸ್ತು ತುಂಬ ಚೆನ್ನಾಗಿದೆ. ಈ ವಸ್ತು ಸುಮಾರು, ಈ ವಸ್ತುವಿನಲ್ಲಿ ಕೊರತೆಯಿದೆ" ಎಂದು ಮುಂತಾಗಿ ಹೇಳ ಬಲ್ಲನು. ಅವನು ಈ ವಿಚಾರಗಳಲ್ಲಿ ವಿಶೇಷ ಜ್ಞಾನವನ್ನು ಪಡೆದವನು. ಹಾಗೆ ತಂತ್ರಜ್ಞನಾದವನ ಹಾಗೂ ನಮ್ಮ ದೃಷ್ಟಿ ಬೇರೆ ಬೇರೆ. ಅದರಂತೆಯೇ ನಾವು ಅರ್ಹತೆಯನ್ನು ಸಂಪಾದಿಸಿಕೊಂಡು ಪ್ರಯತ್ನಪಟ್ಟರೆ ನಮ್ಮ ಗುರಿಯನ್ನು ಸಾಧಿಸ ಬಹುದು.

ನಾವೆಲ್ಲ ಶಾಶ್ವತವಾದ ಸುಖವನ್ನೇ ಬಯಸುತ್ತೇವೆ. ಅದೇ ಬಾಳ್ವೆಯ ಲಕ್ಷ್ಯ. "ನಾವು ಯಾವಾಗಲೂ ಆನಂದ ಸ್ವರೂಪರೇ" ಎಂದು ತಿಳಿದುಕೊಂಡರೆ ಜ್ಞಾನ ವುಂಟಾಗುತ್ತದೆ. ಆದರೆ, ಈ ಜ್ಞಾನವಿಲ್ಲದಿದ್ದರೆ ಏನಾಗುತ್ತದೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅಹನ್ಯಹನಿ ಭೂತಾನಿ ಪ್ರವಿಶಂತಿ ಯಮಾಲಯಮ್ ।
ಶೇಷಾಃ ಸ್ಥಾವರಮಿಚ್ಛಂತಿ ಕಿಮಾಶ್ಚರ್ಯಮತಃ ಪರಮ್ ॥

ಜನ ದಿನ ದಿನವೂ ಯಮಲೋಕಕ್ಕೆ ಹೋಗುತ್ತಲೇ ಇದ್ದಾರೆ. ಇತರರು ಅದನ್ನು ನೋಡುತ್ತಿದ್ದರೂ, ನಾವು ಸಾಯದೇ ಎಂದಿಗೂ ಇದ್ದೇ ಬಿಡುತ್ತೇವೆ ಎಂದು ತಿಳಿದು ಕೊಳ್ಳುತ್ತಾರೆ. ಈ ಭ್ರಮೆಯುಂಟಾದರೆ "ನನಗೆ ವ್ಯಾಧಿ ಬಂದಿದೆ. ಚಿಕಿತ್ಸೆಗಾಗಿ ಬೊಂಬಾಯಿಗೆ ಕರೆದುಕೊಂಡುಹೋಗು ; ಅಲ್ಲಿಂದ ಮತ್ತೊಂದೆಡೆಗೆ ಹೋಗೋಣ"– ಎಂದು ಜನ ಹೇಳುತ್ತಿರುತ್ತಾರೆ. ಆದರೆ, ಯಾವುದಾದರೊಂದು ದಿನ ಮರಣ ಬಂದೇ ಬರುತ್ತದೆ. ಸಾವು ಬರುತ್ತದೆ ಎಂಬ ನಿಶ್ಚಯ ಮನಸ್ಸಿಗೆ ಬಂದರೆ, ಕೊನೆಗಾಲದಲ್ಲಿ ಕಾಶಿಗೆ ಹೋಗಿ ನೆಲಸಿದರೆ ಪುಣ್ಯವಾದರೂ ಸಿಗುತ್ತದೆ ಎಂದುಕೊಳ್ಳುತ್ತಾನೆ.

ಯಾರು "ನಿತ್ಯ ಸುಖಬೇಕು, ಈ ದೇಹಕ್ಕೆ ಸಂಬಂಧಿಸಿದ ಅಲ್ಪ ಸುಖ ಬೇಡ"– ಎಂದು ಚಿಂತಿಸುತ್ತಾನೋ, ಅಂಥವನಿಗೆ ನಿತ್ಯ ಸುಖ ಸಿಗುವ ಸಾಧ್ಯತೆಯುಂಟು. ಆದರೆ, ಅದನ್ನು ಹೊಂದುವುದಕ್ಕೆ ಮನಸ್ಸನ್ನು ಒಂದು ಸ್ಥಿತಿಗೆ ತಂದುಕೊಂಡು ಮಹಾ ಪ್ರಯತ್ನವನ್ನು ಮಾಡಬೇಕು. ಮನಸ್ಸನ್ನು ಬೇರೆಡೆ ಹೋಗಲು ಬಿಡಬಾರದು.

ಮಹಾಭಾರತದಲ್ಲಿ ಒಂದು ಕಥೆಯಿದೆ. ದ್ರೋಣಾಚಾರ್ಯರು ಎಲ್ಲರಿಗೂ ಧನುರ್ವಿದ್ಯೆಯನ್ನು ಹೇಳಿಕೊಟ್ಟರು. ಅನಂತರ ಶಿಷ್ಯರನ್ನು ಕರೆದು ಅವರಿಗೊಂದು ಪರೀಕ್ಷೆಯನ್ನಿಟ್ಟರು. ಎಂಥ ಪರೀಕ್ಷೆ ಅದು ? "ಮರದ ಮೇಲೆ ಒಂದು ಚಿಕ್ಕ ಹಕ್ಕಿ ಕುಳಿತಿದೆ, ನೀವು ಅದನ್ನು ಬೀಳಿಸಬೇಕು" ಎಂದು ಹೇಳಿದರು. ಒಬ್ಬೊಬ್ಬರಾಗಿ ಬಂದ ಶಿಷ್ಯರನ್ನು ನೋಡಿದಾಗ, ಗುರುವು "ನೀನು ಈಗ ಏನನ್ನು ನೋಡುತ್ತಿದ್ದೀಯೆ ?" ಎಂದು ಪ್ರಶ್ನಿಸಿದರು. ಆಗ ಅವರು "ನಾವು ಮರವನ್ನೂ ಎಲೆಗಳನ್ನೂ ನೋಡುತ್ತಿದ್ದೇವೆ" ಎಂದು ಮುಂತಾಗಿ ಹೇಳಿದರು. ಅವರನ್ನು ನೋಡಿ ಗುರುವು "ನಿಮ್ಮಲ್ಲಿ ಬಾಣ ಬಿಡಲು ಬೇಕಾದ ನಯವಿಲ್ಲ" ಎಂದು ಹೇಳಿಬಿಟ್ಟರು. ಕೊನೆಯಲ್ಲಿ ಅರ್ಜುನ ಬರು ತ್ತಾನೆ–"ನನಗೆ ಆ ಪಕ್ಷಿಯ ಕತ್ತು ಮಾತ್ರ ಕಾಣಿಸುತ್ತಿದೆ. ಮರ ಎಲೆಗಳಾಗಲೀ ಕಾಣಿಸುತ್ತಿಲ್ಲ"–ಎಂದು ಹೇಳುತ್ತಾನೆ. ಆಗ ಗುರುವು ಅವನಿಗೆ ಬಾಣ ಬಿಡುವಂತೆ ಹೇಳುತ್ತಾರೆ. ಅರ್ಜುನನು ಬಾಣ ಬಿಟ್ಟಕೂಡಲೆ ಪಕ್ಷಿ ಸತ್ತುಬೀಳುತ್ತದೆ.

ಸಾಮಾನ್ಯವಾಗಿ ಲೌಕಿಕ ಕಾರ್ಯಗಳನ್ನು ಮಾಡುವುದಕ್ಕೆ ಮನಸ್ಸನ್ನು ಮೇಲೆ ಹೇಳಿದಂತೆ ಒಮ್ಮುಖವಾಗಿ ಮಾಡಿಕೊಳ್ಳಬೇಕಾಗುತ್ತದೆ. ಹೀಗಿರುವಾಗ ಆತ್ಮವನ್ನು ಪಡೆಯಲು ಮನಸ್ಸನ್ನು ಹತೋಟಿಯಲ್ಲಿಡುವುದು ಎಷ್ಟು ಅವಶ್ಯವಾಗಿರಬೇಕು ?

Sri Vidyabharathi Book Centre, Sringeri

CC-O. In Public Domain. Digitized by eGangotri

"ಎಲ್ಲ ಆಸೆಗಳನ್ನೂ ಬಿಟ್ಟು ಬಿಟ್ಟ ಮೇಲೆ ನಾವು ಲೋಕದಲ್ಲಿ ಇರಲೂಕೂಡದೇ"- ಎಂದು ಯಾರಾದರೂ ಕೇಳಬಹುದು. ಹಾಗೆಲ್ಲ, ಲೋಕದಲ್ಲಿ ಬಾಳ್ವೆ ನಡೆಸುವಾಗ ನಾವು ಆಸೆಗಳನ್ನೂ ಇಟ್ಟುಕೊಳ್ಳಕೂಡದು. ಕೆಲಸಗಳನ್ನು ಮಾಡದೇ ನಾವಿರಬೇಕು ಎಂದು ಹೇಳುತ್ತಿಲ್ಲ. ಕರ್ಮವನ್ನು ಮಾಡದೇ ನಾವು ಇರಬಹುದು ಎಂಬುದು ಸಾಧ್ಯವೇ ಇಲ್ಲ. ಆದರೆ, ಕರ್ಮವನ್ನು ಮಾಡಿದರೂ, ಅದರಿಂದ ಲಾಭ ಅಥವಾ ನಷ್ಟ ಆದರೂ ಪರವಾಗಿಲ್ಲ. ಅದು ಭಗವಂತನಿಗೆ ಸೇರಿದ್ದು ಎಂದೆಣಿಸಿ, ಫಲವನ್ನು ಭಗವಂತನಿಗೇ ಸಮರ್ಪಿಸಿ, ಬಾಳಬೇಕು. ಹಾಗೆ ಮಾಡಿದರೆ ಮನಸ್ಸನ್ನು ನಿರ್ಮಲಗೊಳಿಸಿ ಭಗವಂತನ ಸಾಕ್ಷಾತ್ಕಾರ ಮಾಡಿಕೊಳ್ಳಲು ಮಾರ್ಗವುಂಟು.

ಒಬ್ಬನು ಶಾಸ್ತ್ರದಲ್ಲಿ ಹೇಳಿರುವಂತೆ ಮದುವೆ ಮಾಡಿಕೊಳ್ಳಬಹುದು. ಅನಂತರ ಧರ್ಮಾನುಸಾರವಾಗಿ ಮಗನನ್ನೂ ಪಡೆಯಬಹುದು. "ಇತರರು ಸಂಸಾರದಲ್ಲಿ ತೊಳಲುತ್ತಾರೆ. ಆದ್ದರಿಂದ ಕುಟುಂಬವೆಂಬುದೊಂದು ಶಿಕ್ಷೆ"- ಎಂದು ಅವನು ಗೋಳಾಡಿಕೊಂಡಿರುವುದಕ್ಕಿಂತ, ಇದೆಲ್ಲ ಭಗವಂತನ ಇಚ್ಛೆ ಎಂದೆಣಿಸಿ, ತನ್ನ ಕರ್ತವ್ಯವನ್ನು ಸರಿಯಾಗಿ ಮಾಡಿಕೊಂಡುಬಂದರೆ, ಕುಟುಂಬದ ಬಾಳನ್ನು ನಡೆಸಿಕೊಂಡು ಬಂದರೂ, ಅವನಿಗೆ ಬಂಧನವಾಗದು. ನಾವು ಯಾವ ಕರ್ಮವನ್ನು ಮಾಡಿದರೂ ಅದರಿಂದ ಬಂಧನಕ್ಕೆ ಸಿಕ್ಕಿಹಾಕಿಕೊಳ್ಳದಂತೆ ಈಶ್ವರನಿಗೆ ಅರ್ಪಣೆ ಮಾಡಬೇಕು. ಆತ್ಮಜ್ಞಾನವಾಗದವರೆಗೆ ಯಾವ ಕರ್ತವ್ಯವನ್ನು ವಿಧಿಸಲಾಗಿದೆಯೋ ಅದನ್ನು ಮಾಡಲೇಬೇಕು. ಒಬ್ಬ ಗೃಹಸ್ಥನು ಸಮಾಜದಲ್ಲಿ ಬಾಳಬೇಕಾಗಿದೆ. ಆಗ ಅವನು-

ಆತ್ಮವತ್ಸರ್ವಭೂತಾನಿ ಯಃ ಪಶ್ಯತಿ ಸ ಪಶ್ಯತಿ ||
ಆತ್ಮನಃ ಪ್ರತಿಕೂಲಾನಿ ಪರೇಷಾಂ ನ ಸಮಾಚರೇತ್ ||

ಎಂದು ಹೇಳಲಾಗಿರುವಂತೆ ನಡೆದುಕೊಳ್ಳಬೇಕು.

ನಾವು ಹೇಗೆ ನಮ್ಮ ಒಳಿತನ್ನು ನೋಡಿಕೊಳ್ಳುತ್ತೇವೋ, ಹಾಗೆಯೇ ಇನ್ನೊಬ್ಬನ ಹಿತವನ್ನೂ ನೋಡಬೇಕು. ನಮ್ಮ ದುಃಖಕ್ಕೆ ಕಾರಣವಾಗುವ ಯಾವ ಕೆಲಸವನ್ನೂ ಮತ್ತೊಬ್ಬನ ವಿಷಯದಲ್ಲಿ ಯಾವಾಗಲೂ ಮಾಡಬಾರದು. ಇದೇ ನಮ್ಮ ಸಿದ್ಧಾಂತ. ಹೀಗೆ ಬಾಳನ್ನು ನಾವು ನಡೆಸಿದರೆ, ಭಗವಂತನು ಪ್ರಸನ್ನನಾಗುತ್ತಾನೆ. ಭಗವಂತನು "ಮನುಷ್ಯನು ತನ್ನ ಕರ್ತವ್ಯಗಳನ್ನು ಸರಿಯಾಗಿ ನಡೆಸಿಕೊಂಡು ಬರುತ್ತಿದ್ದಾನೆಯೇ ?" ಎಂದು-ನೋಡುತ್ತಿರುತ್ತಾನೆ. ಒಬ್ಬನು ಭಗವಂತನ ಕಟ್ಟಳೆಗಳನ್ನು-ತನ್ನ ಕರ್ತವ್ಯಗಳನ್ನು ಸರಿಯಾಗಿ ಪಾಲಿಸಿದರೆ, ಆಗ ಭಗವಂತನು ಆ ಮನುಷ್ಯನಿಗೆ ತನ್ನ ಪೂರ್ಣ ಅನುಗ್ರಹವನ್ನು ಅನುಗ್ರಹಿಸುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬನು ಯಾವಾಗಲೂ ಭಗವಂತನನ್ನೇ ಕುರಿತು ಚಿಂತಿಸುತ್ತಾ "ಆತ್ಮವೇ ಪರಮಾತ್ಮ" ಎಂದು ದೃಢವಾಗಿ ಭಾವಿಸಿದರೆ, ಅವನು ಅಭಿವೃದ್ಧಿಯನ್ನು ಹೊಂದುತ್ತಾನೆ. ಒಬ್ಬ ಪೋಲೀಸಿನವನು ಹತ್ತಿರದಲ್ಲಿದ್ದರೆ ಕಳ್ಳನು ಕದಿಯು ವುದಿಲ್ಲ. ಹಾಗೆಯೇ ಯಾವಾಗಲೂ ಭಗವಂತನನ್ನು ಧ್ಯಾನಿಸುತ್ತಿದ್ದರೆ, ಆಗ ವ್ಯಕ್ತಿಯು ಯಾವ ತಪ್ಪನ್ನು ತಾನೇ ಮಾಡಿಯಾನು ? ಭಗವಂತನನ್ನು ಮರೆತಿರುವಾಗ ಮಾತ್ರ ತಪ್ಪುಗಳನ್ನು ಮಾಡುತ್ತಾನೆ. ಆದ್ದರಿಂದ ನಾವು ಯಾವಾಗಲೂ ಭಗವಂತನ ಧ್ಯಾನ ವನ್ನು ಮಾಡುತ್ತಾ, ನಮ್ಮ ಕರ್ತವ್ಯಗಳನ್ನು ನಿರ್ವಹಿಸಬೇಕು. ಆಗ ನಮಗೆ ಈ ಜನ್ಮದಲ್ಲಿಯೇ ಜ್ಞಾನವು ಸಿದ್ಧಿಸುತ್ತದೆ. ಅದಕ್ಕೆ ಭಗವಂತನ ಅನುಗ್ರಹವೇ ಕಾರಣ.

ತೇಷಾಮೇವಾನುಕಂಪಾರ್ಥಂ ಅಹಮಜ್ಞಾನಜಂ ತಮಃ ।
ನಾಶಯಾಮ್ಯಾತ್ಮ ಭಾವಸ್ಥೋ ಜ್ಞಾನದೀಪೇನ ಭಾಸ್ವತಾ ॥

[ನಾನು ಆ ಭಕ್ತರ ಅನುಗ್ರಹಕ್ಕೋಸ್ಕರ ಅವನ ಹೃದಯದಲ್ಲಿದ್ದು, ಜ್ಞಾನ ಪ್ರದೀಪ ದಿಂದ ಅಜ್ಞಾನದಿಂದ ಉಂಟಾದ ಕತ್ತಲೆಯನ್ನು ನಾಶ ಮಾಡುತ್ತೇನೆ.]

—ಎಂದು ಭಗವಂತನು ಗೀತೆಯಲ್ಲಿ ಹೇಳಿದ್ದಾನೆ.

ಆದ್ದರಿಂದ, ಹಾಗೆ ಜ್ಞಾನವನ್ನು ಪಡೆದರೆ ಮಾತ್ರ ಬಾಳಿನ ಗುರಿಯನ್ನು ಸಾಧಿಸ ಬಹುದು. ಇದಕ್ಕೆ ದೃಢವಾದ ಮನಸ್ಸು, ಶಾಸ್ತ್ರದಲ್ಲಿ ವಿಶ್ವಾಸ, ಮುಂತಾದುವು ಇರಬೇಕು. ಆದ್ದರಿಂದ ಹಿಂದಿನ ಜನ್ಮದಲ್ಲಿ ಮಾಡಿದ ಪಾಪಗಳಿಂದ ಈಗ ಜೀವ ಪ್ರಗತಿಗೆ ತಡೆಯುಂಟಾದರೆ, ಈ ಜನ್ಮದಲ್ಲೇ ಬಾಳಿನ ಪ್ರಯೋಜನ ಪಡೆಯಲು ಆಗ ದಿದ್ದರೆ, ನಾವು ಅದರಿಂದ ಹೆದರಬೇಕಿಲ್ಲ.

ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ॥

ತನ್ನ ಪ್ರಯತ್ನವಿಲ್ಲದೇ ಹೋದರೂ ಹಿಂದಿನ ಜನ್ಮದ ಪ್ರವೃತ್ತಿಯೇ ಅವನನ್ನು ಯೋಗ ಸಾಧನೆಗೆ ಎಳೆಯುತ್ತದೆ.)

—ಎಂದು ಭಗವಂತನು ಹೇಳಿರುವಂತೆ, ನಾವು ಈಗ ಮಾಡುವ ಪ್ರಯತ್ನಗಳು ಎಂದಿಗೂ ವ್ಯರ್ಥವಾಗುವುದಿಲ್ಲ. ಮರು ಜನ್ಮದಲ್ಲಿ ಅವು ಕೆಲಸಕ್ಕೆ ಬರುತ್ತವೆ. ಆತ್ಮ ತ್ಯಾಗ ಮಾಡಿದ ಪ್ರಯತ್ನಗಳು ಈ ಜನ್ಮದಲ್ಲಿ ಕೊನೆ ಹೊಂದಿದರೂ, ಮುಂದಿನ ಜನ್ಮ ದಲ್ಲಿ ಅವನ್ನು ಮುಂದುವರಿಸಿಕೊಂಡುಹೋಗಬಹುದು. ಆದ್ದರಿಂದ ಈ ಜನ್ಮದಲ್ಲಿ ಅವನ್ನು ಮುಂದುವರಿಸಿಕೊಂಡುಹೋಗಬಹುದು. ಆದ್ದರಿಂದ ಈ ಜನ್ಮದಲ್ಲಿ ಆಗದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಹೋದರೂ ಮುಂದಿನ ಜನ್ಮದಲ್ಲಾದರೂ ನಾವು ಬಯಸಿದ ಫಲವನ್ನು ಪಡೆಯ ಬಹುದು. ಭಗವಂತನೇ ಈ ಉಪದೇಶವನ್ನು ನಮಗೆ ಮಾಡಿದ್ದಾನೆ. ಆಧ್ಯಾತ್ಮಿಕ ಮಾರ್ಗದಲ್ಲಿ ಹೋಗಲು ಹಲವು ಬಗೆ ಸಾಧನಗಳಿವೆ. ಅವುಗಳಲ್ಲಿ ಕೆಲವು ಕಷ್ಟವಾಗಿರ ಬಹುದು. ಕೆಲವು ಸುಲಭವಾಗಿರಬಹುದು. ಆದರೆ ಎಲ್ಲರೂ ಅನುಸರಿಸಬಹುದಾದ ದಾರಿ ಭಗವಂತನ ಹೆಸರನ್ನು ಜಪಿಸುವುದು.

ಉದಾಹರಣೆಗೆ–

ಹರೇ ರಾಮ ಹರೇ ರಾಮ ರಾಮ ರಾಮ ಹರೇ ಹರೇ ।
ಹರೇ ಕೃಷ್ಣ ಹರೇ ಕೃಷ್ಣ ಕೃಷ್ಣ ಕೃಷ್ಣ ಹರೇ ಹರೇ ॥

—ಎಂದು ಜಪಿಸಬಹುದು. ಇದು ಒಂದು ಮಹಾಮಂತ್ರವಾಕ್ಯ. ಆದರೆ, ಇದಕ್ಕೆ ಯಾವ ವಿಧವಾದ ಉಪದೇಶವೂ ಅಗತ್ಯವಿಲ್ಲ. ಈ ದಿವ್ಯನಾಮಗಳನ್ನು ಯಾರು ಉಚ್ಚರಿಸಿದರೂ ಅವರಿಗೆ ಪುಣ್ಯವೇ ಸಿಗುತ್ತದೆ. ಹೀಗೆ ಜಪಿಸುತ್ತಿದ್ದರೆ, ಭಗವಂತನ ಅನುಗ್ರಹಕ್ಕೆ ಪಾತ್ರರಾಗಬಹುದು. ಆದ್ದರಿಂದ ನಾವು ಭಗವಂತನಲ್ಲಿ ಮನಸ್ಸನ್ನು ಅರ್ಪಿಸಿ, ಅವನ ಸಾಕ್ಷಾತ್ಕಾರವನ್ನು ಪಡೆದುಕೊಂಡರೆ ನಮ್ಮ ಬಾಳು ಸಫಲವಾಗುತ್ತದೆ. ಆಗ ನಾವು ನಮ್ಮ ಬಾಳಿನ ಗುರಿಯನ್ನು ಸಾಧಿಸಿದಂತಾಗುತ್ತದೆ.

ಹರ ನಮಃ ಪಾರ್ವತೀಪತಯೇ । ಹರ ಹರ ಮಹಾದೇವ ॥
ಜಾನಕೀಕಾಂತ ಸ್ಮರಣಮ್ । ಜಯ ಜಯ ರಾಮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಸಮ್ಯಗ್ಜೀವನದಲ್ಲಿ ಕೊರತೆಯೇನಿಲ್ಲ

ವಿಶುದ್ಧ ಜ್ಞಾನದೇಹಾಯ ತ್ರಿವೇದೀ ದಿವ್ಯಚಕ್ಷುಷೇ ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥಲೇಖಾಲಂಕೃತ ಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣ ಸುಧಾನದೀಮ್ ॥

ಪ್ರತಿಯೊಬ್ಬರಿಗೂ ಅವರವರ ಧರ್ಮಗಳಲ್ಲಿ ಶ್ರದ್ಧೆಯಿರುತ್ತದೆ. ನಮ್ಮ ಧರ್ಮ ನಮಗೆ ಪ್ರಿಯವಾಗಿದೆ. ಇತರರಿಗೂ ಅವರವರ ಧರ್ಮ ತುಂಬ ಪ್ರಿಯವಾಗಿರುತ್ತದೆ. ಅವರು ಹಾಗೆ ತಿಳಿದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ಇತರ ಧರ್ಮಗಳಿಗೆ ಸೇರಿದವರು ನಮ್ಮ ಧರ್ಮಕ್ಕೆ ಸೇರಿದವರನ್ನು ಒಂದು ವಿಧದಲ್ಲಿ ಆಕ್ರಮಿಸಿಕೊಂಡು ಅವರ ಬುದ್ಧಿಯನ್ನು ಬದಲಾಯಿಸಿಬಿಟ್ಟರೆ ನಮಗೆ ದುಃಖವಾಗುತ್ತದೆ. ಇದನ್ನು ತಡೆಯುವುದಕ್ಕೆ ನಾವು ಪ್ರಯತ್ನ ಪಡಬೇಕು.

ಒಬ್ಬ ಮನುಷ್ಯ ಹಿಂದುವಾಗಿ ಹುಟ್ಟಿದರೆ, ಅವನು ಯಾವಾಗಲೂ ಹಿಂದುವಾಗಿಯೇ ಇರುತ್ತಾನೆ. ಅವನ ಕಾಲನ್ನು ಕತ್ತರಿಸಿದರೂ, ಕಿವಿಯನ್ನು ಕತ್ತರಿಸಿದರೂ, ಅವನಿಗೆ ಸೋಪು ಹಾಕಿ ಚೆನ್ನಾಗಿ ತಿಕ್ಕಿದರೂ ಹಿಂದುವಾದವನು ಹಿಂದುವಾಗಿಯೇ ಇರುತ್ತಾನೆ. ಆದ್ದರಿಂದ ನಮ್ಮನ್ನು ಈ ರೀತಿಯಲ್ಲಿ ಇತರರು ಬದಲಾಯಿಸಲು ಸಾಧ್ಯವಿಲ್ಲ.

ಭಗವಂತನು ಮನುಷ್ಯರಿಗೆ ಬುದ್ಧಿಯನ್ನು ಅನುಗ್ರಹಿಸಿದ್ದಾನೆ. ಅದರಿಂದ ನಾವು ಸತ್ಕಾರ್ಯಗಳನ್ನು ಮಾಡಬಹುದು. ದುಷ್ಕೃತ್ಯಗಳನ್ನು ಮಾಡಬಹುದು. ಹಾಗೆಯೇ ಬುದ್ಧಿಯಿಂದ ಚಿಂತನೆಯನ್ನೂ ಮಾಡಬಹುದು. ಆದ್ದರಿಂದ ನಾವು ಇತರರ ಮಾತಿನಿಂದ ಮೋಹಗೊಂಡು ಮೈಮರೆಯಬಾರದು. ಅದಕ್ಕೆ ಏನುಮಾಡಬೇಕು ? ನಾವು ಇದನ್ನು ಕುರಿತು ಯೋಚಿಸಬೇಕು.

ವಿಷಯಗಳಲ್ಲಿ ಎರಡು ಬಗೆ. ಒಂದು ವಾಸ್ತವವಾಗಿರುವ ವಸ್ತು ; ಮತ್ತೊಂದು ತೋರಿಕೆಯಾದುದು. ಕತ್ತಲೆಯಾಗಿರುವಾಗ ಕೆಲವೊಮ್ಮೆ ನೆಲದ ಮೇಲೆ ಬಿದ್ದಿರುವ ಒಂದು ಹಗ್ಗವನ್ನು ಕಂಡು ಅದು ಹಾವು ಎಂದು ತಪ್ಪಾದ ಅರಿವು ನಮಗೆ ಉಂಟಾಗಬಹುದು. ಈ ಅಜ್ಞಾನಕ್ಕೆ ಯಾವ ವಿಧವಾದ ಪ್ರಾಯಶ್ಚಿತ್ತವನ್ನು ಮಾಡಬೇಕು ? ಯಾವ ವಿಧವಾದ ಪ್ರಾಯಶ್ಚಿತ್ತವನ್ನೂ ಮಾಡಬೇಕಾಗಿಲ್ಲ. ನಿಜವಾಗಿ ಇರುವ ವಸ್ತುವನ್ನು ತಿಳಿದುಕೊಂಡರೆ ಸಾಕು. ಅಂದರೆ, "ಅದು ಹಾವಲ್ಲ" ಎಂದು ತಿಳಿದುಕೊಂಡರೆ ಸಾಕು. ಆಗ ತಪ್ಪಾದ ತಿಳುವಳಿಕೆ ಹೋಗಿಬಿಡುತ್ತದೆ. ತಪ್ಪಾದ ತಿಳುವಳಿಕೆ ಹೋದರೆ, ಅದರಿಂದಾದ ಭಯ, ನಡುಕ, ಮುಂತಾದುವೂ ಹೋಗಿಬಿಡುತ್ತವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಹಾಗೆಯೇ, ಯಾರಿಗೆ ತಾವು ಮತಾಂತರ ಹೊಂದಿದ್ದೇವೆ ಎಂಬ ತಪ್ಪಾದ ಅರಿವು ಉಂಟಾಗಿದೆಯೋ, ಆಗಲೇ ಅವನು ತನ್ನ ಕರ್ತವ್ಯವನ್ನು ಬಿಟ್ಟುಬಿಡುತ್ತಾನೆ.

ಒಬ್ಬ ಗಂಡಸು ಹೆಣ್ಣು ವೇಷ ಧರಿಸಿದ್ದಾನೆ ಎಂದಿಟ್ಟುಕೊಳ್ಳೋಣ. ಆಗ ನಾವು ಏನನ್ನುತ್ತೇವೆ ? "ಅವನು ಹೆಣ್ಣು ವೇಷ ಹಾಕಿಕೊಂಡಿದ್ದಾನೆ. ಆದರೆ ನಿಜವಾಗಿ ಅವನು ಹೆಣ್ಣಲ್ಲ"-ಎಂದೇ ಹೇಳುತ್ತೇವಲ್ಲವೇ ! ಹಾಗೆಯೇ ಇಷ್ಟು ದಿನ ಒಬ್ಬನು ಹೇಗಿದ್ದನೋ, ಅವನು ಮತಾಂತರಹೊಂದಿದರೂ, ಹಿಂದೆ ಇದ್ದಂತೆಯೇ ಈಗಲೂ ಇದ್ದಾನೆ ಎಂದೇ ತಿಳಿಯಬೇಕು. ಯಾವಾಗ ನಮಗೆ ಉಪನಯನವಾಯಿತೋ, ಅಂದಿನಿಂದ ಮಾತ್ರ "ಬ್ರಹ್ಮಚಾರಿ" ಎಂದೆಣಿಸಲಾಗುತ್ತದೆ. ಶಾಸ್ತ್ರವಿಧಿಗಳಿಗನುಸಾರವಾಗಿ ಉಪನಯನವಾದ ಮೇಲೇ ಒಬ್ಬನು ಬ್ರಹ್ಮಚರ್ಯಾಶ್ರಮದಲ್ಲಿರುವವನಾಗುತ್ತಾನೆ. ಅದರಂತೆಯೇ ಸಂನ್ಯಾಸಿಗಳಿಗೂ ಕೆಲವು ಕಟ್ಟಳೆಗಳು ವಿಧಿಸಲ್ಪಟ್ಟಿವೆ. ಶಾಸ್ತ್ರದಂತೆ, ಒಬ್ಬರು ಗುರುವನ್ನು ಹುಡುಕಿಕೊಂಡು ಹೋಗಿ ದೀಕ್ಷೆಯನ್ನು ಪಡೆದುಕೊಂಡರೆ ಮಾತ್ರ ಸಂನ್ಯಾಸಿ ಎಂದೆನಿಸಿಕೊಳ್ಳುತ್ತಾರೆ. ಅದನ್ನು ಬಿಟ್ಟು ಅಂಗಡಿಗೆ ಹೋಗಿ ಅಲ್ಲಿ ಸಿಗುವ ಜನಿವಾರವನ್ನು ಕೊಂಡುಕೊಂಡು ಹಾಕಿಕೊಂಡ ಮಾತ್ರದಿಂದ ಬ್ರಹ್ಮಚಾರಿಯಾಗಿ ಬಿಡುವುದಿಲ್ಲ. ಹಾಗೆಯೇ ತನಗೆ ತೋರಿದಂತೆ ಜನಿವಾರವನ್ನು ಎಸೆದು ಬಿಟ್ಟಾಕ್ಷಣ ಒಬ್ಬನು ಸಂನ್ಯಾಸಿಯಾಗಿಬಿಡುವುದಿಲ್ಲ. ಏಕೆಂದರೆ, ಅಂಥವರಿಗೆ ಯಾವ ವಿಧವಾದ ಸಂಸ್ಕಾರವೂ ಆಗಿರುವುದಿಲ್ಲ.

ಅಂಗಡಿಯಲ್ಲಿ ಸಿಗುವ ಜನಿವಾರವನ್ನು ಹಾಕಿಕೊಂಡರೆ ಆಶ್ರಮ ನಿಯಮಗಳು ಬಂದುನೆಂದಾದರೆ, ದೊಡ್ಡ ಹಗ್ಗವನ್ನೇ ಧರಿಸಿಕೊಳ್ಳಬಹುದಲ್ಲ ! ಯಾರಾದರೊಬ್ಬನು ಒಬ್ಬ ಹೆಣ್ಣಿನೊಡನೆ ಬಾಳುತ್ತಿದ್ದರೆ, ಅಷ್ಟರಿಂದ ಮಾತ್ರ ಅವನನ್ನು ಗೃಹಸ್ಥನೆಂದು ಪರಿಗಣಿಸಲು ಆಗುವುದಿಲ್ಲ. ಶಾಸ್ತ್ರಗಳಲ್ಲಿ ಹೇಳಿರುವಂತೆ ಸಂಸ್ಕಾರಗಳು ಆಗಬೇಕು. ಯಾರಾದರೊಬ್ಬ ಸಂನ್ಯಾಸಿಗಳಂತೆ ಬಟ್ಟೆಗಳನ್ನು ಧರಿಸಿಬಿಟ್ಟರೆ, "ನೀನು ಏಕೆ ವೇಷವನ್ನು ಹಾಕುತ್ತಿದ್ದೀಯೆ" ಎಂದು ತಾನೇ ನಾವು ಕೇಳುತ್ತೇವೆ. ಒಬ್ಬ ಒಂದು ಜಾತಿಯಲ್ಲಿ ಹುಟ್ಟಿದ್ದಾನೆ ಎಂದುಕೊಳ್ಳೋಣ. ಅದನ್ನು ಬದಲಾಯಿಸಬೇಕೆಂದರೆ ಸಂಸ್ಕಾರಗಳಾಗಬೇಕು. ಆದರೆ ಅಂತಹ ಸಂಸ್ಕಾರಗಳು ಮತಾಂತರದಲ್ಲಿ ಇಲ್ಲ.

ನಾವು ನಮ್ಮ ಧರ್ಮವನ್ನು ಬಿಟ್ಟರೆ "ಭ್ರಷ್ಟ"ರೆಂದೆನಿಸಿಕೊಳ್ಳುತ್ತೇವೆ. ತುಂಬ ದೊಡ್ಡ ಪದವಿಯಲ್ಲಿರುವವರಿಗೂ ಕೆಲವು ನಿಯಮಗಳಿರುತ್ತವೆ. ಆ ನಿಯಮಗಳನ್ನು ಅವರು ಪಾಲಿಸದಿದ್ದರೆ, ಅವರು ಆ ಸ್ಥಾನದಲ್ಲಿಯೇ ಇದ್ದರೂ, ಭ್ರಷ್ಟರೆಂದೇ ಪರಿಗಣಿಸಲ್ಪಡುತ್ತಾರೆ. ಯಾವುದನ್ನು ನಾವು ತಿನ್ನಕೂಡದೋ ಅದನ್ನು ತಿಂದು, ಯಾವುದನ್ನು ನಾವು ಕುಡಿಯಕೂಡದೋ ಅದನ್ನು ಕುಡಿದು, ಯಾವ ನಡವಳಿಕೆಗಳಿಗೆ ಎಡೆಗೊಡಬಾರದೋ ಅವುಗಳನ್ನು ಮಾಡಿದರೆ, ಭ್ರಷ್ಟರೇ ಆಗುತ್ತೇವೆ. ಯಾರಾದರೂ ತನಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಧಿಸಲ್ಪಟ್ಟ ಧರ್ಮಗಳನ್ನು ಬಿಟ್ಟರೆ, ಅವನನ್ನು ಕುರಿತು–"ನೀನು ಯಾವುದೋ ತಪ್ಪಾದ ತಿಳುವಳಿಕೆಯಿಂದ ಹೀಗೆ ಮಾಡುತ್ತಿದ್ದೀಯೆ. ಇದರಿಂದ ನಿನಗೆ ಯಾವ ವಿಧವಾದ ಲಾಭವೂ ಆಗುವುದಿಲ್ಲ" ಎಂದು ಹೇಳಬೇಕು. ಪ್ರಾರಂಭಕ್ಕೆ ಯಾವುದೋ ಕಾರಣಗಳಿಂದ ಅವನು ತನಗೆ ವಿಧಿಸಿದ್ದ ನಿಯಮಗಳನ್ನು ಪಾಲಿಸಲು ಆಗದೇ ಇದ್ದಿರಬಹುದು. ಈಗ ಅವನೇ ಆ ನಿಯಮಗಳನ್ನು ಮೀರಿ ನಡೆದದ್ದರಿಂದ, ಅವನಿಗೆ ನಿಯಮಗಳೇ ಇಲ್ಲದಂತೆ ಆಗಿಹೋಯಿತು.

ಯಾರಾದರೊಬ್ಬನು ಬ್ರಾಹ್ಮಣ ಧರ್ಮವನ್ನು ಅನುಸರಿಸುವುದೇ ಇಲ್ಲ ಎಂದರೆ, ಅವನಿಗೆ ಬ್ರಾಹ್ಮಣ್ಯ ಎಂದರೆ ಏನು ಎಂದೇ ತಿಳಿಯದು. ಅಂಥವನು ಆಶೀರ್ವಾದ ಮಾಡಿದರೆ ಯಾರಿಗೆ ಏನು ವಿಶೇಷವಾದ ಫಲ ಸಿಗುತ್ತದೆ? ನಾವು ಹೊರಗೆ ಹೇಗೆ ಕಾಣಬರುತ್ತೇವೋ ಹಾಗೆಯೇ ನಮ್ಮ ಅಂತರಂಗವೂ ಇರಬೇಕು. ಎರಡಕ್ಕೂ ಒಂದು ಹೊಂದಿಕೆಯಿದ್ದರೆ ಮಾತ್ರ ಸರಿ.

ಅನೇಕರಿಗೆ ಮನಸ್ಸಿನಲ್ಲಿ ಶ್ರದ್ಧೆಯಿದೆ. ಅದು ನಿಜವೇ. ಆದರೆ, ಆ ಶ್ರದ್ಧೆಯನ್ನು ಇತರರಿಗೆ ಹೇಗೆ ತಿಳಿಸಬೇಕು ಎಂಬುದಕ್ಕೆ ಒಂದು ಕ್ರಮವಿದೆ. ಅದನ್ನು ಸರಿಯಾಗಿ ತಿಳಿದುಕೊಳ್ಳದಿದ್ದರೆ, ಶ್ರದ್ಧೆಯಿದ್ದರೂ ಅದು ಸಂಗತವಾಗಿರುವುದಿಲ್ಲ. ಉದಾಹರಣೆಗೆ– ಒಬ್ಬ ಸಂನ್ಯಾಸಿ ಒಂದು ಮನೆಗೆ ಹೋದರೆ, ಆ ಮನೆಯವರು ಆ ಸಂನ್ಯಾಸಿಯನ್ನು ಉಪಚರಿಸಿ, "ನೀವು ಕಾಫಿ ಕುಡಿಯಿರಿ"–ಎಂದು ಹೇಳಿದರೆ, ಹೇಗಿರುತ್ತದೆ? ಆಗ ಆ ಸಂನ್ಯಾಸಿ "ನಾನು ಕಾಫಿ ಕುಡಿಯುವುದಿಲ್ಲ"–ಎಂದು ಹೇಳುತ್ತಾರೆ. ಮನೆಯವರು "ನೀವು ಏಕೆ ಕಾಫಿ ಕುಡಿಯುವುದಿಲ್ಲ? ನಾವು ದಿನವು ಕುಡಿಯುತ್ತೇವಲ್ಲ!"–ಎಂದು ಹೇಳುತ್ತಾರೆ. ಅದಕ್ಕೆ ಆ ಸಂನ್ಯಾಸಿ "ಹಾಗಲ್ಲ, ಏನೇನು ಒಳಗೆ ಹೋಗುತ್ತದೆಯೋ ಅದೆಲ್ಲವನ್ನೂ ತಿನ್ನಬಹುದು, ಕುಡಿಯಬಹುದು ಎಂಬ ಸಲಿಗೆ ಸಂನ್ಯಾಸಿಗಳಿಗಿಲ್ಲ. ಸಂನ್ಯಾಸಿಯಾದವನಿಗೆ ಕೆಲವು ನಿಯಮಗಳಿವೆ. ಸಂನ್ಯಾಸಿಯಾದವನು ಯಾವ ವಿಧವಾದ ನಿಯಮವನ್ನೂ ಇಟ್ಟುಕೊಂಡಿಲ್ಲವೆಂದರೆ, ಸಂನ್ಯಾಸಿಯೆಂದು ಕರೆಯಿಸಿಕೊಳ್ಳಲು ಇರಬೇಕಾದ ಅರ್ಹತೆಯನ್ನು ಕಳೆದುಕೊಂಡವನಾಗುತ್ತಾನೆ"–ಎಂದು ಉತ್ತರ ಕೊಡುತ್ತಾನೆ.

ಆದ್ದರಿಂದ ಸಂನ್ಯಾಸಿಯಾದವನು ತನ್ನ ಜೀವನವನ್ನು ಆಧ್ಯಾತ್ಮಿಕ ಏಳಿಗೆಗಾಗಿ ಉಪಯೋಗಿಸಿಕೊಳ್ಳಬೇಕು, ಮತ್ತು ಅವನು ಯಾವ ವಿಧವಾದ ಕೆಟ್ಟ ಅಭ್ಯಾಸಗಳಿಗೂ ಎಡೆಕೊಡಬಾರದು ಎಂದು ಹೇಳಲಾಗಿದೆ. ಯಾವ ಯಾವ ಚರ್ಯೆಗಳು ಆಧ್ಯಾತ್ಮಿಕ ಮಾರ್ಗದಿಂದ ಸಂನ್ಯಾಸಿಯನ್ನು ದೂರ ಕೊಂಡೊಯ್ಯುವವೋ ಅಂಥ ಕಾರ್ಯಗಳನ್ನು ಅವನು ಮಾಡಬಾರದು.

ಒಬ್ಬ ಶ್ರದ್ಧೆಯಿಂದ ಸಂಧ್ಯಾವಂದನೆಯನ್ನು ಮಾಡಲು ಕುಳಿತುಕೊಳ್ಳುತ್ತಾನೆಂದುಕೊಳ್ಳಿ. ಅವನಿಗೆ ಮಂತ್ರವೂ ಬರದು, ಮಾಡುವ ವಿಧಾನವೂ ತಿಳಿಯದು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದಾದರೆ, ಅವನು ಮಾಡುವ ಕ್ರಿಯೆ ಸಂಧ್ಯಾವಂದನೆ ಹೇಗಾದೀತು? ಆದ್ದರಿಂದ ಸಂಧ್ಯಾವಂದನೆ ಮಾಡಬೇಕೆಂದರೆ ಒಂದು ಕ್ರಮದಲ್ಲಿ ಮಾಡಬೇಕು. ಕೇವಲ ಶ್ರದ್ಧೆಯಿದ್ದರೆ ಸಾಲದು. ಸಂಧ್ಯಾವಂದನೆಯನ್ನು ನಿಯಮದಂತೆ ಮಾಡಬೇಕು. ಇದರಂತೆಯೇ ಮನುಷ್ಯನು ತನಗೆ ವಿಧಿಸಿರುವ ನಿಯಮಗಳಂತೆ ನಡೆದುಕೊಳ್ಳಬೇಕು ಎಂದು ಶಾಸ್ತ್ರಗಳು ಹೇಳುತ್ತವೆ. ಮನುಷ್ಯನಿಗೂ ಪ್ರಾಣಿಗಳಿಗೂ ವ್ಯತ್ಯಾಸವಿದೆ. ಮನುಷ್ಯನು ತನಗೆ ಹೇಳಿರುವ ನಿಯಮಗಳನ್ನು ಅನುಸರಿಸಿಕೊಂಡು ಬಾಳುತ್ತಾನೆ. ಪ್ರಾಣಿಗಳಿಗೆ ಆ ವಿಧವಾದ ಯಾವ ನಿಯಮಗಳೂ ಇಲ್ಲ. ಪ್ರಾಣಿಗಳು ಎಲ್ಲಿ ಆಹಾರ ದೊರಕುತ್ತದೆಯೋ ಅಲ್ಲಿ ಅದನ್ನು ತಿನ್ನುತ್ತವೆ; ಯಾವಾಗ ಮಲವಿಸರ್ಜನೆ ಮಾಡಬೇಕೆಂದು ತೋರುತ್ತದೆಯೋ ಆಗ ಹಾಗೆ ಮಾಡಿಬಿಡುತ್ತವೆ. ಆದರೆ ಮನುಷ್ಯನಿಗೆ ಕೆಲವು ನಿಯಮಗಳಿವೆ. ತೋರಿದ ಕಡೆ ಅಶುದ್ಧ ಮಾಡಲಾಗದು. ಪ್ರಾಣಿಗಳಿಗೂ ನಮಗೂ ಇರುವ ವ್ಯತ್ಯಾಸ ಈ ನಿಯಮ ಪಾಲನೆಯಲ್ಲಿ. ನಾವು ಎಲ್ಲ ವಿಧವಾದ ನಿಯಮಗಳನ್ನೂ ಮೀರಿ ನಡೆದರೆ ನಾವೂ ಪ್ರಾಣಿಗಳೇ ತಾನೇ ?

ಕೆಲವರು ಕಾಲಕ್ಕೆ ಸರಿಯಾಗಿ ಸಂಧ್ಯಾವಂದನೆ ಮಾಡುತ್ತಾರೆ. ತಮ್ಮ ತಂದೆ ಸತ್ತ ತಿಥಿಯಂದು ವಾರ್ಷಿಕ ಶ್ರಾದ್ಧ ಮಾಡುತ್ತಾರೆ. ಇನ್ನು ಕೆಲವರು ಅಂಥ ಅನುಷ್ಠಾನಗಳನ್ನು ಇಟ್ಟುಕೊಳ್ಳುವುದೇ ಇಲ್ಲ. ಹೀಗೆ ಅನುಷ್ಠಾನಗಳನ್ನು ಇಟ್ಟುಕೊಂಡವರಿಗೂ, ಇಟ್ಟುಕೊಳ್ಳದೇ ಇರುವವರಿಗೂ ಏನು ವ್ಯತ್ಯಾಸ ? ನಂಬಿಕೆಯೇ ಈ ವ್ಯತ್ಯಾಸಕ್ಕೆ ಕಾರಣ. ನಾವು ಯಾವ ಒಳ್ಳೆಯ ಕೆಲಸಗಳನ್ನು ಮಾಡುತ್ತಿದ್ದೇವೋ ಅದರ ಮೂಲಕ ನಮಗೆ ಒಳಿತಾಗುತ್ತದೆ ಎಂಬ ನಂಬಿಕೆ ಕೆಲವರಿಗಿರುತ್ತದೆ. ಆದ್ದರಿಂದ ಅವರು ನಿಯಮಗಳನ್ನು ಅನುಸರಿಸುತ್ತಾರೆ. ಇನ್ನು ಕೆಲವರಾದರೋ "ಇದೆಲ್ಲ ಪ್ರಯೋಜನವಿಲ್ಲ" ಎಂದು ಹೇಳಿಬಿಡುತ್ತಾರೆ. ಇದರಲ್ಲಿ ನಂಬಿಕೆಯಿಲ್ಲದಿರುವುದರಿಂದ ನಿಯಮಗಳನ್ನು ಪಾಲಿಸುವುದಿಲ್ಲ.

ಅಸ್ತಿ ನಾಸ್ತಿ ದಿಷ್ಟಂ ಮತಿರಾಸ್ತಿಕ ನಾಸ್ತಿಕೌ ।

ಮಾಡಿದ ಕರ್ಮಕ್ಕೆ ಫಲವುಂಟು, ಫಲವಿಲ್ಲ ಎಂಬ ತಿಳುವಳಿಕೆಯೇ ಆಸ್ತಿಕ ನಾಸ್ತಿಕರ ಗುರುತು. ಇದರಿಂದ ಆಸ್ತಿಕ ನಾಸ್ತಿಕ ಎಂಬ ಎರಡು ಮಾತುಗಳ ಅರ್ಥ ನಮಗೆ ತಿಳಿದು ಬರುತ್ತದೆ.

ನಾವು ಯಾವ ಕೆಲಸವನ್ನು ಮಾಡಿದರೂ ಅದು ಖಂಡಿತವಾಗಿ ಫಲವನ್ನು ಕೊಡುತ್ತದೆ. ನಾವು ಸತ್ತು ಹೋದರೂ ಮಾಡಿದ ಕರ್ಮಕ್ಕೆ ಫಲವುಂಟು. ಒಬ್ಬನು ಕದಿಯುತ್ತಾನೆ. ಅದಕ್ಕೇನು ಫಲ ? ಪೋಲೀಸಿನವನು ಅವನನ್ನು ಹಿಡಿದುಕೊಂಡು ಹೋಗುತ್ತಾನೆ. ಇದು ಎಲ್ಲರಿಗೂ ತಿಳಿದಿದ್ದೇ. ನಾವು ಈ ನಿಯಮವನ್ನು ಅರಿತು ಅದರಂತೆ ನಡೆಯುತ್ತೇವೆ. ಆದರೆ ಕೆಲವು ಸಂದರ್ಭಗಳಲ್ಲಿ ಮೀರಿ ನಡೆಯುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೆಲವರು ಪೋಲೀಸಿನ ಬಂಧನದಿಂದ ತಪ್ಪಿಸಿಕೊಂಡು ಹೋದರೆ ಕಳ್ಳತನದ ಫಲ ತಮಗೆ ಒದಲಿಲ್ಲ ಎಂದು ತಿಳಿಯುತ್ತಾರೆ. ಹಾಗೆ ತಿಳಿದು ಪುನಃ ಪುನಃ ತಪ್ಪನ್ನೇ ಮಾಡುತ್ತಿರುತ್ತಾರೆ. ಕೆಲವರು "ಕದಿಯುವುದು ಪಾಪ. ಸತ್ತರೂ ಆ ಪಾಪ ನಮ್ಮೊಡನೆ ಬರುತ್ತದೆ" ಎಂದು ನಂಬಿರುತ್ತಾರೆ. ವಾಸ್ತವವಾಗಿ ಕೆಲವು ಪಾಪಗಳನ್ನು ಅನುಭವಿಸುದಕ್ಕಾಗಿಯೇ ನಾವು ಮರುಜನ್ಮವೆತ್ತಬೇಕಾದ ಅವಶ್ಯಕತೆ ಏರ್ಪಡುತ್ತದೆ. ಇಂಥ ಅಭಿಪ್ರಾಯ ಯಾರಿಗಿರುತ್ತದೆಯೋ ಅವನು ಆಸ್ತಿಕ, ಇದರಲ್ಲಿ ನಂಬಿಕೆಯಿಲ್ಲದವನು ನಾಸ್ತಿಕ. ನಾವು ಈಗ ಪೋಲೀಸಿನವನಿಗೆ ಮೋಸಮಾಡಿ ತಪ್ಪಿಸಿಕೊಂಡು ಬಿಡಬಹುದು. ಆದರೆ ಭಗವಂತನಿಗೆ ಮೋಸಮಾಡಿ ಹೋಗಲು ಸಾಧ್ಯವಿಲ್ಲ. ಗೀತೆಯಲ್ಲಿ–

ಈಶ್ವರಃ ಸರ್ವಭೂತಾನಾಂ ಹೃದ್ದೇಶೇಽರ್ಜುನ ತಿಷ್ಠತಿ ||

ಅರ್ಜುನ–ಈಶ್ವರನು ಎಲ್ಲರ ಹೃದಯದಲ್ಲೂ ಇದ್ದಾನೆ—ಎಂದು ಭಗವಂತನೇ ಹೇಳಿದ್ದಾನೆ. ನಮಗೆ ಏನಾದರೂ ತಿಳಿದು ಬಂದರೆ, ಆ ಕ್ಷಣವೇ ಭಗವಂತನಿಗೂ ತಿಳಿದುಬರುತ್ತದೆ. ಮನುಷ್ಯನ ನಡವಳಿಕೆ ಇಂಥಾದ್ದಲ್ಲ. ಒಬ್ಬನು ತಪ್ಪಿತಸ್ಥನೆಂದು ಇನ್ನೊಬ್ಬನಿಗೆ ತಿಳಿಯದೇ ಇರಬಹುದು. ಅವನು ತಪ್ಪಿತಸ್ಥನೆಂದು ಬೇರೊಬ್ಬನು ಹೇಳಿದಾಗಲೇ ಇವನಿಗೆ ಆ ತಿಳುವಳಿಕೆ ಬರುತ್ತದೆ. ಆದರೆ ಭಗವಂತನಾದರೋ ಎಲ್ಲವನ್ನೂ ಒಳಗಿದ್ದುಕೊಂಡೇ ನೋಡುತ್ತಿರುತ್ತಾನೆ. ಇದೇ ಭಗವಂತನು ನೋಡುವುದಕ್ಕೂ ಮನುಷ್ಯನು ನೋಡುವುದಕ್ಕೂ ಇರುವ ವ್ಯತ್ಯಾಸ.

ಕೆಲವರು ಆಸ್ತಿಕರಾಗಿರುತ್ತಾರೆ. ಅವರಿಗೆ ಭಗವಂತನಲ್ಲಿ ಭಕ್ತಿ. ಸತ್ಕರ್ಮಗಳನ್ನು ಮಾಡುತ್ತಾರೆ. ಆದರೆ, ಕಲವು ಸಮಯಗಳಲ್ಲಿ ತಪ್ಪು ಮಾಡಿಬಿಡುತ್ತಾರೆ. ಈಶ್ವರನೂ ಒಂದು ರೀತಿಯಲ್ಲಿ ಅವನ್ನು ಮನ್ನಿಸುತ್ತಾನೆ. ತಾವು ತಪ್ಪು ಮಾಡಬಾರದೆಂದು ತಿಳಿದಿದ್ದೂ ಮನುಷ್ಯ ತಪ್ಪು ಮಾಡುತ್ತಾನೆ. ಇದಕ್ಕೆ ಕಾರಣವೇನು? ಭಗವಂತನೇ–

ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ |
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನಮಿಹವೈರಿಣಮ್ ||

(ರಜೋಗುಣದಿಂದ ಹುಟ್ಟಿದ ಈ ಆಸೆಯೇ ಈ ಕೋಪವೇ ಎಲ್ಲವನ್ನೂ ತಿಂದು ಹಾಕಬಲ್ಲುದು. ಮಹಾಪಾಪವುಳ್ಳದ್ದು. ಇಲ್ಲಿ ಇದನ್ನು ವೈರಿ ಎಂದು ತಿಳಿ).

–ಎಂದು ಹೇಳಿದ್ದಾನೆ. ನಮ್ಮೊಳಗೆ ಇಬ್ಬರು ಶತ್ರುಗಳಿದ್ದಾರೆ. ಅವರು ಒಳಗಡೆಯಿಂದಲೇ ನಮ್ಮನ್ನು ಪೀಡಿಸುತ್ತಾರೆ. ನಾವು ಯಾವುದನ್ನು ಕುರಿತು ಆಸೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪಡಬಾರದೋ ಆ ವಿಷಯದಲ್ಲಿ ನಮಗೆ ಆಸೆಯುಂಟಾಗುತ್ತದೆ. ಆ ಆಸೆಯ ಕಾರಣದಿಂದ ಯಾವುದನ್ನು ಮಾಡಬಾರದೋ, ಯಾವ ವಸ್ತುವನ್ನು ಬಯಸಬಾರದೋ ಅದನ್ನು ಪಡೆಯಲು ಪ್ರಯತ್ನಿಸುತ್ತೇವೆ. ಅದರಿಂದ ನಮಗೆ ಪಾಪ ಬರುತ್ತದೆ. ಇದರಂತೆ ಮತ್ತೊಂದೂ ಕೂಡ ಕೋಪ. ಶ್ರೀರಾಮನು ಸೀತೆಯನ್ನು ವಿವಾಹವಾಗಿ ಅಯೋಧ್ಯೆಗೆ ಹಿಂದಿರುಗುತ್ತಿದ್ದಾನೆ. ದಾರಿಯಲ್ಲಿ ಪರಶುರಾಮರು ಎದುರಾಗುತ್ತಾರೆ. ಅವರು ರಾಮನ ಮೇಲೆ ಕೋಪಗೊಂಡು ಅವನನ್ನು ತಡೆಯುತ್ತಾರೆ. ಇದರಿಂದ ಏನು ತಿಳಿದು ಬರುತ್ತದೆ. ಒಂದು ವಿಷಯವನ್ನು ಕುರಿತು ನಮಗೆ ಎಲ್ಲ ತಿಳಿದಿದ್ದರೂ ತಪ್ಪು ನಡೆದು ಹೋಗುತ್ತದೆ. ಆದ್ದರಿಂದಲೇ ಭಗವಂತ–

ಕಾಮ ಏಷ ಕ್ರೋಧ ಏಷ ರಜೋಗುಣ ಸಮುದ್ಭವಃ ।

ಎಂದು ಹೇಳಿದ್ದು. ಕಾಮ, ಕೋಪ–ಇವೆರಡೂ ಪ್ರಬಲ ಶತ್ರುಗಳು.

ಕಾಮನಿಗೂ ಯಮನಿಗೂ ಒಂದು ವ್ಯತ್ಯಾಸವುಂಟು. ಯಮನು ಬಯಸದವನಾದರೂ ದಂಡನೆಯನ್ನು ಕೊಡುತ್ತಾನೆ. ಕಾಮನಾದರೋ ಪ್ರಿಯನಾಗಿಯೇ ಕಾಣಿಸಿಕೊಂಡು ದಂಡನೆಯನ್ನು ಕೊಡುತ್ತಾನೆ. ಆದ್ದರಿಂದಲೇ ಉಪದೇಶ ಮಾಡುವಾಗ ಭಗವಂತನು "ಕಾಮನನ್ನೂ ಕೋಪವನ್ನೂ ಗೆಲ್ಲಬೇಕು"–ಎಂದು ಹೇಳಿದ್ದು. ಅರ್ಜುನನಿಗೆ ಭಗವಂತನು ಅನೇಕ ಉಪದೇಶಗಳನ್ನು ಮಾಡುತ್ತಾನೆ. ಅವೆಲ್ಲವನ್ನೂ ಕೇಳಿದ ಮೇಲೆ ಅರ್ಜುನನ–

ಚಂಚಲಂ ಹಿ ಮನಃ ಕೃಷ್ಣ ಪ್ರಮಾಥೀ ಬಲವದ್ದೃಢಮ್ ।
ತಸ್ಯಾಹಂ ನಿಗ್ರಹಂ ಮನ್ಯೇ ವಾಯೋರಿವಾ ಸುದುಷ್ಕರಮ್ ॥

(ಕೃಷ್ಣ ! ಮನಸ್ಸು ಅಲೆಯುವ ಸ್ವಭಾವವುಳ್ಳದ್ದು ; ಹೆದರಿಸುವಂಥಾದ್ದು ; ಬಲವುಳ್ಳದ್ದು, ದೃಢವಾದುದು ; ಅದನ್ನು ಹತೋಟಿಯಲ್ಲಿಟ್ಟುಕೊಳ್ಳುವುದು ಗಾಳಿಯನ್ನು ಹಿಡಿದಿಡುವ ಪ್ರಯತ್ನದಂತೆ ಎಂದು ನನಗನ್ನಿಸುತ್ತದೆ.)

"ನೀನಾದರೋ ಎಲ್ಲ ಇಂದ್ರಿಯಗಳನ್ನೂ ವಶದಲ್ಲಿಟ್ಟುಕೋ ಎಂದು ಹೇಳುತ್ತೀಯೆ. ಇದು ನನಗೆ ಅರ್ಥವಾಗುತ್ತಿಲ್ಲ. ಆದರೆ, ಮನಸ್ಸಾದರೋ ಅಲೆಯುವ ಸ್ವಭಾವವುಳ್ಳದ್ದು"–ಎಂದು ಹೇಳುತ್ತಾನೆ.

ನಾವೆಲ್ಲರೂ ನಮ್ಮ ಮನಸ್ಸನ್ನು ನಮ್ಮ ವಶದಲ್ಲಿಟ್ಟುಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ಸಾಧ್ಯವಾಗುವುದಿಲ್ಲ. ಮನಸ್ಸನ್ನು ನಿಗ್ರಹಿಸುವುದು ಗಾಳಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಹಿಡಿದಿಡುವ ಪ್ರಯತ್ನದಂತೆ ಸಾಧ್ಯವಾದುದಲ್ಲ' ಎಂದು ಹೇಳುತ್ತಾನೆ ಅರ್ಜುನ. ಹೇಗೆ ಗಾಳಿಯನ್ನು ಒಂದು ಕಡೆ ನಾವು ಹಿಡಿದಿಡಲಾಗುವುದಿಲ್ಲವೋ ಹಾಗೆಯೇ ಮನಸ್ಸನ್ನು ಒಂದೆಡೆ ಹಿಡಿದಿಡುವುದು ಕಷ್ಟಸಾಧ್ಯವಾದದ್ದು ಎಂದು ಹೇಳುತ್ತಾನೆ ಆವನು.

ಆದಕ್ಕೆ ಭಗವಂತ–

ಅಸಂಶಯಂ ಮಹಾಬಾಹೋ ಮನೋ ದುರ್ನಿಗ್ರಹಂ ಚಲಂ ।
ಅಭ್ಯಾಸೇನ ತು ಕೌಂತೇಯ ವೈರಾಗ್ಯೇಣ ಚ ಗೃಹ್ಯತೇ ॥

(ಅರ್ಜುನ ! ಮನಸ್ಸು ಒಂದು ಕಟ್ಟಿಗೆ ಒಳಪಡುವುದು ಕಷ್ಟ. ಅದು ಅಲೆಯುವ ಸ್ವಭಾವವುಳ್ಳದ್ದು–ಎಂಬುದರಲ್ಲಿ ಸಂದೇಹವಿಲ್ಲ. ಆದರೂ, ಅಭ್ಯಾಸ ಮತ್ತು ವೈರಾಗ್ಯ ದಿಂದ ಆದನ್ನು ನಿಗ್ರಹಿಸಬಹುದು.) ಎಂದು ಹೇಳುತ್ತಾನೆ.

ನಾವು ಒಂದು ವಿಶ್ವವಿದ್ಯಾನಿಲಯಕ್ಕೆ ಸೇರಿ ಓದಿದರೆ ಒಬ್ಬ ದೊಡ್ಡ ವಿದ್ವಾಂಸ ನಾಗಬಹುದು. ಅಷ್ಟೇ. ಕೇವಲ ವಿದ್ವಾಂಸನಾದರೆ ಸಾಲದು. ನಾವು ಕಲಿತ ಓದು ಕೆಲಸಕ್ಕೆ ಬರಬೇಕು ಎನ್ನುವುದಾದರೆ, ಅಭ್ಯಾಸ ಎಂಬುದು ಬೇಕು. ನಾವು ವಿದ್ಯಾರ್ಥಿ ಗಳಲ್ಲೇ ಇದನ್ನು ಕಾಣಬಹುದು. ಕೆಲವರು ಶ್ರದ್ಧೆಯಿಂದ ಓದಿ ಅಭ್ಯಾಸ ಮಾಡಿ ಕೊಳ್ಳಬೇಕು ಎಂಬುದಕ್ಕಾಗಿ ಕಾಲೇಜಿಗೆ ಹೋಗಿ ಬೆಳಗಿನಿಂದ ಸಂಜೆಯವರೆಗೂ ಓದು ತ್ತಾರೆ. ಇನ್ನು ಕೆಲವರು ಸೂರ್ಯೋದಯವನ್ನೇ ನೋಡಿರುವುದಿಲ್ಲ. ಎರಡನೆ ಬಗೆಯ ವಿದ್ಯಾರ್ಥಿಗಳು ವಿದ್ಯೆಯ ಅಭ್ಯಾಸಕ್ಕೆ ಪ್ರಾಮುಖ್ಯತೆಯನ್ನು ಕೊಡದೆ ಇರುವಂತೆ, ನಾವು ಕಲಿತ ವಿದ್ಯೆಯನ್ನು ಪ್ರಯೋಗಕ್ಕೆ ತರದೇ ಹೋದರೆ ಆದರಿಂದಲೂ ಪ್ರಯೋಜನ ವಿಲ್ಲ. ಮತ್ತು ವೈರಾಗ್ಯವೂ ಬೇಕು. ವೈರಾಗ್ಯವಿಲ್ಲದಿದ್ದರೆ ಮನಸ್ಸು ಓಡುತ್ತಲೇ ಇರುತ್ತದೆ. ಹಲವರು–"ನನ್ನ ಮನಸ್ಸು ಒಂದು ಕಡೆ ನಿಲ್ಲುವುದಿಲ್ಲ"–ಎಂದು ಹೇಳು ತ್ತಾರೆ. ಅವರಿಗೆ ಚಿಲ್ಲರೆ ನಾಣ್ಯಗಳನ್ನು ಕೊಟ್ಟು ಎಣಿಸಿ ಎಂದು ಹೇಳಬೇಕು. ಆಗ ತಪ್ಪಾಗುವ ಸಾಧ್ಯತೆಯುಂಟು. ಅದೇ ಕೋಟಿ ರೂಪಾಯಿ ಮೊತ್ತದ ನೂರು ರೂಪಾಯಿಗಳ ನೋಟುಗಳನ್ನೋ ಅಥವಾ ಅದಕ್ಕೆ ಹೆಚ್ಚಾದ ಬೆಲೆಯ ನೋಟು ಗಳನ್ನೋ ಕೊಟ್ಟು ಎಣಿಸ ಹೇಳಿದರೆ, ಆಗ ಗಮನವಿಟ್ಟು ಎಣಿಸುತ್ತಾರೆ. ಏಕೆಂದರೆ, ಅದು ತುಂಬ ಮುಖ್ಯ ಎಂಬ ಭಾವನೆಯಿರುತ್ತದೆ. ಆದ್ದರಿಂದ ದೊಡ್ಡ ಮೊತ್ತದ ಹಣವನ್ನು ಎಣಿಸುವಾಗ ಮನಸ್ಸು ಏಕಾಗ್ರತೆಯಿಂದಿರುತ್ತದೆ. ಹಾಗೆಯೇ ನಾವು ಮನಸ್ಸನ್ನು ನಿಗ್ರಹಿಸಬೇಕು. ಭಗವಂತನನ್ನು ಕುರಿತು ಧ್ಯಾನಿಸಬೇಕೆಂದರೆ, ನಾವು ಮಾಡುವ ಕೆಲಸದ ಮಹತ್ವವನ್ನು ತಿಳಿದುಕೊಳ್ಳಬೇಕು. ನಮ್ಮ ಮನಸ್ಸು ಈಗ ಏಕೆ ಚಲಿಸುತ್ತಲೇ ಇರುತ್ತದೆ ಎಂದರೆ, ಭಗವಂತನ ವಿಷಯದಲ್ಲಿರುವ ಮಹತ್ವವನ್ನು ನಾವು

Sri Vidyabharathi Book Centre, Sringeri

CC-O. In Public Domain. Digitized by eGangotri

ತಿಳಿದಿಲ್ಲ. ಅಂದರೆ, ಈಶ್ವರನ ವಿಷಯದಲ್ಲಿ ಅಷ್ಟು ನಂಬಿಕೆಯಿಲ್ಲ. ಆದ್ದರಿಂದಲೇ, ನಾನು ಮೊದಲೇ ನಂಬಿಕೆಯನ್ನು ಕುರಿತು ಹೇಳಿದೆ. ಈಶ್ವರನ ವಿಷಯದಲ್ಲಿ ನಮಗೆ ಪ್ರೇಮವಿರಬೇಕು. ಪ್ರೇಮವಿದ್ದು ಅದನ್ನು ಅಭ್ಯಾಸ ಮಾಡುತ್ತಾ ಬಂದರೆ, ತಾನಾಗಿ ಮನಸ್ಸಿನ ನಿಗ್ರಹವಾಗುತ್ತದೆ. ಸಂನ್ಯಾಸಿಗಳು ಯಾವ ವಿಷಯವನ್ನೂ ಅಂಟಿಸಿಕೊಳ್ಳಬಾರದು. ಮನಸ್ಸನ್ನು ಆಕರ್ಷಿಸುವ ಯಾವ ವಸ್ತು ಹತ್ತಿರ ಬಂದರೂ ಮನಸ್ಸು ಅದರ ಕಡೆ ಹೋಗದಂತೆ ಇರಬೇಕು. "ಇದು ನನಗೆ ಒಳ್ಳೆಯದಲ್ಲ"- ಎಂದು ಅವರು ತಿಳಿದುಕೊಳ್ಳಬೇಕು, ಇದೇ ವೈರಾಗ್ಯವೆನಿಸಿಕೊಳ್ಳುತ್ತದೆ.

ಓದಿ ಪರೀಕ್ಷೆಯಲ್ಲಿ ಪಾಸ್ ಆದಮೇಲೆ ಓದಿದ ಫಲ ಸಿಗುತ್ತದೆ. ಅದರಂತೆಯೇ ಬಾಳ್ವೆಯಲ್ಲಿಯೂ ನಾವು ಮನುಷ್ಯ ಜನ್ಮವನ್ನು ಸರಿಯಾಗಿ ಮನುಷ್ಯರಾಗಿ ನಡೆಸಿಕೊಂಡರೆ, ಸದ್ಗತಿ ಸಿಗುತ್ತದೆ. ಪ್ರಾಣಿಗಳಂತೆ ಜೀವನ ನಡೆಸಬಾರದು. ನಿಯಮಗಳನ್ನು ಪಾಲಿಸಬೇಕು. ಹಾಗೆ ನಿಯಮಗಳನ್ನು ಪರಿಪಾಲಿಸಲು ಮನಸ್ಸಿನ ಶಿಸ್ತು ಬೇಕು. ಅದಕ್ಕೆ ನಾನು ದಾರಿಯನ್ನು ಹೇಳಿದೆ.

ಪ್ರಾಣಿಗಳು ತಾವು ಹಿಂದಿನ ಜನ್ಮದಲ್ಲಿ ಮಾಡಿದ ಕರ್ಮಗಳನ್ನು ಅನುಭವಿಸಿಯೇ ತೀರಬೇಕು. ಮನುಷ್ಯನ ಬಾಳ್ವೆಯಲ್ಲಿ ಅಂಥ ಒಂದು ಕಟ್ಟಳೆ ಇಲ್ಲ. ಒಬ್ಬನ ಜಾತಕವನ್ನು ನೋಡಿದ ಮೇಲೆ ಅವನಿಗೆ ಆಯುಸ್ಸು ಕಡಿಮೆ ಎಂದು ತಿಳಿದರೂ, ವರಾಹಮಿಹರರು ಹೇಳುವಂತೆ, ಆತ ತನ್ನ ಆಯುಸ್ಸನ್ನು ದೀರ್ಘಪಡಿಸಿಕೊಳ್ಳಲಾಗುತ್ತದೆ. ಒಬ್ಬಾತ ಹಿಂದಿನ ಜನ್ಮದಲ್ಲಿ ಹಲವು ವಿಧಗಳಾದ ಪಾಪಗಳನ್ನು ಮಾಡಿರಬಹುದು. ಪಾಪದ ಕಾರಣದಿಂದ ಅವನಿಗೆ ಈಗ ಆಯುಸ್ಸು ಕಡಿಮೆಯಿರಬಹುದು. ಆದರೆ, ಆದರಂತೆ ನಡೆಯಬೇಕು ಎಂಬ ನಿಯತಿಯಿಲ್ಲ.

ಯಥಾಹ್ಯೇಕೇನ ಚಕ್ರೇಣ ನ ರಥಸ್ಯ ಗತಿರ್ಭವೇತ್ ।
ಏವಮ್ ಪುರುಷಕಾರೇಣ ವಿನಾ ದೈವಂ ನ ಸಿದ್ಧ್ಯತಿ ॥

(ಹೇಗೆ ರಥವು ಕೇವಲ ಒಂದು ಚಕ್ರದಿಂದ ಚಲಿಸಲಾರದೋ, ಹಾಗೆಯೇ ಪುರುಷನ ಸಹಾಯವಿಲ್ಲದೆ ವಿಧಿ ಕೆಲಸ ಮಾಡಲಾರದು.)

ಮನುಷ್ಯನ ಜೀವನದಲ್ಲಿ ಸ್ವಪ್ರಯತ್ನ ಮತ್ತು ವಿಧಿ-ಇವೆರಡೂ ಸೇರಿ ಕೆಲಸ ಮಾಡುತ್ತವೆ. ಹೇಗೆ ರಥಕ್ಕೆ ಎರಡು ಚಕ್ರಗಳಿರುತ್ತವೆಯೋ, ಅದರಂತೆಯೇ ಬಾಳಿನಲ್ಲಿ ಮನುಷ್ಯಪ್ರಯತ್ನ ಮತ್ತು ವಿಧಿ ಎರಡು ಚಕ್ರಗಳಾಗಿರುತ್ತವೆ. ಒಂದನ್ನು ಮಾತ್ರ ವಲಂಬಿಸಿದರೆ ಕೆಲಸಗಳು ನಡೆಯುವುದಿಲ್ಲ. ಈಗ ಪಾಪವಿದೆ ಎಂಬ ಕಾರಣದಿಂದ

Sri Vidyabharathi Book Centre, Shimoga

CC-O. In Public Domain. Digitized by eGangotri

ಆಯಸ್ಸು ಕಡಿಮೆ ಎಂದು ತೀರ್ಮಾನವಾಗಿಬಿಟ್ಟಿದೆ. ಇನ್ನೇನು ? ಈ ವಿಷಯ ತಿಳಿದುಹೋದದ್ದರಿಂದ ಇನ್ನು ಸತ್ಪುರುಷರ ಸೇವೆ ಮಾಡಿ ಅವರ ಅನುಗ್ರಹಕ್ಕೆ ಪಾತ್ರನಾಗಬೇಕು. ಹಾಗೆಯೇ ಈಶ್ವರಾರಾಧನೆಯನ್ನು ಮಾಡಿ ಈಶ್ವರನ ಅನುಗ್ರಹಕ್ಕೆ ಪಾತ್ರನಾಗಿಬಿಡಬೇಕು. ಹಿರಿಯರ ಆಶೀರ್ವಾದ ಈಶ್ವರಾನುಗ್ರಹ–ಇದಕ್ಕೆ ಪಾತ್ರನಾಗಿಬಿಟ್ಟರೆ ಆಗ ನಿಜವಾಗಿ ದೀರ್ಘಾಯುಷ್ಮಾನ್ ಆಗಿಯೇಬಿಡಬಹುದು. ಹಾಗಾದರೆ ಜಾತಕವನ್ನೇಕೆ ನೋಡಬೇಕು ? ಜ್ಯೋತಿಶ್ಶಾಸ್ತ್ರವಾದರೂ ಏತಕ್ಕೆ ?–ಎಂಬ ಪ್ರಶ್ನೆಗಳು ಏಳುತ್ತವೆ. ಅದನ್ನು ನೋಡುವುದಕ್ಕೆ ಕಾರಣವೇನೆಂದರೆ–ಫಲವನ್ನು ನಾವು ಬದಲಾಯಿಸಿಕೊಳ್ಳಬಹುದೇ–ಎಂದು ತಿಳಿದುಕೊಳ್ಳುವುದಕ್ಕಾಗಿ.

ವೈದ್ಯರಲ್ಲಿಗೆ ನಾವು ಪರೀಕ್ಷೆ ಮಾಡಿಸಿಕೊಳ್ಳಲು ಹೋದಾಗ ಅವರು ನಮ್ಮನ್ನು ಪರೀಕ್ಷಿಸಿ–ಇಂಥ ವ್ಯಾಧಿ ಇದೆ–ಎಂದು ಹೇಳುತ್ತಾರೆ. ವೈದ್ಯರಲ್ಲಿಗೆ ನಾವು ಹೋದದ್ದೇಕೆ ? ಯಾವ ವ್ಯಾಧಿಯಿದೆಯೆಂದು ತಿಳಿದುಕೊಳ್ಳಲು ಮಾತ್ರ ಹೋದೆವೇ ? ಇಲ್ಲ. ಆ ವ್ಯಾಧಿ ಗುಣವಾಗುವುದಕ್ಕೆ ಯಾವ ಔಷಧಿಯನ್ನು ತೆಗೆದುಕೊಳ್ಳಬೇಕು ಎಂಬುದನ್ನು ತಿಳಿದುಕೊಳ್ಳುವುದಕ್ಕಾಗಿ ಹೋದೆವು. ಅದರಂತೆಯೇ, ಒಬ್ಬನಿಗೆ ತನಗೆ ಆಯಸ್ಸು ಕಡಿಮೆ ಇದೆ ಎಂದು ತಿಳಿದುಬಂದರೆ, ಆಯಸ್ಸನ್ನು ಹೆಚ್ಚಿಸಲು ಸತ್ಪುರುಷರ ಸೇವೆ, ಈಶ್ವರಾರಾಧನೆ–ಇವನ್ನು ಮಾಡಬೇಕು. ಆದ್ದರಿಂದ ಜ್ಯೋತಿಶ್ಶಾಸ್ತ್ರ ತಪ್ಪೆಂದು ಹೇಳುವಂತಿಲ್ಲ. ಪ್ರಾಣಿಗಳು ಯಾವ ಸುಖ–ದುಃಖಗಳನ್ನು ಅನುಭವಿಸಬೇಕೋ ಅವನ್ನು ಅವು ಅನುಭವಿಸಿಯೇ ತೀರಬೇಕು.

ಒಬ್ಬನು ಪರೀಕ್ಷೆಯಲ್ಲಿ ಉತ್ತೀರ್ಣನಾಗಬೇಕಾದರೆ, ಮೊದಲು ಪರೀಕ್ಷೆಯಲ್ಲಿ ಬರೆಯಲು ಕೂರಬೇಕು. ಅನಂತರ ಚೆನ್ನಾಗಿ ಬರೆಯಬೇಕು. ಮಧ್ಯೆ ಏನಾದರೂ ದೇಹಾಲಸ್ಯವಾದರೆ ನಮ್ಮನ್ನು ಪರೀಕ್ಷೆಯಲ್ಲಿ ಬರೆಯಲು ಬಿಡುವುದಿಲ್ಲ. ಆಗ ಪರೀಕ್ಷೆಯಲ್ಲಿ ಉತ್ತೀರ್ಣನಾಗುವುದು ಸಾಧ್ಯವಿಲ್ಲ. ಅದರಂತೆಯೇ ಒಬ್ಬನಿಗೆ ಜಾತಕದಂತೆ ದೀರ್ಘಾಯುಸ್ಸು ಇದೆ. ಆದರೆ, ಸಿಕ್ಕಿದಂತೆ ಜೀವನ ನಡೆಸಿದರೆ, ಅವನು ಅಷ್ಟು ಹೆಚ್ಚು ಕಾಲ ಬದುಕುವುದು ಆಗುವುದಿಲ್ಲ. ನಾವು ಹೇಗೆ ನಮ್ಮ ಕಾರ್ಯಗಳನ್ನು ನಿರ್ವಹಿಸುತ್ತೇವೋ ಹಾಗೆಯೇ ಈಶ್ವರನ ವಿಷಯದಲ್ಲಿಯೂ ತಾತ್ಪರ್ಯವಿಟ್ಟುಕೊಂಡು ಈಶ್ವರಾರಾಧನೆ ಮಾಡುತ್ತಿರಬೇಕು.

ಒಂದು ಪ್ರದೇಶದಲ್ಲಿ ಮಳೆಯಿಲ್ಲ ಎಂದುಕೊಳ್ಳೋಣ. "ಮಳೆ ಇಲ್ಲ ಮಳೆ ಇಲ್ಲ"–ಎಂದು ಗೋಳಿಡುತ್ತಿದ್ದರೆ ನಾವು ಮನುಷ್ಯರೆ ? ಆ ಪ್ರದೇಶಕ್ಕೆ ಹೋಗಿ ಜನರಿಗೆ ಸಹಾಯಮಾಡುವ, ಅವರ [illegible] ಪ್ರಾರ್ಥನೆ ಮಾಡುವ ಕಾರ್ಯಗಳನ್ನು ಮಾಡಿದರೆ ಮಾತ್ರ ನಾವು ಮನುಷ್ಯ ಜನ್ಮವನ್ನು ಸರಿಯಾಗಿ ಉಪಯೋಗಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡವರಾಗುತ್ತೇವೆ. ಒಬ್ಬನು ಪುಣ್ಯ ಮಾಡಿದರೆ ಅವನು ಒಳಿತನ್ನು ಹೊಂದುತ್ತಾನೆ. ಅದರಂತೆಯೇ, ಒಳ್ಳೆಯ ಕಾರ್ಯಗಳನ್ನು ಮಾಡದೆ, ಕೆಟ್ಟದ್ದನ್ನೇ ಮಾಡಿದರೆ, ಪಾಪವೇ ಬರುತ್ತದೆ. ಅನಂತರ ಕಷ್ಟಪಡಬೇಕಾಗುತ್ತದೆ. ಇದೆಲ್ಲವನ್ನೂ ನಾವು ತಿಳಿದುಕೊಳ್ಳಬೇಕು.

ಕೆಲವು ನಿಯಮಗಳನ್ನು ಎಲ್ಲರೂ ಎಲ್ಲ ಕಾಲಗಳಲ್ಲಿಯೂ ಅನುಸರಿಸಬೇಕು. ಅದಕ್ಕಾಗಿ ಎಂಟು ಧರ್ಮಗಳು ವಿಧಿಸಲ್ಪಟ್ಟಿವೆ. ಅದರಲ್ಲಿ ಒಂದನ್ನು ನೋಡೋಣ–

ದಯಾ ಸರ್ವಭೂತೇಷು ॥

ಸರ್ವಭೂತಗಳಲ್ಲಿಯೂ ಕರುಣೆಯನ್ನು ತೋರಿಸಿ ಬಾಳಬೇಕು. ದಯೆ ಎಂಬುದು ಒಂದು ಮುಖ್ಯವಾದ ಗುಣ. ಇದರಂತೆಯೇ ಇತರ ಗುಣಗಳನ್ನೂ ಶಾಸ್ತ್ರದಲ್ಲಿ ಹೇಳಿದ್ದಾರೆ. ಈ ಎಂಟು ಗುಣಗಳಿಲ್ಲದೆ ಇನ್ನು ಬೇರೆ ಯಾವ ಸಂಸ್ಕಾರಗಳಿದ್ದರೂ ಅವುಗಳಿಂದ ಉಪಯೋಗವಿಲ್ಲ. ಆದ್ದರಿಂದ–

ಯಸ್ಯೈತೇ ಚಾತ್ವಾರಿಂಶತ್ ಸಂಸ್ಕಾರಾಃ ನ ಚಾಷ್ಟಾವಾತ್ಮಗುಣಾಃ ।
ನ ಸ ಬ್ರಹ್ಮಣಃ ಸಾಯುಜ್ಯಂ ಸಾಲೋಕ್ಯಂ ಚ ಗಚ್ಛತಿ ॥

[ಯಾರಲ್ಲಿ ಈ 24 (ಜಾತಕರ್ಮ, ನಾಮಕರಣ, ಮುಂತಾದ) ಸಂಸ್ಕಾರಗಳಿದ್ದರೂ ಎಂಟು ಆತ್ಮಗುಣಗಳು ಇರುವುದಿಲ್ಲವೋ ಅವನು ಬ್ರಹ್ಮಸಾಯುಜ್ಯವನ್ನೂ ಪಡೆಯುವುದಿಲ್ಲ. ಬ್ರಹ್ಮಲೋಕಕ್ಕೂ ಹೋಗುವುದಿಲ್ಲ.]

ಸದ್ಗುಣಗಳಲ್ಲಿ ದಯೆಯೆಂಬುದೇ ಮುಖ್ಯವಾದದ್ದು. ನಾವು ಯಾರಾದರೂ ಕಷ್ಟಪಡುವುದನ್ನು ನೋಡಿದರೆ, ನಮ್ಮಿಂದ ಸಹಾಯ ಮಾಡಬೇಕು. ಹಾಗಾದರೆ ಯಾರನ್ನೂ ದಂಡಿಸುವಂತಿಲ್ಲವೇ ?– ಎಂಬ ಪ್ರಶ್ನೆ ಬರುತ್ತದೆ. ಮನುದಂಡನೆಯನ್ನು ವಿಧಿಸುವ ಅಧಿಕಾರವನ್ನು ಅರಸನಿಗೆ ಕೊಟ್ಟಿದ್ದಾನೆ. ಅವನು ಒಂದು ಕಡೆ–

ಅದಂಡ್ಯಾನ್ ದಂಡಯನ್ ರಾಜಾ ದಂಡ್ಯಾಂಶ್ಚೈವಾಪ್ಯದಂಡಯನ್ ।
ಅಯಶೋ ಮಹದಾಪ್ನೋತಿ ನರಕಂ ಚೈವ ಗಚ್ಛತಿ ॥

[ತಪ್ಪು ಮಾಡದವನನ್ನು ದಂಡಿಸುವ, ಶಿಕ್ಷಾರ್ಹರನ್ನು ದಂಡಿಸದ ರಾಜನು ಅಪಕೀರ್ತಿಯನ್ನು ಹೊಂದಿ ನರಕಕ್ಕೆ ಹೋಗುತ್ತಾನೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

—ಎಂದು ಹೇಳುತ್ತಾನೆ. ಯಾರಿಗೆ ದಂಡನೆಯನ್ನು ವಿಧಿಸಬೇಕೋ, ಅವರನ್ನು ದಂಡಿಸಲೇಬೇಕು. ಅದರಂತೆ ಯಾರು ಶಿಕ್ಷಾರ್ಹರಲ್ಲವೋ ಅವರಿಗೆ ಎಂದಿಗೂ ದಂಡನೆಯನ್ನು ವಿಧಿಸಬಾರದು. ಯಾರಿಗೆ ಶಾಸ್ತ್ರದಲ್ಲಿ ಹೆಚ್ಚಾದ ನಂಬಿಕೆಯಿದೆಯೋ ಅಂಥವನು ಯಾವ ಕಾರಣಕ್ಕಾಗಿಯೂ ನಿರಪರಾಧಿಯನ್ನು ದಂಡಿಸುವುದಿಲ್ಲ" ಭಗವಂತನೊಬ್ಬನಿದ್ದಾನೆ. ಅವನಿಗೆ ನಾವು ಉತ್ತರ ಕೊಡಬೇಕು"—ಎಂದು ಸರಕಾರದಲ್ಲಿರುವ ಪ್ರತಿಯೊಬ್ಬರೂ ಜ್ಞಾಪಕದಲ್ಲಿಟ್ಟುಕೊಂಡಾಗ ಮಾತ್ರ ಆಡಳಿತ ಚೆನ್ನಾಗಿ ನಡೆಯುತ್ತದೆ.

ಇನ್ನು ಬೇರೊಂದು ವಿಷಯವನ್ನು ಹೇಳಬಯಸುತ್ತೇನೆ. ನಮ್ಮ ಭಾರತದೇಶದಲ್ಲಿ ಪ್ರಾರ್ಥನಾ ಸ್ಥಳಗಳಲ್ಲಿಯೂ, ನನ್ನ ಚಂದ್ರಮೌಳೀಶ್ವರರ ಪೂಜೆಯ ಹೊತ್ತಿನಲ್ಲಿಯೂ ಎಲ್ಲರೂ—

ಆ ಸೇತೋಃ ಆ ಹಿಮಾಚಲಮ್ ಸರ್ವೇಷಾಂ ಮಹಾಜನಾನಾಂ
ಕ್ಷೇಮಸ್ಥೈರ್ಯ ವಿಜಯ ವೀರ್ಯ........

ಎಂದು ಹೇಳಿ ಸಂಕಲ್ಪ ಮಾಡುತ್ತೇವೆ. ಅದರಂತೆಯೇ—

ಸರ್ವೇ ಜನಾಃ ಸುಖಿನೋಭವಂತು

ಎಂದು ಹೇಳಿ ಪ್ರಾರ್ಥನೆ ಮುಗಿಸುತ್ತೇವೆ. ಇದರ ಉದ್ದೇಶವೇನು ? ಲೋಕವೆಲ್ಲವೂ ಚೆನ್ನಾಗಿರಬೇಕೆಂಬುದೇ. ಆದರೆ ಈಗ ಪ್ರಾರ್ಥನೆಯಲ್ಲಿ ಹಿಮಾಲಯದಿಂದ ಕನ್ಯಾಕುಮಾರಿಯವರೆಗೆ ಇರುವ ಎಲ್ಲರಿಗೂ ಒಳ್ಳೆಯದಾಗಲಿ ಎಂದು ಹೇಳುತ್ತೇವೆ. ಲೋಕವೆಲ್ಲಕ್ಕೂ ಒಳ್ಳೆಯದಾಗಬೇಕಾಗಿಲ್ಲ ಎಂಬುದಲ್ಲ. ಆದರೆ, ಸೇತುವಿನಿಂದ ಹಿಡಿದ ಹಿಮಾಲಯದವರೆಗೆ ಎಂಬುದನ್ನು ವಿಶೇಷವಾಗಿ ಹೇಳುತ್ತೇವೆ. ಈಗ "ಈತ ಗುಜರಾತಿನವನು, ಇನ್ನೊಬ್ಬನು ಮದರಾಸಿಗೆ ಸೇರಿದವನು, ಇವನು ಇನ್ನೆಲ್ಲಿಯವನೊ"—ಎಂದು ತಿಳಿಯಬಾರದು. "ನಾವೆಲ್ಲರೂ ಭಾರತ ದೇಶಕ್ಕೆ ಸೇರಿದವರು. ನಾವೆಲ್ಲರೂ ಭಾರತೀಯರು"—ಎಂಬ ಭಾವನೆಯನ್ನು ಮನಸ್ಸಿನಲ್ಲಿರಿಸಿಕೊಳ್ಳಬೇಕು.

ಯೂಯಮ್ ಯೂಯಮ್ ವಯಂ ವಯಂ

(ನೀವು ನೀವೇ, ನಾವು ನಾವೇ)

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಇದುವರೆಗೂ ನೀವು ನೀವೇ, ನಾವು ನಾವೇ ಎಂದು ಬೇರೆ ಬೇರೆಯಾಗಿ ತಿಳಿದು ಕೊಂಡಿದ್ದೇವೆ. ಹಾಗಿರಬಾರದು. ಕಾಶಿಯಲ್ಲಿ ದಕ್ಷಿಣದೇಶಕ್ಕೆ ಸೇರಿದ ಹಲವು ಬ್ರಾಹ್ಮಣರಿದ್ದಾರೆ. ಅವರನ್ನು ಕುರಿತು ಯಾರಿಗೂ ಯಾವ ಬಗೆಯಾದ ಬೇಸರವೂ ಇಲ್ಲ. ಆದರಂತೆಯೇ ದಕ್ಷಿಣದೇಶದಲ್ಲಿ ಉತ್ತರದೇಶಕ್ಕೆ ಸೇರಿದ ಹಲವು ಮಾರ್ವಾಡಿಗಳು ಇದ್ದಾರೆ. ಅವರನ್ನು ಕುರಿತು ಯಾರಿಗೂ ದ್ವೇಷವಿಲ್ಲ. ಹೀಗೆ ಯಾರ ಮೇಲೂ ದ್ವೇಷವಿಲ್ಲದೆ ನಾವು ಬಾಳಬೇಕು. ಮನುಷ್ಯರ ನಡುವೆ ಬೇರೆ ಬೇರೆಯಾಗುವುದಕ್ಕೆ ಕಾರಣವಾದ ದ್ವೇಷವನ್ನು ನಿವಾರಿಸಿದರೆ ಅದು ಒಳತಿಗೆ ಕಾರಣವಾಗುತ್ತದೆ. ನಮ್ಮ ಬೇರೇತನವನ್ನು ಪ್ರಶಂಸಿಸುತ್ತಿದ್ದರೆ ನಮ್ಮ ದೇಶದ ಬಲ ಕಡಿಮೆಯಾಗುತ್ತದೆ. ಒಂದಾ ಗಿದ್ದುಕೊಂಡು ಈಶ್ವರನ ವಿಷಯದಲ್ಲಿ ವಿಶೇಷವಾದ ಭಕ್ತಿಯನ್ನಿಟ್ಟುಕೊಂಡಿದ್ದರೆ ಎಲ್ಲರಿಗೂ ಹಿತವಾಗುತ್ತದೆ.

ಹರ ನಮಃ ಪಾರ್ವತೀಪತಯೇ । ಹರಹರ ಮಹಾದೇವ ॥

ಜಾನಕೀಕಾಂತಸ್ಮರಣಂ । ಜಯಜಯರಾಮ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ವರಗಳನ್ನು ಕೊಡುವವಳು ಅಂಬಿಕೆ

ಯಾ ಶಾರದಾಂಬೇತ್ಯಭಿದಾಂ ವಹಂತೀ
ಕೃತಾಂ ಪ್ರತಿಜ್ಞಾಂ ಪರಿಪಾಲಯಂತೀ ।
ಅದ್ಯಾಪಿ ಶೃಂಗೇರಿಪುರೇ ವಸಂತೀ
ಪ್ರದ್ಯೋತತೇಽಭೀಷ್ಟ ವರಾನ್ ದಿಶಂತೀ ॥

[ಯಾರು ಶಾರದಾಂಬೇ ಎಂಬ ಹೆಸರನ್ನು ಹೊಂದಿರುವಳೋ, ತಾನು ಮಾಡಿದ ಪ್ರತಿಜ್ಞೆಯನ್ನು ಪರಿಪಾಲಿಸುತ್ತಿರುವಳೋ, ಇಂದಿಗೂ ಶೃಂಗೇರಿಯಲ್ಲಿ ವಾಸ ಮಾಡುತ್ತಿರುವಳೋ, ಆಕೆ, ಜನರ ಇಷ್ಟಾರ್ಥವನ್ನು ದಯಾಪಾಲಿಸಿ ಪ್ರಕಾಶಿಸುತ್ತಿದ್ದಾಳೆ.]

ತಾಂ ಶಾರದಾಂ ನಮಾಮಿ–ಅಂಥ ಶಾರದೆಗೆ ನಮಸ್ಕರಿಸುತ್ತೇನೆ.

ಶಂಕರರು ಎಂಥವರು ? ಅವರು ತಮ್ಮ ಬಾಳನ್ನು ಹೇಗೆ ನಡೆಸಿದರು ? ಅವರು ತಮ್ಮ ಬಾಳಿನಲ್ಲಿ ಎತ್ತಿತೋರಿಸಿದ ಮೌಲ್ಯಗಳಾವುವು ? ಇಂಥ ವಿಷಯಗಳನ್ನು ನಾವು ಸ್ವತಃ ತಿಳಿದುಕೊಳ್ಳಲು ಸಾಧ್ಯವಿಲ್ಲ. ಇವುಗಳನ್ನು ತಿಳಿದುಕೊಳ್ಳಬೇಕಾದರೆ ಪ್ರಮಾಣಭೂತವಾದ ಯಾವುದಾದರೂ ಗ್ರಂಥವನ್ನು ನಾವು ಓದಿ ತಿಳಿದುಕೊಳ್ಳಬೇಕು. ಈಗ ಅಂತಹ ಪ್ರಸಿದ್ಧವಾದ ಗ್ರಂಥ "ಮಾಧವೀಯ ಶಂಕರ ವಿಜಯ". ಈ ಪುಸ್ತಕದಲ್ಲಿ ನಾನು ಮೇಲೆ ಹೇಳಿದ ಶ್ಲೋಕ ಬರುತ್ತದೆ. ಆ ಶ್ಲೋಕ ಹೇಗೆ ಬಂತು ಎಂಬುದನ್ನು ಕುರಿತು ವಿಚಾರ ಮಾಡೋಣ.

ಮಂಡನಮಿಶ್ರರೆಂಬುವರು ಶಂಕರರ ಜೊತೆ ವಾದ ಮಾಡಿ ಸೋಲುತ್ತಾರೆ. ಶಾರದಾಂಬೆಯೂ ಸೋಲುವಂತಾಗುತ್ತದೆ. ಆಗ ಶಾರದಾಂಬೆ ಬ್ರಹ್ಮಲೋಕಕ್ಕೆ ಹಿಂದಿರುಗಲು ಸಿದ್ಧಳಾಗುತ್ತಾಳೆ. ಆಗ ಭಗವತ್ಪಾದರು ತಮ್ಮ ಮಂತ್ರ ಶಕ್ತಿಯಿಂದ ಅಂಬಿಕೆಯನ್ನು ತಡೆಯುತ್ತಾರೆ. ಅನಂತರ ಅಂಬಿಕೆಯನ್ನು ಕುರಿತು ಅವರು– "ನಾನು ಎಲ್ಲಿ ಆಶ್ರಮವನ್ನು ಸ್ಥಾಪಿಸುತ್ತೇನೋ, ಅಲ್ಲಿ ನಿನ್ನ ಸಾನ್ನಿಧ್ಯವಿರಬೇಕು"– ಎಂದು ಪ್ರಾರ್ಥಿಸುತ್ತಾರೆ. ಅದನ್ನು ಮನಸ್ಸಿನಲ್ಲಿಟ್ಟುಕೊಂಡೇ ಈ ಶ್ಲೋಕದಲ್ಲಿ ಹೇಳಿರುವಂತೆ ಅಂಬಿಕೆಯ ವರ್ಣನೆ ಬರುತ್ತದೆ. ಒಂದೊಂದು ಪಾದವನ್ನೂ ಪರಿಶೀಲಿಸೋಣ.

ಅಂಬಿಕೆಯ ಹೆಸರು ಶಾರದಾ. ಆದ್ದರಿಂದಲೇ ಆಕೆಯನ್ನು ಕುರಿತು ಶ್ಲೋಕದಲ್ಲಿ–ಯಾ ಶಾರದಾಂಬೇತ್ಯಭಿದಾಂ ವಹಂತೀ–ಎಂದು ಹೇಳಲಾಗಿದೆ. ಅನಂತರ,– ಕೃತಾಂ ಪ್ರತಿಜ್ಞಾಂ ಪರಿಪಾಲಯಂತೀ–ಎಂದು ಮುಂದಿನ ಸಾಲು ಬರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವತ್ಪಾದರು ಮಾಡಿದ ಪ್ರಾರ್ಥನೆಯಿಂದ ಅಂಬಿಕೆಯು ತೃಪ್ತಿಹೊಂದಿ-"ನಿನ್ನ ಪ್ರಾರ್ಥನೆಯನ್ನು ನಾನು ಅಂಗೀಕರಿಸಿದ್ದೇನೆ. ನೀನು ಎಲ್ಲಿ ಆಶ್ರಮವನ್ನು ಸ್ಥಾಪಿಸುತ್ತೀಯೋ. ಅಲ್ಲಿ ನನ್ನ ಸಾನ್ನಿಧ್ಯವನ್ನು ಅನುಗ್ರಹಿಸುತ್ತೇನೆ"-ಎಂಬ ಪ್ರತಿಜ್ಞೆಯನ್ನು ಮಾಡಿದ್ದಳು. ಆ ಪ್ರತಿಜ್ಞೆಯನ್ನು ಇಂದಿಗೂ ಪರಿಪಾಲಿಸಿಕೊಂಡು ಬರುತ್ತಿದ್ದಾಳೆ. ಆದ್ದರಿಂದಲೇ ಆಕೆಯನ್ನು ಕುರಿತು--

ಕೃತಾಂ ಪ್ರತಿಜ್ಞಾಂ ಪರಿಪಾಲಯಂತೀ
ಅದ್ಯಾಪಿ ಶೃಂಗೇರಿಪುರೇ ವಸಂತೀ ।

ಎಂದು ಹೇಳಲಾಗಿದೆ. ಮುಂದಿನ ಸಾಲಿನಲ್ಲಿ-

ಪ್ರದ್ಯೋತತೇಽಭೀಷ್ಟವರಾನ್ ದಿಶಂತೀ ॥

ಎಂದು ಬರುತ್ತದೆ. ಅಂಬಿಕೆ ಭಕ್ತರಿಗೆ ಅವರು ಯಾವ ವರವನ್ನು ಕೇಳುತ್ತಾರೆ, ಅವನ್ನು ಕರುಣಿಸುತ್ತಾಳೆ.

ಈ ಶ್ಲೋಕದಿಂದ ಏನು ತಿಳಿದು ಬರುತ್ತದೆಯೆಂದರೆ, ಎಲ್ಲೆಲ್ಲಿ ಭಗವತ್ಪಾದರು ಪೀಠಗಳನ್ನು ಸ್ಥಾಪಿಸಿದರೋ ಅಲ್ಲೆಲ್ಲ ಅಂಬಿಕೆ ತನ್ನ ಸಾನ್ನಿಧ್ಯವನ್ನು ಅನುಗ್ರಹಿಸಿದ್ದಾಳೆ-ಎಂದು. ಶೃಂಗೇರಿಯಲ್ಲಿ ಶಾರದಾಂಬೆಗೆ ಬಹು ಸುಂದರವಾದ ದೇವಸ್ಥಾನವೊಂದಿದೆ. ಆದ್ದರಿಂದಲೇ ಅದಕ್ಕೆ ಶಾರದಾ ಪೀಠ ಎಂದು ಹೆಸರು ಬಂದಿದೆ. ಆದ್ದರಿಂದಲೇ ನಾವೆಲ್ಲರೂ ಶಾರದಾಂಬೆಯ ಉಪಾಸಕರು.

ಶಾರದಾಂಬೆಗೂ ಲಲಿತಾಂಬೆಗೂ ಯಾವುದಾದರೂ ವ್ಯತ್ಯಾಸವುಂಟೋ ? ಇಲ್ಲ, ಪರಾಶಕ್ತಿಯ ಬೇರೆ ಬೇರೆ ರೂಪಗಳೇ ಅವು.

ಸೌಂದರ್ಯಲಹರಿಯಲ್ಲಿ-"ಅಂಬಿಕೆ ತನ್ನ ಕೈಗಳಲ್ಲಿ ಜಪಮಾಲೆ, ಅಭಯ ಹಸ್ತ ಮುಂತಾದುವನ್ನು ಧರಿಸಿ ಭಕ್ತರೆಲ್ಲರನ್ನೂ ಅನುಗ್ರಹಿಸುತ್ತಿದ್ದಾಳೆ"-ಎಂದು ವರ್ಣನೆ ಬರುತ್ತದೆ. ಮತ್ತು-

ಶರಜ್ಜ್ಯೋತ್ಸ್ನಾಶುದ್ಧಾಂ ಶಶಿಯುತ ಜಟಾಜೂಟಮುಕುಟಾಂ
ವರತ್ರಾಸತ್ರಾಣ ಸ್ಫಟಿಕ ಘುಟಿಕಾ ಪುಸ್ತಕ ಕರಾಂ ।
ಸಕೃನ್ನತ್ವಾನತ್ವಾ ಕಥಮಿವ ಸತಾಂ ಸಂನಿದಧತೇ
ಮಧುಕ್ಷೀರ ದ್ರಾಕ್ಷಾ ಮಧುರಿಮ ಧುರೀಣಾಃ ಫಣಿತಯಃ ॥

Sri Vidyabharathi Book Centre, Sringeri

CC-O. In Public Domain. Digitized by eGangotri

ಶರತ್ಕಾಲದ ಬೆಳದಿಂಗಳಂತೆ ಶುಭ್ರಳಾಗಿರುವವಳು ; ಕೂದಲಿನಲ್ಲಿ ಚಂದ್ರಕಲೆಯನ್ನು ಧರಿಸಿರುವವಳೂ ಎಂದೂ ವರ್ಣನೆ ಬರುತ್ತದೆ. ಹೀಗೆ ಭಗವತ್ಪಾದರು ಅಂಬಿಕೆಯನ್ನು ಕಂಡು ಸ್ತೋತ್ರ ಮಾಡಿದ್ದಾರೆ. ಇದರಿಂದ ಏನು ಗೊತ್ತಾಗುತ್ತದೆ ? ಶಕ್ತಿ ಒಂದೇ, ಅದರ ರೂಪಗಳು ಬಹು ವಿಧ.

ಒಂದೇ ಒಂದು ರೂಪವನ್ನು ಇಟ್ಟುಕೊಂಡರೆ ಸಾಲದೇ ? ಹಲವು ಬಗೆಯ ರೂಪಗಳು ಅವಶ್ಯಕವೇ ? ಒಬ್ಬೊಬ್ಬರ ಇಷ್ಟಕ್ಕನುಸಾರವಾಗಿ ಅಂಬಿಕೆಯು ಅನುಗ್ರಹ ಮಾಡುತ್ತಾಳೆ. ತನ್ನ ರೂಪಗಳನ್ನು ಬದಲಾಯಿಸಿಕೊಳ್ಳುತ್ತಾಳೆ. ಅಂಬಿಕೆಯನ್ನು ಕುರಿತ ಶ್ಲೋಕವೊಂದರಲ್ಲಿ–

ಕನಕ ಶಲಾಕಾ ಗೌರೀಂ ಕರ್ಣವ್ಯಾಲೋಲ ಕುಂಡಲ ದ್ವಿತಯಾಮ್ ।
ಪ್ರಹಸಿತ ಮುಖೀಂ ಚ ಭವತೀಂ ಧ್ಯಾಯಂತೋಯೇ ತ
ಏವ ಭೂತನದಾಃ ॥

ಚಿನ್ನದ ಪ್ರಕಾಶವನ್ನು ಬೀರುವವಳೂ, ಕಿವಿಗಳಲ್ಲಿ ಕುಂಡಲಗಳನ್ನು ಧರಿಸಿರುವವಳೂ, ಆದ ಗೌರಿ ಮಂದಸ್ಮಿತವದನಳಾಗಿದ್ದಾಳೆ. ನಿನ್ನನ್ನು ಹೀಗೆ ಧ್ಯಾನಮಾಡುವವರು ಭೂಮಿಯನ್ನೂ ಹಣವನ್ನೂ ಕೊಡುವವರಾಗುತ್ತಾರೆ–ಎಂದು ಬರುತ್ತದೆ.

ಅಂಬಿಕೆಯ ರೂಪ ಒಂದೇ. ಆದರೆ, ಅವಳನ್ನು ಕುರಿತು ಧ್ಯಾನ ಮಾಡುವ ಬಗೆ ಬಗೆ ಬೇರೆ ಬೇರೆ. ಏಕೆಂದರೆ, ಭಕ್ತರು ಬೇರೆ ಬೇರೆಯಾದ ಫಲಗಳನ್ನು ಕೋರುತ್ತಾರೆ. ಕೆಲವರಿಗೆ ಹಣಬೇಕು. ಇನ್ನು ಕೆಲವರಿಗೆ ಕೀರ್ತಿಯಶಸ್ಸುಬೇಕು. ಇನ್ನು ಕೆಲವರಿಗೆ ಜ್ಞಾನ ಬೇಕು. ಮೇಲೆ ಹೇಳಿದ ಶ್ಲೋಕದ ಮೊದಲನೆಯ ಸಾಲಿನಲ್ಲಿ–

ಕನಕ ಶಲಾಕಾ ಗೌರೀಂ-

ಎಂದಿದೆ. ಅಂಬಿಕೆಯ ರೂಪ ಬಂಗಾರದಂತಿದೆ. ಆದ್ದರಿಂದ ಆಕೆ ಕನಕಮಯವಾಗಿ ಕಂಡು ಬರುತ್ತಾಳೆ.

ತಟಿಲ್ಲೇಖಾ ತನ್ವೀ

ಮಿಂಚಿನ ರೇಖೆಯಂತೆ ಸಣ್ಣದಾಗಿರುವವಳು.

ಗೌರಿಯ ವದನವು ಚಿನ್ನದ ಗಟ್ಟಿಯಂತಿರುವುದೇ ? ಎಂದು ಕೇಳಿದರೆ, ಅದಕ್ಕೆ ಉತ್ತರ "ಇಲ್ಲ". ಅದು ಚಿನ್ನದಂತೆ ಪ್ರಕಾಶಿಸುತ್ತದೆ. ಮಿಂಚಿನಂತೆ ಸಣ್ಣದಾಗಿದೆ. ಮಿಂಚಿನ ರೇಖೆ ಹೇಗೆ ತೆಳುವಾಗಿರುತ್ತದೋ, ಅಂಬಿಕೆಯ ದೇಹವೂ ಹಾಗೆಯೇ ಪೇಶಲವಾಗಿದೆ. ಮತ್ತು–

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಣವ್ಯಾಲೋಲ ಕುಂಡಲ ದ್ವಿತಯುಂ–

ಎಂದು ಹೇಳಿರುವಂತೆ, ಅಂಬಿಕೆಯು ಕಿವಿಗೆ ಹಾಕಿಕೊಂಡಿರುವ ಆಭರಣಗಳೂ ಸುಂದರ ವಾಗಿವೆ. ಮತ್ತು–

ಪ್ರಹಸಿತ ಮುಖೀಂ ಚ ಭವತೀಂ–

ಎಂದು ಹೇಳಲಾಗಿದೆ.

ಅಂಬಿಕೆಯನ್ನು ಧ್ಯಾನ ಮಾಡುವಾಗ ಹೇಗೆ ಮಾಡಬೇಕು ಎಂಬುದನ್ನು ನೋಡೋಣ. ಅಂಬಿಕೆಯೇ ಧ್ಯಾನಾಸಕ್ತಳಾಗಿದ್ದಾಳೆ. ಯಾರಿಗೆ ತೃಪ್ತಿಯುಂಟಾ ಗಿದೆಯೋ ಅವರು ಮಾತ್ರ ನಗುತ್ತಿರುತ್ತಾರೆ. ಅಂಬಿಕೆಯು ನಗುತ್ತಿದ್ದಾಳೆ. ಯಾರಿಗೆ ತೃಪ್ತಿಯಿದೆ ? ಯಾರಿಗೆ ತಮಗೆ ಬೇಕಾದುದೆಲ್ಲವೂ ಇದೆಯೋ ಅವರಿಗೆ ತೃಪ್ತಿಯಿರುತ್ತದೆ. ಅಂಬಿಕೆಯೇ ಯಾವಾಗಲೂ ತೃಪ್ತಿಯಿಂದಿರುತ್ತಾಳೆ. ಆದ್ದ ರಿಂದಲೇ ಆಕೆ ಯಾವಾಗಲೂ ನಗುತ್ತಲೇ ಇರುತ್ತಾಳೆ. ಒಬ್ಬನಿಗೆ ಐಶ್ವರ್ಯ ಬೇಕು. ಅವನು ಅಂಬಿಕೆಯನ್ನು–

ಪ್ರಹಸಿತಮುಖೀಂ ಚ ಭವತೀಂ–

ಎಂಬುವ ದೃಷ್ಟಿಯಿಂದ ಧ್ಯಾನಿಸಬೇಕು.

ಧ್ಯಾಯಂತೋ ಯೇ ತ ಏವ ಭೂತನವಾಃ ।

ಎಂದು ಹೇಳಿರುವಂತೆ ಯಾರು ಧ್ಯಾನ ಮಾಡುತ್ತಾರೋ, ಅವರು ಭೂಮಿಯನ್ನೂ ಐಶ್ವರ್ಯವನ್ನೂ ತಾವು ಮಾತ್ರ ಪಡೆಯುವುದಲ್ಲದೆ, ಇತರರಿಗೂ ಭೂಮಿಯನ್ನೂ ಹಣವನ್ನೂ ದಾನ ಮಾಡುವ ಸಾಮರ್ಥ್ಯವನ್ನು ಸಂಪಾದಿಸುತ್ತಾರೆ. ಹೀಗೆ ಭಗವತಿ ಯನ್ನು ಸ್ವರ್ಣರೂಪದಿಂದ ಧ್ಯಾನಮಾಡಿದರೆ ಸಂಪತ್ತು ಸಿಗುತ್ತದೆ.

ಇನ್ನು ಹಲವರು ಏನನ್ನು ಬೇಡುತ್ತಾರೆ ? ದೀರ್ಘಾಯುಸ್ಸನ್ನು ಬೇಡುತ್ತಾರೆ. ಇದು ಹೆಚ್ಚು ಜನರ ಆಸೆ. ಯಾರಿಗೂ ಸಾವು ಎಂಬುದು ಬರದೇ ಹೋಗುವುದಿಲ್ಲ. ಆದರೆ, ಭಗವಂತನ ಕೃಪೆಯಿಂದ ದೀರ್ಘಾಯುಸ್ಸನ್ನು ಪಡೆಯಬಹುದು. ಮೇಲೆ ಹೇಳಲಾಗಿರುವ ಶ್ಲೋಕ ಶಾಸ್ತ್ರಕ್ಕೂ ಅನುಭವಕ್ಕೂ ಅನುಸಾರವಾಗಿದೆ.

ಶಿರಸ್ಸಿನಲ್ಲಿರುವ ಊರ್ಧ್ವಮುಖವಾದ ಕಮಲದಲ್ಲಿ ಮಕರಂದನೆಂಬ ಅಮೃತವಿದೆ. ಈ ಅಮೃತ ಪಡೆಯುವುದನ್ನೇ ಲಂಬಿಕಾಯೋಗವೆಂದು ಕರೆಯುತ್ತಾರೆ. ನಮ್ಮ ನಾಲಿಗೆಯನ್ನು ತೆಳುವಾಗಿ ಮಾಡಿಕೊಂಡು, ಬಾಯಿಯೊಳಗೆ ಹಿಂದಕ್ಕೆ ಮಡಚಿ ಕೊಂಡು, ಮೂಗಿನಿಂದ ಬರುವ ರಂಧ್ರದ ಮೂಲಕ ತಲೆಯ ಮೇಲ್ಭಾಗದವರೆಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ತೆಗೆದುಕೊಂಡು ಹೋಗಬೇಕು. ಆಗ ಅಲ್ಲಿರುವ ಅಮೃತ ಬಿಂದುವನ್ನು ಪಡೆದು ಕೊಂಡರೆ ಮಹದಾನಂದವುಂಟಾಗುತ್ತದೆ. ಸಾಮಾನ್ಯ ಮನುಷ್ಯರಿಗೆ ಈ ಯೋಗ ಶಾಸ್ತ್ರದ ಪರಿಚಯವಿಲ್ಲ. ಅಂಥಕ್ರಿಯೆಗಳೂ ಅವರಿಗೆ ಗೊತ್ತಿಲ್ಲ. ಅಂಬಿಕೆಯ ರೂಪವನ್ನು ಕಂಡು ಆನಂದ ಪಡುವುದೂ, ಅದನ್ನು ಧ್ಯಾನಿಸುವುದೂ ನಮಗೆ ಎಟಕುವ ವಿಷಯ. ಶ್ಲೋಕದಲ್ಲಿ–

ಶೀತಲ ಪೀಯೂಷ ವರ್ಷಿಣೀಂ

–ಎಂದು ಹೇಳಲಾಗಿದೆ. "ಶಿರಸ್ಸಿನಲ್ಲಿರುವ ಸಹಸ್ರಾರ ಕಮಲದಲ್ಲಿ ಅಂಬಿಕೆ ನೆಲಸಿ ದ್ದಾಳೆ. ಅಲ್ಲಿಂದ ಅಮೃತ ಬಿಂದುಗಳನ್ನು ಪ್ರವಿಸುತ್ತಾಳೆ"–ಎಂದು ಧ್ಯಾನಿಸಬೇಕು. ಆ ಅಮೃತವು ನಮ್ಮ ಹೊಟ್ಟೆಯನ್ನು ತುಂಬಿ ದೀರ್ಘಾಯುಸ್ಸನ್ನೂ, ತೃಪ್ತಿಯನ್ನೂ ಕೊಡುತ್ತದೆ. ಆ ಅಮೃತ ಹೇಗಿರುತ್ತದೆ ? ಶೀತಂ–ಎಂದು ಹೇಳಿರುವುದರಿಂದ ತಣ್ಣಗೆ ಮಾಡುವ ಅಮೃತ ಅದು, ಬಿಸಿಯಾದದ್ದಲ್ಲ. ಅಂಥ ಅಂಬಿಕೆಯನ್ನು ಧ್ಯಾನಿಸಬೇಕು. ಹಾಗೆ ಯಾವಾಗಲೂ ಧ್ಯಾನ ಮಾಡುತ್ತಿದ್ದರೆ, ಅಂಥವನು ದೀರ್ಘಾಯುಸ್ಸನ್ನು ಪಡೆಯಬಹುದು.

ಆಯುಷ್ಯಮ್ ಬ್ರಹ್ಮಪ್ರೋಕ್ತಂ–

–ಎಂದು ಶ್ಲೋಕದಲ್ಲಿ ಹೇಳಲಾಗಿದೆ. ಅಂದರೆ, ಬ್ರಹ್ಮನ ಆಯುಸ್ಸಿನಷ್ಟು ಆಯುಸ್ಸು ಸಿಗುತ್ತದೆ–ಎಂದು ತಾತ್ಪರ್ಯ.

ಹಾಗೆಯೇ, ನಮ್ಮಲ್ಲಿ ಕೆಲವರಿಗೆ ಪಂಡಿತರಾಗಬೇಕೆಂಬ ಆಸೆ ಇರುತ್ತದೆ. ಮನಸ್ಸಿನಲ್ಲಿರುವ ವಿಷಯವೂ ಕೂಡ ಕೆಲವು ವೇಳೆ ಮರತೇ ಹೋಗುತ್ತದೆ. ಬೇಕಾ ದಾಗ ವಿಷಯಗಳು ಜ್ಞಾಪಕಕ್ಕೆ ಬರುವುದಿಲ್ಲ. ಓದುವಾಗಲೂ ವಿಷಯ ಬುದ್ಧಿ ಯೊಳಕ್ಕೆ ಹೋಗುವುದೇ ಇಲ್ಲ. ಚಿಂತನೆಗಳು ತೋರಬೇಕೆಂದರೆ ಏನು ಮಾಡಬೇಕು ? "ಬ್ರಾಹ್ಮೀಗುಟಿ," "ಬ್ರಾಹ್ಮೀರಸಾಯನ" ಮುಂತಾದ ಔಷಧಿಗಳನ್ನು ಸೇವಿಸ ಬೇಕೆಂದು ಕೆಲವರು ಹೇಳುತ್ತಾರೆ. ಅವೂ ಪ್ರಯೋಜನಕ್ಕೆ ಬರಲಿಲ್ಲವೆಂದರೆ ಏನು ಮಾಡುವುದು ? ಅಂಬಿಕೆಯ ಕೃಪೆಯೇ ಮುಖ್ಯವಾದುದು.

ವರ್ಗಾಷ್ಟಕ ಮಿಲಿತಾಭಿಃ ವಶಿನೀಮುಖ್ಯಾಭಿರಾವೃತಾಮ್ ।
ಚಿಂತ್ಯತಾಂ ಸಿತವರ್ಣಾಂ ವಾಚೋ ನಿರ್ಯಾಂತಿ ಅಯತ್ನತೋ ವದನಾತ್ ॥

[ಎಂಟು ವರ್ಗಗಳನ್ನು ಹೊಂದಿದವಳು, ವಶಿನೀ ಮುಂತಾದ ದೇವತೆಗಳಿಂದ– ಸುತ್ತು ವರೆಯಲ್ಪಟ್ಟಿರುವವಳು, ಶ್ವೇತವರ್ಣದವಳೂ ಆದ ಅಂಬಿಕೆಯನ್ನು ಧ್ಯಾನಿಸುವವರಿಗೆ ಬಾಯಿಂದ ಮಾತುಗಳು ತಾನಾಗಿಯೇ ಹೊರಡುತ್ತವೆ.]

Sri Vidyabharathi Book Centre, Sringeri

CC-O. In Public Domain. Digitized by eGangotri

"ನೀನು ಅತಿ ಪ್ರಯತ್ನವನ್ನೇನೂ ಮಾಡಬೇಕಾಗಿಲ್ಲ ; ಕುಳಿತುಕೊ. ಏನನ್ನು ಹೇಳಬೇಕೆಂದು ಯೋಚಿಸಬೇಡ. ಮಾತನಾಡಲು ಪ್ರಾರಂಭಿಸು. ಅಂಬಿಕೆಯೇ ಮಾತನಾಡುವಂತೆ ಮಾಡುತ್ತಾಳೆ. ಜನರಿಗೆ ಅರ್ಥವಾಗುತ್ತದೆ. ನೀನು ಮಾತನಾಡು ತ್ತಲೇ ಇರುತ್ತೀಯೆ.

ಆದ್ದರಿಂದ ಐಶ್ವರ್ಯವು ಬೇಕೆಂದರೆ ಅಂಬಿಕೆಯನ್ನು ಸ್ವರ್ಣವರ್ಣದ ರೂಪದಿಂದ ಧ್ಯಾನಮಾಡಬೇಕು. ದೀರ್ಘಾಯುಸ್ಸು ಬೇಕೆಂದರೆ ಸಹಸ್ರಾರದಲ್ಲಿ ಧ್ಯಾನಿಸಬೇಕು. ವಿದ್ಯೆ ಹಾಗೂ ವಾಗ್ಮಿತೆಯನ್ನು ಪಡೆಯಬೇಕಾದರ ಅಷ್ಟವರ್ಗಗಳನ್ನು ಹೊಂದಿದವ ಳೆಂದೂ, ವಶಿನೀ ಮುಂತಾದ ದೇವತೆಗಳಿಂದ ಪರಿವೃತಳಾದವಳೆಂದೂ ಅಂಬಿಕೆಯನ್ನು ಧ್ಯಾನಿಸಬೇಕು.

ವಶಿನೀ ಎಂಬ ಎಂಟು ದೇವತೆಗಳಿವೆ. ಅಂಬಿಕೆಯ ಉಪಾಸನೆಯನ್ನು ಶಾಸ್ತ್ರೋಕ್ತವಾಗಿ ಮಾಡುವವರಿಗೆ ಈ ಹೆಸರುಗಳ ಪರಿಚಯವಾಗಿರುತ್ತದೆ. ಒಂದೇ ಚಕ್ರದಲ್ಲಿ ಎಂಟು ಸ್ತ್ರೀದೇವತಗಳು ಅಂಬಿಕೆಯ ಹಿಂದು–ಮುಂದು ಇರುತ್ತವೆ. ಅವರು ಅಂಬಿಕೆಯನ್ನು ಪೂಜಿಸುವವರು. ಅಂಬಿಕೆಯು ಮಧ್ಯದಲ್ಲಿ ಆಸೀನಳಾಗಿರು ತ್ತಾಳೆ. ಆ ದೇವತೆಗಳು ಅಂಬಿಕೆಗೆ ಸೇವೆ ಸಲ್ಲಿಸುತ್ತಿರುತ್ತಾರೆ. ಹೀಗೆ ನಾವು ಅಂಬಿಕೆ ಯನ್ನು ಕುರಿತು ನಾವು ಧ್ಯಾನಿಸಬೇಕು. ಇದರಿಂದ ನಾವು ಶ್ರೇಯಸ್ಸನ್ನು ಪಡೆಯ ಬಹುದು. ಹೀಗೆ ಧ್ಯಾನ ಮಾಡಿದರೆ, ವಿದ್ಯೆ ಇಲ್ಲದವನಿಗೂ ಕೂಡ ವಿದ್ಯೆಪ್ರಾಪ್ತ ವಾಗುತ್ತದೆ. ಅಂಬಿಕೆ ಎಲ್ಲರಿಗೂ ವರಗಳನ್ನು ಅನುಗ್ರಹಿಸುತ್ತಾಳೆ. ಇತರ ದೇವತೆಗಳು ವರಗಳನ್ನು ಕೊಡಲು ಹಿಂತೆಗೆಯಬಹುದು. ಆದರೆ, ಅಂಬಿಕೆ ಹಾಗೆ ಮಾಡುವುದಿಲ್ಲ. ಭಗವತಿಯವರ್ಣನೆ ಹೀಗಿದೆ.

ಭಗವತ್ಪಾದ ಶಂಕರರು ನಿರ್ಗುಣವಾದ ಪರವಸ್ತುವನ್ನು ಕುರಿತು ನಮಗೆ ಉಪದೇಶ ಮಾಡಿದ್ದಾರೆ. ಆ ರೀತಿ ನಿರ್ಗುಣೋಪಾಸನೆಯನ್ನು ಪ್ರಶಂಸೆ ಮಾಡುವವ ರಾದರೂ, ಅಂಬಿಕೆಯ ಕರುಣಾಮೂರ್ತಿಯನ್ನು ಸ್ತುತಿಸಿದ್ದಾರೆ. ಪೂಜೆ ಮುಂತಾದು ವನ್ನು ಮಾಡಬೇಕಾದರೆ ಸಗುಣೋಪಾಸನೆ ಮಾಡಬೇಕಲ್ಲವೇ ? ಆಗ ಅಂಬಿಕೆಯು ಆ ರೂಪದಲ್ಲೇ ಇದ್ದಾಳೆ ಎಂದು ಭಾವಿಸಬೇಕು. ಹೀಗೆ ಅಂಬಿಕೆಯನ್ನು ಧ್ಯಾನಮಾಡಿ ಆನಂದದಿಂದಿದ್ದರೆ ನಮ್ಮೆಲ್ಲರ ಕಣ್ಣುಗಳಲ್ಲಿಯೂ ಆನಂದ ಭಾಷ್ಪ ಸುರಿಯುತ್ತದೆ. ಈಗ ಏನಾಗಿವೆ ಗೊತ್ತೇ ?

ಸರಿಯಾದ ಆಡಳಿತ ಹೇಗಿರಬೇಕೆಂಬುದನ್ನು ಕುರಿತು ಶಾಸ್ತ್ರದಲ್ಲಿ ಒಂದು ಶ್ಲೋಕವಿದೆ–

Sri Vidyabharathi Book Centre, Sringeri

CC-O. In Public Domain. Digitized by eGangotri

ನಮೇಸ್ತೇನೋ ಜನಪದೇ ನ ಕದರ್ಯಃ ನ ಮದ್ಯಪಃ ।
ನಾಸಗ್ನಿ ಹೋತ್ರೀ ನಾ ವಿದ್ವಾನ್ ನ ಸ್ವೈರೀ ಸ್ವೈರಿಣೀ ಕುತಃ ॥

"ನಮೇಸ್ತೇನೋ ಜನಪದೇ"–ನನ್ನ ಆಧಿಪತ್ಯದಲ್ಲಿ ಯಾವ ಕಳ್ಳನೂ ಇಲ್ಲ–ಎಂದು ಅರಸನು ಹೇಳುತ್ತಾನೆ.

ಈಗ ಕೆಲವರು ಧನವಂತರಾಗಿರಬಹುದು. ಆದರೆ–"ಎಲ್ಲಿ ಯಾರಿಗಾದರೂ ಏನನ್ನಾದರೂ ಕೊಟ್ಟರೆ ತನ್ನ ಐಶ್ವರ್ಯದಲ್ಲಿ ಒಂದು ಬಿಡಿಗಾಸು ಕಡಿಮೆಯಾದರೆ ಏನು ಮಾಡುವುದು ?"–ಎಂದು ಹೆದರಿ ಅವರು ಜಿಪುಣರಾಗಿದ್ದಾರೆ. ಎಂಜಲು ಕೈಯಲ್ಲಿ ಯಾವ ಪ್ರಾಣಿಯನ್ನೂ ಓಡಿಸಲು ಮನಸ್ಸಿಲ್ಲದಷ್ಟು ಜಿಪುಣರಾಗಿರುತ್ತಾರೆ.

ಅರಸನು–"ನ ಕದರ್ಯಃ"–ನನ್ನ ಅಧಿಪತ್ಯದಲ್ಲಿ ಜಿಪುಣರು ಯಾರೂ ಇಲ್ಲ. ಯಾರಲ್ಲಿ ಏನೇನು ಇದೆಯೋ ಅವನು ಸಂತೋಷವಾಗಿ ದಾನ ಮಾಡಲು ಅವರು ಸಿದ್ಧರಾಗಿದ್ದಾರೆ. ಯಾರಲ್ಲಿ ಏನೂ ಇಲ್ಲವೋ ಅವರು ದಾನವನ್ನು ಪಡೆಯುವಾಗ–"ಇದನ್ನು ಪಡೆಯಲು ನನಗೆ ಅರ್ಹತೆ ಇದೆಯೋ ? ನಾನು ಇದನ್ನು ತೆಗೆದುಕೊಳ್ಳಲೇ ಬೇಕೆ ? ನಾವು ಇತರರ ಆಹಾರವನ್ನು ತಿನ್ನಬಾರದಲ್ಲ !–ಎಂದು ದುಃಖದಿಂದ ಚಿಂತಿಸುತ್ತಾರೆ"–ಎಂದು ರಾಜನು ಹೇಳುತ್ತಾನೆ.

ಅನಂತರ "ನ ಮದ್ಯಪಃ"–ಎಂದು ಬರುತ್ತದೆ. ಆ ಶ್ಲೋಕದಲ್ಲಿ "ಯಾರಿಗೂ ಮದ್ಯಪಾನ ಮಾಡುವ ಅಭ್ಯಾಸವಿಲ್ಲ"–ಎನ್ನುತ್ತಾನೆ ಅರಸ. ಈಗಲಾದರೋ ಆ ಅಭ್ಯಾಸ ತುಂಬ ಹರಡಿದೆ.

ಅನಂತರ–"ನಾನಗ್ನಿ ಹೋತ್ರೀ"–"ಅಗ್ನಿಹೋತ್ರ ಮಾಡದವನು ಯಾರೂ ಇಲ್ಲ" ಎಂದು ಹೇಳಿದೆ. ಗೀತೆಯಲ್ಲಿ ಭಗವಂತನೇ–

ತೈರ್ದತ್ತಾ ನ ಪ್ರದಾಯೇಭ್ಯೋ ಯೋ ಭುಂಕ್ತೇ ಸ್ತೇನ ಏವ ಸಃ ॥

(ಹಾಗೆ ದೇವತೆಗಳಿಂದ ಕೊಡಲ್ಪಟ್ಟು, ಅವರಿಗೆ ಹಿಂದಿರುಗಿಸದೆ ಅನುಭವಿಸುವವನು ಕಳ್ಳ)–ಎಂದು ಹೇಳಿದ್ದಾನೆ. ಈ ಲೋಕದ ಸಂರಕ್ಷಣೆಗಾಗಿ ಒಂದು ಏರ್ಪಾಟು ಮಾಡಿದ್ದಾನೆ.

ಇತಃ ಪ್ರದಾನಂ ದೇವಾ ಉಪಜೀವಂತಿ
ಅಮುತ ಪ್ರದಾನಂ ಮನುಷ್ಯಃ

(ಇಲ್ಲಿ ಯಾವುದನ್ನು ದಾನ ಮಾಡಲಾಗುವುದೋ ಅದರ ಮೂಲಕ ದೇವತೆಗಳು ಜೀವಿಸುತ್ತಾರೆ ; ದೇವತೆಗಳು ಕೊಡುವುದರ ಮೂಲಕ ಮನುಷ್ಯರು ಬಾಳುತ್ತಾರೆ)–ಎಂದು ಹೇಳುತ್ತದೆ ವೇದವಾಕ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಯಾವ ದಾನವನ್ನು, ಅಂದರೆ ಹವಿಸ್ಸನ್ನು, ಕೊಡುತ್ತೇವೋ ಅದರ ಮೂಲಕ ದೇವತೆಗಳು ಬಾಳುತ್ತಾರೆ. ದೇವತೆಗಳು ಕೊಡುವ ಮಳೆ ಮುಂತಾದವುಗಳ ಮೂಲಕ ನಾವು ಬಾಳುತ್ತೇವೆ. ಹೀಗಿರುವಾಗ, ನಾವು ಅವರಿಗೆ ಏನನ್ನೂ ಕೊಡದೇಹೋದರೆ, ಅವರು ಏನು ಮಾಡುತ್ತಾರೆ ? ಪೋಲೀಸಿನವರ ಹಿತವನ್ನು ನಾವು ಬಯಸದಿದ್ದರೆ, ನಮ್ಮ ಹಿತವನ್ನು ಅವರು ಹೇಗೆ ನೋಡಿಕೊಳ್ಳಲಾದೀತು ?

ಆದ್ದರಿಂದಲೇ, ಅರಸನು–"ನಾನಗ್ನಿಹೋತ್ರೀ" (ನನ್ನ ರಾಜ್ಯದಲ್ಲಿ ಅಗ್ನಿಹೋತ್ರ ಮಾಡದವರು ಯಾರೂ ಇಲ್ಲ) ಎಂದು ಹೇಳಿದ್ದಾನೆ.

ಮುಂದೆ–"ನಾವಿದ್ವಾನ್"–(ವಿದ್ವಾಂಸನಾಗದವನು ಯಾರೂ ಇಲ್ಲ) ಎಂಬ ಮಾತು ಬರುತ್ತದೆ.

ಈ ಕಾರ್ಯಗಳೆಲ್ಲ ಯಾವಾಗ ನಡೆಯುತ್ತವೆ ? ಯಾವಾಗ ಮಹಾಜನರಲ್ಲಿ ಒಂದು ಮಟ್ಟದ ತಿಳುವಳಿಕೆಯಿರುತ್ತದೆಯೋ ಆವಾಗ ನಡೆಯುತ್ತದೆ. ಆದ್ದರಿಂದಲೇ ಆ ರಾಜನು–"ನನ್ನ ರಾಜ್ಯದಲ್ಲಿ ತಿಳುವಳಿಕೆಯಿಲ್ಲದವನು ಯಾರೂ ಇಲ್ಲ"–ಎಂದು ಹೇಳುತ್ತಾನೆ.

ಮುಂದೆ "ನ ಸ್ವೈರೀ ಸ್ವೈರಿಣೀ ಕುತಃ ?" (ಕೆಟ್ಟ ನಡತೆಯುಳ್ಳ ಒಬ್ಬ ಗಂಡಸೂ ಇಲ್ಲದಿರುವಾಗ, ಕೆಟ್ಟ ನಡತೆಯುಳ್ಳ ಹೆಂಗಸು ಇರಲು ಹೇಗೆ ಸಾಧ್ಯ ?)"

ಗಂಡಸರೆಲ್ಲರೂ ಒಳ್ಳೆಯ ನಡತೆಯುಳ್ಳವರಾಗಿದ್ದರೆ, ಹೆಂಗಸರೂ ಸರಿಯಾಗಿಯೇ ಇರುತ್ತಾರೆ. ಒಬ್ಬನು ಕೆಡಬೇಕೆಂದರೆ, ಮತ್ತೊಬ್ಬನು ಅದಕ್ಕೆ ಸಹಾಯ ಮಾಡಬೇಕಲ್ಲವೆ ? ಆದರೆ, ಆ ರಾಜ ತನ್ನ ಆಡಳಿತದಲ್ಲಿ ಗಂಡಸರೂ ಹೆಂಗಸರೂ ಸರಿಯಾದ ನಡತೆಯುಳ್ಳವರೆಂದು ಹೇಳುತ್ತಾನೆ.

ಕೆಟ್ಟವರ ಸ್ವಭಾವವೇನು ಎಂಬುದನ್ನು ಭಗವಂತನೇ ಗೀತೆಯಲ್ಲಿ ಹೇಳಿದ್ದಾನೆ–

ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ ಸುಖೀ ।– ನಾನೇ ಆಳುವವನು, ಭೋಗಗಳನ್ನು ಅನುಭವಿಸುವವನು, ಕಾರ್ಯಗಳಲ್ಲಿ ಜಯಶೀಲನಾಗುವವನು, ಬಲಿಷ್ಠನು, ಸುಖೀ–ಎಂದು.

ಆಢ್ಯೋಽಭಿಜನವಾನಸ್ಮಿ ಕೋಽನ್ಯೋಽಸ್ತಿ ಸದೃಶೋ ಮಯಾ ।
ಯಕ್ಷ್ಯೇ ದಾಸ್ಯಾಮಿ ಮೋದಿಷ್ಯೇ ಇತ್ಯಜ್ಞಾನವಿಮೋಹಿತಾಃ ॥

ಹಣವಂತನಾಗಿದ್ದೇನೆ, ಉತ್ತಮ ಕುಲದವನಾಗಿದ್ದೇನೆ, ನನಗೆ ಸಾಟಿ ಯಾರು? ಯಾಗಗಳನ್ನು ಮಾಡುತ್ತೇನೆ, ದಾನ ಮಾಡುತ್ತೇನೆ, ಸಂತೋಷಪಡುತ್ತೇನೆ–ಎಂದು ಅಜ್ಞಾನದಿಂದ ಮೋಹ ಹೊಂದಿರುತ್ತಾರೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ನಾವು ಗಮನವಿಟ್ಟು ನೋಡಿದರೆ "ನಾವೂ ಹಾಗೆಯೇ ಆಗಿಬಿಡುತ್ತಿದ್ದೇವಲ್ಲ"-ಎಂದು ಗೊತ್ತಾಗುತ್ತದೆ. ಚಿಂತಿಸಿ ನೋಡಿದರೆ ನಾವು ನಮ್ಮ ಬಾಳನ್ನು ಕುರಿತು-"ಅಯ್ಯೋ! ನಾವು ಹೀಗೆ ಕೆಟ್ಟುಹೋಗುತ್ತಿದ್ದೇವಲ್ಲಾ" ಎಂದು ದುಃಖಿಸಬೇಕು. ಆದ್ದರಿಂದ ಈ ಪರಿಸ್ಥಿತಿಯಲ್ಲಿ ನಮ್ಮ ಬುದ್ಧಿ ಸರಿಯಾಗಿರಬೇಕಲ್ಲವೇ? ಅದನ್ನು ಸರಿಯಾದ ದಾರಿಗೆ ಕೊಂಡೊಯ್ಯುವುದು ಹೇಗೆ? ಕೆಲವರು-"ಹೀಗೆ ಮಾಡಿ, ಹಾಗೆ ಮಾಡಿ"-ಎಂದು ಹೇಳುತ್ತಾರೆ. ಇನ್ನು ಕೆಲವರು ವ್ಯಾಖ್ಯಾನವನ್ನು ಮಾಡುತ್ತಾರೆ. ಇದನ್ನು ಕುರಿತು ನೀಲಕಂಠ ದೀಕ್ಷಿತರು ಒಂದು ಕಡೆ-

ಕಾಮಂ ಜನಾಃ ಸ್ಮಯಂತೇ ಕೈಲಾಸವಿಲಾಸವರ್ಣನಾವಸರೇ ।

(ಕೈಲಾಸವನ್ನು ವರ್ಣಿಸುವಾಗ ಜನ ಸಂತೋಷದಿಂದಿದ್ದಾರೆ) ಎಂದಿದ್ದಾರೆ.

ಕೈಲಾಸವನ್ನು ಕುರಿತು ವರ್ಣನೆ ಬಂದರೆ, ಜನ ತುಂಬ ಆನಂದದಿಂದ ಕೇಳುತ್ತಿರುತ್ತಾರೆ. ನಾವೂ ಅನೇಕ ಬೆಟ್ಟಗಳ ಬಗ್ಗೆ ಕೇಳಿದ್ದೇವೆ. ಹಿಮಾಲಯ, ವಿಂಧ್ಯ ಪರ್ವತ ಮುಂತಾದುವನ್ನು ನೋಡಿದ್ದೇವೆ. ಆದರೆ ಕೈಲಾಸ ಮಾತ್ರ ಬೆಳ್ಳಿಯಿಂದ ಆದದ್ದು ಎಂದು ಕೇಳಿದ್ದೇವೆ. ಆದರಲ್ಲಿ ಮಹಾದೇವನು ವಿರಾಜಿಸುತ್ತಿದ್ದಾನೆ. ಬೆಳ್ಳಿಯಂತೆ ಇದೆ ಎಂಬುದನ್ನು ಕೇಳಿಯೇ ನಾವು ಮೈಮರೆಯುತ್ತೇವೆ-ಎಂದರೆ ಬೆಳ್ಳಿಯಿಂದಲೇ ಆದ ಪರ್ವತವನ್ನು ಕಂಡರೆ ನಮ್ಮ ಮನಸ್ಸು ಹೇಗಾಗಬಹುದು? ಆದರಂತೆ ಮೋಕ್ಷವನ್ನು ಕುರಿತು, ಭಗವಂತನನ್ನು ಕುರಿತು ಕಿವಿಗಳಿಂದ ಕೇಳುವಾಗ ತುಂಬ ಸಂತೋಷಪಡುತ್ತೇವೆ.

ಆದರೆ ಸಾಧನೆಗಳನ್ನು ವರ್ಣಿಸುವಾಗ ಮಾತ್ರ ಅವರು ತಮ್ಮ ಮುಖವನ್ನು ಆ ಕಡೆಗೆ ತಿರುಗಿಸಿಕೊಂಡುಬಿಡುತ್ತಾರೆ.

ಆ ಪರಮೇಶ್ವರನನ್ನು ಹೊಂದಲು ಯಾವುದಾದರೂ ದಾರಿಯಿದೆಯೇ ಎಂದು ಕೇಳೋಣ. ಆದರೆ, ಆ ದಾರಿಯನ್ನು ತಿಳಿದ ಕೂಡಲೇ ಮುಖವನ್ನು ಬೇರೆ ಕಡೆಗೆ ತಿರುಗಿಸಿಕೊಂಡುಬಿಡುತ್ತೇವೆ.

ಅಂಬಿಕೆಯನ್ನು ಪಡೆಯುವುದಕ್ಕೂ ಭಗವಂತನನ್ನು ಪಡೆಯುವುದಕ್ಕೂ ದಾರಿ ಇದೆಯೇ? ಇದೆ-

ಅಂತರ್ಮುಖಸಮಾರಾಧ್ಯಾ ಬಹಿರ್ಮುಖಸುದುರ್ಲಭಾ

ಮನಸ್ಸನ್ನು ಒಳಗಡೆಗೆ ತಿರುಗಿಸಿಕೊಳ್ಳುವವರಿಗೆ ಆರಾಧನೆ ಸುಲಭ; ಬಹಿರ್ಮುಖಿಗಳಿಗೆ ದುರ್ಲಭಳಾಗಿರುವವಳು.

Sri Vidyabharathi Book Centre, Sringeri

CC-O. In Public Domain. Digitized by eGangotri

ನಮ್ಮ ಮನಸ್ಸನ್ನು ಒಳಗಡೆಗೆ ತಿರುಗಿಸಿಕೊಳ್ಳಬೇಕು. ಮನಸ್ಸು ನಮ್ಮ ಮಾತನ್ನು ಕೇಳಬೇಕು. ನಾವು ಮನಸ್ಸಿನ ಮಾತನ್ನು ಕೇಳಬಾರದು. ಮನಸ್ಸು ಎಲ್ಲಿಯೋ ಹರಿಯುತ್ತಲೋ ವಿಷಯಗಳ ಕಡೆ ಹೋಗುತ್ತಲೋ ಇದ್ದರೆ, ನಾವು ಅದನ್ನು ಹಿಂಬಾಲಿಸುತ್ತಿರುತ್ತೇವೆ. ಹಾಗೆ ಮಾಡಬಾರದು. ನಾವು ಇಲ್ಲಿ ಉಪನ್ಯಾಸ ವನ್ನು ಕೇಳಲು ಬಂದಿದ್ದೇವೆ. ಆದರೆ, ಮನಸ್ಸು ಎಲ್ಲಿಯೋ ಅಲೆಯುತ್ತಿರುತ್ತದೆ.

ಸ ನೋ ದೇವಃ ಶುಭಯಾ ಸ್ಮೃತ್ಯಾ ಸಂಯುನಕ್ತು

(ಈ ದೇವನು ನಮ್ಮ ಕೆಟ್ಟ ಚಿಂತನೆಗಳನ್ನು ನಾಶಮಾಡಲಿ) ಎಂಬುದು ದೇವವಾಣಿ. ಆದ್ದರಿಂದ ಭಗವಂತನು ನಮ್ಮ ಮನಸ್ಸನ್ನು ಒಳ್ಳೆಯ ದಾರಿಯಲ್ಲಿ ಕರೆದುಕೊಂಡು ಹೋಗಲಿ-ಎಂದು ಪ್ರಾರ್ಥಿಸಬೇಕು. ಆದ್ದರಿಂದಲೇ ನಾವು ಭಗವಂತನ ಮೂರ್ತಿ ಯನ್ನು ಪ್ರತಿಷ್ಠೆ ಮಾಡುತ್ತೇವೆ. ಭಗವಂತನಿಗೆ ಪೂಜೆ ಸಲ್ಲಿಸುತ್ತೇವೆ. ಆದ್ದರಿಂದ-

ಶ್ರೀ ಶಿವಾ ಶಿ ವಶಕ್ತ್ಯೈಕರೂಪಿಣೀ ಲಲಿತಾಂಬಿಕಾ

ಶಿವಾ ಎಂದು ಕರೆಯಲಾಗುವ ಲಲಿತಾಂಬಿಕೆ ಶಿವನೂ ಶಕ್ತಿಯೂ ಜೊತೆಗೂಡಿದ ರೂಪವನ್ನು ಹೊಂದಿದ್ದಾಳೆ-ಎಂದರೆ ಶಿವ-ಶಕ್ತಿ ರೂಪವಾಗಿ ಇದ್ದಾಳೆ-ಎಂದು ಹೇಳು ತ್ತೇವೆ. ಅಂಬಿಕೆಯ ಅನುಗ್ರಹವನ್ನು ಪಡೆದು ನಮಗೆ ಒಳ್ಳೆಯ ಬುದ್ಧಿಯುಂಟಾಗ ಬೇಕು. ಒಳ್ಳೆಯ ಬುದ್ಧಿ ಬಂದರೆ, ನಾವು ಒಳ್ಳೆಯ ಸುಖವನ್ನು ಪಡೆಯಬಹುದು. ಶ್ರೀ ಚಕ್ರವನ್ನು ಒಂದು ಕಡೆ ಇಟ್ಟುಕೊಂಡರೆ ಅದು ಶ್ರೀ ಚಕ್ರವಾಗುತ್ತದೆ. ಅದನ್ನು ತಿರುಗಿಸಿ ಇಟ್ಟುಕೊಂಡರೆ ಅದೇ ಶಿವರೂಪವಾಗುತ್ತದೆ. ಆದ್ದರಿಂದಲೇ ನಾವು ಹೇಳುತ್ತೇವೆ–ಒಬ್ಬನೇ ಭಗವಂತ ಅಂಬಿಕೆಯ ರೂಪದಿಂದಲೂ ಶಿವರೂಪದಿಂದಲೂ ಇದ್ದಾನೆ ಎಂದು.

ಭಗವತ್ಪಾದರು ಶೈವರೂ ಅಲ್ಲ, ಶಾಕ್ತರೂ ಅಲ್ಲ-ಎಂದು ನಾವು ಹೇಳುತ್ತೇವೆ. ವಾಸ್ತವವಾಗಿ ಅವರು ನಿರ್ಗುಣೋಪಾಸಕರು. ಭಗವಂತನು ರೂಪವನ್ನೂ ಪಡೆದು ಕೊಳ್ಳುತ್ತಾನೆ–ಎಂಬುದನ್ನು ಅವರು ಒಪ್ಪಿಕೊಳ್ಳುತ್ತಾರೆ. ಹೀಗೆ ಭಗವತ್ಪಾದರು ಶಕ್ತಿಪೂಜೆಯ ಪ್ರಾರಂಭ ಮಾಡಿದರು ಎಂದು ಹೇಳುತ್ತಾರೆ. ಅವರು ಶಕ್ತಿಪೂಜೆ ಯನ್ನು ಮಾತ್ರ ಮಾಡಿದರೆ ? ಎಲ್ಲ ಬಗೆಯಲ್ಲಿಯೂ ಪೂಜೆ ಮಾಡಬಹುದು–ಆದರೆ-

ಸತ್ಯಂ ಜ್ಞಾನಂ ಅನಂತಂ ಬ್ರಹ್ಮ

ಎಂದು ಹೇಳಲಾಗಿರುವಂತೆ, ವರ್ಣಿತವಾಗಿರುವ ಪರವಸ್ತು ನಿರ್ಗುಣವಾದುದು- ಎಂದು ಅವರು ಹೇಳಿದರು.

Sri Vidyabharathi Book Centre, Sringeri

CC-O. In Public Domain. Digitized by eGangotri

ಅಂಬಿಕೆಗೆ ಒಂದು ಹೆಸರುಂಟು–"ನಾಮಪಾರಾಯಣ ಪ್ರೀತಾ" ಎಂದು ಅಂಬಿಕೆಯ ನಾಮಗಳನ್ನು ಹೇಳುವುದೇ ಅಂಬಿಕೆಯನ್ನು ತೃಪ್ತಿಪಡಿಸುವುದಕ್ಕೆ ದಾರಿ ಎಂದು ಹೇಳಲಾಗಿದೆ. ಧ್ಯಾನ ವಿಶೇಷವಾದದ್ದು ಎಂದರು. ಯಾರ ಮನಸ್ಸು ಹತೋಟಿಯಲ್ಲಿರುತ್ತದೋ ಅವರು ಧ್ಯಾನ ಮಾಡಬಹುದು. ಎಲ್ಲರೂ ಮಾಡಲು ಸಾಧ್ಯವಿಲ್ಲ. ಯಾರ ಮನಸ್ಸು ಅಲ್ಲಿ ಇಲ್ಲಿ ಅಲೆಯುತ್ತದೆಯೋ ಅಂಥವರು ಧ್ಯಾನ ಮಾಡುವುದು ಸಾಧ್ಯವಾಗದ ಕಾರಣ ಅವರಿಗೆ ಸುಲಭವಾದ ದಾರಿ, ನಾಮಪಾರಾಯಣ ಪ್ರೀತಾ–ಎಂದು ಹೇಳಿರುವಂತೆ, ಅಂಬಿಕೆಯ ನಾಮಗಳನ್ನು ಹೇಳಿದರೆ ಸಾಕು. ಆದ್ದರಿಂದ "ನಿನಗೆ ಯಾವುದು ಇಷ್ಟದೇವತೆಯೋ ಆ ದೇವತೆಯನ್ನು ನೀನು ಆರಾಧನೆ ಮಾಡುತ್ತಾ ಬಾ. ಭಗವಂತನ ನಾಮಗಳನ್ನು ಹೇಳುತ್ತಾ ಇರು. ಭಗವಂತನು ಪ್ರಸನ್ನನಾಗಿ ನಿನ್ನನ್ನು ಅನುಗ್ರಹಿಸುವನು"–ಎಂದು ಶಂಕರರು ಸೊಗಸಾಗಿ ಉಪದೇಶ ಮಾಡಿದ್ದಾರೆ.

ಭಗವತ್ಪಾದರ ಜೀವನದಲ್ಲಿ ಚಕಿತಗೊಳಿಸುವ ಸಂದರ್ಭಗಳು ಹಲವಾರು ಶಂಕರ ವಿಜಯದಲ್ಲಿ ಬರುತ್ತವೆ. ಅವೆಲ್ಲವೂ ನಿಜವೇ ? ಎಂದು ಕೇಳುತ್ತಾರೆ. ಏಕೆ ನಿಜ ವಾಗಿರಬಾರದು ? ಅದು ನಿಜವೇ ಎಂದು ನಾನು ನಂಬುತ್ತೇನೆ. ಕಾಲಟಿಯಲ್ಲಿ ಹರಿಯುತ್ತಿದ್ದ ನದಿ ಅವರ ಆಸೆಯಂತೆ ಅವರ ಮನೆಯ ಪಕ್ಕಕ್ಕೆ ಬಂದಿತು. ಆದ್ದರಿಂದ ಭಗವಂತನ ಅನುಗ್ರಹವೊಂದಿದ್ದರೆ ಇಂತಹ ಘಟನೆಗಳು ನಡೆಯುವುದು ಸಾಧ್ಯ.

ನನ್ನ ಅನುಭವದಲ್ಲಿಯೂ ಇಂಥಹ ಒಂದು ಘಟನೆ ನಡೆದಿದೆ. ಶೃಂಗೇರಿಯಲ್ಲಿ ನಮ್ಮ ಆಶ್ರಮದ ಮುಂದೆ ತುಂಗಾ ನದಿ ಹರಿಯುತ್ತಿದೆ. ಶ್ರೀ ಶಾರದಾಂಬೆಯ ಆಲಯವಿರುವ ಕಡೆಯಿಂದ ನದಿಯನ್ನು ದಾಟಿ ನರಸಿಂಹ ವನಕ್ಕೆ ಹೋಗುವ ಹಾದಿ ತುಂಬ ಉದ್ದವಾಗಿತ್ತು. ಆದ್ದರಿಂದ ನರಸಿಂಹ ವನಕ್ಕೆ ಹೋಗುವ ಬಾಗಿಲೊಂದನ್ನು ಬೇರೆ ಕಡೆ ಅಳವಡಿಸಿದೆ. ಆದರೆ, ಆ ಹೊಸ ದ್ವಾರಕ್ಕೆ ನೇರವಾಗಿ ಆಕಡೆಯವರೆಗೆ ಸೇತುವೆಯೊಂದನ್ನು ನಿರ್ಮಿಸುವುದು ಸಾಧ್ಯವಾಗಲಿಲ್ಲ. ಏಕೆಂದರೆ, ನದಿ ಆ ಜಾಗದಲ್ಲಿ ತುಂಬ ಆಳವಾಗಿದ್ದಿತು. ಆದರೂ, ಭಗವಂತನ ಅನುಗ್ರಹ ಹೇಗಿರುತ್ತದೆಯೋ ನೋಡಿಕೊಳ್ಳೋಣ ಎಂದು ನಾನು ಆ ದ್ವಾರವನ್ನು ಹಾಕಿಸಿದೆ. ಆದರೆ, ನಾವು ಯಾವ ವಿಧವಾದ ಪ್ರಯತ್ನವನ್ನು ಮಾಡದಿದ್ದರೂ, ದಿಢೀರೆಂದು ನದಿಯಲ್ಲಿ ಪ್ರವಾಹ ಬಂದು ಸೇತುವೆಯನ್ನು ನಿರ್ಮಾಣ ಮಾಡಬೇಕೆಂದಿದ್ದ ಜಾಗದಲ್ಲಿ ಮಣ್ಣು ಬಂದು ಸೇರಿತು. ಹೀಗಾಗಿ ಅಲ್ಲಿ ಆಳವು ಕಡಿಮೆಯಾದ ಕಾರಣದಿಂದ ಸೇತುವೆಯನ್ನು ಸುಲಭ ವಾಗಿ ಕಟ್ಟಲಾಯಿತು. ಹೀಗಾದ್ದಕ್ಕೆ ನಾವು ಯಾವ ಕಾರಣವನ್ನೂ ಕೊಡಲಾಗುವು ದಿಲ್ಲ. ಹೀಗೆ ನಡೆಯುವುದೆಂದು ನಾನು ಮನಸ್ಸಿನಲ್ಲಿಯೂ ಊಹಿಸಿರಲಿಲ್ಲ. ಆದರೆ, ಭಗವಂತನು ಚಿತ್ತದಲ್ಲಿ ಹಾಗೆ ಯೋಚಿಸಿರಬೇಕು. ಆದ್ದರಿಂದಲೇ ಹಾಗೆ ನಡೆಯಿತು.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಬ್ಬರು ಜಗಳವಾಡುತ್ತಿದ್ದಾರಲ್ಲ ಎಂದು ಕೊಳ್ಳುತ್ತೇವೆ. ಆದರೆ, ಭಗವಂತನ ಅನುಗ್ರಹವಾದರೆ, ಅವರು ಅನ್ಯೋನ್ಯರಾಗುತ್ತಾರೆ. ಹಾಗೆಯೇ ಭಗವದನುಗ್ರಹ ದಿಂದ ದೊರಕುವ ಒಳ್ಳೆಯ ಬುದ್ಧಿಯಿಲ್ಲದೇ ಹೋದರೆ, ಸ್ನೇಹಿತರಾಗಿದ್ದವರು ಬೇರೆ ಯಾಗುತ್ತಾರೆ. ಕೆಟ್ಟ ಭಾವನೆಗಳನ್ನು ಮನಸ್ಸಿನಲ್ಲಿಟ್ಟುಕೊಳ್ಳದೆ, ಒಳ್ಳೆಯ ಬುದ್ಧಿ ಯಿಂದ ಭಗವಂತನನ್ನು ಸ್ಮರಿಸಿದರೆ, ಭಗವಂತನು ನಮಗೆ ಖಂಡಿತ ಅನುಗ್ರಹ ಮಾಡುತ್ತಾನೆ.

ಹರನಮಃ ಪಾರ್ವತೀಪತಯೇ । ಹರಹರ ಮಹಾದೇವ ॥
ಜಾನಕೀಕಾಂತಸ್ಮರಣಂ । ಜಯಜಯರಾಮ ॥

ಪುಣ್ಯಭೂಮಿ ಭಾರತ

ಗಂಗಾಪೂರಪ್ರಚಲಿತಜಟಾಸ್ರಸ್ತಭೋಗೀಂದ್ರಪೀತಾಮ್
ಆಲಿಂಗತೀಮಚಲತನಯಾಂ ಸಸ್ಮಿತಂ ವೀಕ್ಷಮಾಣಃ ।
ಲೀಲಾಪಾಂಗೈಃ ಪ್ರಣತಜನತಾಂ ನಂದಯನ್ ಚಂದ್ರಮೌಲಿಃ
ಮೋಹಧ್ವಾಂತಂ ಹರತು ಪರಮಾನಂದಮೂರ್ತಿಶ್ಶಿವೋ ನಃ ॥

ನಾವೆಲ್ಲರೂ ತುಂಬ ಪುಣ್ಯವಂತರು. ಏಕೆಂದರೆ ನಮಗೆ ಮನುಷ್ಯ ಜನ್ಮವೆಂಬ ವಿಶೇಷ ಭಾಗ್ಯ ಸಿಕ್ಕಿದೆ. ನಾವು ಸತ್ಪುರುಷರ ಸಂಗವನ್ನು ಪಡೆದಿರುವವರು. ಆದ್ದರಿಂದ ಪುಣ್ಯಶಾಲಿಗಳಾಗಿದ್ದೇವೆ. ಮಹಾತ್ಮರ ಸಂಗದಿಂದ ಇತರರೂ ಪುಣ್ಯಶಾಲಿಗಳಾಗಿಬಿಡು ತ್ತಾರೆ. ನಾವು ಹುಟ್ಟಿರುವ ಈ ಭಾರತ ಭೂಮಿಯಲ್ಲಿಯೇ ಭಗವಂತನು ಶ್ರೀರಾಮ ನಾಗಿ ಅವತರಿಸಿ ಲೋಕಕ್ಕೆ ಧರ್ಮಮಾರ್ಗವನ್ನು ತೋರಿಸಿದನು. ಹಾಗೆಯೇ ಶ್ರೀ ಕೃಷ್ಣನಾಗಿ ಅವತರಿಸಿ ಲೋಕಕ್ಕೆ ಉಪದೇಶ ಮಾಡಿದನು. ಹಾಗೆಯೇ ಈ ಭೂಮಿಯಲ್ಲಿಯೇ ಪರಮೇಶ್ವರನು ಆದಿಶಂಕರರಾಗಿ ಅವತರಿಸಿ–"ನೀವು ಯಾರನ್ನು ಕುರಿತಾದರೂ ಉಪಾಸನೆ ಮಾಡಿ, ಆದರೆ ನೀವು ಉಪಾಸನೆ ಮಾಡುವುದು ಒಂದೇ ಆಗಿರುವ ಪರವಸ್ತುವನ್ನೇ, ಇತರ ದೇವತೆಗಳಲ್ಲಿ ವ್ಯತ್ಯಾಸವನ್ನು ಕಾಣಬೇಡಿ"–ಎಂದು ಉಪದೇಶ ಮಾಡಿದರು. ಹೀಗೆ ಭಾರತ ಭೂಮಿಯಲ್ಲಿ ಹಲವಾರು ಭಗವದವತಾರ ಗಳಾಗಿವೆ.

ಆದ್ದರಿಂದಲೇ ನಾವು ತುಂಬ ಪುಣ್ಯಶಾಲಿಗಳು. ಆದರೆ ನಾವು ಸ್ವಲ್ಪ ಯೋಚನೆ ಮಾಡಬೇಕು. ನಾವು ಸರಿಯಾದ ಮಾರ್ಗದಲ್ಲಿ ಇದ್ದೇವೆಯೋ ಎಂದು ನೋಡಿಕೊಳ್ಳ ಬೇಕು. ಆನೆಯ ಹೊಟ್ಟೆಯಲ್ಲಿ ಹುಟ್ಟಿದ ಮರಿಯೂ ಆನೆಯಾಗಿಯೇ ಇರಬೇಕು. ಆದರಂತೆ ಈ ಪುಣ್ಯಭೂಮಿಯಲ್ಲಿ ಹುಟ್ಟಿರುವ ನಾವು ಅವರು ಮಾಡಿದ ಉಪದೇಶಗಳನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಸರಿಸುತ್ತಾ ಪುಣ್ಯಕಾರ್ಯಗಳನ್ನು ಮಾಡುತ್ತಿದ್ದೇವೆಯೋ ?-ಎಂದು ನೋಡಿ ಕೊಳ್ಳಬೇಕು. ನಾವು ಹಾಗಿರುವುದಾದರೆ ಅದು ಹೆಮ್ಮೆ ಪಡಬೇಕಾದ ವಿಷಯ. ನಾವು ಈ ಭೂಮಿಯ ಹಿರಿಮೆಯನ್ನು ತಿಳಿದುಕೊಳ್ಳದಿದ್ದರೆ, ಮತ್ತು ನಮಗೋಸ್ಕರ ಒಂದು ಗುರಿಯನ್ನು ಇಟ್ಟುಕೊಳ್ಳದಿದ್ದರೆ ಏನು ಪ್ರಯೋಜನ ?

ನಾವು ಸುಖವನ್ನೂ ಅನುಭವಿಸುತ್ತಿದ್ದೇವೆ, ದುಃಖವನ್ನೂ ಅನುಭವಿಸುತ್ತಿದ್ದೇವೆ. ಆದರೆ ನಾವು ಎರಡರಲ್ಲೂ ಸಮವಾಗಿರಬೇಕು. ಆದರೆ ಸಾಮಾನ್ಯ ಜನರು ಸುಖ ಬಂದಾಗ ಸಂತೋಷಪಡುತ್ತಾರೆ ; ದುಃಖ ಬಂದಾಗ ಗೋಳಾಡುತ್ತಾರೆ. ಇದಕ್ಕೆ ಕಾರಣವೇನು ? ಒಂದು ದೃಢವಾದ ಮನಸ್ಥೈರ್ಯವಿಲ್ಲ. ಭಗವಂತನು ಶ್ರೀರಾಮನಾಗಿ ಅವತಾರ ಮಾಡಿದಾಗ ಹಲವು ಬಗೆಯಾದ ಕಷ್ಟಗಳನ್ನು ಅನುಭವಿಸಿದನು. ವನವಾಸಕ್ಕೆ ಹೋದಾಗಲೂ ಅವನ ಮನಸ್ಸಿನಲ್ಲಿ ಯಾವ ವಿಧವಾದ ವಿಕಾರವೂ ಉಂಟಾಗಲಿಲ್ಲ. ಅವನು ಅಯೋಧ್ಯೆಯಲ್ಲಿ ಎಷ್ಟು ಸಂತೋಷದಿಂದ ಕಾಲ ಕಳೆದನೋ ಅದರಂತೆ ಕಾಡಿನಲ್ಲೂ ಆನಂದದಿಂದಲೇ ಇದ್ದನು. ಇದಕ್ಕೆ ಕಾರಣವೇನೆಂದರೆ ಅವನು ಒಂದು ಗುರಿಯನ್ನು, ಒಂದು ಲಕ್ಷ್ಯವನ್ನು ಇಟ್ಟುಕೊಂಡಿದ್ದನು. "ನಾವು ನಮ್ಮ ಕರ್ತವ್ಯವನ್ನು ಮಾಡತಕ್ಕದ್ದು" ಎಂದು ನಮಗೆ ತೋರಿಸಿಕೊಟ್ಟಿದ್ದಾನೆ. ಅವನು "ನಾವು ಈ ಲೋಕದಲ್ಲಿ ಭೋಗಪಡುವುದಕ್ಕಾಗಿಯೋ, ಸ್ವಾರ್ಥ ಸಾಧನೆಗಾಗಿಯೋ ಹುಟ್ಟಿಲ್ಲ"-ಎಂದು ತೋರಿಸಿದ್ದಾನೆ. ಅವನು ಇಂತಹ ಮನೋಭಾವವಿದ್ದ ಕಾರಣ ದಿಂದಲೇ ಭಗವಂತನಾದ. ಶ್ರೀರಾಮನು ಯಾವ ವಿಧವಾದ ವಿಕಾರಕ್ಕೂ ಒಳಗಾಗದೆ ಸಮಸ್ಥಿತಿಯಲ್ಲಿ ಇರಲು ಸಾಧ್ಯವಾಯಿತು.

ಕರ್ತವ್ಯವೆಂಬುದು ಪ್ರತಿಯೊಬ್ಬನಿಗೂ ಒಂದೊಂದು ವಿಧವಾಗಿರುತ್ತದೆ. ಒಂದು ಮಗುವಿಗೆ ತನ್ನ ತಂದೆ ಹಾಗೂ ತಾಯಿಯನ್ನು ಮರ್ಯಾದೆಯಿಂದ ಕಾಣಬೇಕು, ಅವರು ಹೇಳಿದಂತೆ ಕೇಳಿಕೊಂಡಿರಬೇಕು-ಎಂಬುದು ಕರ್ತವ್ಯ. ಹಾಗೆಯೇ ತಾಯಿ ತಂದೆಯರಿಗೆ ತಮ್ಮ ಮಕ್ಕಳ ಮೇಲೆ ವಾತ್ಸಲ್ಯ ಹೊಂದಿ, ಅವರ ಒಳ್ಳೆಯದಕ್ಕಾಗಿ ಶ್ರಮಿಸಬೇಕು-ಎಂಬುದು ಕರ್ತವ್ಯ. ಅವರು ಹಾಗೆ ಮಾಡದಿದ್ದರೆ, ಅವರು ನಿಜವಾದ ತಂದೆ-ತಾಯಿಯರು ಎಂದು ನಾವು ಹೇಳಲಾಗುವುದಿಲ್ಲ. ಆದರೆ, ಮಕ್ಕಳಲ್ಲಿ ಅತಿಶಯವಾದ ಪ್ರೀತಿಯನ್ನಿಟ್ಟರೆ ಅದರಿಂದ ಕಷ್ಟವೇ ಬರುತ್ತದೆ. ಉದಾಹರಣೆಗೆ ದಶರಥನಿಗೆ ತನ್ನ ಮಗನ ಮೇಲೆ ಅತಿಶಯವಾದ ಪ್ರೀತಿ. ಆದ್ದರಿಂದಲೇ ತನ್ನ ಮಗನು ತನ್ನಿಂದ ಅಗಲಿ ಹೋದಾಗ ಅದನ್ನು ತಾಳಲಾರದೆ ಸತ್ತೇಹೋದನು. ಇದಕ್ಕೆ ನೇರ ವಿರೋಧವಾಗಿ ಕಾಣಬರುತ್ತಾಳೆ ಕೈಕೇಯಿ. ಕೈಕೇಯಿಗೆ ಮಂಥರಾ ಎಂಬ ಕೆಟ್ಟ ಹೆಂಗಸಿನ ಸಹವಾಸ. ಸಹವಾಸ ಹೇಗಿರುತ್ತದೆಯೋ ಅದಕ್ಕೆ ತಕ್ಕಂತೆ ಮನಸ್ಸು ಬದಲಾವಣೆ ಹೊಂದುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮನು ಕೌಸಲ್ಯೆಯ ಮಗನಾಗಿದ್ದರೂ, ಕೈಕೇಯಿ ಮೊದಮೊದಲಿಗೆ ರಾಮನು ತನ್ನ ಪುತ್ರನೆಂದೇ ತಿಳಿದು ರಾಮನಲ್ಲಿ ತುಂಬ ಪ್ರೀತಿಯನ್ನಿಟ್ಟಿದ್ದಳು. ಆದರೆ, ಕೆಟ್ಟ ಹೆಂಗಸಾದ ಮಂಥರೆಯು ಕೈಕೇಯಿಯ ಬಳಿಗೆ ಬಂದು-"ನಿನ್ನ ಮಗನಿಗೆ ಅರಸುತನ ಗಿಟ್ಟುವುದಿಲ್ಲ, ರಾಜನು ರಾಮನಿಗೇ ರಾಜ್ಯಭಾರ ಮಾಡುವ ಹಕ್ಕನ್ನು ಕೊಡಲು ಬಯಸಿದ್ದಾನೆ. ಆದ್ದರಿಂದ ನೀನು ರಾಮಚಂದ್ರನು ವನವಾಸಕ್ಕೆ ಹೋಗುವಂತೆ ಮಾಡು, ನಿನ್ನ ಮಗನಾದ ಭರತನೇ ರಾಜನನ್ನಾಗಿಸಲು ಪ್ರಯತ್ನ ಪಡು"-ಎಂದು ಹೇಳುತ್ತಾಳೆ. ಈ ವಂಚಕಿಯ ಮಾತುಗಳನ್ನು ಕೇಳಿದ್ದರಿಂದ ಕೈಕೇಯಿಯ ಮನಸ್ಸು ಬದಲಾವಣೆ ಹೊಂದಿತು. ಆಕೆಯು ದಶರಥನು ತನಗೆ ಕೊಟ್ಟಿದ್ದ ಎರಡು ವರಗಳನ್ನು ಇದಕ್ಕಾಗಿ ಉಪಯೋಗಿಸಿಕೊಂಡಳು. ದಶರಥನೂ ಶಕ್ತಿಯಿಲ್ಲದವನಾಗಿ ಆ ವರಗಳಿಗೆ ಬದ್ಧನಾಗಿ ನಡೆದುಕೊಂಡನು. ರಾಮನಾದರೋ-"ನನ್ನ ತಂದೆಯ ಅಪ್ಪಣೆಯನ್ನು ನನ್ನ ಜೀವವನ್ನು ಕೊಟ್ಟಾದರೂ ಪಾಲಿಸುತ್ತೇನೆ"-ಎಂದು ತೀರ್ಮಾನಕ್ಕೆ ಬಂದಿರುತ್ತಾನೆ. ಅದೇ ಒಬ್ಬ ಪುತ್ರನ ಲಕ್ಷಣ. ಆದರೆ ರಾಮನು ತಂದೆಯ ಬಳಿಗೆ ಬಂದಾಗ ದಶರಥನು ಮಗನ ಮೇಲಿನ ಅಗಾಧ ಪ್ರೀತಿಯಿಂದ ಏನನ್ನೂ ಹೇಳಲಾಗಲಿಲ್ಲ. ಆದರೆ, ವಿಷಯವನ್ನು ತಿಳಿದ ಕೂಡಲೇ ರಾಮನು-"ನನ್ನ ತಂದೆಯ ಆಜ್ಞೆಯನ್ನು ನಾನು ಪಾಲಿಸಿಯೇ ತೀರುತ್ತೇನೆ. ನನ್ನ ವಾಗ್ದಾನವನ್ನು ಅನುಸರಿಸಿಯೇ ತೀರುತ್ತೇನೆ. ಹಾಗೆ ನಾನು ಮಾಡದಿದ್ದರೆ ನಿಮ್ಮ ಮಗನೇ ಅಲ್ಲ. ಹದಿನಾಲ್ಕು ವರ್ಷಗಳ ನಂತರ ನಾನು ಈ ನಗರಕ್ಕೆ ಹಿಂದಿರುಗಿ ಬರುತ್ತೇನೆ"-ಎಂದು ತನ್ನ ತಂದೆಗೆ ಹೇಳುತ್ತಾನೆ.

ಈ ಪರಿಸ್ಥಿತಿಯಲ್ಲಿ ಬೇರೆ ಇನ್ನಾರಾದರೂ ಇದ್ದಿದ್ದರೆ ಏನು ಮಾಡುತ್ತಿದ್ದರು ?-ಎಂದು ಯೋಚಿಸಬೇಕು. ರಾಮನ ತಮ್ಮ ಲಕ್ಷ್ಮಣನಿಗೆ ಅಣ್ಣನಲ್ಲಿ ಬಹುವಾದ ಪ್ರೀತಿ. ಅವನು ರಾಮನನ್ನು ಕುರಿತು-"ನೀನು ಕಾಡಿಗೆ ಏಕೆ ಹೋಗಬೇಕು ? ನೀನು ನಮಗೆ ಹಿರಿಯ. ಮೊದಲು ಹುಟ್ಟಿದವನಿಗೇ ರಾಜನಾಗುವ ಹಕ್ಕು. ನಮ್ಮ ತಂದೆಯೋ ಹುಚ್ಚು ಹಿಡಿದವನಂತೆ ಆಡುತ್ತಿದ್ದಾನೆ. ತನ್ನ ಹೆಂಡತಿಯ ಮಾತನ್ನು ಕೇಳುತ್ತಿದ್ದಾನೆ" ಎನ್ನುತ್ತಾನೆ. ಆಗ ರಾಮ-"ಯಾರು ನಮಗೆ ಒಡೆಯರಾಗಿದ್ದಾರೋ ಅವರ ಅಪ್ಪಣೆಯಂತೆ ನಾವು ನಡೆಯಬೇಕು. ಅವರು ಹೇಗಿದ್ದರೂ ಸರಿ. ಅದನ್ನು ನಾವು ಪ್ರಶ್ನಿಸುವ ಹಾಗಿಲ್ಲ. ನನ್ನ ತಂದೆ ನಾನು ವನವಾಸಕ್ಕೆ ಹೋಗಬೇಕೆಂದು ಅಪ್ಪಣೆ ಮಾಡಿದ್ದಾನೆ. ಅದರಂತೆ ನಾನು ನಡೆಯಬೇಕಾದದ್ದು"-ಎಂದು ಹೇಳುತ್ತಾನೆ. ಆಗ ಪುನಃ ರಾಮನನ್ನು ನೋಡಿ ಲಕ್ಷ್ಮಣನು-"ನೀನು ನಿನ್ನ ತೀರ್ಮಾನವನ್ನು ಕುರಿತು ಇಷ್ಟು ದೃಢವಾಗಿರುವ ಪಕ್ಷಕ್ಕೆ, ನಿನ್ನ ತಮ್ಮನಾದ ನಾನು ನಿನ್ನೊಡನೆಯೇ ಬರುತ್ತೇನೆ. ಹಾಗೆ ಮಾಡದೆ ಈ ರಾಜ್ಯದಲ್ಲೇ ಇದ್ದುಬಿಟ್ಟರೆ ನಾನು ಮಹಾಪಾಪಿಯಾಗುತ್ತೇನೆ"-ಎಂದು ಹೇಳುತ್ತಾನೆ. ಇದು ತಮ್ಮನ ಗುಣಾತಿಶಯವನ್ನು ತೋರಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮನು ವನವಾಸಕ್ಕೆ ಹೋಗುವ ವಿಷಯ ಸೀತೆಗೆ ತಿಳಿದಕೂಡಲೇ ಅವಳು ತಾನೂ ರಾಮನೊಡನೆ ಹೋಗಬೇಕೆಂದು ಆಸೆಪಟ್ಟಳು. ಆಗ ರಾಮನು ಸೀತೆಗೆ–"ನೀನು ಸುಖವಾದ ಬಾಳನ್ನು ನಡೆಸಿದವಳು, ಕಾಡಿಗೆ ಬಂದರೆ ತುಂಬ ಕಷ್ಟಕರವಾದ ಜೀವನವನ್ನು ನಡೆಸಬೇಕಾಗುತ್ತದೆ. ನಾನು ಮಾತ್ರ ಹೋಗುತ್ತೇನೆ"-ಎಂದು ಹೇಳುತ್ತಾನೆ. ಅದಕ್ಕೆ ಸೀತೆ–"ನೀನು ಎಲ್ಲಿರುತ್ತೀಯೋ ಅಲ್ಲಿಯೇ ನನಗೆ ಸುಖ. ನಾನು ಇಲ್ಲಿ ಅಯೋಧ್ಯೆಯಲ್ಲಿದ್ದರೂ, ಸುಖವನ್ನು ಕೊಡುವ ವಸ್ತುಗಳು ಇಲ್ಲಿದ್ದರೂ ಅವುಗಳಿಂದ ನನಗೆ ಸುಖವಿಲ್ಲ. ನೀನಿರುವ ಸ್ಥಳವೇ ನನಗೆ ಸುಖವನ್ನು ತರುವ ಸ್ಥಳ. ಆದ್ದರಿಂದ ನಾನು ಖಂಡಿತವಾಗಿ ನಿನ್ನೊಡನೆ ಬರುವವಳೆ"–ಎಂದು ಹೇಳುತ್ತಾಳೆ. ಇದರಿಂದ, ಹೆಂಡತಿಯ ಕರ್ತವ್ಯನಿಷ್ಠೆ ಹೇಗಿರಬೇಕು, ಅವಳು ಹೇಗೆ ತನ್ನ ಕರ್ತವ್ಯವನ್ನು ನಿರ್ವಹಿಸಬೇಕು–ಎಂದು ತಿಳಿದುಬರುತ್ತದೆ. ಮುಂದೆ ನೋಡೋಣ.

ಭರತನು ಅಯೋಧ್ಯೆಗೆ ಹಿಂದಿರುಗಿ ಬರುತ್ತಾನೆ. ಆಗ ಅವನ ತಾಯಿ ಕೈಕೇಯಿಯು ಅವನನ್ನು ಕುರಿತು–"ನೀನು ಈಗ ಕಿರೀಟಧಾರಣೆ ಮಾಡಿಕೊಳ್ಳಬಹುದು. ರಾಮನು ಕಾಡಿಗೆ ಹೋಗಿಬಿಟ್ಟಿದ್ದಾನೆ"–ಎಂದು ಮುಂಚಿತಾಗಿ ಹೇಳುತ್ತಾಳೆ. ಅದಕ್ಕೆ ಉತ್ತರವಾಗಿ ಭರತನು–"ಇದೆಲ್ಲಿ ಧರ್ಮವಾಗುತ್ತದೆ ? ಅಣ್ಣನಿರುವಾಗ ನಾನು ರಾಜನಾಗುವುದೇ ? ಅದು ಸಾಧ್ಯವೇ ಇಲ್ಲ. ನೀನು ದೊಡ್ಡ ಪಾಪವನ್ನು ಮಾಡಿಬಿಟ್ಟೆ. ನಿನಗೆ ನನ್ನ ತಾಯಿಯಾಗಿರಲು ಅರ್ಹತೆಯಿಲ್ಲ. ನಾನೂ ರಾಮನ ಬಳಿಗೆ ಹೋಗಿಬಿಡುತ್ತೇನೆ" ಎಂದು ಹೇಳಿ ಕೂಡಲೇ ರಾಮನನ್ನು ಹುಡುಕುತ್ತಾ ಭರತನು ಹೊರಟು ಬಿಡುತ್ತಾನೆ. ರಾಮನ ಬಳಿಗೆ ಬಂದ ಭರತ ಅವನನ್ನು ಅಯೋಧ್ಯೆಗೆ ಬರುವಂತೆ ಪ್ರಾರ್ಥಿಸುತ್ತಾನೆ. ಆದರೆ ರಾಮನಾದರೋ–"ಇಲ್ಲ, ತಂದೆಯ ಆಜ್ಞೆಯಂತೆ ನೀನೇ ರಾಜನಾಗಬೇಕಾದವನು. ಅದೇ ಸರಿ"–ಎಂದು ಹೇಳಲು, ಭರತನು "ನೀನಿರುವಾಗ ನಾನು ಹೇಗೆ ಸಿಂಹಾಸನವನ್ನೇರಲಿ ? ಅದು ಸರಿಯಲ್ಲವಲ್ಲ"-ಎಂದು ಹೇಳುತ್ತಾನೆ. ಆಗ ರಾಮ–"ನಾವು ಧರ್ಮಕ್ಕೆ ಕಟ್ಟುಬಿದ್ದಿದ್ದೇವೆ. ನಮ್ಮ ತಂದೆಯು ಹೇಳಿದಂತೆ ನಡೆಯುವುದೇ ಧರ್ಮ. ಆದ್ದರಿಂದ ನೀನು ಸಿಂಹಾಸನವನ್ನೇರಿ ರಾಜ್ಯಭಾರ ಮಾಡು"-ಎಂದು ಅಪ್ಪಣೆ ಮಾಡಿದನು. ಆಗ ಭರತನು ರಾಮನನ್ನು ಕುರಿತು–"ನೀನು ನಿನ್ನ ಪಾದುಕೆಗಳನ್ನು ನನಗೆ ಅನುಗ್ರಹಿಸಿಕೊಡು. ಆ ಪಾದುಕೆಗಳನ್ನು ಸಿಂಹಾಸನದ ಮೇಲಿಟ್ಟು, ಅದನ್ನೇ ಅರಸನಂತೆ ಭಾವಿಸಿ, ನಾನು ನಿನ್ನ ದಾಸನಾಗಿ ರಾಜ್ಯಭಾರ ಮಾಡುತ್ತಿರುತ್ತೇನೆ"–ಎಂದು ಪ್ರಾರ್ಥಿಸಿಕೊಂಡನು. ಹಾಗೆಯೇ ನಡೆಯಿತು. ಇದರಿಂದ ಭರತನ ಗುಣಗಳು ಎಷ್ಟು ಉತ್ತಮವಾದದ್ದು ಎಂಬುದು ನಮಗೆ ತಿಳಿದುಬರುತ್ತದೆ.

ಹೀಗೆ ರಾಮಾಯಣದ ಒಂದೊಂದು ಕಥೆಯನ್ನೂ ನಾವು ನೋಡಿದಾಗ ನಾವು ಹೇಗೆ ನಡೆದುಕೊಳ್ಳಬೇಕು ಎಂಬುದು ನಮಗೆ ಸ್ಪಷ್ಟವಾಗಿ ತಿಳಿದುಬರುತ್ತದೆ. ಇದರಂತೆ

Sri Vidyabharathi Book Centre, Sringeri

CC-O. In Public Domain. Digitized by eGangotri

ರಾಮರಾಜ್ಯವನ್ನು ಕುರಿತ ವರ್ಣನೆಯೂ ರಾಮಾಯಣದಲ್ಲಿ ಬರುತ್ತದೆ. ರಾಮರಾಜ್ಯದಲ್ಲಿ ಪ್ರಜೆಗಳು–"ನಾವೆಲ್ಲರೂ ರಾಮನ ಪ್ರಜೆಗಳು. ರಾಜನು ಏನು ಹೇಳುತ್ತಾನೆಯೋ ಹಾಗೆಯೇ ನಾವು ನಡೆದುಕೊಳ್ಳತಕ್ಕದ್ದು. ಅದಕ್ಕೆ ವಿರೋಧವಾಗಿ ನಡೆದುಕೊಳ್ಳತಕ್ಕದ್ದಲ್ಲ"–ಎಂಬ ಮನೋಭಾವದಿಂದಲೂ ವಿಶ್ವಾಸದಿಂದಲೂ ಇದ್ದರಂತೆ. ರಾಮನೂ ಹಾಗೆಯೇ–"ಪ್ರಜೆಗಳಿಗೆ ನಾನು ದ್ರೋಹವನ್ನು ಬಗೆಯಬಾರದು, ಅವರ ಸುಖ ಸಂತೋಷಗಳೇ ನನ್ನ ಗುರಿಯಾಗಿರಬೇಕು. ಅವರು ಏನನ್ನಾದರೂ ಅಪೇಕ್ಷಿಸಿ ಅದರಂತೆ ನಡೆದುಕೊಳ್ಳದಿದ್ದರೆ, ನನಗೆ ಅರಸನಾಗಲು ಅರ್ಹತೆ ಇಲ್ಲವಾಗುತ್ತದೆ. ಒಂದು ಕೆಲಸ ಅಧರ್ಮವಾದರೂ ಜನರಿಗೋಸ್ಕರ ನಾನು ಅದನ್ನು ಮಾಡಲೇಬೇಕು" ಎಂಬ ಭಾವನೆಯನ್ನೇ ಹೊಂದಿದ್ದನು. ಪ್ರಜೆಗಳ ಅಭಿಪ್ರಾಯ ಹಾಗಿದ್ದುದರಿಂದಲೇ ರಾಮನು ಸೀತೆಯನ್ನು ತ್ಯಾಗ ಮಾಡುವ ಸಾಹಸ ಮಾಡಿದನು. ಸೀತೆಯನ್ನು ತ್ಯಾಗ ಮಾಡುವುದು ರಾಮನಿಗೆ ಸ್ವಲ್ಪವೂ ಪ್ರಿಯವಾದ ಕೆಲಸವಲ್ಲ. ಆದ್ದರಿಂದಲೇ ಅವನು ತುಂಬ ಸಂಕಟವನ್ನು ಅನುಭವಿಸಿದನು. ಆದರೂ ಪ್ರಜೆಗಳನ್ನು ತೃಪ್ತಿಪಡಿಸಬೇಕು ಎಂಬ ಕರ್ತವ್ಯವಿದ್ದುದರಿಂದ ಅದರಂತೆ, ಸೀತೆಯನ್ನು ಕಾಡಿಗೆ ಕಳುಹಿಸಿದನು. ಅನಂತರ ಅವನು ಅಶ್ವಮೇಧ ಯಾಗವನ್ನು ಮಾಡಿದನು. ಆ ಯಾಗವನ್ನು ಮಾಡುವಾಗ ಸೀತೆ ಅವನ ಬಳಿಯಲ್ಲಿ ಇರಲಿಲ್ಲ. ಆದ್ದರಿಂದ ಸೀತೆಯ ಕನಕ ಮೂರ್ತಿಯನ್ನು ಮಾಡಿಸಿ ಸೀತೆಯ ಪ್ರತಿನಿಧಿಯಾಗಿ ಅದನ್ನಿಟ್ಟುಕೊಂಡು ಯಾಗವನ್ನು ಮಾಡಿದನು. ಇದರಿಂದ ರಾಮನಿಗೆ ಸೀತೆಯ ಮೇಲಿದ್ದ ಪ್ರೀತಿ ಎಂತಹುದು ಎಂಬುದು ತಿಳಿಯುತ್ತದೆ.

ಹೀಗೆ ರಾಮಾಯಣದಲ್ಲಿರುವ ಹಲವಾರು ಪ್ರಸಂಗಗಳನ್ನು ನೋಡಿದರೆ ತಂದೆಯಾದ ದಶರಥನಿಗೆ ಮಗನ ಮೇಲಿದ್ದ ಪ್ರೀತಿ, ಭರತನಿಗೆ ರಾಮನ ಮೇಲಿದ್ದ ಭಕ್ತಿ, ಲಕ್ಷ್ಮಣನಿಗೆ ರಾಮನ ಮೇಲಿದ್ದ ದಾಸಭಾವ, ರಾಮನು ಅನುಸರಿಸಿದ ಆದರ್ಶಗಳು–ಇವೆಲ್ಲವೂ ತಿಳಿದುಬರುತ್ತದೆ. ಇದರಿಂದ ನಮ್ಮ ಬಾಳನ್ನು ನಾವು ಹೇಗೆ ರೂಪಿಸಿಕೊಳ್ಳಬೇಕು ಎಂಬುದೂ ತಿಳಿದುಬರುತ್ತದೆ. ಇದೆಲ್ಲವನ್ನೂ ನೋಡುವಾಗ ರಾಮನು ಒಬ್ಬ ಮನುಷ್ಯನಂತೆಯೇ ಜೀವನ ನಡೆಸಿದನು ಎಂದು ನಾವು ಅಂದುಕೊಂಡರೂ ರಾಮನು ಒಬ್ಬ ಅವತಾರಪುರುಷನೇ ಎಂದು ನಮ್ಮ ಮನಸ್ಸಿಗೆ ಖಚಿತವಾಗುತ್ತದೆ.

ಇದರಂತೆಯೇ ಕೃಷ್ಣನ ಜೀವನದಲ್ಲೂ ನಾವು ನೋಡಬಹುದು. ಹಲವಾರು ಸಂದರ್ಭಗಳಲ್ಲಿ ಕೃಷ್ಣನು ತಾನೊಬ್ಬ ಅವತಾರಪುರುಷ ಎಂಬುದನ್ನು ಸ್ಪಷ್ಟವಾಗಿ ತೋರಿಸಿದ್ದಾನೆ. ಇನ್ನು ಕೆಲವು ಸಂದರ್ಭಗಳಲ್ಲಿ ತಾನು ಒಬ್ಬ ಮನುಷ್ಯನೇ ಎಂಬಂತೆ ನಾಟಕವಾಡಿ, ಜನಕ್ಕೆ ಮಾರ್ಗದರ್ಶಿಯಾಗಿದ್ದಾನೆ. ಅಂಥ ಕೃಷ್ಣ ಅರ್ಜುನನನ್ನು ನಿಮಿತ್ತ ಮಾಡಿಕೊಂಡು ಲೋಕಕ್ಕೆ ಉಪದೇಶವನ್ನು ಅನುಗ್ರಹಿಸಿದ್ದಾನೆ. ಅದೇ ಭಗವದ್ಗೀತೆ. ಅದರಲ್ಲಿ ಹಲವು ವಿಧಗಳಾದ ಉಪದೇಶಗಳು ಬಂದಿವೆ. ಉದಾಹರಣೆಗೆ–

Sri Vidyabharathi Book Centre, Sringeri

CC-O. In Public Domain. Digitized by eGangotri

ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ ।

(ಹುಟ್ಟಿದವನಿಗೆ ಮರಣವೂ, ಮೃತನಾದವನಿಗೆ ಪುನಃ ಜನ್ಮವೂ ತಪ್ಪದೆ ಪ್ರಾಪ್ತ ವಾಗುವುವು)-

-ಎಂದು ಹೇಳಿದ್ದಾನೆ. ಮರಣ ಒಬ್ಬನಿಗೆ ಬೇಗ ಬರಬಹುದು. ಮತ್ತೊಬ್ಬನಿಗೆ ಸ್ವಲ್ಪ ತಡವಾಗಿ ಬರಬಹುದು. ಇದರಲ್ಲಿ ವ್ಯತ್ಯಾಸವಾಗಬಹುದೇ ಹೊರತು, ಮರಣ ಬರುವುದರಲ್ಲಿ ತಾರತಮ್ಯವಿಲ್ಲ. ಆದ್ದರಿಂದ ಸಾವನ್ನು ಕುರಿತು ಕಳವಳ ಪಡಬಾರದು, ಅಥವಾ ಅಳಬಾರದು. ಈ ಉಪದೇಶ ಗೀತೆಯದು.

ಹೀಗೆಯೇ ಮಹಾಭಾರತದಲ್ಲಿ ಧರ್ಮರಾಯನ ಚರಿತ್ರೆಯನ್ನು ನೋಡ ಬಹುದು. ಅವನು ತುಂಬ ಒಳ್ಳೆಯ ಗುಣಗಳನ್ನು ಹೊಂದಿದ್ದವನು. ಧರ್ಮದಲ್ಲೇ ನಿರತನಾದವನು. "ನಾನು ವನವಾಸಕ್ಕೆ ಹೋಗುವುದಿಲ್ಲ"-ಎಂದು ಅವನು ಹೇಳ ಬಹುದಾಗಿತ್ತು. ಆದರೂ "ನಾನು ಜೂಜಿನಲ್ಲಿ ಸೋತು ಹೋಗಿದ್ದೇನೆ. ಆದ್ದರಿಂದ ನಾನು ಕೊಟ್ಟ ಮಾತಿನಂತೆ ನಡೆಯಬೇಕು"-ಎಂಬ ಭಾವನೆಯಿಂದ ಕಾಡಿಗೆ ಹೋದನು. ಹಾಗೆ ಮಾಡಿ ಅನಂತರ ಧರ್ಮಕ್ಕೆ ಜಯ ದೊರೆತಾಗ ಅವನು ರಾಜನಾದನು. ಪ್ರಜೆ ಗಳೆಲ್ಲರಿಗೂ ಪ್ರಿಯನಾಗಿದ್ದವನು. ಇಂಥ ವಿಷಯಗಳನ್ನು ರಾಮಾಯಣದಿಂದಲೂ ಮಹಾಭಾರತದಿಂದಲೂ ತಿಳಿದುಕೊಳ್ಳಬಹುದು. ಆದ್ದರಿಂದ ಧರ್ಮವನ್ನು ಕುರಿತು ತಿಳಿದುಕೊಳ್ಳಬೇಕಾದರೆ ನಾವು ರಾಮಾಯಣ ಮಹಾಭಾರತಗಳ ಕಥೆಗಳನ್ನು ಆಗಾಗ ಕೇಳುತ್ತಿರಬೇಕು. ಅದರಿಂದ ನಮಗೆ ಶ್ರೇಯಸ್ಸು ಉಂಟಾಗುವುದು.

ಇವುಗಳ ಮೂಲಕ ನಮ್ಮ ಕರ್ತವ್ಯಗಳೇನು ಎಂಬುದನ್ನು ನಾವು ತಿಳಿದುಕೊಳ್ಳ ಬಹುದು. ಆದರೆ ಈ ಕರ್ತವ್ಯಗಳಿಗೆ ಆಧಾರ ಯಾವುದು ಎಂಬುದನ್ನು ವೇದದ ಮೂಲಕವೇ ತಿಳಿದುಕೊಳ್ಳಬೇಕು. ನಮ್ಮ ದೇಶದ ಪುರಾತನ ಧರ್ಮ ಯಾವುದೋ ಅದೇ ಸನಾತನ ಧರ್ಮ. ಅದಕ್ಕೆ ಆಧಾರವಾದದ್ದು ವೇದ. ನಮ್ಮ ದೇಶದ ಋಷಿ ಗಳು ಹೊಸದಾಗಿ ಏನನ್ನೂ ಬರೆಯಲಿಲ್ಲ. ವೇದದಲ್ಲಿ ಹೇಳಲಾಗಿರುವುದನ್ನೇ ಅವರು ಉಪದೇಶ ಮಾಡಿದ್ದು. ವೇದದಲ್ಲಿ ಹೇಳಲಾಗಿರುವುದನ್ನೇ ಒಂದು ರೀತಿಯಾಗಿ ಸ್ಮೃತಿಗಳಲ್ಲಿ ಅವರು ವಿವರಿಸಿದರು. ಅವರು ತಮ್ಮದೇ ಆದ ಯಾವುದನ್ನೂ ಹೇಳ ಲಿಲ್ಲ. ಆದ್ದರಿಂದ ವೇದವನ್ನೇ ಆಧಾರವಾಗಿ ಹೊಂದಿರುವುದು ನಮ್ಮ ಧರ್ಮ. ವೇದ ಹುಟ್ಟಿದ ಕಾಲ ಲೆಕ್ಕಕ್ಕೆ ಸಿಕ್ಕತಕ್ಕದ್ದಲ್ಲ. ಅದು ಭಾರತದಲ್ಲಿ ಯಾವಾಗಲೂ ಇದ್ದೇ ಇತ್ತು.

ಇತರ ಮತಗಳಿಗಾದರೋ ಮೊದಲು ಅದನ್ನು ಉಪದೇಶಿಸಿದವರು ಒಬ್ಬರು ಇರುತ್ತಾರೆ. ಆದರೆ ಹಾಗೆ ನಮ್ಮ ಮತಕ್ಕೆ ಯಾರೂ ಇಲ್ಲ. ನಮ್ಮ ವೇದ ಸಂಸ್ಕೃತಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಅನಾದಿಯಾದದ್ದು. ನಾವು ಭಾರತದಲ್ಲಿ ಅನಾದಿಕಾಲದಿಂದಲೂ ಇದ್ದೇವೆ. ನಾವು ಎಲ್ಲಿಂದಲೋ ಇಲ್ಲಿಗೆ ಬಂದವರಲ್ಲ. ಆದ್ದರಿಂದ ನಮ್ಮ ಧರ್ಮವೇ ಇದು. ಇದರಲ್ಲಿ ಸ್ವಲ್ಪವೂ ಸಂದೇಹಕ್ಕೆಡೆಯಿಲ್ಲ ನಮ್ಮ ಭಾರತ ದೇಶ ಪುಣ್ಯಭೂಮಿ. ಆದ್ದರಿಂದಲೇ ಭಾರತೀಯ ಸಂಸ್ಕೃತಿಯಲ್ಲಿ ಅಭಿಮಾನವುಳ್ಳ ಕೆಲವರು ಬೇರೆ ದೇಶಗಳಿಗೆ ಹೋಗಿದ್ದರೂ, ತಮ್ಮ ತಂದೆಯ ಶ್ರಾದ್ಧವನ್ನು ಮಾಡಬೇಕಾದ ಕಾಲಕ್ಕೆ ಸರಿಯಾಗಿ ಇಲ್ಲಿಗೆ ಹಿಂದಿರುಗಿ ಬಂದು ಬಿಡುತ್ತಾರೆ. ಗಯೆಯಲ್ಲಿ ಶ್ರಾದ್ಧ ಮಾಡುವುದು ಪ್ರಶಸ್ತವೆಂದುಕೊಳ್ಳುತ್ತಾರೆ. ಇವೆಲ್ಲವನ್ನು ಹೊರದೇಶಗಳಲ್ಲಿ ಮಾಡಿದರೆ ಏನು ತಪ್ಪು ಎಂದು ಅವರಲ್ಲಿ ಕೆಲವರು ಯೋಚಿಸಬಹುದು. ಆದರೆ, ಹೊರನಾಡಿನ ಭೋಗಗಳನ್ನು ಅನುಭವಿಸಬಹುದು. ಹಣ ಸಂಪಾದಿಸಬಹುದು. ಆದರೆ, ನಮ್ಮ ದೇಶದಲ್ಲಿರುವ ಪವಿತ್ರಭಾವ ಅಲ್ಲಿ ಎಲ್ಲಿರುತ್ತದೆ ? ಇದರಿಂದ ಭಾರತದ ಪವಿತ್ರತೆ ಏನು ಎನ್ನುವುದು ನಮಗೆ ತಿಳಿದು ಬರುತ್ತದೆ. ನಮ್ಮ ಭಾರತೀಯ ಪರಂಪರೆಗೆ ಯಾವಾಗಲೂ ಒಂದು ಮರ್ಯಾದೆಯುಂಟು. ಅದು ಬಂದಿರುವುದು ನಮಗೆ ಒಂದು ಶೀಲ ಇರುವುದರಿಂದಲೇ ಆ ಶೀಲವೆಂಬುದು ನಮ್ಮನ್ನು ಬಿಟ್ಟು ಹೋದರೆ ನಮ್ಮ ಪರಂಪರೆಯನ್ನು ಕಾಪಾಡಲು ಸಾಧ್ಯವಾಗುವುದಿಲ್ಲ. ಸದ್ಗುಣಗಳಿಲ್ಲದ ಬಾಳನ್ನು ನಾವು ಬಾಳಬಾರದು ಶೀಲವೆಂದರೆ ಏನು ಎಂದು ವಿವರಿಸುತ್ತಾ ಗೌತಮರೆಂಬ ಮಹರ್ಷಿಗಳ–'ದಯಾ ಸರ್ವಭೂತೇಷು ಕ್ಷಾಂತಿಃ ಅನಸೂಯಾ ಶೌಚಂ ಅನಾಯಾಸಃ ಮಂಗಲಂ ಅಕಾರ್ಪಣ್ಯಂ ಅಸ್ಪೃಹಾ'–ಎಂದು ಹೇಳಿದ್ದಾರೆ.

ದಯಾ ಸರ್ವಭೂತೇಷು–ಎಂದರೆ ಇತರರ ವಿಷಯದಲ್ಲಿ ಕರುಣೆಯಿಂದಿರುವುದು ಕ್ಷಾಂತಿಃ–ಅಂದರೆ ಇತರರು ತಪ್ಪು ಮಾಡಿದರೂ ಅವರನ್ನು ಕ್ಷಮಿಸುವುದು. ಇತರರ ಮೇಲೆ ದೋಷಾರೋಪಣೆ ಮಾಡದಿರುವುದು. ಶೌಚಂ–ಎಂದರೆ ಪರಿಶುದ್ಧತೆ ಅನಾಯಾಸಃ–ಎಂದರೆ ಸೋಮಾರಿತನವಿಲ್ಲದೇ ಇರುವುದು. ಮಂಗಲಂ–ಎಂದರೆ ಒಳ್ಳೆಯ ಮಾತು ಮತ್ತು ಸಂತೋಷವಾದ ಮುಖಭಾವದಿಂದ ಇರುವುದು. ಅಕಾರ್ಪಣ್ಯಂ–ಎಂದರೆ ಲೋಭಿಯಾಗದಿರುವುದು, ಅಸ್ಪೃಹಾ–ಎಂದರೆ ಆಸೆಯನ್ನು ಹತೋಟಿಯಲ್ಲಿಟ್ಟುಕೊಂಡಿರುವುದು.

ನಾವೆಲ್ಲರೂ ಒಬ್ಬನೇ ಭಗವಂತನ ಮಕ್ಕಳು ಎಂಬುದನ್ನು ಜ್ಞಾಪಕದಲ್ಲಿ ಇಟ್ಟುಕೊಳ್ಳಬೇಕು. ನಮ್ಮಲ್ಲಿ ಒಬ್ಬೊಬ್ಬರಿಗೂ ಬೇರೆ ಬೇರೆ ತಾಯಿಯರು, ಬೇರೆಬೇರೆ ತಮ್ಮಂದಿರು ಇದ್ದರೂ ನಾವೆಲ್ಲರೂ ಒಂದೇ ಎಂದು ಹೇಳೋಣ. ಇದು ಹೇಗೆ ಎಂದು ಕೇಳಿದರೆ ನಮ್ಮೆಲ್ಲರಿಗೂ ತಂದೆಯಾಗಿರುವವನು ಒಬ್ಬನೇ ಭಗವಂತ ಎಂಬುದೇ ಉತ್ತರ ಆ ಭಗವಂತನನ್ನು ನಾವು ಮರೆತು ಬಿಟ್ಟರೆ, ಅವನ ಕಟ್ಟಳೆಗಳನ್ನು ಪರಿಪಾಲಿಸದಿದ್ದರೆ ನಾವು ನಮ್ಮ ತಂದೆಗೆ ದ್ರೋಹ ಮಾಡಿದಂತೆ ಆಗುತ್ತದೆ. ಆದ್ದರಿಂದಲೇ ನಾವೆಲ್ಲರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಒಂದೇ ಎಂಬುದನ್ನು ಮನಸ್ಸಿನಲ್ಲಿಟ್ಟುಕೊಂಡು ಭಗವದಾಜ್ಞೆಯಂತೆ ನಡೆದುಕೊಳ್ಳಬೇಕು. ಆ ಭಗವಂತನಿಗೆ ರೂಪವಿಲ್ಲ. ಅವನನ್ನು ಕುರಿತು ಹೇಳುವಾಗ ಆಕಾಶವತ್ ಸರ್ವಗತಶ್ಚ ನಿತ್ಯಃ (ಶಾಶ್ವತನಾದವನು, ಆಕಾಶದಂತೆ ಎಲ್ಲೆಲ್ಲಿಯೂ ತುಂಬಿರುವವನು) ಎಂದು ವರ್ಣಿಸುವುದುಂಟು. ಇದರಿಂದ ಭಗವಂತನು ಎಲ್ಲೆಲ್ಲಿಯೂ ಇದ್ದಾನೆ ಎಂದು ತಿಳಿದು ಬರುತ್ತದೆ. ಇದನ್ನು ಕುರಿತು ಒಂದು ಕಥೆಯನ್ನು ಹೇಳುವುದುಂಟು. ಇದು ಪ್ರಹ್ಲಾದನ ಕಥೆಯೇ–

ಪ್ರಹ್ಲಾದನನ್ನು ಕುರಿತು ಅವನ ತಂದೆ–"ಭಗವಂತನು ಎಲ್ಲಿದ್ದಾನೆ" ಎಂದು ಪ್ರಶ್ನಿಸುತ್ತಾನೆ. ಆದಕ್ಕೆ ಪ್ರಹ್ಲಾದನು–ಭಗವಂತನು ಎಲ್ಲೆಲ್ಲಿಯೂ ಇದ್ದಾನೆ"ಎಂದು ಹೇಳುತ್ತಾನೆ. ಇದನ್ನು ಕೇಳಿದ ಹಿರಣ್ಯಕಶಿಪುವು "ಈ ಕಂಬದಲ್ಲಿ ಭಗವಂತನು ಇದ್ದಾನಾ" ಎಂದು ಪ್ರಶ್ನಿಸಲು, ಪ್ರಹ್ಲಾದನು "ಹೌದು, ಈ ಕಂಬದಲ್ಲೂ ಇದ್ದಾನೆ" ಎಂದು ಹೇಳುತ್ತಾನೆ. ಆಗ ಹಿರಣ್ಯಕಶಿಪು "ಎಲ್ಲಿ ಭಗವಂತನನ್ನು ತೋರಿಸು. ಅವನನ್ನು ಕರೆ ನೋಡುತ್ತೇನೆ"–ಎಂದು ಹೇಳಿ ಘರ್ಜಿಸುತ್ತಾನೆ. ಆಗ ಪ್ರಹ್ಲಾದನು ಭಗವಂತನನ್ನು ಕುರಿತು ಪ್ರಾರ್ಥಿಸಲು ಭಗವಂತನು ಅಲ್ಲಿ ಕಾಣಿಸಿಕೊಳ್ಳುತ್ತಾನೆ. ಭಗವಂತನು ಅಲ್ಲಿ ಪ್ರತ್ಯಕ್ಷವಾದದ್ದು ನಿಜ. ಆದರೆ ಹಿರಣ್ಯಕಶಿಪು ಕರುಣೆಗೆ ಅರ್ಹನಲ್ಲದ ಒಬ್ಬ ರಾಕ್ಷಸ. ಆದ್ದರಿಂದ ಅವನನ್ನು ಕಂಡು ಭಗವಂತ "ಇವನನ್ನು ಭೂಲೋಕದಲ್ಲಿ ಜೀವಿಸಲು ಬಿಟ್ಟರೆ ತುಂಬ ಜನಕ್ಕೆ ಇವನು ಉಪದ್ರವವನ್ನು ನೀಡುತ್ತಲೇ ಇರುತ್ತಾನೆ. ಆದ್ದರಿಂದ ಈಗಲೇ ಇವನನ್ನು ಕರೆದುಕೊಂಡು ಹೋಗಿಬಿಡಬೇಕು"–ಎಂದು ತೀರ್ಮಾನಿಸಿ ಅವನನ್ನು ಆಗಲೇ ಸಂಹಾರ ಮಾಡುತ್ತಾನೆ.

ಈ ಕಥೆಯಿಂದ ನಮಗೆ ಭಗವಂತನು ಎಲ್ಲೆಲ್ಲೂ ಇದ್ದಾನೆ. ಅವನು ಎಲ್ಲಿ ಬೇಕಾದರೂ ಪ್ರತ್ಯಕ್ಷವಾಗಬಹುದು"–ಎಂದು ತಿಳಿದು ಬರುತ್ತದೆ. ಭಗವಂತನು ಎಲ್ಲೆಲ್ಲೂ ಇದ್ದರೂ ಬೇರೆ ಬೇರೆ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಉದಾಹರಣೆಗೆ–ಅರ್ಜುನನಿಗೆ ಭಗವಂತನು ಸ್ನೇಹಿತನ ರೂಪದಲ್ಲಿ ಕಾಣಿಸಿಕೊಂಡನು. ಸ್ನೇಹಿತನಂತೆಯೇ ಅರ್ಜುನನಲ್ಲಿ ನಡೆದುಕೊಂಡನು. ಆದ್ದರಿಂದಲೇ ಅರ್ಜುನನಿಗೆ ಕೃಷ್ಣನು ಸಾಕ್ಷಾತ್ ಭಗವಂತನೇ ಎಂಬುದು ತಿಳಿಯದೇ ಹೋಯಿತು. ಈ ಕಾರಣದಿಂದಲೇ ಅವನು ಭಗವಂತನ ಅಪಾರ ಮಹಿಮೆಯನ್ನು ಕಂಡಮೇಲೆ–

ಸಖೇತಿ ಮತ್ವಾಪ್ರಸಭಂ ಯದುಕ್ತಂ
ಹೇ ಕೃಷ್ಣ ಹೇ ಯಾದವ ಹೇ ಸಖೇತಿ

(ಅಜಾಗರೂ ಕತೆಯಿಂದಲೋ ಸ್ನೇಹ ಪ್ರಭಾವಧಿಂಧಳೋ ನಿನ್ನನ್ನು ಕೃಷ್ಣ, ಯಾಧವ ಎಂದು ಸಲಿಗೆಯಿಂದ ಕರೆದನಲ್ಲ)

Sri Vidyabharathi Book Centre, Sringeri

CC-O. In Public Domain. Digitized by eGangotri

"ಭಗವಂತನೇ, ನಿನ್ನನ್ನು ನಾನು ನನ್ನ ಸ್ನೇಹಿತನೆಂದೆಣಿಸಿ ಹಾಸ್ಯಮಾಡಿದ್ದೇನೆ ಹಲವು ವಿಧವಾದ ಅಪರಾಧ ಮಾಡಿದ್ದೇನೆ. ಇವುಗಳನ್ನು ಮನ್ನಿಸಿ ಅನುಗ್ರಹಿಸು" ಎಂದು ಪ್ರಾರ್ಥಿಸುತ್ತಾನೆ. ಇದರಿಂದ ಭಗವಂತನು ಸ್ನೇಹಿತನಾಗಿಯೂ ಕಾಣಬರ ಬಹುದು ಎಂಬುದು ತಿಳಿದುಬರುತ್ತದೆ. ಭಗವಂತನೇನೋ ಎಲ್ಲೆಲ್ಲೂ ತುಂಬಿದ್ದಾನೆ. ಆದರೆ ನಮಗೆ ಅವನನ್ನು ಕಂಡುಕೊಳ್ಳಲು ಶಕ್ತಿಯಿಲ್ಲವಾದುದರಿಂದ ನಾವು ಅವನನ್ನು ಕಾಣಲಾಗುವುದಿಲ್ಲ. ಅಂಥ ಭಗವಂತನು ನಿಜವಾಗಿ ಹೇಗಿದ್ದಾನೆ? ನಿಜವಾಗಿ ಅವನು ಒಂದು ರೂಪವನ್ನು ಹೊಂದಿದವನೇ ಅಥವಾ ಯಾವ ರೂಪವೂ ಇಲ್ಲದವನೋ? ಈ ವಿಷಯವನ್ನು ಕುರಿತು ಭಗವಂತನೇ

ಅಜೋऽಪಿಸನ್ ಅವ್ಯಯಾತ್ಮಾ ಭೂತಾನಾಂ ಈಶ್ವರೋऽಪಿಸನ್

–ನಾನು ಹುಟ್ಟಿಲ್ಲದವನು, ಅವ್ಯಯನು, ಸಮಸ್ತ ಪ್ರಾಣಿಗಳಿಗೂ ನಿಯಾಮಕನು, ಆದರೂ ಎಂದು ಹೇಳಿದ್ದಾನೆ.

ವಾಸ್ತವವಾಗಿ ಭಗವಂತನಿಗೆ ಯಾವ ವಿಧವಾದ ಹುಟ್ಟೂ ಇಲ್ಲ, ಅಳಿವೂ ಇಲ್ಲ. ಅವನಿಗೆ ಜನನ–ಮರಣ ಇಲ್ಲದಿದ್ದರೂ, ಲೋಕ ಸಂಗ್ರಹಕ್ಕಾಗಿ ತನ್ನ ಮಾಯಾಶಕ್ತಿಯಿಂದ ಅವತಾರ ಮಾಡುತ್ತಾನೆ. ಆದ್ದರಿಂದ ಅವನಿಗೆ ಹುಟ್ಟು ಇದೆಯೋ ಎಂಬಂತೆ ತೋರುತ್ತದೆ. ಏಕೆಂದರೆ, ಅವತಾರ ಕಾಲದಲ್ಲಿ ಅವನ ದೇಹವು ನಮಗೆ ಕಾಣಬರುತ್ತದೆ. ಅವನ ಅವತಾರದ ಉದ್ದೇಶವು ಮುಗಿದ ಮೇಲೆ ಆ ಅವತಾರ ದೇಹವು ಕಾಣಬರುವುದಿಲ್ಲ. ಈ ಭಗವಂತನೇ ನಮಗೆ ಉಪದೇಶಮಾಡಿದವನು. ಅವನನ್ನು ನಾವು ಸರ್ವದಾ ಸ್ಮರಿಸುತ್ತಿರಬೇಕು. ಅವನು ಅವತಾರ ಸಮಯದಲ್ಲಿ ಯಾವ ಉಪದೇಶವನ್ನು ಕೊಡುತ್ತಾನೋ ಅದರಿಂದ ನಮ್ಮ ಕರ್ತವ್ಯಗಳನ್ನು ನಾವು ಅರಿತುಕೊಳ್ಳಬೇಕು ಇದನ್ನು ಸರಿಯಾಗಿ ತಿಳಿದುಕೊಳ್ಳಲು ಭಗವಂತನ ಲೀಲೆಗಳನ್ನು ಕುರಿತ ತಿಳುವಳಿಕೆ ನಮಗೆ ಚೆನ್ನಾಗಿ ಇರಬೇಕು.

ಭಗವಂತನು ಯಾವ ಉಪದೇಶಗಳನ್ನು ಅನುಗ್ರಹಿಸಿದನು ಎಂಬುದನ್ನು ತಿಳಿದುಕೊಳ್ಳಲು ಅವನ ಅವತಾರಗಳನ್ನು ಕುರಿತು ಓದಿ ತಿಳಿದುಕೊಳ್ಳಬೇಕು. ಆದ್ದರಿಂದಲೇ ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಗ್ರಂಥಗಳನ್ನು ಪಾರಾಯಣ ಮಾಡುತ್ತಿರಬೇಕು. ಅವುಗಳನ್ನು ಕೇಳುತ್ತಲೂ ಇರಬೇಕು.

ಭಗವಂತನ ಸ್ಮರಣೆ ಯಾವಾಗಲೂ ಇರಬೇಕೆಂದರೆ ಅವನ ಲೀಲೆಗಳನ್ನು ಕುರಿತು ತಿಳಿದುಕೊಳ್ಳಬೇಕು. ರಾಮಾಯಣ ಮಹಾಭಾರತಗಳು ಭಗವಂತನ ಲೀಲೆಗಳನ್ನು ನಿವರವಾಗಿ ವರ್ಣಿಸುತ್ತವೆ. ಕೆಲವರಿಗೆ ಭಾಗವತದಂತಹ ಗ್ರಂಥಗಳನ್ನು ಓದಿದರೂ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತಿಯಾಗಲೀ ನಂಬಿಕೆಯಾಗಲೀ ಉಂಟಾಗುವುದಿಲ್ಲ. ಇದಕ್ಕೆ ಕಾರಣವೇನೆಂದರೆ, ಅವರು ಭಗವಂತನ ಲೀಲೆಗಳನ್ನು ಓದಿದ ಕೂಡಲೇ "ಭಗವಂತನೂ ನಮ್ಮಂತೆಯೇ ಇದ್ದಾನಲ್ಲವೇ ? ಅದರಲ್ಲಿ ಹೆಚ್ಚುಗಾರಿಕೆಯೇನು ?" ಎಂದುಕೊಳ್ಳುತ್ತಾರೆ. ಆದರೆ ನಿಜವಾಗಿ ವಿಷಯ ಹೀಗಿಲ್ಲ.

ಭಗವಂತನಿಗೆ ಎಷ್ಟೇ ಶಕ್ತಿಯಿದ್ದರೂ ಅವನು ಮನುಷ್ಯನಂತೆಯೇ ಕಾಣಿಸಿಕೊಂಡಿದ್ದಾನಲ್ಲವೇ ? ಭಗವಂತನು ಕೃಷ್ಣನಾಗಿ ಅವತರಿಸಿ ಗೋಪಿಕೆಯರೊಂದಿಗೆ ಆಡಿದನು. ಅದೇ ಕೃಷ್ಣನು ಭಗವದ್ಗೀತೆಯನ್ನು ಉಪದೇಶ ಮಾಡಿದನು. ಇವೆರಡೂ ನಮ್ಮ ಹಿತಕ್ಕಾಗಿಯೇ. ಭಗವಂತನು ಸುಬ್ರಹ್ಮಣ್ಯನಂತೆ ಕಂಡುಬರುತ್ತಾನೆ. ಆದ್ದರಿಂದ ಅವನು ಸುಬ್ರಹ್ಮಣ್ಯನು ಮಾತ್ರ ಎಂದು ತಿಳಿಯಕೂಡದು. ಒಬ್ಬ ಸಾಮಾನ್ಯ ಐಂದ್ರಜಾಲಿಕನು ಏನೇನೋ ವಸ್ತುಗಳನ್ನು ಬರಮಾಡಿ ತೋರಿಸುತ್ತಾನೆ. ಅವನು ತನ್ನ ಕೈಯನ್ನು ಮುಚ್ಚಿ ತೆಗೆದ ಕೂಡಲೇ ಬೇರೆ ವಸ್ತುಗಳನ್ನು ನಾವು ಕಾಣುತ್ತೇವೆ. ಇಂಥವನಿಗೇ ಇಷ್ಟು ಶಕ್ತಿಗಳು ಇರಬಹುದಾದರೆ, ಭಗವಂತನ ಶಕ್ತಿಗಳನ್ನು ಕುರಿತು ನಾವು ಏನು ತಾನೆ ಹೇಳಿಯೇವು ? ಭಗವಂತನ ಮಾಯಾಶಕ್ತಿ ತುಂಬಾ ಹೆಚ್ಚಿನದು. ಅದರ ಬಲದಿಂದ ಭಗವಂತನು ಅನೇಕ ರೂಪಗಳನ್ನು ಪಡೆಯಬಲ್ಲನು. ಅವನಿಗೆ ಯಾವುದೊಂದು ಉಪಾಧಿಯಿದೆಯೆಂದು ನಾವು ಹೇಳಲಾಗದು. ಇದನ್ನು ತಿಳಿದುಕೊಳ್ಳದೆ ಭಗವಂತನು ನಮ್ಮಂತೆಯೇ ಒಬ್ಬ ಸಾಧಾರಣ ಮನುಷ್ಯನಂತೆ ಬಾಳಿದನನು ಎಂದು ತಿಳಿದರೆ ಅದು ನಮ್ಮ ದುರದೃಷ್ಟ.

ನಾವು ನಮ್ಮ ಕರ್ತವ್ಯಗಳನ್ನು ಸರಿಯಾಗಿ ತಿಳಿದುಕೊಂಡು ಅದರಂತೆ ನಡೆಯಲು ಸಹಾಯವಾಗುವಂತೆ ಭಗವಂತನು ಒಂದು ಬಾರಿಯಲ್ಲ, ಅನೇಕ ಬಾರಿ ಅವತಾರಗಳನ್ನೆತ್ತುತ್ತಾನೆ. ಆದಿಶಂಕರ ಭಗವತ್ಪಾದರೂ ಭಗವಂತನಾದ ಪರಮೇಶ್ವರನ ಅವತಾರವೇ. ಅವರು ನಮಗೆ ಮಹೋಪಕಾರವನ್ನು ಮಾಡಿದ್ದಾರೆ. ಅವರು ಅವತರಿಸಿದ ಕಾಲದಲ್ಲಿ ಜನ ವೈದಿಕ ಧರ್ಮದಲ್ಲಿ ಶ್ರದ್ಧೆಯನ್ನು ಬಿಟ್ಟು ಅನ್ಯಧರ್ಮಾವಲಂಬಿಗಳಾಗಲು ಆರಂಭಿಸಿದ್ದರು. ವೈದಿಕ ಕರ್ಮಗಳ ವಿಷಯದಲ್ಲಿ ಶ್ರದ್ಧೆಯಿಲ್ಲದವರಾಗಿದ್ದರು. ಶಂಕರಭಗವತ್ಪಾದರ ಕಾಲದಲ್ಲಿ ಕುಮಾರಿಲಭಟ್ಟರು ವೈದಿಕ ಕರ್ಮಪ್ರಾಮುಖ್ಯ, ಅವುಗಳನ್ನು ಸರಿಯಾಗಿ ಹೇಗೆ ಮಾಡಬೇಕು ಎಂಬುದನ್ನು ಕುರಿತು ಹೇಳಿ ಜನರಲ್ಲಿ ನಂಬಿಕೆಯನ್ನು ಬೆಳೆಸಿದರು. ಇದರ ಪರಿಣಾಮವಾಗಿ ಜನರು ವೇದದಲ್ಲಿಯೂ ವೈದಿಕ ಕರ್ಮಗಳಲ್ಲಿಯೂ ನಂಬಿಕೆಯಿಟ್ಟು, ಆ ಕರ್ಮಗಳನ್ನು ಮಾಡತೊಡಗಿದ್ದರು. ಆದರೆ, "ಕೇವಲ ವೈದಿಕ ಕರ್ಮಗಳನ್ನೇ ಮಾಡುತ್ತಿದ್ದರೆ, ವೇದಾಂತ ವಿಚಾರವನ್ನೇ ಮಾಡದೆ ಜೀವನ ಕಳೆದುಹೋಗುತ್ತದೆ. ವಿಚಾರವಿಲ್ಲದ ಜೀವನ ಜಡಭಾವವನ್ನು ಹೊಂದುತ್ತದೆ" ಎಂದು ಚಿಂತಿಸಿದ ಭಗವತ್ಪಾದರು–"ನೀವು ವೈದಿಕ ಕರ್ಮಗಳನ್ನು ಅನುಷ್ಠಾನ ಮಾಡಿ, ಆದರೆ ಅವುಗಳನ್ನು ಭಗವಂತನಿಗೇ ಸಮರ್ಪಿಸಿ. ಆಗ

Sri Vidyabharathi Book Centre, Sringeri

CC-O. In Public Domain. Digitized by eGangotri

ನಿಮ್ಮ ಮನಸ್ಸು ನೆಮ್ಮದಿಯನ್ನು ಪಡೆಯುತ್ತದೆ. ಆಗ ನೀವು ವೇದಾಂತ ವಿಚಾರ ಮಾಡಬಹುದು-" ಎಂದು ಉಪದೇಶಮಾಡಿದರು.

ನಾನು ಯಾರು? ನನ್ನ ಸ್ವರೂಪವೇನು?-ಎಂಬುದನ್ನು ಕುರಿತು ಪರಿಶೀಲಿಸುವುದೇ ವೇದಾಂತ ವಿಚಾರವೆಂದು ಕರೆಯಲಾಗುತ್ತದೆ. ವಿಚಾರ ಮಾಡುವುದಕ್ಕೆ ಸಾಮಗ್ರಿ ಬೇಕು. ಆ ವಿಚಾರವನ್ನು ವೇದಾಂತ ಒದಗಿಸುತ್ತದೆ. ಅದೇ ನಮ್ಮ ಮಹರ್ಷಿಗಳು, ಅವತಾರಪುರುಷರು ತೋರಿಸಿಕುವ ದಾರಿ. ಅದರಂತೆ ನಾವು ನಡೆದುಕೊಳ್ಳಬೇಕು. ಈ ಭಾರತ ಭೂಮಿಯಲ್ಲಿ ಅವತಾರಪುರುಷರು ಅವತರಿಸಿ ನಮಗೆ ಸನ್ಮಾರ್ಗವನ್ನು ತೋರಿಸಿದ್ದಾರೆ. ನಾವು ಅವರು ತೋರಿಸಿರುವ ದಾರಿಯಲ್ಲಿ ನಡೆದು ನಮ್ಮ ಕರ್ತವ್ಯಗಳನ್ನು ಮಾಡಿ ಹಿತವನ್ನು ಸಾಧಿಸೋಣ.

ಅನ್ಯಾಯ ಮಾಡಿದವರನ್ನು ದೇವರು ಶಿಕ್ಷಿಸುವುದಿಲ್ಲವೇ?

ವಿಶುದ್ಧಜ್ಞಾನದೇಹಾಯ ತ್ರಿವೇದೀ ದಿವ್ಯಚಕ್ಷುಷೇ ।
ಶ್ರೇಯಃ ಪ್ರಾಪ್ತಿನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥

ನಮಾಮಿ ಯಾಮಿನೀನಾಥ ಲೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪನಿರ್ವಾಪಣಸುಧಾನದೀಮ್ ॥

ಲೋಕದಲ್ಲಿ ನಾವು ಯಾರ ಬಳಿಯಲ್ಲಾದರೂ "ನೀನು ಸುಖವಾಗಿರುವೆಯಾ" ಎಂದು ಕೇಳಿದರೆ, ಅವನು-"ಹೌದು, ನಾನು ಸುಖವಾಗಿದ್ದೇನೆ" ಎಂದು ಹೇಳಬಹುದು. ಆದರೆ-"ನೀನು ಪರಿಪೂರ್ಣವಾದ ಆನಂದವನ್ನು ಹೊಂದಿರುವೆಯಾ? ಅಥವಾ ದುಃಖ ಇದೆಯೋ? ಎಂದು ಕೇಳಿದರೆ, "ದುಃಖವಿದೆ"-ಎಂದೇ ಉತ್ತರ ಕೊಟ್ಟಾನು. ಹತ್ತು ರೂಪಾಯಿ ಇರುವವನನ್ನು ಕುರಿತು ಈ ಪ್ರಶ್ನೆ ಕೇಳಿದರೆ-"ನಾನು ಸುಖವಾಗಿಯೇನೋ ಇದ್ದೇನೆ, ಆದರೆ ನೂರು ರೂಪಾಯಿ ಇರುವವನು ನನಗಿಂತ ಸುಖವಾಗಿದ್ದಾನೆ-ಎನ್ನುತ್ತಾನೆ. ನೂರು ರೂಪಾಯಿ ಉಳ್ಳವನ ಬಳಿ ನಾವು ಹೋಗಿ ಕೇಳಿದರೆ, "ನನಗಿರುವ ಸುಖ ಎಂಥಾ ಸುಖ? ಕೋಟಿ ರೂಪಾಯಿ ಇಟ್ಟುಕೊಂಡಿರುವವನಿಗೇ ನಿಜವಾದ ಸುಖ ಇದೆ-ಎನ್ನುತ್ತಾನೆ. ಹೀಗೆ ವಸ್ತುಗಳನ್ನು ಪಡೆದಿರುವುದರಲ್ಲಿ ತಾರತಮ್ಯವಿರುವುದರಿಂದ ಯಾವ ಮನುಷ್ಯನಿಗೂ ಪರಿಪೂರ್ಣವಾದ ಸುಖವಿಲ್ಲ. ಒಬ್ಬನು ಯಾವುದೋ ಒಂದು ಅಧಿಕಾರ-ಪದವಿಯನ್ನು ಪಡೆಯಲು ಪ್ರಯತ್ನಿಸಬಹುದು. ಆ ಪದವಿ ಅವನಿಗೆ ಸಿಕ್ಕಿತು ಎಂದಿಟ್ಟುಕೊಳ್ಳೋಣ. ಅದು ಸಿಕ್ಕಿದ ಕೂಡಲೇ ಅದಕ್ಕಿಂತಲೂ ಮೇಲಾದ ಪದವಿಬೇಕು ಎಂಬ ಆಸೆ ಅವನಿಗೆ ಉಂಟಾಗುತ್ತದೆ. ಇಂಥಾ ಆಸೆಗಳು ಇದ್ದೇ ಇರುತ್ತವೆ. ಆದ್ದರಿಂದ ಆಸೆ ಪಡುವ ಮನುಷ್ಯನಿಗೆ ದುಃಖವೂ ಇದ್ದೇ ಇರುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖವನ್ನು ಹಾಗೂ ದುಃಖವನ್ನು ಕುರಿತು ಶಾಸ್ತ್ರಗಳನ್ನು ಪರಿಶೀಲಿಸಿ ಒಂದು ತೀರ್ಮಾನಕ್ಕೆ ಬಂದಿದ್ದಾರೆ. ಮನಸ್ಸು ಅಲೆಯದೇ ಒಂದು ನೆಲೆಯಲ್ಲಿ ನಿಂತರೆ ಆನಂದ ದೊರಕುತ್ತದೆ. ಮನಸ್ಸು ಅಲೆಯುತ್ತಿದ್ದರೆ, ಆನಂದ ಸಿಗುವುದಿಲ್ಲ. ಗಾಢವಾದ ನಿದ್ದೆಯಲ್ಲಿ ಮನಸ್ಸು-ಅಲೆದಾಡುವುದಿಲ್ಲ. ಯಾರನ್ನು ಕೇಳಿದರೂ, ಗಾಢವಾಗಿ ನಿದ್ರಿಸಿದವರು-"ನಾನು ಆನಂದದಿಂದ ಇದ್ದೆ"-ಎಂದೇ ಹೇಳುತ್ತಾರೆ. ಇತರ ಸ್ಥಿತಿಗಳಲ್ಲಿ ಮನಸ್ಸು ಅಲ್ಲಿ ಇಲ್ಲಿ ಓಡುತ್ತಲೇ ಇರುತ್ತದೆ. ಅದರ ಓಟ ವಿಧವಿಧವಾಗಿದ್ದರೂ ಅದು ಚಲಿಸುತ್ತಲೇ ಇರುವುದರಿಂದ ಮನುಷ್ಯನಿಗೆ ಸಂಪೂರ್ಣವಾದ ಸುಖವೆಂಬುದಿಲ್ಲ. ಮನಸ್ಸಿನ ಓಟ ಎಂಥಾದ್ದು ? ಮೊದಲಿಗೆ ಮನಸ್ಸು ಯಾವುದೋ ಒಂದು ವಸ್ತುವನ್ನು ಆಸೆ ಪಡುತ್ತದೆ ಅದನ್ನು ಪಡೆಯಲು ಪ್ರಯತ್ನವನ್ನೂ ಮಾಡುತ್ತದೆ. ಆ ವಸ್ತು ಸಿಕ್ಕಿದ ಮೇಲೆ ಸ್ವಲ್ಪ ಹೊತ್ತು-"ಆಹಾ, ನನ್ನ ಆಸೆ ಪೂರೈಸಿತು" ಎಂದು ಸುಮ್ಮನಿರುತ್ತದೆ ಆಮೇಲೆ ಬೇರೆ ಇನ್ನೊಂದು ವಸ್ತುವನ್ನು ಕಂಡು ಅದರ ಹಿಂದೆ ಓಡುತ್ತದೆ. ಹೀಗೆ ಮನಸ್ಸು ಒಂದೊಂದು ವಸ್ತುವನ್ನೂ ನೋಡಿ ಅದರ ಹಿಂದೆ ಓಡುತ್ತಿರುತ್ತದೆ. ಮನುಷ್ಯನ ಈ ಸ್ವಭಾವವನ್ನು ವ್ಯಾಸರು ಸಂಗ್ರಹವಾಗಿ ಹೀಗೆ ವರ್ಣಿಸಿದ್ದಾರೆ.

ಯತ್ ಪೃಥಿವ್ಯಾಂ ವ್ರೀಹಿಯವಂ ಹಿರಣ್ಯಂ ಪಶವಃ ಸ್ತ್ರಿಯಃ ।
ಏಕಸ್ಯಾಪಿ ನ ಪರ್ಯಾಪ್ತಂ ತದಿತ್ಯತಿ ತೃಷಾಂ ತ್ಯಜೇತ್ ॥

(ಜಗತ್ತಿನಲ್ಲಿರುವ ಭತ್ತ, ಗೋಧಿ, ಚಿನ್ನ, ಪಶುಗಳು, ಸ್ತ್ರೀಯರು ಇವುಗಳಲ್ಲಿ ಯಾವುದರಿಂದಲೂ ಮನುಷ್ಯನಿಗೆ ಸಾಕು ಎಂಬ ತೃಪ್ತಿಯುಂಟಾಗುವುದಿಲ್ಲ ; ಆದ್ದರಿಂದ ಹೆಚ್ಚಾದ ಆಸೆಯನ್ನು ಬಿಡಬೇಕು.)

ಯಾವ ವಸ್ತುವಾದರೂ ಸರಿ, ಭತ್ತವಾಗಬಹುದು, ಆಕಳಾಗಬಹುದು, ಸ್ತ್ರೀಯರಾಗಬಹುದು, ಚಿನ್ನವಾಗಬಹುದು, ಇಷ್ಟು ಸಾಕು ಎಂಬ ಭಾವನೆ ಮನುಷ್ಯನಿಗೆ ಬರುವುದೇ ಇಲ್ಲ ನಾವು ತಿನ್ನುವುದಕ್ಕೆ ಎಷ್ಟು ಬೇಕು ? ಕುಡಿಯುವುದಕ್ಕೆ ಎಷ್ಟು ಬೇಕು ? ವಾಸಮಾಡುವುದಕ್ಕೆ ಎಷ್ಟು ಮನೆಗಳು ಬೇಕು ? ಇವು ಹೆಚ್ಚಾಗಿ ಬೇಕಾಗಿಯೇ ಇಲ್ಲ, ಹಾಗಿದ್ದರೂ ಸಹ "ಇನ್ನೂ ಬೇಕು" ಎನ್ನುತ್ತಲೇ ಇರುತ್ತೇವೆ ಒಬ್ಬನಿಗೆ ಒಂದು ಮನೆ ಇರಬಹುದು. ಆವನು "ಇನ್ನೂ ಎರಡು ಮನೆಗಳನ್ನು ಕಟ್ಟಿದ್ದೇನೆ. ಏಕೆಂದರೆ, ನನ್ನ ಮಕ್ಕಳಿಗೆ ಅವು ಉಪಯೋಗಕ್ಕೆ ಬರುತ್ತವೆ" ಎಂದು ಭಾವಿಸುತ್ತಾನೆ. ಸರಿ, ಮೂರು ಮನೆಗಳಾಗುತ್ತವೆ. ಅವನು "ಇನ್ನೂ ಮೂರು-ನಾಲ್ಕು ಮನೆಗಳನ್ನು ಕಟ್ಟಿದರೆ ಚೆನ್ನಾಗಿರುತ್ತದಲ್ಲ ! ನನ್ನ ಹೆಣ್ಣುಮಕ್ಕಳೂ ಸುಖವಾಗಿರಬಹುದು" ಎಂಬ ಆಸೆಯೂ ಅವನಿಗೆ ಬರಬಹುದು ಹೀಗೆ ಆಸೆಗಳು ಹೆಚ್ಚಾಗುತ್ತಲೇ ಹೋಗುತ್ತವೆ. ಆದ್ದರಿಂದಲೇ ವ್ಯಾಸರು-"ಯಾವ ಒಂದು ವಸ್ತುವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಇಟ್ಟುಕೊಂಡರೂ ಮನುಷ್ಯನ ಮನಸ್ಸು ತೃಪ್ತಿ ಎಂಬುದನ್ನು ಹೊಂದುವುದೇ ಇಲ್ಲ,"- ಎಂದು ಹೇಳಿದರು.

ನಮ್ಮಲ್ಲಿ ಪ್ರತಿಯೊಬ್ಬರಿಗೂ ಒಂದಿಷ್ಟು ಶಕ್ತಿಯಿರುತ್ತದೆ. ಆ ಶಕ್ತಿಯಿಂದ ನಮ್ಮ ನಮ್ಮ ಕೆಲಸಗಳನ್ನು ಮಾಡಿಕೊಂಡು ತೃಪ್ತಿಯಿಂದ ಬಾಳಬಹುದು. ಆದರೆ ನಾವು ಹಾಗಿರುವುದಿಲ್ಲ. ಒಂದು ಕಡೆ ನಾವಾಗಿಯೇ ವಸ್ತುಗಳನ್ನು ಹುಡುಕಿಕೊಂಡು ಹೋಗುತ್ತೇವೆ. ಮತ್ತೊಂದು ಕಡೆ ಬೇರೆಯವರು ಹಾಗೆ ಪಡೆಯಬಾರದು ಎಂದು ಅಡ್ಡಿ ಪಡಿಸುತ್ತೇವೆ. "ನಾವು ಬಯಸಿದ ಪದವಿ ಬೇರೆಯವನಿಗೆ ಸಿಕ್ಕಿಬಿಟ್ಟರೆ ಏನು ಮಾಡುವುದು ?.ಅವನು ನಮ್ಮನ್ನು ಒತ್ತರಿಸಿ ಬಿಟ್ಟರೆ ಏನು ಮಾಡುವುದು ? ಅವನು ನಮ್ಮನ್ನು ಸೋಲಿಸಿಬಿಟ್ಟರೆ ಏನುಮಾಡುವುದು ?" ಎಂಬ ಭಾವನೆಗಳೆಲ್ಲ ಹುಟ್ಟುತ್ತವೆ. ಆದ್ದರಿಂದಲೇ-

ದ್ವಿತೀಯಾದ್ವೈ ಭಯಂ ಭವತೀ ।

(ಎರಡನೆ ವಸ್ತುವಿದ್ದರೆ ಭಯವುಂಟಾಗುತ್ತದೆ)

ಎಂದು ಹೇಳಲಾಗಿದೆ. ಎರಡನೆಯ ವಸ್ತುವೊಂದಿದ್ದರೆ ತೊಂದರೆಗಳು ಬರಬಹುದು ಎಂಬ ಭಯ ಇದ್ದೇ ಇರುತ್ತದೆ.

ನಮಗೆ ಆಸೆಗಳಿರುವುದರಿಂದಲೇ ನಮ್ಮ ಮನಸ್ಸು ಅಲೆಯುತ್ತದೆ. ಆದ್ದರಿಂದ ನಾವು ದುಃಖವನ್ನು ಅನುಭವಿಸಬೇಕಾದ ಪರಿಸ್ಥಿತಿಯಿರುತ್ತದೆ. ಎಲ್ಲರಿಗೂ ಸುಖ ಬೇಕು. ಅವರು ಕೇಳುವ ಸುಖಬೇಕಾದರೆ ಅವರು ಮನಸ್ಸನ್ನು ಹತೋಟಿಯಲ್ಲಿಟ್ಟು ಕೊಳ್ಳುವುದು ಆವಶ್ಯಕ. ಕೆಲವರು ಜೀವಂತವಾಗಿರುವವರೆಗೆ ತಾನೆ ಮನಸ್ಸು ಇರುತ್ತದೆ. ಅದು ಅಲೆಯುತ್ತದೆ. ಮರಣಾನಂತರ ಮನಸ್ಸು ಹೇಗೆ ಅಲೆಯಬಲ್ಲುದು- ಎಂದೆಲ್ಲ ಪ್ರಶ್ನಿಸುತ್ತಾರೆ. ಇಲ್ಲಿ ಒಂದು ವಿಚಾರವನ್ನು ನಾವು ಜ್ಞಾಪಕದಲ್ಲಿರಿಸಿ ಕೊಳ್ಳಬೇಕು ಒಬ್ಬನು ಸತ್ತಮೇಲೆ ಇಲ್ಲದೆ ಹೋಗುವುದಿಲ್ಲ. ಮರುಜನ್ಮ ಎಂಬುದು ಇದೆ. ಆದ್ದರಿಂದ ಸತ್ತುಹೋದ ಮೇಲೆ ಮನಸ್ಸು ಅಲೆದಾಡುವುದಿಲ್ಲ. ನಾವು ಸುಖವನ್ನು ಪಡೆಯಬಹುದು"-ಎಂಬ ಭಾವನೆ ಶುದ್ಧ ಭ್ರಮೆ.

ಇನ್ನೂ ಕೆಲವರು ಲೋಕದ ಕಷ್ಟಕಾರ್ಪಣ್ಯಗಳನ್ನು ಸಹಿಸಲಾಗದೆ ಆತ್ಮಹತ್ಯೆ ಮಾಡಿಕೊಳ್ಳಲು ಪ್ರಯತ್ನಿಸುತ್ತಾರೆ. ಕೆಲವರು ಹಾಗೆ ಮಾಡಿಯೂ ಮಾಡುತ್ತಾರೆ. ಆದರೆ, ಹಾಗೆ ಮಾಡುವುದರಿಂದ ಪ್ರಯೋಜನವೇನೂ ಇಲ್ಲ. ನಮಗೆ ಲೋಕದಲ್ಲಿ ದುಃಖ ಬಂದಿದೆ ಎಂದರೆ ಅದು ನಾವು ಮಾಡಿದ ಪಾಪದ ಫಲ. ಆತ್ಮಹತ್ಯೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡಿಕೊಳ್ಳುವುದು ತಪ್ಪು. ಅದೇ ಮಹಾಪಾಪವಾಗಿ ಬಿಡುತ್ತದೆ. ಯಾರಾದರೂ ದುಃಖದ ಪರಿಸ್ಥಿತಿಯನ್ನು ತಡೆಯಲಾರದೆ, ಅದರಿಂದ ತಪ್ಪಿಸಿಕೊಳ್ಳಲು ಆತ್ಮಹತ್ಯೆ ಮಾಡಿಕೊಂಡನೆಂದರೆ, ಅದು–

ವೃಶ್ಚಿಕಭಯಾತ್ ಫಲಾಯಮಾನಸ್ಯ ಆಶೀವಿಷಮುಖೇ ನಿಪಾತಃ

(ಚೇಳಿಗೆ ಹೆದರಿ ಓಡಿದವನೊಬ್ಬ ಹಾವಿನ ಬಾಯಿಗೆ ಬಿದ್ದ) ಎಂದಾಗುತ್ತದೆ.

ಚೇಳು ಕುಟುಕುತ್ತದೆ ಎಂದು ಭಯದಿಂದ ಒಬ್ಬನು ಓಡುತ್ತಿದ್ದನಂತೆ. ಹಾಗೆ ಓಡುತ್ತಿದ್ದಾಗ ಅವನು ಒಂದು ಹಾವಿನ ಬಾಯಿಗೆ ತುತ್ತಾದನಂತೆ ಆಗ ಅವನ ಗತಿ ಹೇಗಾಗಿರಬಹುದು. ಅದರಂತೆಯೇ ದುಃಖವನ್ನು ಸಹಿಸಲಾರೆ–ಎಂದು ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ಅನಂತರ ಯಾವ ಬಗೆಯಾದ ಕಷ್ಟಗಳನ್ನು ಅನುಭವಿಸ ಬೇಕಾಗಬಹುದು ಎಂದು ಅವನು ಯೋಚಿಸುವುದಿಲ್ಲ. ಉಪನಿಷತ್ತಿನಲ್ಲೇ ಒಂದೆಡೆ–

ಅಂಧಂ ತಮಃ ಪ್ರವಿಶಂತಿ

(ಕಣ್ಣುಗಳನ್ನು ಕುರುಡಾಗಿಸುವ ಜಾಗಕ್ಕೆ ಹೋಗುತ್ತಾನೆ)

ಎಂದೂ, ಮತ್ತೊಂದು ಕಡೆ–

ಯೇ ಕೇ ಚ ಆತ್ಮಹನೋ ಜನಾಃ

(ಯಾರು ತಮ್ಮ ಆತ್ಮವನ್ನೇ ಕೊಲ್ಲುತ್ತಾರೋ)

ಎಂದೂ ಹೇಳಲ್ಪಟ್ಟಿದೆ. ಇದಕ್ಕೆ ಹೊಂದಿಕೆಯಾದ ಮಾತೆಂದರೆ ಯಾರಿಗೆ ಆತ್ಮಜ್ಞಾನ ಪ್ರಾಪ್ತವಾಗಿಲ್ಲವೋ ಅವರಿಗೆ ಕಷ್ಟವೇ ಗತಿ ಎಂಬುದೇ. ಆದರೆ–

ಸಾರವತ್ ವಿಶ್ವತೋಮುಖಮ್

(ಸಾರಭೂತವಾದದ್ದಾದರೂ ಹಲವಾರು ಮುಖಗಳುಳ್ಳದ್ದು)

ಎಂದು ಹೇಳಲಾಗಿರುವಂತೆ, ಹಲವು ವಿಧಗಳಾದ ಸ್ವಾರಸ್ಯಗಳನ್ನು ನಾವು ಮಾತಿನಿಂದ ಎತ್ತಿಹೇಳಬಹುದು. ಹೀಗೆ ಇದಕ್ಕೆ ಇನ್ನೊಂದು ಅರ್ಥವೆಂದರೆ ಯಾರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೋ ಅವನು ಕಗ್ಗತ್ತಲೆಗೆ ಹೋಗುತ್ತಾನೆ ಎಂದೂ ಹೇಳಲಾಗಿದೆ.

ಕೆಲವರು–"ಆತ್ಮವೆಂಬುದೇ ಇಲ್ಲವಲ್ಲ. ಲೋಕದಲ್ಲಿ ಏನೇನು ಸುಖಗಳನ್ನು ಅನುಭವಿಸಬಹುದೋ ಅವುಗಳನ್ನೆಲ್ಲ ಅನುಭವಿಸಿ ಸಾಯಬಹುದಲ್ಲ. ಆದೇ ಮೋಕ್ಷ"–

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂದು ಹೇಳಬಹುದು. ಇದು ಸರಿಯಾದ ತೀರ್ಮಾನವಲ್ಲ. ಆತ್ಮವೆಂಬುದು ನಿಜವಾಗಿಯೂ ಇದೆ. ನಾವು ಲೋಕದಲ್ಲಿ ನಡೆಯುವ ವಿದ್ಯಮಾನಗಳನ್ನು ಕೂಲಂಕಷವಾಗಿ ಪರಿಶೀಲಿಸಿದರೆ ಈ ವಿಷಯ ತಿಳಿಯುತ್ತದೆ. ಲೋಕದಲ್ಲಿ ಕಾರ್ಯಕಾರಣ ಸಂಬಂಧವನ್ನು ನಾವು ವಿವೇಚಿಸಿ ನೋಡಿದರೆ ನಾವು ಸತ್ತ ಮೇಲೂ ಇರುತ್ತೇವೆ ಎಂಬುದು ತಿಳಿದುಬರುತ್ತದೆ. ಲೋಕದಲ್ಲಿ ಕೆಲವರಿಗೆ ಸುಖ-ಸಂತೋಷಗಳು ಸಿಗುತ್ತವೆ. ಇನ್ನು ಕೆಲವರು ಕಷ್ಟವನ್ನೂ ದುಃಖವನ್ನೂ ಪಡೆಯುತ್ತಾರೆ. ಸುಖ-ದುಃಖ ಎಂಬ ಕಾರ್ಯವುಂಟಾಗಬೇಕಾದರೆ ಅದಕ್ಕೆ ಕಾರಣವಿರಬೇಕಲ್ಲವೇ ? ಲೋಕದಲ್ಲಿ ಒಬ್ಬನಿಗೆ ಸುಖವಾಗುವುದಕ್ಕೂ, ಇನ್ನೊಬ್ಬನಿಗೆ ದುಃಖ ಬರುವುದಕ್ಕೂ ಕಾರಣವೇನು? ಒಬ್ಬೊಬ್ಬನ ಪ್ರಯತ್ನವೇ ಕಾರಣ. "ಕೆಲವರು ಪ್ರಯತ್ನ ಪಡುತ್ತಾರೆ. ತಕ್ಕ ಪ್ರಯತ್ನಮಾಡಿದರೆ ಫಲವಾಗಿ ಸುಖವನ್ನು ಪಡೆಯುತ್ತಾರೆ. ಇನ್ನು ಕೆಲವರು ಹಾಗೆ ಮಾಡುವುದಿಲ್ಲ. ಆದ್ದರಿಂದ ಅವರಿಗೆ ಸುಖವಿಲ್ಲ"-ಎಂದು ಕೆಲವರು ವಾದಮಾಡಬಹುದು. ಆದರೆ ಈ ನಿಯಮ ಯಾವಾಗಲೂ ಅನ್ವಯಿಸುವುದಿಲ್ಲ. ಹಲವಾರು ಸಮಯಗಳಲ್ಲಿ ನಾವು ಸರಿಯಾದ ಪ್ರಯತ್ನವನ್ನು ಮಾಡಿದರೂ ಸುಖ ಸಿಗುವುದಿಲ್ಲ. ಆದ್ದರಿಂದ ಈ ಜನ್ಮದಲ್ಲಿಯೇ ನಾವು ಮಾಡಿದ ಪ್ರಯತ್ನದ ಫಲವನ್ನು ಈಗ ನಾವು ಅನುಭವಿಸುತ್ತಿದ್ದೇವೆ ಎಂದು ಹೇಳಲಾಗುವುದಿಲ್ಲ.

ತುಲ್ಯಂ ಕರ್ಷಂತಿ ಪೃಥ್ವೀಮತುಲ್ಯಂ ಶಾಸ್ತ್ರಾಣ್ಯಧೀಯತೇ ।
ಉನ್ಮಜ್ಜಂತಿ ನಿಮಜ್ಜಂತಿ ದೈವಸ್ಯೈಕಸ್ಯ ಲೀಲಯಾ ॥

(ಇಬ್ಬರು ಶಾಸ್ತ್ರವನ್ನು ಸಮವಾಗಿಯೇ ಓದಿದರು ; ಒಬ್ಬನು ಮಹಾ ಪಂಡಿತನಾದ, ಮತ್ತೊಬ್ಬನಿಗೆ ಶಾಸ್ತ್ರದ ಅರಿವೇ ಆಗಲಿಲ್ಲ. ವಿಧಿ ಎಂಬುದರ ಲೀಲೆಯಿಂದ ಹೀಗಾಗುತ್ತದೆ).

ಎಂದು ಹೇಳಲಾಗಿದೆ. ಭೂಮಿಯನ್ನು ಹೊಂದಿದ್ದವರು ಇಬ್ಬರಿದ್ದರು. ಅವರಿಬ್ಬರೂ ಒಂದೇ ರೀತಿಯಾಗಿ ಭೂಮಿಯನ್ನು ಉತ್ತು ಸಾಗುವಳಿ ಮಾಡಿದರು. ಒಬ್ಬನಿಗೆ ಯಾವ ಫಲವೂ ಸಿಗಲಿಲ್ಲ : ಇನ್ನೊಬ್ಬನಿಗೆ ಚೆನ್ನಾಗಿ ಫಸಲು ಬಂದಿತು ಎಂದು ಹೇಳಲಾಗಿದೆ. ನಾವು ಚೆನ್ನಾಗಿಯೇ ಓದಿರಬಹುದು. ಅಭ್ಯಾಸವೂ ಚೆನ್ನಾಗಿರಬಹುದು. ಆದರೂ ಪರೀಕ್ಷೆಯಲ್ಲಿ ಹೆಚ್ಚಾದ ಅಂಕಗಳು ಬರದಿರಬಹುದು. ಹೀಗಾದುದಕ್ಕೆ ಪರೀಕ್ಷಕರ ಪಕ್ಷಪಾತವೇ ಕಾರಣ ಎಂದು ಹೇಳಲಾಗದು. ಇವನ ಬರಹ ಬಹು ಚಿಕ್ಕದಾಗಿದ್ದಿರಬಹುದು. ಅದನ್ನು ಸರಿಯಾಗಿ ಓದುವ ತಾಳ್ಮೆ ಇಲ್ಲದೆ ಪರೀಕ್ಷಕನು ಸರಿಯಾದ ಅಂಕಗಳನ್ನು ಕೊಡದಿರಬಹುದು. ಅಥವಾ ಎಲ್ಲಾ ಪ್ರಶ್ನೆಗಳಿಗೂ ಉತ್ತರವನ್ನು ಬರೆದಿದ್ದರೂ, ಎರಡು ಪ್ರಶ್ನೆಗಳಿಗೆ ಚೆನ್ನಾದ ಉತ್ತರವನ್ನು ಬರೆಯದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ಇರಬಹುದು. ಆ ಎರಡು ಉತ್ತರಗಳ ಮೇಲೆಯೇ ಪರೀಕ್ಷಕ ಗಮನ ಹೋಗಿ-"ಇವನು ಇತರ ಪ್ರಶ್ನೆಗಳಿಗೂ ಸರಿಯಾಗಿ ಉತ್ತರಗಳನ್ನು ಬರೆದಿರಲಾರನು"-ಎಂಬ ಅಭಿಪ್ರಾಯವುಂಟಾಗಿ, ಅವನು ಇತರ ಪ್ರಶ್ನೆಗಳಿಗೂ ಸರಿಯಾದ ಅಂಕಗಳನ್ನು ಕೊಡದೆ ಇರಬಹುದು. ಇದು ಒಂದು ಕಡೆಯಿರಲಿ, ಇನ್ನೊಂದು ಪಕ್ಷ; ಪರೀಕ್ಷೆಯಲ್ಲಿ ಬರೆದವನು ಎರಡು ಪ್ರಶ್ನೆಗಳಿಗೆ ಚೆನ್ನಾಗಿ ಉತ್ತರಗಳನ್ನು ಬರೆದು, ಇನ್ನು ಇತರ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಗಳನ್ನು ಬರೆಯದೇ ಇರಬಹುದು. ಪರೀಕ್ಷಕನಿಗೆ ಉತ್ತರಗಳೆಲ್ಲವನ್ನೂ ಓದಲು ಸೋಮಾರಿತನವಾಗಿ, ಅವನು ವಿದ್ಯಾರ್ಥಿ ಚೆನ್ನಾಗಿ ಬರೆದ ಮೊದಲಿನ ಪುಟದ ಉತ್ತರಗಳನ್ನು ಮಾತ್ರನೋಡಿ,-"ಇವನು ಎಲ್ಲ ಪ್ರಶ್ನೆಗಳಿಗೂ ಸರಿಯಾದ ಉತ್ತರಗಳನ್ನೇ ಬರೆದಿರಬಹುದು" ಎಂದು ಊಹಿಸಿ ಹೆಚ್ಚು ಅಂಕಗಳನ್ನು ಹಾಕಿರಬಹುದು.

ಆದ್ದರಿಂದ, ಒಬ್ಬನು ಬರೆದದ್ದು ಚೆನ್ನಾಗಿದ್ದರೂ ಅವನಿಗೆ ಅಂಕಗಳು ಕಡಿಮೆಯಾಗಿ ಬರಬಹುದು. ಸ್ವಲ್ಪವೇ ಬರೆದವನಿಗೆ ಹೆಚ್ಚು ಅಂಕಗಳು ಬರಬಹುದು. ಇದನ್ನೇ ನಾವು ಎಲ್ಲ ಕಡೆಯೂ ಲೋಕದಲ್ಲಿ ನೋಡಬಹುದು.

ಮಾಯೆಯು ಉಂಟುಮಾಡುವ ಸಂದೇಹಗಳು

ವಿಶುದ್ಧ ಜ್ಞಾನ ದೇಹಾಯ ತ್ರಿವೇದೀ ದಿವ್ಯಚಕ್ಷುಷೇ ।
ಶ್ರೇಯಃ ಪ್ರಾಪ್ತಿ ನಿಮಿತ್ತಾಯ ನಮಃ ಸೋಮಾರ್ಧಧಾರಿಣೇ ॥
ನಮಾಮಿ ಯಾಮಿನೀನಾಥ ಲೇಖಾಲಂಕೃತಕುಂತಲಾಮ್ ।
ಭವಾನೀಂ ಭವಸಂತಾಪ ನಿರ್ವಾಪಣ ಸುಧಾನದೀಮ್ ॥

ನಾವೆಲ್ಲರೂ ಶಂಕರಭಗವತ್ಪಾದರ ಶಿಷ್ಯರು. ನಾವು ಹೇಗೆ ಅವರ ಶಿಷ್ಯರು? ಅಜ್ಞಾನವೆಂಬ ಕತ್ತಲೆಯಲ್ಲಿ ನಾವು ಒದ್ದಾಡುತ್ತಿರುವಾಗ ಭಗವತ್ಪಾದರು ನಮಗೆ ಜ್ಞಾನೋಪದೇಶ ಮಾಡಿ, ಸನ್ಮಾರ್ಗವನ್ನು ತೋರಿಸಿ, ಆ ಅಜ್ಞಾನವೆಂಬ ಕತ್ತಲೆಯಿಂದ ಕಾಪಾಡಿದರು. ಅಂಥ ಶಂಕರ ಭಗವತ್ಪಾದರನ್ನು ಕುರಿತು-

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।
ಕಿಂಕರೀ ಯಸ್ಯ ಸಾಮಾಯಾ ಶಂಕರಾಚಾರ್ಯಮಾಶ್ರಯೇ

ನನ್ನ ಮನಸ್ಸನ್ನು ಮಲಿನಪಡಿಸಲು ಕಾರಣವಾದ ಮಾಯೆಯನ್ನು ತನ್ನ ಅಡಿಯಾಳನ್ನಾಗಿ ಮಾಡಿಕೊಂಡ ಶಂಕರಾಚಾರ್ಯರನ್ನು ವಂದಿಸಿ ಆಶ್ರಯಿಸುತ್ತೇನೆ.)-ಎಂಬ ಶ್ಲೋಕ ಗುರುಪರಂಪರಾ ಸ್ತೋತ್ರದಲ್ಲಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಒಬ್ಬ ಶಿಷ್ಯನ ಕರ್ತವ್ಯಗಳನ್ನು ಕುರಿತು ಹೇಳುವಾಗ, ಶಿಷ್ಯನು ತನ್ನ ಗುರುವಿನ ಆದೇಶಗಳನ್ನು ಪಾಲಿಸಬೇಕು ಎಂದೂ, ಗುರುವನ್ನು ಕುರಿತು ಸದಾ ಧ್ಯಾನಿಸುತ್ತಿರ ಬೇಕೆಂದೂ ಶಾಸ್ತ್ರಗಳು ಹೇಳುತ್ತವೆ. ಹೀಗಿರುವಾಗ ನಾವು ಭಗವತ್ಪಾದರನ್ನು ಸ್ಮರಿಸು ವುದು, ಯಾವಾಗಲೂ ಅವರನ್ನು ಕುರಿತು ಚಿಂತಿಸುವುದು ತುಂಬ ಅವಶ್ಯವಾದದ್ದು.

ಪ್ರತಿಯೊಬ್ಬ ಮನುಷ್ಯನಿಗೂ ಹಲವು ವಿಧಗಳಾದ ಚಿಂತನೆಗಳಿರುತ್ತವೆ. ಚಿಂತನೆ ಗಳೂ, ಸಂದೇಹಗಳೂ ಏಕೆ ಬರುತ್ತವೆ ? ಯಾರಿಗೆ ತತ್ತ್ವದ ಅರಿವು ಉಂಟಾಗಿರು ತ್ತದೋ, ಯಾರಿಗೆ ತನ್ನ ನಿಜ ಸ್ವರೂಪದ ಜ್ಞಾನವಾಗಿರುತ್ತದೋ, ಅವನಿಗೆ ಚಿಂತನೆ ಗಳಿರುವುದಿಲ್ಲ. ತತ್ತ್ವವು ತಿಳಿಯದೇ ಇರುವುದರಿಂದ ದುಃಖವೂ, ಸಂದೇಹಗಳೂ ತಾವಾಗಿಯೇ ಬರುತ್ತವೆ. ಸಂದೇಹಗಳು ಹಲವು ವಿಧ.

ಶಂಕಾರೂಪೇಣ ಮಚ್ಚಿತ್ತಂ ಪಂಕೀಕೃತಮಭೂದ್ಯಯಾ ।

ಎಂದು ಹೇಳಲಾಗಿರುವುದರಿಂದ, ಈ ಸಂದೇಹಗಳು ಮಾಯೆಯಿಂದ ಉತ್ಪನ್ನವಾದವು ಎಂದಾಗುತ್ತದೆ.

ಪರಲೋಕವೆಂಬುದು ಉಂಟೇ ? ಇಲ್ಲವೇ ? ಪರಮೇಶ್ವರನೆಂದು ಒಬ್ಬನು ಇದ್ದಾನೆಯೇ ? ಇಲ್ಲವೇ ? ಆತ್ಮವೆಂಬುದು ಉಂಟೇ ? ಪರಲೋಕ ಪ್ರಾಪ್ತಿಗಾಗಿ ಶಾಸ್ತ್ರದಲ್ಲಿ ಹೇಳಿರುವ ಮಾರ್ಗಗಳು ನಿಜವೇ ?–ಮುಂತಾದ ಹಲವು ಬಗೆಯ ಸಂದೇಹ ಗಳು ನಮ್ಮ ಮನಸ್ಸನ್ನು ಕಾಡುತ್ತವೆ. ಇಂಥ ಸಂದೇಹಗಳಿಂದ ನಮ್ಮ ಮನಸ್ಸು ತುಂಬ ಕೆಟ್ಟು ಹೋಗುತ್ತದೆ.

ನೀರು ಸ್ವಚ್ಛವಾಗಿದ್ದರೆ ನಾವು ಅದನ್ನು ಕುಡಿಯಬಹುದು. ಅದೇ ನೀರು ಬಗ್ಗಡ ಅಶುದ್ಧವಾಗಿದ್ದರೆ ಅದನ್ನು ಯಾರೂ ಕುಡಿಯುವುದಿಲ್ಲ. ಅದರಂತೆಯೇ ಈ ಸಂದೇಹ ಗಳಿಂದ ನಮ್ಮ ಮನಸ್ಸು ಕಲುಷಿತವಾಗುತ್ತದೆ. ಆದರೆ ಯಾರೋ ಒಬ್ಬರು ಈ ಸಂದೇಹಗಳಿಗೆ ಕಾರಣವಾದ ಮಾಯೆ ಎಂಬುದು ಯಾವುದಿದೆಯೋ ಅದನ್ನು ಹತೋಟಿಗೆ ತಂದುಕೊಂಡಿದ್ದಾರೆ.

ಕಿಂಕರೀ ಯಸ್ಯ ಸಾಮಾಯಾ ಶಂಕರಾಚಾರ್ಯಮಾಶ್ರಯೇ ॥

ನಮ್ಮ ಸಂದೇಹಗಳಿಗೆ ಕಾರಣವಾದ ಮಾಯೆ ಯಾರಿಗೆ ಆಳಿನಂತಿರುವುದೋ, ಯಾರ ಅಪ್ಪಣೆಗಳಂತೆ ನಡೆದುಕೊಳ್ಳಲು ತಯಾರಾಗಿದೆಯೋ ಅಂಥವರು ಮಹಾಪುರುಷ ರಾಗಿಯೇ ಇರಬೇಕು. ಅಂಥ ಆಚಾರ್ಯರ ಬಳಿ ಮಾಯೆಯ ಆಟ ನಡೆಯಲಾರದು. ಅವರ ಕಟ್ಟಲೆಗಳನ್ನೇ ಮಾಯೆ ಪರಿಪಾಲಿಸಬೇಕಾಗುತ್ತದೆ ; ಅಂಥವರು ಶಂಕರ ಭಗವತ್ಪಾದರು. ಅವರಲ್ಲಿ ನಾವು ಶರಣು ಹೋಗುತ್ತೇವೆ. ಇದೇ ಆ ಶ್ಲೋಕದ ತಾತ್ಪರ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಈ ದೇಹಕ್ಕಿಂತ ಬೇರೆಯಾದ ಆತ್ಮವೆಂಬುದು ಒಂದು ಇದೆಯೋ ಇಲ್ಲವೋ ಎಂಬುದೇ ಈ ಲೋಕದಲ್ಲಿ ತುಂಬ ಜನಕ್ಕೆ ಒಂದು ಮುಖ್ಯವಾದ ಸಂದೇಹ. ಈ ಸಂದೇಹವನ್ನು ಪರಿಹರಿಸಿಕೊಳ್ಳಲು ಹಲವು ಮಾರ್ಗಗಳಿವೆ. ಅವುಗಳಲ್ಲಿ ಎರಡು ಮುಖವಾದವು ; ಮೊದಲನೆಯದು ತನಗೆ ಆಪ್ತರಾದವರನ್ನು ಕೇಳಿ ತನ್ನ ಸಂದೇಹ ವನ್ನು ನಿವಾರಿಸಿಕೊಳ್ಳಬಹುದು. ಎರಡನೆಯದು ನಮ್ಮ ಯುಕ್ತಿಯನ್ನು ಉಪ ಯೋಗಿಸಿ ಸಂದೇಹವನ್ನು ಪರಿಹರಿಸಿಕೊಳ್ಳಬಹುದು.

ಈಗ ಮೊದಲನೆಯದಾದ ಆಪ್ತವಾಕ್ಯವನ್ನು ಪರಿಶೀಲಿಸೋಣ–

ವಾಸಾಂಸಿ ಜೀರ್ಣಾನಿ ಯಥಾ ವಿಹಾಯ ನವಾನಿ ಗೃಹ್ಣಾತಿ ನರೋಽ ಪರಾಣಿ ।
ತಥಾ ಶರೀರಾಣಿ ವಿಹಾಯ ಜೀರ್ಣಾನ್ಯನ್ಯಾನಿ ಸಂಯಾತಿ ನವಾನಿ ದೇಹೀ ॥

(ಹಳೆಯದಾದ ವಸ್ತ್ರಗಳನ್ನು ಬಿಟ್ಟು ಮನುಷ್ಯನು ಹೊಸ ವಸ್ತ್ರವನ್ನು ಧರಿಸುವಂತೆ, ಆತ್ಮವು ಜೀರ್ಣವಾದ ಶರೀರವನ್ನು ಬಿಟ್ಟು ಹೊಸ ಶರೀರವನ್ನು ಸೇರುತ್ತದೆ)-ಎಂದು ಗೀತೆಯಲ್ಲಿ ಹೇಳಲಾಗಿದೆ. ನಮ್ಮ ಬಟ್ಟೆ ಬರೆಗಳು ಹಳೆಯದಾದರೆ ಏನು ಮಾಡು ತ್ತೇವೆ ? ಅವನ್ನು ಎಸೆದು ಬೇರೆ ಹೊಸ ಬಟ್ಟೆಗಳನ್ನು ಹಾಕಿಕೊಳ್ಳುತ್ತೇವೆಯಲ್ಲವೇ ? ಆದರಂತೆಯೇ ಆತ್ಮವೂ ತಾನಿರುವ ಶರೀರವನ್ನು ತನ್ನ ಕರ್ಮಗಳನ್ನು ಅನುಭವಿಸು ವುದಕ್ಕೋಸ್ಕರ ಉಪಯೋಗಿಸಿಕೊಳ್ಳುತ್ತದೆ. ಆ ಕರ್ಮವನ್ನು ಅನುಭವಿಸಿಯಾದ ಮೇಲೆ ಆ ಶರೀರವನ್ನು ಬಿಟ್ಟು ಬೇರೊಂದು ಶರೀರವನ್ನು ಸೇರುತ್ತದೆ. ಶಾಸ್ತ್ರದಲ್ಲಿಯೇ ಈ ವಿಷಯವನ್ನು ಹೇಳಲಾಗಿದೆ. ಇದು ಶಾಸ್ತ್ರದಲ್ಲಿ ಹೇಳಲಾಗಿರುವುದರಿಂದ "ಆಪ್ತ ವಚನ" ವೆನಿಸಿಕೊಳ್ಳುತ್ತದೆ. ಇದನ್ನೇ ಶಬ್ದ ಪ್ರಮಾಣವೆಂದೂ ಕರೆಯುತ್ತಾರೆ.

ಯುಕ್ತಿಯ ಮೂಲಕ ಇದನ್ನು ಹೇಗೆ ತಿಳಿಯುವುದು ಎಂಬುದನ್ನು ನೋಡೋಣ. ನಾವು ಹಲವು ಬಗೆಯ ಮನುಷ್ಯರನ್ನು ನೋಡುತ್ತೇವೆ. ಎಲ್ಲರೂ ಒಂದೇ ರೀತಿಯಾಗಿರುವುದಿಲ್ಲ. ಕೆಲವರು ತೃಪ್ತಿಯಿಂದಿರುತ್ತಾರೆ. ಕೆಲವರು ದುಃಖ ದಲ್ಲಿಯೇ ಮುಳುಗಿರುತ್ತಾರೆ. ಈ ಭಿನ್ನತೆ ಹೇಗೆ ಉಂಟಾಗುತ್ತದೆ ? ಇದಕ್ಕೆ ಕಾರಣ ಪರಮೇಶ್ವರ ಎಂದು ಹೇಳಿದರೆ, ಆಗ ಆ ಪರಮೇಶ್ವರನ ಮನಸ್ಸು ದೋಷಪೂರಿತ ವಾದದ್ದು ಎಂದು ಹೇಳಬೇಕಾಗುತ್ತದೆ. ಅವನಿಗೆ ಕರುಣೆಯಿಲ್ಲ ಎಂದೂ ಹೇಳಬೇಕಾ ಗುತ್ತದೆ. ಇಂಥವನು ಪರಮಾತ್ಮನೆಂದರೆ ಯಾರೂ ಒಪ್ಪಿಕೊಳ್ಳುವುದಿಲ್ಲ. ಪರಮಾತ್ಮನು ತುಂಬ ಕರುಣೆಯುಳ್ಳವನು ಎಂದು ನಾವೆಲ್ಲರೂ ಹೇಳುತ್ತೇವೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನೇ ಈ ಸಂಸಾರವನ್ನು -ಎಂದರೆ ಹುಟ್ಟು-ಸಾವುಗಳನ್ನು-ಉಂಟು ಮಾಡಿದವನು. ಆದರೂ ಈ ಜೀವಿಗಳಲ್ಲಿ ಸುಖ-ದುಃಖ ಮುಂತಾದ ಭಿನ್ನತೆಗಳು ಕಂಡುಬರುತ್ತವೆ. ಹೀಗಿರಲು ಪರಮೇಶ್ವರನೇ ಕಾರಣನಾಗಿದ್ದರೂ, ಅವನು ಅವರವರ ಕರ್ಮಗಳಿಗೆ ತಕ್ಕಂತೆ ಫಲಗಳನ್ನು ಕೊಡುತ್ತಾನೆ. ಆದ್ದರಿಂದ ಈ ರೀತಿಯಾಗಿ ಭಗವಂತನು ನಮ್ಮ ಸುಖ-ದುಃಖಗಳಿಗೆ ಕಾರಣನಾಗಿದ್ದಾನೆ.

ನಾವು ಬೆರಳಿಟ್ಟು ತೋರಿಸಬಹುದಾದ ಯಾವ ಕೆಲಸವನ್ನೂ ಈ ಜನ್ಮದಲ್ಲಿ ಮಾಡಿರದಿದ್ದರೂ ಸುಖ-ದುಃಖಗಳನ್ನು ಅನುಭವಿಸುತ್ತಿದ್ದೇವೆ. ಆದ್ದರಿಂದ ಪೂರ್ವ ಜನ್ಮವೆಂಬುದು ಇದ್ದಿರಬೇಕೆಂದು ತಿಳಿದು ಬರುತ್ತದೆ. ಆ ಜನ್ಮದಲ್ಲಿ ನಾವು ಏನಾದರೂ ಕರ್ಮವನ್ನು ಮಾಡಿರಲೇಬೇಕು. ಅದಕ್ಕೆ ತಕ್ಕ ಫಲವನ್ನು ಈಗ ನಾವು ಅನುಭವಿಸುತ್ತಿದ್ದೇವೆ. ನಾವು ಈ ಶರೀರವನ್ನೇ ಆತ್ಮ ಎಂದುಕೊಳ್ಳುತ್ತೇವೆ. ಆದುದರಿಂದಲೇ, ಈ ಶರೀರವೇ ಶಾಶ್ವತವಾಗಿರಬೇಕೆಂದು ನಾವು ಆಸೆಪಡುತ್ತೇವೆ. ಈ ಶರೀರ ಎಷ್ಟು ದಿನ ಜೀವಂತವಾಗಿದ್ದರೂ ನಮಗೆ ತೃಪ್ತಿಯಿಲ್ಲ. ಇನ್ನೂ ಹೆಚ್ಚು ಕಾಲ ಜೀವಂತವಾಗಿರಬೇಕೆಂದು ಬಯಸುತ್ತೇವೆ. ಇಂದ್ರಿಯಗಳಿಂದ ಆದ ಸುಖವನ್ನು ಅನುಭವಿಸುತ್ತ ನಮ್ಮ ಆಸೆ ಹೆಚ್ಚುತ್ತಾ ಹೋಗುತ್ತದೆ. ವಿಷಯಗಳ ಸ್ವಭಾವವೇ ಅದು. ನಾವು ಈ ಶರೀರವನ್ನು ಬಿಟ್ಟರೆ ಈ ಸುಖಗಳನ್ನು ಅನುಭವಿಸಲು ಆಗುವುದಿಲ್ಲ ಎಂಬ ಭಾವನೆ ಎಲ್ಲರಲ್ಲೂ ಇದ್ದೇ ಇರುತ್ತದೆ. ಈ ಶರೀರದ ಸ್ಥಿತಿಯಾದರೂ ಏನು ?

ಯೇನ ಶಾಂತಾಃ ಸಲಿಲನಿಧಯಃ ಯೇನ ಸೃಷ್ಟಾಪ್ರತಿ ದ್ಯೌಃ
ಶಸ್ತ್ರಾಣ್ಯಸ್ತ್ರಾಣ್ಯಪಿ ಕಬಲಿತಾನ್ಯೇಕಯಾ ಯಸ್ಯ ಯಷ್ಟ್ಯಾ ।
ಕಸ್ತಾದೃಕ್ಷಃ ಪ್ರಭವತಿ ಜನಃ ದೇವ ಭೂದೇವವರ್ಗೇ
ಕಾಲಃ ಕೀಟಾನಿವ ಕಬಲಾಯಾಮಾಸ ತಾನಪ್ಯಯತ್ನವ್ ॥

(ಯಾರು ಸಮುದ್ರವನ್ನು ಕುಡಿದರೋ, ಯಾರು ಮತ್ತೊಂದು ಸ್ವರ್ಗವನ್ನೇ ಸೃಷ್ಟಿಸಿದರೋ, ಯಾರ ಬ್ರಹ್ಮದಂಡದಿಂದ ಎಲ್ಲಾ ಅಸ್ತ್ರಗಳೂ ನಾಶವಾದವೋ, ಅವರಿಗೆ ಸಮನಾದವರು ಭೂಮಿಯಲ್ಲಾಗಲೀ ಸ್ವರ್ಗದಲ್ಲಿಯಾಗಲೀ ಯಾರಿದ್ದಾರೆ ? ಆದರೂ ಕಾಲವು ಇವರನ್ನು ಕೂಡ ಹುಳುಗಳಂತೆ ಕಬಳಿಸಿದೆ).
—ಎಂದು ಹೇಳಲಾಗಿದೆ.

ಒಮ್ಮೆ ಅಗಸ್ತ್ಯರು ಸಮುದ್ರವನ್ನೇ ಆಪೋಷನವಾಗಿ ತೆಗೆದುಕೊಂಡರು. ಅದು ನಮ್ಮಿಂದ ಊಹಿಸಲೂ ಆಗದಂತಹ ಮಹಾಕಾರ್ಯ. ತ್ರಿಶಂಕುವಿಗೆ ಸ್ವರ್ಗದಲ್ಲಿ ಸಶರೀರವಾಗಿ ಸ್ವರ್ಗದಲ್ಲಿ ಸ್ಥಾನವಿಲ್ಲವೆಂದಾಗ ಬೇರೊಂದು ಸ್ವರ್ಗವನ್ನೇ ಸೃಷ್ಟಿಸುತ್ತೇನೆಂದು ವಿಶ್ವಾಮಿತ್ರರು ದೇವತೆಗಳನ್ನು ಬೆದರಿಸಿದರು. ಹಾಗೆ ಮಾಡಿಯೂ ತೋರಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಸಿದರು. ವಸಿಷ್ಠರು ಮಹಾತಪಸ್ವಿ, ಅವರ ಬಳಿ ನಂದಿನಿ ಎಂಬ ಹಸು ಇತ್ತು. ಏನನ್ನು ಬಯಸಿದರೂ ಅದನ್ನು ಕೊಡಬಲ್ಲದ್ದು ಅದು. ವಿಶ್ವಾಮಿತ್ರರು ಆ ಹಸು ತನಗೆ ಬೇಕೆಂದು ಕೇಳಿದರು. ಆದರೆ ವಸಿಷ್ಠರು ಅದನ್ನು ಕೊಡಲು ಒಪ್ಪಲಿಲ್ಲ. ವಿಶ್ವಾಮಿತ್ರರು ರಾಜನಾಗಿದ್ದುದರಿಂದ ಹಲವು ಅಸ್ತ್ರಗಳನ್ನು ಪ್ರಯೋಗಿಸಿ ಆ ಹಸುವನ್ನು ಹಿಡಿದುಕೊಂಡು ಹೋಗಲು ಪ್ರಯತ್ನಿಸಿದರು. ಆದರೂ ಆ ಹಸು ಅವರಿಗೆ ಸಿಕ್ಕಲಿಲ್ಲ. ಆಗ ವಿಶ್ವಾಮಿತ್ರರು ಕೋಪಗೊಂಡು ವಸಿಷ್ಠರೊಡನೆ ಯುದ್ಧಮಾಡಲು ಬಂದರು. ಅವರ ಮೇಲೆ ಬಾಣಗಳನ್ನು ಬಿಟ್ಟರು. ಅಸ್ತ್ರಗಳನ್ನು ಬಿಟ್ಟರು. ಆಗ ವಸಿಷ್ಠರು ತಾವು ಅನುಷ್ಠಾನಕ್ಕೆ ಉಪಯೋಗಿಸುವ ಬ್ರಹ್ಮದಂಡವನ್ನು ತಮ್ಮ ಮುಂದಿಟ್ಟು ಕುಳಿತರು. ಆ ಬ್ರಹ್ಮದಂಡ ವಿಶ್ವಾಮಿತ್ರರು ಬಿಟ್ಟ ಎಲ್ಲ ಅಸ್ತ್ರಗಳನ್ನೂ ನುಂಗಿತು. ಇದನ್ನು ಕಂಡಾಗ ವಿಶ್ವಾಮಿತ್ರರಿಗೆ ವೈರಾಗ್ಯವುಂಟಾಯಿತು. ಅಂಥ ಮಹಾತ್ಮರು ಈಗ ಇಲ್ಲ. ಅವರೂ ಕಾಲವಶವಾದರು.

ಪರಿಸ್ಥಿತಿ ಹೀಗಿರುವಾಗ ನಮ್ಮಂಥವರು ಯಾವಾಗಲೂ ಜೀವಿಸಿರಬೇಕು ಎಂದು ಆಸೆಪಟ್ಟರೆ ಅದು ನೆರವೇರುವುದಾದರೂ ಹೇಗೆ? ಹಾಗಿದ್ದರೂ ನಾವು ಚಿರಕಾಲ ಜೀವಿಸಿರಬೇಕು ಎಂದು ಬಯಸುತ್ತೇವೆ. ಆದರೆ, ನಾವು ನಿಜವಾಗಿಯೂ ಆತ್ಮವು ಶರೀರವಲ್ಲ ಎಂದು ತಿಳಿದುಕೊಂಡರೆ, ಆ ಆಸೆ ಬಿಟ್ಟು ಹೋಗುತ್ತದೆ. ಈ ಶರೀರವನ್ನು ಚಿರಕಾಲ ಇಟ್ಟುಕೊಳ್ಳಬೇಕೆಂಬ ಆಸೆ ಯಾವ ಕಾರಣದಿಂದ ಇದೆ? ನಮಗೆ ಶರೀರದ ವಿಷಯದಲ್ಲಿ "ಇದು ನಾನು" ಎಂಬ ತಪ್ಪಾದ ಜ್ಞಾನದ ಕಾರಣದಿಂದ ಆ ಆಸೆ ಉಂಟಾಗುತ್ತದೆ. ನಾವು ಈ ಶರೀರಕ್ಕಿಂತ ಬೇರೆಯಾದ ಸಚ್ಚಿದಾನಂದ ಸ್ವರೂಪವಾದ ಆತ್ಮ ಎಂಬ ಜ್ಞಾನವನ್ನು ಪಡೆದರೆ, ಆಗ ತಪ್ಪಾದ ಈ ತಿಳುವಳಿಕೆ ಹೋಗುತ್ತದೆ. ನಾವು ಆ ಜ್ಞಾನವನ್ನು ಪಡೆಯುವುದೂ, ನಮ್ಮ ಆಸೆಗಳು ಮುಗಿಯುವುದೂ ಒಂದೇ ಸಮಯದಲ್ಲಿ ಆಗುತ್ತವೆ. ಆ ಜ್ಞಾನ ಪ್ರಾಪ್ತಿಯಾದರೆ ಎಲ್ಲ ಆಸೆಗಳೂ ತಾವಾಗಿ ಅಳಿದು ಹೋಗುತ್ತವೆ. ಎಲ್ಲಿಯವರೆಗೆ ನಾವು ಲೋಕದ ಆಸೆಗಳನ್ನು ಇಟ್ಟುಕೊಂಡು ಲೋಕದ ವಿಷಯಗಳನ್ನು ಹುಡುಕುತ್ತಾ ಹೋಗುತ್ತಿರುವೆವೋ ಅಲ್ಲಿಯವರೆಗೆ ನಮಗೆ ಆನಂದವು ಸಿಗುವುದೇ ಇಲ್ಲ. ನಮಗೆ ಈ ಸತ್ಯವನ್ನು ತಿಳಿಸುವುದಕ್ಕಾಗಿ ಭಗವತ್ಪಾದರು ಗ್ರಂಥಗಳನ್ನು ರಚಿಸಿರುತ್ತಾರೆ. ಉಪನಿಷತ್ತುಗಳು, ಬ್ರಹ್ಮಸೂತ್ರ, ಮತ್ತು ಭಗವದ್ಗೀತೆ–ಇವುಗಳಿಗೆ ಭಾಷ್ಯಗಳನ್ನು ಬರೆದಿದ್ದಾರೆ. ಆದರೆ ಆ ಭಾಷ್ಯಗಳನ್ನು ಒಂದೇ ಬಾರಿಗೆ ಓದಿ ತಿಳಿದುಕೊಳ್ಳುವುದು ಕಷ್ಟ. ಆದ್ದರಿಂದ ಸಾಮಾನ್ಯ ಜನರಿಗೂ ಸುಲಭವಾಗಿ ತಿಳಿಸುವ ಸಲುವಾಗಿ ಹಲವು ಗ್ರಂಥಗಳನ್ನು ಬರೆದಿದ್ದಾರೆ. ಅವುಗಳಲ್ಲಿ "ವಿವೇಕ ಚೂಡಾಮಣಿ"–ಒಂದು. ಆ ಗ್ರಂಥ ಗಾತ್ರದಲ್ಲಿ ಚಿಕ್ಕದಾದರೂ ಸುಲಭ ಗ್ರಾಹ್ಯವಾಗಿದೆ. ಆದರಲ್ಲಿ ಅವರು–

Sri Vidyabharathi Book Centre, Sringeri

CC-O. In Public Domain. Digitized by eGangotri

ಋಣ ಮೋಚನ ಕರ್ತಾರಃ ಪಿತುಃ ಸಂತಿಸುತಾದಯಃ |
ಬಂಧ ಮೋಚನ ಕರ್ತಾತು ಸ್ವಸ್ಮಾದನ್ಯೋ ನ ಕಶ್ಚನ ||

(ತಂದೆಯನ್ನು ಸಾಲದಿಂದ ಬಿಡಿಸಲು ಮಗನೇ ಮೊದಲಾದವರು ಇರುತ್ತಾರೆ ; ಆದರೆ ಅವಿದ್ಯಾ ಬಂಧನದಿಂದ ಬಿಡುಗಡೆ ಮಾಡಲು ತನ್ನನ್ನು ಬಿಟ್ಟರೆ ಬೇರೆ ಯಾರೂ ಇಲ್ಲ)-ಎಂದು ಹೇಳಿದ್ದಾರೆ.

ಒಬ್ಬನು ಸಾಲ ಮಾಡಿದ್ದರೆ, ಆ ಸಾಲವನ್ನು ತೀರಿಸಲು ಇನ್ನೊಬ್ಬನಿಂದ ಸಹಾಯವನ್ನು ಪಡೆಯಬಹುದು. ಆದರೆ ಒಬ್ಬನು ತನ್ನ ಅಜ್ಞಾನವೆಂಬ ಬಂಧನದಿಂದ ಬಿಡುಗಡೆ ಹೊಂದಲು ತಾನೇ ಪ್ರಯತ್ನಪಡಬೇಕು. ಬೇರೆ ಯಾರೂ ಇದಕ್ಕಾಗಿ ಏನನ್ನೂ ಮಾಡಲಾಗುವುದಿಲ್ಲ. ಬಂಧನದಿಂದ ವಿಮೋಚನೆ ಪಡೆಯಲು ತಾನೇ ಪ್ರಯತ್ನಪಡಬೇಕು. ಅದಕ್ಕಾಗಿ ಅವನು ತನ್ನ ಮನಸ್ಸನ್ನು ಶುದ್ಧಿಮಾಡಿಕೊಳ್ಳಬೇಕು. ಕೆಟ್ಟಭಾವನೆಗಳಿಗೆ ಮನಸ್ಸಿನಲ್ಲಿ ಎಡೆಕೊಡಬಾರದು. ಹಾಗಿದ್ದರೆ ಮನಸ್ಸು ನಿರ್ಮಲವಾಗುತ್ತದೆ. ಅದು ಹೇಗೆ ಸಾಧ್ಯ ?–

ಶ್ರುತಿ ಪ್ರಮಾಣೈಕಮತೇಃ ಸ್ವಧರ್ಮನಿಷ್ಠಾ

(ವೇದವೇ ಪ್ರಮಾಣವೆಂಬ ನಿಶ್ಚಯವಾದ ಭಾವನೆಯಿರುವವನಿಗೆ ತನಗೆ ವಿಧಿಸಲಾಗಿರುವ ಧರ್ಮದಲ್ಲಿ ನಿಷ್ಠೆಯಿಂದಿರುವ ಮನೋಭಾವ ಉಂಟಾಗುತ್ತದೆ.)

ನಾವು ಯಾವುದನ್ನು ಮಾಡಬೇಕಾದರೂ ಅದಕ್ಕೆ ಒಂದು ಪ್ರಮಾಣಬೇಕು. ಪ್ರಮಾಣವಿಲ್ಲದೆ ನಾವು ಏನನ್ನು ಮಾಡಲೂ ಸಾಧ್ಯವಿಲ್ಲ. ಹಾಗೆ ಮಾಡಿದರೆ ಅದು ನಾವು ಕ್ರಮವನ್ನು ನಿಯಮವನ್ನು ಮೀರಿದಂತಾಗಿ ಹಲವು ವಿಧಗಳಾದ ಕಷ್ಟಗಳನ್ನು ಎದುರಿಸಬೇಕಾಗುತ್ತದೆ. ಇದನ್ನು ನಾವು ಈ ಲೋಕದಲ್ಲಿ ಕಾಣಬಹುದು. ನಮಗೆ ಈಗ ಮನುಷ್ಯ ಜನ್ಮ ಸಿಕ್ಕಿದೆ. ಈ ಜನ್ಮದಲ್ಲಿ ನಾವು ಧರ್ಮವನ್ನು ಪಾಲಿಸದೇ ಹೋದರೆ ಇನ್ನೊಂದು ಜನ್ಮವನ್ನೆತ್ತಬೇಕಾಗುತ್ತದೆ. ಆಗ ಕಷ್ಟಪಡಬೇಕಾಗುತ್ತದೆ. ಆಗಲೂ ಧರ್ಮವನ್ನು ಪಾಲಿಸದಿದ್ದರೆ, ಮತ್ತೊಂದು ಜನ್ಮ ಅನುಭವಿಸಲೇಬೇಕು.

ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂಗತಿಮ್ ||

(ನನ್ನನ್ನು ಪಡೆಯದೆ ಇನ್ನೂ ಕೀಳಾದ ಗತಿಯನ್ನು ಹೊಂದುತ್ತಾನೆ.)

ಪಾಪವನ್ನು ಮಾಡುವುದರಿಂದ ನನ್ನನ್ನು ಪಡೆಯದೆ ಇನ್ನೂ ಕೀಳಾದ ಜನ್ಮವನ್ನು ಪಡೆಯುತ್ತಾನೆ–ಎಂದು ಭಗವಂತನು ಹೇಳಿದ್ದಾನೆ. ಆದ್ದರಿಂದ ನಮಗೆ ಸ್ವಧರ್ಮ ನಿಷ್ಠೆ ಇರಬೇಕು. ನಾವು ಯಾವ ವರ್ಣಾಶ್ರಮಕ್ಕೆ ಸೇರಿರುತ್ತೇವೋ ಅದಕ್ಕೆ ವಿಧಿಸಲಾಗಿರುವ ಧರ್ಮವನ್ನು ಪಾಲಿಸಬೇಕು. ಹಾಗೆ ಮಾಡಿದರೆ ನಮ್ಮ ಮನಸ್ಸು ಪರಿಶುದ್ಧವಾಗುತ್ತದೆ. ಆದ್ದರಿಂದ

Sri Vidyabharathi Book Centre, Sringeri

CC-O. In Public Domain. Digitized by eGangotri

ತಯೈವಾತ್ಮಾ ವಿಶುದ್ಧಿರಸ್ಯ

(ಇವನಿಗೆ ಅದರಿಂದಲೇ ಚಿತ್ತವು ಶುದ್ಧವಾಗುತ್ತದೆ)-
ಎಂದು ವಿವೇಕ ಚೂಡಾಮಣಿಯಲ್ಲಿ ಹೇಳಲಾಗಿದೆ.

ಇದಾದ ಮೇಲೆ ಏನಾಗುತ್ತದೆ-

ವಿಶುದ್ಧ ಬುದ್ಧೇಃ ಪರಮಾತ್ಮವೇದನಮ್

(ಪರಿಶುದ್ಧವಾದ ಬುದ್ಧಿಯಿರುವವನಿಗೆ ಆತ್ಮದ ಸಾಕ್ಷಾತ್ಕಾರವಾಗುತ್ತದೆ).

ಮನಸ್ಸನ್ನು ಪರಿಶುದ್ಧಿ ಮಾಡಿಕೊಂಡ ಮೇಲೆ ನಾವು ವೇದಾಂತ ವಿಚಾರ ಮಾಡಿದರೆ. ಪರಮಾತ್ಮನ ಸಾಕ್ಷಾತ್ಕಾರವಾಗುತ್ತದೆ. ಹಲವಾರು ಶಾಸ್ತ್ರಗಳನ್ನು ಓದಿರುತ್ತಾರೆ. ಇತರರಿಗೆ ಶಾಸ್ತ್ರದ ಉಪದೇಶವನ್ನು ವಿವರಿಸುತ್ತಾರೆ. ಆದರೆ, ಅವರಿಗೇ ಜ್ಞಾನ ಸಿದ್ಧಿಸಿರುವುದಿಲ್ಲ. ಏಕೆ ? ಈ ಪರಿಸ್ಥಿತಿ ಯಾವುದಕ್ಕೆ ಉಪಯೋಗ ಎಂಬ ಪ್ರಶ್ನೆಗೆ ಭಗವತ್ಪಾದರು ಹೀಗೆ ಉತ್ತರ ಕೊಟ್ಟಿದ್ದಾರೆ-

ವಾಗ್ವೈಖರೀ ಶಬ್ದಝರೀ ಶಾಸ್ತ್ರವ್ಯಾಖ್ಯಾನ ಕೌಶಲಮ್ ।
ವೈದುಷ್ಯಂ ವಿದುಷಾಂ ತದ್ವತ್ ಭುಕ್ತಯೇ ನತು ಮುಕ್ತಯೇ ॥

(ಪಂಡಿತರ ವಾಗ್ಝರಿ, ಶಬ್ದಗಳ ಪ್ರವಾಹ, ಶಾಸ್ತ್ರವಿವರಣೆಯಲ್ಲಿ ಕೌಶಲ ಮತ್ತು ಪಾಂಡಿತ್ಯ – ಇವು ಭೋಗಕ್ಕೆ ಸಾಧನವಾಗಬಲ್ಲವೇ ಹೊರತು ಮುಕ್ತಿಗೆ ಅಲ್ಲ.) ಮನಸ್ಸಿನಲ್ಲಿ ಮಾಲಿನ್ಯವನ್ನು ಇಟ್ಟುಕೊಂಡು ಶಾಸ್ತ್ರದಲ್ಲಿ ಹೇಳಲಾಗಿರುವುದನ್ನು ನಡವಳಿಕೆಯಲ್ಲಿ ತಂದುಕೊಳ್ಳದೆ, ಒಬ್ಬನು ಶಾಸ್ತ್ರಕ್ಕೆ ವ್ಯಾಖ್ಯಾನ ಮಾಡಿದರೆ ಆವನ ವ್ಯಾಖ್ಯಾನ ಕೌಶಲ ಮೋಕ್ಷವನ್ನು ದೊರಕಿಸದು. ಆವನ ಉದರ ಪೋಷಣೆಗೆ ಸಾಧನವಾಗುತ್ತದೆ. ಶಾಸ್ತ್ರದಲ್ಲಿ ಚೆನ್ನಾದ ಪ್ರವೇಶವಿದ್ದು, ಅಮರ ಕೋಶ ಮುಂತಾದುವನ್ನು ಕಂಠಸ್ಥ ಮಾಡಿಕೊಂಡು, ಶ್ರೀಮದ್ರಾಮಾಯಣ ಮತ್ತು ಮಹಾಭಾರತಗಳನ್ನು ಕುರಿತು ಪ್ರವಚನ ಮಾಡಿ ಹೊಗಳಿಸಿಕೊಳ್ಳಬಹುದು. ಕೀರ್ತಿಯನ್ನೂ ಪಡೆಯಬಹುದು. ಆದರೆ ಈ ಪಾಂಡಿತ್ಯ ಆತ್ಮಜ್ಞಾನಕ್ಕೆ ಪ್ರಯೋಜನವಿಲ್ಲ. ಅದಕ್ಕೆ ನಿರ್ಮಲವಾದ ಮನಸ್ಸಿರಬೇಕು, ಮತ್ತು ಶಾಸ್ತ್ರವಿಹಿತ ಅನುಷ್ಠಾನವಿರಬೇಕು.

ಕೊಳಕಾದ ಪಾತ್ರೆಯಲ್ಲಿ ನೀರನ್ನಿಟ್ಟರೆ ಆ ನೀರನ್ನು ನಾವು ಕುಡಿಯುವುದಿಲ್ಲ. ಶುಭ್ರವಾದ ಪಾತ್ರೆಯಲ್ಲಿದ್ದರೆ ಅದನ್ನು ಕುಡಿಯುತ್ತೇವೆ. ಅದರಂತೆಯೆ ಪರಿಶುದ್ಧವಾದ ಮನಸ್ಸಿನಿಂದ ತತ್ತ್ವವನ್ನು ಕುರಿತು ವಿಚಾರ ಮಾಡಿದರೆ-

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಶುದ್ಧ ಬುದ್ಧೇಃ ಪರಮಾತ್ಮವೇದನಮ್–

ಎಂದು ಹೇಳಲಾಗಿರುವಂತೆ ಆಗ ಆತ್ಮಜ್ಞಾನವಾಗುತ್ತದೆ.

ಮಾಯೆಯ ಒಡೆಯ ಈಶ್ವರ. ಆ ಈಶ್ವರನ ಅನುಗ್ರಹವಿದ್ದರೆ ನಮಗೆ ಸಧರ್ಮನಿಷ್ಠೆಯುಂಟಾಗುತ್ತದೆ. ನಾವು ಪಾಲಿಸಬೇಕಾದ ಧರ್ಮಗಳನ್ನು ಭಗವಂತನೇ ಉಪದೇಶ ಮಾಡಿದ್ದಾನೆ. ಆದ್ದರಿಂದ ಧರ್ಮ ಈಶ್ವರನ ಕಟ್ಟಳೆ. ಅವನ್ನು ನಾವು ಪಾಲಿಸಿದರೆ ಈಶ್ವರನ ಕೃಪೆಗೆ ನಾವು ಪಾತ್ರರಾಗುತ್ತೇವೆ. ಆಗ ಈಶ್ವರನ ಅನುಗ್ರಹ ದಿಂದ ಅಂಥವನಿಗೆ ಸದ್ಗುರುವು ಸಿಗುತ್ತಾನೆ. ಆ ಸದ್ಗುರುವಿನ ಉಪದೇಶದಿಂದ ಆತ್ಮ ಜ್ಞಾನವನ್ನು ಪಡೆಯಬಹುದು. ಆತ್ಮಜ್ಞಾನವನ್ನು ಪಡೆದರೆ ಮುಕ್ತಿಯನ್ನು ಹೊಂದಬಹುದು.

ಲೋಕದಲ್ಲಿ ಹಲವಾರು ಶಾಸ್ತ್ರಗಳನ್ನು ಕಾಣುತ್ತೇವೆ. ಆದರೆ ಉಪನಿಷತ್ತುಗಳ ತಾತ್ಪರ್ಯವನ್ನು ಲೋಕಕ್ಕೆ ತಿಳಿಸಿದವರು ಶಂಕರ ಭಗವತ್ಪಾದರು ಮಾತ್ರ.

ಈ ಲೋಕವೂ ಇದೆ, ಆತ್ಮವೂ ಇದೆ, ಆದರೆ ಲೋಕ ಈಗ ಇದೆ. ಸ್ವಲ್ಪ ಕಾಲದ ಮೇಲೆ ಮರೆಯಾಗಿ ಹೋಗುತ್ತದೆ. ಆದರೆ ಆತ್ಮವು ಯಾವಾಗಲೂ ಇರು ವಂಥಾದ್ದು.

ನ ಜಾಯತೇ ಮ್ರಿಯತೇವಾ
ಕದಾಚಿನ್ನಾಹಂ ಭೂತ್ವಾ ಭವಿತಾವಾನ ಭೂಯಃ ।
ಅಜೋ ನಿತ್ಯಃ ಶಾಶ್ವತೋಽಯಂ ಪುರಾಣೋ
ನಹನ್ಯತೇ ಹನ್ಯಮಾನೇ ಶರೀರೇ ॥

ಈ ಆತ್ಮವು ಹುಟ್ಟುವುದಿಲ್ಲ, ಸಾಯುವುದಿಲ್ಲ ; ಇದು ಹಿಂದೆ ಇಲ್ಲದೆ ಈಗ ಉತ್ಪತ್ತಿಯನ್ನು ಪಡೆದದ್ದಲ್ಲ. ಇದು ಹುಟ್ಟಿದ್ದಲ್ಲ. ಬೆಳೆಯತಕ್ಕದ್ದಲ್ಲ. ಯಾವಾ ಗಲೂ ಇರತಕ್ಕದ್ದು. ಶರೀರವನ್ನು ಕೊಂದರೂ, ಆತ್ಮವನ್ನು ಕೊಲ್ಲಲಾಗುವುದಿಲ್ಲ. ದೇಹಕ್ಕೆ ಅಳಿವುಂಟು, ಆತ್ಮಕ್ಕೆ ಅಳಿವಿಲ್ಲ. ಇದೇ ಆತ್ಮದ ಸ್ಥಿತಿ. ಸರಿಯಾದ ರೀತಿ ಯಲ್ಲಿ ಆತ್ಮವನ್ನು ತಿಳಿದುಕೊಂಡರೆ ಅದೇ ಪರಮಾತ್ಮ ಎಂಬುದು ತಿಳಿದು ಬರುತ್ತದೆ. ಈ ಸಾಕ್ಷಾತ್ಕಾರವಾದರೆ ನಾವು ಜೀವಸಾರ್ಥಕ್ಯವನ್ನು ಪಡೆದವರಾಗುವೆವು. ಈ ವಿಚಾರಗಳನ್ನೆಲ್ಲ ಭಗವತ್ಪಾದರು ಸ್ಪಷ್ಟವಾಗಿ ಹೇಳಿದ್ದಾರೆ. ಇದನ್ನು ಜನರಿಗೆ ತಿಳಿಸು ವುದಕ್ಕಾಗಿಯೇ ಅವರು ಭಾರತವನ್ನು ಹಲವು ಬಾರಿ ಸುತ್ತಿದರು. ಅವರ ಉಪದೇಶ ದಂತೆ ಬಾಳಿ ನಮ್ಮ ಜೀವನವನ್ನು ಸಾರ್ಥಕಪಡಿಸಿಕೊಳ್ಳೋಣ.

ಆದ್ದರಿಂದ ಈಗ ನಾವು ಮಾಡುವ ಪ್ರಯತ್ನಗಳನ್ನಿಟ್ಟುಕೊಂಡು ಫಲಗಳನ್ನು ತೀರ್ಮಾನ ಮಾಡುವುದು [illegible]ವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಉದಾಹರಣೆಗೆ-ನಾವು ನೋಡಿದ ಇಬ್ಬರು ಆಸಾಮಿಗಳು-

ತುಲ್ಯಂ ಕರ್ಷಂತಿ ಪೃಥಿವೀಮ್, ತುಲ್ಯಂ ಶಾಸ್ತ್ರಾಣ್ಯಧೀಯತೇ

ಎಂದು ಹೇಳಿದಂತೆ ಸರಿಸಮಾನವಾಗಿಯೇ ಕೆಲಸ ಮಾಡಿದರು ; ಹಾಗಿದ್ದರೂ-

ಉನ್ಮಜ್ಜಂತಿ, ನಿಮಜ್ಜಂತಿ ದೈವಸ್ಯೈಕಸ್ಯ ಲೀಲಯಾ

ಎಂದು ಹೇಳಿದಂತೆ ಒಬ್ಬನು ನಗುತ್ತಾ ಸಂತೋಷದಿಂದ ಇದ್ದಾನೆ, ಮತ್ತೊಬ್ಬನು ದುಃಖಪಡುತ್ತಿದ್ದಾನೆ. ಅದು ಅವನವನ ಹಣೇಬರಹ, ವಿಧಿ.

ವಿಧಿ ಎಂದರೆ ಏನು ? ಅದನ್ನು ನಾವು ಕಣ್ಣಿಂದ ನೋಡುತ್ತೇವೆಯೇ ? ಇಲ್ಲ. ನಾವು ಮಾಡಿದ ಕರ್ಮದ ಸಂಸ್ಕಾರದ ಫಲವೇ ವಿಧಿ. ನಾವು ಒಳ್ಳೆಯದಾದ ಹಾಗೂ ಕೆಟ್ಟ ಕೆಲಸಗಳನ್ನು ಮಾಡುತ್ತೇವೆ. ಧರ್ಮವನ್ನೋ ಅಧರ್ಮವನ್ನೋ ಅನುಸರಿಸುತ್ತೇವೆ. ಅವು ಹಾಗೆಯೇ ನಾಶವಾಗಿಬಿಡುವುದಿಲ್ಲ. ಅವು ಸಂಸ್ಕಾರ ಹೊಂದಿ ಯಾವುದೋ ಒಂದು ಕಾಲದಲ್ಲಿ ಫಲವನ್ನು ಕೊಟ್ಟೇಕೊಡುತ್ತವೆ. ಅದನ್ನೇ ವಿಧಿ ಎಂದು ಕರೆಯುತ್ತಾರೆ. ಒಬ್ಬಾತ ಹಿಂದಿನ ಜನ್ಮಗಳಲ್ಲಿ ಹೆಚ್ಚಾಗಿ ಪಾಪಗಳನ್ನು ಮಾಡಿದ್ದಿರಬಹುದು. ಆದ್ದರಿಂದ, ಈ ಜನ್ಮದಲ್ಲಿ ಹಿಂದೆ ಹೇಳಿದಂತೆ ದುಃಖವನ್ನು ಅನುಭವಿಸುವ ಪರಿಸ್ಥಿತಿ ಬರಬಹುದು. ಇನ್ನೊಬ್ಬನು ಹಿಂದಿನ ಜನ್ಮದಲ್ಲಿ ಒಳ್ಳೆಯ ಕೆಲಸಗಳನ್ನು ಮಾಡಿದ್ದಿರಬಹುದು. ಅವನಿಗೆ ಈಗ ಸಂತೋಷಪಡುವ ಅವಕಾಶ ದೊರೆತಿರಬಹುದು. ಹೀಗೆ, ಒಬ್ಬನಿಗೆ ಅವನು ಈ ಜನ್ಮದಲ್ಲಿ ಮಾಡಿದ ಕರ್ಮದಿಂದ ಮಾತ್ರ ಸುಖವೋ ದುಃಖವೋ ಉಂಟಾಗುವುದಿಲ್ಲವೆಂಬುದು ತಿಳಿದುಬರುತ್ತದೆ.

ನಮ್ಮ ಮನಸ್ಸಿಗೆ ಇನ್ನೊಂದು ಪ್ರಶ್ನೆ ಬರಬಹುದು. "ಲೋಕದಲ್ಲಿ ಒಳ್ಳೆಯದನ್ನು ಮಾಡುವವರನ್ನು ನೋಡುತ್ತೇವೆ. ಆದರೂ ಕಷ್ಟಕ್ಕೆ ಒಳಗಾಗುತ್ತಾರಲ್ಲ ! ಆದರೆ, ಕಷ್ಟಕ್ಕೆ ಸಿಗದೆ, ಸುಖವನ್ನೇ ಅನುಭವಿಸುತ್ತಿರುವವರು ಪಾಪಗಳನ್ನೇ ಮಾಡುತ್ತಿರುವುದನ್ನೂ ನಾವು ನೋಡುತ್ತೇವೆ. ಇದರಿಂದ ಪಾಪ ಮಾಡುವುದೇ ಧರ್ಮ, ಪುಣ್ಯ ಮಾಡುವುದು ಅಧರ್ಮ-ಎಂಬ ತೀರ್ಮಾನಕ್ಕೆ ನಾವು ಏಕೆ ಬರಬಾರದು ?-ಎಂಬುದೇ ಆ ಪ್ರಶ್ನೆ.

ಅದು ಹಾಗಲ್ಲ. ಧರ್ಮ-ಧರ್ಮವೇ, ಅಧರ್ಮ ಅಧರ್ಮವೇ. ಹೀಗಿರುವಾಗ ತಪ್ಪು ಮಾಡುವವರು ಸುಖವನ್ನು ಪಡೆಯುವುದಕ್ಕೆ ಕಾರಣ ಹಿಂದಿನ ಜನ್ಮದ ಕರ್ಮಗಳೇ. ಈ ವಿಷಯವನ್ನು ಕುರಿತು ಮನು ಮಹರ್ಷಿಗಳು-

Sri Vidyabharathi Book Centre, Sringeri

CC-O. In Public Domain. Digitized by eGangotri

ಅಧರ್ಮೇಣೈಧತೇ ತಾವತ್ ತತೋಭದ್ರಾಣಿ ಪಶ್ಯತಿ ।
ತತಃ ಸಪತ್ನಾನ್ ಜಯತಿ ಸಮೂಲಸ್ತು ವಿನಶ್ಯತಿ ॥

(ಅಧರ್ಮದಿಂದ ಕೆಲವು ವೇಳೆ ಬಹು ಏಳಿಗೆಯನ್ನು ಹೊಂದುತ್ತಾನೆ ; ಉತ್ತಮ ಸುಖ ಗಳನ್ನು ಕಾಣುತ್ತಾನೆ ; ತನ್ನ ವಿರೋಧಿಗಳನ್ನು ಜಯಿಸುತ್ತಾನೆ ; ಆದರೆ ಮೂಲಸಹಿತ ವಾಗಿ ನಾಶವಾಗುವುದು ನಿಜ).

–ಎಂದು ಹೇಳಿದ್ದಾರೆ. ಅಧರ್ಮವನ್ನು ಮಾಡುವವನು ಆದರ ಮೂಲಕ ಪ್ರಾರಂಭ ದಲ್ಲಿ ಏಳಿಗೆಯನ್ನು ಪಡೆಯಬಹುದು. ಅನಂತರ ಅವನಿಗೆ ಯಾವುದು "ಸುಖ" ಎಂದು ವಿಹಿತವಾಗಿದೆಯೋ ಅದೆಲ್ಲವನ್ನೂ ಪಡೆಯುತ್ತಾನೆ. ಅವನನ್ನು ಎದುರಿಸುವವರೆಲ್ಲರೂ ಸೋಲನ್ನಪ್ಪುವಂತೆ ಮಾಡುತ್ತಾನೆ. ಕೊನೆಯಲ್ಲಿ ಸಮೂಲವಾಗಿ ನಾಶವಾಗಿ ಹೋಗು ತ್ತಾನೆ. ಯಾವಾಗ ಅವನ ಒಳ್ಳೆಯ ಕರ್ಮಗಳ ಫಲ ತೀರುವುದೋ ಆವಾಗ ಅವನು ಮೂಲಸಹಿತ ನಾಶವಾಗುತ್ತಾನೆ. ಅದು ಆಗುವುದು ಯಾವಾಗ ? ಅದು ಶೀಘ್ರದಲ್ಲಿ ಆಗಬಹುದು ಅಥವಾ ಸಾವಕಾಶವಾಗಿ ಆಗಬಹುದು.

ತ್ರಿಭಿರ್ವರ್ಷೈ ಸ್ತ್ರಿಭಿರ್ಮಾಸೈಃ ತ್ರಿಭಿಃಪಕ್ಷೈ ಸ್ತ್ರಿಭಿರ್ದಿನೈಃ ।
ಅತ್ಯುತ್ಕಟೈಃ ಪುಣ್ಯಪಾಪೈಃ ಇಹೈವ ಫಲಮಶ್ನುತೇ ॥

(ಬಹು ಉತ್ಕಟವಾದ ಪುಣ್ಯ ಪಾಪಗಳನ್ನು ಮಾಡಿದರೆ, ಆದರ ಫಲವನ್ನು ಈ ಜನ್ಮ ದಲ್ಲಿಯೇ ಮೂರು ವರ್ಷ, ಮೂರು ತಿಂಗಳು, ಮೂರು ಪಕ್ಷ ಅಥವಾ ಮೂರು ದಿನ ಗಳಲ್ಲಿ ಅನುಭವಿಸುತ್ತಾನೆ).

–ಎಂದು ಹೇಳಲಾಗಿದೆ.

ನಾವು ಲೋಕದಲ್ಲಿಯೇ ನೋಡಬಹುದು. ಕ್ರಿಮಿನಲ್ ಕೇಸ್ ಮತ್ತು ಸಿವಿಲ್ ಕೇಸ್ ಎಂದು ನ್ಯಾಯಾಲಯಕ್ಕೆ ಹೋಗುತ್ತೇವೆ. ಒಂದು ಸಿವಿಲ್ ಕೇಸು ಇಪ್ಪತ್ತು ವರ್ಷಗಳಾದರೂ ತೀರ್ಮಾನಕ್ಕೆ ಬರದೆ ಇರಬಹುದು. ಆದರೆ, ಒಂದು ಕ್ರಿಮಿನಲ್ ಕೇಸು ಅದಕ್ಕಿಂತ ಬೇಗ ಮುಗಿದುಹೋಗಬಹುದು. ಸುಮಾರು ಆರು ತಿಂಗಳಲ್ಲಿಯೇ ಅಪರಾಧಿ ತನ್ನ ತಪ್ಪಿಗೆ ದಂಡನೆಯನ್ನು ಪಡೆದುಬಿಡಬಹುದು. ಈ ವ್ಯತ್ಯಾಸ ಏಕೆ ? ಇದಕ್ಕೆ ಕಾರಣವೇನೆಂದರೆ ಕ್ರಿಮಿನಲ್ ಕೇಸಿನಲ್ಲಿ ಕೂಡಲೇ ದಂಡನೆಯನ್ನು ವಿಧಿಸ ಬೇಕಾದ ಅವಶ್ಯಕತೆಯುಂಟಾಗುತ್ತದೆ. ಹೀಗೆ ಇವೆರಡಕ್ಕೂ ವ್ಯತ್ಯಾಸಗಳಿವೆ. ಇದ ರಂತೆಯೇ ಭಗವಂತನ ದರ್ಬಾರಿನಲ್ಲಿಯೂ ಒಬ್ಬನು ಮಾಡಿದ ಕರ್ಮ ತೀವ್ರವಾಗಿದ್ದರೆ ತಕ್ಷಣವೇ ಅದರ ಫಲ ದೊರೆಯುತ್ತದೆ. ಅಂದರೆ ತೀವ್ರವಾದ ಪಾಪವೋ ಪುಣ್ಯವೋ ಇದ್ದರೆ ಅದರ ಫಲವೂ ಶೀಘ್ರವೇ ಸಿಗುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕರ್ಮದ ಫಲ "ತ್ರಿಭಿರ್ವರ್ಷೈಃ"-ಎಂದು ಹೇಳಿದಂತೆ ಮೂರು ವರ್ಷಗಳಲ್ಲಿಯೇ ಸಿಗಬಹುದು ; "ತ್ರಿಭಿರ್ಮಾಸೈಃ"-ಮೂರು ತಿಂಗಳಲ್ಲಿ ಸಿಗಬಹುದು ; ಅಥವಾ "ತ್ರಿಭಿರ್ಪಕ್ಷೈಃ"-ಮೂರು ಪಕ್ಷಗಳಾಗಬಹುದು. ಹೆಚ್ಚು ತೀವ್ರವಾದ ಕರ್ಮವಾದರೆ 'ತ್ರಿಭಿರ್ದಿನೈಃ"-ಮೂರು ದಿನಗಳಲ್ಲಿಯೇ ಕರ್ಮ ಫಲಗಳನ್ನು ಅನುಭವಿಸಬೇಕಾಗ ಬಹುದು. ಯಾವುದು ತೀವ್ರವಾದದು ಯಾವುದು ಅಲ್ಲ ಎಂಬುದನ್ನು ನಾವು ತೀರ್ಮಾನಿಸಲಾಗುವುದಿಲ್ಲ. ಕರ್ಮದ ಫಲವನ್ನು ಅನುಭವಿಸಿದ ಮೇಲೇ "ಕರ್ಮವು ಎಷ್ಟು ತೀವ್ರವಾದದ್ದು, ಕೂಡಲೇ ಫಲವನ್ನು ಕೊಡುವಂಥಾದ್ದೇ ? ಅಲ್ಲವೇ ?" ಎಂಬು ದನ್ನು ತಿಳಿಯಲಾಗುತ್ತದೆ. ನಾವು ಈಗ ಮಾಡುವ ಕರ್ಮವು ಫಲವನ್ನು ಕೊಡದೇ ಇರಲಾರದು. ನಾವು ಮಾಡುವ ಕರ್ಮ ಅಷ್ಟು ತೀವ್ರವಲ್ಲವಾದರೆ, ನಾವು ಸಾಯುವ ವರೆಗೂ ಅದರ ಫಲವನ್ನು ಅನುಭವಿಸದೆಯೇ ಇರಬಹುದು. ಇದನ್ನು ನೋಡಿ ನಾಸ್ತಿಕರಾದವರು-"ಇವನು ಮಾಡಿದ ಕರ್ಮಕ್ಕೆ ಫಲವೇ ಇಲ್ಲ"-ಎಂದು ಹೇಳಬಹುದು. ಆದರೆ, ಅದು ಇವರು ತಿಳಿದಂತೆ ಅಲ್ಲ. ಹಾಗಿದ್ದರೆ ಶಾಸ್ತ್ರಗಳ ಉಪದೇಶಗಳೆಲ್ಲ ವ್ಯರ್ಥ ವೆಂದಾಗಿಬಿಡುತ್ತಿತ್ತು. ನಾವು ಮಾಡಿದ ಕರ್ಮಗಳಿಗೆ ಯಾವುದಾದರೂ ಒಂದು ಜನ್ಮ ದಲ್ಲಿ ಫಲವನ್ನು ಅನುಭವಿಸಲೇಬೇಕು. ಹೀಗಿರದಿದ್ದರೆ, ಕಾರ್ಯ-ಕಾರಣ ಎಂಬ ತತ್ತ್ವಕ್ಕೆ ಹಾನಿಯುಂಟಾಗುತ್ತದೆ.

ನಾವು ಮಾಡುವ ಕರ್ಮಗಳಿಗೆ ಯಾವುದಾದರೂ ಒಂದು ಕಾಲದಲ್ಲಿ ಫಲ ಸಿಕ್ಕೇ ಸಿಗುತ್ತದೆ ಎಂಬುದನ್ನು ಗಮನದಲ್ಲಿಟ್ಟುಕೊಂಡೇ ಮನು ಮಹರ್ಷಿಗಳು-

ಗತೇಽಪಿ ವಯಸಿಗ್ರಾಹ್ಯಾ ವಿದ್ಯಾ ಸರ್ವಾತ್ಮನಾ ಬುಧೈಃ ||
ಯದ್ಯಪಿ ಸ್ಯಾನ್ನಫಲದಾ ಸುಲಭಾ ಸಾ ಅನ್ಯಜನ್ಮನಿ ||

ವಯಸ್ಸಾಗಿದ್ದರೂ ಒಬ್ಬನು ಸರ್ವಪ್ರಯತ್ನದಿಂದಲೂ ಜ್ಞಾನವನ್ನು ಪಡೆಯಬೇಕು ; ಅದರ ಫಲ ಈಗಲೇ ದೊರೆಯದಿದ್ದರೂ ಇನ್ನೊಂದು ಜನ್ಮದಲ್ಲಿ ಫಲಿಸುತ್ತದೆ).

-ಎಂದು ಹೇಳಿದ್ದಾರೆ. "ವಯಸ್ಸಾದರೂ ಜ್ಞಾನಕ್ಕಾಗಿ ಪ್ರಯತ್ನಿಸಬೇಕು-ಎಂದು ಹೇಳಿದರು ಮನು ಮಹರ್ಷಿಗಳು. ಈಗಿನ ಕಾಲದಲ್ಲಿ ವಯಸ್ಕರಿಗೆ ಸಂಜೆ ಸ್ಕೂಲು ಕಾಲೇಜುಗಳನ್ನು ನಡೆಸುವುದನ್ನು ನಾವು ನೋಡುವುದಿಲ್ಲವೇ ? ಅದರಂತೆ ಹಿಂದಿನ ಕಾಲದಲ್ಲೂ ಮನು ಮಹರ್ಷಿಗಳು- "ವಯಸ್ಸಾದರೂ ವಿದ್ಯೆಯನ್ನು ಕಲಿಯಲು ಪ್ರಯತ್ನಿಸು"-ಎಂದು ಹೇಳಿದರೇನೋ ! ಹಾಗೆ ಪ್ರಯತ್ನ ಪಡುವುದರ ಪ್ರಯೋಜನ ವೇನು ? ಕಲಿಕೆಯ ಫಲ ಸಿಗುವುದಕ್ಕೆ ಮೊದಲೇ ನಾವು ಸತ್ತುಹೋಗಬಹುದಲ್ಲ, ಎಂದರೆ-"ಯದ್ಯಪಿ ಸ್ಯಾನ್ನಫಲದಾ"-ಎಂದು ಹೇಳಿರುವಂತೆ ಓದಿದುದರ ಫಲ ಸಿಗದೇ ಹೋಗಬಹುದು. ಆದರೆ, ಈಗ ಮಾಡಿದ ಪ್ರಯತ್ನ ವ್ಯರ್ಥವಾಗುವುದಿಲ್ಲ. "ಸುಲಭಾ

Sri Vidyabharathi Book Centre, Shimoga

CC-O. In Public Domain. Digitized by eGangotri

ಸಾ ಅನ್ಯಜನ್ಮನಿ"-ಎಂದು ಹೇಳಲಾಗಿರುವಂತೆ, ಇನ್ನೊಂದು ಜನ್ಮದಲ್ಲಿ ಆ ಕರ್ಮದ ಫಲ, ಅಂದರೆ ಓದಿನ ಫಲ ಸಿಕ್ಕೇ ಸಿಗುತ್ತದೆ. ಮುಗುಜನ್ಮದಲ್ಲಿ ನಾವು ಸುಲಭವಾಗಿ ಆ ವಿದ್ಯೆಯನ್ನು ಕಲಿತುಕೊಳ್ಳಬಹುದು. ಆದ್ದರಿಂದ "ವಯಸ್ಸಾದರೂ ವಿದ್ಯೆಯನ್ನು ಕಲಿಯುವ ಪ್ರಯತ್ನ ಮಾಡು" ಎಂದಿದ್ದಾರೆ ಮನು ಮಹರ್ಷಿಗಳು.

ಇದೆಲ್ಲ ಏನನ್ನು ತಿಳಿಸುತ್ತದೆ ? "ನಾವು ಮಾಡಿದ ಕರ್ಮಕ್ಕೆ ಫಲವಿದ್ದೇ ಇದೆ. ಈ ಜನ್ಮದಲ್ಲಿ ಅಲ್ಲದಿದ್ದರೆ, ಇನ್ನೊಂದು ಜನ್ಮದಲ್ಲಿಯಾದರೂ ಖಂಡಿತವಾಗಿ ಅದಕ್ಕೆ ಫಲ ಉಂಟು"-ಎಂದು ತಿಳಿದುಬರುತ್ತದೆ. ಹೀಗೆ ಕರ್ಮದ ಫಲವನ್ನು ಅನುಭವಿಸು ತ್ತಲೇ ಇರಬೇಕೇ ? ಶಾಶ್ವತವಾದ ಸುಖವನ್ನು ಪಡೆಯಲು ದಾರಿಯಿಲ್ಲವೇ ?-ಎಂದು ಕೇಳಿದರೆ, ಅದಕ್ಕೆ ಉತ್ತರ-ಶಾಶ್ವತವಾದ ಸುಖ ಉಂಟು-ಎಂಬುದೇ.

ಭಗವಂತನೇ-

ಮಾಮುಪೇತ್ಯತು ಕೌಂತೇಯ ಪುನರ್ಜನ್ಮನವಿದ್ಯತೇ ।

(ಕೌಂತೇಯ, ನನ್ನನ್ನು ಪಡೆದವನಿಗೆ ಪುನರ್ಜನ್ಮವಿಲ್ಲ)-ಎಂದು ಹೇಳಿದ್ದಾನೆ. ಭಗವಂತ ನಲ್ಲಿ ನಾವು ಒಂದಾದರೆ ನಮಗೆ ಪುನರ್ಜನ್ಮವಿಲ್ಲ. ದುಃಖವೆಂಬುದೂ ಇಲ್ಲ. ಹಾಗೆ ಭಗವಂತನೊಡನೆ ಐಕ್ಯ ಹೊಂದುವುದು ಆಗದಿದ್ದರೆ, ಪುನರ್ಜನ್ಮವುಂಟೇ ಉಂಟು.

ಮಾಮಪ್ರಾಪ್ಯೈವ ಕೌಂತೇಯ ತತೋ ಯಾಂತ್ಯಧಮಾಂಗತಿಮ್ ॥

(ಕೌಂತೇಯ, ನನ್ನನ್ನು ಪಡೆಯದೇ ಹೋದರೆ, ಇನ್ನೂ ಕೀಳಾದ ಗತಿಯನ್ನು ಹೊಂದುತ್ತಾನೆ)-ಎಂದು ಭಗವಂತ ಹೇಳಿದಂತೆ, ಇನ್ನೂ ಅಧೋಗತಿಯನ್ನೇ ಪಡೆಯು ತ್ತಾನೆ.

ಕರ್ಮವು ಫಲವನ್ನು ಕೊಟ್ಟೇ ತೀರುತ್ತದೆ ಎಂಬುದೇ ಆಸ್ತಿಕರಾದವರ ನಂಬಿಕೆ.

ಕರ್ಮ ಮಾಡಿದರೂ ನಮಗೆ ಅದರ ಫಲವಿಲ್ಲದೇ ಹೋಗಬಹುದು ಎನ್ನುತ್ತಾರೆ ನಾಸ್ತಿಕರು. ತಮಗೆ ಏನಾದರೊಂದನ್ನು ಪಡೆಯಬೇಕೆಂದರೆ ಅದನ್ನು ಯಾವ ವಿಧ ದಲ್ಲಾದರೂ ಪಡೆಯಬಹುದು ಎಂದು ನಾಸ್ತಿಕರು ಭಾವಿಸುತ್ತಾರೆ. ಆಸ್ತಿಕರಾದರೋ ಯಾವುದಕ್ಕೂ ತಪ್ಪಾದ ಕರ್ಮವನ್ನು ಮಾಡಲು ಹಿಂಜರಿಯುತ್ತಾರೆ. ಏಕೆಂದರೆ, ಆಸ್ತಿಕರಿಗೆ ಪುನರ್ಜನ್ಮದಲ್ಲಿ ನಂಬಿಕೆಯುಂಟು. ಆಗ ಆ ಜನ್ಮದಲ್ಲಿಯಾದರೂ ಫಲ ವನ್ನು ಅನುಭವಿಸಿಯೇ ತೀರಬೇಕೆಂದು ಅವರು ಬಲ್ಲರು. ನಾಸ್ತಿಕರಿಗೆ ಅಂಥ ಭಯ ವಿರಬೇಕಾದ ಅವಶ್ಯಕತೆ ಇಲ್ಲ. ನಾಸ್ತಿಕನು "ನಾನು ನನ್ನ ಕೆಲಸವನ್ನು ಸಾಧಿಸಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊಂಡೆ" ಎಂದು ಗರ್ವಪಡಬಹುದು. ಆಗ ಆಸ್ತಿಕನು–"ಇವನು ತಪ್ಪಾದ ದಾರಿಯಿಂದ ಸಾಧಿಸಿದ್ದಾನೆ. ಕೆಲಸವನ್ನೇನೋ ಸಾಧಿಸಿದರೂ ತಪ್ಪಾದ ಮಾರ್ಗದಲ್ಲಿ ಹೋದದ್ದರಿಂದ ಅವನು ದುಃಖವನ್ನು ಖಂಡಿತವಾಗಿ ಅನುಭವಿಸಲೇಬೇಕಾಗುತ್ತದೆ'–ಎಂದು ಚಿಂತಿಸುತ್ತಾನೆ. ಆದ್ದರಿಂದ ನಾವು ಕರ್ಮ ಎಂಬುದು ಉಂಟು. ದೇವರು ಇದ್ದಾನೆ ಎಂಬ ನಂಬಿಕೆಯನ್ನಿಟ್ಟುಕೊಂಡರೆ ಹೆಚ್ಚು ತಪ್ಪುಗಳನ್ನು ಮಾಡುವುದಿಲ್ಲ.

ವೇದವೇ ಒಂದು ಕಡೆ–

ಭೀಷಾಸ್ಮಾತ್ ವಾತಃ ಪವತೇ, ಭೀಷೋದೇತಿ ಸೂರ್ಯಃ

(ಅವನ ವಿಷಯದಲ್ಲಿರುವ ಭಯದ ಕಾರಣದಿಂದ ಗಾಳಿ ಬೀಸುತ್ತದೆ ; ಸೂರ್ಯನು ಉದಯಿಸುತ್ತಾನೆ)

–ಎಂದು ಹೇಳುತ್ತದೆ. ಭಗವಂತನ ಆಜ್ಞೆಯನ್ನು ಪಾಲಿಸಬೇಕೆಂಬ ಭಯದಿಂದಲೇ ಗಾಳಿ ಬೀಸುತ್ತದೆ, ಸೂರ್ಯ ಹುಟ್ಟುತ್ತಾನೆ–ಎಂದು ವೇದ ಹೇಳುತ್ತದೆ. ಇಂತಹ ಭಗವಂತನು ಒಬ್ಬನು ಮಾಡಿದ ಕರ್ಮಕ್ಕೆ ಫಲವನ್ನು ಕೊಟ್ಟೇಕೊಡುತ್ತಾನೆ ಎಂಬ ನಂಬಿಕೆಯಿದ್ದರೆ, ತಪ್ಪು ಮಾಡುವ ಬುದ್ಧಿ ನಮಗೆ ಬಂದರೂ, ನಾವು ತಪ್ಪು ಮಾಡದೆ ಇರಬಹುದು.

ಜನರು ಹಲವಾರು ಬಗೆಯಾಗಿರುತ್ತಾರೆ. ಸಾಮಾನ್ಯವಾಗಿ ಜನರಿಗೆ ಅಪಾರವಾದ ಆಸೆಯಿರುತ್ತದೆ. ಆದರೆ ಶ್ರೇಷ್ಠವಾದ ಸ್ಥಿತಿಯನ್ನು ಪಡೆದವರಿಗೆ, ಅಂದರೆ ಬ್ರಹ್ಮ ವಸ್ತುವಿನ ಸಾಕ್ಷಾತ್ಕಾರವನ್ನು ಪಡೆದವರಿಗೆ, ಯಾವ ವಿಧವಾದ ಆಸೆಯೂ ಇರುವುದಿಲ್ಲ. ಅಂಥವನು ಯಾವಾಗಲೂ ಸಂತೋಷ ಚಿತ್ತನಾಗಿ ಇರುತ್ತಾನೆ. ಅಂಥವನನ್ನು ಮನಸ್ಸಿನಲ್ಲಿಟ್ಟುಕೊಂಡೇ–

ನೈವ ತಸ್ಯ ಕೃತೇನಾರ್ಥೋಽ ನಾಕೃತೇನೇಹ ಕಶ್ಚನ ।

(ಆ ಜ್ಞಾನಿಗೆ ಕರ್ಮದಿಂದ ಯಾವ ಪ್ರಯೋಜನವೂ ಇರುವುದಿಲ್ಲ, ಮತ್ತು ಕರ್ಮ ಮಾಡದಿರುವುದರಿಂದ ಯಾವ ದೋಷವೂ ಇರುವುದಿಲ್ಲ)

–ಎಂದು ಭಗವಂತನು ಹೇಳಿದ್ದಾನೆ. ಅಂಥವನಿಗೆ ತಾನು ಮಾಡುವ ಕೆಲಸದಲ್ಲಿ ಆಸಕ್ತಿಯಿರುವುದಿಲ್ಲ ; ಮಾಡಬೇಕಾದ ಕಾರ್ಯಗಳಲ್ಲಿಯೂ ಆಸಕ್ತಿಯಿರುವುದಿಲ್ಲ.

ಲೋಕದಲ್ಲಿನ ಜನರಲ್ಲಿ ವಿಚಾರ ಪ್ರವೃತ್ತಿಯೂ, ಅದಕ್ಕೆ ಬೇಕಾದ ಸಾಮರ್ಥ್ಯವೂ ವಿಧವಿಧವಾಗಿರುತ್ತದೆ. ಕೆಲವರು ಹೆಚ್ಚು ವಿಚಾರ ಮಾಡುತ್ತಾರೆ ; ಇನ್ನು ಕೆಲವರಿಗೆ ವಿಚಾರ ಮಾಡುವ ಸಾಮರ್ಥ್ಯವೇ ಇರುವುದಿಲ್ಲ. ವಿಚಾರ ಮಾಡದಿರುವವನಿಗೆ ಕತ್ತಲೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾದ ಕೂಡಲೆ "ಇಂದು ಏನೋ ಆಗಿದೆ; ಆಮೇಲೆ ನೋಡಿಕೊಳ್ಳೋಣ; ಈಗ ನಿದ್ದೆಮಾಡೋಣ" ಎಂದು ಮಲಗಿ ನಿದ್ದೆಮಾಡುತ್ತಾನೆ. ಆದರೆ ಬುದ್ಧಿಯಿರುವವನು ಹಾಗಿರುವುದಿಲ್ಲ. ಇಂದು ನಾನು ಏನು ಮಾಡಿದೆ? ಒಳ್ಳೆಯದನ್ನು ಮಾಡಿದೆನೆ? ಕೆಟ್ಟದನ್ನು ಮಾಡಿದೆನೆ? ನಾಳೆ ಇವುಗಳಿಗೆ ಉತ್ತರ ಕೊಡಬೇಕಾಗುತ್ತದೆಯಲ್ಲ! ಎಂದು ಮುಂತಾಗಿ ಆಲೋಚಿಸುತ್ತಾನೆ.

ಧನ್ಯೋ ಜನಃ ಪ್ರಾಜ್ಞಃ।

(ತಿಳುವಳಿಕೆಯುಳ್ಳವನು ಅದೃಷ್ಟಶಾಲಿ)–

–ಎಂದು ಹೇಳಲಾಗಿದೆ. ಅವನು–"ನಾನು ಏನನ್ನು ಮಾಡಿದರೂ ಆದಕ್ಕೆ ನಾನು ಅವಶ್ಯವಾಗಿ ಜವಾಬು ಹೇಳಬೇಕಾಗುತ್ತದೆ–

ನಾ ಭುಕ್ತಂ ಕ್ಷೀಯತೇ ಕರ್ಮ ಕಲ್ಪಕೋಟಿಶತೈರಪಿ।

(ಅನುಭವಿಸಬೇಕಾದ ಕರ್ಮ ನೂರು ಕೋಟಿ ಕಲ್ಪಗಳು ಮುಗಿದರೂ ನಾಶವಾಗುವುದಿಲ್ಲ)

ಎಂದು– ಹೇಳಲಾಗಿರುವುದರಿಂದ ಕರ್ಮ ಫಲವನ್ನು ನೀಡದೇ ಇರದು"–ಎಂದು ಆಲೋಚಿಸುತ್ತಾನೆ. ಆದ್ದರಿಂದ ತಿಳುವಳಿಕೆಯುಳ್ಳವರು ಕರ್ಮಗಳನ್ನು ಎಚ್ಚರಿಕೆಯಿಂದ ಮಾಡುತ್ತಾರೆ.

ಸರಿಯಾಗಿ ಕರ್ಮಗಳನ್ನು ಮಾಡದಿರುವ ಕಾರಣದಿಂದ ಮನುಷ್ಯರು ಹುಟ್ಟು ಸಾವೆಂಬ ಸಂಸಾರದಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ. ಸಂಸಾರದಲ್ಲಿ ಸಿಕ್ಕಿಹಾಕಿಕೊಂಡ ಮೇಲೆ ಯಾರಿಗೆ ತಾನೆ ಸುಖವಿರುತ್ತದೆ? ಕೆಲವು ದಿನಗಳು ಸಂತೋಷವಿರುವಂತೆ ತೋರುತ್ತದೆ. ಅನಂತರ ಲೋಕವನ್ನು ನೋಡಿದವೆಂದರೆ ಅದರಲ್ಲಿ ಸಂತೋಷವಿಲ್ಲ. ಆದ್ದರಿಂದ "ಅಸಾರ ಏವ ಸಂಸಾರಂ"–ಸಂಸಾರದಲ್ಲಿ ಯಾವ ವಿಧವಾದ ಸಾರವೂ ಇಲ್ಲ ಎಂದು ಹಿರಿಯರು ಹೇಳಿದಂತೆ ದುಃಖದಲ್ಲೇ ಮುಕ್ತಾಯಗೊಳ್ಳುತ್ತದೆ.

ಪ್ರಪಂಚದಲ್ಲಿದ್ದುಕೊಂಡೇ ಆನಂದವನ್ನು ಪಡೆಯಬಹುದು ಎಂದು ಜನ ನಿರೀಕ್ಷಿಸಬಹುದು. ಆದರೆ, ಇಂಥ ಆಸೆಗಳನ್ನು ಅವರು ತೀರಿಸಿಕೊಳ್ಳಲು ಆಗುವುದಿಲ್ಲ ಎಂಬುದನ್ನು ಲೋಕವನ್ನು ಸ್ವಲ್ಪ ಕಾಲ ನೋಡಿದ ಮೇಲೆ ತಿಳಿಯುತ್ತದೆ. "ಭಗವಂತನನ್ನು ನಾವು ಹೊಂದಲಾಗುವುದಿಲ್ಲ, ಆದರೆ, ಅವನನ್ನು ಹೊಂದಿದಾಗಲೇ ನಾವು ಸಂಪೂರ್ಣ ಸುಖವನ್ನು ಪಡೆಯಬಹುದು"–ಎಂದು ಶಾಸ್ತ್ರಗಳಲ್ಲಿ ಸ್ಪಷ್ಟವಾಗಿ ಹೇಳಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಂತನ ಸಾಕ್ಷಾತ್ಕಾರವಾಗಬೇಕು ಎಂದು ಶಾಸ್ತ್ರಗಳಲ್ಲಿ ಹೇಳಲಾಗಿದೆ. ಭಗವಂತನ ಸಾಕ್ಷಾತ್ಕಾರವಾಗಬೇಕಾದರೆ ನಾವು ನಮ್ಮ ಮನಸ್ಸನ್ನು ಲೋಕದಿಂದ ತೆಗೆದು ಭಗವಂತನಲ್ಲಿ ನಿಲ್ಲಿಸಬೇಕು. ಶ್ರವಣ, ಮನನ, ನಿದಿಧ್ಯಾಸನ, ಮುಂತಾದುವನ್ನು ಸಾಧಿಸಬೇಕು. ಭಗವಂತನಲ್ಲಿಯೇ ಮನಸ್ಸನ್ನಿಡಬೇಕೆಂದರೆ ಭಗವಂತನನ್ನು ಸಗುಣರೂಪದಲ್ಲಿಯೋ ಅಥವಾ ನಿರ್ಗುಣರೂಪದಲ್ಲಿಯೋ ಧ್ಯಾನಿಸಬೇಕು. ಭಗವಂತನಿಗೆ ಸಗುಣರೂಪವೂ ಉಂಟು. ಅವನು ನಿರ್ಗುಣನೂ ಹೌದು. ಇವರಲ್ಲಿ ಯಾವುದೂ ನಿಜ ?–ಎಂಬ ಪ್ರಶ್ನೆ ನಮ್ಮಲ್ಲಿ ಹುಟ್ಟಬಹುದು. ತಿಳಿಯಾದ ನೀರಿದೆ. ಯಾವುದೋ ದ್ರವ್ಯವನ್ನು ಬೆರಸಬಹುದು. ಆಗ ಆ ನೀರು ಆ ರುಚಿ ಇರುವುದಾಗಿಯೋ ಅಥವಾ ಬಣ್ಣವಿರುವುದಾಗಿಯೋ ತೋರಬಹುದು. ಅದರಂತೆಯೇ ಭಗವಂತನು ವಾಸ್ತವವಾಗಿ-

ಅಶಬ್ದಂ ಅಸ್ಪರ್ಶಂ ಅರೂಪಂ ಅವ್ಯಯಂ
ತಥಾರಸಂ ನಿತ್ಯಂ ಅಗಂಧವಚ್ಚ ಯತ್

ಅದು ಶಬ್ದ, ರೂಪ, ಸ್ಪರ್ಶ, ಯಾವುದೂ ಇಲ್ಲದು ಅದು ನಾಶವಾಗುವುದೂ ಇಲ್ಲ. ಎಂದು ಹೇಳಲಾಗಿರುವಂತೆ, ಶಬ್ದ ಮುಂತಾದವುಗಳಿಲ್ಲದೆ ಇದೆ.

ಆಕಾಶವತ್ ಸರ್ವಗತಶ್ಚ ನಿತ್ಯಃ

ಎಂದು ಹೇಳಿರುವಂತೆ, ಭಗವಂತನು ಆಕಾಶದಂತೆ ಎಲ್ಲೆಲ್ಲೂ ವ್ಯಾಪಿಸಿ ಕೊಂಡಿದ್ದಾನೆ ಅವನಿಗೆ ನಾಶವಿಲ್ಲ.

ಹೀಗೆ ನಾವು ಹೇಳಿದಾಗ ಕೆಲವರು–"ನೀವು ಕಲ್ಲನ್ನು ಏಕೆ ಪೂಜಿಸುತ್ತೀರಿ ? ಭಗವಂತನು ಎಲ್ಲೆಲ್ಲೂ ಇರುವವನಲ್ಲವೇ ? ಅವನು ಎಲ್ಲೆಲ್ಲಿಯೂ ಪ್ರಕಾಶಿಸುತ್ತಿದ್ದಾನೆ ಎಂದಾದರೆ, ಅವನು ಕಲ್ಲಿನಲ್ಲಿ ಮಾತ್ರ ಏಕೆ ಕುಳಿತಿದ್ದಾನೆ ? ಕಲ್ಲನ್ನು ಪೂಜೆ ಮಾಡುವುದಾದರೆ, ಅದಕ್ಕಿಂತ ದೊಡ್ಡದಾದ ಬೆಟ್ಟವನ್ನೇ ಪೂಜಿಸಬಹುದಲ್ಲ ? ' ಎಂದು ತಮ್ಮ ಆಕ್ಷೇಪಣೆಯನ್ನು ಸೂಚಿಸಿ ಸಗುಣ ಆರಾಧನೆಯನ್ನು ನಿಂದಿಸುತ್ತಾರೆ. ಈ ರೀತಿಯಾದ ಸಗುಣ ಆರಾಧನೆಯೇ ಶ್ರೇಷ್ಠ ಎಂದು ನಾವೂ ಹೇಳುತ್ತಿಲ್ಲ. ಹಲವರಿಗೆ ನಿರ್ಗುಣವೂ ನಿರಾಕಾರವೂ ಆದ ಪರವಸ್ತುವಿನ ವಿಷಯದಲ್ಲಿ ಮನಸ್ಸು ಹೋಗುವುದಿಲ್ಲ. ಅವರಿಗೆ ರೂಪವಿಲ್ಲದ ಭಗವಂತನಿಲ್ಲ. ಹಾಗೆ ಭಗವದಾರಾಧನೆಯನ್ನು ಮಾಡಬಾರದು ಎಂದರೆ ಅವರು ಏನು ತಾನೇ ಮಾಡಿಯಾರು ?

"ನಿರ್ಗುಣ ನಮಗೆ ಎಟುಕತಕ್ಕದ್ದಲ್ಲ. ಸಗುಣವನ್ನೋ ನೀವು ಆರಾಧಿಸಕೂಡದೆನ್ನುತ್ತೀರಿ." ಇಂಥ ಪರಿಸ್ಥಿತಿಯಲ್ಲಿ ಅವರಿಗೆ ಇಲ್ಲೂ ಇಲ್ಲ. ಅಲ್ಲೂ ಇಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬಂತಾಗುತ್ತದೆ. ಹಾಗೆ ಮಾಡುವುದು ಸರಿಯೇ ? ಸರಿಯಲ್ಲ. ಆದ್ದರಿಂದಲೇ ಮಧುಸೂದನ ಸರಸ್ವತಿಗಳು ಒಂದೆಡೆ ಹೀಗೆ ಹೇಳಿದ್ದಾರೆ–

ಧ್ಯಾನಾಭ್ಯಾಸವಶೀಕೃತೇನ ಮನಸಾ ತನ್ನಿರ್ಗುಣಂ ನಿಷ್ಕ್ರಿಯಂ।
ಜ್ಯೋತಿಃ ಕಿಂಚನಯೋಗಿನೋ ಯದಿ ಪರಂ ಪಶ್ಯಂತಿ ಪಶ್ಯಂತು ತೇ
ಅಸ್ಮಾಕಂ ತು ತದೇವಲೋಚನ ಚಮತ್ಕಾರಾಯ ಭೂಯಾಚ್ಚಿರಂ
ಕಾಲಿಂದೀಪುಲಿನೋದರೇ ಕಿಮಪಿಯನ್ನೀಲಂ ಮಹೋಧಾವತಿ ॥

ಪ್ರಾಣಾಯಾಮ, ಪ್ರತ್ಯಾಹಾರ, ಧಾರಣ, ಧ್ಯಾನ, ಸಮಾಧಿ ಮುಂತಾದುವನ್ನು ಚೆನ್ನಾಗಿ ಅಭ್ಯಾಸಮಾಡಿರುವವರು ನಿರ್ಗುಣ, ನಿಷ್ಕ್ರಿಯವಾದ ಜ್ಯೋತಿಯನ್ನು ಕಂಡರೆ ಕಾಣಲಿ ನಾವು ಅದರಲ್ಲಿ ಕೊರತೆಯನ್ನು ಕಾಣುವುದಿಲ್ಲ. ಹಾಗೆ ಮನಸ್ಸನ್ನು ನಿಲ್ಲಿಸಲಾಗದಿದ್ದರೆ, ಯಮುನಾ ತೀರದಲ್ಲಿ ಓಡಾಡುವ ನೀಲವಾದ ತೇಜಸ್ಸು ನಮ್ಮ ಮನಸ್ಸಿನಲ್ಲಿ ನಿಲ್ಲಲಿ". ಅಂದರೆ, ಮನಸ್ಸನ್ನು ನಿರ್ಗುಣ ವಸ್ತುವಿನಲ್ಲಿ ನಿಲ್ಲಿಸಲಾಗದಿದ್ದರೆ, ಸಗುಣ ರೂಪದಲ್ಲಿ ಅದನ್ನು ಧ್ಯಾನಮಾಡಬಹುದು.

ಮಧುಸೂದನ ಸರಸ್ವತಿಗಳಿಗೆ ನಿರ್ಗುಣೋಪಾಸನೆ ತಿಳಿಯದ್ದೇನಲ್ಲ. ಅವರಿಗೆ ನಿರ್ಗುಣದಲ್ಲಿ ಒಲವಿಲ್ಲ ಎಂಬುದೂ ಇಲ್ಲ. ಅವರು ಶ್ರೇಷ್ಠ ಅದ್ವೈತಿಯೇ. ಆದರೂ ಅವರು ಸಗುಣೋಪಾಸನೆಯನ್ನು ಕೊಂಡಾಡಿದ್ದಾರೆ. ಜನರ ಸೌಕರ್ಯವನ್ನು ಮನಸ್ಸಿನಲ್ಲಿಟ್ಟುಕೊಂಡು ಮಾತ್ರ ಅವರು ಹೀಗೆ ಹೇಳಲಿಲ್ಲ. ಭಾಗವತದಲ್ಲಿ ಇದಕ್ಕೆ ಕಾರಣಗಳನ್ನು ಹೇಳಿದ್ದಾರೆ–

ಆತ್ಮಾರಾಮಾಶ್ಚ ಮುನಯೋ ನಿರ್ಗ್ರಂಥಾಪ್ಯುರುಕ್ರಮೇ
ಕುರ್ವಂತ್ಯಹೈತುಕೀಂ ಭಕ್ತಿಮಿತ್ಥಂ ಭೂತಗುಣೋ ಹರಿಃ ॥

(ಆತ್ಮಾರಾಮರಾಗಿರುವ ಬಂಧಮುಕ್ತರಾದ ಮುನಿಗಳು ಯಾವ ಕಾರಣವೂ ಇಲ್ಲದೆ ಭಗವಂತನಲ್ಲಿ ಭಕ್ತಿತೋರಿಸುತ್ತಾರೆ. ಇದೇ ಭಗವಂತನ ಗುಣಗಳ ಮಹಿಮೆ)

ಆತ್ಮಾರಾಮರೆಂದರೆ, ಆತ್ಮದಲ್ಲಿಯೇ ನೆಲೆನಿಂತವರು. ಆತ್ಮನೆಂಬುದು ಶರೀರವಲ್ಲ, ಪರವಸ್ತುವಿನಲ್ಲಿಯೇ ಮನಸ್ಸಿಟ್ಟು ಅದರಲ್ಲೇ ಲೀನವಾಗಿ ಹೋಗಿರುವವರೇ ಆತ್ಮಾರಾಮರು. ಅಂಥವರೂ ಸಹ ಭಗವಂತನಲ್ಲಿ ಭಕ್ತಿ ತೋರಿಸುತ್ತಾರೆ. ಏಕೆಂದರೆ ಅಂತಹ ಶ್ರೇಷ್ಠವಾದ ಗುಣಗಳು ಭಗವಂತನಲ್ಲಿವೆ.

ಹಲವರು "ನಾನೇ ಭಗವಂತ"–ಎಂದು ಹೇಳಿಕೊಳ್ಳುತ್ತಾರೆ. ಆತ್ಮಾರಾಮರಾದವರು ಅಂಥವರಲ್ಲ. ಅವರು ಆತ್ಮಸಾಕ್ಷಾತ್ಕಾರವನ್ನು ಪಡೆದಿರುವವರು, ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಥವರೆಂದು ಮೇಲೆ ಹೇಳಿದ ಶ್ಲೋಕದಲ್ಲಿ ವಿವರಿಸಲಾಗಿದೆ. ಅವರಿಗೆ ಅವಿದ್ಯೆಯೆಂಬ ಬಂಧವಿಲ್ಲ. ಅವರು ಶಾಸ್ತ್ರಾಧ್ಯಯನವನ್ನು ಮುಗಿಸಿ, ಅನುಭವ ಉಂಟಾದ್ದರಿಂದ ಎಲ್ಲವನ್ನೂ ತ್ಯಜಿಸಿರುವವರು.

ಪಲಾಲಮಿವ ಧಾನ್ಯಾರ್ಥೀ ತ್ಯಜೇತ್ ಗ್ರಂಥಮಶೇಷತಃ ।

(ಹೇಗೆ ಧಾನ್ಯವನ್ನು ಬಯಸುವವನು ಹೊಟ್ಟನ್ನು ಬಿಡುತ್ತಾನೋ, ಹಾಗೆಯೇ ಒಬ್ಬನು ಯಾವುದನ್ನೂ ಇಟ್ಟುಕೊಳ್ಳದೆ ಎಲ್ಲ ಗ್ರಂಥಗಳನ್ನೂ ಬಿಡಬೇಕು)–

ಎಂದು ಹೇಳಿರುವಂತೆ, ಆತ್ಮಾರಾಮರಾದವರು ಎಲ್ಲ ಗ್ರಂಥಗಳನ್ನು ಬಿಡುತ್ತಾರೆ. ಪುಸ್ತಕಗಳನ್ನೇ ಓದುತ್ತಿದ್ದರೆ ಅದಕ್ಕೆ ಕೊನೆಯೆಂದು ?

ಭಕ್ತಿಗೆ ಅರ್ಹ

ಭಕ್ತಿಯ ಮಾರ್ಗದಲ್ಲಿ ನಡೆಯಬೇಕಾದರೆ ಯಾವುದಾದರೂ ವಿಶಿಷ್ಟ ಅರ್ಹತೆ ಬೇಕೆ ? ಇದು ಸಾಮಾನ್ಯವಾಗಿ ಕೇಳಲಾಗುವ ಪ್ರಶ್ನೆ. ಪ್ರಸಿದ್ಧ ಶ್ಲೋಕವೊಂದು ಪ್ರತಿ ಪ್ರಶ್ನೆಯ ಮೂಲಕ ಇದಕ್ಕೆ ಉತ್ತರವನ್ನು ಹೇಳುತ್ತದೆ.

ಅದು ಹೀಗೆ ಪ್ರಾರಂಭವಾಗುತ್ತದೆ–'ಧರ್ಮವ್ಯಾಧನ ವೃತ್ತಿ ಏನು ?'– ಎಂದು. ಧರ್ಮವ್ಯಾಧನು ಒಬ್ಬ ಪ್ರಾಣಿಗಳನ್ನು ಸಾಯಿಸುವವನು. ಅವನು ಕೆಲಸವನ್ನು ಯಾವ ಆಸಕ್ತಿಯೂ ಇಲ್ಲದೆ ನಡೆಸುತ್ತಿದ್ದನು ಮತ್ತು ತನ್ನ ಮಾತಾ ಪಿತೃಗಳನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಸೇವಿಸುತ್ತಿದ್ದನು. ಇದರ ಫಲವಾಗಿ ಅವನು ಪ್ರಸಿದ್ಧ ಧರ್ಮಪ್ರತಿಪಾದಕನೆಂಬುದಾಗಿ ಹೆಸರು ಪಡೆದಿದ್ದನು. ಮಹಾ ಭಾರತವು ಇವನಿಗೆ ಸಂಬಂಧಿಸಿದ ಕಥೆಯೊಂದನ್ನು ತಿಳಿಸುತ್ತದೆ. ಬ್ರಹ್ಮಚಾರಿ ಯೋರ್ವನು ತನ್ನ ವಿದ್ಯೆ ಮತ್ತು ತಪಸ್ಸಿನ ಫಲವಾಗಿ ಕೆಲವು ಸಿದ್ಧಿಗಳನ್ನು ಹೊಂದಿದನು. ಹಕ್ಕಿಯೊಂದು ಅವನ ತಲೆಯ ಮೇಲೆ ಉಚ್ಛಿಷ್ಟವನ್ನು ಹಾಕಿತು. ಕೋಪೋದ್ರಿಕ್ತನಾದ ಬ್ರಹ್ಮಚಾರಿಯು ಆ ಹಕ್ಕಿಯನ್ನು ನೋಡಿದ ಕೂಡಲೇ, ಅದು ಬೂದಿಯಾಯಿತು. ಆ ಕ್ಷಣದಲ್ಲಿ ಅಭಿವ್ಯಕ್ತವಾದ ತನ್ನ ಅಲೌಕಿಕವಾದ ಶಕ್ತಿಯಿಂದ ಗರ್ವಿತನಾದ ಆ ಬ್ರಹ್ಮಚಾರಿಯು, ಭಿಕ್ಷೆಗಾಗಿ ಮುಂದುವರೆದನು. ಅವನು ಒಂದು ಮನೆಗೆ ಹೋಗಿ ಭಿಕ್ಷೆಯನ್ನು ಯಾಚಿಸಿದನು. ಆ ಮನೆಯ ಗೃಹಿಣಿಯು, ತನ್ನ ಪತಿಯನ್ನು ಸೇವೆಮಾಡುತ್ತಿರುವುದರಿಂದ ಸ್ವಲ್ಪ ನಿಲ್ಲುವಂತೆ ಅವನಿಗೆ ಹೇಳಿದಳು. ಇದು ಆ ಬ್ರಹ್ಮಚಾರಿಯು ಕೋಪಿಷ್ಠನಾಗುವಂತೆ ಮಾಡಿತು. ಆದರೆ ಆ ಗೃಹಿಣಿಯು ಶಾಂತವಾಗಿ ಉತ್ತರಿಸಿದಳು — 'ನನ್ನನ್ನು ಸುಡಲು ನಾನು ಪಕ್ಷಿಯಲ್ಲ.'

Sri Vidyabharathi Book Centre, Sringeri

CC-O. In Public Domain. Digitized by eGangotri

ಪ್ರಸಂಗವು ಈಕೆಗೆ ತಿಳಿದಿದೆಯೆಂಬುದನ್ನು ತಿಳಿದು ಅವನು ಅಪ್ರತಿಭನಾದನು. ವಿನೀತನಾಗಿ ಅವಳ ಮಾರ್ಗದರ್ಶನವನ್ನು ಕೇಳಿದನು. ಅವಳು ಅವನನ್ನು ಧರ್ಮವ್ಯಾಧನ ಸಮೀಪಕ್ಕೆ ಕಳುಹಿಸಿದಳು. ಧರ್ಮವ್ಯಾಧನು ಅವನಿಗೆ ಮಾತಾಪಿತೃಗಳ ಸೇವೆಯ ವಿಷಯದಲ್ಲಿ ದೀರ್ಘವಾದ ಉಪದೇಶವನ್ನು ಕೊಟ್ಟನು. ಆ ಉಪದೇಶವು ಅತ್ಯಂತ ಉಚಿತವಾಗಿದ್ದಿತು. ಏಕೆಂದರೆ ಬ್ರಹ್ಮಚಾರಿಯು ತನ್ನ ತಾಯಿತಂದೆಯರ ಸೇವೆಯನ್ನು ಸಂಪೂರ್ಣವಾಗಿ ಕಡೆಗಣಿಸಿದ್ದ. ಅನೇಕರು ಧರ್ಮವ್ಯಾಧನ ವೃತ್ತಿಯನ್ನು ಅತ್ಯಂತ ಕೀಳಾಗಿ ಕಂಡಿದ್ದರೂ ಸಹ, ಧರ್ಮವ್ಯಾಧನು ಪರಮಾತ್ಮನಿಂದ ಬಹುವಾಗಿ ಅನುಗ್ರಹಿಸಲ್ಪಟ್ಟಿದ್ದ. ಆದುದರಿಂದ ಯಾವುದೇ ವೃತ್ತಿಯನ್ನು ಮಾಡುತ್ತಿರುವುದು ಭಕ್ತಿಯ ಮಾರ್ಗವನ್ನು ಅನುಸರಿಸುವುದಕ್ಕೆ ಬಾಧಕವಾಗುವುದಿಲ್ಲ.

ಮುಂದಿನ ಅಂಶ ವಯಸ್ಸು. ಭಕ್ತನಾಗಬೇಕಾದರೆ ಇಂತಿಷ್ಟೇ ವಯಸ್ಸಾಗಿರಬೇಕೆಂಬ ನಿಯಮವಿದೆಯೇ? ಶ್ಲೋಕವು ಉತ್ತರಿಸುತ್ತದೆ—ಧ್ರುವನ ವಯಸ್ಸೆಷ್ಟು? ಧ್ರುವನ ತಂದೆಯಾದ ಉತ್ತಾನಪಾದನಿಗೆ ಇಬ್ಬರು ಹೆಂಡತಿಯರು. ಮಲತಾಯಿಯಾದ ಸುರುಚಿಗೆ ಧ್ರುವನನ್ನು ಕಂಡರೆ ಆಗುತ್ತಿರಲಿಲ್ಲ. ಒಮ್ಮೆ ಅವನು ತಂದೆಯ ತೊಡೆಯ ಮೇಲೆ ಕೂರಲು ಹೋದಾಗ, ಸುರುಚಿಯು ತನ್ನ ಮಗನನ್ನು ಉತ್ತಾನಪಾದನು ಲಾಲಿಸಬೇಕೆಂಬ ಅಪೇಕ್ಷೆಯಿಂದ ಧ್ರುವನನ್ನು ತಳ್ಳಿದಳು. ಅಳುತ್ತಲಿದ್ದ ಆ ಬಾಲಕನು ತನ್ನ ತಾಯಿಯ ಹತ್ತಿರಕ್ಕೆ ಹೋದ. ಆದರೆ ದುರದೃಷ್ಟದಿಂದ ತಾಯಿಯು ಅವನಿಗೆ ಸಹಾಯಮಾಡಲಾಗಲಿಲ್ಲ. ಪರಮಾತ್ಮನನ್ನು ಕುರಿತು ಪ್ರಾರ್ಥಿಸುವಂತೆ ತಾಯಿಯು ಅವನಿಗೆ ಹೇಳಿದಳು. ಮನಸ್ಸಿನಲ್ಲಿ ದೃಢವಾದ ನಿಶ್ಚಯಮಾಡಿಕೊಂಡು ಅವನು ಕಾಡಿಗೆ ಹೋದನು. ನಾರದ ಮಹರ್ಷಿಗಳು ಬಾಲಕನನ್ನು ನೋಡಿ, ಅತ್ಯಂತ ಹರ್ಷಚಿತ್ತರಾಗಿ, ಪರಮಾತ್ಮನಾದ ನಾರಾಯಣನ ಪೂಜಾವಿಧಾನವನ್ನು ಅವನಿಗೆ ಉಪದೇಶಿಸಿದರು. ಧ್ರುವನು ಸಮಾಧಿಮಗ್ನನಾಗಿ ಕುಳಿತನು. ಅವನ ಪ್ರೀತಿಯಿಂದ ಸಂತೃಪ್ತನಾದ ಪರಮಾತ್ಮನು, ಅವನ ಮುಂದೆ ಆವಿರ್ಭವಿಸಿ, ಧ್ರುವನು ತಂದೆಯ ಪ್ರೀತಿಯನ್ನು ಗಳಿಸುವುದು ಮಾತ್ರವಲ್ಲದೆ, ತಂದೆಯ ನಂತರ ಪ್ರಸಿದ್ಧರಾಜನಾಗುತ್ತಾನೆಂದೂ, ಆನಂತರ ಆಕಾಶದಲ್ಲಿ ಧ್ರುವನಕ್ಷತ್ರದ ರೂಪದಲ್ಲಿ ಸದಾಕಾಲ ಸ್ಥಿರನಾಗಿರುತ್ತಾನೆಂದೂ ವರವಿತ್ತನು. ಧ್ರುವನಂತಹ ಸಣ್ಣ ಬಾಲಕನೂ ಸಹ ಅಚಲವಾದ ಭಕ್ತಿಯನ್ನು ಹೊಂದಬಹುದು ಮತ್ತು ಪರಮಾತ್ಮನ ಅನುಗ್ರಹವನ್ನು ಹೊಂದಬಹುದು ಎಂಬುದನ್ನು ಈ ಆಖ್ಯಾಯಿಕೆ ತೋರಿಸುತ್ತದೆ. ಆದ್ದರಿಂದ ವಯಸ್ಸು ಯಾವ ತಡೆಯಾಗಲಾರದು.

Sri Vidyabharathi Book Centre, Sringeri

CC-O. In Public Domain. Digitized by eGangotri

ವಿದ್ಯಾಸಂಪನ್ನನಾಗಿರುವುದು ಅವಶ್ಯವೇ ? ಶ್ಲೋಕವು ಉತ್ತರಿಸುತ್ತದೆ— "ಗಜೇಂದ್ರನಿಗೆ ಎಂತಹ ವಿದ್ಯೆಯಿದ್ದಿತು ?" ಗಜೇಂದ್ರ ಒಂದು ಆನೆ, ತನ್ನ ಹೆಂಡತಿಯರೊಡನೆ ವಾಸಿಸುತ್ತಿತ್ತು. ಅದು ಪರಮಾತ್ಮನಲ್ಲಿ ಪರಮಭಕ್ತಿಯನ್ನು ಹೊಂದಿದ್ದಿತು. ಒಂದು ದಿನ ಮೊಸಳೆಯೊಂದು ಅದರ ಕಾಲನ್ನು ಹಿಡಿದು ಎಳೆಯತೊಡಗಿತು. ಒಂದು ದೊಡ್ಡ ಹೋರಾಟ ನಡೆಯಿತು; ಆದರೆ ನಿಧಾನವಾಗಿ ಮೊಸಳೆಯದೇ ಮೇಲುಗೈಯಾಯಿತು. ಜೀವದ ಬಗ್ಗೆ ಭಯಹೊಂದಿದ ಗಜೇಂದ್ರ, ತನ್ನ ರಕ್ಷಣೆಗಾಗಿ, ಪರಮಾತ್ಮನನ್ನು ಕೂಗಿತು. ಮಹಾವಿಷ್ಣುವು ಸ್ಥಳಕ್ಕೆ ತಕ್ಷಣ ಓಡಿಬಂದು ಮೊಸಳೆಯನ್ನು ಸಂಹರಿಸಿ, ಗಜೇಂದ್ರನನ್ನು ರಕ್ಷಿಸಿದನು. ಯಾವ ವಿದ್ಯೆಯನ್ನು ಹೊಂದಿರದ ಆನೆಯಾದ ಗಜೇಂದ್ರನು ಪರಮಾತ್ಮನ ಅನುಗ್ರಹವನ್ನು ಹೊಂದಲು ಸಮರ್ಥವಾಯಿತು. ಆದ್ದರಿಂದ ವಿದ್ಯೆ ಇಲ್ಲದಿರುವಿಕೆಯೂ ಭಕ್ತಿಗೆ ತಡೆಯಲ್ಲ.

ಹಾಗಾದರೆ ಉನ್ನತವಾದ ಜಾತಿಯೇ ? ಪರಮಾತ್ಮನ ಅನುಗ್ರಹವನ್ನು ಹೊಂದಲು ಬ್ರಾಹ್ಮಣನಾಗಿರುವುದು ಅವಶ್ಯವೇ ? ಶ್ಲೋಕ ಉತ್ತರಿಸುತ್ತದೆ— "ವಿದುರನ ಜಾತಿ ಯಾವುದು ?" ವಿದುರ ಒಬ್ಬ ದಾಸಿಯ ಮಗ. ಆದ್ದರಿಂದ ಉನ್ನತ ಜಾತಿಯವನಲ್ಲ. ಶ್ರೀ ಕೃಷ್ಣನು ಹಸ್ತಿನಾಪುರಕ್ಕೆ ಪಾಂಡವರ ದೂತನಾಗಿ ಬಂದಾಗ, ಕೌರವರ ಅರಮನೆಯಲ್ಲಿ ಇಳಿದುಕೊಳ್ಳಲು ಅಪೇಕ್ಷಿಸದೆ, ವಿದುರನ ಮನೆಯಲ್ಲಿ ಇಳಿದುಕೊಂಡನು. ಕೀಳುಜಾತಿಯೂ ಭಕ್ತಿಮಾರ್ಗಕ್ಕೆ ಬಾಧಕವಲ್ಲವೆಂಬುದನ್ನು ಇದು ತೋರಿಸುತ್ತದೆ.

ವೃತ್ತಿ, ವಯಸ್ಸು, ವಿದ್ಯೆ, ಮತ್ತು ಜಾತಿ ಕಾರಣವಾಗದಿರಬಹುದು. ಆದರೆ ಪೌರುಷವು ಕಾರಣವೇ ? ಶ್ಲೋಕ ಹೇಳುತ್ತದೆ —"ಉಗ್ರಸೇನನ ಪೌರುಷವೆಂತಹುದು ?" ಉಗ್ರಸೇನನು ಕಂಸನ ತಂದೆ. ರಾಕ್ಷಸನಾದ ಕಂಸನು ತನ್ನ ತಂದೆಯನ್ನು ಬಂಧನದಲ್ಲಿರಿಸಿ, ಸಿಂಹಾಸನವನ್ನು ಆಕ್ರಮಿಸಿದನು. ಪರಮಾತ್ಮನಾದ ಶ್ರೀ ಕೃಷ್ಣನೇ ಕಂಸನ ಸೋದರಳಿಯ. ಅವರನ್ನು ಮಥುರೆಗೆ ಕರೆತಂದಾಗ, ಅವನು ಕಂಸನನ್ನು ಸಂಹರಿಸಿ, ಉಗ್ರಸೇನನಿಗೆ ಸಿಂಹಾಸನವನ್ನು ದೊರಕಿಸಿಕೊಟ್ಟನು. ಹೀಗೆ, ಪೌರುಷವಿಲ್ಲದವನನ್ನು ಪರಮಾತ್ಮನು ಅನುಗ್ರಹಿಸಿದನು.

ಹಾಗಾದರೆ, ಪರಮಾತ್ಮನ ಗಮನವನ್ನು ಆಕರ್ಷಿಸುವ ಸೌಂದರ್ಯ ಕಾರಣವೇ ? "ಕುಬ್ಜೆಯು ಸುಂದರಿಯೇ ?"—ಎಂಬುದು ಮರುಪ್ರಶ್ನೆ. ಕೃಷ್ಣನು ಮಥುರೆಗೆ ಹೊರಟಾಗ, ಗೂನುಬೆನ್ನುಳ್ಳ, ಕುರೂಪಿಯಾದ ಹೆಂಗಸೊಬ್ಬಳು, ಅವನಿಗೆ [illegible] ಕೊಟ್ಟಳು. ಪರಮಾತ್ಮನು ಸಂತೋಷ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೊಂಡು ಅವಳನ್ನು ಅನುಗ್ರಹಿಸಿದನು. ಆದ್ದರಿಂದ ಸೌಂದರ್ಯವಿಲ್ಲದಿರುವುದು ಈಶ್ವರನ ಅನುಗ್ರಹವನ್ನು ಹೊಂದುವುದಕ್ಕೆ ತಡೆಯಾಗಲಾರದು.

ಸಾಮಾನ್ಯವಾಗಿ ಜನರು ಶ್ರೀಮಂತಿಕೆಯಿಂದ ತೃಪ್ತಿಪಡುತ್ತಾರೆ. ಪರಮಾತ್ಮನೂ ಕೂಡ ಹಾಗೆಯೇ ? "ಸುದಾಮನಲ್ಲಿ ಶ್ರೀಮಂತಿಕೆ ಇದ್ದಿತೆ?" ಎಂಬುದು ಪ್ರತಿಪ್ರಶ್ನೆ. ಸುದಾಮನು ಕೃಷ್ಣನ ಬಾಲ್ಯ ಸ್ನೇಹಿತ. ಇಬ್ಬರೂ ಒಟ್ಟಿಗೆ ಓದಿದವರು ಮತ್ತು ನಂತರ ಬೇರೆಯಾದವರು. ಕೃಷ್ಣ ರಾಜಕುಮಾರನಾದ ಮತ್ತು ಸುದಾಮ ನಿಷ್ಕಾಮಂತ ಬ್ರಾಹ್ಮಣಗೃಹಸ್ಥನಾದ. ಸುದಾಮನು ತನ್ನ ದಾರಿದ್ರ್ಯದಿಂದ ಬಹು ಕಷ್ಟಗಳನ್ನು ಅನುಭವಿಸಿದ. ಆದರೆ, ಅವೆಲ್ಲವನ್ನೂ ಅತ್ಯಂತ ಸ್ಥೈರ್ಯದಿಂದ ಎದುರಿಸಿದ. ದಾರಿದ್ರ್ಯದ ಸಮಸ್ಯೆಗಳನ್ನು ಎದುರಿಸಲು ಅಶಕ್ತಳಾದ ಸುದಾಮನ ಪತ್ನಿಯು, ಸ್ನೇಹಿತನಾದ ಶ್ರೀಕೃಷ್ಣನನ್ನು ಕಂಡುಬರುವಂತೆ ಗಂಡನನ್ನು ಪ್ರೇರೇಪಿಸಿದಳು. ತನ್ನ ಅತ್ಯಂತ ಪ್ರಿಯನಾದ ಸ್ನೇಹಿತನನ್ನು ನೋಡಬೇಕೆಂಬ ಯೋಚನೆಯಿಂದ ಪರಮ ಹರ್ಷಿತನಾದ ಅವನು ಸಮ್ಮತಿಸಿದನು. ಅವನ ಹೆಂಡತಿಯು ಕೃಷ್ಣನಿಗೆ ಕೊಡುವುದಕ್ಕಾಗಿ ಸ್ವಲ್ಪ ಅವಲಕ್ಕಿಯನ್ನು ಕೊಟ್ಟಳು, ಏಕೆಂದರೆ ಕೃಷ್ಣನಿಗೆ ಅದನ್ನು ಕಂಡರೆ ಆಸೆ. ಸುದಾಮನು ಹೋಗಿ ಕೃಷ್ಣನನ್ನು ಭೇಟಿ ಮಾಡುತ್ತಾನೆ. ಕೃಷ್ಣನು ಅವನನ್ನು ಸಕಲ ಮರ್ಯಾದೆಗಳೊಡನೆ ಸ್ವಾಗತಿಸುತ್ತಾನೆ. ಆದರೆ, ಅವನು ತಂದಿರುವ ಅವಲಕ್ಕಿಯನ್ನು ಕೃಷ್ಣನಿಗೆ ಕೊಡುವುದಕ್ಕೆ ಅವನಿಗೆ ನಾಚಿಕೆಯಾಗುತ್ತದೆ. ಆದರೆ ಶ್ರೀ ಕೃಷ್ಣನು ಅದನ್ನು ತಕ್ಷಣ ಗ್ರಹಿಸಿ, ಅದನ್ನು ಕೇಳುತ್ತಾನೆ. ಶ್ರೀ ಕೃಷ್ಣನು ಅದನ್ನು ತಿನ್ನಲುಪಕ್ರಮಿಸುತ್ತಾನೆ. ಸ್ವಲ್ಪ ಸಮಯದ ನಂತರ, ಲಕ್ಷ್ಮಿಯ ಅವತಾರಳಾದ ಹಾಗೂ ಪತ್ನಿಯಾದ ರುಕ್ಮಿಣಿಯು, ಕೃಷ್ಣನು ಸಾಕಷ್ಟು ತಿಂದಿದ್ದಾನೆಂದು ಭಾವಿಸಿ, ಮತ್ತೆ ತಿನ್ನುವುದರಿಂದ ಅವನನ್ನು ತಡೆದಳು. ಸುದಾಮನು ಹಿಂದಿರುಗಿದಾಗ, ತನ್ನ ಮುರುಕಲು ಮನೆಯ ಜಾಗದಲ್ಲಿ ದೊಡ್ಡದಾದ ಅರಮನೆಯಂತಹ ಭವನವಿರುವುದನ್ನು ನೋಡುತ್ತಾನೆ. ಅವನ ಹೆಂಡತಿ ಮತ್ತು ಮಕ್ಕಳು ಬಹು ಬೆಲೆ ಬಾಳುವ ವಸ್ತುಗಳನ್ನು ಧರಿಸಿರುತ್ತಾರೆ. ತಾನು ಪರಮಾತ್ಮನಾದ ಶ್ರೀ ಕೃಷ್ಣನಿಗೆ ಅರ್ಪಿಸಿದ್ದು ಅವನಿಗೆ ತೃಪ್ತಿಯನ್ನುಂಟು ಮಾಡಿದೆ. ಹಾಗೂ ಅವನು ತನಗೆ ಅಪರಿಮಿತವಾದ ಐಶ್ವರ್ಯವನ್ನು ಅನುಗ್ರಹಿಸಿದ್ದಾನೆ ಎಂಬುದನ್ನು ಸುದಾಮನು ತಿಳಿದುಕೊಂಡನು. ಪರಮಾತ್ಮನು ಶ್ರೀಮಂತಿಕೆ ಮುಂತಾದ ಅಂಶಗಳನ್ನು ಕಡೆಗಣಿಸುತ್ತಾನೆ ಎಂಬುದನ್ನು ಇದು ತೋರಿಸುತ್ತದೆ.

ಹಾಗಾದರೆ, ಅವನು ಯಾವುದನ್ನು ಪರಿಗಣಿಸುತ್ತಾನೆ ? ಅವನು ಕೇವಲ ಭಕ್ತಿಯನ್ನು ಮಾತ್ರ ಗಣನೆಗೆ ತೆಗೆದುಕೊಳ್ಳುತ್ತಾನೆ. ಭಕ್ತಿಯಿದ್ದೆಡೆ ಅವನು ಸಂತೋಷ ಹೊಂದುತ್ತಾನೆ. ಆದ್ದರಿಂದ, ಭಕ್ತಿಮಾರ್ಗವನ್ನು ಅನುಸರಿಸುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವ ವಿಶಿಷ್ಟವಾದ ಅಧಿಕಾರವೂ ಬೇಕಾಗಿಲ್ಲ. ಪರಮಾತ್ಮನ ವಿಷಯಕವಾದ ಪ್ರೀತಿಯ ವಿಶೇಷಗುಣವೆಂದರೆ, ಭಕ್ತಿಮಾರ್ಗವನ್ನು ಸಾಧನೆಮಾಡುತ್ತಿರುವಾಗಲೂ ಸಂತೋಷದಿಂದಿರುತ್ತಾನೆ. ಇತರ ಮಾರ್ಗಗಳಲ್ಲಿ, ಸಾಧಕನು ಒಂದು ಮಟ್ಟದ ವರೆಗೆ ಪ್ರಗತಿಯನ್ನು ಹೊಂದಿದಾಗ ಮಾತ್ರವೇ ತನ್ನ ಸಾಧನೆಯ ಫಲವನ್ನು ಹೊಂದುತ್ತಾನೆ.

ಸತ್ತ್ವ ಶುದ್ಧಿ

"ಆಹಾರ ಶುದ್ಧೌ ಸತ್ತ್ವ ಶುದ್ಧಿಃ" –ಎಂಬ ಮಾತೊಂದಿದೆ. ಇದನ್ನು ಹೀಗೆ ವಿವರಿಸಬಹುದು.

ಒಬ್ಬ ಯೋಗಿಯು ಸಣ್ಣ ಆಶ್ರಮವೊಂದರಲ್ಲಿ ವಾಸಮಾಡುತ್ತಿದ್ದ. ಪ್ರತಿ ನಿತ್ಯವು ಅವನು ಭಿಕ್ಷೆ ಎತ್ತಿ, ಅದನ್ನು ಊಟಮಾಡುತ್ತಿದ್ದ. ಈ ರೀತಿ ಅವನು ಪ್ರಶಾಂತವಾದ ಜೀವನವನ್ನು ನಡೆಸುತ್ತಿದ್ದ. ಆ ದೇಶದ ರಾಜನಿಗೆ ಈ ಯೋಗಿಯ ವಿಷಯದಲ್ಲಿ ಅಪಾರವಾದ ಗೌರವವಿದ್ದಿತು. ಒಂದು ದಿನ ಆ ರಾಜನು ಯೋಗಿಯನ್ನು ಭೋಜನಕ್ಕಾಗಿ ತನ್ನ ಅರಮನೆಗೆ ಆಹ್ವಾನಿಸಿದನು. ಆಗ ಆ ಸಂನ್ಯಾಸಿಯು "ರಾಜ, ನಾನು ಭಿಕ್ಷೆ ಮಾಡುವುದರಿಂದ ಸಿಕ್ಕಿದ ಆಹಾರವನ್ನು ಮಾತ್ರ ತಿನ್ನುತ್ತಲಿದ್ದೇನೆ. ಒಂದು ವೇಳೆ ನಿನ್ನ ಅರಮನೆಗೆ ಬಂದು ನಾನು ಊಟಮಾಡಿದರೆ, ಅದು ನನ್ನ ಮನಸ್ಸಿನ ಮೇಲೆ ಯಾವ ಪರಿಣಾಮ ಬೀರುತ್ತದೆ ಎಂದು ನನಗೆ ಗೊತ್ತಿಲ್ಲ. ಆದ್ದರಿಂದ ನಿನ್ನ ಆಹ್ವಾನವನ್ನು ಮನ್ನಿಸದಿರುವುದೇ ಒಳ್ಳೆಯದೆಂದು ತೋರುತ್ತದೆ" ಎಂದು ಹೇಳಿದನು. ಆದರೂ, ರಾಜನ ಒತ್ತಾಯ ಪೂರ್ವಕವಾದ ಆಹ್ವಾನಕ್ಕೆ ಸಮ್ಮತಿಸಿದನು. ಭೋಜನದ ಅನಂತರ ಸಂನ್ಯಾಸಿಯು ತನ್ನ ಕೈಗಳನ್ನು ತೊಳೆದು ಕೊಳ್ಳುತ್ತಿದ್ದಾಗ, ಅವನ ದೃಷ್ಟಿಯು ಮುತ್ತಿನಹಾರದ ಮೇಲೆ ಬಿದ್ದಿತು. ಯಾರೂ ತನ್ನನ್ನು ನೋಡುತ್ತಿಲ್ಲವೆಂದು ಗಮನಿಸಿ, ಅದನ್ನು ತೆಗೆದುಕೊಂಡು, ತನ್ನ ಕಮಂಡಲುವಿನೊಳಕ್ಕೆ ಹಾಕಿಕೊಂಡನು. ನಂತರ ಅವನು ಸಭಾಂಗಣಕ್ಕೆ ಹೋಗಿ, ರಾಜನನ್ನು ಆಶೀರ್ವದಿಸಿ, ತನ್ನ ಆಶ್ರಮಕ್ಕೆ ಹಿಂದಿರುಗಿದನು. ಕೆಲವು ಸಮಯದ ನಂತರ, ತಾನು ಮಾಡಿದ ಕೆಲಸವನ್ನು ಕುರಿತು ವಿಚಾರಮಾಡಲು ಪ್ರಾರಂಭಿಸಿದನು.

ಇಷ್ಟರಲ್ಲಿ ಮಹಾರಾಣಿಯು ತಾನು ಸ್ನಾನ ಗೃಹದಲ್ಲಿಟ್ಟು ಬಂದಿದ್ದ ಮುತ್ತಿನ ಹಾರವು ಕಳುವಾಗಿರುವುದೆಂದು ರಾಜನಲ್ಲಿ ದೂರಿದಳು. ರಾಜನು ಪರಿಸ್ಥಿತಿಯನ್ನು ಗಮನಿಸಿ, ಸೇವಕರಲ್ಲಿ ಒಬ್ಬನು ಕದ್ದಿರಬೇಕೆಂಬ ತೀರ್ಮಾನಕ್ಕೆ ಬಂದನು. ಅವರಿಂದ ಸತ್ಯವನ್ನು ತಿಳಿಯುವುದಕ್ಕೆ ಅವರನ್ನು ಕ್ರೂರವಾಗಿ ಶಿಕ್ಷಿಸಿದನು. ಅವರೆಲ್ಲರೂ ತಾವು ನಿರಪರಾಧಿಗಳೆಂದು ಹೇಳುತ್ತಿದ್ದರು. ಅವರಲ್ಲಿ ಒಬ್ಬನು ಸಂನ್ಯಾಸಿಯೇ ಕಳ್ಳನಿರಬಹುದೆಂದು ಹೇಳಿದಾಗ, ರಾಜನು ಇನ್ನೂ ಕೋಪಗೊಂಡನು.

Sri Vidyabharathi Book Centre, Sringeri

CC-O. In Public Domain. Digitized by eGangotri

ಆಶ್ರಮದಲ್ಲಿ ಸಂನ್ಯಾಸಿಯು ಯೋಚನಾ ಮಗ್ನನಾಗಿದ್ದನು—"ಎಂತಹ ಕೆಟ್ಟ ಕೆಲಸವನ್ನು ನಾನು ಇಂದು ಮಾಡಿದೆ! ಯಾರಿಗೋಸ್ಕರ ನಾನು ಆ ಮುತ್ತಿನಹಾರವನ್ನು ಕದ್ದೆ? ಇದನ್ನು ನಾನು ಹಾಕಿಕೊಂಡು, ಭಿಕ್ಷೆ ಬೇಡುವುದಕ್ಕೆ ಹೋದರೆ ನಿಶ್ಚಯವಾಗಿ ಯಾರೂ ನನಗೆ ಭಿಕ್ಷೆಯನ್ನು ಹಾಕುವುದಿಲ್ಲ. ಒಂದು ವೇಳೆ ಇಲ್ಲೇ ಅದನ್ನು ನಾನು ಬಿಡುವುದಾದರೆ, ಯಾರಾದರೂ ಅದನ್ನು ಅಪಹರಿಸಬಹುದು. ನಾನು ಕದಿಯುವುದಕ್ಕೆ ಹೇಗೆ ತಾನೆ ಪ್ರವೃತ್ತನಾದೆ? ಇಂತಹ ಅನೇಕ ಮುತ್ತಿನ ಹಾರಗಳನ್ನು ನಾನು ನೋಡಿದ್ದೇನೆ, ಆದರೆ ಆಸೆಯಿಂದ ಯಾವತ್ತೂ ನಾನು ಪೀಡಿತನಾಗಲಿಲ್ಲ. ಇಂದು ನನ್ನ ಮನಸ್ಸಿನಲ್ಲಿ ಆಸೆಯೊಂದು ಉತ್ಪನ್ನವಾಗಿದೆಯೆಂದರೆ, ಅದು ನನ್ನ ಮನಸ್ಸಿನ ಅಶುದ್ಧತೆಯನ್ನು ಸೂಚಿಸುತ್ತದೆ. ಇದಕ್ಕೆ ಕಾರಣವೇನಿರಬಹುದು?" ಅಂದು ತಾನು ತೆಗೆದುಕೊಂಡ ಆಹಾರವು ಈ ಮಾನಸಿಕ ಪರಿವರ್ತನೆಗೆ ಕಾರಣವಾಗಿರಬಹುದೆಂದು ಅವನಿಗೆ ಹೊಳೆಯಿತು. ಅವನು ತನ್ನ ಹೊಟ್ಟೆಯಲ್ಲಿದ್ದುದೆಲ್ಲವನ್ನೂ ವಾಂತಿಮಾಡಿ, ನೇರವಾಗಿ ರಾಜನ ಸಮೀಪಕ್ಕೆ ಹೋದನು. ಅರಮನೆಯಲ್ಲಿನ ಕೋಲಾಹಲವನ್ನು ನೋಡಿ ಕಾರಣವೇನೆಂದು ಕೇಳಿದನು. ಯಾರೂ ಸಹ ಮುತ್ತಿನಹಾರ ಕದ್ದಿರುವುದನ್ನು ಒಪ್ಪಿಕೊಳ್ಳುತ್ತಿಲ್ಲವೆಂದು ರಾಜನು ತಿಳಿಸಿದನು. ಆಗ ಸಂನ್ಯಾಸಿಯು "ಹೇಗೆ ತಾನೆ ಈ ನಿರಪರಾಧಿಗಳು ಅಪರಾಧವನ್ನು ಒಪ್ಪಿಕೊಳ್ಳುತ್ತಾರೆ?"—"ಇಲ್ಲಿದೆ, ಈ ಮುತ್ತಿನ ಹಾರವನ್ನು ತೆಗೆದುಕೋ"—ಮುಂದುವರೆಸುತ್ತಾ ಪಶ್ಚಾತ್ತಾಪದಿಂದ ಕೂಡಿದ ಸಂನ್ಯಾಸಿಯು—"ಕಳ್ಳನಾದ ನಾನೇ ನಿನಗಾಗಿ ತಂದಿದ್ದೇನೆ" ಎಂದನು.

ಚಕಿತನಾದ ರಾಜನು ಸಂನ್ಯಾಸಿಯನ್ನು ಕೇಳಿದನು—"ನೀನು ಒಬ್ಬ ಶ್ರೇಷ್ಠ ಸಂನ್ಯಾಸಿ. ಮುತ್ತಿನಹಾರವನ್ನು ತೆಗೆದುಕೊಳ್ಳುವುದು ನಿನಗೆ ಯೋಗ್ಯವೇ? ಮತ್ತು, ಅದನ್ನು ನೀನು ಹಿಂದಿರುಗಿಸುವುದಕ್ಕೆ ಏನು ಕಾರಣ? ನಾನು ಸಂಪೂರ್ಣವಾಗಿ ಸಂದೇಹಗ್ರಸ್ತನಾಗಿದ್ದೇನೆ. ದಯವಿಟ್ಟು ವಿವರಿಸು"—ಎಂದು. ಆಗ ಸಂನ್ಯಾಸಿಯು ಉತ್ತರಿಸಿದನು—"ನಿನ್ನ ಅರಮನೆಯಲ್ಲಿ ಭಿಕ್ಷೆಯನ್ನು ಸ್ವೀಕರಿಸಬೇಕೆಂಬ ಆಹ್ವಾನವನ್ನು ನಾನು ಪ್ರಾರಂಭದಲ್ಲೇ ತಿರಸ್ಕರಿಸಿದೆ, ಆದರೆ ನೀನು ಒತ್ತಾಯ ಮಾಡಿದೆ. ಇದರ ಫಲವಾಗಿ ಅನೇಕ ಜನ ನಿರರ್ಥಕವಾಗಿ ಏಟುಗಳನ್ನು ತಿಂದರು, ಮತ್ತು ನನಗೂ ಸಹ ಕೆಟ್ಟ ಹೆಸರು ಬಂದಿತು. ಹೇ ರಾಜ! ನೀನು ನಿನ್ನ ಉಗ್ರಾಣ ಇಲ್ಲಿ ಎಷ್ಟೊಂದು ಅಕ್ಕಿಯನ್ನು ಶೇಖರಿಸಿದ್ದೀಯೆ, ಅದೆಲ್ಲವನ್ನೂ ನೀನು ಸರಿಯಾದ ಮಾರ್ಗವಲ್ಲಿ ಶೇಖರಿಸಿದ್ದೀಯಾ ಎಂಬುದರಲ್ಲಿ ನನಗೆ ಸಂದೇಹ". "ಕ್ಷಮಿಸಿ, ಅಷ್ಟೊಂದು ಅಕ್ಕಿಯನ್ನು ಶೇಖರಿಸುವುದಕ್ಕೆ ಅನೀತಿಮಾರ್ಗವನ್ನು ಅನುಸರಿಸಲಾಗಿದೆ" ಎಂದು ರಾಜನು ವಾಸ್ತವ ವಿಷಯವನ್ನು ತಿಳಿಸಿದನು. ಆ ಅಕ್ಕಿಯನ್ನು ನಾನು ಕೇವಲ ಊಟಮಾಡಿದ ಮಾತ್ರದಿಂದಲೇ, ಅದು ನನ್ನ ಬುದ್ಧಿಯನ್ನು ಕೆಡಿಸುವುದಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಪರ್ಯಾಪ್ತವಾಯಿತು"—ಎಂದು ಸಂನ್ಯಾಸಿಯು ಉತ್ತರಿಸಿದನು. "ಹೀಗಿರುವಾಗ ಅದನ್ನು ಪ್ರತಿನಿತ್ಯವೂ ತೆಗೆದುಕೊಳ್ಳುವ ನಿಮ್ಮೆಲ್ಲರ ಮೇಲೆ ಎಂತಹ ಪರಿಣಾಮ ಬೀರುತ್ತದೆಂಬುದನ್ನು ಯೋಚಿಸುವುದಕ್ಕೂ ನನಗೆ ಹೆದರಿಕೆಯಾಗುತ್ತದೆ. ಆದ್ದರಿಂದ, ದಯವಿಟ್ಟು ಇನ್ನು ಮುಂದೆ ಊಟಕ್ಕಾಗಿ ನನ್ನನ್ನು ಆಹ್ವಾನಿಸಬೇಡ. ಈ ತನಕ ನಾನು ಮಾಡುತ್ತಲಿದ್ದಂತೆ ಭಿಕ್ಷೆಯಿಂದ ನನ್ನ ಆಹಾರವನ್ನು ಸಂಪಾದಿಸುತ್ತೇನೆ" ಎಂದು "ಭಿಕ್ಷೆಯಿಂದ ಬಂದ ಆಹಾರವೂ ಅಶುದ್ಧವಾಗಿರುವುದಿಲ್ಲವೇ"—ಎಂದು ರಾಜನು ಪ್ರಶ್ನಿಸಿದನು. "ಆಹಾರವು ಅಶುದ್ಧವಾಗಿರಬಹುದು ; ಆದರೆ, ಅದು ನನ್ನ ಭಿಕ್ಷಾಪಾತ್ರೆಗೆ ಬೀಳುವವರೆಗೆ ಮಾತ್ರ ಹಾಗಿರುತ್ತದೆ. ಹೀಗೆಂದು ಶಾಸ್ತ್ರಗಳ ನಿಯಮ"—ಎಂದು ಸಂನ್ಯಾಸಿ ಸ್ಪಷ್ಟೀಕರಿಸಿದನು.

ಆಹಾರವು ಮನಸ್ಸನ್ನು ನಿಶ್ಚಯವಾಗಿ ಪ್ರಭಾವಿತಗೊಳಿಸುವುದೆಂದು ಈ ಆಖ್ಯಾಯಿಕೆಯು ತಿಳಿಸುತ್ತದೆ. ಆಹಾರವು ಮನಸ್ಸಿನ ಮೇಲೆ ಬೀರುವ ಪ್ರಭಾವವನ್ನು ಆಧರಿಸಿ, ಅದನ್ನು ಸಾತ್ತ್ವಿಕ, ರಾಜಸಿಕ ಮತ್ತು ತಾಮಸಿಕ—ಎಂದು ಮೂರು ವಿಧವಾಗಿ ವಿಂಗಡಿಸುತ್ತಾರೆ. ಸಾತ್ತ್ವಿಕ ಆಹಾರವು ಶುದ್ಧವಾದುದು ; ಅದು ಶಕ್ತಿಯನ್ನು ಹಾಗೂ ಒಳ್ಳೆಯ ಆರೋಗ್ಯವನ್ನುಂಟುಮಾಡುತ್ತದೆ. ರಾಜಸಿಕ ಆಹಾರವು ಆಸೆ ಮತ್ತು ಕೋಪವನ್ನುಂಟುಮಾಡುತ್ತದೆ. ತಾಮಸಿಕ ಆಹಾರವು ಆಲಸ್ಯವನ್ನುಂಟುಮಾಡುತ್ತದೆ. ಇದಲ್ಲದೆ, ಅಡಿಗೆಮಾಡುವವನ ಮನಸ್ಸು ಮತ್ತು ಪರಿಸರದಲ್ಲಿರುವ ಅಪರಿಶುದ್ಧತೆ, ಇವೆಲ್ಲವೂ ಆಹಾರವನ್ನು ಪ್ರಭಾವಿತಗೊಳಿಸುತ್ತವೆ ಮತ್ತು ಅದರಿಂದ ಮನಸ್ಸನ್ನೂ ಸಹ. ಆದ್ದರಿಂದ, ಯಾವಾಗಲೂ ಸಾತ್ತ್ವಿಕ ಆಹಾರವನ್ನು ತೆಗೆದುಕೊಳ್ಳುವ ವಿಷಯದಲ್ಲಿ ಜಾಗ್ರತರಾಗಿರಬೇಕು.

ಭಕ್ತಿ

ಶ್ರೀ ಭಗವತ್ಪಾದರವರು ತಮ್ಮ ಶಿವಾನಂದ ಲಹರಿಯಲ್ಲಿ ಭಕ್ತಿಯ ವಿವಿಧ ಹಂತಗಳನ್ನು ಉದಾಹರಣೆಗಳೊಂದಿಗೆ ವಿಶದ ಮಾಡಿದ್ದಾರೆ. ಪ್ರಾರಂಭದಲ್ಲಿ ಭಕ್ತನು ಬಲವಂತವಾಗಿ ತನ್ನ ಮನಸ್ಸನ್ನು ಪರಮಾತ್ಮನ ಕಡೆಗೆ ತಿರುಗಿಸಿ, ಅವನ ಪಾದಗಳನ್ನು ಅವಲಂಬಿಸುತ್ತಾನೆ. ತನ್ನ ತಾಯಿಗಿಡಕ್ಕೆ ಅಂಟಿಕೊಳ್ಳುವ ಅಂಕೋಲೆ ಗಿಡದ ಬೀಜವು ಉದಾಹರಣೆಯಾಗಿದೆ. ಭಕ್ತನು ತನ್ನ ಮನಸ್ಸನ್ನು ಪರಮಾತ್ಮನ ಕಡೆಗೆ ತಿರುಗಿಸಿದಾಗ, ಪರಮಾತ್ಮನು ಅವನಲ್ಲಿ ಅತ್ಯಂತ ಆಸಕ್ತನಾಗಿ ಅನುಗ್ರಹಿಸುತ್ತಾನೆ. ಈಶ್ವರನೇ ಭಕ್ತನನ್ನು ತನ್ನ ಕಡೆಗೆ ಎಳೆದುಕೊಂಡು ಅವನು ತನ್ನಿಂದ ಅಗಲದಿರುವಂತೆ ತಡೆಯುತ್ತಿರುವನೋ ಎಂಬಂತೆ ಇರುತ್ತದೆ. ಸೂಜಿಯೊಂದು ಸೂಜಿಗಲ್ಲಿಗೆ ಆಕರ್ಷಿತವಾಗುವುದು ಇದಕ್ಕೆ ಉದಾಹರಣೆ. ಇದು ಎರಡನೆಯ ಹಂತ. ಭಕ್ತನ ಹೃದಯವು ಪರಮಾತ್ಮನಲ್ಲಿ ಸಂಪೂರ್ಣವಾಗಿ ಲೀನವಾಗುವುದು, ಮತ್ತು ಪರಮಾತ್ಮನು ಆ ಭಕ್ತನ ವಿಷಯದಲ್ಲಿ ಅತ್ಯಂತ ವಾತ್ಸಲ್ಯದಿಂದಿರುವುದು ಮೂರನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯದು. ಪತಿವ್ರತೆಯಾದ ಹೆಂಗಸು ಪ್ರೀತಿಯಿಂದ ತನ್ನ ಗಂಡನ ಸೇವೆ ಮಾಡುವುದು ಮತ್ತು ಗಂಡನು ಆಕೆಯ ಪ್ರೀತಿಗೆ ಪ್ರತಿಸ್ಪಂದಿಸುವುದು. ಉದಾಹರಣೆ. ಕ್ರಮವಾಗಿ ಭಕ್ತನು ಈಶ್ವರನ ಒಂದು ಆಭರಣದಂತೆ ಆಗುತ್ತಾನೆ. ವಾಸ್ತವವಾಗಿ ಪ್ರಹ್ಲಾದನ ವಿಷಯದಲ್ಲಿ ಆಗದ್ದಿದ್ದರೆ, ನಮಗೆ ನರಸಿಂಹಾವತಾರವು ಉಂಟಾಗುತ್ತಿರಲಿಲ್ಲ. ಆದ್ದರಿಂದ, ಒಂದು ರೀತಿಯಲ್ಲಿ, ಭಕ್ತನು ಸ್ವತಃ ಈಶ್ವರನ ಮಾಹಾತ್ಮ್ಯೆಗೆ ಪುಷ್ಟೀಕರಿಸುವಂತೆ ಕಂಡುಬರುತ್ತದೆ. ಒಂದು ಲತೆಯು ಮರಕ್ಕೆ ಸುತ್ತುಕೊಂಡು ಅದರ ಸೌಂದರ್ಯವನ್ನು ಹೆಚ್ಚಿಸುವುದು ಉದಾಹರಣೆ. ಈ ನಾಲ್ಕನೆಯ ಹಂತವನ್ನು ಮೀರಿ, ಭಕ್ತ ಈಶ್ವರನಲ್ಲಿ ಸಂಪೂರ್ಣವಾದ ಐಕ್ಯವನ್ನು ಹೊಂದುತ್ತಾನೆ. ನದಿಗಳು ಸಮುದ್ರದಲ್ಲಿ ಐಕ್ಯವಾಗುವುದೇ ಇದಕ್ಕೆ ಉದಾಹರಣೆ. ನದಿಯು ಸಮುದ್ರದಲ್ಲಿ ಐಕ್ಯವಾದರೆ, ಅದನ್ನು ಪ್ರತ್ಯೇಕಿಸಲು ಆಗುವುದಿಲ್ಲ. ಭಕ್ತನ ಸ್ಥಿತಿಯೂ ಇದಕ್ಕೆ ಸದೃಶವಾದುದು.

ತನ್ನ ಶಿಷ್ಯನೊರ್ವನ ಭಕ್ತಿಯನ್ನು ಪರೀಕ್ಷೆ ಮಾಡಬೇಕೆಂಬ ಇಚ್ಛೆಯಿಂದ, ಆಶ್ರಮದ ಹಸುಗಳನ್ನು ಮೇಯಿಸಿಕೊಂಡು ಬರುವಂತೆ ತನ್ನ ಶಿಷ್ಯನಿಗೆ ಋಷಿಯು ಹೇಳಿದನು. ಶಿಷ್ಯನು ಆಜ್ಞೆಯನ್ನು ಪಾಲಿಸಿದನು. ವ್ಯಾಪಕವಾಗಿ ಸುತ್ತುತ್ತಿದ್ದರೂ, ಅವನು ದೃಢಕಾಯನಾಗಿ ಆರೋಗ್ಯದಿಂದಿದ್ದನು. ಅವನ ಶಕ್ತಿಯು ಏಕೆ ಕಡಿಮೆಯಾಗಲಿಲ್ಲ ಎಂದು ಪ್ರಶ್ನಿಸಿದಾಗ, ಶಿಷ್ಯನು ಭಿಕ್ಷೆಯನ್ನು ಸ್ವೀಕರಿಸುತ್ತಿದ್ದೇನೆಂದು ಉತ್ತರಿಸಿದನು. "ಇನ್ನು ಮುಂದೆ ನೀನು ಮಾಡಿದ ಭಿಕ್ಷೆಯೆಲ್ಲವನ್ನೂ ನನಗೆ ಒಪ್ಪಿಸಬೇಕು"-ಎಂದು ಗುರುವು ಆಜ್ಞೆ ಮಾಡಿದನು. ಕೆಲವು ದಿನಗಳು ಕಳೆದ ನಂತರವೂ ಶಿಷ್ಯನು ದೃಢಕಾಯನಾಗಿರುವುದನ್ನು ಗಮನಿಸಿದನು. ಆಗ ಶಿಷ್ಯನು ತಾನು ಎರಡನೆ ಬಾರಿ ಭಿಕ್ಷೆಗೆ ಹೋಗುತ್ತಿರುವುದನ್ನು ತಿಳಿಸಿದನು. ಗುರುವು ಈ ಪ್ರವೃತ್ತಿಯನ್ನು ತಡೆದರು.

ಆಶ್ಚರ್ಯವೇನೆಂದರೆ, ಶಿಷ್ಯನು ಶಕ್ತಿವಂತನಾಗಿಯೇ ಇದ್ದನು. ಅವನು ಕೊಟ್ಟ ಸಮಾಧಾನವೇನೆಂದರೆ– "ಈ ದಿನಗಳಲ್ಲಿ ನಾನು ಹಸುಗಳನ್ನು ಹುಲ್ಲು ತಿನ್ನಿಸಲು ಕರೆದುಕೊಂಡಾಗ, ಅವುಗಳ ಸ್ವಲ್ಪ ಹಾಲನ್ನು ಕುಡಿಯುತ್ತೇನೆ"–ಎಂದು. ಆಗ ಗುರುವು ಹೇಳಿದನು– "ಇನ್ನು ಮುಂದೆ ನೀನು ಹಸುವಿನ ಹಾಲನ್ನು ಕುಡಿಯಕೂಡದು. ನನಗೆ ಸಂಬಂಧಿಸಿದ ಹಾಲನ್ನು ನೀನು ಕುಡಿಯುವುದಾದರೆ, ಅದು ಕಳ್ಳತನವಾಗುತ್ತದೆ"–ಎಂದು. ಆಗ ಶಿಷ್ಯನು ಹಾಲು ಕುಡಿಯುವುದನ್ನು ನಿಲ್ಲಿಸಿದನು. ಆದರೆ, ಹಸುಗಳು ಅವನನ್ನು ಪ್ರೀತಿಸುತ್ತಿದ್ದವು. ಅವು ತಮ್ಮ ಕರುಗಳಿಗೆ ಹಾಲನ್ನು ಕುಡಿಸಿದ ನಂತರ, ಸ್ವಲ್ಪ ನೊರೆಯನ್ನು ಉಳಿಸುತ್ತಿದ್ದವು. ಶಿಷ್ಯನು ಆ ನೊರೆಯನ್ನು ಕುಡಿದು ತನ್ನ ಆರೋಗ್ಯವನ್ನು ಕಾಪಾಡಿಕೊಂಡನು. ಇದನ್ನು ತಿಳಿದ

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರುವು, ನೊರೆಯನ್ನೂ ಸಹ ಕುಡಿಯ ಕೂಡದೆಂದು ಆಜ್ಞಾಪಿಸಿದನು. ಕೊನೆಯಲ್ಲಿ ಶಿಷ್ಯನು ಎಕ್ಕದ ಗಿಡದ ಎಲೆಗಳನ್ನು ತಿನ್ನಲು ಪ್ರಾರಂಭಿಸಿದನು. ಅವನ್ನು ತಿಂದ ಸ್ವಲ್ಪ ಸಮಯದ ನಂತರ ಅವನು ಅಂಧನಾದನು. ಮುಗ್ಗರಿಸುತ್ತಾ ಬಂದು ಅವನು ಭಾವಿಯೊಂದರಲ್ಲಿ ಬಿದ್ದನು. ಸಾಯಂಕಾಲ ಹಸುಗಳು ಅವನಿಲ್ಲದೆ ಮನೆಗೆ ಹಿಂದಿರುಗಿದವು. ಶಿಷ್ಯನು ಬರದಿರುವುದನ್ನು ಕಂಡ ಗುರುವು ತಳಮಳಗೊಂಡನ್ನು "ನಾನು ಅವನ ಭಕ್ತಿಯನ್ನು ಪರೀಕ್ಷಿಸಬೇಕಾಗಿತ್ತು ; ಆದರೆ, ಅವನು ಯಾವುದೋ ತೊಂದರೆಗೆ ಸಿಕ್ಕಿಕೊಂಡಿದ್ದಾನೆ. ಆವನು ಏಕೆ ಹಿಂದಿರುಗಿಲ್ಲ" ?–ಎಂದು ಚಿಂತಿಸಿದನು. ಶಿಷ್ಯನ ಹೆಸರನ್ನು ಕೂಗುತ್ತ, ಅವನನ್ನು ಹುಡುಕಲು ಪ್ರಾರಂಭಿಸಿದನು. ಶಿಷ್ಯನು ಬಿದ್ದಿದ ಭಾವಿಯ ಸಮೀಪಕ್ಕೆ ಬಂದಾಗ, ಕ್ಷೀಣವಾದ ಧ್ವನಿಯೊಂದು ಅವನ ಕರಿಗೆ ಓಗೊಟ್ಟಿತು. ದುಃಖಕರವಾದ ಪರಿಸ್ಥಿತಿಯನ್ನು ಗಮನಿಸಿದ ಗುರುವು ಕೇಳಿದನು–"ಈ ಭಾವಿಯೊಳಕ್ಕೆ ಹೇಗೆ ಬಿದ್ದೆ ? ಎಂದು. "ಏನನ್ನೂ ತಿನ್ನಬಾರದೆಂಬ ತಮ್ಮ ಆಜ್ಞೆಯನ್ನು ಮೀರಿ, ಎಕ್ಕದ ಎಲೆಗಳನ್ನು ತಿಂದೆ. ಅದರ ಫಲವಾಗಿ ಅಂಧನಾಗಿ, ಈ ಭಾವಿಯೊಳಕ್ಕೆ ಬಿದ್ದೆ"–ಎಂದು ಶಿಷ್ಯನು ಉತ್ತರಿಸಿದನು. ದಯಾದೃಷ್ಟಿಯಿಂದ ತನ್ನ ಶಿಷ್ಯನನ್ನು ನೋಡುತ್ತಾ–ಗುರುವು ಹೇಳಿದನು–"ವೇದದ ವಿಶಿಷ್ಟವಾದ ಈ ಭಾಗವನ್ನು ಪಾರಾಯಣ ಮಾಡು. ಅದು ಅಶ್ವಿನಿ ದೇವತೆಗಳನ್ನು ಸ್ತೋತ್ರ ಮಾಡುವ ಭಾಗ. ಅವರು ನಿನಗೆ ದೃಷ್ಟಿಯನ್ನು ಪುನಃ ನೀಡುತ್ತಾರೆ"–ಎಂದು. ಆ ಮಂತ್ರವನ್ನು ಉಚ್ಚರಿಸಿದಾಗ, ಶಿಷ್ಯನಿಗೆ ದೃಷ್ಟಿ ಬಂದಿತು. ಅವನು ಭಾವಿಯಿಂದ ಮೇಲೆ ಬಂದು, ಗುರುವಿಗೆ ನಮಸ್ಕರಿಸಿದನು, ಮತ್ತು ಹೇಳಿದನು. "ನನ್ನ ದೋಷದಿಂದ ನಾನು ದೃಷ್ಟಿಯನ್ನು ಕಳೆದುಕೊಂಡೆ ನಿಮ್ಮ ಅನುಗ್ರಹದಿಂದ ನನಗೆ ಪುನಃ ಪ್ರಾಪ್ತವಾಯಿತು"–ಎಂದು. ಇದಕ್ಕೆ ಗುರುವು ಹೇಳುತ್ತಾನೆ–"ನಿನ್ನ ದುರದೃಷ್ಟಕ್ಕೆ ನಿನ್ನ ದೋಷ ಕಾರಣವಲ್ಲ. ನಿನ್ನ ಭಕ್ತಿಯನ್ನು ಪರೀಕ್ಷೆ ಮಾಡಬೇಕೆಂದು ಅಪೇಕ್ಷಿಸಲ್ಪಟ್ಟದ್ದರಿಂದಲೇ, ನೀನು ಅಂಧನಾದೆ. ನೀನು ನನ್ನಲ್ಲಿ ಅತೀವವಾದ ಭಕ್ತಿಯನ್ನು ಹೊಂದಿದ್ದೀಯೆ ಆದ್ದರಿಂದ, ನೀನು ಅಧ್ಯಯನ ಹಾಗೂ ಸೇವೆಯನ್ನು ಮುಂದುವರೆಸಿದ್ದರೂ ; ನಿನಗೆ ಎಲ್ಲ ಹದಿನಾಲ್ಕು ವಿದ್ಯೆಗಳೂ ಸ್ಫುರಿಸಲಿ ಎಂದು ಆಶೀರ್ವದಿಸುತ್ತೇನೆ" ಎಂದು. ತನ್ನ ಗುರುವಿನಲ್ಲಿ ಅತೀವವಾದ ಭಕ್ತಿಯನ್ನು ಹೊಂದಿ, ಅವರನ್ನು ನಿಷ್ಠೆಯಿಂದ ಸೇವಿಸಿದರೆ, ಅಧ್ಯಾಪನದ ಅವಶ್ಯಕತೆಯೇ ಇಲ್ಲದೆ, ಅಂತಹ ಶಿಷ್ಯನಿಗೆ ವಿದ್ಯೆಗಳು ಅನುಗೃಹೀತವಾಗುತ್ತವೆಂಬುದನ್ನು ಈ ಆಖ್ಯಾಯಿಕೆಯು ಸ್ಪಷ್ಟಪಡಿಸುತ್ತದೆ.

ತನಗೆ ಲಭ್ಯವಾಗುವುದರಿಂದ ಮನುಷ್ಯನು ಯಾವಾಗಲೂ ತೃಪ್ತನಾಗುವುದಿ ವೆಂಬುದನ್ನು ಈ ಕಥೆ ತೋರಿಸುತ್ತದೆ. ಅವನು ತನ್ನ ಆಸೆಗಳು ಪೂರ್ಣವುದಕ್ಕೆ ಪ್ರಯತ್ನಿಸುತ್ತಾನೆ. [illegible] ದಿಂದ ಜ್ವಾಲೆಗ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾಗುವಂತೆ, ಆಸೆಗಳು ಪೂರ್ಣವಾಗುವುದು ಎಂದರೆ, ಅವು ಕೇವಲ ಆಸೆಗಳನ್ನು ಜಾಸ್ತಿ ಮಾಡುವುದಕ್ಕೆ ಕಾರಣವಾಗುತ್ತವೆ.

ಮಕ್ಕಳನ್ನು ಹೊಂದಬೇಕೆಂಬ ಅಪೇಕ್ಷೆಯಿಂದ ಸಾತ್ತ್ವಿಕನಾದ ಒಬ್ಬ ಮನುಷ್ಯನು ಮಕ್ಕಳನ್ನು ಅನುಗ್ರಹಿಸಬೇಕೆಂದು ದೇವರನ್ನು ಕುರಿತು ಪ್ರಾರ್ಥನೆ ಮಾಡಿದನು. ಕೆಲವು ಸಮಯದ ನಂತರ ಅವನಿಗೆ ಒಂದು ಮಗುವಾಯಿತು, ಆದರೆ ಅದು ಹಾಲನ್ನು ಕುಡಿಯುತ್ತಿರಲಿಲ್ಲ. ಆಗ ಆ ಭಕ್ತನು ಪರಮಾತ್ಮನನ್ನು ಕುರಿತು ಪ್ರಾರ್ಥನೆ ಮಾಡಿ ಹೇಳುತ್ತಾನೆ—"ನೀನು ನನಗೆ ಒಂದು ಮಗುವನ್ನು ಅನುಗ್ರಹಿಸಿದೆ ; ಆದರೆ ಅದು ಹಾಲನ್ನು ಕುಡಿಯುತ್ತಿಲ್ಲ. ಪ್ರಾಯಶಃ ಅದು ಬದುಕುವುದಿಲ್ಲ. ಆದ್ದರಿಂದ ಏನಾದರೂ ಮಾಡು"—ಎಂದು. "ಹಾಗೋ" ಎಂದು ಪರಮಾತ್ಮನು ಹೇಳುತ್ತಾ "-ನಾಳೆಯಿಂದ ಅದು ಹಾಲನ್ನು ಕುಡಿಯಲು ಪ್ರಾರಂಭಿಸುತ್ತದೆ. ನೀನು ಹೆದರಬೇಡ"—ಎಂದನು. ಆ ಸಮಸ್ಯೆಯು ಪರಿಹಾರವಾಯಿತು, ಆದರೆ ಆ ಮಗುವು ಸಹಿಸಲಾರದಷ್ಟು ತುಂಟನಾದನು. ಮತ್ತೆ ಭಕ್ತನು ಪರಮಾತ್ಮನನ್ನು ಸಮೀಪಿಸಿ, ತನ್ನ ಮಗನು ಒಳ್ಳೆಯ ನಡತೆಯನ್ನು ಹೊಂದುವಂತೆ ಅನುಗ್ರಹಿಸಬೇಕೆಂದು ಪ್ರಾರ್ಥಿಸಿದನು. "ತಥಾಸ್ತು"—ಎಂದು ಪರಮಾತ್ಮನು ಅನುಗ್ರಹಿಸಿದನು. ಆ ಕ್ಷಣದಿಂದ ಆ ಮಗುವು ತನ್ನ ತುಂಟತನವನ್ನು ಬಿಟ್ಟಿತು. ನಂತರ ಆ ಮಗುವು ಅತ್ಯಂತ ವಿಧೇಯವಾಗಿ ಮಾತನಾಡುವುದನ್ನು ಬಿಟ್ಟಿತು. ಇದನ್ನು ಸಹಿಸಲಾರದ ಭಕ್ತನು ಪರಮಾತ್ಮನ ಅನುಗ್ರಹವನ್ನು ಇಚ್ಛಿಸಿದನು. ಅದರ ನಂತರ ಮಗುವು ಸ್ವಾಭಾವಿಕವಾಗಿ ಮಾತನಾಡಲು ಪ್ರಾರಂಭಿಸಿತು. ಇಂತಹ ಅನೇಕ ಪ್ರಾರ್ಥನೆಗಳ ನಂತರ, ತನ್ನ ಮಗನಿಗೆ ಮದುವೆ ಮಾಡಿದನು. ಕೆಲವು ವರ್ಷಗಳು ಕಳೆಯಿತು ; ಆದರೆ ಅವನ ಸೊಸೆಯು ಗರ್ಭಿಣಿಯಾಗಲಿಲ್ಲ. ಆಗ ಭಕ್ತನು ಪರಮಾತ್ಮನಲ್ಲಿ ಪ್ರಾರ್ಥಿಸಿದನು—"ನೀನು ನನಗೆ ಒಂದು ಮಗುವನ್ನು ಅನುಗ್ರಹಿಸದೇ ಇದ್ದಿದ್ದರೆ, ನಾನು ಸುಖವಾಗಿರುತ್ತಿದ್ದೆನೆಂದು ನನಗೆ ತೋರುತ್ತದೆ. ನನ್ನ ಮಗನಿಗೆ ಸಂತತಿಯಾಗಲಿಲ್ಲವೆಂಬುದನ್ನು ನೆನೆದರೆ, ನನ್ನ ಮನಸ್ಸು ದುಃಖಿತವಾಗುತ್ತದೆ."

ವಾಸ್ತವವಾಗಿ, ಇಂತಹ ಪ್ರಾರ್ಥನೆಗಳಿಗೆ ಕೊನೆಯೇ ಇರುವುದಿಲ್ಲ. ಆದ್ದರಿಂದ, ಭಕ್ತಿ ಪೂರ್ವಕವಾದ ಪ್ರಾರ್ಥನೆಗಳು ವ್ಯಾಪಾರೀ ಮನೋಭಾವದವುಗಳಾಗಬಾರದು.

ಒಮ್ಮೆ ನಾರದನು, ವಿಷ್ಣುವನ್ನು ಸಮೀಪಿಸಿ, ಕೇಳಿದನು—"ನಿನ್ನ ಅತ್ಯಂತ ಶ್ರೇಷ್ಠ ಭಕ್ತನಾರು ?"—ಎಂದು. ಆಗ, ಸ್ವಾಮಿಯು ಹೇಳಿದನು—"ನನ್ನಲ್ಲಿ ಅತ್ಯಂತ ನಿಷ್ಠನಾಗಿ ಭಕ್ತಿಯುಳ್ಳ ಒಬ್ಬ ಕೃಷಿಕನಿದ್ದಾನೆ"—ಎಂದು. ಇದರಿಂದ ಕುಪಿತನಾದ ನಾರದನು ಹೇಳುತ್ತಾನೆ—"ಏನು ? ನಾನು ನಿನ್ನ ಶ್ರೇಷ್ಠನಾದ ಭಕ್ತನಲ್ಲವೇ ? ದರಿದ್ರನಾದ ಆ ನಿಕೃಷ್ಟ ಕೃಷಿಕನು ಅಷ್ಟು ದೊಡ್ಡವನೇ ?" ಎಂದು

Sri Vidyabharathi Book Centre, Sringeri

CC-O. In Public Domain. Digitized by eGangotri

ಆಗ ನಾರದನಿಗೆ ಹೋಗಿ, ಸ್ವತಃ ನೋಡಬೇಕೆಂದು ವಿಷ್ಣುವು ತಿಳಿಸುತ್ತಾನೆ. ನಾರದನು ಆ ಕೃಷಿಕನ ಕಾರ್ಯಗಳನ್ನು ಪರೀಕ್ಷಿಸಿದನು. ಪ್ರತಿನಿತ್ಯ ಪ್ರಾತಃಕಾಲದಲ್ಲಿ ಎದ್ದು, ದೇವರನ್ನು ಪ್ರಾರ್ಥನೆ ಮಾಡಿದ ನಂತರ ಅವನು ತನ್ನ ಗೃಹಕೃತ್ಯಗಳಲ್ಲಿ ತೊಡಗುತ್ತಿದ್ದನು. ನಂತರ ಅವನು ತೋಟಕ್ಕೆ ಹೋಗಿ, ಅಲ್ಲಿ ಸ್ವಲ್ಪ ಸಮಯ ಮೌನವಾಗಿ ಕುಳಿತು ಪ್ರಾರ್ಥಿಸುತ್ತಿದ್ದನು. ನಂತರ ಅವನು ತನ್ನ ದಿನ ನಿತ್ಯದ ಕೃಷಿ ಕರ್ಮದಲ್ಲಿ ತೊಡಗುತ್ತಿದ್ದನು. ಮುಂದಿನ ಅವನ ಪ್ರಾರ್ಥನೆಯು ಸಾಯಂಕಾಲಕ್ಕೆ ನಿಗದಿಯಾಗಿದ್ದಿತು. ನಾರದನು ವಿಷ್ಣುವಿನ ಕಡೆಗೆ ತಿರುಗಿ, ಕೇಳಿದನು—"ಏನಿದು ? ಈ ಕೃಷಿಕನು ನಿನ್ನ ಹೆಸರನ್ನೂ ಸಹ ಆಗಾಗ ಹೇಳುವುದಿಲ್ಲ. ಅವನು ಹೇಗೆ ಶ್ರೇಷ್ಠ ?"—ಎಂದು. ವಿಷ್ಣುವು ಹೇಳುತ್ತಾನೆ— "ಉತ್ತರಿಸುವುದಕ್ಕೆ ಮುಂಚೆ, ನಿನಗೊಂದು ಕೆಲಸ ಕೊಡುತ್ತೇನೆ. ನೀರಿನಿಂದ ತುಂಬಿರುವ ಈ ಪಾತ್ರೆಯನ್ನು ತೆಗೆದುಕೊ ; ಊರಿನ ರಸ್ತೆಗಳಲ್ಲಿ ಸುತ್ತಬೇಕು. ನಂತರನನ್ನಲ್ಲಿಗೆ ಹಿಂದಿರುಗು. ಆದರೆ, ಪಾತ್ರೆಯಿಂದ ಒಂದು ತೊಟ್ಟು ನೀರೂ ಚೆಲ್ಲಿರ ಕೂಡದು"—ಎಂದು, ಪಾತ್ರೆಯನ್ನು ತೆಗೆದುಕೊಂಡು, ನಾರದನು ಹೊರಡುತ್ತಾನೆ. ಅವನು ಕೆಲವೇ ಹೆಜ್ಜೆಗಳನ್ನು ಹೋಗುತ್ತಿದ್ದ ಕೂಡಲೆ, ಪಾತ್ರೆಯಿಂದ ನೀರಿನ ಹನಿಗಳು ಬೀಳಬಹುದೆಂಬ ಹೆದರಿಕೆಯು ಅವನನ್ನು ಆವರಿಸಿತು. ಈ ಹೆದರಿಕೆಯು ಅವನನ್ನು ಎಷ್ಟರಮಟ್ಟಿಗೆ ಆವರಿಸಿತೆಂದರೆ, ಪ್ರಾತೆಯಲ್ಲಿನ ನೀರನ್ನು ಬಿಟ್ಟು ಬೇರೆ ಯಾವುದನ್ನೂ ಅವನ ಮನಸ್ಸು ಗಮನಿಸಲು ಸಿದ್ಧವಿರಲಿಲ್ಲ. ವಹಿಸಿದ್ದ ಕಾರ್ಯವು ಮುಗಿದ ನಂತರ, ಅವನು ವಿಷ್ಣುವಿನ ಸಮೀಪಕ್ಕೆ ಹಿಂದಿರುಗಿದನು. ವಿಷ್ಣುವು ಅವನನ್ನು ಪ್ರಶ್ನಿಸುತ್ತಾನೆ—"ಎಷ್ಟು ಬಾರಿ ನನ್ನ ಹೆಸರನ್ನು ಜಪಿಸಿದೆ" —ಎಂದು. ದಿಗ್ಭ್ರಾಂತನಾದ ನಾರದನು—"ನಾನು ಹೇಗೆ ಮಾಡಲಿ ? ಪಾತ್ರೆಯಿಂದ ಒಂದು ಹನಿ ನೀರೂ ಬೀಳದಿರುವಂತೆ ಆ ವಿಷಯದಲ್ಲಿ ನನ್ನ ಏಕಾಗ್ರವಾಗಿತ್ತು"—ಎಂದು ಹೇಳಿದನು. ಆಗ ಪರಮಾತ್ಮನು ಹೇಳುತ್ತಾನೆ—"ನಿನ್ನಂತೆಯೇ ಆ ಕೃಷಿಕನೂ ಕಾರ್ಯದಲ್ಲಿ ಮಗ್ನನಾಗಿದ್ದ. ಆದರೆ, ಅವನು ಯಾವಾಗಲೂ ನನ್ನನ್ನು ಜಪಿಸುತ್ತಿದ್ದ. ಅದು ಅವನನ್ನು ಶ್ರೇಷ್ಠನಾಗುವಂತೆ ಮಾಡಿದೆ" —ಎಂದು.

ನಾವು ನಮ್ಮ ಕಾರ್ಯಕೆಲಸಗಳಲ್ಲಿ ತೊಡಗಿದ್ದರೂ ಸಹ, ಪರಮಾತ್ಮನಲ್ಲಿ ನಮ್ಮ ಮನಸ್ಸು ನೆಟ್ಟಿರುವಂತೆ ಮಾಡಬೇಕು. ಅದೇ ಭಕ್ತಿಯಲ್ಲಿನ ಶ್ರೇಷ್ಠವಾದ ಗುಣ.

ಎಂಟು ಶ್ರೇಷ್ಠ ಗುಣಗಳು

ಮಹರ್ಷಿ ಗೌತಮರು, ಪ್ರತಿಯೊಬ್ಬರೂ ಆಚರಣೆಯಲ್ಲಿಟ್ಟುಕೊಳ್ಳಬೇಕಾದ ಎಂಟು "ಆತ್ಮಗುಣ"ಗಳನ್ನು ಹೇಳುತ್ತಾರೆ. ವ್ಯಕ್ತಿಯ ಮಾನಸಿಕ ಶಾಂತಿ ಮತ್ತು

Sri Vidyabharathi Book Centre, Sringeri

CC-O. In Public Domain. Digitized by eGangotri

ಸೌಖ್ಯಗಳನ್ನು ಹೊಂದುವುದಕ್ಕೆ ಅವು ಸಹಾಯಕವಾಗುತ್ತವೆ. ಅವು ಪುಣ್ಯವುಂಟಾಗುವುದಕ್ಕೂ ಸಹಾಯಕವಾಗುತ್ತವೆ. ಆದ್ದರಿಂದ ಅವುಗಳ ಪ್ರಯೋಜನವು ಕೇವಲ ಈ ಜನ್ಮಕ್ಕೆ ಮಾತ್ರ ಸೀಮಿತವಾಗಿಲ್ಲ. ಜನಗಳು ಇವುಗಳನ್ನು ಆಚರಣೆಗೆ ತಂದಲ್ಲಿ, ಜಗತ್ತು ಸೌಖ್ಯದ ಬೀಡಾಗುತ್ತದೆ.

ಅಂತಹ ಮೊದಲನೆಯ ಗುಣವು–ಎಲ್ಲ ಪ್ರಾಣಿಗಳ ವಿಷಯದಲ್ಲಿಯೂ "ದಯೆ" ಪರಮಾತ್ಮನು ತನಗಾಗಿ ಸಾಧನೆಮಾಡಬೇಕಾದುದು ಏನೂ ಇರುವುದಿಲ್ಲ ; ಆದರೂ ಸಹ ಅನುಕಂಪೆಯಿಂದ ಮತ್ತು ಮಾನವರನ್ನು ಉದ್ಧಾರಮಾಡುವುದಕ್ಕಾಗಿ ಅನೇಕ ಅವತಾರಗಳನ್ನು ಎತ್ತಿದ್ದಾನೆ. ಇನ್ನೊಬ್ಬರಿಗೆ ಸಹಾಯ ಮಾಡುವ ಸಾಮರ್ಥ್ಯವಿದ್ದಾಗ, ನಾವು ಆ ರೀತಿ ಮಾಡುವುದು ಸ್ವಾಭಾವಿಕ. ಪರಮಾತ್ಮನೇ ನಮಗೆ ಮಾರ್ಗವನ್ನು ತೋರಿಸಿದ್ದಾನೆ. ಮತ್ತೊಬ್ಬರ ಕಷ್ಟಗಳನ್ನು ನಿವಾರಣೆ ಮಾಡಬೇಕೆಂಬ ಆಕಾಂಕ್ಷೆಯೇ ಅನುಕಂಪೆಯೆನಿಸುತ್ತದೆ. ಕೆಲವರಿಗೆ ಸ್ವಾಭಾವಿಕವಾಗಿ ಅನುಕಂಪೆಯುಂಟಾಗುತ್ತದೆ ; ಮತ್ತೆ ಕೆಲವರಲ್ಲಿ ಅತ್ಯಂತ ದಯಾಶೀಲರಾದವರ ಸಹವಾಸದಿಂದ ಉಂಟಾಗುತ್ತದೆ. ಗೀತೆಯಲ್ಲಿ, ಪರಮಾತ್ಮನ ಪ್ರೀತಿಗೆ ಪಾತ್ರನನ್ನಾಗಿ ಮಾಡುವ ಭಕ್ತನ ಗುಣಗಳನ್ನು ಹೇಳುತ್ತ, ಶ್ರೀಕೃಷ್ಣನು ಅದ್ವೇಷ, ಮೈತ್ರಿ ಮತ್ತು ದಯೆಯನ್ನು ಹೇಳುತ್ತಾನೆ.

ಯೋಗ ಸೂತ್ರದಲ್ಲಿಯೂ ಸಹ, ಮಾನಸಿಕ ಶಾಂತಿಯನ್ನು ಹೊಂದುವುದಕ್ಕೆ ದುಃಖದಲ್ಲಿರುವವರ ವಿಷಯದಲ್ಲಿ ದಯೆಯನ್ನು ಹೊಂದಿರಬೇಕೆಂದು ವಿಧಿಸಲಾಗಿದೆ. "ನಾನು ಯಾವಾಗಲೂ ದುಃಖವನ್ನು ಅನುಭವಿಸಬಾರದು. ಇತರರ ವಿಷಯದಲ್ಲಿಯೂ ಅದೇ. ಅವರ ದುಃಖವೂ ನನ್ನದಕ್ಕೆ ಸದೃಶವಾದುದು. ಆದ್ದರಿಂದ ಯಾರೂ ದುಃಖವನ್ನು ಹೊಂದಬಾರದು" –ಎಂಬ ಭಾವನೆಯನ್ನು ಓರ್ವ ಬೆಳೆಸಿಕೊಂಡರೆ, ಆಗ ಅವನ ದ್ವೇಷ ಮತ್ತು ಅಹಂಕಾರಗಳು ನಿವೃತ್ತವಾಗಿ, ಇತರ ಸಂದರ್ಭಗಳಿಗಿಂತ, ಮನಸ್ಸು ಹೆಚ್ಚು ಶಾಂತಿಯನ್ನು ಪಡೆಯುತ್ತದೆ. ಅನುಕಂಪೆಯನ್ನು ಬೆಳೆಸಿಕೊಳ್ಳುವುದು ಕೋಪದ ನಿವಾರಣೆಗೂ ಸಹಾಯಕವಾಗುತ್ತದೆ, ಮತ್ತು ಕೋಪವು ಮನಸ್ಸನ್ನು ಅತಿಯಾಗಿ ಪ್ರಕ್ಷುಬ್ಧಗೊಳಿಸುತ್ತದೆಂಬುದು ಪ್ರಸಿದ್ಧ.

ಎರಡನೆಯ ಗುಣ "ಕ್ಷಮಾ" ಸಾಮಾನ್ಯವಾಗಿ ಒಬ್ಬನು ಅಹಿತಕರವಾದುದನ್ನು ಕೇಳಿದಾಗ ಅಥವಾ ಅಹಿತಕರವಾದ ಪ್ರಸಂಗವನ್ನು ಎದುರಿಸಿದಾಗ, ಅವನು ಕೋಪಗೊಂಡು ಪ್ರತೀಕಾರಮಾಡಲು ಅಪೇಕ್ಷಿಸುತ್ತಾನೆ. ಬಲಿಷ್ಠನಾಗಿದ್ದರೆ, ಧೈರ್ಯವಾಗಿ ಪ್ರತಿಭಟಿಸುತ್ತಾನೆ. ಇಲ್ಲದಿದ್ದರೆ, ಕೆಟ್ಟದಾಗಿ ಮಾತನಾಡುವುದರಿಂದ ಪ್ರತೀಕಾರ ಮಾಡುತ್ತಾನೆ. ಹೀಗೆ ಮಾಡುವುದು ಸತ್ಪುರುಷರ ಸ್ವಭಾವವಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಶಿಕ್ಷೆಮಾಡುವುದಕ್ಕೆ ಒಬ್ಬನಿಗೆ ಸಾಮರ್ಥ್ಯವಿದ್ದರೂ, ಅಪರಾಧಿಯನ್ನು ಕ್ಷಮಿಸಬೇಕು. ದ್ವೇಷವನ್ನು ಸಾಧಿಸಬಾರದು. ರಾಮಾಯಣದಲ್ಲಿ ನಾವು ಓದುತ್ತೇವೆ – "ತನ್ನ ಜಿತೇಂದ್ರಿಯ ಸ್ವಭಾವದಿಂದ, ನೂರು ತಪ್ಪುಗಳನ್ನೂ ಸಹ ರಾಮನು ಸ್ಮರಿಸುತ್ತಿರಲಿಲ್ಲ ; ತನಗೆ ಮಾಡಿದ ಒಂದು ಉಪಕಾರದಿಂದ ಅವನು ತೃಪ್ತನಾಗುತ್ತಿದ್ದನು".

ಅಸಹನೆ ಮತ್ತು ಕೋಪವನ್ನು ಹೊಂದುವುದರಿಂದ ಏನು ಪ್ರಯೋಜನ ? ಹಾಗೆ ಮಾಡುವುದರಿಂದ ವ್ಯಕ್ತಿಯು ತನ್ನ ಮಾನಸಿಕ ಶಾಂತಿಯನ್ನು ಕಳೆದುಕೊಳ್ಳುತ್ತಾನೆ. ಒಬ್ಬನು ಮತ್ತೊಬ್ಬನಿಂದ ಅವಮಾನಿತನಾಗಬಹುದು. ಅವನಿಗೆ ಕೋಪ ಬರಬಹುದು. ನಷ್ಟ ಹೊಂದುವವನು ಯಾರು ? ಕೋಪವು ಒಂದು ಕೃತಘ್ನ ಪ್ರಾಣಿಯಂತೆ. ಅದಕ್ಕೆ ಅವಕಾಶಕೊಟ್ಟವನನ್ನೇ ಅದು ಸುಡುತ್ತದೆ. ಕೋಪ ಮಾಡಿಕೊಳ್ಳುವುದಕ್ಕೆ ಬದಲಾಗಿ, ಅವಮಾನಿತನಾದ ವ್ಯಕ್ತಿಯು ತನ್ನಲ್ಲಿ ವಾಸ್ತವವಾಗಿರುವ ದೋಷವನ್ನು ತೋರಿಸಲಾಗಿದೆಯೇ ಎಂಬುದನ್ನು ವಿಮರ್ಶೆಮಾಡಿಕೊಳ್ಳುವುದು ಒಳ್ಳೆಯದು. ದಿಟವಾದರೆ, ಸ್ವದೋಷವನ್ನು ತಿದ್ದಿಕೊಂಡು, ಅದನ್ನು ಗಮನಕ್ಕೆ ತಂದ ವ್ಯಕ್ತಿಯ ವಿಷಯದಲ್ಲಿ ಕೃತಜ್ಞನಾಗಿರಬೇಕು. ಅಥವಾ ಅವಮಾನವು ಆಧಾರ ರಹಿತವಾಗಿರಬಹುದು. ಆಗ ಈ ಮನುಷ್ಯನು ಯೋಚಿಸಬಹುದು –"ಇತರರನ್ನು ಸಂತೋಷಪಡಿಸುವುದು ಪರಮಾತ್ಮನ ಆರಾಧನೆಯೆಂದು ಹೇಳುತ್ತಾರೆ. ಈ ವ್ಯಕ್ತಿಯು ನನ್ನನ್ನು ನಿಂದನೆ ಮಾಡುವುದರಿಂದ ಸಂತೋಷವನ್ನು ಹೊಂದುವುದಾದರೆ, ನಾನು ಅದೃಷ್ಟಶಾಲಿ. ಯಾವ ಪ್ರಯತ್ನವನ್ನೂ ಮಾಡದೆ, ಅವನನ್ನು ಸಂತೋಷಪಡಿಸುವುದರ ಮೂಲಕ ನಾನು ಪರಮಾತ್ಮನನ್ನು ಆರಾಧಿಸಲು ಸಾಧ್ಯವಾಗುತ್ತದೆ. ಅವನು ನನಗೆ ಒಂದು ದೊಡ್ಡ ಉಪಕಾರವನ್ನೇ ಮಾಡಿರುತ್ತಾನೆ."

ಮೂರನೆಯ ಗುಣ "ಕುತರ್ಕ ಮಾಡದಿರುವುದು", ಸಾಮಾನ್ಯವಾಗಿ ಚತುರರಲ್ಲದ ಅಥವಾ ಅಭ್ಯುದಯ ಹೊಂದದವರು, ಯೋಗ್ಯತೆಯಿರುವ, ಅಭಿವೃದ್ಧಿ ಹೊಂದುವ ಅಥವಾ ಯಶಸ್ವಿಗಳಾದ ಇತರರಲ್ಲಿ ದೋಷವನ್ನು ಹುಡುಕುತ್ತಾರೆ. ನಿಂದನೆಯು ಸಾಮಾನ್ಯವಾಗಿ ತನ್ನ ದೋಷಗಳನ್ನು ಮುಚ್ಚಿಕೊಳ್ಳುವುದಕ್ಕಾಗಿ ; ವಿಮರ್ಶೆಯು ಉಪಯುಕ್ತವಾಗಿರುವುದಿಲ್ಲ. ಇದು ಬಹು ಕೆಟ್ಟ ಅಭ್ಯಾಸ ; ನಾವು ಇತರರಲ್ಲಿರುವ ಒಳ್ಳೆಯ ಗುಣಗಳನ್ನು ಹೊಗಳಬೇಕೇ ಹೊರತು, ದೋಷಗಳನ್ನು ಹುಡುಕುವುದಲ್ಲ. ಗೀತೆಯಲ್ಲಿ, 'ಕುತರ್ಕ' ಮಾಡದಿರುವ ಅರ್ಜುನನಿಗೆ ಸತ್ಯವನ್ನು ತಿಳಿಸಲು ತನ್ನ ಉತ್ಸುಕತೆಯನ್ನು ಶ್ರೀಕೃಷ್ಣ ಸ್ಪಷ್ಟಪಡಿಸುತ್ತಾನೆ. ಇತರರನ್ನು ನಿಂದನೆಮಾಡುವುದನ್ನು ಕೇಳಿದರೂ ಪಾಪಪ್ರಾಪ್ತಿಯಾಗುವುದೆಂದು ಪ್ರಬೋಧ ಸುಧಾಕರದಲ್ಲಿ ಶಂಕರರು ತಿಳಿಸುತ್ತಾರೆ. ವಾಸ್ತವವಾಗಿ ಇನ್ನೊಬ್ಬರ ದೋಷವನ್ನೇ ಹುಡುಕವುದರಲ್ಲಿ ಮಗ್ನನಾದವನು ಎಷ್ಟು ಪಾಪಗಳಿಸುತ್ತಾನೆಂಬುದನ್ನು ಹೇಗೆ ತಾನೇ ಹೇಳುವುದು ?

Sri Vidyabharathi Book Centre, Sringeri

CC-O. In Public Domain. Digitized by eGangotri

ಸುಖವಾಗಿರುವವರೊಡನೆ ಯಾರಾದರೂ ಮೈತ್ರೀ ಭಾವವನ್ನು ಹೊಂದಿರುವುದಾದರೆ, ಆತ ಅವರ ಅಭಿವೃದ್ಧಿಯಿಂದ ಸಂತೋಷ ಹೊಂದುತ್ತಾನೆ. ಉದಾಹರಣೆಗೆ, ತನ್ನ ಮಗನ ಅಭಿವೃದ್ಧಿಯಿಂದ ತಂದೆಯು ಸಂತೋಷಪಡುವುದಿಲ್ಲವೇ ? ಅದೇ ರೀತಿ, ಮತ್ತೊಬ್ಬನನ್ನು ಮೈತ್ರೀಭಾವದಿಂದ ಕಂಡಾಗ ವ್ಯಕ್ತಿಯು ಸಂತೋಷವನ್ನು ಏಕೆ ಪಡಬಾರದು ? ಹೀಗೆ ಆರ್ಯೋಕ್ತಿಯೊಂದಿದೆ– "ಸಣ್ಣ ಬುದ್ಧಿಯಿರುವವರು– "ಇದು ನನ್ನದು, ಇದು ನನ್ನದಲ್ಲ" –ಎಂದು ತಿಳಿಯುತ್ತಾರೆ ; ಆದರೆ ಉದಾರ ಚರಿತರು ಜಗತ್ತೇ ಕುಟುಂಬವೆಂದು ತಿಳಿಯುತ್ತಾರೆ". ಪ್ರತಿಯೊಬ್ಬರೂ ತನ್ನ ಪ್ರೀತಿಪಾತ್ರವಾದ ಕುಟುಂಬದ ಸದಸ್ಯರೆಂದು ತಿಳಿಯುವ ವ್ಯಕ್ತಿಯ ಮನಸ್ಸು ಮತ್ತೊಬ್ಬರ ಏಳ್ಗೆಯಿಂದ ಹೇಗೆ ತಾನೇ ಕ್ಷೋಭೆಗೊಳ್ಳುತ್ತದೆ ? ವಾಸ್ತವವಾಗಿ, ಅಂತಹ ಪ್ರವೃತ್ತಿಯು, ಮಾನಸಿಕ ಶಾಂತಿಯನ್ನು ಕದಡುವ ಅಸೂಯೆ, ಮುಂತಾದುದನ್ನು ನಿರ್ಮೂಲಮಾಡಿ, ಮಾನಸಿಕ ಶಾಂತಿಯನ್ನು ಉಂಟುಮಾಡುತ್ತದೆ.

ನಾಲ್ಕನೆಯ ಗುಣ "ಶುದ್ಧತೆ." ಕೊಳೆಯಾದ ಬಟ್ಟೆಗಳನ್ನು ಧರಿಸದವನನ್ನು ಅಥವಾ ಅನೇಕ ದಿನಗಳಿಂದಲೂ ಸ್ನಾನವೇ ಮಾಡದಿರುವನ್ನು ನಾವು ಎದುರಿಸಿದಾಗ, ಅವನಿಂದ ಹೊರಡುವ ದುರ್ಗಂಧವು ನಮ್ಮನ್ನು ದೂರ ಹೋಗುವಂತೆ ಮಾಡುತ್ತದೆ. ಆದರೆ, ದುರ್ಗಂಧವನ್ನು ಹೊರಹೊಮ್ಮಿಸುವ ವ್ಯಕ್ತಿಯು, ಅದನ್ನು ತಿಳಿದಿರುವುದಿಲ್ಲ. ಅದೇ ರೀತಿ, ಸಾರ್ವಜನಿಕ ಸ್ಥಳಗಳಲ್ಲಿ ಉಗುಳುವ ಅಭ್ಯಾಸವನ್ನು ಕೆಲವರು ಹೊಂದಿರುತ್ತಾರೆ. ಅಂತಹ ಅಭ್ಯಾಸಗಳು ಅಸಹ್ಯಕರ ಮಾತ್ರವಲ್ಲದೇ, ಅನಾರೋಗ್ಯಕರವೂ ಹೌದು. ಆದ್ದರಿಂದ, ಪ್ರತಿದಿನವೂ ಸ್ನಾನ ಮಾಡಿ, ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಶುಚಿತ್ವವು ಶುದ್ಧತೆಯ ಪ್ರಧಾನ ಅಂಗ.

ಐದನೆಯ ಅವಶ್ಯವಾದ ಗುಣವೆಂದರೆ "ಆಲಸ್ಯವಿಲ್ಲದಿರುವಿಕೆ". ತಮ್ಮ ಕೆಲಸವನ್ನು ಮಾಡಲಾಗದಿರುವುದಕ್ಕೆ, ಜನರು ಅನೇಕ ಕಾರಣಗಳನ್ನು ಕೊಡುತ್ತಾರೆ. ಕೆಲಸವನ್ನು ಕೊಡುವ ಯಾವ ವ್ಯಕ್ತಿಯೂ ಸಹ ಅಲಸಿಯಾದ ಕಾರ್ಮಿಕನ ವಿಷಯದಲ್ಲಿ ಸಂತೋಷಪಡುವುದಿಲ್ಲ. ಅಧ್ಯಯನವನ್ನು ಮುಂದಕ್ಕೆ ಹಾಕುವ ವಿದ್ಯಾರ್ಥಿಯು, ತನ್ನ ಅಧ್ಯಯನದಲ್ಲಿ ಸಮರ್ಪಕವಾಗಿರುವುದಿಲ್ಲ. ತನ್ನ ಕರ್ತವ್ಯಗಳನ್ನು ಸರಿಯಾದ ಸಮಯಕ್ಕೆ ಮಾಡುವ ನಿಷ್ಠೆಯುಳ್ಳ ವ್ಯಕ್ತಿಯ ಮನಸ್ಸು ಆಲಸ್ಯ ಅಥವಾ ಅಹಿತಕರವಾದ ಯೋಚನೆಗಳಲ್ಲಿ ಮಗ್ನವಾಗುವುದಕ್ಕೆ ಅವಕಾಶವಿರುವುದಿಲ್ಲ. ಆದ್ದರಿಂದ ಆಲಸ್ಯವನ್ನು ಬಿಟ್ಟು ಚಟುವಟಿಕೆಯಲ್ಲಿ ಮಗ್ನವಾಗುವುದು ಶ್ರೇಯಸ್ಕರ.

ಆರನೆಯ ಉತ್ತಮ ಗುಣ– "ಶುಭ". ನಾವು ಯಾರನ್ನಾದರೂ ಸಂಧಿಸಿದಾಗ, ಅವರ ಮಾತುಗಳಾಗಲೀ ಅಥವಾ ಮುಖ ಭಾವಗಳಾಗಲೀ, ಸಂತೋಷದಾಯಕವಾಗಿರುವುದಿಲ್ಲವೆಂಬುದನ್ನು ಗಮನಿಸುತ್ತೇವೆ. ಆ ರೀತಿ ಇರಬಾರದು. ನಾವು

Sri Vidyabharathi Book Centre, Sringeri

CC-O. In Public Domain. Digitized by eGangotri

ಇತರರಿಗೆ ಹಿತವಾಗುವ ರೀತಿಯಲ್ಲಿ ಮಾತನಾಡಬೇಕು ಮತ್ತು ನಡೆಯಬೇಕು. ಉದಾಹರಣೆಗೆ, ಹಿರಿಯರನ್ನೊ ಅಥವಾ ದೊಡ್ಡ ವ್ಯಕ್ತಿಯನ್ನೋ ನೋಡಿದಾ "ಕುಳಿತುಕೊಳ್ಳಿ" ಎಂದು ಒರಟಾಗಿ ಹೇಳುವುದಕ್ಕಿಂತ, ಮರ್ಯಾದೆಯಾಗಿ ಆಸನ ವನ್ನು ಕೊಟ್ಟು, ಕುಳಿತುಕೊಳ್ಳುವಂತೆ ಇವರನ್ನು ಆಹ್ವಾನಿಸಬೇಕು. ಉಚಿತವಾಗಿ ಮಾತನಾಡುವುದು ಕೇಳುವುದಕ್ಕೆ ಹಿತವಾಗಿರುವುದು ಮಾತ್ರವಲ್ಲದೆ, ವಾಸ್ತವ ವಾಗಿಯೂ ಇರುತ್ತದೆ. ಮನುವು ಹೇಳುತ್ತಾನೆ– "ಸತ್ಯವನ್ನು ಹೇಳು ; ಹಿತ ವಾದುದನ್ನು ಹೇಳು ; ಅಪ್ರಿಯವಾದ ಸತ್ಯವನ್ನು ಹೇಳಬೇಡ ; ಪ್ರಿಯವಾಗಿ ದ್ದರೂ, ಅನೃತವನ್ನು ಹೇಳಬೇಡ : ಇದೇ ಸನಾತನವಾದ ಧರ್ಮ." ಭಗ ವಂತನು ಅರ್ಜುನನಿಗೆ ಉಪದೇಶಿಸಿದ– "ತೊಂದರೆಯನ್ನುಂಟು ಮಾಡಿದ ಮಾತು ಸತ್ಯವಾದುದು, ಹಿತವಾದುದು ಮತ್ತು ಉಪಕಾರಕವಾದುದು ; ಶಾಸ್ತ್ರಗಳ ಅಧ್ಯಯ ನದ ಅಭ್ಯಾಸವು ಮಾತುಗಳಲ್ಲಿ ಮಿತವನ್ನುಂಟು ಮಾಡುತ್ತದೆ". ಅಂತಹ ಮಿತ ವಾದ ಮಾತುಗಾರಿಕೆಯು ವ್ಯಕ್ತಿಯನ್ನು ಪವಿತ್ರಗೊಳಿಸುತ್ತದೆ.

ವಿಹಿತವಾದ ಏಳನೆಯ ಗುಣ– "ಜಿಪುಣತೆ ಇಲ್ಲದಿರುವುದು". ಶೇಖರಿಸುವ ಪ್ರವೃತ್ತಿ ಮತ್ತು ಯಾವುದನ್ನೂ ಇನ್ನೊಬ್ಬರಿಗೆ ದಾನ ಮಾಡದಿರುವುದು ದುರಾಸೆಯ ಫಲ. ಆಸೆ, ಕೋಪ ಮತ್ತು ದುರಾಸೆ–ಇವು ನರಕದ ಮೂರು ಬಾಗಿಲುಗಳು ಎಂದು ಕೃಷ್ಣನು ಹೇಳಿದ್ದಾನೆ. ಕೂಡಿಡುವುದು ನಮಗೆ ಯಾವತ್ತೂ ಒಳ್ಳೆಯ ದನ್ನು ಮಾಡುವುದಿಲ್ಲ ಮತ್ತು ನಾವು ಮೃತರಾದಾಗ, ನಮ್ಮ ಜೊತೆಯಲ್ಲಿ ಹಣ ವನ್ನು ಒಯ್ಯಲಾಗುವುದಿಲ್ಲ.

ನೀಲಕಂಠ ದೀಕ್ಷಿತರು ಹಾಸ್ಯಮಯವಾಗಿ ಉಪದೇಶಿಸುತ್ತಾರೆ– "ನೀನು ಮೃತನಾದ ನಂತರವೂ ನಿನ್ನ ಸಂಪತ್ತನ್ನು ಬಿಡಬಾರದು ಮತ್ತು ಅದನ್ನು ಒಂದು ಮೂಟೆಮಾಡಿ ನಿನ್ನ ತಲೆಯ ಮೇಲೆ ಹೊತ್ತು ಕೊಂಡು ಹೋಗಬೇಕೆಂದು ನೀನು ಇಚ್ಛಿಸುವುದಾದರೆ, ಅದನ್ನು ಸತ್ಪಾತ್ರರಿಗೆ ಕೊಡು" –ಎಂದು. ರೂಪಾಯಿನ ನೋಟು ಗಳನ್ನು ಮುಂದಿನ ಲೋಕಕ್ಕೆ ತೆಗೆದುಕೊಂಡು ಹೋಗಲು ಆಗುವುದಿಲ್ಲ. ಇದಕ್ಕೆ ಬದಲಾಗಿ, ಜಿಪುಣನು ದಾನ ಮಾಡಿ ಅವುಗಳನ್ನು ಪುಣ್ಯದರೂಪದಲ್ಲಿ ಪರಿವರ್ತಿಸಿ ಕೊಂಡರೆ, ಸಾವಿನ ನಂತರ, ಅದನ್ನು ಕಳೆದುಕೊಳ್ಳುತ್ತೇನೆಂದು ಭಯಪಡಬೇಕಾ ಗಿಲ್ಲ. ಪುಣ್ಯವು ಮುಂದಿನ ಲೋಕಕ್ಕೆ ಅವನನ್ನು ಹಿಂಬಾಲಿಸುತ್ತದೆ.

ಸತ್ಪಾತ್ರರಿಗೆ ದಾನ ಕೊಡುವುದನ್ನು ದುರಾಸೆಗೆ ಪ್ರತ್ಯಾಮ್ನಾಯವೆಂದು ಶಾಸ್ತ್ರಗಳು ವಿಧಿಸುತ್ತವೆ. ಆದ್ದರಿಂದ, ದಾನವು, ಇತರರಿಗೆ ಸಂತೋಷವನ್ನುಂಟು ಮಾಡುವುದಲ್ಲದೆ, ದಾತೃವಿನ ಆಧ್ಯಾತ್ಮಿಕ ಉನ್ನತಿಗೂ ಸಹಾಯಕವಾಗುತ್ತದೆ. ಒಬ್ಬನು ಸ್ವಲ್ಪ ಹಣವನ್ನು ಕಳೆದುಕೊಂಡರೆ, ದುಃಖಪಡುತ್ತಾನೆ. ಆದರೆ, ಅದೇ

Sri Vidyabharathi Book Centre, Sringeri

CC-O. In Public Domain. Digitized by eGangotri

ವ್ಯಕ್ತಿಯು, ಪರೀಕ್ಷೆಗೆ ಶುಲ್ಕವನ್ನು ಕಟ್ಟಲಾರದ ಬಡವಿದ್ಯಾರ್ಥಿಗೆ ಕೊಟ್ಟಾಗ, ದುಃಖಪಡದೆ, ಸಂತೋಷಪಡುತ್ತಾನೆ. ದಾನವು ಕೇವಲ ದಾನ ತೆಗೆದುಕೊಳ್ಳುವವನನ್ನು ಮಾತ್ರವಲ್ಲದೆ, ದಾತೃವಿಗೂ ಸಂತೋಷವನ್ನುಂಟು ಮಾಡುತ್ತದೆ.

ಪ್ರತಿನಿತ್ಯವೂ ಒಂದು ತರಕಾರಿಯನ್ನು ದಾನಮಾಡುವಂತೆ ಸಾಧುವೊಬ್ಬನು ಓರ್ವವ್ಯಕ್ತಿಗೆ ಉಪದೇಶಿಸಿದನು ಮತ್ತು ಆ ರೀತಿ ಮಾಡುವುದರಿಂದ ಬಹುಪುಣ್ಯವನ್ನು ಗಳಿಸುತ್ತೀಯೆಂದೂ ಹೇಳಿದನು. ಆ ವ್ಯಕ್ತಿಯು ಆ ಉಪದೇಶವನ್ನು ಬಹು ನಿಷ್ಠೆಯಿಂದ ಪಾಲಿಸಿದನು. ಮರಣದ ನಂತರ, ಅವನು ಒಂದು ರಾಜಕುಟುಂಬದಲ್ಲಿ ಜನ್ಮವೆತ್ತಿದನು ಮತ್ತು ಕಾಲಾಂತರದಲ್ಲಿ ರಾಜನಾದನು. ತನ್ನ ಹಿಂದಿನ ಜನ್ಮದಲ್ಲಿ ಏನು ಮಾಡಿದ್ದನೆಂಬುದನ್ನು ಸ್ಮರಿಸುವ ಶಕ್ತಿ ಅವನಿಗೆ ಇದ್ದಿತು. ಆದ್ದರಿಂದ, ಪ್ರತಿನಿತ್ಯವೂ ಒಂದು ತರಕಾರಿ ದಾನ ಮಾಡುವುದನ್ನು ಅವನು ಮುಂದುವರೆಸಿದನು. ಆಶ್ಚರ್ಯವೇನೆಂದರೆ, ಮರಣದ ನಂತರ ಅವನು ಓರ್ವ ಭಿಕ್ಷುಕನಾಗಿ ಹುಟ್ಟಿದನು. ಈ ರೀತಿಯಾದುದಕ್ಕೆ ಕಾರಣವನ್ನು ಊಹಿಸಲಾಗದೆ, ತನಗೆ ಹಿಂದೆ ಅನುಗ್ರಹ ಮಾಡಿದ್ದ ಸಾಧು ಪುರುಷನನ್ನು ಆ ವ್ಯಕ್ತಿಯು ಕೇಳಿದನು. ರಾಜನಾಗುವುದಕ್ಕೆ ಮೊದಲು ಅವನು ಅತ್ಯಂತ ಬಡವನಾಗಿದ್ದುದು ಮತ್ತು ಆ ಸ್ಥಿತಿಯಲ್ಲಿದ್ದ ಅವನು ಪ್ರತಿನಿತ್ಯವೂ ತರಕಾರಿಯೊಂದನ್ನು ದಾನ ಮಾಡುವುದು, ಬಹು ಪುಣ್ಯವನ್ನು ಸಂಪಾದಿಸುವುದಕ್ಕೆ ಸಾಕಾಗಿದ್ದಿತೆಂದು ಅವನು ಸಾಧುವಿನಿಂದ ತಿಳಿದನು. ರಾಜನಾಗಿದ್ದಾಗ ಅವನಲ್ಲಿ ಶ್ರೀಮಂತಿಕೆ ಇದ್ದಿತು. ಆದ್ದರಿಂದ, ಅವನು ಕೇವಲ ಒಂದು ತರಕಾರಿಯನ್ನು ದಾನಮಾಡುವುದು ಪುಣ್ಯ ಶೇಖರಣೆಗೆ ಸಾಲದಾಗಿತ್ತು. ಆಗ ಆ ಮನುಷ್ಯನು ಪುಣ್ಯವನ್ನು ಸಂಪಾದಿಸುವುದಕ್ಕೆ ದಾನ ಮಾಡುವುದು ವ್ಯಕ್ತಿಯ ಸಂಪತ್ತಿನ ಸ್ಥಿತಿಯನ್ನವಲಂಬಿಸಿರುತ್ತದೆ ಎಂಬುದನ್ನು ತಿಳಿದನು.

ಎಂಟನೆಯದಾದ ಕೊನೆಯ ಗುಣ "ವೈರಾಗ್ಯ". ವ್ಯಾವಹಾರಿಕ ಆಸಕ್ತಿಗಳಿಂದಲೇ ನಮ್ಮ ಅನೇಕ ಸಮಸ್ಯೆಗಳು ಉದ್ಭವಿಸುತ್ತವೆ. ಪಂಚದಶಿಯಲ್ಲಿ ಹೇಳಿದೆ– "ಯಾರು ಆಸಕ್ತರಾಗಿರುತ್ತಾರೋ ಅವರು ಪ್ರಾಪಂಚಿಕ ವಿಷಯಗಳಲ್ಲಿ ಬದ್ಧರಾಗುತ್ತಾರೆ. ಅಸಂಗನಾಗಿರುವವನು ಸಂತೋಷವನ್ನು ಅನುಭವಿಸುತ್ತಾನೆ. ಆದ್ದರಿಂದ, ಸಂತೋಷವಾಗಿರಲು ಅಪೇಕ್ಷಿಸುವವನು ಯಾವಾಗಲೂ ರಾಗವನ್ನು ತ್ಯಜಿಸಬೇಕು." ಯಾವ ರೀತಿಯ ಆಸಕ್ತಿಯೂ ಇಲ್ಲದೆ ಕೆಲಸಗಳನ್ನು ಚೆನ್ನಾಗಿ ಮಾಡಲು, ಮತ್ತು ತನ್ನ ಕರ್ತವ್ಯಗಳನ್ನು ನಿರ್ವಹಿಸಲು ನಿಶ್ಚಿತವಾಗಿಯೂ ಸಾಧ್ಯವಾಗುತ್ತದೆ. ವಾಸ್ತವವಾಗಿ, ಆಸಕ್ತಿಯು ಚೆನ್ನಾಗಿ ಕೆಲಸ ಮಾಡುವುದಕ್ಕೆ ಬಾಧಕವಾಗುತ್ತದೆ. ಸಾಮಾನ್ಯವಾಗಿ, ಶಸ್ತ್ರಚಿಕಿತ್ಸಕ ವೈದ್ಯರು ತಮ್ಮ ಸಂಬಂಧಿಗಳಿಗೆ ಶಸ್ತ್ರ ಚಿಕಿತ್ಸೆಯನ್ನು ಮಾಡುವುದಿಲ್ಲ. ನಮ್ಮವನು ಎಂಬ ಆಸಕ್ತಿಯ ಭಾವನೆಯು ಅಪಾಯ

Sri Vidyabharathi Book Centre, Sringeri

CC-O. In Public Domain. Digitized by eGangotri

ವಿಲ್ಲದಿದ್ದರೆ, ಅಥವಾ ಕೆಲಸದ ತಡೆಯಾಗದಿದ್ದರೆ, ಆ ರೀತಿಯ ಪ್ರಸಂಗವಾಗು ತ್ತಿರಲಿಲ್ಲ.

ಆತ್ಮವು ದೇಹಕ್ಕಿಂತ ಬೇರೆಯಾದುದು

ಬಾದರಾಯಣರು ಬ್ರಹ್ಮ ಸೂತ್ರಗಳನ್ನು ರಚಿಸಿರುತ್ತಾರೆ. ಇದರಲ್ಲಿ ನಾಲ್ಕು ಅಧ್ಯಾಯಗಳಿವೆ–ಸಮನ್ವಯ, ಅವಿರೋಧ, ಸಾಧನ ಮತ್ತು ಫಲ ಎಂದು.

ಮೂರನೇ ಅಧ್ಯಾಯದ ಮೂರನೇ ಪಾದದ 53ನೇ ಸೂತ್ರದಲ್ಲಿ ದೇಹಕ್ಕಿಂತ ಭಿನ್ನವಾದ ಆತ್ಮವೆಂಬುದು ಇಲ್ಲ ಎಂದು ವಿರೋಧಿಯ ಅಭಿಪ್ರಾಯವನ್ನು ಮಂಡಿಸ ಲಾಗಿದೆ ; 54ನೇ ಸೂತ್ರದಲ್ಲಿ ಈ ಅಭಿಪ್ರಾಯವನ್ನು ಖಂಡನೆ ಮಾಡಲಾಗಿದೆ. ಈ ಎರಡೂ ಸೂತ್ರಗಳನ್ನು ವಿವರವಾಗಿ ಪರಿಶೀಲಿಸೋಣ. ವಿರೋಧಿಯ ಅಭಿಪ್ರಾಯ ವನ್ನು ಹೀಗೆ ತಿಳಿಸಲಾಗಿದೆ— "ಕೆಲವರು ಆತ್ಮದ ಅಸ್ತಿತ್ವವನ್ನು ತಿರಸ್ಕರಿಸುತ್ತಾರೆ ; ಏಕೆಂದರೆ, ದೇಹದ ಅಸ್ತಿತ್ವದ ಮೇಲೆ ಅದರ ಅಸ್ತಿತ್ವವು ಅವಲಂಬಿಸಿರುತ್ತದೆ."

ಬಾದರಾಯಣರು ಈ ಅಧಿಕರಣದಲ್ಲಿ ಆತ್ಮವು ದೇಹಕ್ಕಿಂತ ಬೇರೆಯಾದುದು ಎಂಬುದನ್ನು ದೃಢಪಡಿಸುತ್ತಾರೆ ; ದೇಹಕ್ಕಿಂತ ವ್ಯತಿರಿಕ್ತವಾದ ಆತ್ಮವು ಇಲ್ಲವೆಂದಾ ದರೆ, ಪರಲೋಕದಲ್ಲಿ ಹೊಂದಬಹುದಾದ ಫಲಗಳ ವಿಷಯದಲ್ಲಿ ಉಪದೇಶ ನೀಡು ವುದಕ್ಕೆ ಯಾವ ಆಧಾರವೂ ಇರುವುದಿಲ್ಲ. ಮತ್ತೂ, ಬೇರೆಯಾದ ಆತ್ಮವು ಇಲ್ಲ ದಿರುವುದಾದರೆ, ಆತ್ಮವು ವಾಸ್ತವವಾಗಿ ಬ್ರಹ್ಮದೊಡನೆ ಅಭಿನ್ನ ಎಂಬುದನ್ನು ಹೇಗೆ ತಾನೆ ಹೇಳುವುದು ? ಆತ್ಮದ ಅಸ್ತಿತ್ವದ ವಿಷಯದಲ್ಲಿ ಸಂದೇಹವನ್ನು ಆದರಿಸಿ ಈ ಸೂತ್ರವು ಹೊರಟಿದೆ. ಇದರ ಉದ್ದೇಶವೇನೆಂದರೆ, ಸಂಶಯವನ್ನು ಎತ್ತಿದ ನಂತರ ಅದನ್ನು ಖಂಡನೆ ಮಾಡುವುದರಿಂದ, ಪ್ರಕೃತದ ವಸ್ತುವಿನ ವಿಷಯದಲ್ಲಿ ದೃಢ ವಾದ ನಂಬಿಕೆಯುಂಟಾಗುತ್ತದೆ.

ವಿರೋಧಿಯ ಅಭಿಪ್ರಾಯವು ಹೀಗಿದೆ— ವ್ಯಷ್ಟಿರೂಪದಲ್ಲಾಗಲೀ, ಸಮಷ್ಟಿ ರೂಪದಲ್ಲಾಗಲೀ ತೆಗೆದುಕೊಂಡಾಗ ಪೃಥಿವಿಯೇ ಮುಂತಾದ ಬಾಹ್ಯ ವಸ್ತುಗಳಿಗೆ ಚೈತನ್ಯ ಸಂಬಂಧಿಸಿದುದಲ್ಲವೆಂಬುದು ಕಂಡುಬರುತ್ತದೆ. ಆದರೂ, ಚೈತನ್ಯವು ದೇಹದ ರೂಪದಲ್ಲಿ ಪರಿವರ್ತಿತವಾದ ಮೂಲ ಅಂಶಗಳಿಗೆ ಸಂಬಂಧಿಸಿರಬಹುದು. ದೇಹವ್ಯತಿರಿಕ್ತವಾಗಿ ಆತ್ಮವು ಇರಲು ಸಾಧ್ಯವಿಲ್ಲ ; ಏಕೆಂದರೆ, ದೇಹವೇ ಆತ್ಮವಾಗಿರು ತ್ತದೆ. ವಿರೋಧಿಯು ಇದಕ್ಕೆ ಕೊಡುವ ಕಾರಣವೇನೆಂದರೆ — "ಅದರ ಅಸ್ತಿತ್ವವು ದೇಹವನ್ನು ಅವಲಂಬಿಸಿರುತ್ತದೆ." ಯಾವುದರ ಅಸ್ತಿತ್ವವು ಮತ್ತೊಂದರ ಅಸ್ತಿತ್ವ ವನ್ನವಲಂಬಿಸಿರುತ್ತದೋ ಮತ್ತು ಅದು ಇಲ್ಲದಾಗ ಇದೂ ಇರುವುದಿಲ್ಲವೋ,

Sri Vidyabharathi Book Centre, Sringeri

CC-O. In Public Domain. Digitized by eGangotri

ಅದನ್ನು ಎರಡನೆಯದರ ವಿಶೇಷಣ ಎಂದು ಪರಿಗಣಿಸಲಾಗಿದೆ. ಉದಾಹರಣೆಗೆ— ಉಷ್ಣತೆ ಮತ್ತು ಬೆಳಕು ಬೆಂಕಿಯ ಗುಣಗಳೆಂಬುದಾಗಿ ಕಂಡುಬರುತ್ತದೆ ; ಏಕೆಂದರೆ ಅವುಗಳ ಅಸ್ತಿತ್ವವು ಬೆಂಕಿಯನ್ನವಲಂಬಿಸಿರುತ್ತದೆ. ಶ್ರದ್ಧೆಯುಳ್ಳವರು ಆತ್ಮಕ್ಕೆ ಸಂಬಂಧಿಸಿದುದು ಎಂದು ಅಂಗೀಕರಿಸುವ ಸ್ಮೃತಿಯೇ ಮುಂತಾದ ಇತರ ಗುಣಗಳ ವಿಷಯದಲ್ಲಿ, ಇವುಗಳೂ ಸಹ ದೇಹದಲ್ಲಿ ಕಂಡು ಬರುತ್ತವೆಯೇ ಹೊರತು ಹೊರಗಲ್ಲ ಎಂದು ವಿರೋಧಿಯು ಹೇಳುತ್ತಾನೆ. ದೇಹಕ್ಕೆ ವ್ಯತಿರಿಕ್ತವಾದ ಯಾವ ಪದಾರ್ಥ ವನ್ನೂ ಪ್ರಮಾಣೀಕರಿಸಲಾಗದಿರುವಾಗ, ಇವೆಲ್ಲವೂ ದೇಹದ ಗುಣಗಳೆಂದೇ ತೆಗೆದು ಕೊಳ್ಳಬೇಕು. ಆದ್ದರಿಂದ ಆತ್ಮವು ದೇಹಕ್ಕೆ ವ್ಯತಿರಿಕ್ತವಾದುದಲ್ಲ.

ಈ ಪರಿಸ್ಥಿತಿಯಲ್ಲಿ ಸೂತ್ರಕಾರರ ಉತ್ತರ ಇದು— "ಆದರೆ, ಇದು ಹೀಗಲ್ಲ. ಆತ್ಮ ಮತ್ತು ದೇಹದಲ್ಲಿ ಭೇದವಿದ್ದೇ ಇದೆ ; ಏಕೆಂದರೆ, ಪ್ರತ್ಯಕ್ಷದಲ್ಲಿನಂತೆ, ದೇಹ ವಿದ್ದರೂ ಸಹ ಚೈತನ್ಯವಿಲ್ಲದಿರಬಹುದು.

ಆತ್ಮವು ದೇಹದೊಡನೆ ಅಭಿನ್ನವಲ್ಲ ; ಏಕೆಂದರೆ, ದೇಹವಿದ್ದರೂ ಸಹ ಚೈತನ್ಯ ವಿಲ್ಲದಿರಬಹುದು. ಮುಂತಾದುವುಗಳ ಗುಣಗಳು ದೇಹಕ್ಕೆ ಸೇರಿದವು, ಏಕೆಂದರೆ ದೇಹವನ್ನು ನೋಡಿದಾಗ ಅವೂ ಕಂಡುಬರುತ್ತವೆ. ಎಂದು ಅನುಮಾನ ಮಾಡುವು ದಾದರೆ, ಅವು ಗುಣಗಳಲ್ಲ, ಏಕೆಂದರೆ, ದೇಹವನ್ನು ನೋಡಿದಾಗ, ಅವು ಕಾಣದಿರ ಬಹುದು, ಎಂದು ಏಕೆ ಹೇಳಬಾರದು ?

ಚೈತನ್ಯವೇ ಮುಂತಾದ ಗುಣಗಳು ಮೃತ ದೇಹಗಳಲ್ಲಿ ಕಂಡಬರುವುದಿಲ್ಲ. ಮತ್ತು, ಮನುಷ್ಯನು ಬದುಕಿರುವಾಗ ಚೈತನ್ಯವೇ ಮುಂತಾದುವುಗಳ ಇರುವಿಕೆ ಯನ್ನು ನಿಶ್ಚಯಿಸುವುದಕ್ಕೆ ಸಾಧ್ಯವಾದರೂ, ಮರಣದ ನಂತರ ಅವುಗಳ ಇಲ್ಲದಿರು ವಿಕೆಯನ್ನು ನಿಶ್ಚಯಾತ್ಮಕವಾಗಿ ತಿಳಿಯಲು ಸಾಧ್ಯವಿಲ್ಲ. ಏಕೆಂದರೆ, ಈ ದೇಹವು ಬಿದ್ದನಂತರವೂ, ಮತ್ತೊಂದು ದೇಹಕ್ಕೆ ವರ್ಗವಾಗುವುದರ ಮೂಲಕ ಇವು ಇರ ಬಹುದು. ಇದು ಸಂಪೂರ್ಣವಾಗಿ ಪ್ರಮಾಣಿತವಾಗದಿದ್ದರೂ ಸಹ, ಚೈತನ್ಯ ದೇಹದ ಗುಣವೆಂದು ನಿರ್ಧಾರಮಾಡುವ ವಿರೋಧಿಯ ಪಕ್ಷವನ್ನು ಖಂಡನೆಮಾಡಲು ಸಾಕು.

ಮತ್ತೂ, ನಾಲ್ಕು ಮಹಾಭೂತಗಳನ್ನು ಬಿಟ್ಟು ನಾಸ್ತಿಕನು ಮತ್ತಾವುದನ್ನೂ ಅಂಗೀಕರಿಸುವುದಿಲ್ಲ. ಹಾಗಾದರೆ, ಚೈತನ್ಯದ ವಿಷಯದಲ್ಲಿ ಅವನ ಅಭಿಪ್ರಾಯ ವೇನು ? ಮಹಾಭೂತ ಮತ್ತು ಅವುಗಳಿಂದ ಜನ್ಯವಾದವುಗಳ ಸಾಕ್ಷಾತ್ಕಾರನೇ ಚೈತನ್ಯವೆಂದು ಅವನು ಅಂಗೀಕರಿಸುವುದಾದರೆ ?

Sri Vidyabharathi Book Centre, Sringeri

CC-O. In Public Domain. Digitized by eGangotri

ಅದು ಮಹಾಭೂತಗಳ ಗುಣವಾಗುವುದಿಲ್ಲವೆಂದು ನಾವು ಹೇಳುತ್ತೇವೆ; ಏಕೆಂದರೆ, ವಸ್ತುವೊಂದು ತನ್ನ ವಿಷಯದ ಮೇಲೇ ಕಾರ್ಯಮಾಡಲು ಸಾಧ್ಯವಿಲ್ಲ. ರೂಪವು ರೂಪದಿಂದ ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲದಿರುವಂತೆ, ಮಹಾಭೂತಗಳ ಗುಣವನ್ನು ಮಹಾಭೂತಗಳು ಸಾಕ್ಷಾತ್ಕರಿಸಿಕೊಳ್ಳಲು ಸಾಧ್ಯವಿಲ್ಲ. ಆದ್ದರಿಂದ, ಮಹಾಭೂತಗಳ ಮತ್ತು ಅವುಗಳ ಗುಣಗಳ ದರ್ಶನವು ಅಂಗೀಕೃತವಾಗಿರುವಂತೆ, ಚೈತನ್ಯವು ಅದಕ್ಕಿಂತ ಬೇರೆಯಾದುದು ಎಂಬುದನ್ನು ಅಂಗೀಕರಿಸಲೇಬೇಕು.

ನಮ್ಮ ಸಂಪ್ರದಾಯದಂತೆ, ಚೈತನ್ಯ ಸ್ವರೂಪವಾಗಿರುವ ಆತ್ಮವು ದೇಹಕ್ಕಿಂತ ಬೇರೆಯಾದುದು. ಚೈತನ್ಯವು ನೈಸರ್ಗಿಕವಾಗಿ ಸಮಾನವಾಗಿರುವುದರಿಂದ, ಅದು ನಿತ್ಯ. "ಇದನ್ನು ನೋಡಿದವನು ನಾನು" ಎಂದು ಮುಂತಾದ ಅನುಭವಗಳು ವಿವಿಧ ಅವಸ್ಥೆಗಳ ಸಾಕ್ಷಾತ್ಕರ್ತೃವೆಂದು ಚೈತನ್ಯದ ಅಭಿನ್ನತೆಯನ್ನು ದೃಢಪಡಿಸುತ್ತವೆ.

ದೀಪ ಮತ್ತು ಇತರ ಸಹಾಯಕ ವಸ್ತುಗಳಿದ್ದಾಗ ಪ್ರತ್ಯಕ್ಷವುಂಟಾಗುತ್ತದೆ ಮತ್ತೆ, ಇವುಗಳಿಲ್ಲದಿದ್ದಾಗ ಪ್ರತ್ಯಕ್ಷವುಂಟಾಗುವುದಿಲ್ಲ. ಇದರಿಂದ, ಪ್ರತ್ಯಕ್ಷವು ದೀಪದ ಒಂದು ಗುಣ ಎಂದು ಸಿದ್ಧವಾಗುವುದಿಲ್ಲ. ಹೀಗಿರುವಾಗ, ದೇಹವಿರುವಾಗ ಮಾತ್ರ ಅದು ಇರುತ್ತದೆ ಎಂಬ ಕಾರಣದಿಂದ ಚೈತನ್ಯವು ದೇಹದ ಒಂದು ಗುಣವೆಂದು ಅನುಮಾನ ಮಾಡಲಾಗುವುದಿಲ್ಲ. ದೇಹವು ಉದಾಹರಣೆಯಲ್ಲಿನ ದೀಪದಂತೆ ಇರಬಹುದು. ಅದಲ್ಲಿದೆ, ಪ್ರತ್ಯಕ್ಷಕ್ಕೆ ದೇಹವೇ ಪ್ರಮುಖ ಕಾರಣವಲ್ಲ, ಏಕೆಂದರೆ, ದೇಹವು ನಿಷ್ಕ್ರಿಯವಾಗಿದ್ದಾಗಲೂ, ಸ್ವಪ್ನದಲ್ಲಿ ಅನೇಕ ಪ್ರತ್ಯಕ್ಷಗಳು ನಡೆಯುವುದು ಕಂಡುಬರುತ್ತದೆ. ಆದ್ದರಿಂದ, ದೇಹಕ್ಕಿಂತ ಬೇರೆಯಾಗಿ ಆತ್ಮದ ಅಸ್ತಿತ್ವವನ್ನು ಅಂಗೀಕರಿಸಬೇಕು.

ಭಕ್ತಿ

ಅದ್ವೈತ ಸಿದ್ಧಿಯ ಪ್ರಸಿದ್ಧ ಕರ್ತೃಗಳಾದ ಮಧುಸೂದನ ಸರಸ್ವತಿಗಳು ಕೃಷ್ಣನ ಭಕ್ತರು. ಅವರು ಅತ್ಯಂತ ಶ್ರೇಷ್ಠಮಟ್ಟದ ಅದ್ವೈತಿಗಳಾಗಿದ್ದರೂ, ಕೃಷ್ಣನ ಮೇಲೆ ಚೇತೋಹಾರಿಯಾದಂತಹ ಸ್ತೋತ್ರಗಳನ್ನು ರಚಿಸುವುದಕ್ಕೆ ಯಾವ ತಡೆಯೂ ಇರಲಿಲ್ಲ.

ಅವರು ಭಕ್ತಿಯಲ್ಲಿ ಮೂರು ಹಂತಗಳನ್ನು ಹೇಳಿದ್ದಾರೆ. ಮೊದಲನೆಯ ಹಂತ, ಭಕ್ತನು ಪರಮಾತ್ಮನ ವಿಷಯದಲ್ಲಿ "ನಾನು ನಿನ್ನವನು" ಎಂಬ ಭಾವನೆಯನ್ನು ಹೊಂದುವುದು. ಬೇರೆ ವಿಧದಲ್ಲಿ ಹೇಳುವುದಾದರೆ, ಭಕ್ತನು ಪರಮಾತ್ಮನಲ್ಲಿ

Sri Vidyabharathi Book Centre, Sringeri

CC-O. In Public Domain. Digitized by eGangotri

ಶರಣಾಗತನಾಗುತ್ತಾನೆ. ಪರಮಾತ್ಮನ ನೈಜ ಭಕ್ತನ ವಿಶಿಷ್ಟವಾದ ಗುಣವೇನೆಂದರೆ, ಅವನು ತನ್ನ ಸೇವೆ ಹಾಗೂ ಭಕ್ತಿಗಾಗಿ ಪರಮಾತ್ಮನಿಂದ ಏನನ್ನೂ ಪ್ರತಿಯಾಗಿ ಅಪೇಕ್ಷಿಸುವುದಿಲ್ಲ.

ಈ ಸಂದರ್ಭದಲ್ಲಿ ಮುಂದಿನ ಈ ಪ್ರಸಂಗವು ಜ್ಞಾಪಕಕ್ಕೆ ಬರುತ್ತದೆ. ಪರಮಾತ್ಮನು ಎಲ್ಲ ಕಡೆಯೂ ಇರುವನೆಂಬ ಪ್ರಹ್ಲಾದನ ನಂಬಿಕೆಯನ್ನು ಪ್ರಮಾಣೀಕರಿಸುವುದಕ್ಕಾಗಿ ಮತ್ತು ಹಿರಣ್ಯಕಶಿಪುವು ತೋರಿಸಿದ ಕಂಭದಲ್ಲೂ ಇದ್ದಾನೆಂದು ತೋರಿಸುವುದಕ್ಕಾಗಿ, ನರಸಿಂಹನ ಅವತಾರರೂಪಯಾಗಿ ಪರಮಾತ್ಮನು ಕಂಭದಿಂದ ಹೊರಬಂದನು. ಪರಮಾತ್ಮನಾದ ನರಸಿಂಹನು ಹಿರಣ್ಯಕಶಿಪುವನ್ನು ಸಂಹರಿಸಿದನು, ಆದರೆ ಅತ್ಯಂತ ಭಯಂಕರವಾಗಿ ಕೋಪದಿಂದಿದ್ದನು. ದೇವತೆಗಳು ಮತ್ತು ಲಕ್ಷ್ಮಿಯೂ ಸಹ ಅವನನ್ನು ಸಮೀಪಿಸಲು ಹೆದರಿದರು. ಆದ್ದರಿಂದ, ಇನ್ನೂ ಹುಡಗನಾದ ಪ್ರಹ್ಲಾದನಿಗೆ ಪರಮಾತ್ಮನನ್ನು ಸಮಾಧಾನಪಡಿಸುವಂತೆ ಹೇಳಿದರು. ಪ್ರಹ್ಲಾದನು ಒಪ್ಪಿ, ನಿರ್ಭಯವಾಗಿ ಕೋಪೋದ್ರಿಕ್ತನಾಗಿದ್ದ ಪರಮಾತ್ಮನನ್ನು ಸಮೀಪಿಸಿ, ಸಾಷ್ಟಾಂಗ ನಮಸ್ಕಾರ ಮಾಡಿದನು. ಕೂಡಲೆ ಪರಮಾತ್ಮನು ಸಮಾಧಾನ ಚಿತ್ತನಾಗಿ, ದಯೆಯಿಂದ ಕೂಡಿ, ಕುಳಿತಿದ್ದ ಸಿಂಹಾಸನದಿಂದ ಎದ್ದು, ಆ ಹುಡುಗನ ಶಿರಸ್ಸಿನ ಮೇಲೆ ತನ್ನ ಕೈಯನ್ನು ಇಟ್ಟನು. ತನ್ನ ಭಕ್ತನ ವಿಷಯದಲ್ಲಿ ಪ್ರಸನ್ನನಾಗಿ, ವರವನ್ನು ಬೇಡುವಂತೆ ಪ್ರಹ್ಲಾದನಿಗೆ ಪರಮಾತ್ಮನು ಹೇಳಿದನು. ಪರಮಾತ್ಮನಿಂದ ತಾನು ಏನನ್ನೂ ಅಪೇಕ್ಷಿಸುವುದಿಲ್ಲವೆಂದು ಪ್ರಹ್ಲಾದನು ಉತ್ತರಿಸಿದನು.

ಭಾಗವತದಲ್ಲಿ ಒಂದು ಸುಂದರವಾದ ಶ್ಲೋಕವಿದೆ ; ಅದರಲ್ಲಿ ಪ್ರಹ್ಲಾದನು ಪರಮಾತ್ಮನಿಗೆ ಹೀಗೆ ಹೇಳುತ್ತಾನೆ– "ಪರಮಾತ್ಮನಿಂದ ಏನನ್ನಾದರೂ ಅಪೇಕ್ಷಿಸುವವನು ಓರ್ವ ವ್ಯಾಪಾರಿ ಮತ್ತು ಅವನು ಪರಮಾತ್ಮನ ಸೇವಕನಲ್ಲ". ಈ ಪ್ರಸಂಗವು ಎರಡು ಅಂಶಗಳನ್ನು ಸೂಚಿಸುತ್ತದೆ– ಒಂದು, ಪರಮಾತ್ಮನ ನೈಜ ಸೇವಕನು ಪರಮಾತ್ಮನಲ್ಲಿ ಶರಣಾಗುವುದನ್ನು ಬಿಟ್ಟು ಬೇರೆ ತಿಳಿದಿರುವುದಿಲ್ಲ. ಈ ಕಾರಣದಿಂದಲೇ ನರಸಿಂಹನನ್ನು ಸಮೀಪಿಸುವುದಕ್ಕೆ ಪ್ರಹ್ಲಾದನಿಗೆ ಯಾವ ಭಯವೂ ಆಗಲಿಲ್ಲ. ಎರಡನೆಯ ಅಂಶವೇನೆಂದರೆ, ಪರಮಾತ್ಮನ ನೈಜವಾದ ಭಕ್ತನು ಪರಮಾತ್ಮನಿಂದ ಏನನ್ನೂ ಅಪೇಕ್ಷಿಸುವುದಿಲ್ಲ. ವಾಸ್ತವವಾಗಿ ಅವನು ಮೋಕ್ಷವನ್ನೂ ಪ್ರಾರ್ಥಿಸುವುದಿಲ್ಲ.

ಶಿವಾನಂದ ಲಹರಿಯ ಒಂದು ಶ್ಲೋಕದಲ್ಲಿ ಶಂಕರರು ಹೇಳುತ್ತಾರೆ– "ಅನಿಷ್ಟವಾದ ಈ ಪ್ರಪಂಚದ ವ್ಯವಹಾರದಿಂದ ನನ್ನನ್ನು ಏತಕ್ಕಾಗಿ ಪಾರುಮಾಡುತ್ತಿಲ್ಲ ಎಂಬುದನ್ನು ಹೇಳು. ... ಈ ... ...ವನ್ನು ಅನುಭವಿಸುವುದು

Sri Vidyabharathi Book Centre, Sringeri

CC-O. In Public Domain. Digitized by eGangotri

ನಿನಗೆ ಸಂತೋಷವನ್ನುಂಟು ಮಾಡುತ್ತದೆ ಎಂಬುದು ಉತ್ತರವಾದರೆ, ಆಗ, ನಾನು ಏನನ್ನು ಸಾಧಿಸಬೇಕಾಗಿತ್ತೋ ಅದನ್ನು ಸಾಧಿಸಿದಂತಾಗುತ್ತದೆ". ಪರಮಾತ್ಮನು ತೃಪ್ತನಾದರೆ, ಅಪೇಕ್ಷಿಸಪಡುವುದಕ್ಕೆ ಬೇರೆ ಇನ್ನಾವುದಿದೆ ?

ಭಕ್ತಿಯಲ್ಲಿನ ಎರಡನೆಯ ಹಂತ–ಪರಮಾತ್ಮನ ವಿಷಯದಲ್ಲಿ "ಅವನು ನನ್ನವನು"–ಎಂಬ ಭಾವನೆ. ಇಲ್ಲಿ ಭಕ್ತನು ಪರಮಾತ್ಮನ ಕ್ಷೇಮದ ಬಗ್ಗೆ ವಾಸ್ತವವಾಗಿ ಚಿಂತಿಸುತ್ತಾನೆ. ಪರಮಾತ್ಮನಿಗೆ ಭಕ್ತನ ರಕ್ಷಣೆ ಬೇಕೆಂಬುದು ಅಭಿಪ್ರಾಯವಲ್ಲ. ಭಕ್ತನ ಮೇಲಿನ ಪ್ರೀತಿಯಿಂದ ಪರಮಾತ್ಮನು ಭಕ್ತನ ವಶವರ್ತಿಯಾಗಿರುವಂತೆ ತೋರ್ಪಡಿಸಿಕೊಳ್ಳುತ್ತಾನೆ.

"ನಾನು ನನ್ನ ಭಕ್ತನ ಅಧೀನ, ಹೇಗೆ ಒಬ್ಬನು ಮತ್ತೊಬ್ಬನ ಅಧೀನದಲ್ಲಿರುತ್ತಾನೋ ಹಾಗೆ" –ಎಂದು ಭಾಗವತದ ಒಂದು ಶ್ಲೋಕದಲ್ಲಿ ಭಗವಂತನು ಸ್ಪಷ್ಟವಾಗಿ ಪ್ರತಿಜ್ಞೆ ಮಾಡಿದ್ದಾನೆ. ಕೃಷ್ಣನ ಮೇಲಿನ ಯಶೋದೆಯ ಪ್ರೀತಿಯು "ಅವನು ನನ್ನವನು" ಎಂಬ ಭಕ್ತಿಯ ಉದಾಹರಣೆ. ಅವಳಿಗೆ ಕೃಷ್ಣನು ಅವಳ ಪ್ರೀತಿ ಪಾತ್ರ ಮಗುವೇ ಹೊರತು ಪರಮಾತ್ಮನಲ್ಲ. ಕೃಷ್ಣನೂ ಮಾತೃಪ್ರೇಮದಿಂದ ಬಹು ಆನಂದಿತನಾಗಿ, ತಾನು ಪರಬ್ರಹ್ಮಸ್ವರೂಪನೆಂಬ ಜ್ಞಾನವು ಅವಳಿಗೆ ಆಗದಿರುವಂತೆ ಮಾಡಿದನು. ಸರ್ವಶಕ್ತನಾಗಿದ್ದರೂ, ಯಶೋದೆಯು ತನ್ನನ್ನು ಕಲ್ಲಿಗೆ ಕಟ್ಟುವುದಕ್ಕೆ ಅವಕಾಶ ಮಾಡಿಕೊಟ್ಟನು.

ಭಕ್ತಿಯಲ್ಲಿನ ಮೂರನೆಯ ಹಂತ "ನಾನು ಅವನೇ" ಎಂಬ ರೀತಿಯ ಪರಮಾತ್ಮನ ವಿಷಯದಲ್ಲಿನ ಭಾವನೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ಅದ್ವೈತದ ಸಾಕ್ಷಾತ್ಕಾರವೇ ಉನ್ನತಮಟ್ಟದ ಭಕ್ತಿ. ಇತರರು ಪರಮಾತ್ಮನ ವಿಷಯದಲ್ಲಿ ಸೂಕ್ಷ್ಮವಾದ ಭೇದವನ್ನು ಪರಿಗಣಿಸಲು ಇಚ್ಛಿಸಿದರೆ, ಈ ಹಂತದ ಭಕ್ತನು ಅದನ್ನೂ ಸಹ ಅಂಗೀಕರಿಸಲು ಇಚ್ಛಿಸುವುದಿಲ್ಲವೆಂಬುದೇ ಕಾರಣ. ಭೇದವು ಸಂಪೂರ್ಣವಾಗಿ ಯಾವಾಗ ನಿವೃತ್ತವಾಗಬಹುದು ? ವಾಸ್ತವವಾಗಿ, ತನಗೂ ಪರಬ್ರಹ್ಮಕ್ಕೂ ಅಭೇದವೆಂದು ಸಾಕ್ಷಾತ್ಕಾರವಾದಾಗ ನಿವೃತ್ತವಾಗುತ್ತದೆ. ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡವನು ತನಗಿಂತ ಬೇರೆಯಲ್ಲ ಎಂದು ಭಗವದ್ಗೀತೆಯಲ್ಲಿ ಕೃಷ್ಣನೇ ಸೂಚಿಸುತ್ತಾನೆ.

ಭಕ್ತನೊಬ್ಬನು ತಾನು ಮಾಡಿದ ಎರಡು ಭಯಂಕರ ಪಾಪಗಳಿಗೆ ಕ್ಷಮೆ ತೋರುವಂತೆ ಕರುಣಾಮಯನಾದ ಪರಮಾತ್ಮನನ್ನು ಪ್ರಾರ್ಥಿಸುತ್ತಾನೆ. ಅವು ಯಾವುವು ?

ತನ್ನ ಹಿಂದಿನ ಯಾವ ಜನ್ಮದಲ್ಲಿಯೂ ಪರಮಾತ್ಮನಿಗೆ ನಮಸ್ಕಾರ ಮಾಡಿಲ್ಲವೆಂದು ಭಕ್ತನು ಹೇಳುತ್ತಾನೆ. ಇದು ಒಂದು ದೊಡ್ಡ ಅಪರಾಧ. ಅವನು

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾವಾಗಲೂ ದೇವರಿಗೆ ನಮಸ್ಕಾರ ಮಾಡಿಲ್ಲವೆಂಬುದನ್ನು ಅವನು ಹೇಗೆ ತಿಳಿದ? ಇದಕ್ಕೆ ಉತ್ತರ ಬಹು ಸರಳ. ಭಕ್ತನ ಅಭಿಪ್ರಾಯದಂತೆ, ದೇವರಿಗೆ ನಮಸ್ಕಾರ ಮಾಡುವುದು ಪುನರ್ಜನ್ಮವಿಲ್ಲದಿರುವುದನ್ನು ದೃಢಪಡಿಸುತ್ತದೆ. ಅವನು ತನ್ನ ಯಾವುದಾದರೂ ಹಿಂದಿನ ಜನ್ಮದಲ್ಲಿ ದೇವರಿಗೆ ನಮಸ್ಕಾರ ಮಾಡಿದ್ದಿದ್ದರೆ, ಅವನು ಹುಟ್ಟುತ್ತಿರಲಿಲ್ಲ. ಅವನು ಜನ್ಮವೆತ್ತಿರುವುದು ದೇವರಿಗೆ ನಮಸ್ಕಾರ ಮಾಡುವುದೆಂಬ ಪವಿತ್ರ ಕಾರ್ಯವನ್ನು ಅವನ ಹಿಂದೆ ಮಾಡಿಲ್ಲವೆಂಬುದನ್ನು ಸೂಚಿಸುತ್ತದೆ.

ಈಗಿನ ಜನ್ಮದಲ್ಲಿ ಅವನು ದೇವರಿಗೆ ನಮಸ್ಕಾರಗಳನ್ನು ಸಲ್ಲಿಸುತ್ತಿದ್ದಾನೆ. ಮತ್ತು ಅದೇ ಅವನ ಎರಡನೆಯ ಅಪರಾಧಕ್ಕೆ ಕಾರಣ. ಈಗ ಅವನು ದೇವರಿಗೆ ನಮಸ್ಕರಿಸುವ ಕಾರಣದಿಂದಲೇ, ನಿಶ್ಚಯವಾಗಿಯೂ ಅವನು ಮತ್ತೊಮ್ಮೆ ಹುಟ್ಟುವುದಿಲ್ಲ. ಆದ್ದರಿಂದ, ಮುಂದೆ ಅವನಿಗೆ ದೇವರಿಗೆ ನಮಸ್ಕಾರ ಮಾಡುವ ಸಂದರ್ಭವೇ ಬರುವುದಿಲ್ಲ. ಮುಂದಿನ ಯಾವುದೇ ಜನ್ಮದಲ್ಲಾಗಲೀ ಅವನು ದೇವರಿಗೆ ವಿಧಿಯಿಲ್ಲದೆ ನಮಸ್ಕಾರ ಮಾಡದಿರುವುದು ಅವನ ಎರಡನೆಯ ಪಾಪ ! ಈ ಎರಡು ಪಾಪಗಳನ್ನು ಕ್ಷಮಿಸಬೇಕು ; ಇದೇ ಅವನ ಪ್ರಾರ್ಥನೆ.

ದೇವರಿಗೆ ನಮಸ್ಕಾರ ಅರ್ಪಿಸುವುದು ಹೇಗೆ ಮುಖ್ಯ ಎಂಬುದನ್ನು ಈ ಪ್ರಾರ್ಥನೆಯು ವಿಶದಪಡಿಸುತ್ತದೆ. ಸಾಮಾನ್ಯವಾಗಿ ನಾವೆಲ್ಲರೂ ಪ್ರತಿನಿತ್ಯವೂ ದೇವರಿಗೆ ನಮಸ್ಕರಿಸುತ್ತೇವೆ, ಆದರೆ, ಕೇವಲ ಅನೌಪಚಾರಿಕವಾಗಿ, ಆದರೆ, ಇದು ಸರಿಯಲ್ಲ. ನಮಸ್ಕಾರವನ್ನು ಅರ್ಪಣೆ ಮಾಡಲು ನಮಗೆ ಸಿಕ್ಕಿರುವ ಅವಕಾಶವನ್ನು ನಾವು ಅಮೂಲ್ಯವಾದುದೆಂದು ತಿಳಿಯಬೇಕು; ಹಾಗೂ ದೇವರ ಅನುಗ್ರಹದಿಂದಲೇ ಎಂದು ಭಾವಿಸಬೇಕು. ಮಾತೃಗರ್ಭದಲ್ಲಿ ಅಸಹಾಯಕರಾಗಿ ನಾವು ಇರುವ ಸಮಯದಿಂದಲೇ ದೇವರು ನಮ್ಮ ಯೋಗಕ್ಷೇಮವನ್ನು ನೋಡಿಕೊಂಡಿದ್ದಾನೆ. ನಮ್ಮ ಎಲ್ಲಾ ವೃತ್ತಿಗಳಿಂದಲೂ ಅವನಿಗೆ ನಮಸ್ಕರಿಸುವುದೇ ನಾವು ಅವನಿಗೆ ಕೃತಜ್ಞತೆಗಳನ್ನು ಸಲ್ಲಿಸುವ ಮಾರ್ಗ.

ನಮ್ಮನ್ನು ದೇವರು ಅಂಗೀಕರಿಸುತ್ತಾನೆಯೇ ? ಏಕೆಂದರೆ ಪಶುಗಳಿಗಿಂತ ಬೇರೆ ರೀತಿಯ ಜೀವನವನ್ನು ನಾವು ನಡೆಸುತ್ತಿದ್ದೇವೆಂದು ನಾವು ವಾಸ್ತವವಾಗಿ ಹೇಳಲು ಸಾಧ್ಯವಿಲ್ಲ ? ನಾವು ನಮ್ಮ ಅಧಿಕ ಶಕ್ತಿ ಮತ್ತು ಸಮಯವನ್ನು ಜೀವನ ನಿರ್ವಹಣೆಗಾಗಿ ಕಳೆಯುತ್ತೇವೆ ಮತ್ತು ಉಳಿದುದರಲ್ಲಿ ಬಹು ಭಾಗವನ್ನು ನಿದ್ದೆಯಲ್ಲಿ ಕಳೆಯುತ್ತೇವೆ. ನಾವು ದೇವರಲ್ಲಿ ದೃಢವಾದ ಭಕ್ತಿಯನ್ನು ಹೊಂದಿ, ಆಧ್ಯಾತ್ಮಿಕ ಜೀವನವನ್ನು ನಡೆಸದಿದ್ದರೆ, ನಾವು ಪಶುಗಳಿಗಿಂತ ಬೇರೆ ಎಂದು ಹೇಗೆ ತಾನೆ ಹೇಳುವುದು ?

Sri Vidyabharathi Book Centre, Sringeri

CC-O. In Public Domain. Digitized by eGangotri

ತಮ್ಮ ಶಿವಭುಜಂಗ ಪ್ರಯಾತ ಸ್ತೋತ್ರದಲ್ಲಿ ಶಂಕರರು ಶಿವನಿಗೆ ಪ್ರಶ್ನೆಯೊಂದನ್ನು ಹಾಕುತ್ತಾರೆ, ಮತ್ತು ತಾವು ಪಶುವಿಗೆ ಸದೃಶವಾಗಿದ್ದರೂ ಅಂಗೀಕರಿಸಬೇಕೆಂದು ಪರಮಾತ್ಮನಿಗೆ ಹೇಳುತ್ತಾರೆ. ಏಕೆ ? ನಂದಿಯು ಈಶ್ವರನ ವಾಹನವಲ್ಲವೇ ? ನಿಶ್ಚಯವಾಗಿಯೂ, ನಂದಿ ಎಂಬ ಗೂಳಿಯನ್ನು ಈಶ್ವರನು ಅಂಗೀಕರಿಸುವುದಾದರೆ, ಪಶುವಂತಿರುವ ಭಕ್ತನನ್ನು ಅಂಗೀಕರಿಸುವುದಕ್ಕೆ ಅವನಿಗೆ ಯಾವ ಆಪತ್ತಿಯೂ ಇರಬಾರದು. ಅವನು ಒಂದು ಪಶುವನ್ನು ತನ್ನದನ್ನಾಗಿ ಮಾಡಿಕೊಂಡ ಮೇಲೆ, ಭಕ್ತನು ಪಶುಸಮಾನ ಎಂದು ಶಿವ ಹೇಗೆ ತಾನೇ ಹೇಳಬಲ್ಲ ?

ಪಶುವಿಗೆ ಸಮಾನನಾಗಿರುವುದು ಒಂದು ಮತ್ತು ಪಾಪಿಯಾಗಿರುವುದು ಬೇರೊಂದು. ಭಕ್ತನು ಅಪರಾಧಗಳಿಂದ ಕೂಡಿದ್ದರೆ ಏನು ? ಆಗ ದೇವರು ಅವನನ್ನು ಅಂಗೀಕರಿಸುತ್ತಾನೆಯೇ ? ಅಂತಹ ಸಂದರ್ಭದಲ್ಲಿಯೂ ಶಿವನು ತನ್ನ ಪ್ರೀತಿಯನ್ನು ತೋರಿಸಬೇಕೆಂದು ಶಂಕರರು ಈ ಶ್ಲೋಕದಲ್ಲಿ ತಿಳಿಸುತ್ತಾರೆ. ಏತಕ್ಕೆ ? ಎಲ್ಲ ಪತ್ನಿಯರನ್ನೂ ಸಮಾನ ದೃಷ್ಟಿಯಲ್ಲಿ ಕಾಣುತ್ತೇನೆಂದು ಮಾಡಿದ್ದ ಪ್ರತಿಜ್ಞೆಯನ್ನು ಮುರಿದ ಮತ್ತು ತನ್ನ ಗುರುಪತ್ನಿಯನ್ನೇ ಅಪಹರಿಸುವಿಕೆಯೆಂಬ ಪಾಪಕೆಲಸವನ್ನು ಮಾಡಿದ ಚಂದ್ರನನ್ನು ಶಿವನು ತನ್ನ ಶಿರಸ್ಸಿನ ಮೇಲೆ ಇಟ್ಟುಕೊಳ್ಳಲಿಲ್ಲವೇ ? ಇಂತಹ ಅಪರಾಧಗಳನ್ನು ಮಾಡಿದವನು ತನ್ನ ಶಿರಸ್ಸಿನ ಮೇಲೆ ಧರಿಸಬಹುದಾದರೆ, ಭಕ್ತನ ಅಪರಾಧಗಳಿಗೋಸ್ಕರವಾಗಿ ಅವನನ್ನು ತಿರಸ್ಕರಿಸುವುದಕ್ಕೆ ಶಿವನಿಗೆ ಯಾವ ಕಾರಣವೂ ಇರಕೂಡದು.

ಭಕ್ತನು ಪಶುಸಮಾನವಾಗಿರಲಿ ಅಥವಾ ಪಾಪಿಯಾಗಿರಲಿ; ಆದರೂ ಶಿವನು ಅಂಗೀಕರಿಸುವುದಕ್ಕೆ ಅವನಿಗೆ ಅರ್ಹತೆಯಿರುವುದು. ಆದರೆ, ಆಗ ಭಕ್ತನ ಪ್ರಾರ್ಥನೆಯು ಸ್ವಾರ್ಥದ ಯಾವ ಸೋಂಕೂ ಇಲ್ಲದಂತೆ ಇರಬೇಡವೇ ? ಭಕ್ತನಲ್ಲಿ ಯಾವ ರೀತಿಯ ದ್ವಂದ್ವವ್ಯವಹಾರಕ್ಕೂ ಅವಕಾಶವಿರಬಾರದಲ್ಲವೇ ? ಇಲ್ಲಿ ಪುನಃ ಶಂಕರರು ಒಪ್ಪದೆ, ಶಿವನಿಗೆ ಹೇಳುತ್ತಾರೆ– "ನೀನು "ಎರಡು ನಾಲಗೆ" ಇರುವವರನ್ನು ಅಂಗೀಕರಿಸದಿರುವುದಾದರೆ, ಹೇಗೆ ತಾನೆ ಸೀಳಿದ ನಾಲಿಗೆಯುಳ್ಳ ಸರ್ಪಗಳನ್ನು ಕುತ್ತಿಗೆಯ ಆಭರಣವಾಗಿ ಧರಿಸಿರುವೆ ? ನೀನು ಸರ್ಪವನ್ನು ಒಪ್ಪುವುದಾದರೆ, ನಾನೇಕೆ ಬೇಡ ?"

ಕೊನೆಯಲ್ಲಿ, ಮನುಷ್ಯನ ಪರಿಸ್ಥಿತಿ ಯಾವುದೇ ರೀತಿಯಲ್ಲಿ ಇರಲಿ, ಅವನನ್ನು ಪರಮಾತ್ಮನು ಅಂಗೀಕರಿಸಿದರೆ, ವಿಧಿಯಿಲ್ಲದೆ ಅವನು ಅನುಗೃಹೀತನಾಗುತ್ತಾನೆಂದು ಶಂಕರರು ಶಿವನ ಸ್ಮರಣೆಗೆ ತರುತ್ತಾರೆ. ಪ್ರಾರ್ಥನೆಯ ಅರ್ಥವೇನೆಂದರೆ, ದೇವರ ಕರುಣೆಯು ಅಸೀಮವಾದುದು ಮತ್ತು ನಾವು ಅವನಲ್ಲಿ ಶರಣುಹೊಂದಿದರೆ, ನಮ್ಮ ಅಪರಾಧಗಳನ್ನು ಮತ್ತು ಮಿತಿಗಳನ್ನು ಗಮನಿಸದೆ, ನಮ್ಮನ್ನು ಅಂಗೀಕರಿಸುತ್ತಾನೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬುದು. ಆದ್ದರಿಂದ ನಾವು ದೇವರಿಗೆ ನಮಸ್ಕರಿಸುವುದು ಮತ್ತು ಶರಣರಾಗುವುದು ಯೋಗ್ಯ. ಉಳಿದುದನ್ನು ದೇವರು ನೋಡಿಕೊಳ್ಳುತ್ತಾನೆ.

ಭಕ್ತಿಸುಧೆ

ಪ್ರೀತಿಸುವುದಕ್ಕೆ ಜನರಿಗೆ ಸ್ವಾಭಾವಿಕವಾದ ಸಾಮರ್ಥ್ಯವಿರುತ್ತದೆ. ಪ್ರೀತಿಸುವುದಕ್ಕೆ ಒಂದು ವಸ್ತುವಿರಬೇಕು; ಆ ವಸ್ತುವು ಪರಮಾತ್ಮನೇ ಆದರೆ, ಅದನ್ನು ಭಕ್ತಿಯೆನ್ನುತ್ತಾರೆ. ಈಶ್ವರ ವಿಷಯಕವಾದ ಪರಮ ಪ್ರೀತಿಯೇ ಭಕ್ತಿಯೆಂದು ನಾರದರು ವರ್ಣಿಸುತ್ತಾರೆ. ಅಂತಹ ಭಕ್ತಿಯನ್ನು ಹೊಂದಿದವನು ಮತ್ತಾವುದನ್ನೂ ಇಚ್ಛಿಸುವುದಿಲ್ಲ ಮತ್ತು ಅವನು ಸಂಪೂರ್ಣ ತೃಪ್ತನಾಗಿ ಆನಂದದಿಂದಿರುತ್ತಾನೆ. ಹೆಂಡತಿ, ಹಣ, ಮುಂತಾದವುಗಳಲ್ಲಿನ ಆಸಕ್ತಿಯು ಬಂಧನವನ್ನುಂಟು ಮಾಡುವುದಾದರೆ, ಈಶ್ವರ ವಿಷಯಕವಾದ ಆಸಕ್ತಿಯು ಮೋಚಕವಾಗುತ್ತದೆ. ಇಂದ್ರಿಯ ಗ್ರಾಹ್ಯವಾಗುವ ವಸ್ತುವು ಕೆಲವು ವೇಳೆ ಆನಂದವನ್ನುಂಟುಮಾಡಿದರೆ, ಮತ್ತೆ ಕೆಲವು ಸಮಯ ದುಃಖವನ್ನುಂಟುಮಾಡುತ್ತದೆ. ಯಾವಾಗಲೂ ಅದು ಸಿಗುವುದಿಲ್ಲ ಮತ್ತು ಅನೇಕ ದೋಷಗಳಿಂದ ಕೂಡಿರುತ್ತದೆ. ಇದಕ್ಕೆ ವಿರುದ್ಧವಾಗಿ; ಪರಮಾತ್ಮನು ಯಾವಾಗಲೂ ಆಕರ್ಷಕ, ಯಾವಾಗಲೂ ಲಭ್ಯ ಮತ್ತು ಸಂಪೂರ್ಣವಾಗಿ ದೋಷಗಳಿಂದ ನಿರ್ಮುಕ್ತ. ಎಲ್ಲ ಸದ್ಗುಣಗಳಿಗೂ ಆಕರನಾಗಿರುವ ಈಶ್ವರನಿಗಿಂತ ಪ್ರೀತಿ ಪಾತ್ರರು ಯಾರು ಮತ್ತು ಹೇಗೆ ತಾನೇ ಆಗಬಲ್ಲರು? ಅವನ ಮಾಹಾತ್ಮ್ಯವು ಎಷ್ಟು ಆಕರ್ಷಕವಾಗಿದೆಯೆಂದರೆ, ಸತ್ಯಸಾಕ್ಷಾತ್ಕಾರ ಮಾಡಿಕೊಂಡಿರುವ ಹಾಗೂ ಏನನ್ನೂ ಹೊಂದಬೇಕಾಗಿಲ್ಲದಿರುವ ಋಷಿಗಳೂ ಸಹ ಅವನನ್ನು ಕುರಿತು ಚಿಂತಿಸುವಾಗ ಮೈಮರೆಯುತ್ತಾರೆ.

ಮೂಲತಃ ಆಕಾರರಹಿತನಾಗಿದ್ದರೂ, ತನ್ನ ಭಕ್ತರಿಗೆ ಅನುಗ್ರಹ ಮಾಡುವುದಕ್ಕೆ ಹಾಗೂ ಜನರು ತನ್ನನ್ನು ಕುರಿತು ಧ್ಯಾನಮಾಡಲು ಅನುಕೂಲವಾಗುವಂತೆ ದಯಾಪೂರಿತನಾದ ಪರಮಾತ್ಮನು ಅನೇಕ ರೂಪಗಳಲ್ಲಿ ಕಾಣಿಸಿಕೊಳ್ಳುತ್ತಾನೆ. ಪರಮಾತ್ಮನ ಕೆಲವು ಅದ್ಭುತ ಅವತಾರಗಳನ್ನು ಶಾಸ್ತ್ರಗಳು ವರ್ಣನೆ ಮಾಡುತ್ತವೆ. "ನೀನು ಜಾಜ್ವಲ್ಯಮಾನವಾದವಳು. ಸುಂದರವಾದ ಎಲ್ಲ ವಸ್ತುಗಳಿಗಿಂತಲೂ ಸುಂದರವಾದವಳು, ಮತ್ತು ಸಂಪೂರ್ಣವಾಗಿ ಮೈಮರೆಸುವವಳು, ಶ್ರೇಷ್ಠವಾದುದಕ್ಕಿಂತ ಶ್ರೇಷ್ಠವಾದವಳು, ವಾಸ್ತವವಾಗಿ ನೀನು ಪರಮೇಶ್ವರಿ,—ಎಂದು ಮಾರ್ಕಂಡೇಯ ಪುರಾಣದ ದೇವೀ ಮಾಹಾತ್ಮ್ಯದಲ್ಲಿ ಬರುತ್ತದೆ.

"ಭವಾನಿ! ನನ್ನ ಮೇಲೆ ನಿನ್ನ ಕೃಪಾ ಪೂರಿತವಾದ ದೃಷ್ಟಿಯನ್ನು ಬೀರು"—ಎಂದು ಭಕ್ತನೊಬ್ಬನು ಪ್ರಾರ್ಥಿಸಲು ಅಪೇಕ್ಷಿಸುತ್ತಾನೆ. "ಭವಾನಿ ತ್ವಂ" ಎಂಬ ಶಬ್ದಗಳಿಂದ ಪ್ರಾರಂಭಿಸುತ್ತಾನೆ. ಭಕ್ತನ ಪ್ರಾರ್ಥನೆಯನ್ನು ಪೂರೈಸುವುದಕ್ಕೆ ದೇವಿಯು ಎಷ್ಟು ಆತುರದಿಂದ ಇದ್ದಳೆಂದರೆ, "ನೀನು" ಎಂಬ "ತ್ವಂ" ಪದದ ನಂತರ

Sri Vidyabharathi Book Centre, Sringeri

CC-O. In Public Domain. Digitized by eGangotri

ಭಕ್ತನು ನಿಲ್ಲಿಸಿದ್ದು ಕೇವಲ ಮುಂದಿನ ಶಬ್ದಗಳ ಮಧ್ಯದಲ್ಲಿ ಅಂತರವನ್ನು ತೋರಿಸುವುದಕ್ಕೆ ಎಂಬುದನ್ನೂ ಸಹ ಅವಳು ಗಮನಿಸಲಿಲ್ಲ. ಪ್ರಾರ್ಥನೆಯು ಸಂಪೂರ್ಣವಾದುದೆಂದು ತಿಳಿದು ಅವನಿಗೆ "ಭವಾನಿ ತ್ವಂ" ಅಂದರೆ, ಭವಾನಿಯ ಪದವಿಯನ್ನು ತತ್‌ಕ್ಷಣದಲ್ಲಿ ಅನುಗ್ರಹಿಸುತ್ತಾಳೆ; ಅಂದರೆ, ತನ್ನೊಡನೆ ತಾದಾತ್ಮ್ಯವನ್ನು ಅನುಗ್ರಹಿಸಿದಳು. ಇದನ್ನು ಶ್ರೀ ಶಂಕರರು ಸೌಂದರ್ಯ ಲಹರಿಯಲ್ಲಿ ತಿಳಿಸಿದ್ದಾರೆ.

ಈಶ್ವರನ ಕೃಪೆಯು ಎಲ್ಲರನ್ನೂ ವ್ಯಾಪಿಸುತ್ತದೆ. ವಿಭೀಷಣನನ್ನು ಅಂಗೀಕರಿಸುವ ಸಂದರ್ಭದಲ್ಲಿ ಸಂದೇಹದ ಮಾತುಗಳನ್ನಾಡಿದ ಸುಗ್ರೀವನಿಗೆ ರಾಮನು ಹೀಗೆ ಹೇಳುತ್ತಾನೆ—'ನಾನು ನಿನ್ನವನು' ಎಂದು ಒಂದು ಬಾರಿ ಹೇಳುತ್ತಾ ನನ್ನಲ್ಲಿ ಶರಣಾಗತನಾಗುವವನಿಗೆ ನಾನು ಅಭಯವನ್ನು ಕೊಡುತ್ತೇನೆ. ನಿಷ್ಠನಾದ ಭಕ್ತನಿಗೆ ಯಾವ ವಿಧವಾದ ತೊಂದರೆಯೂ ಇರುವುದಿಲ್ಲ, ಏಕೆಂದರೆ ಅವನು ತನ್ನ ದೇಹ ಮತ್ತು ಮನಸ್ಸನ್ನು ಪರಮಾತ್ಮನಿಗೆ ಅರ್ಪಿಸಿರುತ್ತಾನೆ. ಮತ್ತು ಎಲ್ಲವನ್ನೂ ಪರಮಾತ್ಮನಿಗೆ ಒಪ್ಪಿಸಿರುತ್ತಾನೆ. ಶರಣಾಗತರಾದ ಭಕ್ತರ ಪ್ರೇಮದಿಂದ ತುಂಬಿದ ಕೃಷ್ಣನು ಉದ್ಧವನಿಗೆ ಈ ರೀತಿ ಹೇಳುತ್ತಾನೆ—'ಯಾವುದನ್ನೂ ಅಪೇಕ್ಷಿಸದಿರುವ, ಯಾರಲ್ಲೂ ಶತೃತ್ವವನ್ನು ಹೊಂದದಿರುವ, ಮತ್ತು ಸಮಚಿತ್ತನಾದ ಸತ್ಪುರುಷನ ಪಾದಧೂಳಿಯಿಂದ ನನ್ನನ್ನು ಪವಿತ್ರಗೊಳಿಸುವುದಕ್ಕಾಗಿ, ನಾನು ಅವನನ್ನು ಯಾವಾಗಲೂ ಅನುಸರಿಸುತ್ತೇನೆ.' ಜಗತ್ತಿನ ಪ್ರಭುವಿನಿಂದ ಎಂತಹ ಅದ್ಭುತವಾದ ಘೋಷಣೆ!

ನಿಷ್ಠನಾದ ಭಕ್ತನು ಪರಮಾತ್ಮನ ಪ್ರೀತಿಪಾತ್ರವಾದ ರಕ್ಷಣೆಯಲ್ಲಿರುತ್ತಾನೆಂದು ಹೇಳಿದರೂ, ಭಕ್ತನಿಗೆ ಯಾವ ಕಷ್ಟಗಳೂ ಇರಬಾರದೆಂದು ಊಹಿಸುವುದು ತಪ್ಪಾಗುತ್ತದೆ. ಪರಮಾತ್ಮನು ದಯಾಮಯನಾಗಿರುವುದು ಮಾತ್ರವಲ್ಲದೆ, ನ್ಯಾಯನಿಷ್ಠುರನೂ ಹೌದು. ತನ್ನ ಹಿಂದಿನ ಜನ್ಮಗಳಲ್ಲಿ ದೊಡ್ಡ ಪಾಪಗಳನ್ನು ವ್ಯಕ್ತಿಯೊಬ್ಬನು ಮಾಡಿದ್ದರೂ, ಕಷ್ಟಗಳ ರೂಪದಲ್ಲಿ ಯಾವ ಶಿಕ್ಷೆಯೂ ಇಲ್ಲದೆ ಸ್ವತಂತ್ರನಾಗಿರುವುದಕ್ಕೆ ಬಿಟ್ಟರೆ, ಅದು ನ್ಯಾಯಕ್ಕೆ ವಿರುದ್ಧವಾಗುತ್ತದೆ. ಕೇವಲ ಕೊಲೆ ಮಾಡಿರುವವರಿಗೆ ಶಿಕ್ಷೆಯನ್ನು ವಿಧಿಸುವುದಕ್ಕೆ ಕರುಣೆಯ ಆಧಾರದ ಮೇಲೆ ನಿರಾಕರಿಸುವ ನ್ಯಾಯಾಧಿಪತಿಯು ಸಮಾಜಕ್ಕೆ ಕೇಡನ್ನು ಬಯಸುತ್ತಾನೆ. ಕಾಠಿಣ್ಯವನ್ನು ಕಡಿಮೆ ಮಾಡುವ ಪ್ರಸಂಗಗಳನ್ನು ಮತ್ತು ಪಶ್ಚಾತ್ತಾಪವನ್ನು ಗಮನಕ್ಕೆ ತೆಗೆದುಕೊಂಡು ಅಪರಾಧಿಯೊಬ್ಬನಿಗೆ ವಿಧಿಸಲಾಗಿರುವ ಶಿಕ್ಷೆಯನ್ನು ಅವನು ಕಡಿಮೆ ಮಾಡಬಹುದಷ್ಟೆ. ಹೀಗೆಯೇ ಪರಮಾತ್ಮನು, ನ್ಯಾಯಮೂರ್ತಿಯಾದುದರಿಂದ, ಭಕ್ತರಿಗೂ ಸಹ ಶಿಕ್ಷೆಯನ್ನು ವಿಧಿಸುತ್ತಾನೆ; ಆದರೆ, ಕರುಣೆಯಿಂದ ಸಾಧ್ಯವಾದಷ್ಟು ಶಿಕ್ಷೆಯನ್ನು ಕಡಿಮೆಮಾಡುತ್ತಾನೆ. ತಾಯಿಯು ತನ್ನ ಮಗುವಿಗೆ ಛೀಮಾರಿ ಮಾಡಿದ ಮಾತ್ರಕ್ಕೆ, ಆಕೆಯು ತನ್ನ ಮಕ್ಕಳನ್ನು ಪ್ರೀತಿಸುವುದಿಲ್ಲವೆಂದರ್ಥವೇ?

Sri Vidyabharathi Book Centre, Sringeri

CC-O. In Public Domain. Digitized by eGangotri

ಈಶ್ವರನು ಸರ್ವಶಕ್ತ, ಸರ್ವವ್ಯಾಪಿ, ಸರ್ವಜ್ಞ ಮತ್ತು ದಯಾಸಾಗರ, ಆದ್ದರಿಂದ, ಅವನಿಗೆ ಆಗಲೇ ತಿಳಿಯದಿರುವ ಯಾವ ವಿಷಯವೂ ಇಲ್ಲದಿರುವುದರಿಂದ, ಭಕ್ತನು ಈಶ್ವರನ ಗಮನಕ್ಕೆ ತರಬೇಕಾದ ಯಾವುದೂ ಇರುವುದಿಲ್ಲ. ಮತ್ತೆ ಭಕ್ತನು "ನನಗೆ ಇದು ಬೇಕು, ನನಗೆ ಅದುಬೇಕು"—ಎಂದು ಹೇಳುವುದಾದರೆ, ಪರಮಾತ್ಮನ ಅನುಗ್ರಹದ ವಿಷಯದಲ್ಲಿ ಅವನಿಗೆ ಸಂಪೂರ್ಣವಾಗಿ ನಂಬಿಕೆ ಇದೆ ಎಂದು ಹೇಗೆ ತಾನೆ ಹೇಳುವುದು? ಇದಲ್ಲದೆ, ಶ್ರದ್ಧೆಯು ಸಂಪೂರ್ಣವಾಗಿಲ್ಲದಿದ್ದರೂ, ಯಾವುದನ್ನಾದರೂ ಪ್ರಾರ್ಥಿಸುವುದನ್ನು ತ್ಯಜಿಸುವುದು ಉಚಿತವಾಗುತ್ತದೆ.

ಈಶ್ವರನ ಚಿತ್ತವು ಅಚಿಂತ್ಯವಾದುದೆಂಬುದು ಗತಾರ್ಥವಾಗುತ್ತದೆ. ಜನರು ತಮಗೆ ಅಪೇಕ್ಷಿತವಾದುದು ಸಿಕ್ಕಿದಾಗ ಸಂತೋಷಿಸುತ್ತಾರೆಂಬುದೂ ಮತ್ತು ಅದು ಸಿಗದಿದ್ದಾಗ ದುಃಖಿಸುತ್ತಾರೆಂಬುದೂ ಪ್ರಸಿದ್ಧವಾದುದು. ಆದ್ದರಿಂದ, ತನ್ನ ಮನಸ್ಸನ್ನು ಈಶ್ವರನ ಕಡೆಗೆ ತಿರುಗಿಸಿದ ವ್ಯಕ್ತಿಗೆ ಅಸಂತೋಷ ಪಡುವುದಕ್ಕೆ ಯಾವ ಕಾರಣವೂ ಇರುವುದಿಲ್ಲ. ತನ್ನ ಇಷ್ಟ ದೇವತೆಯಿಂದ ವಿಧಿಸಲ್ಪಟ್ಟ ದುಃಖವೂ ಸಹ ತನ್ನ ಒಳ್ಳೆಯದಕ್ಕಾಗಿಯೇ ಎಂಬ ಭಾವನೆಯನ್ನು ಬೆಳೆಸಿಕೊಂಡ ಭಕ್ತನಿಗೆ ಕಷ್ಟಗಳು ದುಃಖಕ್ಕೆ ಹೇಗೆ ಕಾರಣವಾದಾವು? ಏನೇ ಆದರೂ ದುಃಖ-ಸಂತಾಪಗಳು ಕಷ್ಟಗಳನ್ನು ಕಡಿಮೆ ಮಾಡದೆ, ಅವನ್ನು ಜಾಸ್ತಿಮಾಡಬಹುದು.

ಭಕ್ತಿ ಮಾರ್ಗದ ವೈಶಿಷ್ಟ್ಯವೇನೆಂದರೆ, ಅದರಲ್ಲಿ ಬಹು ಮುಂದುವರೆಯುವುದಕ್ಕೆ ಮುಂಚೆ ವ್ಯಕ್ತಿಯು ಶಾಂತಿ ಮತ್ತು ಸೌಖ್ಯದ ಅನುಭವವನ್ನು ಹೊಂದಲು ಉಪಕ್ರಮಿಸುತ್ತಾನೆ. ಮತ್ತು, ಬುದ್ಧಿಯ ತೀಕ್ಷ್ಣತೆ, ವೈದುಷ್ಯ, ಶಕ್ತಿ, ವಯಸ್ಸು, ದೇಹದಾರ್ಢ್ಯ, ಸಾಮಾಜಿಕ ಪದವಿ, ವೃತ್ತಿ, ಹಣ, ಮುಂತಾದ ಯಾವುವೂ ಅಂತಹ ಪ್ರಾಮುಖ್ಯವಾದವಲ್ಲ. ಈಶ್ವರನೇ ಅತ್ಯಂತ ಪ್ರೇಮಾಸ್ಪದನಾದುದರಿಂದ, ಭಕ್ತಿಯನ್ನು ಹೊಂದದಿರುವುದಕ್ಕೆ ಯಾವ ಕಾರಣವೂ ಇಲ್ಲ. ವ್ಯಕ್ತಿಯೊಬ್ಬನ ಸಹವಾಸ ಮತ್ತು ಅವನ ವಿಷಯದಲ್ಲಿ ಖಚಿತವಾದ ನಿಲುವಿನಿಂದ ಯೋಚಿಸುವುದರಿಂದ, ಮತ್ತೊಬ್ಬನು ಅವನ ವಿಷಯದಲ್ಲಿ ಆಸಕ್ತಿಯನ್ನು ಹೊಂದಬಹುದು. ಅದೇ ರೀತಿ, ಈಶ್ವರನನ್ನು ಕುರಿತು ಹಾಗೂ ಅವನ ಮಾಹಾತ್ಮ್ಯವನ್ನು ಕುರಿತು ಸತತವಾಗಿ ಚಿಂತನೆ ಮಾಡುವುದರಿಂದ ಈಶ್ವರನ ಮೇಲೆ ಭಕ್ತಿಯನ್ನು ಬೆಳೆಸಿಕೊಳ್ಳಬಹುದು. ಅವನನ್ನು ಕುರಿತು ಚಿಂತನೆಮಾಡುವುದು ಅಂತಹ ಕಷ್ಟಕರವಾದುದಲ್ಲ. ಏಕೆಂದರೆ, ವ್ಯಕ್ತಿಯೊಬ್ಬ ಅವನ ನಾಮಗಳನ್ನು ಮಾನಸಿಕವಾಗಿ ಜಪಿಸುತ್ತಿರಬಹುದು ಮತ್ತು ತನ್ನ ಎಲ್ಲ ಕೆಲಸಗಳನ್ನೂ ಮತ್ತು ಯೋಚನೆಗಳನ್ನೂ ಅವನಿಗೆ ಸಮರ್ಪಿಸಬಹುದು. ಭಕ್ತಿಯನ್ನು ಬೆಳೆಸಿಕೊಳ್ಳುವುದಕ್ಕೆ ಸಂತರಾದ ಭಕ್ತರ ಸಹವಾಸವು ಅತ್ಯಂತ ಸಹಕಾರಿಯಾಗುತ್ತದೆ, ಏಕೆಂದರೆ, ಅದರಲ್ಲಿ ಸಂಪೂರ್ಣ [illegible] ಮತ್ತು ಶಾಂತಿಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಕಾಣುತ್ತೇವೆ. ವಿರುದ್ಧವಾಗಿ, ಅಯೋಗ್ಯವಾದ ಸಹವಾಸವು ವಿರುದ್ಧವಾದ ಫಲವನ್ನುಂಟುಮಾಡುತ್ತದೆ. ಅದು ಮನಸ್ಸನ್ನು, ಗುರಿತಪ್ಪಿಸಿ, ಇಂದ್ರಿಯ ಸುಖಗಳತ್ತ ಹರಿಯುವಂತೆ ಮಾಡುತ್ತದೆ.

ಮೊದಲು, ಈಶ್ವರನ ಮೇಲೆ ಮನಸ್ಸನ್ನು ಕೇಂದ್ರೀಕರಿಸಲು ಪ್ರಯತ್ನಪಡುವ ವ್ಯಕ್ತಿಗೆ, ಮನಸ್ಸು ಸಹಕರಿಸದಿರಬಹುದು. ಮತ್ತು ಅದನ್ನು ಮಾಡುವುದರಿಂದ ಅವನಿಗೆ ಅಧಿಕ ಆನಂದ ಸಿಗದಿರಬಹುದು. ಆದರೆ, ನಿರಾಶೆಯಾಗುವುದಕ್ಕೆ ಯಾವ ಕಾರಣವೂ ಇಲ್ಲ. ಭಕ್ತನಾಗುವವನು ತನ್ನ ಮನಸ್ಸಿನ ಸ್ಥಿತಿಗಳನ್ನು ಸಂಪೂರ್ಣವಾಗಿ ಈಶ್ವರನಿಗೆ ವಿವರಿಸುವುದರ ಮೂಲಕ, ತನ್ನ ಅನುಕೂಲಕ್ಕೆ ಪರಿಸ್ಥಿತಿಯನ್ನು ಬದಲಾಯಿಸಬಹುದು. "ನಿನ್ನನ್ನು ಕುರಿತು ಯೋಚಿಸುವುದಕ್ಕೆ ನನ್ನ ಮನಸ್ಸು ತಿರಸ್ಕರಿಸುತ್ತದೆ. ಅದು ಹೇಗೆ ತುಂಟತನವನ್ನು ಮಾಡುತ್ತದೆಂಬುದನ್ನು ನೀನೇ ನೋಡು" ಎಂದು ಮಾನಸಿಕವಾಗಿ ಈಶ್ವರನಲ್ಲಿ ನಿವೇದಿಸುವುದಕ್ಕೆ ಏನು ಕಷ್ಟ? ಈಶ್ವರನೊಡನೆ ಆ ರೀತಿಯ ಸಂಭಾಷಣೆಯೂ ಸಹ ಅವನನ್ನು ಕುರಿತು ಯೋಚಿಸುವುದರ ಒಂದು ವಿಧ.

ವ್ಯಕ್ತಿಯೊಬ್ಬನು ಸ್ವಲ್ಪಕಾಲವಾದರೂ ಈಶ್ವರನಲ್ಲಿ ಮನಸ್ಸನ್ನು ಕೇಂದ್ರೀಕರಿಸುವುದಕ್ಕೆ ಸಮರ್ಥನಾದರೆ, ಅವನು ಶಾಂತಿಯನ್ನು ಅನುಭವಿಸುತ್ತಾನೆ. ಏಕೆಂದರೆ, ಆ ಅಲ್ಪ ಸಮಯದಲ್ಲಿ, ಅವನು ಇತರ ಯೋಚನೆಗಳಿಂದ ಮುಕ್ತನಾಗಿರುತ್ತಾನೆ. ಹಾಗೂ ತಾಯಿಯ ತೆಕ್ಕೆಯಲ್ಲಿರುವ ಮಗುವಿನಂತಿರುತ್ತಾನೆ. ಮಹಾತ್ಮರಾದ ಭಕ್ತರ ಸನ್ನಿಧಿಯಲ್ಲಿ ಶಾಂತಿ ಮತ್ತು ಆನಂದದ ಭಾವನೆಯು ಸುಖವಾಗಿ ಉಂಟಾಗುತ್ತದೆ. ಹಿತವಾದ ಈ ಭಾವನೆಯೇ ಭಕ್ತನಾಗುವವನಿಗೆ ಮತ್ತೂ ಪರಮಾತ್ಮನನ್ನು ಕುರಿತು ಚಿಂತಿಸುವುದಕ್ಕೆ ಪ್ರೇರಣೆಯನ್ನು ನೀಡುತ್ತದೆ. ಆದರೂ, ಪ್ರಾರಂಭಿಕ ಸ್ಥಿತಿಯಲ್ಲಿ ಬಹುಸಮಯದವರೆಗೆ ಪರಮಾತ್ಮನನ್ನು ಮನಸ್ಸು ಮರೆಯಬಹುದೆಂಬ ಅಪಾಯವೂ ಇರುತ್ತದೆಂಬುದನ್ನು ಅವನು ಗಮನಿಸಬೇಕು. ಆದ್ದರಿಂದ, ಅಜಾಗರೂಕತೆಗೆ ಅವಕಾಶಕೊಡದೆ, ಆಗಾಗ ಈಶ್ವರನನ್ನು ಕುರಿತು ಚಿಂತಿಸುವುದಕ್ಕೆ ಶ್ರದ್ಧೆಯಿಂದ ಪ್ರಯತ್ನಪಡಬೇಕು.

ಶಿವಾನಂದಲಹರಿಯ ಶ್ಲೋಕವೊಂದರಲ್ಲಿ ಶ್ರೀ ಶಂಕರರು ಭಕ್ತಿಯ ಸೋಪಾನಗಳನ್ನು ವರ್ಣಿಸಿದ್ದಾರೆ. ಅಂಕೋಲೆ ಗಿಡದ ಬೀಜದ ಮರದಕಾಂಡಕ್ಕೆ ಅಂಟಿಕೊಳ್ಳುವಂತೆ, ಭಕ್ತನು ಹೇಗಾದರೂ ಪರಮಾತ್ಮನನ್ನು ಸಮೀಪಿಸುವುದು ಮೊದಲನೆಯ ಮಾರ್ಗ. ನಂತರ, ಹಿಂದೆಯೂ ಇದ್ದ ಅನುಗ್ರಹದ ಪ್ರಭಾವವು ಅನುಭವಕ್ಕೆ ಬರುತ್ತದೆ. ಅಯಸ್ಕಾಂತವು ಸೂಜಿಯನ್ನು ಆಕರ್ಷಿಸಿ ಹಿಡಿದುಕೊಳ್ಳುವಂತೆ, ಪರಮಾತ್ಮನು ಭಕ್ತನನ್ನು ಹಿಡಿದುಕೊಳ್ಳುತ್ತಾನೆ. ಭಕ್ತನು ಪರಮಾತ್ಮನ ಆಕರ್ಷಣೆಯನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಅನುಭವಿಸುತ್ತಾನೆ. ಮೂರನೆಯ ಹಂತದಲ್ಲಿ, ದಂಪತಿಗಳಂತೆ, ಭಕ್ತ ಮತ್ತು ಈಶ್ವರ ಪರಸ್ಪರ ಅತ್ಯಂತ ಸಮೀಪವರಾಗಿರುತ್ತಾರೆ. ಪ್ರೀತಿಯು ಪ್ರಬಲವಾಗಿ ಅನ್ಯೋನ್ಯವಾದುದು. ಮುಂದೆ, ಬಳ್ಳಿಯೊಂದು ಮರದ ಸೌಂದರ್ಯವನ್ನು ಹೆಚ್ಚಿಸುವಂತೆ, ಭಕ್ತನು ಪರಮಾತ್ಮನ ಮಾಹಾತ್ಮ್ಯವನ್ನು ಹೆಚ್ಚಿಸುತ್ತಾನೆ. ವಾಸ್ತವವಾಗಿ, ಪ್ರಹ್ಲಾದನಂತಹ ಭಕ್ತರು ಪರಮಾತ್ಮನ ಆಭರಣಗಳು. ಕೊನೆಯದಾಗಿ, ನದಿಯು ಸಮುದ್ರವನ್ನು ಪ್ರವೇಶಿಸಿ, ಅದರಲ್ಲಿ ಒಂದಾಗುವಂತೆ, ಭಕ್ತನು ಪರಮಾತ್ಮನಲ್ಲಿ ಒಂದಾಗುತ್ತಾನೆ.

ವಿವಿಧ ರೀತಿಯ ಸಾಮರ್ಥ್ಯವುಳ್ಳ ಭಕ್ತರು ಹೇಗೆ ಭಕ್ತಿಯನ್ನು ಸಾಧನೆ ಮಾಡಬೇಕೆಂಬುದನ್ನು ಕೃಷ್ಣನು ಕರುಣೆಯಿಂದ ಉಪದೇಶಿಸಿದ್ದಾನೆ. ಪರಮಾತ್ಮನಿಗಿಂತ ಬೇರೆಯಾದುದು ಜಗತ್ತಿನಲ್ಲಿ ಯಾವುದೂ ಇಲ್ಲ. ಆದ್ದರಿಂದ, ಪರಿಣತನಾದ ಸಾಧಕನು ವಿರಾಟ್‌ಪುರುಷರೂಪದ ಪರಮಾತ್ಮನಲ್ಲಿ ತನ್ನ ಮನಸ್ಸು ಮತ್ತು ಬುದ್ಧಿಯನ್ನು ಕೇಂದ್ರೀಕರಿಸಬೇಕೆಂದು ಉಪದೇಶಿಸಲಾಗಿದೆ; ಪ್ರತಿಯೊಂದೂ ವಿರಾಟರೂಪದಲ್ಲಿರುವ ಪರಮಾತ್ಮನ ಶರೀರದ ಅಂಗವೆಂದು ನೋಡಲಾಗುತ್ತದೆ. ಪ್ರತಿಯೊಂದೂ ಪರಮಾತ್ಮನಿಗೆ ಸಂಬಂಧಿಸಿದುದೆಂದು ಕಾಣಲು ಸಾಧ್ಯವಾಗದ ಸಾಧಕನನ್ನು ಕುರಿತು ಕೃಷ್ಣನು, ಇಷ್ಟದೇವತೆಯ ಮೇಲೆ ಆಗಾಗ ಮನಸ್ಸನ್ನು ಕೇಂದ್ರೀಕರಿಸಬೇಕೆಂದು ಹೇಳುತ್ತಾನೆ. ವ್ಯಕ್ತಿಯೊಬ್ಬನು ಆ ರೀತಿ ಧ್ಯಾನಮಾಡಲು ಅಶಕ್ತನಾದರೆ, ಪರಮಾತ್ಮನಿಗಾಗಿ ಕೆಲಸ ಮಾಡುವುದರಲ್ಲಿ ಮಗ್ನನಾಗಬೇಕೆಂದು ಉಪದೇಶಿಸಿದ್ದಾನೆ. ಭಕ್ತನು ಯಾವಾಗಲೂ ಪರಮಾತ್ಮನ ವಿಷಯವನ್ನು ಕೇಳುವುದರಲ್ಲಿ, ಅವನ ಮಾಹಾತ್ಮ್ಯವನ್ನು ಗಾನಮಾಡುವುದರಲ್ಲಿ, ಅವನ ಮೂರ್ತಿಯನ್ನು ಪೂಜಿಸುವುದೇ ಮುಂತಾದವುಗಳಲ್ಲಿ ಭಾಗವಹಿಸಬೇಕು. ಕೊನೆಗೆ, ಆ ವಿಧವಾದ ಕಾರ್ಯದಲ್ಲಿ ಸಾಧಕನು ಮಗ್ನನಾಗುವುದಕ್ಕೆ ಸಾಧ್ಯವಾಗದಿದ್ದರೂ, ಅವನಿಗೆ ದೊರಕಬಹುದಾದ, ಇನ್ನೂ ಸುಲಭವಾದ ಮಾರ್ಗವೊಂದಿದೆ.

ಸಾಧಕನು ನಿಯಂತ್ರಿತವಾದ ಮನಸ್ಸಿನಿಂದ, ಎಲ್ಲ ಕರ್ತವ್ಯಗಳನ್ನೂ ತನಗೆ ಅರ್ಪಿಸಬೇಕು ಮತ್ತು ಕೆಲಸಗಳ ಫಲದ ವಿಷಯದಲ್ಲಿ ಯಾವ ಆಸೆಯನ್ನು ಹೊಂದಬಾರದು ಎಂದು ಪರಮಾತ್ಮನು ಹೇಳುತ್ತಾನೆ. ಸಾಮಾನ್ಯವಾಗಿ ಫಲದ ವಿಷಯದಲ್ಲಿನ ಆಸೆಯಿಂದ ಪ್ರೇರಿತನಾಗಿ ವ್ಯಕ್ತಿಯೊಬ್ಬನು ಕೆಲಸಗಳನ್ನು ಮಾಡುತ್ತಾನೆ. ಆ ರೀತಿಯಾಗಿ ಕೆಲಸಮಾಡುವುದು ಬಂಧನವನ್ನುಂಟುಮಾಡುತ್ತದೆ. ಆಧ್ಯಾತ್ಮಿಕ ಸಾಧಕನು ಪರಮಾತ್ಮ ವಿಷಯಕವಾದ ಪ್ರೀತಿಯಿಂದ ಪ್ರೇರಿತನಾಗಿ, ಪರಮಾತ್ಮನಿಗಾಗಿ ಕೆಲಸಗಳನ್ನು ಮಾಡುತ್ತಾನೆ. ಹಾಗೂ ಫಲದ ವಿಷಯದಲ್ಲಿ ಯಾವ ಆಸಕ್ತಿಯನ್ನೂ ಹೊಂದಿರು[illegible]ದನ್ನು ಭಗವಂತನಿಗೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಅರ್ಪಿಸುವಂತೆ, ಭಕ್ತನು ತನ್ನ ಕರ್ಮಗಳ ಫಲವನ್ನು ಭಗವಂತನಿಗೆ ಅರ್ಪಿಸುತ್ತಾನೆ "ಭಗವಂತನಿಗಾಗಿ ನಾನು ಇದನ್ನು ಮಾಡುತ್ತೇನೆ" ಎಂಬ ಭಾವನೆಯಿಂದ ಮಾಡುತ್ತಾನೆ; ಅದಕ್ಕಿಂತ ಒಂದು ಮೆಟ್ಟಲು ಕೆಳಗಿಳಿದು, "ಭಗವಂತನು ಪ್ರಸನ್ನ ನಾಗಲೆಂದು ನಾನು ಇದನ್ನು ಮಾಡುತ್ತೇನೆ"–ಎಂಬ ಭಾವನೆಯನ್ನು ಹೊಂದುವುದಿಲ್ಲ. ಅವನು ಜಯ ಮತ್ತು ಸೋಲನ್ನು ಸಮಭಾವದಿಂದ ನೋಡುತ್ತಾನೆ; ಇಲ್ಲಿ ಜಯ ವೆಂದರೆ, ಮಾನಸಿಕ ಪರಿಶುದ್ಧತೆಯನ್ನು ಹೊಂದುವುದನ್ನೂ ಒಳಗೊಂಡಿರುತ್ತದೆ.

ಭಗವಂತನಿಗಾಗಿ ಕರ್ಮಗಳನ್ನು ಮಾಡುವುದರಿಂದ, ಭಕ್ತನು ಕೆಟ್ಟ ಕೆಲಸ ಗಳನ್ನು ಮಾಡುವುದರಿಂದ ವಿಮುಖನಾಗುತ್ತಾನೆ. ಅವನು ದೃಢತೆಯಿಂದ ಮತ್ತು ಉತ್ಸಾಹದಿಂದ ಕೆಲಸಮಾಡುತ್ತಾನೆ. ತನ್ನ ಅತ್ಯುತ್ತಮವಾದುದೆಲ್ಲವನ್ನು ಬೆಳೆಸು ವಂತೆ ಭಕ್ತಿಯು ಅವನನ್ನು ಪ್ರೇರೇಪಿಸುತ್ತದೆ. ಶಾಸ್ತ್ರಗಳೆಲ್ಲವೂ ಭಗವಂತನ ವಿಧಿ. ಗಳೆಂದು ತಿಳಿದು, ತನಗೆ ವಿಹಿತವಾದ ಎಲ್ಲ ಶಾಸ್ತ್ರೀಯ ಕರ್ಮಗಳನ್ನೂ ಶ್ರದ್ಧೆಯಿಂದ ಮಾಡುತ್ತಾನೆ. ಭಗವಂತನ ಆಜ್ಞೆಗಳನ್ನು ಪಾಲಿಸದಿರುವ ಮತ್ತು ತನ್ನ ಕರ್ತವ್ಯ ಗಳ ಬಗ್ಗೆ ನಿರ್ಲಕ್ಷ್ಯದಿಂದಿರುವವನು ಹೇಗೆ ತಾನೆ ನೈಜ ಭಕ್ತನಾದಾನು? ಹೀಗೆ, ಕರ್ಮ ಗಳ ಫಲಗಳ ವಿಷಯದಲ್ಲಿನ ಅನಾಸಕ್ತಿಯು ಅದಕ್ಷತೆಯನ್ನಾಗಲೀ ಅಥವಾ ನಿರ್ಲಕ್ಷತೆ ಯನ್ನಾಗಲೀ ಸೂಚಿಸುವುದಿಲ್ಲ. ಅದಕ್ಕೆ ಬದಲಾಗಿ, ಭಕ್ತನ ಕರ್ತವ್ಯ ನಿರ್ವಹಣೆಯು ಲೌಕಿಕ ವ್ಯಕ್ತಿಯ ಕಾರ್ಯಕ್ಕಿಂತಲೂ ಶ್ರೇಷ್ಠವಾದುದು; ಎರಡನೆಯವನಂತೆ ಮೊದಲನೆಯವನು ಕಾತರತೆ, ನಿರಾಶೆ ಮುಂತಾದುವುಗಳಿಂದ ಪೀಡಿತನಾಗುವುದಿಲ್ಲ.

ಭಗವಂತನು ಉದ್ಘೋಷಿಸುತ್ತಾನೆ—"ನಿನ್ನ ಮನಸ್ಸನ್ನು ನನ್ನ ಮೇಲೆ ಕೇಂದ್ರೀಕರಿಸು, ನನ್ನ ಭಕ್ತನಾಗು; ನನ್ನನ್ನು ಆರಾಧಿಸು; ನನಗೆ ನಮಸ್ಕರಿಸು, (ಎಲ್ಲವನ್ನೂ ನನಗೆ ಸಮರ್ಪಿಸುತ್ತಾ ಈ ರೀತಿಯಾಗಿ ಆಚರಿಸುವ) ನೀನು ನನ್ನನ್ನೇ ಪ್ರವೇಶಿಸುವೆ. ವಾಸ್ತವವಾಗಿ ನಿನಗೆ ಈ ರೀತಿ ಮಾತುಕೊಡುವೆ, ಏಕೆಂದರೆ, ನೀನು ನನಗೆ ಪ್ರೀತಿಪಾತ್ರನು. ಅಂತಹ ಪ್ರೀತಿಯಿಂದ ಕೂಡಿರುವ ಮತ್ತು ಪ್ರೀತಿಪಾತ್ರ ನಾದ ಭಗವಂತನಲ್ಲಿ ಯಾರು ತಾನೇ ಶರಣಾಗತನಾಗಲು ಇಚ್ಛಿಸುವುದಿಲ್ಲ!

ಗೀತೆಯ ಪ್ರಮುಖ ತತ್ತ್ವ

ಅರ್ಜುನನಿಗೆ ಭಗವಾನ್ ಕೃಷ್ಣನು ಉಪದೇಶಿಸಿದ ತತ್ತ್ವವೇನು? ಸ್ವಸ್ವರೂಪದ ಸಾಕ್ಷಾತ್ಕಾರದಿಂದ ಮುಕ್ತಿಯು ಪ್ರಾಪ್ತವಾಗುತ್ತದೆ ಎಂದು ಭಗವಂತನು ಹೇಳುತ್ತಾನೆಯೇ, ಅಥವಾ ಕರ್ಮಗಳೂ ಸಹ ನೇರವಾಗಿ ಮುಕ್ತಿಗೆ ಸಾಧನ ಎಂದು ಅವನ ಅಭಿಪ್ರಾಯವೇ? ಅನೇಕ ಆತ್ಮರಿದ್ದಾರೆ ಮತ್ತು ಜಗತ್ತು ಸತ್ಯ ಎಂಬುದು ಅವನ ಅಭಿಪ್ರಾಯವೇ, ಅಥವಾ ವಾಸ್ತವವಾಗಿ ಆತ್ಮವು ಪರಬ್ರಹ್ಮಕ್ಕಿಂತ ಬೇರೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಯಾದುದಲ್ಲ ಮತ್ತು ಜಗತ್ತು ಆತ್ಯಂತಿಕವಾಗಿ ಸತ್ಯವಲ್ಲ ಎಂದೇ ? ಈ ಪ್ರಶ್ನೆಗಳಿಗೆ ಉತ್ತರಿಸುವುದಕ್ಕೆ ನಾವು ಅವಶ್ಯವಾಗಿ ಗೀತೆಗೇ ನಾವು ಶರಣು ಹೋಗಬೇಕು.

ಆತ್ಮನ ಅಮೃತತ್ವವನ್ನು ಮತ್ತು ಶರೀರ ಹಾಗೂ ಶರೀರದ ಉಪಾಧಿಗಳಿಂದ ಅದು ಸಂಪೂರ್ಣವಾಗಿ ಭಿನ್ನವಾದುದು ಎಂದು ಅರ್ಜುನನಿಗೆ ಭಗವಂತನು ತೋರಿಸುತ್ತಾನೆ. "ಆತ್ಮನಿಗೆ ಹುಟ್ಟು, ಸಾವು ಇಲ್ಲ ಹಾಗೂ ಅವಿನಾಶಿ ಅದು ಅಜ, ನಿತ್ಯ, ಅವಿಕಾರಿ ಮತ್ತು ಪ್ರಾಚೀನ. ದೇಹವನ್ನು ಸಾಯಿಸಿದಾಗ, ಅದು ಸಾಯುವುದಿಲ್ಲ." ಆತ್ಮ ದೇಹಕ್ಕಿಂತ ಬೇರೆಯಾಗಿದೆಯೆಂಬ ಇಂತಹ ಅಸಂದಿಗ್ಧವಾದ ವಾಕ್ಯಗಳು ಗೀತೆಯಲ್ಲಿ ಸಾಮಾನ್ಯವಾಗಿ ಕಾಣಸಿಗುತ್ತವೆ. ದೇಹದ ಕ್ರಿಯೆಗಳಿಂದ ಆತ್ಮನಿಗೆ ಯಾವ ಸಂಪರ್ಕವೂ ಆಗುವುದಿಲ್ಲ ಮತ್ತು ಆತ್ಮ ಕ್ರಿಯಾರಹಿತ ಎಂದು ಭಗವಂತನು ಸ್ಪಷ್ಟವಾಗಿ ತಿಳಿಸಿದ್ದಾನೆ. "ಅಜನಾಗಿ, ಗುಣ ರಹಿತನಾಗಿ, ಅವಿನಾಶಿಯಾದ ಆತ್ಮ, ದೇಹದಲ್ಲಿದ್ದರೂ, ಯಾವ ಕ್ರಿಯೆಯೂ ಇಲ್ಲದವನು ಹಾಗೂ ಅದರ ಸಂಗ ರಹಿತನು"–ಎಂದು ಭಗವಂತನು ಹೇಳುತ್ತಾನೆ.

ಹಾಗಾದರೆ, ಯಾವುದು ಕ್ರಿಯೆಯನ್ನು ಮಾಡುವುದು ? ಭಗವಂತನು ಅನೇಕ ಸ್ಥಳಗಳಲ್ಲಿ ಇದನ್ನು ಸ್ಪಷ್ಟಪಡಿಸುತ್ತಾ ಹೇಳುತ್ತಾನೆ—"ಪ್ರಕೃತಿಯ ಗುಣಗಳು ಎಲ್ಲ ಕ್ರಿಯೆಗಳನ್ನು ಮಾಡುತ್ತವೆ. ಅಹಂಕಾರದಿಂದ ಆವೃತನಾಗಿರುವವನು ನಾನೇ ಕರ್ತೃ" ಎಂದು ಭಾವಿಸುತ್ತಾನೆ.

ಇಂತಹ ಮಾತುಗಳಿಂದ ಆತ್ಮನು ಕ್ರಿಯಾರಹಿತ ಮತ್ತು ಸಂಪೂರ್ಣವಾಗಿ ಅಸಂಗ ಎಂಬುದು ಸ್ಪಷ್ಟವಾಗುತ್ತದೆ. ಅಂತಹ ಆತ್ಮನು ಹೇಗೆ ತಾನೇ ವಾಸ್ತವವಾಗಿ ಬಂಧನವನ್ನು ಅನುಭವಿಸುವುದು ಸಾಧ್ಯ ? ಬಂಧನವು ವಾಸ್ತವವಾಗಿರದೆ ಅಜ್ಞಾನದ ಕಾರ್ಯವಾದರೆ, ಭಗವಂತನ ಮಾತುಗಳು ಅರ್ಥವತ್ತಾಗುತ್ತವೆ.

ಭಗವಂತನು ಹೇಳುತ್ತಾನೆ—"ಎಲ್ಲ ಕ್ರಿಯೆಗಳೂ ಪ್ರಕೃತಿಯಿಂದಲೇ ಮಾಡಲ್ಪಡುತ್ತವೆ ಮತ್ತು ಆತ್ಮನು ಕ್ರಿಯಾರಹಿತ ಎಂದು ಯಾರು ತಿಳಿಯುತ್ತಾನೋ, ಅವನೇ ವಾಸ್ತವವಾಗಿ ಜ್ಞಾನಿ". ವಾಸ್ತವವಾದಜ್ಞಾನವು ಅಜ್ಞಾನವನ್ನು ನಾಶಮಾಡಿ, ಮುಕ್ತಿಯನ್ನುಂಟು ಮಾಡುತ್ತದೆ ಎಂಬ ದೃಷ್ಟಿಯನ್ನು ಕೃಷ್ಣನು ಈ ಮಾತುಗಳಿಂದ ವಿವರಿಸುತ್ತಾನೆ—"ಯಾರು ಶ್ರದ್ಧೆಯಿಂದ ಕೂಡಿ, ಜ್ಞಾನವನ್ನು ಹೊಂದಬೇಕೆಂಬ ತೀವ್ರ ಆಕಾಂಕ್ಷೆಯನ್ನು ಹೊಂದಿ, ಇಂದ್ರಿಯ ನಿಗ್ರಹ ಮಾಡಿರುತ್ತಾನೋ, ಅವನು ವಾಸ್ತವ ಜ್ಞಾನವನ್ನು ಹೊಂದುತ್ತಾನೆ. ಜ್ಞಾನವನ್ನು ಹೊಂದಿ, ಅವನು ಶೀಘ್ರವಾಗಿ ಶಾಂತಿಯನ್ನು ಹೊಂದುತ್ತಾನೆ".

Sri Vidyabharathi Book Centre, Sringeri

CC-O. In Public Domain. Digitized by eGangotri

ಪರಮಾತ್ಮನ ಅನುಗ್ರಹವು ಮುಕ್ತಿಯನ್ನು ತಂದುಕೊಡುವುದಿಲ್ಲವೇ? "ನನ್ನಲ್ಲಿ ಯಾರು ಶರಣಾಗತರಾಗುತ್ತಾರೋ, ಅವರು ಮಾಯೆಯನ್ನು ದಾಟುತ್ತಾರೆ"—ಎಂದು ಕೃಷ್ಣ ಹೇಳಿಲ್ಲವೇ? ಹೌದು. ಭಕ್ತರಾದವರಿಗೆ ಮುಕ್ತಿಯನ್ನು ಅನುಗ್ರಹಿಸುತ್ತೇನೆಂದು ಭಗವಂತನು ಹೇಳಿದ್ದಾನೆ. ಆದರೆ, ಅವನು ಅದನ್ನು ಹೇಗೆ ಮಾಡುತ್ತಾನೆಂಬುದನ್ನು ನೋಡಬೇಕು ಅವನೇ ಸ್ವತಃ ಸ್ಪಷ್ಟಪಡಿಸಿದ್ದಾನೆ— "ಅವರ ವಿಷಯದಲ್ಲಿ ಕೇವಲ ಕರುಣೆಯಿಂದ, ನಾನು, ಅವರ ಬುದ್ಧಿಯಲ್ಲಿ ಇರುತ್ತ, ಪ್ರಕಾಶಮಾನವಾದ ದೀಪವೆಂಬ ಜ್ಞಾನದ ಮೂಲಕ ಅಜ್ಞಾನದಿಂದ ಉತ್ಪನ್ನವಾದ ಅಂಧಕಾರವನ್ನು ನಾಶಪಡಿಸುತ್ತೇನೆ"—ಎಂದು. ಹೀಗೆ, ಜ್ಞಾನವೇ ಮುಕ್ತಿಗೆ ಮಾರ್ಗವೆಂದು ಭಗವಂತನು ತೋರಿಸಿದ್ದಾನೆ. ಅಂತಹ ಜ್ಞಾನವು ಕರ್ಮಗಳ ಫಲಗಳನ್ನು ನಾಶಮಾಡುತ್ತದೆ. "ಬೆಂಕಿಯು ಕಟ್ಟಿಗೆಯನ್ನು ಬೂದಿ ಮಾಡುವಂತೆ, ಜ್ಞಾನಾಗ್ನಿಯು ಎಲ್ಲ ಕರ್ಮಗಳನ್ನೂ ದಹಿಸುತ್ತದೆ"—ಎಂದು ಭಗವಂತನು ಹೇಳಿದ್ದಾನೆ.

ಜ್ಞಾನ ಮತ್ತು ಕರ್ಮಗಳು ಪರಸ್ಪರ ವಿರುದ್ಧವಾದವು ಎಂದು ಸ್ಪಷ್ಟವಾಗಿ ಹೇಳುವ ಭಗವಂತನೇ, ತನ್ನ ಉಪದೇಶಗಳನ್ನು ಮರೆತು, ಈ ಎರಡೂ ಒಟ್ಟಿಗೆ ಸೇರಿ ಮುಕ್ತಿಯನ್ನುಂಟು ಮಾಡುತ್ತವೆ ಎಂದು ಹೇಳುತ್ತಾನೆಂದು ನಿಶ್ಚಿತವಾಗಿ ಹೇಳಲಾಗುವುದಿಲ್ಲ. ಸಾಕ್ಷಾತ್ಕಾರವನ್ನು ಪಡೆಯದವನಿಗೆ ಮಾತ್ರ ಕರ್ಮ ಮತ್ತು ಸಾಕ್ಷಾತ್ಕಾರ ಹೊಂದಿದವನಿಗೆ ಆತ್ಮನಿಷ್ಠೆ ಮಾತ್ರ ಎಂದು ಅವನು ಅತ್ಯಂತ ಸಮಂಜಸವಾಗಿ ಉಪದೇಶಿಸಿದ್ದಾನೆ. "ಯೋಗವನ್ನು ಹೊಂದಲು ಪ್ರಯತ್ನಿಸುವ ಸಾಧುವಿಗೆ, ಕರ್ಮವು ಮಾರ್ಗ ಎಂದು ಹೇಳಲಾಗಿದೆ; ಯೋಗವನ್ನು ಹೊಂದಿದ ಅದೇ ವ್ಯಕ್ತಿಗೆ, ಶಾಂತಿಯು ಮಾರ್ಗ ಎಂದು ಹೇಳಲಾಗಿದೆ"—ಎಂದು ಅವನು ಸ್ಪಷ್ಟಪಡಿಸುತ್ತಾನೆ.

"ಜಾತಸ್ಯ ಹಿ ಧ್ರುವೋ ಮೃತ್ಯುಃ"—ಎಂಬುದನ್ನು ಸೂತ್ರರೂಪವಾಗಿ ತೆಗೆದುಕೊಂಡು, ಭಗವಂತನು—ಆದಿಯಿರುವ ಪ್ರತಿಯೊಂದು ವಸ್ತುವೂ ಅಂತ್ಯವನ್ನು ಹೊಂದಿರಬೇಕೆಂದು ಹೇಳುತ್ತಾನೆ. ಕರ್ಮದಿಂದ ವಾಸ್ತವವಾದ ಮೋಕ್ಷವು ಉಂಟಾಗುವುದಾದರೆ, ಆಗ, ಆರಂಭವನ್ನು ಹೊಂದಿರುವುದರಿಂದ ಮೋಕ್ಷಕ್ಕೆ ಅಂತ್ಯವಿರಲೇಬೇಕಾಗುತ್ತದೆ. ಆದ್ದರಿಂದ, ಕರ್ಮದಿಂದ ಮುಕ್ತಿ ಉಂಟಾಗಲು ಸಾಧ್ಯವಿಲ್ಲ. ಕರ್ಮವು ಚಿತ್ತ ಶುದ್ಧಿಯನ್ನುಂಟು ಮಾಡುತ್ತದೆ. "ಯಜ್ಞ, ದಾನ ಮತ್ತು ತಪಸ್ಸು ಜ್ಞಾನಿಗಳನ್ನು ಶುದ್ಧಗೊಳಿಸುತ್ತದೆ"—ಎಂದು ಹೇಳುವುದರ ಮೂಲಕ ಕೃಷ್ಣನು ಈ ವಿಷಯವನ್ನು ಸ್ಪಷ್ಟಪಡಿಸುತ್ತಾನೆ.

ಅನೇಕ ಆತ್ಮಗಳಿಗೆ ಸಂಬಂಧಿಸಿದಂತೆ, ಮತ್ತು ಪರಮಾತ್ಮನೊಡನೆ ಅವುಗಳ ಸಂಬಂಧವನ್ನು ಕುರಿತು ಭಗವಂತನು ಈ ಮಾತುಗಳು ಅವನ ದೃಷ್ಟಿಕೋನವನ್ನು

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ಪಷ್ಟಪಡಿಸುತ್ತವೆ. "ಯೋಗಾರೂಢನಾದ ವ್ಯಕ್ತಿಯು ಸರ್ವತ್ರ ಸಮದೃಷ್ಟಿಯುಳ್ಳವನಾಗುತ್ತಾನೆ: ಎಲ್ಲ ಪ್ರಾಣಿಗಳಲ್ಲೂ ಆತ್ಮ ಅಧಿಷ್ಠಿತವಾಗಿರುವುದನ್ನೂ ಹಾಗೂ ಎಲ್ಲವೂ ಆತ್ಮನಲ್ಲಿ ಅಧಿಷ್ಠಿತವಾಗಿರುವುದನ್ನೂ ನೋಡುತ್ತಾನೆ." ಆತ್ಮನ ವಿಷಯದಲ್ಲಿ ಏಕವಚನ ಉಪಯೋಗಿಸಿರುವುದು, ವಾಸ್ತವವಾಗಿ ಅನೇಕ ಆತ್ಮಗಳಿಲ್ಲ ಎಂಬುದನ್ನು ಸೂಚಿಸುತ್ತದೆ. ಪರಮಾತ್ಮನೊಡನೆ ಆತ್ಮದ ಸಂಬಂಧವನ್ನು ಕುರಿತಂತೆ ಭಗವಂತನೇ ಹೇಳಿದ್ದಾನೆ—"ಎಲೈ ಗುಡಾಕೇಶನೇ ! ಎಲ್ಲ ಪ್ರಾಣಿಗಳ ಹೃದಯದಲ್ಲೂ ಇರುವ ಆತ್ಮ ನಾನೇ," ಮತ್ತು "ನನ್ನನ್ನು ಕ್ಷೇತ್ರಜ್ಞ (ಜೀವಾತ್ಮ) ಎಂದುತಿಳಿ"

ವಾಸ್ತವವಾದ ಅದ್ವೈತಿ ಮತ್ತು ತೋರಿಕೆಯ ಅದ್ವೈತಿ ಇಬ್ಬರೂ ಬೇರೆ

ಅದ್ವೈತದರ್ಶನವು ಬ್ರಹ್ಮವೊಂದೇ ಪರಮಸತ್ಯವೆಂದೂ, ಮತ್ತು ಬ್ರಹ್ಮವನ್ನು ಬಿಟ್ಟು ಸ್ವತಂತ್ರವಾದ ಅಸ್ತಿತ್ವವಿಲ್ಲದ ಪ್ರಪಂಚವು ಮಾಯೆಯೆಂದು ಅಂಗೀಕರಿಸುತ್ತದೆಂಬುದು ಪ್ರಸಿದ್ಧ. ಜೀವನು ದೇಹ ಅಥವಾ ಮನಸ್ಸು ಮತ್ತು ದ್ವೈತವು ವಾಸ್ತವವಾದುದು ಎಂಬ ತಪ್ಪು ತಿಳುವಳಿಕೆಗೆ ಅವಿದ್ಯೆಯೇ ಕಾರಣ.

ವಾಸ್ತವವಾಗಿ, ಜೀವಾತ್ಮನು ಪರಮಾತ್ಮನಿಗಿಂತ ಭಿನ್ನನಲ್ಲ. ನಿಸ್ಸಂದಿಗ್ಧವಾಗಿ ಹೇಳುವುದಾದರೆ, ತಾನು ಪರಮಬ್ರಹ್ಮವೇ ಎಂದು ಅನುಭವದಿಂದ ಸಾಕ್ಷಾತ್ಕರಿಸಿಕೊಂಡವನೇ ವಾಸ್ತವವಾಗಿ ಅದ್ವೈತಿ. ಅದ್ವೈತ ದರ್ಶನವೇ ಸರಿಯಾದುದು ಎಂದು ಅಭಿಪ್ರಾಯ ಪಡುವ ಇತರರನ್ನೂ ಅದ್ವೈತಿಗಳೆಂದು ಕರೆಯಲಾಗುತ್ತದೆ. ಆದರೆ, ಈ ಪ್ರಯೋಗವು ಮಾತ್ರ ಆಲಂಕಾರಿಕವಾದುದು.

•

ಅಪರೋಕ್ಷವಾಗಿ ಯಾರು ಸತ್ಯವನ್ನು ಸಾಕ್ಷಾತ್ಕರಿಸಿಕೊಂಡಿರುತ್ತಾರೋ ಅವರನ್ನು ಜ್ಞಾನಿಗಳೆಂದು ಕರೆಯುತ್ತಾರೆ; ಅವರು ಜೀವನ್ಮುಕ್ತರಾಗುತ್ತಾರೆ. ಅಂತಹ ಜನರು ವಿರಳ. "ವಾಸುದೇವನೇ ಸರ್ವವೂ ಎಂದು ತಿಳಿದಿರುತ್ತಾರೋ ಅಂತಹವರು ಸಿಕ್ಕುವುದು ದುರ್ಲಭ" ಎಂದು ಭಗವದ್ಗೀತೆಯಲ್ಲಿ ಶ್ರೀಕೃಷ್ಣನು ಹೇಳಿದ್ದಾನೆ. ಅಹಂಕಾರ ರಹಿತರಾದ ಅಂತಹ ಮಹಾತ್ಮರು ತಮ್ಮ ಜ್ಞಾನವನ್ನು ಪ್ರದರ್ಶಿಸುವುದಿಲ್ಲ

ಇದಕ್ಕೆ ವಿರುದ್ಧವಾಗಿ, ಅಂತಹ ಸಾಕ್ಷಾತ್ಕಾರವನ್ನು ಹೊಂದದೆ ಇದ್ದರೂ ಸಹ, ತನಗೆ ಮುಕ್ತಿ ದೊರಕಿರುವುದೆಂದು ಮಾತನಾಡುವ ಹಾಗೂ ವ್ಯವಹರಿಸುವ ಅನೇಕ ಜನರಿದ್ದಾರೆ. ಅವರು ಆಚಾರದಲ್ಲೂ ಯಾವ ನಿಯಮವನ್ನೂ ಹೊಂದಿರುವುದಿಲ್ಲ

Sri Vidyabharathi Book Centre, Sringeri

CC-O. In Public Domain. Digitized by eGangotri

ವೆಂಬುದನ್ನು ನಾವು ಕಾಣುತ್ತೇವೆ. ಪ್ರಶ್ನಿಸಿದಾಗ, ಅವರು ಹೇಳುತ್ತಾರೆ—"ನಾನು ದೇಹ ಅಥವಾ ಮನಸ್ಸಲ್ಲ. ನಾನು ಕರ್ತೃವೂ ಅಲ್ಲ ಅಥವಾ ಕರ್ಮದಿಂದ ನಾನು ಬಾಧಿತನಲ್ಲ. ಮತ್ತು ಪ್ರಪಂಚವು ಮಾಯಾಮಾತ್ರವಾದುದು. ಆದ್ದರಿಂದ, ದೇಹ ಮತ್ತು ಮನಸ್ಸು ಯಾವ ಕರ್ಮದಲ್ಲಿ ಪ್ರವೃತ್ತವಾಗಿವೆ, ಎಂಬುದನ್ನು ಕುರಿತು ನಾನೇಕೆ ತಲೆ ಕೆಡಿಸಿಕೊಳ್ಳಬೇಕು ?" ಎಂದು.

ಈ ಪ್ರಸಂಗವನ್ನು ಕುರಿತ ಕಥೆಯೊಂದಿದೆ. ಒಬ್ಬ ವ್ಯಕ್ತಿಯು ಶಿಷ್ಯ ಸಮೂಹ ವನ್ನುದ್ದೇಶಿಸಿ ಅದ್ವೈತದರ್ಶನವನ್ನು ಪ್ರತಿಪಾದನೆ ಮಾಡುತ್ತಿದ್ದ ಮತ್ತು ತನ್ನ ಪ್ರತಿ ಪಾದನಾ ಸರಣಿಯಲ್ಲಿ ಪ್ರಪಂಚವು ಮಿಥ್ಯಾ ಎಂಬುದನ್ನು ನಿರೂಪಿಸಿದ. ಆಕಸ್ಮಿಕವಾಗಿ ಆಗ ಒಂದು ಕಾಡಾನೆಯು ಆ ಮಾರ್ಗವಾಗಿ ಓಡಿ ಬಂದಿತು. ಶಿಷ್ಯರೆಲ್ಲರೂ ದಿಕ್ಕಾ ಪಾಲಾಗಿ ಓಡಿದರು ; ಅಧ್ಯಾಪಕನೂ ಸಹ ಇದಕ್ಕೆ ಹೊರತಾಗಲಿಲ್ಲ. ದುರದೃಷ್ಟ ವಶಾತ್, ಅಧ್ಯಾಪಕನು ಎಡವಿ, ಹಳ್ಳವೊಂದಕ್ಕೆ ಬಿದ್ದನು. ಆನೆಯು ಹೋದ ನಂತರ, ಹಳ್ಳದಲ್ಲಿ ಸಹಾಯಕ್ಕಾಗಿ ಕೂಗುತ್ತಿದ್ದ ತಮ್ಮ ಅಧ್ಯಾಪಕನನ್ನು ಪತ್ತೆ ಮಾಡಿದರು. ಅವರು ಅವನನ್ನು ಸಮೀಪಿಸಿ, ಕೇಳಿದರು—"ಸ್ವಾಮಿ, ಪ್ರಪಂಚವು ಅಸತ್ಯವೆಂದು ತಾವು ಹೇಳುತ್ತಿದ್ದಿರಿ. ಹಾಗಾದರೆ, ಆನೆಯು ಮುನ್ನುಗ್ಗಿದಾಗ ತಾವು ಭಯದಿಂದ ಏತಕ್ಕಾಗಿ ಓಡಿದಿರಿ ? ಮತ್ತೂ, ಸಹಾಯಕ್ಕಾಗಿ ತಾವು ಏತಕ್ಕೆ ಕೂಗುತ್ತಿದ್ದಿರಿ ?"—ಎಂದು. ನಿಸ್ಸಹಾಯನಾದ ಆ ಅಧ್ಯಾಪಕನು ಕ್ಷಣಕಾಲ ಯೋಚಿಸಿ, ಹೇಳಿದ—ಹೊರಕ್ಕೆ ಬರುವುದಕ್ಕೆ ಮೊದಲು ನನಗೆ ಸಹಾಯಮಾಡಿ, ಆಮೇಲೆ ನಾನು ವಿವರಿಸುತ್ತೇನೆ—ಎಂದು ಅದೇ ರೀತಿ, ಅವನನ್ನು ಮೇಲಕ್ಕೆ ಎತ್ತಿದರು.

ತಾನು ಅಧ್ಯಾಪನ ಮಾಡುತ್ತಿದ್ದ ಜಾಗದಲ್ಲಿ ಅವನು ಆಸನದ ಮೇಲೆ ಕುಳಿತು ಕಣ್ಣುರೆಪ್ಪೆಯನ್ನು ಅಲುಗಾಡಿಸದೆ, ಘೋಷಿಸಿದ—"ನಾನು ಈಗಾಗಲೇ ಹೇಳಿರುವು ದಕ್ಕೆ ನಾನು ಬದ್ಧನಾಗಿದ್ದೇನೆ. ಪ್ರಪಂಚವು ಮಿಥ್ಯಾ ಮುನ್ನುಗ್ಗಿ ಬಂದ ಆನೆಯು ಮಿಥ್ಯಾ. ಭಯದಿಂದ ನಾನು ಓಡಿದುದನ್ನು ನೀವು ನೋಡಿದಿರಿ, ಆದರೆ, ನಾನು ಓಡಿ ದುದು ಮಿಥ್ಯಾ. ನಾನು ಹಳ್ಳಕ್ಕೆ ಬಿದ್ದು, ಸಹಾಯಕ್ಕಾಗಿ ಕೂಗುತ್ತಿದ್ದುದನ್ನು ನೀವು ನೋಡಿದಿರಿ. ಅವೆಲ್ಲವೂ ಮಿಥ್ಯಾ. ಕೊನೆಯದಾಗಿ, ನೀವು ನನಗೆ ಸಹಾಯ ಮಾಡಿದುದೂ ಮಿಥ್ಯಾ"—ಎಂದು.

ಆ ಅಧ್ಯಾಪಕನೆನಿಸಿಕೊಂಡವನು ಬುದ್ಧಿವಂತನಿರಬಹುದೆಂದು ಈ ವಿವರಣೆಯು ತೋರಿಸಬಹುದು, ಆದರೆ, ಅವನು ಬೂಟಾಟಿಕೆಯವನು ಎಂಬ ವಿಷಯವನ್ನು ಅದು ಬದಲಾಯಿಸುವುದಿಲ್ಲ. ತನ್ನ ಮನಸ್ಸಿಗೆ ವ್ಯಕ್ತಿಗೆ ಸತ್ಯವಾಗಿರಬೇಕು. ಅದ್ವೈತದ ಮೇಲೆ ದೊಡ್ಡದಾಗಿ ಮಾತನಾಡುತ್ತ ಒಬ್ಬನು ಇತರರನ್ನು ವಂಚಿಸಬಹುದು ;

Sri Vidyabharathi Book Centre, Sringeri

CC-O. In Public Domain. Digitized by eGangotri

ಆದರೆ, ತನ್ನ ಆಚರಣೆಯನ್ನು ಸರಿಪಡಿಸಿಕೊಳ್ಳದಿದ್ದರೆ, ಅದರಿಂದ ಯಾವ ಪ್ರಯೋಜನವೂ ಇಲ್ಲ. "ಪ್ರಾಪಂಚಿಕ ಭೋಗಗಳಲ್ಲಿ ಆಸಕ್ತನಾಗಿದ್ದೂ ಕೂಡ, ಯಾರು ಎಲ್ಲವೂ ಬ್ರಹ್ಮವೆಂದು ಹೇಳುತ್ತಾನೋ, ಅವನು ವಾಸ್ತವವಾಗಿ ಕರ್ಮದಿಂದ ಚ್ಯುತನಾದವನು, ಹಾಗೂ ಬ್ರಹ್ಮದಿಂದಲೂ ಚ್ಯುತನಾದವನು. ಅಂತಹ ವ್ಯಕ್ತಿಯನ್ನು ನೀಚನೆಂದು ತ್ಯಜಿಸಬೇಕೆಂದು" — ಹೇಳಲಾಗಿದೆ. ಏಕೆಂದರೆ, ಸತ್ಯವನ್ನು ಸಾಕ್ಷಾತ್ಕರಿಸಿಕೊಳ್ಳಲು ಮತ್ತು ಮುಕ್ತಿಯನ್ನು ಪಡೆಯಲು ಅಂತಹ ವ್ಯಕ್ತಿ ಅಸಮರ್ಥನಾಗಿರುತ್ತಾನೆ, ಆದ್ದರಿಂದಲೇ ಅವನು ಬ್ರಹ್ಮದಿಂದ ಚ್ಯುತನಾಗಿದ್ದಾನೆ ಎಂದು ಹೇಳಲಾಗಿದೆ. ತನಗೆ ಸಾಕ್ಷಾತ್ಕಾರವಾಗಿದೆಯೆಂದು ಅವನು ವೇಷ ಕಟ್ಟುವುದರಿಂದ, ಅಂತಹ ವ್ಯಕ್ತಿ ನಿಷ್ಠೆಯಿಂದ ವಿಹಿತ ಕರ್ಮಗಳನ್ನೂ ಆಚರಿಸುವುದಿಲ್ಲ. ಆದ್ದರಿಂದಲೇ, ಅವನು ಕರ್ಮದಿಂದ ಚ್ಯುತನಾಗಿದ್ದಾನೆಂದು ಹೇಳಿರುವುದು.

ಹಾಗಾದರೆ, ಅಂತಹ ಸಾಕ್ಷಾತ್ಕಾರವನ್ನು ಹೊಂದಿರದಿದ್ದರೂ ಸಹ, ಜಗತ್ತು ಮಿಥ್ಯಾ ಎಂದು ತಿಳಿದಿದೆ ಎಂಬ ರೀತಿಯಲ್ಲಿ ವ್ಯಕ್ತಿಯೋರ್ವನು ಏತಕ್ಕೆ ಪ್ರವೃತ್ತನಾಗುತ್ತಾನೆ? ಒಂದು ಕಾರಣವೆಂದರೆ, ತನ್ನ ಭ್ರಮೆ. ಮತ್ತೊಂದೆಂದರೆ, ಒಳ್ಳೆ ಹೆಸರು ಬರಬೇಕೆಂಬ ಆಸೆ. ನೀಲಕಂಠದೀಕ್ಷಿತರು ಬಹು ತಮಾಷೆಯಾಗಿ ಬರೆದಿದ್ದಾರೆ—"ಯಾವಾಗಲೂ ಜಪಸರವನ್ನು ಕೈಲಿ ಹಿಡಿದುಕೊಂಡು, ಆಗಾಗ ತನ್ನ ಕಣ್ಣು ತೆರೆಯುತ್ತ, ಮತ್ತು ಸರ್ವವೂ ಬ್ರಹ್ಮವೆಂದು ಸಾರುವುದು—ಇವು ಒಳ್ಳೆಯ ಪ್ರಭಾವವನ್ನುಂಟುಮಾಡುವುದಕ್ಕೆ ಖಚಿತವಾದ ಮಾರ್ಗಗಳು" — ಎಂದು.

ಇಂತಹ ತೋರ್ಕೆಯ ಅದ್ವೈತಿಗಳು ಈ ದಿನಗಳಲ್ಲಿ ವಿರಳರೇನಲ್ಲ. ಅವರು ಕಠೋಪನಿಷತ್ತು ಹೇಳಿರುವ ಈ ಮಾತುಗಳನ್ನು ಮನಸ್ಸಿನಲ್ಲಿ ಗಮನಿಸುವುದು ಉತ್ತಮ—"ಯಾರು ದುರಾಚಾರಗಳನ್ನು ಬಿಟ್ಟಿರುವುದಿಲ್ಲವೋ, ಯಾರು ಜಿತೇಂದ್ರಿಯರಾಗಿರುವುದಿಲ್ಲವೋ, ಯಾರ ಮನಸ್ಸು ಏಕಾಗ್ರತೆಯನ್ನು ಹೊಂದಿರುವುದಿಲ್ಲವೋ ಮತ್ತು ಯಾರ ಮನಸ್ಸು ಫಲಕ್ಕಾಗಿ ಅಪೇಕ್ಷೆ ಪಡುವುದರಿಂದ ಮುಕ್ತವಾಗಿರುವುದಿಲ್ಲವೋ, ಅಂತಹವರು ಜ್ಞಾನದಿಂದ ಆತ್ಮನನ್ನು ಪಡೆಯುವುದಿಲ್ಲ." ಆಧ್ಯಾತ್ಮಿಕ ನಿಷ್ಠೆಯ ಅಭ್ಯಾಸದಿಂದ ಮನಸ್ಸು ಪರಿಶುದ್ಧವಾದ ನಂತರವೇ ವಾಸ್ತವವಾಗಿ ಜ್ಞಾನೋದಯವಾಗುತ್ತದೆಂಬುದು ಸ್ಪಷ್ಟವಾಗುತ್ತದೆ.

ಬ್ರಹ್ಮಜ್ಞಾನಕ್ಕೆ ಅವಶ್ಯವಾದ ಪೂರ್ವಸಾಧನೆಗಳು

"ಅಥಾತೋ ಬ್ರಹ್ಮಜಿಜ್ಞಾಸಾ" (ಆದ್ದರಿಂದ ಬ್ರಹ್ಮಜಿಜ್ಞಾಸೆಯನ್ನು ನಂತರ ಪ್ರಾರಂಭಮಾಡಬೇಕು) ಇದು ಬಾದರಾಯಣರ ಬ್ರಹ್ಮಸೂತ್ರಗಳ ಮೊದಲನೆಯ

Sri Vidyabharathi Book Centre, Sringeri

CC-O. In Public Domain. Digitized by eGangotri

ಸೂತ್ರ. ಕೆಲವು ಅವಶ್ಯಕವಾದವನ್ನು ಸಾಧಿಸಿದ ನಂತರವೇ ಬ್ರಹ್ಮದ ವಾಸ್ತವ ಸ್ವರೂಪದ ವಿಷಯದಲ್ಲಿ ಜಿಜ್ಞಾಸೆಯನ್ನು ಮಾಡಬೇಕೆಂಬುದನ್ನು "ಅನಂತರ" ಎಂಬ ಪದವು ಸೂಚಿಸುತ್ತದೆ. ವೇದಗಳ ಕರ್ಮಕಾಂಡದಲ್ಲಿ ವಿವರವಾಗಿ ಹೇಳಲಾಗಿರುವ ಕರ್ಮಗಳನ್ನು ತಿಳಿದುಕೊಳ್ಳುವುದು ಪೂರ್ವಸಿದ್ಧತೆಯಲ್ಲ. ಅದು ಸಾದನ ಚತುಷ್ಟಯ—ಅಂದರೆ ನಾಲ್ಕು ವಿಧವಾದ ಆಧ್ಯಾತ್ಮಿಕ ಸಾಧನೆಗಳನ್ನೊಳ್ಳಗೊಂಡಿರುತ್ತದೆ.

ಒಬ್ಬನು ವೇದಾಂತದ ಗ್ರಂಥಗಳನ್ನು ದೀರ್ಘಕಾಲ ಅಧ್ಯಯನ ಮಾಡಿ ಪ್ರಭುತ್ವವನ್ನು ಹೊಂದಿ. ವಿದ್ವಾಂಸರು ಮತ್ತು ಸಾಮಾನ್ಯ ಜನತೆ ಮೆಚ್ಚುವ ರೀತಿಯಲ್ಲಿ ಪ್ರವಚನ ಮಾಡಬಹುದು ; ಆದರೆ, ಆ ವ್ಯಕ್ತಿಯು ಸಾಧನ ಚತುಷ್ಟಯ ಸಂಪನ್ನನಾಗದಿದ್ದರೆ, ಅವನಿಗೆ ಸತ್ಯಸಾಕ್ಷಾತ್ಕಾರವಾಗುವುದಿಲ್ಲ. ವೇದಾಂತದಲ್ಲಿ ವಿದ್ವತ್ತನ್ನು ಹೊಂದಿದ್ದರೂ, ಅವನು ಸಂಸಾರದಲ್ಲಿ ಬಂಧಿತನಾಗಿರುತ್ತಾನೆ. ಯಾರು ಸಾಧನ ಚತುಷ್ಟಯ ಸಂಪನ್ನನಾಗಿ, ಜ್ಞಾನಿಯ ಮಾರ್ಗದರ್ಶನದಲ್ಲಿ ಪ್ರಯತ್ನಿಸುತ್ತಾನೋ, ಅವನು ಬ್ರಹ್ಮ ಸಾಕ್ಷಾತ್ಕಾರವನ್ನು ಹೊಂದುತ್ತಾನೆ ಮತ್ತು ಮುಕ್ತನಾಗುತ್ತಾನೆ.

"ವಿವೇಕ" ಎಂಬುದು ಸಾಧನ ಚತುಷ್ಟಯದಲ್ಲಿ ಮೊದಲನೆಯದು. ನಿತ್ಯವಾದುದು ಬ್ರಹ್ಮ ಮತ್ತು ಇತರ ಎಲ್ಲವೂ ಅನಿತ್ಯವಾದುದು ಎಂದು ಸಾಧಕನು ಮೊದಲು ವಿಂಗಡಿಸಬೇಕು. ಯಾರು "ಇದು ನಿತ್ಯ, ಇದು ಅನಿತ್ಯ" ಎಂಬುದನ್ನು ತಿಳಿದಿರುತ್ತಾನೋ, ಅವನು ಮಾತ್ರವೇ ಅನಿತ್ಯವಾದ ಪ್ರಪಂಚದಿಂದ ತನ್ನ ಮನಸ್ಸನ್ನು ಹಿಂದಕ್ಕೆ ಸರಿಸಲು ಪ್ರಯತ್ನಿಸುತ್ತಾನೆ. ಪ್ರಪಂಚವನ್ನು ನಾಶವಾಗತಕ್ಕದ್ದೆಂದು ಮಾತ್ರವಲ್ಲದೆ, ಮಾಯೆಯೆಂದೂ ತಿಳಿಯಬೇಕು. ವಾಸ್ತವವಾಗಿ, ಖಂಡಿತವಾಗಿಯೂ ಮಾಯೆಯೆಂದು ತಿಳಿದಿರುವ ಯಾವ ವಸ್ತುವನ್ನು ತಾನೇ ಒಬ್ಬನು ಅಪೇಕ್ಷಿಸುತ್ತಾನೆ. ವೈಷಯಿಕ ವಸ್ತುಗಳು ಅನಿತ್ಯವೆಂದು ತಿಳಿಯುವುದು ಸಾಲದು ; ಏಕೆಂದರೆ, ಅಶಾಶ್ವತವೆಂದು ತಿಳಿದಿದ್ದರೂ ಸಹ, ಜನರು ಸಾಮಾನ್ಯವಾಗಿ ಪ್ರಾಪಂಚಿಕ ಸೌಖ್ಯಗಳನ್ನು ಅರಸುತ್ತಾರೆ.

ಸಾಧನ ಚತುಷ್ಟಯದಲ್ಲಿ ಎರಡನೆಯದು "ವೈರಾಗ್ಯ". ಹಿಂದೆ ತಿಳಿದಂತೆ, ಇದು ವಿವೇಕದಿಂದ ಉದ್ಭವಿಸುತ್ತದೆ. ಆಪ್ತನಾದ ಸಂಬಂಧಿಯಾಗಲೀ ಅಥವಾ ಸ್ನೇಹಿತನಾಗಲೀ ಸತ್ತಾಗ, ಪ್ರಪಂಚದ ವಿಷಯದಲ್ಲಿ ನಿರಾಸಕ್ತಿಯನ್ನು ಒಬ್ಬನು ಅನುಭವಿಸಬಹುದು. ಆದರೆ, ಈ ರೀತಿಯ ನಿರಾಸಕ್ತಿಯು ಬಹುಬೇಗ ನಶಿಸುತ್ತದೆ. ವಿವೇಕದಿಂದ ಉತ್ಪನ್ನವಾದ ಅಚಲವಾದ ವೈರಾಗ್ಯವೇ ಬ್ರಹ್ಮ ಸಾಕ್ಷಾತ್ಕಾರಕ್ಕೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಉಪಕಾರಿಯಾಗುತ್ತದೆ. ಸಾಧಕನು ಬಹು ಎಚ್ಚರಿಕೆಯಿಂದ ಎಲ್ಲ ಪ್ರಾಪಂಚಿಕ ಹಾಗೂ ಸ್ವರ್ಗ ಸೌಖ್ಯವಸ್ತುಗಳು, ತನ್ನ ದೇಹವೂ ಸೇರಿದಂತೆ, ಕಾಗೆಯ ಉಚ್ಛಿಷ್ಟದಂತೆ, ಜುಗುಪ್ಸೆಹೊಂದುವವರೆಗೆ, ವೈರಾಗ್ಯವನ್ನು ಸಾಧಿಸ ಬೇಕು.

ಸಾಧನಚತುಷ್ಟಯದ ಮೂರನೆಯದು ಆರು ಗುಣಗಳ ಒಂದು ಸಮೂಹ. ಮೊದಲನೆಯದು "ಶಮ" ಅಥವಾ ಮನೋನಿಗ್ರಹ. ಮನಸ್ಸು ತನ್ನ ವಸ್ತುವಿನ ಮೇಲೆ ಏಕೀಕೃತವಾಗಿರುವುದು. ವೈರಾಗ್ಯವಿಲ್ಲದಿರುವಾಗ ಮನಸ್ಸು ವೈಷಯಿಕ ವಸ್ತುಗಳ ಕಡೆ ತಿರುಗುತ್ತದೆ. ಇದಕ್ಕೆ ಬದಲಾಗಿ, ಯಾರು ಸಂತತವಾಗಿ ವೈಷಯಿಕ ವಸ್ತುಗಳ ದೋಷಗಳನ್ನು—ಅಂದರೆ, ಅವುಗಳ ಅನಿತ್ಯತ್ವ, ಬಹುವ್ಯಯವನ್ನು ಹೊಂದಿರುವುದು, ಅವನ್ನು ಹೊಂದಲು ಬೇಕಾದ ಪ್ರಯತ್ನ ಮತ್ತು ಅವು ಕ್ಷುಲ್ಲಕ ವಾಗಿರಬಹುದು—ಇತ್ಯಾದಿಗಳನ್ನು ಗಮನಿಸಿದಾಗ, ಅವುಗಳ ವಿಷಯದಲ್ಲಿ ಆಸಕ್ತಿ ಯನ್ನು ಕಳೆದುಕೊಳ್ಳುತ್ತಾನೆ. ಅವನ ಮನಸ್ಸು ಅವುಗಳ ಕಡೆ ತಿರುಗುವುದಿಲ್ಲ. ಹೀಗೆ, ಮನೋನಿಗ್ರಹಕ್ಕೆ ವೈರಾಗ್ಯವೇ ಆಧಾರ.

ಮನೋನಿಗ್ರಹವು "ದಮ"ವನ್ನುಂಟುಮಾಡುತ್ತದೆ. ದಮ ಎಂದರೆ, ಇಂದ್ರಿಯಗಳನ್ನು, ಅವುಗಳ ವಿಷಯಗಳಿಂದ ನಿಯಂತ್ರಿಸುವುದು. ಕಠೋಪ ನಿಷತ್ತಿನಲ್ಲಿ ವೈಷಯಿಕ ವಸ್ತುಗಳನ್ನು ಮಾರ್ಗಗಳಿಗೂ, ಇಂದ್ರಿಯಗಳನ್ನು ಕುದುರೆ ಗಳಿಗೂ ಮತ್ತು ಮನಸ್ಸನ್ನು ನಿಯಂತ್ರಿಸುವ ಹಗ್ಗಕ್ಕೂ ಹೋಲಿಸಲಾಗಿದೆ. ಆದ್ದ ರಿಂದ, ತನ್ನ ಉದ್ದೇಶದಲ್ಲಿ ಆಸಕ್ತವಾಗಿರುವ ಮನಸ್ಸಿನಿಂದ ಇಂದ್ರಿಯಗಳನ್ನು ಕುದುರೆಗಳಿಗೂ ಮತ್ತು ಮನಸ್ಸನ್ನು ನಿಯಂತ್ರಿಸುವ ಹಗ್ಗಕ್ಕೂ ಹೋಲಿಸಲಾಗಿದೆ. ದ ರಿಂದ, ತನ್ನ ಉದ್ದೇಶದಲ್ಲಿ ಆಸ್ತಕವಾಗಿರುವ ಮನಸ್ಸಿನಿಂದ ಇಂದ್ರಿಯಗಳನ್ನು ನಿಯಂತ್ರಿಸಬಹುದು ಮನೋನಿಗ್ರಹದಿಂದ ಇಂದ್ರಿಯಗಳ ಕಾರ್ಯಗಳನ್ನು ನಿಗ್ರಹಿಸ ಬಹುದು. ಇಂದ್ರಿಯಗಳ ಕಾರ್ಯಗಳನ್ನು ಕಡೆಗಣಿಸಿ, ಕೇವಲ ಮನೋನಿಗ್ರಹಕ್ಕೆ ಮಾತ್ರ ಸಾಧಕನು ಗಮನಕೊಡಬೇಕೆಂದು ಭಾವಿಸಬಾರದು. ಗೀತೆಯಲ್ಲಿ ಭಗವಂತನು ತಿಳಿಸುವಂತೆ, ಇಂದ್ರಿಯಗಳು ಶಕ್ತಿಯುತವಾದವು ಮತ್ತು ಮನಸ್ಸನ್ನು ಚಂಚಲ ಗೊಳಿಸಬಹುದು. ವೈಷಯಿಕ ವಸ್ತುಗಳನ್ನು ನಿವಾರಿಸುವುದು ಮನಸ್ಸನ್ನು ನಿಗ್ರಹಿ ಸುವುದಕ್ಕೆ ಅನುಕೂಲವಾದ ಪರಿಸ್ಥಿತಿಯನ್ನು ಉಂಟುಮಾಡುವುದು : ಸುಂದರ ವಾದ ದೃಶ್ಯಗಳು, ರುಚಿಕರವಾದ ವಸ್ತುಗಳು, ಮುಂತಾದುವುಗಳು ಎದುರಿಗೆ ಇದ್ದರೂ ಇಂದ್ರಿಯ ನಿಗ್ರಹವನ್ನು ಕೇವಲ ಮನೋನಿಗ್ರಹದಿಂದ ಮಾತ್ರ ಹೊಂದಲು ಸಾಧ್ಯ.

Sri Vidyabharathi Book Centre, Sringeri

CC-O. In Public Domain. Digitized by eGangotri

ಇಂದ್ರಿಯ ನಿಗ್ರಹವು "ಉಪರತಿ"ಗೆ ಹಿನ್ನೆಲೆ. ಉಪರತಿ ಎಂದರೆ ಇಂದ್ರಿಯ ಸೌಖ್ಯಗಳಿಂದ ಮತ್ತು ಬಂಧನವನ್ನುಂಟುಮಾಡುವ ಕಾರ್ಯಗಳಿಂದ ನಿವೃತ್ತಿ. ಪ್ರಾಪಂಚಿಕ ಕಾರ್ಯಗಳಲ್ಲಿ ಮತ್ತು ಧಾರ್ಮಿಕ ಕಾರ್ಯಗಳನ್ನು ಮಾಡುವುದರಲ್ಲಿ ಮಗ್ನನಾಗಿರುವವನು, ಯಾವ ಗುಣವೂ ಇಲ್ಲದಿರುವ ಮತ್ತು ಸೂಕ್ಷ್ಮಾತಿಸೂಕ್ಷ್ಮವಾಗಿರುವ ಬ್ರಹ್ಮವನ್ನು ತಿಳಿಯಲು ಅವಿಚ್ಛಿನ್ನವಾಗಿ ಮತ್ತು ತೀವ್ರವಾಗಿ ಪ್ರಯತ್ನ ಮಾಡಲು ಹೇಗೆ ಸಾಧ್ಯ ? ದೇಹವನ್ನೊಳಗೊಂಡು ಪ್ರಪಂಚದ ವಿಷಯದಲ್ಲಿ ಸಂಪೂರ್ಣವಾಗಿ ನಿರ್ಲಿಪ್ತತೆಯನ್ನು ಹೊಂದಿ, ಯೋಗದ ಸಾರಭೂತವಾದ ನಿರ್ವಿಕಲ್ಪ ಸಮಾಧಿಯಲ್ಲಿ ಮುಳುಗಿರುವುದೇ ನಿವೃತಿಯ ಅವಧಿ.

"ತಿತಿಕ್ಷಾ" ಎಂಬುದು ನಾಲ್ಕನೆಯದು. ಯಾವ ಪರಿಹಾರ ಕ್ರಮವನ್ನೂ ತೆಗೆದುಕೊಳ್ಳದೆ, ದುಃಖ ಹಾಗೂ ಪಶ್ಚಾತ್ತಾಪವಿಲ್ಲದೆ ಎಲ್ಲ ಕಷ್ಟಗಳನ್ನೂ ಸಹಿಸುವುದೇ ವಾಸ್ತವವಾದ ತಿತಿಕ್ಷೆಯನ್ನು ಸೂಚಿಸುತ್ತದೆ. ಉಪರತಿಯು ಉನ್ನತಮಟ್ಟದಲ್ಲಿದ್ದಾಗ, ಮನಸ್ಸು ಉಷ್ಣ, ಶೀತ, ಮುಂತಾದುವನ್ನು ಅನುಭವಿಸುವುದಿಲ್ಲ. ಆದರೂ, ಉಷ್ಣ, ಶೀತ, ಮುಂತಾದುವು ಉಂಟಾದರೂ, ಸಹಿಸಲಾಗುತ್ತದೆ. ಸಾಮಾನ್ಯವಾಗಿ ಅಹಿತಕರವಾದ ಅನುಭವಗಳನ್ನು ನಿವಾರಣೆ ಮಾಡಿಕೊಳ್ಳಲು ಆಗದಿದ್ದಾಗ ಜನರು ದುಃಖಿಸುತ್ತಾರೆ. ವಾಸ್ತವವಾದ ಸಹನೆಯನ್ನು ಹೊಂದಿರುವ ಆಧ್ಯಾತ್ಮಿಕ ಸಾಧಕನು ಭಿನ್ನವ್ಯಕ್ತಿ. ಆತಂಕ, ದುಃಖ, ಮುಂತಾದುವುಗಳಿಂದ ಲಿಪ್ತವಾದ ಮನಸ್ಸು, ಸತ್ಯದ ವಿಷಯದಲ್ಲಿ ಸಮರ್ಥವಾಗಿ ವಿಚಾರಮಾಡುವುದಕ್ಕೆ ಅರ್ಹವಾಗಿರುವುದಿಲ್ಲ.

"ಶ್ರದ್ಧಾ"—ಅಂದರೆ, ಗುರುವಿನ ಮಾತುಗಳು ಮತ್ತು ಶಾಸ್ತ್ರವಾಕ್ಯಗಳು ಸತ್ಯವೆಂದು ಅಚಲವಾದ ನಂಬಿಕೆಯನ್ನು ಹೊಂದಿರುವುದು. ಲೌಕಿಕ ವ್ಯವಹಾರದಲ್ಲಿಯೂ ಸಹ, ನಂಬಿಕೆ ಇಲ್ಲದಿರುವ ವ್ಯಕ್ತಿಯ ಮಾತುಗಳಿಗೆ ಅನುಗುಣವಾಗಿ ಮತ್ತೊಬ್ಬನು ಯೋಚಿಸುವುದಿಲ್ಲ. ವಸ್ತು ಸ್ಥಿತಿಯು ಹೀಗಿರುವಾಗ, ಇಂದ್ರಿಯ ಪ್ರತ್ಯಕ್ಷದ ಮೂಲಕವಾಗಿ ತಿಳಿಯಲಾಗದಂತಹ ವಸ್ತುಗಳ ವಿಷಯದಲ್ಲಿ ಶ್ರದ್ಧೆಯ ಪ್ರಾಧಾನ್ಯವನ್ನು ಕುರಿತು ಏನುತಾನೇ ಹೇಳಲಾದೀತು ? ಸತ್ಯವನ್ನು ತಿಳಿಯಬೇಕಾದರೆ, ಗುರುವಿನಲ್ಲಿ ಹಾಗೂ ಶಾಸ್ತ್ರಗಳಲ್ಲಿ ಅಚಲವಾದ ಶ್ರದ್ಧೆ ಅಗತ್ಯ. ಮತ್ತೂ, ಏಕಾಗ್ರತೆಯಿಂದ ಕೂಡಿದ ಮನಸುಳ್ಳ, ಇಂದ್ರಿಯ ನಿಗ್ರಹ ಮಾಡಿದ, ಉಪರತನಾದ ಮತ್ತು ತಿತಿಕ್ಷೆಯನ್ನು ಹೊಂದಿದ ವ್ಯಕ್ತಿ ಮಾತ್ರ—"ಬ್ರಹ್ಮವೊಂದೇ ಸತ್ಯ, ಇತರ ಎಲ್ಲವೂ ಮಾಯೆ. ನೀನು ವಾಸ್ತವವಾಗಿ ಪರಬ್ರಹ್ಮವೇ"—ಎಂದು ಉಪದೇಶಿಸಿದಾಗ, "ಅದು ವಾಸ್ತವ" ಎಂಬ ಅಚಲವಾದ ನಿರ್ಧಾರ ಹೊಂದುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ಗುರು ಮತ್ತು ಶಾಸ್ತ್ರಗಳಲ್ಲಿ ತೀವ್ರವಾದ ಶ್ರದ್ಧೆಯು ಸಂಶಯಗಳಿಂದ ಮುಕ್ತಿಗೆ ದಾರಿಯಾಗುತ್ತದೆ. ಇದರಿಂದ, ಸಾಧಕನು, ನಿರ್ಗುಣವಾದ ಬ್ರಹ್ಮದಲ್ಲಿ ಪ್ರಜ್ಞೆಯನ್ನು ಅಚಲವಾಗಿ ಸ್ಥಾಪಿಸಲು ಸಾಧ್ಯವಾಗುತ್ತದೆ. ಈ ವಿಧವಾಗಿ ಅಚಲವಾಗಿ ಪ್ರಜ್ಞೆಯನ್ನು ನಿಲ್ಲಿಸುವುದೇ "ಸಮಾಧಾನ"ವೆನಿಸುತ್ತದೆ. "ಶಮ" ದ ಅವಸ್ಥೆಯಲ್ಲಿಯೂ ಮನಸ್ಸನ್ನು ಬ್ರಹ್ಮದ ಮೇಲೆ ಸ್ಥಿರೀಕರಿಸಲಾಗುತ್ತದೆ ; ಆದರೆ, ಆ ಸ್ಥಿರೀಕರಣವು ಪ್ರಯತ್ನಪೂರ್ವಕವಾದುದು ; ಹಾಗೂ ಸಂಶಯಗಳು ಸಂಪೂರ್ಣವಾಗಿ ನಿವೃತ್ತವಾಗಿರುವುದಿಲ್ಲ. ಹೀಗೆ "ಸಮಾಧಾನ"ವು "ಶಮ"ದೊಡನೆ ಅಭಿನ್ನವಾಗಿರದೆ, ಅದರ ಫಲವಾಗಿರುತ್ತದೆ.

ಈ ಸಾಧನ ಚತುಷ್ಟಯದ ನಾಲ್ಕನೆಯ ಹಾಗೂ ಕೊನೆಯ ಸಾಧನ—ಇದು "ಮುಮುಕ್ಷುತ್ವ"-ಮೋಕ್ಷದ ವಿಷಯದಲ್ಲಿ ತೀವ್ರವಾದ ಆಸಕ್ತಿ. ಪ್ರಾಪಂಚಿಕ ವ್ಯವಹಾರದಲ್ಲಿ ಆಸಕ್ತವಾದ ಮನಸ್ಸುಳ್ಳ ವ್ಯಕ್ತಿಯು ವೇದಾಂತದ ಪ್ರವಚನವನ್ನು ಕೇಳಿದಾಗ, ಅವನಲ್ಲಿ ಮುಕ್ತಿಯ ಆಕಾಂಕ್ಷೆಯು ಉಂಟಾಗಬಹುದು. ಆದರೆ, ಅಂತಹ ಆಕಾಂಕ್ಷೆಯು ಕ್ಷಣಿಕ ಮತ್ತು ಪ್ರವಚನವನ್ನು ಕೇಳಿದ ನಂತರ ಅದು ಇರುವುದು ಸಂದಿಗ್ಧ. ಅದು ಮೋಕ್ಷಕ್ಕೆ ಒಯ್ಯುವುದಿಲ್ಲ ಮತ್ತು ಅದನ್ನು ಕೀಳು ದರ್ಜೆಯ ಮುಮುಕ್ಷುತ್ವ ಎಂದು ಹೇಳಲಾಗಿದೆ. ಶಾಸ್ತ್ರಗಳ ಶ್ರವಣದಿಂದ ವಿವೇಕವುಂಟಾಗಿ ಮತ್ತು ವೈರಾಗ್ಯವುಂಟಾದಾಗ, ಪ್ರಾಪಂಚಿಕ ವ್ಯವಹಾರಗಳಲ್ಲಿ ತೊಡಗುವುದನ್ನು ಬಿಟ್ಟು ವ್ಯಕ್ತಿಯು, ನಿಷ್ಠೆಯಿಂದ ಜಿಜ್ಞಾಸೆ ಮಾಡುವುದಕ್ಕಾಗಿ ಜ್ಞಾನಿಯಾದ ಗುರುವನ್ನು ಸಮೀಪಿಸುತ್ತಾನೆ. ಮಧ್ಯಮ ಮಾರ್ಗದ ಮುಮುಕ್ಷುತ್ವವು ಈ ವ್ಯಕ್ತಿಯಲ್ಲಿ, ಗುರುವು ಹೇಳುವುದನ್ನು ಕೇಳಿದಾಗ, ಉಂಟಾಗುತ್ತದೆ. ಇದೂ ಸಹ ಸಾಲದು.

ನಿಶ್ಚಿತವಾದ ವೈರಾಗ್ಯವನ್ನು ವ್ಯಕ್ತಿಯು ಸಾಧಿಸಿದಾಗ, ಅವನ ಮನಸ್ಸು ಏಕಾಗ್ರವಾಗುತ್ತದೆ. ಗುರುವಿನ ಅನುಗ್ರಹದಿಂದ ಕೂಡಿದವನಾಗಿ, ಅವನು ಮೋಕ್ಷ ಮಾತ್ರವನ್ನು ಅಪೇಕ್ಷಿಸುತ್ತಾನೆ. ಮುಕ್ತನಾಗುವ ವಿಷಯದಲ್ಲಿ ಅವನು ವಿಳಂಬವನ್ನೂ ಸಹಿಸದೆ, ತನ್ನ ತಲೆಯ ಮೇಲಿನ ಬೆಂಕಿಯನ್ನು ಆರಿಸಿಕೊಳ್ಳುವುದಕ್ಕೆ ನೀರಿನ ಕಡೆಗೆ ಓಡುವ ಮನುಷ್ಯನಿಗೆ ಸದೃಶನಾಗಿರುತ್ತಾನೆ. ಅವನ ಮುಮುಕ್ಷುತ್ವವು ಅತ್ಯಂತ ವಿಕಸಿತವಾದುದು. ಪೂರ್ವ ಸಿದ್ಧತೆಗಳನ್ನು ಸಮರ್ಥವಾಗಿ ಹೊಂದಿ, ಅದು ಸತ್ಯದ ಸಾಕ್ಷಾತ್ಕಾರವನ್ನು ತಕ್ಷಣದಲ್ಲಿ ಹೊಂದುತ್ತಾನೆ ಮತ್ತು ಜೀವಂತವಿರುವಾಗಲೇ ಮುಕ್ತನಾಗುತ್ತಾನೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ದುಃಖಗಳಿಗೆ ಮೂಲ

"ವಾರ್ಷ್ಣೇಯ, ಮನಸ್ಸಿಲ್ಲದಿದ್ದರೂ ಸಹ, ಬಲಾತ್ಕಾರಕ್ಕೆ ಒಳಗಾದವನೋ" ಎಂಬಂತೆ, ಯಾವುದರಿಂದ ಪ್ರೇರಿತನಾಗಿ ಮಾನವನು ಪಾಪಗಳನ್ನು ಮಾಡುತ್ತಾನೆ! ಎಂದು ಶ್ರೀಕೃಷ್ಣನನ್ನು ಅರ್ಜುನನು ಕೇಳುತ್ತಾನೆ. ಅರ್ಜುನನು ಸಂದೇಹಗ್ರಸ್ತನಾಗುತ್ತಾನೆ; ಏಕೆಂದರೆ, ಕೆಟ್ಟದ್ದನ್ನು ಮಾಡಲು ಇಚ್ಛಿಸುವವರು ಮಾತ್ರವಲ್ಲದೆ ಅಧರ್ಮವನ್ನು ಮಾಡಬಾರದೆಂದು ಅಪೇಕ್ಷಿಸುವವರೂ ಸಹ ಪಾಪವನ್ನು ಆಚರಿಸುವಂತೆ ಕಂಡುಬರುವುದನ್ನು ಅವನು ನೋಡುತ್ತಾನೆ. ರಾಜನಿಂದ ಕಾರ್ಯವೊಂದನ್ನು ಮಾಡಲು ಆಜ್ಞಾಪಿಸಲ್ಪಟ್ಟ ಸೇವಕನ ಸಂಬಂಧಿಯು ಪಾಪವನ್ನು ಬಲಾತ್ಕಾರದಿಂದ ಮಾಡುವಂತೆ ಇದೆ, ಎಂದು.

ದುಃಖಗಳ ಮೂಲವನ್ನು ಅರ್ಜುನನಿಗೆ ನಿರ್ದೇಶಿಸಲು ಪರಮಾತ್ಮನು ಇಚ್ಛಿಸುತ್ತಾನೆ. "ಆಸೆ ಮತ್ತು ಕ್ರೋಧ, ರಜೋಗುಣದಿಂದ ಉತ್ಪನ್ನವಾದ ಇವೆರಡೂ ಎಲ್ಲವನ್ನು ವ್ಯಾಪಿಸುತ್ತವೆ ಮತ್ತು ಪಾಪಿಷ್ಠವಾದವು. ಅವೇ ಇಲ್ಲಿ ಶತ್ರುವೆಂದು ತಿಳಿ" ಎಂದು ಅವನು ಹೇಳುತ್ತಾನೆ. ಆಸೆಯೇ ಸಕಲ ಜಗತ್ತಿನ ಶತ್ರು ಮತ್ತು ಅದರಿಂದಲೇ ಎಲ್ಲ ಪ್ರಾಣಿಗಳಿಗೂ ಪಾಪವುಂಟಾಗುತ್ತದೆ. ಯಾವುದೇ ಕಾರಣದಿಂದ ಆಸೆಯು ನಿರುದ್ಧವಾದಾಗ, ಅದು ಕ್ರೋಧವಾಗಿ ಪರಿಣಮಿಸುತ್ತದೆ. ಆದ್ದರಿಂದ, ಕ್ರೋಧವು ಆಸೆಯ ಆವಿರ್ಭಾವ.

ಜಗತ್ತಿನ ಪ್ರತಿಯೊಂದು ವಸ್ತುವೂ ಸತ್ತ್ವ, ರಜಸ್ಸು ಮತ್ತು ತಮಸ್ಸು ಎಂಬ ಪ್ರಕೃತಿಯ ಮೂರು ಗುಣಗಳಿಂದ ಕೂಡಿರುತ್ತವೆ. ಶಾಂತಿ ಹಾಗೂ ಸೌಖ್ಯ ಸ್ಥಿತಿಗೆ ಸತ್ತ್ವವು ಕಾರಣ; ಪ್ರಕೃತಿಗೆ ಸಂಬಂಧಿಸಿದ ಕಾರ್ಯಪ್ರವೃತ್ತಿಗಳಿಗೆ ರಜಸ್ಸು ಕಾರಣ; ಮತ್ತು ಆಲಸ್ಯ, ಮಂಕಾಗುವುದಕ್ಕೆ ತಮಸ್ಸು ಕಾರಣ. ಪರಮಾತ್ಮನ ಅಭಿಪ್ರಾಯದಂತೆ, ಆಸೆಯು ರಜಸ್ಸಿನಿಂದ ಉತ್ಪನ್ನವಾಗುತ್ತದೆ. ಪರಮಾತ್ಮನ ಮಾತುಗಳಿಗೆ ಮತ್ತೊಂದು ರೀತಿಯಲ್ಲಿ ವ್ಯಾಖ್ಯಾನ ಮಾಡುವುದಾದರೆ, ರಜಸ್ಸು ಉದಯವಾಗುವುದಕ್ಕೆ ಆಸೆಯೇ ಕಾರಣ. ಆಸೆಯು ಆವಿರ್ಭೂತವಾದಾಗ, ಅದು ರಜಸ್ಸನ್ನು ಉದ್ಬೋಧಗೊಳಿಸುತ್ತದೆ ಮತ್ತು ಮನುಷ್ಯನು ಕಾರ್ಯ ಪ್ರವೃತ್ತನಾಗುವಂತೆ ಅದು ಪ್ರೇರೇಪಿಸುತ್ತದೆ. ಆಸೆಯು ಅತ್ಯಂತ ಪಾಪಪೂರಿತವಾದುದೆಂದು ಪರಮಾತ್ಮನು ಘೋಷಿಸುತ್ತಾನೆ; ಏಕೆಂದರೆ, ಆಸೆಯಿಂದ ಪ್ರೇರಿತನಾದಾಗ ಮಾತ್ರವೇ ವ್ಯಕ್ತಿಯು ಪಾಪವನ್ನು ಆಚರಿಸುತ್ತಾನೆ. ಈ ಕಾರಣದಿಂದಲೇ ಅದು ಈ ಜಗತ್ತಿನಲ್ಲಿ ಮಾನವನಿಗೆ ಶತ್ರು.

ವಸ್ತುಗಳನ್ನು ಅವುಗಳ ವಾಸ್ತವವಾದ ಸ್ಥಿತಿಯಲ್ಲಿ ಹೇಳಲು ಪರಮಾತ್ಮ ಸಮರ್ಥ. ಆದ್ದರಿಂದ, ಶ್ಲೋಕವನ್ನು ಈ ರೀತಿ ವ್ಯಾಖ್ಯಾನ ಮಾಡುತ್ತ ಶಂಕರರು

Sri Vidyabharathi Book Centre, Sringeri

CC-O. In Public Domain. Digitized by eGangotri

ಭಗವಾನ್ ಎಂಬ ಪದದ ಅರ್ಥವನ್ನು ವಿವರಿಸುತ್ತಾರೆ. ಪರಮಾತ್ಮನನ್ನು ಭಗವಾನ್ ಎಂದು ಕರೆಯುತ್ತಾರೆ–ಏಕೆಂದರೆ, ಅವನೊಬ್ಬನಲ್ಲಿ ಮಾತ್ರವೇ "ಭಗ" ಅಧಿಷ್ಠಿತವಾಗಿರುವುದು–ಎಂದು ಹೇಳುತ್ತಾರೆ. ವಿಷ್ಣುಪುರಾಣದಲ್ಲಿ ಹೇಳುವಂತೆ ಭಗ ಎಂದರೆ ಪ್ರಭುತ್ವ, ಶಕ್ತಿ, ಯಶಸ್ಸು, ತೇಜಸ್ಸು, ವೈರಾಗ್ಯ ಮತ್ತು ಮುಕ್ತಿ ಎಂಬ ಆರ್ರು ಗುಣಗಳು. ವಿಷ್ಣುಪುರಾಣವೂ ಹೇಳುತ್ತದೆ "ಸೃಷ್ಟಿ ಮತ್ತು ಪ್ರಳಯ, ಪ್ರಾಣಿಗಳ ಆಗು–ಹೋಗುಗಳ, ಮತ್ತು ಜ್ಞಾನ ಮತ್ತು ಅಜ್ಞಾನ ಇವುಗಳನ್ನು ತಿಳಿದಿರುವವನೇ ಭಗವಂತ."

ಆಸೆಯು ಹೇಗೆ ನಮ್ಮ ಶತ್ರು ಎಂಬುದನ್ನು ಪರಮಾತ್ಮನೇ ತೋರಿಸುತ್ತಾನೆ, ಜ್ಞಾನವನ್ನು ಆವರಿಸುವ ಆಸೆಯ ಹಂತಗಳನ್ನು ನಿರೂಪಿಸುವ ಮೂರು ಉದಾಹರಣೆಗಳನ್ನು ಪರಮಾತ್ಮ ಕೊಡುತ್ತಾನೆ. "ಅಗ್ನಿಯು ಹೊಗೆಯಿಂದ ಆವೃತವಾಗಿರುವಂತೆ, ಕನ್ನಡಿಯು ಮಾಲಿನ್ಯದಿಂದ ಆವೃತವಾಗಿರುವಂತೆ ಮತ್ತು ಭ್ರೂಣವು ಗರ್ಭದಿಂದ ಆವೃತವಾಗಿರುವಂತೆ, ಜ್ಞಾನವೂ ಸಹ ಆಸೆಯಿಂದ ಆವೃತವಾಗಿದೆ. ಕೌಂತೇಯ ಶಮನ ಮಾಡಲಾಗದ ದುರಾಸೆಯಿಂದ ಕೂಡಿದ ತಿಳುವಳಿಕೆಯು ಸದಾ ಶತ್ರುವಾದ ಆಸೆಯು ಜ್ಞಾನವನ್ನು ಆವರಿಸುತ್ತದೆ, ಎಂದು ಹೇಳುತ್ತಾನೆ. ಹೊಗೆಯಿಂದ ಆವೃತವಾದ ಬೆಂಕಿಗೆ ಸುಡುವ ಶಕ್ತಿಯಿರುತ್ತದೆ. ಮಲಿನವಾದ ಕನ್ನಡಿಯು ಚೆನ್ನಾಗಿ ಒರೆಸುವವರೆಗೆ, ಸ್ಪಷ್ಟವಾದ ಪ್ರತಿಬಿಂಬವನ್ನು ತೋರಿಸುವುದಿಲ್ಲ. ಭ್ರೂಣವಾದರೋ ಸಂಪೂರ್ಣವಾಗಿ ಕಣ್ಣಿಗೆ ಕಾಣದೆ ಅಡಗಿರುತ್ತದೆ.

ಫಲವನ್ನು ಅನುಭವಿಸುವುದಕ್ಕೆ ಮುಂಚೆಯೇ, ಆಸೆಯಿಂದಲೇ ತಾನು ದುರ್ಮಾರ್ಗ ಪ್ರವೃತ್ತನಾದನೆಂಬುದನ್ನು ಜ್ಞಾನಿಯು ತಿಳಿದಿರುತ್ತಾನೆ. ಆದ್ದರಿಂದಲೇ ಅವನು ದುಃಖ ಅನುಭವಿಸುತ್ತಾನೆ. ಆದ್ದರಿಂದ ಆಸೆಯು ಜ್ಞಾನಿಯ ಶತ್ರು. ಇದಕ್ಕೆ ವಿರುದ್ಧವಾಗಿ, ವಸ್ತುಗಳನ್ನು ಅಪೇಕ್ಷೆಪಡುವಾಗ ಅಜ್ಞಾನಿಯು ಆಸೆಯು ತನ್ನ ಮಿತ್ರನೆಂದು ಭಾವಿಸುತ್ತಾನೆ. ಫಲಗಳನ್ನು ಅನುಭವಿಸುವಾಗ ಮಾತ್ರವೇ, ತಾನು ಆಸೆಯಿಂದ ದುಃಖಕ್ಕೆ ಈಡಾದೆನೆಂದು ತಿಳುವಳಿಕೆಯಿಲ್ಲದವನು ಮನಗಾಣುತ್ತಾನೆ. ಆಸೆಯನ್ನು ಯಾವಾಗಲೂ ಶಮನಮಾಡಲಾಗುವುದಿಲ್ಲ ಮತ್ತು ಹೆಚ್ಚುತ್ತದೆ. "ಆಸೆಯನ್ನು ಅನುಭವಿಸುವುದರಿಂದ ಶಮನ ಮಾಡಲಾಗುವುದಿಲ್ಲ; ಹೇಗೆಂದರೆ ಬೆಂಕಿಯನ್ನು ಆರಿಸಬೇಕೆಂದು ತುಪ್ಪವನ್ನು ಹಾಕಿದರೆ ಆರುವುದಿಲ್ಲ" ಎಂದು ಹೇಳುತ್ತಾರೆ.

ಮುಂದೆ, ಶ್ರೀಕೃಷ್ಣನು ಈ ಶತ್ರುವು ಎಲ್ಲಿ ಇರುತ್ತಾನೆಂಬುದನ್ನು ನಿರ್ದೇಶಿಸುತ್ತಾನೆ. ಏಕೆಂದರೆ, ಅದರಿಂದ ಶತ್ರುವನ್ನು ನಾಶಮಾಡುವುದು ಸುಲಭ. "ಇಂದ್ರಿಯಗಳು, ಬುದ್ಧಿ ಮತ್ತು ಮನಸ್ಸು ಅದು ಇರುವ ಜಾಗಗಳು ಇವುಗಳ ಧಾರ್ಮ

Sri Vidyabharathi Book Centre, Sringeri

CC-O. In Public Domain. Digitized by eGangotri

ಜ್ಞಾನವನ್ನು ಆವರಿಸಿ, ಅದು ಜೀವನನ್ನು ಮೋಹಗೊಳಿಸುತ್ತದೆ"–ಎಂದು ಹೇಳು ತ್ತಾನೆ. ಹೇಗೆ ತಾನೇ ಆಸೆಯನ್ನು ಜಯಿಸುವುದು ? "ಭರತಶ್ರೇಷ್ಠನೇ, ಆದ್ದರಿಂದ ಮೊದಲು ಇಂದ್ರಿಯಗಳನ್ನು ನಿಗ್ರಹಿಸಿ, ಪ್ರತ್ಯಕ್ಷ ಮತ್ತು ಪರೋಕ್ಷಜ್ಞಾನಗಳಿಗೆ ಬಾಧಕವಾದ ಪಾಪವನ್ನುಂಟುಮಾಡುವ ಇದನ್ನು ತ್ಯಜಿಸು"–ಎಂದು ಉಪದೇಶಿಸು ತ್ತಾನೆ.

ಇಂದ್ರಿಯಗಳು ಅಪಾಯಕಾರಿಗಳು. ಏಕೆಂದರೆ, ಪ್ರಯತ್ನಶೀಲನಾದ ಜ್ಞಾನಿಯ ಮನಸ್ಸನ್ನೂ ಸಹ ಅವು ಬಲಾತ್ಕಾರವಾಗಿ ಎಳೆಯುತ್ತವೆ, ಎಂದು ಎರಡನೆಯ ಅಧ್ಯಾಯದಲ್ಲಿಯೇ ಭಗವಂತನು ತಿಳಿಸಿದ್ದಾನೆ. ಆದ್ದರಿಂದ ಆಸೆಯನ್ನು ಜಯಿಸುವುದಕ್ಕೆ ಇಂದ್ರಿಯ ನಿಗ್ರಹವು ಅವಶ್ಯ. ಅಷ್ಟೇ ಸಾಲದು. ಬುದ್ಧಿ–ಮನಸ್ಸು ಗಳೂ ಆಸೆ ಇರುವ ಸ್ಥಾನಗಳು. ಆದ್ದರಿಂದ, ಭಗವಂತನು ಹೇಳುವಂತೆ, ಮನಸ್ಸಿ ಗಿಂತಲೂ ಶ್ರೇಷ್ಠವಾಗಿರುವ ಆತ್ಮವನ್ನು ಕುರಿತು ಧ್ಯಾನಮಾಡಬೇಕು. ಪರಿಶುದ್ಧವಾದ ಮನಸ್ಸಿನಿಂದ ಅಧ್ಯಾತ್ಮದಲ್ಲಿ ಮಗ್ನನಾಗುವ ಸ್ಥಿತಿಯನ್ನು ಹೊಂದಬೇಕು ಮತ್ತು ತನ್ಮೂಲಕವಾಗಿ ಆಸೆಯನ್ನು ನಿರ್ಮೂಲವಮಾಡಬೇಕು. ಯಾವಾಗ ತಾನು ದೇಹ ಮನಸ್ಸು ಅಲ್ಲ, ಅವಿಕಾರಿ ಹಾಗೂ ಶುದ್ಧ ಚಿತ್ಸ್ವರೂಪವಾದ ಆತ್ಮ ಎಂದು ತಿಳಿಯು ತ್ತಾನೋ, ಆಗ ಅವನಿಗೆ ಅಶಾಶ್ವತವಾದ ವಸ್ತುಗಳನ್ನು ಆಸೆಪಡುವುದು ನಿವೃತ್ತ ವಾಗುತ್ತದೆ.

ಬೃಹದಾರಣ್ಯಕ ಉಪನಿಷತ್ತು ತಿಳಿಸುತ್ತದೆ—"ಯಾವನು ಆಸೆಯನ್ನು ಹೊಂದಿರುತ್ತಾನೋ, ಅವನು ಸಂಸಾರಿಯಾಗುತ್ತಾನೆ. ಆದರೆ, ಯಾವನಿಗೆ ಆಸೆ ಇರುವುದಿಲ್ಲವೋ, ಅವನಿಗೆ ಮತ್ತೆ ಹುಟ್ಟು ಇಲ್ಲ. ಯಾರು ಆಸೆ ಇಲ್ಲದಿರುತ್ತಾನೋ, ಯಾರು ಆಸೆಯಿಂದ ನಿವೃತ್ತನಾಗಿರುತ್ತಾನೋ, ಆಸೆಯ ವಸ್ತುಗಳು ಯಾರಿಗೆ ಲಭಿಸಿರುತ್ತವೋ, ಮತ್ತು ಯಾರಿಗೆ ಆಸೆಪಡುವ ಎಲ್ಲ ವಸ್ತುಗಳೂ ಕೇವಲ ಆತ್ಮ ವಾಗಿರುತ್ತವೋ, ಅಂತಹ ವ್ಯಕ್ತಿಯ ಇಂದ್ರಿಯಗಳು ಹೋಗುವುದಿಲ್ಲ, ಮರಣ ನಂತರ ಮತ್ತೊಂದು ಶರೀರಕ್ಕೆ ಹೋಗುವುದಿಲ್ಲ. ಕೇವಲ ಬ್ರಹ್ಮನಾದುದರಿಂದ, ಅವನು ಬ್ರಹ್ಮದಲ್ಲಿ ಐಕ್ಯನಾಗುತ್ತಾನೆ."

ಆಶಾರಹಿತ ಸ್ಥಿತಿಯು ಹೇಗೆ ಹೊಂದುವುದೆಂಬುದರ ವರ್ಣನೆಯು ಇಲ್ಲಿ ನಮಗೆ ದೊರೆಯುತ್ತದೆ. ಆತ್ಮವೊಂದೇ ಇರುವುದೆಂಬ ಸಾಕ್ಷಾತ್ಕಾರ ಹೊಂದಿದಾಗ, ಮತ್ತು ಅದಕ್ಕೆ ಹೊರತಾಗಿ ಬೇರೆಯಾವುದೂ ಇಲ್ಲ ಎಂದು ಅನುಭವಹೊಂದಿದಾಗ, ಆಗ ವ್ಯಕ್ತಿಯು ಆಸೆಯ ಎಲ್ಲ ವಸ್ತುಗಳನ್ನೂ ಹೊಂದುತ್ತಾನೆ. ಆಸೆಪಟ್ಟ ಎಲ್ಲ ವಸ್ತುಗಳನ್ನೂ ಹೊಂದಿದುದರಿಂದ, ಆಸೆಗಳು ಅವನಿಂದ ನಿವೃತ್ತವಾಗುತ್ತವೆ. ಸಾಧಾರಣವಾಗಿ, ಆಸೆಯನ್ನು ತೀರಿಸಿಕೊಳ್ಳುವುದು, ಆ ಆಸೆಯನ್ನು ತಾತ್ಕಾಲಿಕ

Sri Vidyabharathi Book Centre, Sringeri

CC-O. In Public Domain. Digitized by eGangotri

ವಾಗಿ ಉಪಶಮನ ಮಾಡುತ್ತದೆ ; ಆಸೆಯು ಪ್ರಬಲವಾಗಿ ಮತ್ತೆ ತಲೆ ಎತ್ತುತ್ತದೆ. ಆತ್ಮ ಜ್ಞಾನಿಯ ವಿಷಯದಲ್ಲಿಯಾದರೋ, ಆಸೆಯ ತೃಪ್ತಿಯು ಶಾಶತವಾಗುತ್ತದೆ. ಆದ್ದರಿಂದ, ಅವನನ್ನು ಆಸೆಗಳು ಬಿಡುತ್ತವೆ ಎಂದು ಹೇಳುವುದು ಉಚಿತ. ಆಶೆಗಳು ಉಪಶಮವಾದುದರಿಂದ, ಅವನು ಆಶಾರಹಿತ.

ಆತ್ಮ ಸಾಕ್ಷಾತ್ಕಾರವನ್ನು ಮಾಡಿಕೊಂಡ ಮಾತ್ರದಿಂದಲೇ, ಆಸೆಯ ಸಮಸ್ಯೆಯನ್ನು ಸಂಪೂರ್ಣವಾಗಿ ಹೋಗಲಾಡಿಸಬಹುದು. ಅಥವಾ ಆಶೆಯನ್ನು ತಡೆಯಬಹುದು. ಆದರೆ, ಅದರ ಬೀಜವು ಇರುತ್ತದೆ. ಆದ್ದರಿಂದಲೇ, ಆತ್ಮದಲ್ಲಿ ಅಧಿಷ್ಠಿತವಾಗುವುದೇ ಆಸೆಗಳನ್ನು ನಿವಾರಿಸುವುದಕ್ಕೆ ಮಾರ್ಗ ಎಂದು ಪರಮಾತ್ಮನು ನಿರೂಪಿಸುತ್ತಾನೆ. ಇಂದ್ರಿಯ ನಿಗ್ರಹವೇ ಈ ದಿಸೆಯಲ್ಲಿ ಪ್ರಮುಖವಾದ ಅಂಶ.

ಮೂರು ಅಶುದ್ಧ ವಾಸನೆಗಳು

ಬ್ರಹ್ಮಸಾಕ್ಷಾತ್ಕಾರವನ್ನು ಹೊಂದಬೇಕೆಂದು ತೀವ್ರವಾಗಿ ಪ್ರಯತ್ನಿಸುವವನು ಆಸೆ, ಕ್ರೋಧ ಮತ್ತು ತೃಷ್ಣಾ–ಇವನ್ನು ನಿವಾರಣೆ ಮಾಡಬೇಕಾದುದು ಮಾತ್ರವಲ್ಲದೆ, ಮೂರು ಅಶುದ್ಧ ವಾಸನೆಗಳನ್ನೂ ನಿರ್ಮೂಲ ಮಾಡಬೇಕಾದುದು ಅತ್ಯವಶ್ಯ. ಈ ಮೂರು ಅಶುದ್ಧ ವಾಸನೆಗಳು ಯಾವುವೆಂದರೆ–ಲೋಕವಾಸನಾ ಅಥವಾ ಜಗತ್ತಿಗೆ ಸಂಬಂಧಿಸಿದಂತೆ ಮಾನಸಿಕ ಭಾವನೆಗಳು ; ಶಾಸ್ತ್ರವಾಸನಾ ಅಥವಾ ಶಾಸ್ತ್ರಗಳಿಗೆ ಸಂಬಂಧಿಸಿದಂತೆ ಮಾನಸಿಕ ಭಾವನೆ ; ಮತ್ತು ದೇಹವಾಸನಾ ಅಥವಾ ದೇಹಕ್ಕೆ ಸಂಬಂಧಿಸಿದಂತೆ ಮಾನಸಿಕ ಭಾವನೆ. ಈ ವಾಸನೆಗಳು ಸತ್ಯದ ಅಪರೋಕ್ಷ ಸಾಕ್ಷಾತ್ಕಾರ ಉದಯಕ್ಕೆ ತಡೆಯನ್ನುಂಟುಮಾಡುತ್ತವೆ. ಆದ್ದರಿಂದ, ಮುಕ್ತಿಕೋಪನಿಷತ್ತಿನಲ್ಲಿ ಈ ರೀತಿಯಾಗಿ ಬರುತ್ತದೆ–"ಲೋಕವಾಸನಾ, ಶಾಸ್ತ್ರವಾಸನಾ ಮತ್ತು ದೇಹವಾಸನಾ–ಇವು ಇರುವ ವ್ಯಕ್ತಿಗೆ ಎಂದಿಗೂ ವಾಸ್ತವವಾದ ಜ್ಞಾನವು ಉದಯಿಸುವುದಿಲ್ಲ".

ವಾಸನಾಗಳು ಮಾನಸಿಕ ಬೀಜಗಳು ; ಇದರ ಪ್ರಭಾವದಿಂದಲೇ ಆಸೆ, ಮುಂತಾದ ಭಾವನೆಗಳು ಯಾವ ಪೂರ್ವಭಾವಿ ಪ್ರಯತ್ನವಿಲ್ಲದೇ ತಕ್ಷಣ ಉದಯಿಸುತ್ತವೆ. ಗೂಳಿಯೊಂದರಿಂದ ಅಟ್ಟಿಸಿಕೊಂಡು ಬಂದ ದುರದೃಷ್ಟಶಾಲಿ ಬಾಲಕನೊಬ್ಬ ಮತ್ತೊಂದು ಸಮಯದಲ್ಲಿ ಗೂಳಿಯೊಂದನ್ನು ಎದುರಿಸಿದಾಗ ತಕ್ಷಣ ಭೀತನಾಗುವುದು. ಮೊದಲಿನ ಅನುಭವದಿಂದ ಉಂಟಾದ ವಾಸನೆಯು, ಎರಡನೆಯ ಸಲ ಗೂಳಿಯನ್ನು ನೋಡಿದಾಗ ಕಾರ್ಯಪ್ರವೃತ್ತವಾಗುತ್ತದೆ ; ಮತ್ತು ಅದು ಬಾಲಕನ ಮನಸ್ಸನ್ನು ಭಯಗ್ರಸ್ತವನ್ನಾಗಿ ಮಾಡುತ್ತದೆ. ಈಗಿನ ಹಾಗೂ ಹಿಂದಿನ ಜನ್ಮಗಳ ಭಾವನೆಗಳು

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಅನುಭವಗಳಿಂದ ರೂಢಮೂಲವಾದ ಹಾಗೂ ಬೆಳೆಸಲ್ಪಟ್ಟ ಅನೇಕ ವಾಸನೆಗಳು ಮನಸ್ಸಿನಲ್ಲಿರುತ್ತವೆ. ಒಳ್ಳೆಯ ವಾಸನೆಗಳು ಆಧ್ಯಾತ್ಮಿಕ ಉನ್ನತಿಗೆ ಸಹಾಯಕವಾಗುತ್ತವೆ. ಆದರೆ ಕೆಟ್ಟ ವಾಸನೆಗಳು ಅದಕ್ಕೆ ವಿರುದವಾಗುತ್ತವೆ. ನಿಷ್ಠೆಯಿಂದ ಒಳ್ಳೆಯ ವಾಸನೆಯನ್ನು ಅಭ್ಯಾಸ ಮಾಡುವುದರಿಂದ ಕೆಟ್ಟವಾಸನೆಯನ್ನು ನಿರುಪಯುಕ್ತವಾಗುವಂತೆ ಮಾಡಬಹುದು. ಆದ್ದರಿಂದ, ಆಧ್ಯಾತ್ಮಿಕ ಉನ್ನತಿಯನ್ನು ಇಚ್ಛಿಸುವ ವ್ಯಕ್ತಿಯು ಉಚಿತವಾದ ಒಳ್ಳೆಯ ವಾಸನೆಗಳನ್ನು ಅಭಿವೃದ್ಧಿಪಡಿಸಿಕೊಳ್ಳುವುದರಿಂದ, ತನ್ನ ಮಾರ್ಗದಲ್ಲಿ ಕಂಟಕಗಳಾಗಿರುವ ಕೆಟ್ಟ ವಾಸನೆಗಳನು ವ್ಯರ್ಥಗೊಳಿಸಬೇಕು.

"ಜನಗಳು ನನ್ನನ್ನು ನಿಂದಿಸದೆ, ಹೊಗಳುವಂತೆ ನಾನು ಯಾವಾಗಲೂ ನಡೆದುಕೊಳ್ಳುತ್ತೇನೆ"—ಎಂದು ಒಂದು ರೀತಿಯ ನಿಯಮಕ್ಕೆ ಒಳಪಡುವಂತೆ ಮಾಡಿಕೊಳ್ಳುವುದೇ ಲೋಕವಾಸನಾ. ಆಧ್ಯಾತ್ಮಿಕ ಉನ್ನತಿಯನ್ನು ಇಚ್ಛಿಸುವವನಿಗೆ ಈ ವಾಸನೆಯು ಒಂದು ತಡೆ : ಏಕೆಂದರೆ, ಯಾವುದನ್ನು ಹೊಂದಲು ಅಸಾಧ್ಯವೋ ಅದನ್ನು ಅದು ಅಪೇಕ್ಷಿಸುತ್ತದೆ. ನಮ್ಮನ್ನು ಅಂಗೀಕರಿಸದಿರುವ ಅಥವಾ ನಾವು ಮಾಡುವ ಕೆಲಸಗಳನ್ನು ಟೀಕೆ ಮಾಡುವ ಕೆಲವರು ಯಾವಾಗಲೂ ಇರುತ್ತಾರೆ.

ಸೀತೆಯು ಪಾತಿವ್ರತ್ಯದ ಮೂರ್ತಸ್ವರೂಪ. ತನ್ನ ಪಾವಿತ್ರ್ಯವನ್ನು ದೃಢೀಕರಿಸುವುದಕ್ಕಾಗಿ ಅವಳು ಅಗ್ನಿಪರೀಕ್ಷೆಗೂ ಒಳಗಾದಳು. ಆದರೂ, ಅಯೋಧ್ಯೆಯ ಜನರು ಅವಳ ವಿಷಯದಲ್ಲಿ ಕೆಟ್ಟಮಾತುಗಳನ್ನಾಡಿದರು. ಹಾಗೂ ಲಂಕೆಯಲ್ಲಿ ಅವಳನ್ನು ಅಂಗೀಕರಿಸಿದುದರಿಂದ ಸ್ವತಃ ಆಸೆಗೆ ಒಳಗಾಗಿದ್ದನೆಂದು ಶ್ರೀರಾಮನನ್ನೂ ನಿಂದಿಸಿದರು. ಕಳಂಕರಹಿತರಾದ ದೇವತಾಸ್ವರೂಪರಾದ ಶ್ರೀರಾಮ ಮತ್ತು ಸೀತೆಯರ ಅವಸ್ಥೆಯು ಹೀಗಾದರೆ, ಇತರ ಸಾಮಾನ್ಯ ಜನರ ಸ್ಥಿತಿಯ ವಿಷಯದಲ್ಲಿ ಹೇಳುವುದಾದರೂ ಏನು ? ಆದ್ದರಿಂದ, ಹೀಗೆ ಹೇಳಲಾಗಿದೆ "ವ್ಯಕ್ತಿಯೊಬ್ಬನು ಎಲ್ಲರನ್ನೂ ತೃಪ್ತಿಪಡಿಸಬಹುದಾದ ಯಾವ ಮಾರ್ಗವೂ ಉಪಲಬ್ಧವಿಲ್ಲ. ಆದ್ದರಿಂದ, ತನಗೆ ಸರಿ ಎಂದು ಕಂಡಿದುದನ್ನು ಯಾವಾಗಲೂ ವ್ಯಕ್ತಿಯು ಮಾಡಬೇಕು.". ಆಧ್ಯಾತ್ಮಿಕ ಉನ್ನತಿಯನ್ನು ಇಚ್ಛಿಸುವವನು ಹೊಗಳಿಕೆ ಮತ್ತು ತೆಗಳಿಕೆಗಳನ್ನು ಸಮವಾಗಿ ಪರಿಗಣಿಸಬೇಕೆಂದು ಮುಕ್ತಿಶಾಸ್ತ್ರಗಳು ತಿಳಿಸುತ್ತವೆ ; ಲೋಕವಾಸನೆಯ ವಿಷಯದಲ್ಲಿ ಪ್ರಯತ್ನಪಡುವುದು ನಿಷ್ಪ್ರಯೋಜಕವೆಂದು ಮನಗಂಡು, ಅವುಗಳನ್ನು ತ್ಯಜಿಸಬೇಕು.

ಲೋಕವಾಸನೆಯನ್ನು ನಿರ್ಮೂಲಗೊಳಿಸುವುದಕ್ಕೆ ಸಂಬಂಧಿಸಿದಂತೆ, ಕೆಲವು ಅಂಶಗಳನ್ನು ಹೇಳಬೇಕು. ಸಾಧಕನು ಇತರರ ಅಭಿಪ್ರಾಯಗಳನ್ನು ವಿಮರ್ಶೆ

Sri Vidyabharathi Book Centre, Sringeri

CC-O. In Public Domain. Digitized by eGangotri

ಮಾಡದೆ ಇಳ್ಳಿಹಾಕುತ್ತಾನೆಂದು ಅಭಿಪ್ರಾಯವಲ್ಲ. ಇತರರ ಅಭಿಪ್ರಾಯಗಳನ್ನು ಅವನು ತನ್ನ ಉನ್ನತಿಗಾಗಿ ಅವಶ್ಯ ಉಪಯೋಗಿಸಿಕೊಳ್ಳಬಹುದು ; ಪ್ರಶಂಸೆ ಮಾಡಿದಾಗ ಅಥವಾ ನಿಂದನೆ ಮಾಡಿದಾಗ ಕ್ರಮವಾಗಿ ಸಂತೋಷ ಅಥವಾ ದುಃಖ ಹೊಂದುವುದನ್ನು ಅವನು ಬಿಡುತ್ತಾನೆ. ಇತರ ಆಧ್ಯಾತ್ಮಿಕ ಸಾಧನೆಗಳ ಹಿನ್ನೆಲೆಯಲ್ಲಿ ಲೋಕವಾಸನೆಯನ್ನು ಜಯಿಸುವುದಕ್ಕೆ ಪ್ರಯತ್ನಪಡಬೇಕು. ಪ್ರಮುಖವಾಗಿ ಮನೆಯಲ್ಲಿ ಒಳ್ಳೆಯ ಹೆಸರನ್ನು ತೆಗೆದುಕೊಳ್ಳಬೇಕೆಂದು ಹುಡುಗನು ಕೆಟ್ಟಸಹವಾಸ ವನ್ನು ತ್ಯಜಿಸುವುದು, ಇತರ ಅಂಶಗಳನ್ನು ಪರಿಗಣಿಸದೆ ಲೋಕವಾಸನೆಯ ಈ ಅಂಶವನ್ನು ಕೇವಲ ತಡೆಯುವುದು ಫಲಕಾರಿಯಾಗುವುದಿಲ್ಲ.

ಶಾಸ್ತ್ರವಾಸನೆಯು ಮೂರು ವಿಧವಾಗಿರುತ್ತದೆ—ಅಧ್ಯಯನದಲ್ಲಿ ಗೀಳು, ಅನೇಕ ವಿಷಯಗಳಲ್ಲಿ ಮಗ್ನವಾಗಿರುವಿಕೆ ಮತ್ತು ಸ್ಪಷ್ಟವಾದ ಕುಸಿವಿಷ್ಟೆಯ ಸ್ವಭಾವ.

ತೈತ್ತಿರೀಯ ಬ್ರಾಹ್ಮಣದಲ್ಲಿ ಬರುವ ಆಖ್ಯಾನವೊಂದು ಶಾಸ್ತ್ರವಾಸನೆಯ ಮೊದಲನೆಯ ವಿಧಕ್ಕೆ ಉದಾಹರಣೆಯಾಗುತ್ತದೆ. ಭಾರದ್ವಾಜ ಋಷಿಯು ತನ್ನ ಮೂರು ಕ್ರಮವಾದ ಜನ್ಮಗಳಲ್ಲಿ ವೇದಾಧ್ಯಯನಕ್ಕಾಗಿ ನಿಷ್ಠೆಯಿಂದ ತನ್ನನ್ನು ತೊಡಗಿಸಿಕೊಂಡನೆಂದು ವೇದವು ಹೇಳುತ್ತದೆ. ತನ್ನ ನಾಲ್ಕನೆಯ ಜನ್ಮದಲ್ಲಿಯೂ ಸಹ, ನಿರಂತರವಾಗಿ ಪ್ರಯತ್ನಪಡುವುದಕ್ಕೆ ಅವನು ಇಚ್ಛಿಸಿದನು. ಅವನ ವಿಷಯ ದಲ್ಲಿ ಕರುಣೆಯನ್ನು ಹೊಂದಿ, ಎಲ್ಲ ವೇದಗಳನ್ನು ಅಧ್ಯಯನ ಮಾಡುವುದು ಅಸಾಧ್ಯ ವಾದುದೆಂದು ಇಂದ್ರನು ವಿವರಿಸಿದನು ಮತ್ತು ಸಗುಣ ಬ್ರಹ್ಮದ ವಿಷಯದಲ್ಲಿ ಭಾರದ್ವಾಜರಿಗೆ ಉಪದೇಶ ಮಾಡಿದನು. ವೇದಗಳನ್ನು ಭಾರದ್ವಾಜರು ಅಧ್ಯಯನ ಮಾಡುವುದು ತಪ್ಪೇನಲ್ಲ ; ಆದರೆ, ಸಂಪೂರ್ಣವಾಗಿ ಎಲ್ಲ ವೇದಗಳನ್ನೂ ಅಧ್ಯಯನ ಮಾಡಬೇಕೆಂಬ ಅವರ ಆಗ್ರಹವು ಸಮಸ್ಯೆಯನ್ನು ಉಂಟುಮಾಡಿತು. ಈ ವಿಧವಾದ ಶಾಸ್ತ್ರವಾಸನೆಯಿಂದ ಬಿಡುಗಡೆ ಹೊಂದಲು, ವಿಷಯವೊಂದನ್ನು ಆಮೂಲಾಗ್ರ ವಾಗಿ ತಿಳಿಯುವುದು ಅಸಾಧ್ಯವೆಂಬುದನ್ನು ವ್ಯಕ್ತಿಯು ಮನಗಾಣಬೇಕು.

ಅನೇಕ ವಿಷಯಗಳನ್ನು ಅಧ್ಯಯನ ಮಾಡುವ ಹವ್ಯಾಸವು ಕೆಟ್ಟದ್ದು. ಶಿವರಹಸ್ಯದ ಗೀತೆಯಲ್ಲಿ ಬರುವ ದುರ್ವಾಸನ ಆಖ್ಯಾಯಿಕೆಯು ಉಪಯುಕ್ತ ವಾದುದು. ಒಂದು ಬಾರಿ, ದುರ್ವಾಸ ಋಷಿಯು ತನ್ನ ನಮಸ್ಕಾರಗಳನ್ನು ಸಲ್ಲಿಸುವುದಕ್ಕಾಗಿ ಪರಮಾತ್ಮನಾದ ಮಹಾದೇವನ ಆಸ್ಥಾನಕ್ಕೆ ಬಂದನು. ಅವನು ಒಂದು ಗಾಡಿಯ ತುಂಬ ಪುಸ್ತಕಗಳನ್ನು ತುಂಬಿಕೊಂಡು ಬಂದನು. ಬೆನ್ನಿನಮೇಲೆ ಅಧಿಕವಾದ ಭಾರವನ್ನು ಹೊತ್ತಿರುವ ಕತ್ತೆಗೆ ದುರ್ವಾಸನನ್ನು ಹೋಲಿಸುತ್ತಾ, ನಾರದನು ಅವನನ್ನು ಅಪಹಾಸ್ಯ ಮಾಡುತ್ತಾನೆ. ಕ್ರುದ್ಧನಾದ ಹಾಗೂ ತನ್ನ

Sri Vidyabharathi Book Centre, Sringeri

CC-O. In Public Domain. Digitized by eGangotri

ಗೀಳಿನಿಂದ ನಿವೃತ್ತಿ ಹೊಂದಿದ ದುರ್ವಾಸನು ತನ್ನ ಪುಸ್ತಕಗಳನ್ನು ಸಮುದ್ರಕ್ಕೆ ಹಾಕಿದನು. ಆದರ ನಂತರ ಮಹಾದೇವನು ಅವನಿಗೆ ಆತ್ಮವಿದ್ಯೆಯನ್ನು ಉಪದೇಶಿಸಿದನು.

ಅನೇಕ ವಿಷಯಗಳಿಗೆ ಸಂಬಂಧಿಸಿದ ಗ್ರಂಥಗಳಲ್ಲಿ ಮಗ್ನನಾಗಿರುವುದರಿಂದ ಬ್ರಹ್ಮಜ್ಞಾನ ಹೊಂದಲು ಆಗುವುದಿಲ್ಲವೆಂಬುದನ್ನು ತಿಳಿಯಬೇಕು. ಕಠೋಪನಿಷತ್ತು ತಿಳಿಸುತ್ತದೆ—"ಪ್ರವಚನದಿಂದಲಾಗಲೀ, ಶಾಸ್ತ್ರಗ್ರಂಥಗಳ ಅರ್ಥಗ್ರಹಿಕೆಯಲ್ಲಿನ ಸೂಕ್ಷ್ಮ ಶಕ್ತಿಯಿಂದಾಗಲೀ ಅಥವಾ ಬಹುಶ್ರವಣದಿಂದಲಾಗಲೀ ಆತ್ಮಲಾಭವಾಗುವುದಿಲ್ಲ". ಈ ರೀತಿಯಲ್ಲಿಯೇ, ವಿವಿಧ ಶಾಸ್ತ್ರಗಳಲ್ಲಿ ವಿದ್ವತ್ತನ್ನು ಹೊಂದಿದ್ದರೂ, ಆತ್ಮಜ್ಞಾನವನ್ನು ಹೊಂದಿರದಿದ್ದುದರಿಂದ ನಾರದನು ದುಃಖದಿಂದ ಮುಕ್ತನಾಗಿರಲಿಲ್ಲವೆಂಬ ವಿಷಯವನ್ನು ಛಾಂದೋಗ್ಯ ಉಪನಿಷತ್ತಿನಲ್ಲಿ ನಾವು ಕಾಣುತ್ತೇವೆ. ದುಃಖ ನಿವಾರಣೆ ಮಾಡುವಂತಹ ವಿದ್ಯೆಯನ್ನು ಹೊಂದಲು, ಅವನು ಶಿಷ್ಯನಾಗಿ ಸನತ್ಕುಮಾರರನ್ನು ಸಮೀಪಿಸಿದನು. ಈ ರೀತಿ ಹೇಳಲಾಗಿದೆ—"ಪವಿತ್ರ ಗ್ರಂಥಗಳ ವಿಷಯದಲ್ಲಿ ವೃಥಾ ಮಾತನಾಡುವುದರಿಂದ ಏನು ಪ್ರಯೋಜನ? ಜ್ಞಾನಿಗಳು, ಸರ್ವವಿಧದಿಂದಲೂ ತಮ್ಮ ಅಂತರ್ಯದಲ್ಲಿ ಆತ್ಮಜ್ಯೋತಿಯನ್ನು ಅರಸಬೇಕು".

ಕರ್ಮಗಳನ್ನು ತ್ಯಜಿಸಬಹುದಾದಂತಹ ಸ್ಥಿತಿಯನ್ನು ಇನ್ನೂ ತಲಪಿರದ ವ್ಯಕ್ತಿಯು ಶಾಸ್ತ್ರೋಕ್ತವಾದ ಕರ್ಮಗಳನ್ನು ಮಾಡಲೇಬೇಕಾದುದು ಅವಶ್ಯ. ಆದರೂ, ಶಾಸ್ತ್ರವಾಸನೆಯ ಮೂರನೆಯ ವಿಧವಾದ ಧಾರ್ಮಿಕ ಆಚರಣೆಗಳ ವಿಷಯದಲ್ಲಿ ಅತಿರೇಕವಾದ ಶ್ರದ್ಧೆಯು ಒಂದು ತಡೆಯಾಗುತ್ತದೆ. ಯೋಗವಾಸಿಷ್ಠದಲ್ಲಿ ಒರುವ ದಾಸುರನ ಆಖ್ಯಾನವು ಇಲ್ಲಿ ಪ್ರಸ್ತುತವಾದುದು. ತನ್ನ ಅನಗತ್ಯವಾದ ತೀವ್ರ ವಿಮರ್ಶೆಯ ಕಾರಣದಿಂದ, ತನ್ನ ಧಾರ್ಮಿಕ ಕರ್ಮಗಳ ಆಚರಣೆಗಾಗಿ ದಾಸುರನಿಗೆ ಇಡೀ ಜಗತ್ತಿನಲ್ಲಿ ಅತ್ಯಂತ ಪರಿಶುದ್ಧವಾದ ಜಾಗವು ಸಿಗಲಿಲ್ಲ.

ತಮ್ಮ ಜೀವನ್ಮುಕ್ತಿ ವಿವೇಕದಲ್ಲಿ ವಾಸನೆಗಳ ನಿರ್ಮೂಲದ ವಿಷಯವನ್ನು ಪರಿಶೀಲಿಸುತ್ತ, ಶಾಸ್ತ್ರವಾಸನೆಯು ವಿದ್ಯಾಗರ್ವವನ್ನುಂಟುಮಾಡುತ್ತದೆಂದು ಶ್ರೀ ವಿದ್ಯಾರಣ್ಯರು ಹೇಳುತ್ತಾರೆ. ಶಾಸ್ತ್ರವಾಸನೆಯನ್ನು ಅಶುದ್ಧವೆಂದು ಕರೆಯುವುದಕ್ಕೆ, ಶಾಸ್ತ್ರವಾಸನೆಯು ಅಗತ್ಯಗಳನ್ನು ಪೂರ್ತಿಗೊಳಿಸುವುದು ಅಸಾಧ್ಯವೆಂಬುದರ ಜೊತೆಗೆ ಇದು ಮತ್ತೊಂದು ಕಾರಣ.

ಕೊನೆಯಲ್ಲಿ ದೇಹವಾಸನಾ. ಇದು ಮೂರು ವಿಧವಾಗಿರುತ್ತದೆ. ದೇಹವೇ ಆತ್ಮವೆಂದು ತಿಳಿಯುವುದು ಅತ್ಯಂತ ನಿಕೃಷ್ಟವಾದುದೆಂದು ಹೇಳಲಾಗಿದೆ. ಇಂತಹ ಅನನ್ಯತೆಯು ತಪ್ಪು, ಏಕೆಂದರೆ ಈ ದೃಷ್ಟಿಕೋನವು ಶಾಸ್ತ್ರಕ್ಕೆ ವಿರುದ್ಧವಾದುದು

Sri Vidyabharathi Book Centre, Sringeri

CC-O. In Public Domain. Digitized by eGangotri

ಮತ್ತು ಅದು ದುಃಖವನ್ನುಂಟುಮಾಡುತ್ತದೆ. ದುರದೃಷ್ಟವಶಾತ್ ಅದು ಸಂಪೂರ್ಣವಾಗಿ ವ್ಯಾಪಿಸಿದೆ. ನಿವಾರಣೆ ಮಾಡಲು ಕಷ್ಟವಾದುದರಿಂದ, ಆತ್ಮವು ದೇಹಕ್ಕಿಂತ ಭಿನ್ನವಾದುದೆಂಬ ಸ್ವೈಜವಾದ ಭಾವನೆಯನ್ನು ಬೆಳೆಸಿಕೊಳ್ಳುತ್ತ, ಅದನ್ನು ಸಮರ್ಥವಾಗಿ ಎದುರಿಸಬೇಕು.

ದೈಹಿಕ ಲಾವಣ್ಯವನ್ನು ಹೊಂದುವುದರ ಬಗ್ಗೆ ಇರುವ ಆಸಕ್ತಿಯನ್ನು ದೇಹವಾಸನೆಯ ಎರಡನೆ ವಿಧವೆಂದು ಹೇಳುತ್ತಾರೆ. ಈ ವಿಧವಾದ ವಾಸನೆಯಿಂದ ಪ್ರೇರಿತರಾಗಿ, ಪ್ರಸಾಧನ ವಸ್ತುಗಳಿಂದ ತಮ್ಮ ಸೌಂದರ್ಯ ವೃದ್ಧಿಗೆ ಮತ್ತು ಗಂಗೆಯೇ ಮುಂತಾದ ನದಿಗಳಲ್ಲಿ ಸ್ನಾನಮಾಡಿ ಪವಿತ್ರರಾಗುವುದಕ್ಕೆ ಜನಗಳು ಪ್ರಯತ್ನಪಡುತ್ತಾರೆ. ಪರಿಶುದ್ಧತೆಯು ಪ್ರಶಂಸನೀಯವಾದುದು ಮತ್ತು ಪ್ರತಿಯೊಬ್ಬರೂ ಹೊಂದಬೇಕಾದ ಎಂಟು ಶ್ರೇಷ್ಠ ಗುಣಗಳಲ್ಲಿ ಒಂದು. ಧ್ಯಾನಾಭ್ಯಾಸಕ್ಕೆ ಅದು ಪ್ರಮುಖವಾದ ಹಿನ್ನೆಲೆಯೆಂದು ಯೋಗಸೂತ್ರವು ತಿಳಿಸುತ್ತದೆ. ಇಲ್ಲಿ ಸಮಸ್ಯೆ ಏನೆಂದರೆ ದೇಹವನ್ನು ವಾಸ್ತವವಾಗಿ ಹಾಗೂ ಸ್ಥಿರವಾಗಿ ಸುಂದರವನ್ನಾಗಿ ಮತ್ತು ಶುದ್ಧವನ್ನಾಗಿ ಮಾಡಬಹುದೆಂಬ ಭ್ರಾಂತಿ; ಅಸಾಧ್ಯವಾದುದನ್ನು ಹೊಂದುವುದರ ಬಗ್ಗೆ ಪ್ರಯತ್ನಮಾಡುವುದಕ್ಕೆ ಪ್ರೇರೇಪಿಸುತ್ತದೆ.

ಸೌಂದರ್ಯ ಮತ್ತು ಸುಗಂಧವು ಉದಾಹರಣೆಗೆ, ಪ್ರಸಾಧನಕ್ಕೆ ಸಂಬಂಧಿಸಿರುವುದೇ ಹೊರತು, ಮೂಳೆ, ಮಾಂಸ, ಮೇಧಸ್ಸು ಮುಂತಾದುವುಗಳ ಸಂಘಾತವಾದ ದೇಹಕ್ಕೆ ಸಂಬಂಧಿಸಿರುವುದಿಲ್ಲ. ಸುಂದರವಾದ ಉಡುಪು ದೇಹವನ್ನು ಬದಲಾಯಿಸುವುದಿಲ್ಲ. ಧ್ವನಿಯನ್ನು ಇಂಪಾಗಿ ಮಾಡುವುದಕ್ಕಾಗಿ ಮೆಣಸನ್ನು ತಿನ್ನುವುದು ಅವಶ್ಯವಾಗಿ ಫಲಕಾರಿಯಾಗುವುದಿಲ್ಲ ಅಥವಾ ಫಲವು ಅವಿನಾಶಿಯಾಗುವುದಿಲ್ಲ. ಸ್ನಾನವು ದೇಹಕ್ಕೆ ಬಾಹ್ಯ ಶುಚಿಯನ್ನುಂಟುಮಾಡುತ್ತದೆ. ಆದರೆ ಸ್ವಲ್ಪ ಸಮಯದವರೆಗೆ ಮಾತ್ರ, ಗಂಗಾನದಿಯಲ್ಲಿನ ಸ್ನಾನದಂತೆ. ಪವಿತ್ರತೆಯನ್ನು ಹೊಂದಲು ಶಾಸ್ತ್ರೀಯವಾದ ಮಾರ್ಗದ ವಿಷಯದಲ್ಲಾದರೋ, ದೇಹವು ಯಾವಾಗಲೂ ಅಶುದ್ಧವೆಂದು ಹೇಳುವ ಪ್ರಬಲವಾದ ಶಾಸ್ತ್ರವಾಕ್ಯಗಳಿವೆಯೆಂಬುದನ್ನು ಗಮನದಲ್ಲಿಡಬೇಕು.

ದೇಹವಾಸನೆಯ ಮೂರನೆಯ ವಿಧವು ಎರಡನೆಯ ವಿಧಕ್ಕೆ ಸಂಬಂಧಿಸಿರುತ್ತದೆ; ದೇಹವನ್ನು ದೋಷರಹಿತವನ್ನಾಗಿ ಮಾಡುವುದಕ್ಕೆ ಸತತವಾದ ಪ್ರಯತ್ನ-ವ್ಯಾಧಿಗಳನ್ನು ನಿರ್ಮೂಲ ಮಾಡುವುದಕ್ಕೆ ಮಾಡುವ ಪ್ರಯತ್ನವು ಇದರಲ್ಲಿ ಬರುತ್ತದೆ. ರೋಗಗಳನ್ನು ಯಾವಾಗಲೂ ದೂರದಲ್ಲಿ ಇಡಲು ಆಗದಿರುವುದು ಮತ್ತು ಎಲ್ಲಾ ರೋಗಗಳನ್ನೂ ವಾಸಿಮಾಡಲಾಗದಿರುವುದೇ ಸಮಸ್ಯೆ. ದೇಹವಾದರೋ

Sri Vidyabharathi Book Centre, Sringeri

CC-O. In Public Domain. Digitized by eGangotri

ಸ್ವಾಭಾವಿಕವಾಗಿ, ಎಲ್ಲ ಅಶುದ್ಧಿಗಳ ಆಗರ ಎಂದು ಶಾಸ್ತ್ರವು ನಿಷ್ಕೃಷ್ಟವಾಗಿ ತಿಳಿಸುತ್ತದೆ. ಆದ್ದರಿಂದ ಮೈತ್ರಿ ಉಪನಿಷತ್ತಿನಲ್ಲಿ ಹೀಗೆ ಬರುತ್ತದೆ—"ಎಲೈ ಸ್ವಾಮಿ-ಈ ದೇಹವು ದುರ್ವಾಸನೆಯುಳ್ಳದ್ದು, ಅವಾಸ್ತವವಾದುದು ಮತ್ತು ಚರ್ಮ, ಮೂಳೆ, ಮಾಂಸ ಮುಂತಾದುವುಗಳ ಸಂಘಾತ. ಅದರ ವಿಷಯದಲ್ಲಿನ ಆಸೆಯನ್ನು ತೃಪ್ತಿಪಡಿಸುವುದರಲ್ಲಿ ಏನು ಅರ್ಥ".

ಈ ಸಂದರ್ಭದಲ್ಲಿ ಆಧ್ಯಾತ್ಮಿಕ ಸಾಧಕನು ಶುದ್ಧ ಹಾಗೂ ಆರೋಗ್ಯದ ವಿಷಯದಲ್ಲಿ ಅಸಡ್ಡೆಯನ್ನು ತೋರಿಸಬಾರದು ಎಂಬುದನ್ನು ಗಮನದಲ್ಲಿಡಬೇಕು. ರೋಗದಿಂದ ಕೂಡಿರುವ, ಅಶುದ್ಧವಾದ ದೇಹವು ಆಧ್ಯಾತ್ಮಿಕ ಸಾಧನೆಯ ಅಭ್ಯಾಸಕ್ಕೆ ಅನುಕೂಲವಾಗುವುದಿಲ್ಲ. ತಾನು ಸುಂದರವಾಗಿ ಕಾಣಬೇಕೆಂಬ ಆಸಕ್ತಿ, ಆರೋಗ್ಯದ ಬಗ್ಗೆ ಪೂರ್ವಾಗ್ರಹ ಇವುಗಳನ್ನು ಸಾಧಕನು ತ್ಯಜಿಸಬೇಕು. ದೈಹಿಕ ತೊಂದರೆಗಳಿಂದ ಸ್ವಾತಂತ್ರ್ಯವನ್ನು ಹೊಂದಬೇಕು. ಶುದ್ಧನಾಗಿರುವ ವ್ಯಕ್ತಿಯು ದೇಹದ ವಿಷಯದಲ್ಲಿ ವೈರಾಗ್ಯವನ್ನು ಹೊಂದುತ್ತಾನೆಂದು ಯೋಗಸೂತ್ರಗಳಲ್ಲಿ ಹೇಳಿದೆ. ಸಾಧಾರಣವಾಗಿ ನಿಯತವಾಗಿ ಸ್ನಾನಮಾಡುವ ವ್ಯಕ್ತಿಯು ಒಣಗಿದ ಸಿಹಿತಿಂಡಿಯ ಕೆಟ್ಟವಾಸನೆಯನ್ನು ಗುರುತಿಸುತ್ತಾನೆಯೇ ಹೊರತು ಯಾವಾಗಲೂ ಕೊಳಕಾಗಿರುವ ವ್ಯಕ್ತಿಯಲ್ಲ. ಆದ್ದರಿಂದ ಪರಿಶುದ್ಧನಾದ ವ್ಯಕ್ತಿ ಮಾತ್ರವೇ ದೇಹದ ಸ್ವಾಭಾವಿಕವಾದ ಅಶುದ್ಧಿಯನ್ನು ಗುರುತಿಸಲು ಸಮರ್ಥನಾಗುತ್ತಾನೆ.

ಬ್ರಹ್ಮದ ಲಕ್ಷಣ

ತೈತ್ತಿರೀಯ ಉಪನಿಷತ್ತಿನ ಪ್ರಮುಖವಾದ ಆನಂದ ವಲ್ಲಿಯು "ಬ್ರಹ್ಮವನ್ನು ತಿಳಿದವನು ಉನ್ನತವಾದುದನ್ನು ಹೊಂದುತ್ತಾನೆ-" ಎಂಬ ಘೋಷಣೆಯೊಂದಿಗೆ ಪ್ರಾರಂಭವಾಗುತ್ತದೆ. "ಬ್ರಹ್ಮ" ಎಂಬ ಪದವು "ಬೃಹ್" ಎಂಬ ಧಾತುವಿನಿಂದ ಉತ್ಪನ್ನವಾಗಿ, "ಶ್ರೇಷ್ಠ" ಎಂಬ ಅರ್ಥವನ್ನು ಹೊಂದಿದೆ. ಬ್ರಹ್ಮಕ್ಕಿಂತ ಶ್ರೇಷ್ಠವಾದುದೆಂದು ಉಪನಿಷತ್ತುಗಳು ಯಾವುದನ್ನೂ ಅಂಗೀಕರಿಸುವುದಿಲ್ಲ. ಆದ್ದರಿಂದ ಈಗ ವಿಚಾರ ಮಾಡುತ್ತಿರುವ ವಾಕ್ಯವು - "ಬ್ರಹ್ಮವನ್ನು ತಿಳಿದವನು ಬ್ರಹ್ಮವನ್ನು ಹೊಂದುತ್ತಾನೆ-" ಎಂಬುದಕ್ಕೆ ಸದೃಶವಾಗಿದೆ. ಇತರ ಉಪನಿಷತ್ತುಗಳ ವಾಕ್ಯಗಳಿಗೆ ಇದು ಸುಸಂಗತವಾಗಿದೆ; ಉದಾಹರಣೆಗೆ— "ಆ ಪರಬ್ರಹ್ಮವನ್ನು ತಿಳಿದವನು ವಾಸ್ತವವಾಗಿ ಬ್ರಹ್ಮವೇ ಆಗುತ್ತಾನೆ"— ಎಂದು ಮುಂಡಕ ಉಪನಿಷತ್ತು ಘೋಷಿಸುತ್ತದೆ, ಮತ್ತು "ಅದನ್ನು ತಿಳಿದವನು ಹೀಗೆ ಅಭಯ ಬ್ರಹ್ಮವಾಗುತ್ತಾನೆ"— ಎಂದು ಬೃಹದಾರಣ್ಯಕ ಉಪನಿಷತ್ತು ತಿಳಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

ವಸ್ತುವೊಂದರ ನೈಜ ಜ್ಞಾನವು ಆ ವಸ್ತುವಿನ ವಿಷಯದಲ್ಲಿನ ಅಜ್ಞಾನವನ್ನು ಹೋಗಲಾಡಿಸುತ್ತದೆ ಎಂಬುದು ಸಾಧಾರಣವಾದ ನಿಯಮ; ಅದು ವಾಸ್ತವವಾಗಿ ಯಾವ ವಸ್ತುವನ್ನೂ ಮತ್ತೊಂದು ವಸ್ತುವನ್ನಾಗಿ ಪರಿವರ್ತಿಸುವುದಿಲ್ಲ. ಹೀಗೆ, ಬ್ರಹ್ಮ ಜ್ಞಾನವೂ— ಬ್ರಹ್ಮ ವಿಷಯಕವಾದ ಅಜ್ಞಾನವನ್ನು ನಿರ್ಮೂಲ ಮಾಡುತ್ತದೆ. ವಾಸ್ತವವಾಗಿ ಬ್ರಹ್ಮಕ್ಕಿಂತ ಬೇರೆಯಾದ ಬ್ರಹ್ಮಜ್ಞಾನಿಯನ್ನು ಅದು ಬ್ರಹ್ಮವನ್ನಾಗಿ ಮಾಡುವುದಿಲ್ಲ. ಆದ್ದರಿಂದ, ಬ್ರಹ್ಮಜ್ಞಾನಿಯಾದವನು ಬ್ರಹ್ಮವೇ ಆಗುತ್ತಾನೆಂದು ಒತ್ತಿ ಹೇಳುತ್ತಾ "ನಾನು" ಎಂಬುದಕ್ಕೆ ವಸ್ತುವಾಗಿರುವ ಜೀವಾತ್ಮನು ಮತ್ತು ಮೇಲೆ ಹೇಳಲಾದ ಜ್ಞಾನಿಯು ವಾಸ್ತವವಾಗಿ ಬ್ರಹ್ಮಕ್ಕಿಂತ ಬೇರೆ ಅಲ್ಲ ಎಂಬುದನ್ನು ಶಾಸ್ತ್ರಗಳು ತಿಳಿಸುತ್ತವೆ. ಜೀವಾತ್ಮನು ಬ್ರಹ್ಮಕ್ಕಿಂತ ಬೇರೆಯಾಗಿ ತೋರುವುದಕ್ಕೆ ಅಜ್ಞಾನ ಕಾರಣ. ಈ ಅಜ್ಞಾನವನ್ನು ನಾಶಮಾಡುತ್ತ, ಅಜ್ಞಾನದಿಂದ ಉಂಟಾಗುವ ಜೀವಾತ್ಮ ಮತ್ತು ಬ್ರಹ್ಮ-ಭೇದವನ್ನು ನಿರ್ಮೂಲ ಮಾಡಲು ಜ್ಞಾನವು ಸಹಕರಿಸುತ್ತದೆ.

ಜ್ಞಾನದ ಪಾತ್ರವನ್ನು ಆಖ್ಯಾಯಿಕೆಯೊಂದರ ಮೂಲಕ ವಿವರಿಸಬಹುದು. ಹತ್ತು ಜನ ಮೂರ್ಖರು ನದಿಯೊಂದನ್ನು ದಾಟುತ್ತಾರೆ. ಆಗ ತಾವೆಲ್ಲರೂ ಸಂಪೂರ್ಣವಾಗಿ ನದಿಯನ್ನು ದಾಟಿರುವರೆಂಬುದನ್ನು ಖಾತ್ರಿ ಪಡಿಸಿಕೊಳ್ಳಬೇಕೆಂದು ಅಪೇಕ್ಷೆಪಟ್ಟು, ಅವರಲ್ಲಿ ಒಬ್ಬನು ಎಣಿಸುವುದಕ್ಕೆ ಪ್ರಾರಂಭಿಸಿದನು. ಅವನು ತನ್ನ ಇತರ ಒಂಭತ್ತು ಜನ ಸ್ನೇಹಿತರನ್ನು ಎಣಿಸಿದನು. ಆದರೆ ತನ್ನನ್ನು ಸೇರಿಸಿಕೊಳ್ಳುವುದಕ್ಕೆ ಮರೆತನು. ಆದ್ದರಿಂದ ಕೇವಲ ಒಂಭತ್ತು ಜನ ಮಾತ್ರ ಇದ್ದಾರೆಂದೂ ಮತ್ತು ಮತ್ತೊಬ್ಬ ಸ್ನೇಹಿತ ನೀರಿನಲ್ಲಿ ಮುಳುಗಿದನೆಂದು ನಿರ್ಧರಿಸಿದನು. ಇತರ ಎಲ್ಲ ಮೂರ್ಖರು ಇದೇ ತಪ್ಪನ್ನು ಮಾಡಿ ಆ ಸಮಯದಲ್ಲಿ ಎಲ್ಲರೂ ದುಃಖದಲ್ಲಿ ಮುಳುಗಿದರು. ದಾರಿಯಲ್ಲಿ ಹೋಗುತ್ತಲಿದ್ದ ವ್ಯಕ್ತಿಯೊಬ್ಬನು ಇವರ ಅಳುವನ್ನು ಕೇಳಿ, ಕಾರಣವೇನೆಂದು ತಿಳಿಯಲು ಇಚ್ಛಿಸಿದನು. ಅವರೆಲ್ಲರೂ ಸತ್ತಿದ್ದಾನೆಂದು ತಿಳಿದಿರುವ ಹತ್ತನೆಯವನು ಸತ್ತಿಲ್ಲವೆಂದು ಅವನು ತಿಳಿಸಿದನು. ಆಗ ತನ್ನ ಸ್ನೇಹಿತರನ್ನು ಎಣಿಸುವಂತೆ ಒಬ್ಬನನ್ನು ಕರೆದನು. ಒಂಭತ್ತರವರೆಗೂ ಎಣಿಕೆಯು ಮುಂದುವರೆಯಿತು. ಈ ಸಂದರ್ಭದಲ್ಲಿ ಎಣಿಕೆ ಮಾಡುತಿದ್ದವನನ್ನು ಕುರಿತು ಆ ಆಪ್ತನು—"ನೀನು ಹತ್ತನೆಯವನು" ಎಂದು ಹೇಳಿದನು. ಆ ವ್ಯಕ್ತಿಯು ಹಾಗೂ ಅವನ ಸ್ನೇಹಿತರ ಅಜ್ಞಾನವು ನಾಶವಾಗಿ, ಅವರ ದುಃಖವು ಕೊನೆಯಾಯಿತು.

ಯಾವ ರೀತಿ, ಎಣಿಕೆ ಮಾಡುತ್ತಿದ್ದವನು ವಾಸ್ತವವಾಗಿ ಹತ್ತನೆಯವನಾಗಿದ್ದರೂ, ಅಜ್ಞಾನದಿಂದ ಅದನ್ನು ತಿಳಿಯದೆ ದುಃಖಿತನಾದನೋ, ಅದೇ ರೀತಿಯಲ್ಲಿ ಜೀವಾತ್ಮನೂ ಸಹ ಅಜ್ಞಾನದ ಪ್ರಭಾವದಿಂದ ಬ್ರಹ್ಮವೆಂಬ ತನ್ನ ನೈಜ ಸ್ವರೂಪ

Sri Vidyabharathi Book Centre, Sringeri

CC-O. In Public Domain. Digitized by eGangotri

ವನ್ನು ತಿಳಿಯದೆ, ಸಂಸಾರ ಚಕ್ರದಲ್ಲಿ ಸಿಕ್ಕಿ ತೊಳಲುತ್ತಾನೆ. ಮತ್ತು ತಾನೇ ಹತ್ತನೆ ಯವನೆಂದು ತಿಳಿದ ವ್ಯಕ್ತಿಗೆ ಸದೃಶವಾಗಿ ಜ್ಞಾನೋದಯದ ನಂತರ ಜೀವಾತ್ಮನು, ಬ್ರಹ್ಮವೆಂಬ ತನ್ನ ನೈಜ ಸ್ವರೂಪವನ್ನು ತಿಳಿಯುತ್ತಾನೆ. ಈ ರೀತಿ ಜ್ಞಾನಿಯ ವಿಷಯದಲ್ಲಿ "ಹೊಂದುತ್ತಾನೆ." ಎಂಬ ಪದವನ್ನು ತೈತ್ತಿರೀಯ ಉಪನಿಷತ್ತು ಆಲಂಕಾರಿಕವಾಗಿ ಉಪಯೋಗಿಸಿದೆ. ಬ್ರಹ್ಮವನ್ನು ಹೊಂದುವುದೆಂಬುದು, ವಾಚ್ಯಾರ್ಥಕ್ಕನುಗುಣವಾಗಿ ಜ್ಞಾನದಿಂದ ಉಂಟಾಗುವುದು ಸಾಧ್ಯವಿಲ್ಲ. ಮತ್ತು ಬ್ರಹ್ಮಕ್ಕಿಂತ ಬೇರೆಯಾದ ಜೀವಾತ್ಮನಿರುವುದು, ಹಾಗೂ ಬ್ರಹ್ಮವನ್ನು ಹೊಂದು ವುದು-ಎಂಬುದಿಲ್ಲ; ಏಕೆಂದರೆ, ಬ್ರಹ್ಮ ಸರ್ವವ್ಯಾಪಿ, ಮತ್ತು ಎಲ್ಲದರ ನೈಜಸಾರ ಸರ್ವಸ್ವ.

ಬ್ರಹ್ಮ ಜ್ಞಾನವನ್ನು ಹೊಂದುವುದರ ಶ್ರೇಷ್ಠವಾದ ಉಪಯುಕ್ತತೆಯನ್ನು ಪ್ರಾರಂಭದಲ್ಲಿಯೇ ತಿಳಿಸಿ, ಅದು ತಿಳಿದುಕೊಳ್ಳಬೇಕಾದ ಪದಾರ್ಥವಾದುದರಿಂದ, ಬ್ರಹ್ಮದ ವಾಸ್ತವ ಸ್ವರೂಪವನ್ನು ನಿಶ್ಚಯಿಸಲು ಉಪನಿಷತ್ತು ಮುಂದುವರಿಯು ತ್ತದೆ. "ಆ ವಿಷಯಕ್ಕೆ ಸಂಬಂಧಿಸಿದಂತೆ ಈ ಶ್ಲೋಕವೊಂದಿದೆ—" ಎಂಬ ಪ್ರಸ್ತಾವನೆ ಯೊಡನೆ "ಸತ್ಯಂ ಜ್ಞಾನಂ ಅನಂತಂ ಬ್ರಹ್ಮ—" ಎಂದು ಉಪನಿಷತ್ತು ನಿರ್ದೇಶಿಸು ತ್ತದೆ. ಇಲ್ಲಿ-ಸತ್ಯಂ, ಜ್ಞಾನಂ, ಮತ್ತು ಅನಂತಂ-ಎಂಬ ಮೂರು ಪದಗಳನ್ನು ಉಪಯೋಗಿಸಲಾಗಿದೆ.

ಯಾವುದು ವಿಕಾರ ಹೊಂದುವುದಿಲ್ಲವೋ ಅದು "ಸತ್ಯಂ". ಸತ್ಯವು ನಾಶ ಹೊಂದುವುದಿಲ್ಲ ಎಂದು ಗೀತೆಯಲ್ಲಿ ನಾವು ಓದುತ್ತೇವೆ. ಯಾವುದು ವಿಕಾರವನ್ನು ಹೊಂದುವುದೋ ಅದು ಪಾರಮಾರ್ಥಿಕ ಸತ್ಯವಲ್ಲ. ಘಟದಂತಹ ಮಾರ್ಪಾಡು ಹೊಂದುವ ವಸ್ತುವು ಮಾತನ್ನಾಶ್ರಯಿಸಿ, ಕೇವಲ ನಾಮ ಮಾತ್ರದಲ್ಲಿ ಇರುತ್ತದೆ ಎಂದು ಛಾಂದೋಗ್ಯ ಉಪನಿಷತ್ತು ತಿಳಿಸುತ್ತದೆ. ವಾಸ್ತವವಾಗಿ ಗಡಿಗೆಯು ಉತ್ಪತ್ತಿ ಮತ್ತು ನಾಶವನ್ನು ಹೊಂದಿರುತ್ತದೆ, ಮತ್ತು ಯಾವಾಗಲೂ ಇರುವ ಮಣ್ಣನ್ನು ಬಿಟ್ಟು ಅದಕ್ಕೆ ಬೇರೆಯಾದ ಅಸ್ತಿತ್ವವಿರುವುದಿಲ್ಲ. ಮಣ್ಣೂ ಸಹ ತನ್ನ ಉಪಾದಾನ ಕಾರಣಕ್ಕಿಂತ ಬೇರೆಯಾದ ಅಸ್ತಿತ್ವವನ್ನು ಹೊಂದಿರುವುದಿಲ್ಲ. ಹೀಗೆ ಮುಂದುವರೆದರೆ ಇಂದ್ರಿಯಗೋಚರವಾಗುವ ಯಾವುದೂ "ಸತ್ಯ"ವಲ್ಲ ವೆಂಬುದು ಗೊತ್ತಾಗುತ್ತದೆ.

"ಸತ್ಯಂ ಜ್ಞಾನಂ ಅನಂತಂ ಬ್ರಹ್ಮ"—ಎಂಬುದರ ಅಂಶವಾಗಿರುವ 'ಸತ್ಯಂ ಬ್ರಹ್ಮ' ಎಂಬುದನ್ನು ವಿಚಾರ ಮಾಡೋಣ 'ಸತ್ಯಂ' ಎಂಬ ಪದವನ್ನು "ಬ್ರಹ್ಮ" ಎಂಬ ನಾಮಪದಕ್ಕೆ ವಿಶೇಷಣವಾಗಿ ತೆಗೆದುಕೊಂಡರೆ, ಆಗ "ಸತ್ಯವಾದ ಬ್ರಹ್ಮ"

Sri Vidyabharathi Book Centre, Sringeri

CC-O. In Public Domain. Digitized by eGangotri

ಎಂಬ ಅರ್ಥವಾಗುತ್ತದೆ. ಇದು 'ಕೆಂಪು ಕಮಲ'-ಎಂದು ಹೇಳುವುದಕ್ಕೆ ಸದೃಶ ನಾಗಿರುತ್ತದೆ. ಕಮಲವು ಒಂದಕ್ಕಿಂತ ಹೆಚ್ಚಾದ ಬಣ್ಣದಲ್ಲಿರಬಹುದು; ಉದಾಹರಣೆಗೆ-ಕಮಲವು ಬಿಳಿಯ ಬಣ್ಣದ್ದಾಗಿರಬಹುದು. ಆದ್ದರಿಂದ "ಕೆಂಪು ಕಮಲ"-ಎಂಬಲ್ಲಿ "ಕೆಂಪು"- ಎಂಬ ವಿಶೇಷಣವು, ಇತರ ಬಣ್ಣಗಳಲ್ಲಿರುವ ಕಮಲಗಳಿಂದ ಬೇರೆ ಮಾಡುತ್ತದೆ. ಮತ್ತು, ವಿಶೇಷಣವು ಪ್ರಸ್ತುತವಾದ ಕಮಲವನ್ನು ಇತರ ಕೆಂಪು ಕಮಲಗಳಿಂದ ಬೇರೆ ಮಾಡಲು ಸಮರ್ಥವಾಗಿರುವುದಿಲ್ಲ.

ಕಮಲಗಳು ಕೇವಲ ಕೆಂಪು ಬಣ್ಣಗಳವೇ ಆಗಿದ್ದಿದ್ದರೆ, "ಕೆಂಪು ಕಮಲ"-ಎಂಬುದು ಅನಾವಶ್ಯಕವಾಗುತ್ತಿತ್ತು. ಉದಾಹರಣೆಗೆ- "ರಾತ್ರಿಯನ್ನುಂಟು ಮಾಡುವ ಸೂರ್ಯ" ನಿಲ್ಲದಿರುವುದರಿಂದ, "ಹಗಲನ್ನುಂಟು ಮಾಡುವ ಸೂರ್ಯ"-ಎನ್ನುವುದಕ್ಕಿಂತ; ನಾವು "ಸೂರ್ಯ" ಎಂದು ಹೇಳುತ್ತೇವೆ. ಆದ್ದರಿಂದ, ಸತ್ಯಂ ಬ್ರಹ್ಮ"-ಎಂಬುದಕ್ಕೆ "ಸತ್ಯವಾದ ಬ್ರಹ್ಮ"-ಎಂದು ಅರ್ಥವಾಗುವುದಾದರೆ, ಅಸತ್ಯ ವಾದ ಬ್ರಹ್ಮ"-ಎಂದು ಮುಂತಾದ ಇತರ ಬ್ರಹ್ಮರು ಇರಬೇಕಾಗುತ್ತದೆ; ಹಾಗಿಲ್ಲ ದಿದ್ದರೆ, 'ಸತ್ಯಂ' ಎಂಬುದರ ಉಪಯೋಗವು ನಿರರ್ಥಕವಾಗುತ್ತಿತ್ತು. ಆದರೆ, ಅನೇಕ ಬ್ರಹ್ಮರ ಅಸ್ತಿತ್ವವನ್ನು ಉಪನಿಷತ್ತುಗಳು ಅಂಗೀಕರಿಸುವುದಿಲ್ಲ. ಆದ್ದರಿಂದ "ಸತ್ಯಂ" ಎಂಬುದನ್ನು ತೈತ್ತಿರೀಯ ಉಪನಿಷತ್ತು ಕೇವಲ ವಿಶೇಷಣವಾಗಿ ಉಪಯೋಗಿಸಿರಲಾರದು.

"ಸತ್ಯಂ ಬ್ರಹ್ಮ" ಎಂಬ ವಾಕ್ಯದಲ್ಲಿನ "ಸತ್ಯಂ" ಎಂಬ ಪದವನ್ನು 'ಬ್ರಹ್ಮ'ದ ಲಕ್ಷಣವನ್ನು ಸೂಚಿಸುತ್ತದೆಂದು ತೆಗೆದುಕೊಂಡರೆ, ಆಗ "ಸತ್ಯಂ ಬ್ರಹ್ಮ" ಎಂಬ ವಾಕ್ಯಕ್ಕೆ "ಬ್ರಹ್ಮನು ಸತ್ಯ"-ಎಂದು ಅರ್ಥವಾಗುತ್ತದೆ. 'ಆಕಾಶವು ಅವಕಾಶ ವನ್ನುಂಟು ಮಾಡುವ ದ್ರವ್ಯ'- ಎಂದು ಹೇಳುವುದಕ್ಕೆ ಸದೃಶವಾಗಿದೆ. ಇಲ್ಲಿ 'ಅವಕಾಶವನ್ನುಂಟು ಮಾಡುವ ದ್ರವ್ಯ'- ಎಂಬುದು ಆಕಾಶವನ್ನು ಇತರ ವಸ್ತುಗಳಿಂದ ಬೇರ್ಪಡಿಸಿ, ಆಕಾಶದ ಲಕ್ಷಣವನ್ನು ನಿರೂಪಿಸುತ್ತದೆ. ಹಾಗೆ "ಸತ್ಯ" ಎಂಬುದು ಇತರ ಎಲ್ಲ ವಸ್ತುಗಳಿಂದ ಬೇರ್ಪಡಿಸಿ, ಬ್ರಹ್ಮದ ಲಕ್ಷಣವನ್ನೂ ನಿರೂಪಿಸುತ್ತದೆ. ವಾಸ್ತವವಾಗಿ ಹಿಂದೆ ಗಮನಿಸಲಾದ ಎಲ್ಲ ವಸ್ತುಗಳೂ ವಿಕಾರವನ್ನು ಹೊಂದುವಂತಹವು; ಆದರೆ "ಸತ್ಯ" ಅಲ್ಲ. ಆಕಾಶಕ್ಕೆ ಸಂಬಂಧಿಸಿದಂತೆಯೂ, ಉತ್ಪತ್ತಿ ಮತ್ತು ನಾಶಗಳನ್ನು ಕುರಿತು ಉಪನಿಷತ್ತು ಹೇಳುತ್ತವೆ; ಹೀಗೆ ತೈತ್ತಿರೀಯ ಉಪನಿಷತ್ತೇ ಮುಂದೆ ಹೀಗೆ ತಿಳಿಸುತ್ತದೆ "ಆತ್ಮವಾಗಿರುವ ಆ ಬ್ರಹ್ಮದಿಂದ ಆಕಾಶವು ಉತ್ಪನ್ನವಾಗುತ್ತದೆ." ಸಂದರ್ಭೋಚಿತವಾಗಿ—"ಬ್ರಹ್ಮವನ್ನು ತಿಳಿದವನು ಶ್ರೇಷ್ಠ ವಾದುದನ್ನು ಹೊಂದುತ್ತಾನೆ." ಎಂದು ಹೇಳಿದ ನಂತರ, ಬೇರೆ ಎಲ್ಲದರಿಂದ ಬೇರ್ಪಡಿಸುತ್ತ, ಉಪನಿಷತ್ತು ಬ್ರಹ್ಮದ ಲಕ್ಷಣವನ್ನು ನಿರೂಪಿಸುತ್ತದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

"ಸತ್ಯಂ" ನಂತೆ, "ಜ್ಞಾನಂ" "ಅನಂತಂ"-ಎಂಬ ಪದಗಳೂ ಸಹ ಬ್ರಹ್ಮವನ್ನು ನಿರೂಪಿಸುತ್ತವೆ. "ಜ್ಞಾನಂ" ಎಂಬ ಪದವನ್ನು ನಾಲ್ಕು ವಿಧವಾಗಿ ವ್ಯುತ್ಪನ್ನ ಮಾಡಬಹುದು. ಕೆಲಸವೊಂದನ್ನು ತಿಳಿಯುವುದಕ್ಕೆ ಸಂಬಂಧಿಸಿದಂತೆ, ಅದು ಕೆಲಸ ಮಾಡುವವನು, ಕೆಲಸದ ವಸ್ತುವನ್ನು, ಕೆಲಸದ ಸಾಧನವನ್ನು ಅಥವಾ ಸ್ವತಃ ಕೆಲಸವನ್ನೇ ಸೂಚಿಸಬಹುದು. ಅಂದರೆ, ಜ್ಞಾತೃವನ್ನು ಜ್ಞೇಯ ವಸ್ತುವನ್ನು ಜ್ಞಾನ ಸಾಧನವನ್ನು ಅಥವಾ ಜ್ಞಾನ ಕ್ರಿಯೆಯನ್ನು ಸೂಚಿಸಬಹುದು. "ಬ್ರಹ್ಮವೇ ಜ್ಞಾತೃ" ಎಂಬುದು ಉಪನಿಷತ್ತಿನ ಅಭಿಪ್ರಾಯವಾಗಿದ್ದರೆ. ಅದು ಸ್ವತಃ ವಿರುದ್ಧ ವಾಗುತ್ತದೆ. ಏಕೆಂದರೆ ಜ್ಞಾನ ಕ್ರಿಯೆಗೆ ಕರ್ತೃವಾದುದರಿಂದ ಕ್ರಿಯೆಯೊಂದಕ್ಕೆ ಪ್ರಾರಂಭ ಮತ್ತು ಅಂತ್ಯವಿರುವುದರಿಂದ ಬ್ರಹ್ಮವು ವಿಕಾರಕ್ಕೊಳಗಾಗುತ್ತದೆ. ಮತ್ತು ಆದ್ದರಿಂದ "ಸತ್ಯ"ವಾಗುವುದಿಲ್ಲ.

ಒಂದು ವೇಳೆ, ಉಪನಿಷತ್ತು "ಬ್ರಹ್ಮ ಜ್ಞೇಯವಾದುದು" ಎಂದುತಿಳಿಸಲು ಇಚ್ಛಿಸಿದ್ದಿದ್ದರೆ ಆಗ, ಗಡಿಗೆಯಂತೆ ಬ್ರಹ್ಮವು ಪರಿಚಿತವಾದ ಗ್ರಾಹ್ಯವಾದ ವಸ್ತು ವಾಗುತ್ತವೆ. ಆದ್ದರಿಂದ ಅದನ್ನು ತಿಳಿಯಬೇಕೆಂಬ ವಿಷಯದಲ್ಲಿ ಉಪನಿಷತ್ತಿನ ಯಾವುದೇ ಉಪದೇಶಗಳು ಅನುಪಯುಕ್ತವಾಗುತ್ತವೆ. ಆದರೆ ಇದಕ್ಕೆ ವಿರುದ್ಧ ವಾಗಿ ಉಪನಿಷತ್ತುಗಳು ಅಂತಹ ಉಪದೇಶಗಳನ್ನೂ ನಮಗೆ ಕೊಡುತ್ತವೆ. ಬ್ರಹ್ಮ ವಿಕಾರಕ್ಕೆ ಒಳಪಡದೆ ಜ್ಞಾನ ಸಾಧನ ಅಥವಾ ಜ್ಞಾನ ಕ್ರಿಯೆಯಾಗಲು ಸಾಧ್ಯವಿಲ್ಲ; ಆಗ "ಸತ್ಯಂ" ಎಂಬ ಲಕ್ಷಣಕ್ಕೆ ವಿರೋಧವಾಗುತ್ತದೆ.

"ಜ್ಞಾನಂ" ಎಂಬ ಪದವು 'ತಿಳಿಯುವುದು' ಎಂದು ಅರ್ಥವುಳ್ಳ "ಜ್ಞಾ"ಧಾತು ವಿನ ದುರವಗಾಹ್ಯವಾದ ಅಭಿಪ್ರಾಯವನ್ನು ಸೂಚಿಸಬಹುದು. ಸಮಾನವಾದ ಅರ್ಥವುಳ್ಳ ಕ್ರಿಯಾಪದದಿಂದ ಹೀಗೆ ಜನ್ಯವಾದ "ಜ್ಞಾನಂ" ಎಂಬುದರ ಅರ್ಥ ಸ್ವತಃ "ಜ್ಞಾನವೇ ಬ್ರಹ್ಮ ಜ್ಞಾನ ಅಥವಾ ಶುದ್ಧ ಚೈತನ್ಯ"ವೆಂದು ಉಪನಿಷತ್ತು ಉಪದೇಶಿಸುತ್ತದೆ. ಜ್ಞಾನವನ್ನು ಬ್ರಹ್ಮದಿಂದ ಬೇರ್ಪಡಿಸಲಾಗುವುದಿಲ್ಲ; ಮತ್ತು ಅದು ಅದರ ಸ್ವರೂಪವೇ "ಜ್ಞಾನ" ಎಂದರೆ ಸಾಮಾನ್ಯವಾಗಿ ಜನರು ಅನಿತ್ಯವಾಗಿ ರುವ ಮಾನಸಿಕ ಗ್ರಹಣಗಳೆಂದು ಅಭಿಪ್ರಾಯ ಪಡುತ್ತಾರೆ. ಅಜ್ಞಾನದ ಕಾರಣ ದಿಂದ, ಶುದ್ಧ ಹಾಗೂ ಬದಲಾಗದ ಜ್ಞಾನದ ಸಾದೃಶ್ಯಗಳನ್ನು ಸುಳ್ಳಾಗಿ ವಾಸ್ತವ ಆತ್ಮನಿಗೆ ಆರೋಪಿಸಲಾಗುತ್ತದೆ. ಇತರ ಉಪನಿಷತ್ತುಗಳಲ್ಲಿಯೂ ಸಹ ಬ್ರಹ್ಮವು ಶುದ್ಧ ಜ್ಞಾನವೆಂದು ತಿಳಿಸಲಾಗಿದೆ. "ಬ್ರಹ್ಮವು ಜ್ಞಾನ" ಎಂಬ ವಾಕ್ಯದ ಮೂಲಕ ತೈತ್ತಿರೀಯ ಉಪನಿಷತ್ತು ಬ್ರಹ್ಮವನ್ನು ಇತರ ಎಲ್ಲ ವಸ್ತುಗಳಿಂದಲೂ ಬೇರ್ಪಡಿಸುತ್ತದೆ; ಏಕೆಂದರೆ ಬೇರೆ ಯಾವುದೂ ಶುದ್ಧ ಜ್ಞಾನವಾಗಿರುವುದಿಲ್ಲ.

Sri Vidyabharathi Book Centre, Sringeri

CC-O. In Public Domain. Digitized by eGangotri

ಕೊನೆಗೆ, "ಅನಂತ" ಎಂಬುದಕ್ಕೆ ಬರುತ್ತೇನೆ. ಅನಂತತ್ವವು ಮೂರು ರೀತಿಯಲ್ಲಿ ಆಗಬಹುದು. ಒಂದು ಕಾಲದಲ್ಲಿ ಕಂಡು ಬರುವ, ಆದರೆ ಮತ್ತೊಂದ ರಲ್ಲಿ ಕಂಡು ಬರದಿರುವ ವಸ್ತುವು ಕಾಲದಿಂದ ಅವಚ್ಛಿನ್ನವಾಗಿದೆ. ಒಂದು ಸ್ಥಳದಲ್ಲಿ ಕಂಡು ಬರುವ ಆದರೆ ಮತ್ತೊಂದು ಸ್ಥಳದಲ್ಲಿ ಕಂಡು ಬರದಿರುವ ವಸ್ತುವು ಆಕಾಶ ದಿಂದ ಸುತ್ತುವರೆಯಲ್ಪಟ್ಟಿದೆ. ಒಂದು ವಸ್ತುವು ತನಗಿಂತ ಬೇರೆಯಾದ ವಸ್ತು ಗಳಿಂದಲೂ ಅವಚ್ಛಿನ್ನವಾಗಿರುತ್ತದೆ. ಹಸುಗಳಲ್ಲಿ ಸಾಮಾನ್ಯ ಲಕ್ಷಣವಾಗಿರುವ "ಗೋತ್ವ" ಭಾವನೆಯು "ಅಶ್ವತ್ವ" ಭಾವನೆಯನ್ನು ನಿವಾರಿಸುತ್ತದೆ. ಭಾವನೆ ಯೊಂದು ಎಲ್ಲೆಯಲ್ಲಿರುವಂತೆ ಮಾಡುವ ಕಾರಣವು ಆ ಭಾವನೆಗೆ ಮಿತಿಯಂತೆ ಇರುತ್ತದೆ. ಈ ಅರ್ಥದಲ್ಲಿ ಮತ್ತೊಂದಕ್ಕಿಂತ ಬೇರೆ ಯಾಗಿರುವ ವಸ್ತುವೊಂದು ಮತ್ತೊಂದಕ್ಕೆ ಪರಿಧಿಯಂತೆ ಇರುತ್ತದೆ. "ಬ್ರಹ್ಮವು ಅನಂತ" ಎಂದು ಹೇಳುವುದರ ಮೂಲಕ ಕಾಲ, ದೇಶ ಮತ್ತು ವಸ್ತುವಿನಿಂದ ಅನವಚ್ಛಿನ್ನವಾದುದೆಂದು ಉಪನಿಷತ್ತು ತಿಳಿಸುತ್ತದೆ.

ಆಕಾಶವು ಸ್ಥಳದಿಂದ ಪರಿಮಿತವಾದುದಲ್ಲ; ಅದು ಸರ್ವವ್ಯಾಪಿಯಾಗಿರು ತ್ತದೆ. ಆದರೆ ಅದು ಕಾಲದಿಂದ ಪರಿಮಿತವಾಗಿದೆ. ಏಕೆಂದರೆ ಅದಕ್ಕೆ ಉತ್ಪತ್ತಿ ಯಿಲ್ಲ. ಬ್ರಹ್ಮವು ಸೃಷ್ಟವಾದುದಲ್ಲ ಮತ್ತು ಅದು ನಿತ್ಯವಾದುದು. ಆದ್ದರಿಂದ ಕಾಲದಿಂದ ಪರಿಮಿತವಾದುದಲ್ಲ. ಸರ್ವವ್ಯಾಪಿಯಾದುದರಿಂದ ಅದು ದೇಶದಿಂದಲೂ ಪರಿಮಿತವಾದುದಲ್ಲ. ಅದು ಎಲ್ಲಕ್ಕೂ ಕಾರಣವಾದುದರಿಂದ, ಕಾಲ ಮತ್ತು ದೇಶವನ್ನೂ ಸೇರಿ, ಅದಕ್ಕಿಂತ ಬೇರೆಯಾದುದು ಯಾವುದೂ ಇಲ್ಲ. ಆದ್ದರಿಂದ ಅದು ವಸ್ತುಗಳಿಂದ ಪರಿಮಿತವಾದುದಲ್ಲ. ಬ್ರಹ್ಮವು ಎಲ್ಲಕ್ಕೂ ಕಾರಣವೆಂದು ಅನೇಕ ಉಪನಿಷತ್ತುಗಳು ದೃಢೀಕರಿಸಿ ಹೇಳಿವೆ. ಹೀಗೆ, "ಬ್ರಹ್ಮವು ಅನಂತ" ಎಂದು ಹೇಳುವುದರ ಮೂಲಕ ತೈತ್ತಿರೀಯೋಪನಿಷತ್ತು ಇತರ ಎಲ್ಲವುಗಳಿಂದ ಬ್ರಹ್ಮವನ್ನು ಬೇರ್ಪಡಿಸಿದೆ.

"ಎಲ್ಲಿ ಇತರ ಯಾವುದನ್ನೂ ಕಾಣುವುದಿಲ್ಲವೋ, ಇತರ ಯಾವುದನ್ನೂ ಕೇಳುವುದಿಲ್ಲವೋ ಮತ್ತು ಇತರ ಯಾವುದನ್ನೂ ತಿಳಿಯುವುದಿಲ್ಲವೋ; ಅದೇ ಅನಂತವಾದುದು"– ಎಂದು ಛಾಂದೋಗ್ಯ ಉಪನಿಷತ್ತು ತಿಳಿಸುತ್ತದೆ. ಈ ದೃಢೀಕರಣದಿಂದ ಮತ್ತು ಬ್ರಹ್ಮವು ಜ್ಞಾನ ಮತ್ತು ಅನಂತ ಎಂದು ತೈತ್ತಿರೀಯೋಪನಿಷತ್ತು ನಿರ್ದೇಶಿಸುವುದರಿಂದ "ಜ್ಞಾನಂ" ಎಂಬುದಕ್ಕೆ "ಜ್ಞಾತೃ" ಎಂಬ ಅರ್ಥದ ಸಾಧ್ಯತೆಯೇ ಇಲ್ಲವೆಂಬುದನ್ನು ನೋಡಬಹುದು. ಬ್ರಹ್ಮವು ನಿತ್ಯಚಿತ್ ಸ್ವರೂಪನೆಂಬುದನ್ನು ಸಿದ್ಧ ಮಾಡುವುದಕ್ಕೆ, ಮೇಲೆ ತಿಳಿಸಲಾದ ಅಂಶಗಳ ಜೊತೆಗೆ ಇದೂ ಒಂದು.

Sri Vidyabharathi Book Centre, Sringeri

CC-O. In Public Domain. Digitized by eGangotri

"ಸತ್ಯಂ" "ಜ್ಞಾನಂ" "ಅನಂತಂ" ಎಂಬುವುಗಳಲ್ಲಿ ಪ್ರತಿಯೊಂದು ಇತರ ಎಲ್ಲ ವಸ್ತುಗಳಿಂದ ಬ್ರಹ್ಮವನ್ನು ಬೇರ್ಪಡಿಸುವ ಲಕ್ಷಣಕ್ಕೆ ಪರ್ಯಾಪ್ತವಾಗುತ್ತದೆ ಆದರೂ ಮೂರು ಪದಗಳನ್ನೂ ಉಪಯೋಗಿಸಿದೆ. ಅವುಗಳಿಗೆ ಪ್ರಾಮುಖ್ಯತೆ ಇಲ್ಲದೆ ಇಲ್ಲ. ಬ್ರಹ್ಮವು ಸತ್ಯಂ ಎಂದು ಹೇಳಿದಾಗ ಮತ್ತು ನಂತರ ಬ್ರಹ್ಮವು ವಿಶ್ವಕ್ಕೆ ಕಾರಣ ಎಂದು ಉಪದೇಶಿಸಿದಾಗ ಸಂದೇಹವೊಂದು ಆಕಾಶ ಮುಂತಾದ ಮೂಲದ್ರವ್ಯಗಳು ಜಡವಾದವು. ಅವುಗಳು ಬದಲಾಗದ ಕಾರಣ ಬ್ರಹ್ಮವು ಜಡವೇ ? "ಜ್ಞಾನಂ" ಎಂಬ ಪದವು ಈ ಸಂಭಾವ್ಯತೆಯನ್ನು ನಿವಾರಿಸುತ್ತದೆ. ಜನರ ತಿಳುವಳಿಕೆಯು ಪರಿಮಿತವಾದುದು. ಬ್ರಹ್ಮವನ್ನು ಪರಿಮಿತವಾದ ಜ್ಞಾನವೆಂದು ವೈಲಕ್ಷಣ್ಯದಿಂದ ಕೂಡಿದುದೆಂದು ಹೇಳಬಹುದೆ ಎಂಬ ಪ್ರಶ್ನೆ ಉತ್ಪನ್ನವಾಗಬಹುದು. "ಅನಂತಂ" ಎಂಬ ಪದವು ಪರಿಮಿತನೆಂಬ ತಪ್ಪು ತಿಳುವಳಿಕೆಯಯನ್ನು ನಿವಾರಿಸುತ್ತದೆ.

ಸಂಗ್ರಹವಾಗಿ ಹೇಳುವುದಾದರೆ, ತೈತ್ತಿರೀಯ ಉಪನಿಷತ್ತಿನಲ್ಲಿ ಬ್ರಹ್ಮವನ್ನು ತಿಳಿದವನು ಬ್ರಹ್ಮವನ್ನು ಹೊಂದುತ್ತಾನೆಂದು ಉಪದೇಶಿಸಲಾಗಿದೆ ಮತ್ತು ಇತರ ವಸ್ತುಗಳಿಂದ ಬೇರ್ಪಡಿಸುವುದಕ್ಕಾಗಿ ಬ್ರಹ್ಮದ ಲಕ್ಷಣವನ್ನು "ಸತ್ಯಂ, ಜ್ಞಾನಂ ಅನಂತಂ" ಎಂದು ಕೊಡಲಾಗಿದೆ.

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri

CC-O. In Public Domain. Digitized by eGangotri

Sri Vidyabharathi Book Centre, Sringeri